ವಿಶ್ವ ಕನ್ನಡ ಸಮ್ಮೇಳನ-೨೦೧೧

ಬೆಳಗಾವಿ

# ವಾಲ್ಮೀಕಿ ರಾಮಾಯಣ

ವಿ. ಸೀ.

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ವಾಲ್ಮೀಕಿ ರಾಮಾಯಣ

ವಿ.ಸೀ

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು – ೫೬೦ ೦೦೨

**VALMIKI RAMAYANA :** (Lritical notes on Ramayana) by **V. Si.** (V. Sitaramaiah. 1899-1983); Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : ಫಿಫಿಫಿ + ೨೨೬
ಬೆಲೆ : ರೂ. ೬೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯು ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್
**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ವಾಲ್ಮೀಕಿ ರಾಮಾಯಣ

ವಿ. ಸೀ. ಯವರು ದಿಲ್ಲಿಯ ಸಾಹಿತ್ಯ ಅಕಾಡೆಮಿಯ ಪ್ರಾರ್ಥನೆಯಂತೆ ಈ ಪುಸ್ತಕವನ್ನು ಮೊದಲು ಇಂಗ್ಲಿಷಿನಲ್ಲಿ ಬರೆದರು. ಆಮೇಲೆ ಸಾಹಿತ್ಯ ಅಕಾಡೆಮಿಯ ಬಯಕೆಯಂತೆಯೇ ಸ್ವತಃ ಕನ್ನಡಕ್ಕೆ ಅನುವಾದಿಸಿದರು. ಪುಟಗಳ ನಿರ್ಬಂಧವಿದ್ದುದರಿಂದ ಸಂಕ್ಷೇಪದಿಂದ ಈ ಕೃತಿಗಳನ್ನು ರಚಿಸಬೇಕಾಯಿತೆಂದು ಹೇಳಿಕೊಂಡಿದ್ದಾರೆ. ಈ ಬಗೆಯ ಕೃತಿಗಳಿಗೆ ಪುಟಗಳ ನಿರ್ಬಂಧವನ್ನಿಟ್ಟರೆ ಬರೆಯುವುದು ಕಷ್ಟವೇ. ಹೇಳಬೇಕಾದ ಎಷ್ಟೋ ಅಂಶಗಳನ್ನು, ಮನಸ್ಸಿಲ್ಲದಿದ್ದರೂ, ಕೈ ಬಿಡಬೇಕಾಗುತ್ತದೆ. ಪ್ರಾಮಾಣಿಕರಾದ ಲೇಖಕರಿಗೆ ಪುಟದ ಪರಿಮಿತಿ ಇರುಸು ಮುರುಸನ್ನುಂಟು ಮಾಡುವುದು.

ಇದು ವಾಲ್ಮೀಕಿ ರಾಮಾಯಣದ ವಿಮರ್ಶಾತ್ಮಕ ಪ್ರಬಂಧ. ಕೃತಿಯ ಸ್ವರೂಪ, ಕವಿಯ ಸಾಮರ್ಥ್ಯ, ಪಾತ್ರಗಳ ಗುಣ ಸ್ವಭಾವಗಳ ಪರಿಶೀಲನೆ, ವಿಶೇಷ ಪ್ರಸಂಗಗಳ ಸಮೀಕ್ಷಣೆಗಳೂ ಕವಿತಾ ಸೌಂದರ್ಯದ ಚಿತ್ರಣವೂ ಮನೋಜ್ಞವಾಗಿ ಇದರಲ್ಲಿ ಬಂದಿವೆ. ಭಾರತೀಯರಿಗೆ ರಾಮಾಯಣದ ವಿಷಯದಲ್ಲಿರುವ ಶ್ರದ್ಧಾಭಕ್ತಿಗಳನ್ನು ವಿ.ಸೀ. ಯವರು ಗುರುತಿಸಿದ್ದಾರೆ. ರಾಮಾಯಣ ತುಂಬಾ ಜನಪ್ರಿಯವಾದ ಕಾವ್ಯ. ವಿದ್ವಾಂಸರೂ ಅಲ್ಲದವರೂ ನಮ್ಮ ಜನ ಅನೇಕ ಮಂದಿ ಪ್ರತಿದಿನದ ಪಾರಾಯಣ ಗ್ರಂಥವಾಗಿ ಅದನ್ನು ಪಠಿಸುತ್ತಾರೆ. ಮೂಲಭೂತವಾದ ಒಂದು ಪೂಜ್ಯಭಾವ ಅದರ ಪರವಾಗಿ ನಾಡಿನಲ್ಲಿ ಹರಡಿದೆ" ಎಂದಿದ್ದಾರೆ. ಇದು ವಾಸ್ತವ ಸಂಗತಿಯೇ ಹೌದು. ಇದಕ್ಕೆ ಕಾರಣವೇನೆಂಬುದನ್ನೂ ವಿಚಾರಿಸಬೇಕು.

ವಾಲ್ಮೀಕಿ ರಾಮಾಯಣಕ್ಕೆ ವಿಖ್ಯಾತ ವಿದ್ವಾಂಸರು ಹಲವಾರು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಭಾರತದೇಶದ ಆದ್ಯಂತವಾಗಿ ಶ್ರೀರಾಮನವಮೀ ವ್ರತ, ಶ್ರೀರಾಮೋತ್ಸವ, ರಾಮತಾರಕ ಹೋಮ, ರಾಮನಾಮಜಪ – ಮುಂತಾದವು ನಡೆಯುತ್ತಲೇ ಬಂದಿವೆ. ಅನೇಕ ಮಠಾಧೀಶ್ವರರು ಶ್ರೀರಾಮನು ತಮಗೆ ಆರಾಧ್ಯ ದೇವತೆಯೆಂದು ಪೂಜಿಸುತ್ತಿದ್ದಾರೆ. ಸಮರ್ತ ರಾಮದಾಸರು, ತುಲಸೀದಾಸರು ಮುಂತಾದ ಸಂತರು ಶ್ರೀರಾಮ ಭಕ್ತರೆಂದು ಯಶೋಭಾಜನರಾಗಿದ್ದಾರೆ. ಶ್ರೀರಾಮ ಭಜನೆಯಂತೂ ನಡೆಯುತ್ತಲೇ ಇರುತ್ತದೆ. ಸಾವಿರಾರು ವರ್ಷಗಳಿಂದ ಇವರೆಲ್ಲರ ಪ್ರೇಮಗೌರವಗಳಿಗೆ

ಪಾತ್ರನಾಗಿ, ಇವರೆಲ್ಲರ ಶ್ರದ್ಧಾ ಭಕ್ತಿಗಳಿಗೆ ಕೇಂದ್ರಬಿಂದುವಾಗಿ, ವಾಲ್ಮೀಕಿ ಮಹರ್ಷಿಗಳ ವಾಗ್ವೈಭವ ಪ್ರಶಂಸೆಗಳಿಗೆ ವಿಷಯನಾಗಿ ಶ್ರೀರಾಮನಿರಬೇಕಾದರೆ, ಆತನಲ್ಲಿ ಮಾನುಷಾತೀತವಾದ ದೈವಾಂಶವಿರಲೇಬೇಕೆಂದುಯಾರಿಗಾದರೂ ಹೊಳೆಯುತ್ತದೆಯಲ್ಲವೆ? ಅಥವಾ ಇವರೆಲ್ಲರ ಮಸ್ತಿಷ್ಕವನ್ನೂ ನಮಗಿಲ್ಲದ ಮಹಾಮೌಢ್ಯವು ಬಂದು ಮೆಟ್ಟಿಕೊಂಡಿರಯಹುದೊ?

ವಸ್ತುತಃ ಶ್ರೀರಾಮನು ಅವತಾರ ಪುರುಷನೆಂಬ ಅಂಶವು ರಾಮಾಯಣದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡು ಬಿಟ್ಟಿದೆ. ಬಾಲಕಾಂಡದಲ್ಲಿರುವ ವಿಷ್ಣುವಿನ ಅಂಶಾವತಾರವೆಂಬ ಭಾಗವನ್ನು ಬಿಟ್ಟರೂ ಚಿಂತೆಯಿಲ್ಲ. ಅದೆಲ್ಲವೂ ಪ್ರಕ್ಷಿಪ್ತವೆಂದರೂ ಸರಿ. ವಿಶ್ವಾಮಿತ್ರ ಋಷಿಯು ತನ್ನ ಯಜ್ಞ ರಕ್ಷಣೆಗಾಗಿ ಬಾಲಕನಾದ ರಾಮನನ್ನೇ ಹುಡುಕಿಕೊಂಡು ಬಂದದ್ದೇಕಿರಬಹುದು? ದಶರಥನ ಸಭೆಯಲ್ಲಿ –

ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಂ
ವಸಿಷ್ಠಶ್ಚ ಮಹಾತೇಜಾ ಯೇ ಚೇಮೇ ತಪಸಿ ಸ್ಥಿತಾಃ

ಎಂದು ಹೇಳುತ್ತಾನೆ. "ಮಹಾತ್ಮನೂ ಸತ್ಯಪರಾಕ್ರಮನೂ ಆದ ರಾಮನು ಯಾರೆಂಬುದನ್ನು ನಾನು ಬಲ್ಲೆ. ಮಹಾತೇಜಸ್ವಿಗಳಾದ ವಸಿಷ್ಠರೂ ಬಲ್ಲರು. ತಪಸ್ವಿಗಳಾದ ಈ ಋಷಿಗಳಿಗೂ ತಿಳಿದಿದೆ. (ದಶರಥ, ನಿನಗೇನು ಗೊತ್ತು!)" ಇದರ ಅಭಿಪ್ರಾಯವೇನಿರಬಹುದು?

ಅಹಲ್ಯೆಯನ್ನು ಉದ್ಧರಿಸುವ ಶಕ್ತಿ ರಾಮನಿಗೆ ಹೇಗೆ ಬಂದಿತು? ಯಾರೂ ಎತ್ತಲಾರದ ಶಿವಧನುಸ್ಸನ್ನು ಎತ್ತಿ ಮುರಿದದ್ದು ಹೇಗೆ? ಅತ್ಯಂತ ದುರ್ಜಯನಾದ ಪರಶುರಾಮನು ಒಂದು ಕ್ಷಣದಲ್ಲಿ ಭಗ್ನನಾಗಿ ಸೋಲನ್ನು ಒಪ್ಪಿಕೊಂಡದ್ದು ಎಂತು? — ಈ ಪ್ರಶ್ನೆಗಳಿಗೆ ಉತ್ತರವು ಸುಲಭವಲ್ಲ. ಹದಿನಾಲ್ಕು ಸಾವಿರವಿದ್ದ ಖರಸೈನ್ಯವನ್ನು ಒಬ್ಬ ರಾಮನು ಸಂಹರಿಸಿದ್ದಾನೆ. ಸಮುದ್ರದ ಮೇಲೆ ನೂರು ಯೋಜನದ ಸೇತುವೆಯನ್ನು ಕಟ್ಟಿಸಿದ್ದಾನೆ. ಒಂದು ಘಟ್ಟದಲ್ಲಿ–

ಸಮುದ್ರಂ ಶೋಷಯಿಷ್ಯಾಮಿ ಪದ್ಭ್ಯಾಂಯಾಂತು ಪ್ಲವಂಗಮಾಃ

ಎನ್ನುತ್ತಾನೆ. "ಸಮುದ್ರವನ್ನು ಒಣಗಿಸಿ ಬಿಡುತ್ತೇನೆ! ವಾನರರು ಕಾಲ್ನಡಿಗೆಯಿಂದಲೇ ಸಮುದ್ರವನ್ನು ದಾಟಿಹೋಗಲಿ" – ಮನುಷ್ಯ ಮಾತ್ರನು ಇಂತಹ ಮಾತನ್ನು ಆಡುತ್ತಾನೆಯೆ? ಇನ್ನೊಂದು ಸಂದರ್ಭದಲ್ಲಿ–

ಏತದಸ್ತ್ರಬಲಂ ದಿವ್ಯಂ ಮಮ ವಾತ್ರ್ಯಂಬಕಸ್ಯವಾ

“ಸುಗ್ರೀವ, ದಿವ್ಯವಾದ ಈ ಅಸ್ತ್ರಬಲವು ನನಗೊಬ್ಬನಿಗಿದೆ. ಮುಕ್ಕಣ್ಣನಾದ ಶಿವನೊಬ್ಬನಿಗಿದ್ದೀತು!” ಎಂದು ಆಡಿದ ನುಡಿಯು ಮನುಷ್ಯ ಯೋಧನಿಗೆ ಒಪ್ಪೀತೆ? ನಾಗಪಾಶಗಳನ್ನು ಗರುಡನು ಬಂದು ಬಿಡಿಸುತ್ತಾನೆ. ಇದು ಸಂಭವವೆ?

ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ

ಎಂದು ಶ್ರೀರಾಮನು ತನ್ನನ್ನು ಮನುಷ್ಯನೆಂದು ಹೇಳಿಕೊಂಡಿರುವುದು ನಿಜ. ಯಾವಾಗ? ಬ್ರಹ್ಮಾದಿ ದೇವತೆಗಳು ಬಂದು “ನೀನೇ ಪರಮಾತ್ಮ ವಿಷ್ಣುವಾಗಿದ್ದೀಯೆ” ಎಂದು ಸ್ತುತಿಸಿದಾಗ. ಬ್ರಹ್ಮನು ಬಂದು ಮನುಷ್ಯನನ್ನು ಸ್ತುತಿಸುತ್ತಾನೆಂಬುದು ಅಂಗೀಕಾರ್ಯವಾದೀತೆ?

ಇಲ್ಲೊಂದು ಪ್ರಶ್ನೆ ಹುಟ್ಟಬಹುದು. ರಾಮನು ದೇವರ ಅವತಾರವಾದರೆ, ಅವನ ಮಾತು, ಅವನು ನಡೆದುಕೊಂಡ ರೀತಿ, ಧರ್ಮಪಾಲನೆಗಾಗಿ ಅನುಭವಿಸಿದ ಕಷ್ಟ ಪರಂಪರೆ– ಇವೆಲ್ಲ ನಮಗೆ ಆದರ್ಶವಾಗದು. ದೇವತಾ ಪುರುಷನಂತೆ ಮನುಷ್ಯನಿಂದ ನಡೆದು ಕೊಳ್ಳಲಾದೀತೆ? – ಎಂದು. ಹೀಗೆ ಆಕ್ಷೇಪಿಸತಕ್ಕವರು ಸಾಹಿತ್ಯಶಕ್ತಿಯನ್ನು ಶಬ್ದಸಾಮರ್ಥ್ಯವನ್ನು ಅರಿತವರಲ್ಲ. ಕವಿನಿರ್ಮಿತಿಯ ವೈಲಕ್ಷಣ್ಯವನ್ನು ಒಂದು ಮಹಾಕಾವ್ಯವು ಅಂತರಂಗದ ಮೇಲೆ ಹೇಗೆ ತನ್ನ ಪ್ರಭಾವವನ್ನು ಅಚ್ಚೊತ್ತುತ್ತದೆಯೆಂಬುದನ್ನು ವಿಮರ್ಶಿಸಿದಾಗ ಇಂತಹ ಪ್ರಶ್ನೆ ಹುಟ್ಟುವುದಿಲ್ಲ.

ಕವಿನಿರ್ಮಿತಿಯು ಲೋಕವೃತ್ತಾನುಚರಿತವೇ ಹೌದು. ಹಾಗಿಲ್ಲದಿದ್ದರೆ ಅದು ಜನಲೋಕಕ್ಕೆ ದೂರವಾಗಿ ಲೋಕ ಸಂಪರ್ಕವನ್ನು ಕಳೆದುಕೊಂಡೀತು. ಆದರೆ ಅದು ಬರಿಯ ಲೋಕವೃತ್ತಚರಿತವೂ ಅಲ್ಲ. ಲೋಕವೃತ್ತಚರಿತವಾದರೆ ಆ ನಿರ್ಮಿತಿಯು ವಾರ್ತಾಪತ್ರಿಕೆ (Newspaper) ಯಾಗುತ್ತದೆ, ಕಾವ್ಯವಾಗುವುದಿಲ್ಲ. ಕಾವ್ಯವು ಲೋಕವೃತ್ತವನ್ನು ಅನುಸರಿಸಿ ವರ್ಣಿಸಿದ ಚರಿತೆ. ಈ ಅನುಸರಣೆ ಕೆಲವು ಅಂಶಗಳಲ್ಲಿ ಮಾತ್ರ, ಸರ್ವಾಂಶಗಳಲ್ಲಿ ಅಲ್ಲ. ಕವಿಯು ತನಗೆ ಬೇಕಾದಷ್ಟನ್ನು ಲೋಕದಿಂದ ತೆಗೆದುಕೊಂಡು ಉಳಿದುದನ್ನು ತನ್ನ ಪ್ರತಿಭೆಯಿಂದ ತುಂಬುತ್ತಾನೆ. ಹಾಗಿಲ್ಲದಿದ್ದರೆ ಕವಿಪ್ರತಿಭೆ ನಿರವಕಾಶವಾದೀತು. ಕವಿಯು ಪತ್ರಿಕಾವರದಿಗಾರರಲ್ಲಿ ಒಬ್ಬನಾದಾನು. ಕಾವ್ಯದಲ್ಲಿ ಲೋಕ ಸಾಮ್ಯ ಉಂಟು, ಆದರೆ ಲೋಕವಲ್ಲ. ಕವಿ ಪ್ರಪಂಚವು ಈ ಲೋಕಕ್ಕಿಂತ ಅತಿಶಯವುಳ್ಳದ್ದು. ಪ್ರತಿಭಾವಿಲಾಸದಿಂದ ಕವಿಯು ನಿರ್ಮಿಸಿದ ಕಾವ್ಯವು ಲೋಕದ ನೆರಳೂ ಅಲ್ಲ. ಲೋಕವೇ ಕಾವ್ಯದ ನೆರಳು – ಛಾಯೆ – ಪ್ರತಿಬಿಂಬ – ಭಾವಚಿತ್ರ. ಸಪ್ಪೆಯಾಗಿರುವ ಲೋಕಚರಿತಕ್ಕೆ ಕವಿಪ್ರತಿಭೆಯು ನವಚೈತನ್ಯವನ್ನು ಅಪೂರ್ವಸೌಂದರ್ಯವನ್ನು ನೀಡಿ ತೀಡಿ ತಿದ್ದಿ ಕಾವ್ಯವನ್ನಾಗಿ

ಮಾರ್ಪಡಿಸುತ್ತದೆ. ಈ ಕವಿ ಪ್ರತಿಭಾ ನಿರ್ಮಿತಿಗೆ ಮೊದಲು ಬಿಂಬವಾಗಿದ್ದ ಲೋಕವೇ ಪ್ರತಿಬಿಂಬವಾಗಿ ನೆರಳಿನ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಇದು ಕಾವ್ಯದ ಸಾಮರ್ಥ್ಯ, ಶಬ್ದಶಕ್ತಿ.

ಲೋಕದಲ್ಲಿ ಶೃಂಗಾರ, ವೀರ, ಕರುಣಾದಿಗಳ ದೃಶ್ಯವನ್ನು ಪ್ರತ್ಯಕ್ಷವಾಗಿ ಕಂಡಾಗ ಯಾವ ಸಹೃದಯನಿಗೂ ರಸೋಲ್ಲಾಸವಾಗಿ ಆಹ್ಲಾದವಾಗುವುದಿಲ್ಲ; ಪ್ರತ್ಯುತ ಜುಗುಪ್ಸೆಯೇ ಆದೀತು. ಹೇಯಬುದ್ಧಿ ಹುಟ್ಟೀತು. ಅದೇ ಕಾವ್ಯದಲ್ಲಿ ರೂಪಗೊಂಡಾಗ ಆಹ್ಲಾದಜನಕವಾಗುತ್ತದೆ. ಈ ಮಾರ್ಪಾಡಿಗೆ ಕಾರಣವಾದದ್ದು ಶಬ್ದಶಕ್ತಿ. ಲೋಕದಲ್ಲಿ ದೃಷ್ಟವಾದ ರತಿ, ಉತ್ಸಾಹ, ಶೋಕಾದಿಗಳಲ್ಲಿ ಪರಕೀಯತೆ ಇದೆ. ಈ ಪರಕೀಯತೆಯನ್ನು ಕಳಚಿ ಹಾಕುವುದು ಕಾವ್ಯದ ಕೆಲಸ. ಲೌಕಿಕರಾದ ದುಷ್ಯಂತ, ಶಕುಂತಲಾದಿಗಳು ಕಾವ್ಯಾಸ್ವಾದ ಸಮಯದಲ್ಲಿ ತಮ್ಮ ಲೌಕಿಕತ್ವವನ್ನು ಕಳೆದುಕೊಂಡು, ಆಸ್ವಾದಿಸುವ ಕಾವ್ಯರಸಿಕನ ಬುದ್ಧಿಮಯ ವ್ಯಕ್ತಿಗಳಾಗಿ, ಆತನೊಡನೆ ಒಂದು ಅಪೂರ್ವವಾದ ತಾದಾತ್ಮ್ಯವನ್ನು ಪಡೆದುಕೊಳ್ಳುತ್ತಾರೆ. ಆಗ ನಾನೇ ಅವರು, ಅವರೇ ನಾನು ಎಂಬ ವಿಲಕ್ಷಣ ಭಾವನೆ ಸಹೃದಯನಿಗಾಗಿ ಆನಂದವು ಉದ್ಬುದ್ಧವಾಗುವುದು. ಯಾರಿಗೆ ಈ ತಾದಾತ್ಮ್ಯವನ್ನು ಪಡೆಯುವಷ್ಟು ಚಿತ್ತಪರಿಷ್ಕೃತಿ ಇಲ್ಲವೋ ಅವರಿಗೆ ಕಾವ್ಯದಿಂದ ಯಾವ ಆನಂದವೂ ಜನಿಸದು. ಲೌಕಿಕ ದುಷ್ಯಂತ – ಲೌಕಿಕತ್ವವನ್ನು ಎಂದರೆ – ಆತನು ರಾಜ, ಕಾಲಾಂತರದಲ್ಲಿದ್ದವನು ಇತ್ಯಾದಿ ಸಂಬಂಧವನ್ನು ಕಳೆದುಕೊಂಡ ಬುದ್ಧಿಮಯ ದುಷ್ಯಂತ – ಈ ಬುದ್ಧಿಮಯನೊಡನೆ ತಾದಾತ್ಮ್ಯ ಎಂಬ ಮೂರು ಸ್ತರಗಳಿವೆಯೆಂದು ವಿಶ್ಲೇಷಣೆಯಿಂದ ಗೊತ್ತಾಗುತ್ತದೆ. ರಂಗಸ್ಥಳದಲ್ಲಿ ನಾಟಕವನ್ನು ಅಭಿನಯಿಸುವಾಗ ಪ್ರೇಕ್ಷಕರ ಚಿತ್ತದಲ್ಲಾಗುವ ತಾದಾತ್ಮ್ಯವು ಇನ್ನೊಂದು ಸ್ತರವನ್ನು ದಾಟುತ್ತದೆ. ಲೌಕಿಕ ದುಷ್ಯಂತ – ನಟ – ಬುದ್ಧಿಮಯ ದುಷ್ಯಂತ – ಅವನೊಡನೆ ತಾದಾತ್ಮ್ಯವೆಂದು ನಡುವೆ ನಟನ ಸ್ತರವು ಸೇರಿಕೊಳ್ಳುತ್ತದೆ. ಸಿನೆಮಾ, ದೂರದರ್ಶನಗಳಲ್ಲಿ ಇನ್ನೂ ಒಂದು ಸ್ತರವೂ ಸೇರಿಕೊಳ್ಳುತ್ತದೆ. ಲೌಕಿಕ ದುಷ್ಯಂತ – ನಟ – ಭಾವಚಿತ್ರ (ನಟ ಪ್ರತಿನಿಧಿ) – ಬುದ್ಧಿಮಯ ದುಷ್ಯಂತ – ತಾದಾತ್ಮ್ಯ.

ಶಬ್ದಶಕ್ತಿಮಹಿಮೆಯಿಂದಾದ ವಾಸ್ತವ ಪರಿಸ್ಥಿತಿ ಇದು. ಹೀಗಿರುವಾಗ ರಾಮ, ಕೃಷ್ಣ ಮುಂತಾದವರು ದೇವತಾ ಪುರುಷರಾದ ಮಾತ್ರಕ್ಕೆ ಬಾಧೆ ಏನು? ದೇವತ್ವವಿರಲಿ, ಲೌಕಿಕತ್ವವೇ ಮೊದಲಾದ ಸಮಸ್ತ ಉಪಾಧಿಗಳೂ ಕಳಚಿಹೋಗಿ, ಆಯಾ ವ್ಯಕ್ತಿಯು ಬುದ್ಧಿಮಯನಾಗಿ ತನ್ನೊಡನೆ ಆತ್ಮತಾದಾತ್ಮ್ಯವಾಗಲೇಬೇಕು. ರತಿ, ಉತ್ಸಾಹ, ಶೋಕ, ಭಯ, ಭಕ್ತಿ ಮುಂತಾದ ಭಾವಗಳು ತನ್ನವೇ ತನ್ನವಲ್ಲವೇ ಎಂಬ ವಿವೇಚನೆಯೂ

ಇಲ್ಲದೆ ಅವೆಲ್ಲವೂ ಅನಿರ್ವಾಚ್ಯಗಳಾಗಲೇಬೇಕು. ವ್ಯಕ್ತಿಯು ತನಗಿಂತ ಭಿನ್ನನೆಂಬ ಪರಕಿಯತ್ವವೇ ತಪ್ಪಿಹೋಗುತ್ತಿರುವಾಗ, ದೇವತ್ವವು ಅಡ್ಡಗೋಡೆಯಾಗಿ ನಿಲ್ಲುವುದು ಅಸಂಭವ. ಆಯಾ ಪಾತ್ರದ ಪುರುಷತ್ವ ಸ್ತ್ರೀತ್ವಾದಿಗಳೂ ಸಹ ಕಾವ್ಯಾಸ್ವಾದಕನಲ್ಲಿ ಏಕೀಭವಿಸುತ್ತವೆ.

ಮಾನ್ಯ ಶ್ರೀ ವಿ. ಸೀ. ಯವರು ರಾಮಾಯಣದಲ್ಲಿ ರಾಮನೂ ಮಹಾಭಾರತದಲ್ಲಿ ಕೃಷ್ಣನೂ ಮನುಷ್ಯರೆಂಬ ನಿಲುವನ್ನು ತಳೆದಿದ್ದಾರೆ. ಐತಿಹಾಸಿಕ ಸ್ತ್ರೀ ಪುರುಷರನ್ನು ಮನುಷ್ಯರೆಂದು ತಿಳಿಯುವುದು ಸಹಜವಾದದ್ದು. ದೇವತಾಪುರುಷರನ್ನು 'ಮನುಷ್ಯಕೇ ಭಾವೇ – ಮನುಷ್ಯಾವಸ್ಥೆಯಲ್ಲಿ ಇದ್ದಾಗ' ಎಂದು ವಾಲ್ಮೀಕಿ ವ್ಯಾಸರೇ ವರ್ಣಿಸಿರುವುದುಂಟು. ರಾವಣನಿಗೆ ಬ್ರಹ್ಮನ ವರಬಲವಿದ್ದುದರಿಂದಲ್ಲವೆ ರಾವಣನನ್ನು ಸಂಹರಿಸುವುದಕ್ಕೆ ವಿಷ್ಣುವು ಮನುಷ್ಯನಾಗಿ ಹುಟ್ಟಿದ್ದು? ರಾಮನು ಮನುಷ್ಯನಾದ್ದರಿಂದಲೇ ರಾವಣನನ್ನು ಕೊಲ್ಲಲು ಸಾಧ್ಯವಾಯಿತೆಂದು ಅವತಾರವಾದಿಗಳು ಒಪ್ಪಲೇಬೇಕು. ಮನುಷ್ಯನಾದ್ದರಿಂದ ಅವನಿಗೆ ದಾಶರಥಿ, ರಾಘವ – ಮುಂತಾದ ಹೆಸರುಗಳು ಬಂದವು. ವಿಷ್ಣುವು ಸ್ವತಃ ದಶರಥನ ಮಗನೂ ಅಲ್ಲ, ರಘುವಂಶದಲ್ಲಿ ಹುಟ್ಟಿದವನೂ ಅಲ್ಲ. ಲೋಕದಲ್ಲಿಲ್ಲದ, ಮನುಷ್ಯಮಾತ್ರನಿಗೆ ಸಲ್ಲದ ಯಾವುದೋ ಒಂದು ಅದ್ಭುತ ಘಟನೆಯೋ ಅಮನುಷ್ಯ ಶಕ್ತಿಪ್ರದರ್ಶನವೋ ಗ್ರಂಥಗಳಲ್ಲಿ ಬಂದಾಗ "ಹೀಗಾಯಿತಂತೆ, ಎಂದಿದೆ, ಎಂದು ಆ ಕಾಲದ ನಂಬಿದೆ" ಎಂದು ಬರೆದು ವಿ.ಸೀ. ಯವರು ಮುಂದೆ ಸಾಗುತ್ತಾರೆ. ಆ ವರ್ಣನೆಯನ್ನು ಖಂಡಿಸುವುದೂ ಇಲ್ಲ, ಅದನ್ನು ವಿಕೃತಗೊಳಿಸಿ ಸ್ವಬುದ್ಧಿ ವೈಭವವನ್ನು ಪ್ರದರ್ಶಿಸಲು ಯತ್ನಿಸುವುದೂ ಇಲ್ಲ. ಈ ವಿಷಯದಲ್ಲಿ ವಿ.ಸೀ. ಯವರ ನಿಲುವು ಯೋಗ್ಯವಾದ್ದೆಂದೂ ಪ್ರಾಮಾಣಿಕವಾದದ್ದೆಂದೂ ನನಗೆ ತೋರಿದೆ. ಗ್ರಂಥದಲ್ಲಿರುವುದನ್ನು ಯಾವ ಆಧಾರವೂ ಇಲ್ಲದೆ ವಿಕೃತಗೊಳಿಸುವುದು ಸೌಜನ್ಯವಲ್ಲ. ಕವಿಲೋಕಕ್ಕೆ ಮಾಡುವ ಅಪಚಾರವದು. ಇನ್ನೊಬ್ಬರ ಶ್ರದ್ಧಾ ವಿಶ್ವಾಸಗಳನ್ನು ಸ್ವೇಚ್ಛೆಯಾಗಿ ಕೆದಕುವುದು ದೌರ್ಜನ್ಯ. ವಿ.ಸೀ.ಯವರ ಮೃದು ಹೃದಯವು ವ್ಯವಹಾರದಲ್ಲಿ ಹೇಗೋ ಹಾಗೆ ಬರವಣಿಗೆಯಲ್ಲಿಯೂ ಸಹ ಅನ್ಯರ ಮನಸ್ಸನ್ನು ನೋಯಿಸಲು ಇಚ್ಛಿಸುವುದಿಲ್ಲ.

ವಿ.ಸೀ.ಯವರ ಬರವಣಿಗೆ ಬಿಗುಮಾನದ ಪ್ರೌಢ ಶೈಲಿಯದಲ್ಲ. ಅದು ಉಪನ್ಯಾಸಕನು ಬಳಸುವ ಬೋಧಪ್ರದವಾದ ಉಪನ್ಯಾಸದ ಶೈಲಿ. ಬಳಿಯಲ್ಲಿ ಕುಳಿತು ನಾಲ್ಕು ಜನರೊಡನಾಡುವ ಸಂಭಾಷಣೆಯ ಶೈಲಿ ಎಂದರೆ ಚೆನ್ನಾಗಿ ಒಪ್ಪೀತು. ಇದನ್ನು ವ್ಯಾಕರಣದ ಒರೆಗೆ ಹಚ್ಚಬಾರದು! ಕರ್ತೃಪದವನ್ನೋ

ಕರ್ಮಪದವನ್ನೋ ಅನನ್ವಿತವಾದ ಇನ್ನೊಂದು ಪದವನ್ನೋ ಅಂದಾಜಿನಿಂದ ಅಧ್ಯಾಹಾರ ಮಾಡಿಕೊಳ್ಳಬೇಕು. ಆದರೆ ಇದು ವ್ಯಾಕರಣ ಬದ್ಧವಾದ ಪ್ರೌಢ ಶೈಲಿಗಿಂತ ಪ್ರಭಾವಯುತವಾದ ರಸಸ್ಯಂದಿಯಾದ ಶೈಲಿ. ವಾಚಕರ ಹೃದಯಕ್ಕೆ ನೇರವಾಗಿ ಮುಟ್ಟುತ್ತದೆ. ಬಹುಬೇಗನೆ ಅವರನ್ನು ಒಲಿಸಿಕೊಳ್ಳುತ್ತದೆ.

ವಿ.ಸೀ.ಯವರ ವಾಲ್ಮೀಕಿ ರಾಮಾಯಣವು ಇನ್ನೊಂದು ಸಂಕ್ಷಿಪ್ತವಾದ ರಾಮಾಯಣ ಕಥೆಯಲ್ಲ. ಅದು ಆದಿಕಾವ್ಯದ ಒಂದೊಂದು ಶ್ಲೋಕವನ್ನೂ ವಾಕ್ಯವನ್ನೂ ಒಂದೊಂದು ಪದವನ್ನೂ ಅಧ್ಯಯನಮಾಡಿ ಹಿಂಡಿ ಸಾರವನ್ನು ತೆಗೆದು ಮಾಡಿದ ರಸಪಾಕ. ದೇವೇಂದ್ರನು ಅಹಲ್ಯೆಯ ಶೀಲಭಂಗಮಾಡಿ ಹೊರಟಾಗ ಅಹಲ್ಯೆಯು ಅವನನ್ನು ಕುರಿತು, ತನಗಾಗಲಿ ಅವನಿಗಾಗಲಿ ಗೌರವಭಂಗ ಆಗದಿರಲೆಂದು–

ಕೃತಾರ್ಥೋಽಸ್ಮಿ ಸುರಶ್ರೇಷ್ಠ ಗಚ್ಛ ಶೀಘ್ರಮಿತಃ ಪ್ರಭೋ
ಆತ್ಮಾನಂ ಮಾಂ ಚ ದೇವೇಶ ಸರ್ವದಾ ರಕ್ಷ ಮಾನದ

ಎನ್ನುತ್ತಾಳೆ. ಇಲ್ಲಿ ವಿ. ಸೀ. ಯವರ ಹೇಳಿಕೆ ಹೀಗೆ: "ಅವಳ ಮಾನ ಕಳೆಯಲು ಕಾರಣನಾಗಿದ್ದ ಅವನೇ ಅವಳ ಮಾನವನ್ನು ರಕ್ಷಿಸಬೇಕಾದವನೆಂಬಂತೆ ಅವನನ್ನು ಬೇಡಿಕೊಳ್ಳುತ್ತಾಳೆ! ಬಹುಶಃ 'ಓ ಮಾನ್ಯನೇ' ಎಂದು ಸಂಬೋಧಿಸುವ ಒಂದು ಪ್ರಕಾರ ಇದು ಎನ್ನಿಸುತ್ತದೆ." (ಮಾನದ ಎಂದು ಸಂಬೋಧಿಸಿದ್ದಕ್ಕಾಗಿ ಈ ಮಾತು)

ಇದು ನಿಜ. ಸ್ತ್ರೀಯರು ಪ್ರಿಯರಾದ ಪುರುಷರನ್ನು ಮಾನ್ಯ ಎಂಬರ್ಥದಲ್ಲಿ ಮಾನದ ಶಬ್ದವನ್ನು ಬಳಸಿದ ವಿಪುಲ ಪ್ರಯೋಗಗಳು ಸಂಸ್ಕೃತ ಸಾಹಿತ್ಯದಲ್ಲಿವೆ. ಸಂಸ್ಕೃತ ಪಂಡಿತರು ಇಂತಹ ಸಂದರ್ಭದಲ್ಲಿ ಇನ್ನೊಂದು ಬಗೆಯ ವ್ಯಾಖ್ಯಾವನ್ನು ಮಾನದ ಶಬ್ದಕ್ಕೆ ಮಾಡಬಹುದು. ಮಾನಂ ದದಾತೀತಿ ಮಾನದಃ. ದಾನಾರ್ಥಕವಾದ ದಾ ಧಾತುವಿನ ರೂಪವು 'ದ'. ಮಾನಂ ದ್ಯತಿ ಖಂಡಯತೀತಿ ಮಾನದಃ=ಮಾನವನ್ನು ಕಳೆಯತಕ್ಕವನು! 'ದೋ– ಅವ್ಸ ಖಂಡನೇ' ಎಂಬ ಧಾತುವಿನ ರೂಪ 'ದ'. ಇದು ಬುದ್ಧಿವಂತಿಕೆಯ ವ್ಯಾಖ್ಯಾನವಾಗುತ್ತದೆ.

ರಾಮಲಕ್ಷ್ಮಣರು ಸೀತೆಯನ್ನು ಅನ್ವೇಷಿಸುತ್ತ ಹೋಗಿ ಮತಂಗಾಶ್ರಮದಲ್ಲಿದ್ದ ಶಬರಿಯನ್ನು ಸಂದರ್ಶಿಸುತ್ತಾರಷ್ಟೆ. ಅನಂತರ ಶಬರಿಯು ತನ್ನ ಒಡಲನ್ನು ಅಗ್ನಿಗೆ ಅರ್ಪಣೆ ಮಾಡಿಕೊಳ್ಳುತ್ತಾಳೆ. ಆಗ "ಮತಂಗಾಶ್ರಮದಲ್ಲಿ ಸೋದರರು ತಂದೆಗೆ ತರ್ಪಣಾದಿಗಳನ್ನು ಕೊಟ್ಟು ವಿಶ್ರಾಂತಿ ಪಡೆಯುತ್ತಾರೆ" ಎಂದಿದೆ. ಇಲ್ಲಿ ಲೇಖಕರು "ತರ್ಪಣಾದಿಗಳನ್ನು ಕೊಟ್ಟು" ಎಂದು ಬರೆಯಲು ಆಧಾರವೇನೆಂಬ

ಚಿಂತೆಯುಂಟಾಗಿ ನಾನು ಸಂಸ್ಕೃತ ಮೂಲವನ್ನು ನೋಡಿದೆ. ಅದರಲ್ಲಿ "ಉಪಸ್ಪೃಷ್ಟಂ ಚ ವಿಧಿವತ್ ಪಿತರಶ್ಚಾಪಿ ತರ್ಪಿತಾಃ" ಇಂಬ ಮಾತು ಇದೆ! ವಿ. ಸೀ. ಯವರು ರಾಮಾಯಣದ ಒಂದೊಂದು ಪದವನ್ನೂ ಹೇಗೆ ಗಮನಿಸಿದ್ದಾರೆಂಬುದಕ್ಕೆ ಇವು ನಿದರ್ಶನಗಳು.

ವಿಭೀಷಣನು ರಾವಣನನ್ನು ತೊರೆದು ಬಂದಾಗ ಕುಂಭಕರ್ಣನು ನಿದ್ರಾಭರದಲ್ಲಿದ್ದನು. ಶ್ರೀರಾಮನೊಡನೆ ಯುದ್ಧವು ವಿಷಮಸ್ಥಿತಿಗೆ ಬಂದಾಗ ರಾವಣನು ಕುಂಭಕರ್ಣನನ್ನೆಬ್ಬಿಸಿ ಯುದ್ಧರಂಗಕ್ಕೆ ಕಳಿಸಿದನು. ಅಲ್ಲಿ ಕುಂಭಕರ್ಣನೆದುರಿಗೆ ವಿಭೀಷಣನು ಗದಾಪಾಣಿಯಾಗಿ ಬರುತ್ತಾನೆ. ಆಗ ಅಣ್ಣ ತಮ್ಮಂದಿರಲ್ಲಿ ನಡೆದ ಸಂಭಾಷಣೆ ಹೃದಯಸ್ಪರ್ಶಿಯಾದದ್ದು. ತಾಮಸ ಸ್ವಭಾವದವನಾದ ಕುಂಭಕರ್ಣನಿಗೂ ರಾವಣನು ಪಾಪಕೃತ್ಯವನ್ನು ಮಾಡಿ ಅಧರ್ಮದಿಂದ ಯುದ್ಧಕ್ಕಿಳಿದಿದ್ದಾನೆಂಬುದು ಮನದಟ್ಟಾಗಿದೆ. ಅವನು ತಮ್ಮನನ್ನು ಕುರಿತು

> ಅಸ್ಮತ್ಕಾರ್ಯಂ ಕೃತಂ ವತ್ಸ ಯಸ್ತ್ವಂ ರಾಮಮುಪಾಗತಃ
> ತ್ವಮೇಕೋ ರಕ್ಷಸಾಂ ಲೋಕೇ ಸತ್ಯಧರ್ಮಾಭಿರಕ್ಷಿತಾ

"ವತ್ಸ – ವಿಭೀಷಣ, ನೀನು ರಾಮನ ಬಳಿಗೆ ಬಂದದ್ದು ಒಳ್ಳೆಯದು. ನಮ್ಮ ಕೆಲಸವನ್ನೇ ಮಾಡಿಕೊಟ್ಟಂತಾಯಿತು. ರಾಕ್ಷಸರ ನಡುವೆ ಸತ್ಯಧರ್ಮಗಳನ್ನು ಎತ್ತಿಹಿಡಿದು ರಕ್ಷಿಸತಕ್ಕವನು ನೀನೊಬ್ಬನೇ"ಎನ್ನುತ್ತಾನೆ. "ಧರ್ಮನಿಷ್ಠರಿಗೆ ಯಾವ ವ್ಯಸನವೂ ಪ್ರಾಪ್ತವಾಗುವುದಿಲ್ಲ. ನಮ್ಮ ವಂಶದಲ್ಲಿ ನೀನೊಬ್ಬನಾದರೂ ಉಳಿದುಕೊಳ್ಳುತ್ತೀಯೆ! ರಾಮನ ಅನುಗ್ರಹದಿಂದ ನಿನಗೆ ಲಂಕಾರಾಜ್ಯವು ದೊರೆಯಲಿದೆ. ಆದರೆ ಇದು ರಣರಂಗ. ನನ್ನೆದುರಿಗೆ ಬರಬೇಡ. ನಿನ್ನನ್ನು ನಾನು, ವತ್ಸ, ರಕ್ಷಿಸಬೇಕಾಗಿದೆ. ನನಗಾದರೋ ಯುದ್ಧಕ್ಕಿಳಿದಾಗ ನನ್ನವರಾರು, ಎದುರು ಪಕ್ಷದವರಾರು ಎಂಬುದೇ ಗೊತ್ತಾಗುವುದಿಲ್ಲ!" ಎಂದು ಹೇಳುತ್ತಾನೆ. ವಿಭೀಷಣನ ಮನಸ್ಸು ಕಲಕಿ ಹೋಗುತ್ತದೆ. ಕಣ್ಣೀರು ತುಂಬುತ್ತದೆ. ತಾನು ರಾವಣನನ್ನು ತ್ಯಜಿಸಿಬಂದುದಕ್ಕೆ ಕಾರಣವನ್ನು ಹೇಳಿ, ಅಲ್ಲಿಂದ ದೂರ ಹೋಗಿ ಗದೆಯನ್ನೂರಿ ಚಿಂತಾಕ್ರಾಂತನಾಗಿ ಸುಮ್ಮನೆ ನಿಂತುಬಿಡುತ್ತಾನೆ. ಈ ಸಂಗತಿಯನ್ನು ವಿ.ಸೀ.ಯವರು ಬರೆದು "ಈ ಚಿತ್ರ ಮರೆಯಲಾಗುವುದಿಲ್ಲ. ಸೋದರರ ನಡುವೆಯ ಈ ಸಂಧಿಯೂ ಈ ಪ್ರಸಂಗದ ಗುಣಾತಿಶಯವೂ ಲಂಕೆಯಲ್ಲಿ ನಡೆದ ಯುದ್ಧ ಚರಿತ್ರೆಯಲ್ಲಿ ತುಂಬಾ ಸ್ಮರಣೀಯವಾದುದು" ಎಂದಿದ್ದಾರೆ. ನಾನು ಯಾವಾಗಲೋ ಅವರೊಡವೆ

ಮಾತಾಡುತ್ತಿದ್ದಾಗ "ವಿಭೀಷಣನು ಒಮ್ಮೆ ಯುದ್ಧ ಭೂಮಿಯಲ್ಲಿ ಗದೆಯೂರಿಕೊಂಡು ಸುಮ್ಮನೆ ನಿಂತು ಬಿಡುತ್ತಾನೆ. ಅದನ್ನು ನೋಡಿದ್ದೀರಾ?" ಎಂದು ಕೇಳಿದ್ದರು. ನನ್ನ ಕಣ್ಣು ನೋಡಿತ್ತು. ಹೃದಯವು ಕಂಡಿರಲಿಲ್ಲ.

ಹೀಗೆ ವಿ.ಸೀ.ಯವರು ರಾಮಾಯಣದ ಒಂದೊಂದು ಪಾತ್ರವನ್ನೂ ಒಂದೊಂದು ಸನ್ನಿವೇಶವನ್ನೂ ಕವಿಯ ಒಂದೊಂದು ಮಾತನ್ನೂ ಅಳೆದು ತೊಳೆದು ಆಸ್ವಾದಿಸಿ, ಈ ಕಥಾಮೃತವನ್ನು ಓದುಗರಿಗೆ ಹಂಚಿಕೊಟ್ಟಿದ್ದಾರೆ. ಅತಿಸೂಕ್ಷ್ಮವಾಗಿ ಕಾವ್ಯವನ್ನು ಪರಿಶೀಲಿಸಿದ್ದಾರೆ. ಆದರೂ ಒಂದು ಸ್ಥಳದಲ್ಲಿ ಪ್ರಮಾದವಾಗಿದೆ, ಅವಧಾನ ತಪ್ಪಿದೆ ಎಂದು ನನಗೆ ತೋರುತ್ತದೆ. ಅರಣ್ಯಕಾಂಡದಲ್ಲಿ ನಡೆದ ಒಂದು ಸಣ್ಣಸಂಗತಿ ಆಧುನಿಕ ಮನೋಭಾವನೆಗೆ ನೋವನ್ನುಂಟು ಮಾಡುತ್ತದೆ ಎಂದು ತಿಳಿಸಿ, ಹೀಗೆ ಬರೆಯುತ್ತಾರೆ: "ರಾವಣನ ಕೈಯಲ್ಲಿ ಸೀತೆ ಸಿಕ್ಕಿಕೊಂಡು ಶಾಪವಿಡುತ್ತ ಅಳುತ್ತ ತಪ್ಪಿಸಿಕೊಳ್ಳಲು ಯತ್ನಿಸುತ್ತಿರುವಾಗ ಅವಳ ತಲೆಕೂದಲು ಬಿಚ್ಚಿ ಹೋಯಿತು – ಎಂದಾಗ ಇದನ್ನು ನೋಡುತ್ತಿದ್ದ ದೇವತೆಗಳಿಗೆ ಋಷಿಗಳಿಗೆ ಸಂತೋಷ ಉಂಟಾಯಿತು ಎಂಬ ಮಾತು. ಏಕೆಂದರೆ, ಇದು ಸಂಘಟಿಸಿರುವ ಈಗ ರಾವಣನಾಶ ನಿಶ್ಚಯ ಎಂಬುದು. ಎಂಥ ದುಃಖಕರವಾದ, ಮಾನವ ಹೃದಯ ಸಂವೇದನೆಯಿಲ್ಲದ ನಡವಳಿಕೆ ಇದು. ಎಂಥ ವಿಕೃತಿ ಎನ್ನಿಸುತ್ತದೆ. ('ಕೆಲವು ವಿಶೇಷ ಪ್ರಸಂಗಗಳು' ಎಂಬ ವಿಭಾಗದಲ್ಲಿ ಎಂಟನೆಯದರ ಕಡೆಯಲ್ಲಿ) ಇದರ ಅಡಿ ಟಿಪ್ಪಣಿಯಲ್ಲಿ "ಇಲ್ಲಿನ ಮಾನವತೆಗೆ ಉಸಿರು ಕಟ್ಟಿದಂತಾಗುತ್ತದೆ. ನೆತ್ತರು ಕಾರುವಂತಾಗುತ್ತದೆ. ಈ ಮಾನವ ವ್ಯಕ್ತಿಗಳ ಅರ್ಥವಂತಿಕೆ ಕಡಿಮೆಯಾಗುತ್ತದೆ – ರಕ್ತಹೀನವಾಗಿ" ಎಂಬ ಉದ್ಗಾರವಿದೆ. ಈ ವಿಷಯವು ಸಂಸ್ಕೃತಮೂಲದಲ್ಲಿ ಹೀಗಿದೆ –

> ನ ವಾತಿ ಮಾರುತಸ್ತತ್ರ ನಿಷ್ಪ್ರಭೋ ಭೂದ್ದಿವಾಕರಃ
> ದೃಷ್ಟ್ವಾ ಸೀತಾಂ ಪರಾಮೃಷ್ಟಾಂ ದೀನಾಂ ದಿವ್ಯೇನ ಚಕ್ಷುಷಾ
> ಕೃತಂ ಕಾರ್ಯಮಿತಿ ಶ್ರೀಮಾನ್ ವ್ಯಾಜಹಾರ ಪಿತಾಮಹಃ
> ಪ್ರಹೃಷ್ಟಾ ವ್ಯಥಿತಾ ಶ್ಚಾಸನ್ ಸರ್ವೇ ತೇ ಪರಮರ್ಷಯಃ
>
> –ಅರಣ್ಯ, ೫೨ – ೧೨, ೧೩

"ಆ ಸಮಯದಲ್ಲಿ ಗಾಳಿ ಬೀಸಲಿಲ್ಲ. ಸೂರ್ಯನು ಕಾಂತಿಹೀನನಾದನು. ರಾವಣನು ಸೀತೆಯ ಮುಡಿಗೆ ಕೈ ಹಾಕಿ ಎಳೆದುದನ್ನೂ ಅವಳ ದೀನಾವಸ್ಥೆಯನ್ನೂ

ಬ್ರಹ್ಮದೇವನು ದಿವ್ಯದೃಷ್ಟಿಯಿಂದ ನೋಡಿ "ಆಯಿತು ದೇವಕಾರ್ಯ!" ಎಂದು ಉದ್ಗರಿಸಿದನು. ಮಹರ್ಷಿಗಳಿಗೆ ಸಂತೋಷವೂ ಆಯಿತು. ದುಃಖವೂ ಆಯಿತು. (ಎರಡೂ ಏಕಕಾಲದಲ್ಲಾದವು)."

ರಾವಣವಧೆ ದೇವಕಾರ್ಯ. ರಾವಣನು ಸೀತೆಯ ಮುಡಿಗೆ ಕೈ ಹಾಕಿದ ಮೇಲೆ, ಶ್ರೀರಾಮನು ರಾವಣನನ್ನು ಜೀವಸಹಿತ ಉಳಿಸುವುದಿಲ್ಲವೆಂದು ಬ್ರಹ್ಮನು ಹೇಳಿದ ಮಾತಿನ ಆಶಯ. ರಾವಣವಧೆ ಸಮೀಪಿಸಿತೆಂದು ಮಹರ್ಷಿಗಳಿಗೆ ಒಂದು ಕಡೆ ಸಂತೋಷ. ಅವಳು ಗೋಳಾಡುತ್ತಿದ್ದ ದೈನ್ಯದ ದೃಶ್ಯವನ್ನು ಕಂಡು ಇನ್ನೊಂದು ಕಡೆ ದುಃಖ. ಇಲ್ಲಿ ಆಧುನಿಕ ಮನೋಭಾವವನ್ನು ನೋಯಿಸತಕ್ಕದ್ದು ಯಾವುದು? ದೀರ್ಘಕಾಲದಿಂದ ರಾವಣಾದಿ ರಾಕ್ಷಸರ ಹಿಂಸೆಗೆ ಒಳಗಾಗಿ ತತ್ತರಿಸಿ ಹೋಗಿದ್ದ ಋಷಿಗಳಿಗೆ ರಾವಣವಧೆಯ ಕಾಲವು ಪ್ರಾಪ್ತವಾಯಿತೆಂದು ಸಂತೋಷವಾಗಿರುವುದು ಸಹಜವೇ. ಅವರು ಮನುಷ್ಯರೇ ಆದ್ದರಿಂದ ಸೀತೆಯ ದುಃಸ್ಥಿತಿಯನ್ನು ಕಂಡು ಮರುಕದಿಂದ ದುಃಖವಾಗಿರುವುದೂ ಸಹಜವೇ. ಶ್ಲೋಕದಲ್ಲಿರುವ 'ವ್ಯಥಿತಾಃ' ಎಂಬ ಶಬ್ದವು ವಿ.ಸೀ.ಯವರ ಗಮನಕ್ಕೆ ಬಂದೇ ಇಲ್ಲವೆಂಬುದು ಸ್ಪಷ್ಟವಾಗಿದೆ.

ಲೋಕದಲ್ಲಿ ಸುಖದುಃಖ ಸಂಮಿಶ್ರವಾದ ಭಾವನೆಗೆ ಕಾರಣವಾದ ಸನ್ನಿವೇಶವನ್ನು ಕಲ್ಪಿಸುವ ಎಷ್ಟೋ ಘಟನೆಗಳು ನಡೆಯುತ್ತವೆ.ಇದನ್ನು ಗುರುತಿಸುವುದು ಮಹಾಕವಿಯ ಸಾಮರ್ಥ್ಯ. ರಾಮಾಯಣದಲ್ಲಿಯೇ ಇರುವ ಇನ್ನೊಂದು ಚಿತ್ರಣ ಹನುಮಂತನು ಸೀತೆಯನ್ನು ಕಂಡು ಶ್ರೀರಾಮನ ವೃತ್ತಾಂತವನ್ನು ನಿವೇದಿಸುತ್ತಾನೆ. "ಶ್ರೀರಾಮನು ಸದಾ ನಿನ್ನನ್ನೇ ಚಿಂತಿಸುತ್ತಿದ್ದಾನೆ. ಇನ್ನೊಂದು ಕಡೆ ಅವನ ಮನಸ್ಸು ಹೋಗುವುದೇ ಇಲ್ಲ. ನಿನ್ನ ವಿರಹದಿಂದ ಯಾವಾಗಲೂ ಶೋಕಿಸುತ್ತಲೇ ಇರುತ್ತಾನೆ" ಎಂದು ಹನುಮಂತನು ವರ್ಣಿಸಿದಾಗ, ಸೀತಾ ದೇವಿಯ ಉದ್ಗಾರವಿದು –

ಅಮೃತಂ ವಿಷಸಂಸೃಷ್ಟಂ ತ್ವಯಾ ವಾನರ ಭಾಷಿತಂ
ಯಚ್ಚ ನಾನ್ಯಮನಾ ರಾಮೋ ಯಚ್ಚ ಶೋಕಪರಾಯಣಃ

ಸುಂದರ, ೩೭–೨

"ಹನುಮಂತ, ವಿಷಮಿಶ್ರವಾದ ಅಮೃತದಂತಿರುವ ಮಾತನ್ನಾಡಿದ್ದೀಯೆ. ಶ್ರೀರಾಮನು ನನ್ನನ್ನಲ್ಲದೆ ಇನ್ನೊಂದನ್ನು ಚಿಂತಿಸುತ್ತಿಲ್ಲವೆಂದೂ ಶೋಕದಲ್ಲಿ ಮುಳುಗಿಹೋಗಿದ್ದಾನೆಂದೂ ಹೇಳಿದ್ದೀಯೆ."

ತನ್ನ ಪ್ರಿಯನಾದ ರಾಮನು ಸದಾ ತನ್ನನ್ನು ಚಿಂತಿಸುತ್ತಾನೆ ಎಂಬುದು ಸೀತೆಗೆ ಅಮೃತ. ಅವನು ಶೋಕಪರಾಯಣನಾಗಿದ್ದಾನೆಂಬುದು ಅವಳಿಗೆ ವಿಷ. ಅತ್ಯಂತ ಸುಂದರವಾದ ಕಾವ್ಯಖಂಡವಿದು. ಹಿಂದೆ ಹೇಳಿದ ಅರಣ್ಯಕಾಂಡದ ಘಟನೆಯ ವರ್ಣನೆಯೂ ಇದೂ ಒಂದೇ ಮಟ್ಟದವು. ಆಹಾರ, ವ್ಯವಹಾರ, ವೇಷ – ಮುಂತಾದವು ಕಾಲಭೇದಿಂದ ಬೇರೆಬೇರೆಯಾಗಬಹುದು. ಅವು ಬಹಿರಂಗಗಳು. ಅಂತರಂಗದ ಅಂತಃಕರಣಕ್ಕೆ ಸೇರಿದ ಸುಖ, ದುಃಖ, ಪ್ರೀತಿ, ದ್ವೇಷ, ಕೋಪ ಮುಂತಾದ ಮನೋಭಾವಗಳು ಒಂದೇ ಬಗೆಯಾದವು. ಅವುಗಳಲ್ಲಿ ಆಧುನಿಕ, ಪ್ರಾಚೀನ ಎಂಬ ಭೇದವಾವುದೂ ಇಲ್ಲ.

ಶ್ರೀರಾಮನು ಮರೆಯಲ್ಲಿ ನಿಂತು ವಾಲಿಯನ್ನು ಸಂಹರಿಸಿದ ವಿಷಯವನ್ನು ವಿಸ್ತರಿಸಲು ವಿ.ಸೀ. ಯವರಿಗೆ ಇಷ್ಟವಿರಲಿಲ್ಲವೆಂದು ತೋರುತ್ತದೆ. ಇದು ಹಿಂದಿನಿಂದ ಚರ್ವಿತವಾದ ಸಂಗತಿ. ವಾದಪ್ರಧಾನವಾದದ್ದು. ಇದೊಂದು ನೀರಸವಾದ ಉಪೇಕ್ಷಣೀಯ ಭಾಗ – ಎಂದು ಅವರ ಮನಸ್ಸಿನಲ್ಲಿ ಇದ್ದಿರಬೇಕು. ಹಿಂದಿನ ವಾದ ಪ್ರಕಾರವನ್ನು ಸಂಕ್ಷೇಪವಾಗಿ ನಿರೂಪಿಸಿ "ವಾಲಿಯೇ ಕಡೆಗೆ ಈ ಪರಿಣಾಮಕ್ರಿಯೆಗೆ ಒಪ್ಪಿಕೊಂಡ ಹಾಗೆ ಕಾಣುತ್ತದೆ.... ಯಾವ ಸನ್ನಿವೇಶವನ್ನು ಅವನು ಒಪ್ಪಿಕೊಂಡನೋ ಅದಕ್ಕೆ ನಾವೂ ಒಪ್ಪಿಗೆ ಕೊಡಬಹುದೆನಿಸುತ್ತದೆ. ವ್ಯವಹಾರ ಅಲ್ಲಿಗೆ ಮುಗಿಯಿತು" ಎಂದು ಮುಗಿಸಿದ್ದಾರೆ. ಈ ತೀರ್ಮಾನವನ್ನು ಇಂದಿನ ರಾಮಾಯಣ ವ್ಯಾಸಂಗಿಗಳೆಲ್ಲರೂ ಒಪ್ಪಿಕೊಂಡು ಈ ವಿವಾದಕ್ಕೆ ಕೈಹಾಕದಿರುವುದು ಲೇಸೆಂದು ನನಗೆ ತೋರುತ್ತದೆ.

ಆದರೆ ಇದನ್ನೇ ದೊಡ್ಡದಾಗಿ ಮಾಡಿ ರಾಮನು ಅಧರ್ಮಿ ಎಂದು ಹಠದಿಂದ ಸಾಧಿಸತಕ್ಕ ಕದನಕುತೂಹಲಗಳಿದ್ದಾರಲ್ಲ! ಅವರಿಗೆ ಸಮಾಧಾನ ಹೇಳಲು ಯಾರಿಗೆ ಸಾಧ್ಯವಾದೀತು? ಈ ವಾದದಲ್ಲಿ ತೊಡಗಿದವರೆಲ್ಲರೂ ಶ್ರೀರಾಮನು ವಾಲಿಗೆ ಹೇಳಿದ ಸಮಾಧಾನವನ್ನು ಸರಿಯಾಗಿ ಗಮನಿಸಿಲ್ಲವೆಂದು ನನಗೆ ಅನ್ನಿಸಿದೆ. ಮೊದಲು ಶ್ರೀರಾಮನು ಹೇಳಿದ ಉತ್ತರಗಳೆಲ್ಲವೂ ವಾಲಿಯ ವಿವಿಧ ಆಕ್ಷೇಪಣೆಗಳಿಗೆ ಕ್ರಮವಾಗಿ ಕೊಟ್ಟವು. ಅವು ಮುಖ್ಯವಾದವಲ್ಲ. "ನೀನು ಮಾಡಿದ ಪಾಪಕೃತ್ಯಕ್ಕೆ ವಧೆಯೇ ದಂಡವೆಂದು ಶಾಸ್ತ್ರದಲ್ಲಿ ವಿಹಿತವಾಗಿದೆ. ಧರ್ಮಪಾಲನೆಗಾಗಿ ಈ ರೀತಿಯಾದ ದಂಡವನ್ನು ವಿಧಿಸಿ ಜಾರಿಗೊಳಿಸಬೇಕಾದದ್ದು ರಾಜನೂ ಕ್ಷತ್ರಿಯನೂ ಆದ ನನ್ನ ಕರ್ತವ್ಯ. ನಾನು ನಿನ್ನೊಡನೆ ಯುದ್ಧಕ್ಕೆ ಬಂದಿಲ್ಲ. ಯುದ್ಧಧರ್ಮವು ಈಗ ಅನ್ವಯಿಸುವುದಿಲ್ಲ. ಅಪರಾಧಿಯನ್ನು ನೇಣು ಹಾಕಿ ಕೊಲ್ಲಬಹುದು. ವಿಷ ತಿನ್ನಿಸಿ ಸಾಯಿಸಬಹುದು. ಮರೆಯಲ್ಲಿ ನಿಂತು ಹೊಡೆದು ಉರುಳಿಸಬಹುದು.

ಅದು ದಂಡವಿಧಾಯಕನ ಇಚ್ಛೆಗೆ ಒಳಪಡುತ್ತದೆ. ಅಪರಾಧಿಗೆ ಇದನ್ನು ಪ್ರಶ್ನಿಸುವ ಅಧಿಕಾರವಿಲ್ಲ" ಇದು ಶ್ರೀರಾಮನಿತ್ತ ಮುಖ್ಯವಾದ ಉತ್ತರ. "ತಸ್ಯ ದಂಡೋ ವಧಃ ಸ್ಮೃತಃ, ದಂಡೋऽ ಯಂ ಪ್ರತಿಪಾದಿತಃ ದಂಡಾದನ್ಯತ್ರ, ರಾಜಭಿರ್ಧೃತದಂಡಾಃ" ಎಂದು ಮತ್ತೆ ಮತ್ತೆ ದಂಡ ಶಬ್ದವನ್ನು ಬಳಸಿದ್ದಾನೆ. ಅನಂತರ ವಾಲಿಗೆ ಬುದ್ಧಿ ಬಂದಿತು. "ಧರ್ಮೇऽಧಿಗತನಿಶ್ಚಯ"ನಾಗಿ ರಾಮನನ್ನು ನಿಂದಿಸಿದ್ದಕ್ಕೆ ಪಶ್ಚಾತ್ತಾಪ ಪಟ್ಟು ಅವನ ಕ್ಷಮೆಯನ್ನು ಬೇಡುತ್ತಾನೆ. ಒಂದಾನೊಂದು ಧರ್ಮಸೂಕ್ಷ್ಮವನ್ನು ತಿಳಿಸುವುದಕ್ಕಾಗಿ ವಾಲ್ಮೀಕಿ ಮುನಿಗಳು ಬರೆದ ಕಥಾ ಪ್ರಸಂಗ ಇದು. ಮರೆಯಲ್ಲಿ ನಿಂತು ಬಾಣಪ್ರಯೋಗ ಮಾಡಿದನೆಂಬುದನ್ನು ಹೇಳದೆ, "ರಾಮನು ಯುದ್ಧಕ್ಕಿಳಿದು ನೇರವಾಗಿ ಹೋರಾಡುತ್ತಿರುವಾಗಲೇ ಒಂದು ಘೋರವಾದ ಬಾಣವನ್ನು ಪ್ರಯೋಗಿಸಿ ವಾಲಿಯನ್ನು ಕೊಂದನು" ಎಂದು ವಾಲ್ಮೀಕಿ ಮುನಿಗಳೇ ಬರೆದಿದ್ದರೆ, ಅವರನ್ನು ಯಾರು ಪ್ರಶ್ನಿಸುತ್ತಿದ್ದರು? ಲೆಕ್ಕವಿಲ್ಲದಷ್ಟು ಸಲ ರಾಮನನ್ನು "ಧರ್ಮಾತ್ಮ, ಮಹಾತ್ಮ, ಸತ್ಯಪರಾಕ್ರಮ" ಎಂದು ವರ್ಣಿಸುವ ಕವಿ ಹಾಗೇಕೆ ಬರೆಯಲಿಲ್ಲ?

ವಾಲ್ಮೀಕಿಯ ಕವಿತೆ ಎಂಬ ವಿಭಾಗವು ಬಹು ಮನೋಜ್ಞವಾಗಿ ಬಂದಿದೆ. ಸ್ವತಃ ಕವಿಗಳಾದ ಲೇಖಕರು ಆದಿಕವಿಯ ಕಾವ್ಯಸೌಂದರ್ಯವನ್ನು ಬಿಡಿಸಿ ವರ್ಣಿಸಲು ಹೊರಟಾಗ ಸೊಗಸಿಗೆ ಎಣೆ ಇದ್ದೀತೆ? "ನಮಗೆ ತೃಪ್ತಿಯಾಗುವಷ್ಟನ್ನು ನೀಡಲಿಲ್ಲ. ಇದಕ್ಕಾಗಿ ಇನ್ನಷ್ಟು ಪುಟಗಳನ್ನು ಮೀಸಲಾಗಿ ಇಡಬಹುದಾಗಿತ್ತು" ಎನ್ನಿಸುತ್ತದೆ. ವಾಲ್ಮೀಕಿ ರಾಮಾಯಣವನ್ನು ಓದಿದವರೂ ಓದದೇ ಇರುವವರೂ ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಬೇಕೆಂದು ಬಯಸತಕ್ಕವರೂ ಪ್ರಾಚೀನ ಕಾವ್ಯದ ಸೊಗಸು ಏನೆಂದು ತಿಳಿಯಲಿಚ್ಛಿಸುವ ಕುತೂಹಲಿಗಳೂ ಅವಶ್ಯವಾಗಿ ಓದಬೇಕಾದ ಕೃತಿ ಇದು. ಶ್ರೀ ವಿ. ಸೀತಾರಾಮಯ್ಯನವರಿಗೆ ಕನ್ನಡ ಜನತೆ ಕೃತಜ್ಞತೆಯಿಂದ ಪ್ರಣಾಮ ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತದೆ. ನಿಬಂಧವನ್ನೋದುವಾಗ ಒಂದು ಅಭಿನವರಮಣೀಯತೆ ಪುಟ ಪುಟದಲ್ಲಿಯೂ ಎದ್ದು ಕಾಣುತ್ತದೆ. "ರಾಮಾಯಣವನ್ನು ನಾವು ಓದಿಯೇ ಇದ್ದೇವೆ. ಇದರಲ್ಲಿ ಹೊಸದೇನು?" ಎಂಬ ಭಾವನೆಯೇ ಅಳಿಸಿ ಹೋಗುತ್ತದೆ.

# ಪ್ರಸ್ತಾವನೆ

ಈ ಪುಸ್ತಕ ರಾಮಾಯಣದ ಮಾನವೀ ಲಕ್ಷಣಗಳನ್ನು ಮಾತ್ರ ಕುರಿತದ್ದು. ಆ ಗ್ರಂಥವನ್ನು ಕುರಿತು ನಮ್ಮ ಜನವರ್ಗದಲ್ಲಿ ಬಹುಮಂದಿಗೆ ಹಿಂದಿನ ಕಾಲದಿಂದ ಪೂಜ್ಯಭಾವ, ಭಕ್ತಿ ಇವೆ. ಅವಕ್ಕೆ ಸಂಬಂಧಪಟ್ಟಂತೆ ಸಂತೋಷ ಕೊಡುವ ಅನೇಕ ಸಂಗತಿಗಳು ಇಲ್ಲಿಲ್ಲ. ಈ ಕಾಲದವರಿಗೆ ಆ ಸಂಗತಿಗಳಾವುವೂ ರಾಮಾಯಣದ ಹಿರಿಮೆಗೆ ಕಾರಣವಾಗವು. ಮಾನವ ಯೋಗ್ಯತೆಯಲ್ಲಿಯೂ ಅದರಲ್ಲಿ ರೂಪಗೊಳ್ಳುವ ಸ್ತ್ರೀಪುರುಷರ ಚಾರಿತ್ರದಲ್ಲಿಯೂ ಸನ್ನಿವೇಶಗಳ ಪ್ರತಿಪಾದನೆ ಆಧಾರಗೊಂಡಿದೆ. ಅವಕಾಶ ಹೆಚ್ಚಾಗಿಲ್ಲದೆ ರಾಮಾಯಣದ ವರ್ಣನೆಗಳು ಎಷ್ಟು ಸಂಪನ್ನ, ಎಷ್ಟು ವಿವಿಧ ಎಂಬುದಕ್ಕಾಗಲಿ ಅಲ್ಲಿನ ಉಕ್ತಿ ಸೌಂದರ್ಯಗಳ ಹಲವು ನಿದರ್ಶನಗಳನ್ನು ಕೊಡುವುದಕ್ಕಾಗಲಿ ಆಗಿಲ್ಲ.

ರಾಮನದು ಶೀಲದ ಒಂದು ಪ್ರಕಾರ. ರೋಬ್ಯಾಕ್ ಎಂಬ ಮನಃಶಾಸ್ತ್ರಜ್ಞ ಆ ಪ್ರಕಾರವನ್ನು ಹೀಗೆ ವರ್ಣಿಸಿದ್ದಾನೆ: "ಸ್ಥಾಯಿಯಾಗಿ ಮನುಷ್ಯನಲ್ಲಿ ಒಂದು ಮನಃಪ್ರವೃತ್ತಿ ಇರುತ್ತದೆ; ಅದು ಸಹಜವಾಗಿ ಬರುವ ಪ್ರಚೋದನೆಗಳನ್ನು ಅದುಮಿ ಹೊಮ್ಮದಂತೆ ಮಾಡುತ್ತದೆ: ಹೊಮ್ಮುಗೆಯನ್ನು ಪಡೆವಾಗ ಅದನ್ನು ಯಾವುದೊ ತತ್ವ ಒಂದು ಕ್ರಮಕ್ಕೆ ಒಳಪಡಿಸುತ್ತದೆ". ಅಂಥವನದು ಯಾವುದಕ್ಕೂ ಹಿಂಜರಿಯದಿರುವ ಕಾರ್ಯೋದ್ದೇಶ. ನಿರ್ಣಯದಲ್ಲಾಗಲಿ ಕಾರ್ಯಕಾರಿತೆಯಲ್ಲಾಗಲಿ ಅದು ಶ್ಲಾಘ್ಯ ಗುಣವೇ. ಯಾವ ಸಮಯದಲ್ಲಿಯೇ ಆಗಲಿ ತಾನು ದುರ್ಬಲವೆಂದು ಕಂಡುಕೊಳ್ಳಲು ಅದಕ್ಕೆ ಸಿಗ್ಗು. ಮನಸ್ಸು ಆ ವಿಶೇಷ ಲಕ್ಷಣವನ್ನು ಅಡಗಿಸಿಬಿಡಲು ಯತ್ನಿಸುತ್ತದೆ. ತನಗೆ ತಾನು ಯಾವ ಅನುಕೂಲಗಳನ್ನೂ ಬಯಸದ್ದರಿಂದ ಇತರರಿಗೂ ಅಂಥದನ್ನು ಅದು ಎರೆಯುವುದಿಲ್ಲ. ವಾಸ್ತವವಾಗಿ, ತ್ಯಾಗ ಅಗತ್ಯವಾದರೆ – ಆದಾಗ – ತನ್ನನ್ನೇ ತ್ಯಾಗಮಾಡಿಕೊಂಡೀತು; ತನಗೆ ಸಂಬಂಧಪಟ್ಟ ಎಲ್ಲವನ್ನೂ ತ್ಯಾಗಮಾಡಲು ಸಿದ್ಧವಿರುತ್ತದೆ. ಅದು ಮೆಚ್ಚತಕ್ಕದ್ದೇ. ತಾನು ಪ್ರೀತಿಸಬೇಕೆಂಬುದೂ

---

1 "An enduring dispositis to inhibit instinctive impluses in accordance with a regulative principle" (Problems of Personality.)

ಇತರರು ತನಗೆ ಪ್ರೀತಿ ತೋರಿಸಬೇಕೆಂಬುದೂ ಅದಕ್ಕೆ ಇಷ್ಟವೇ. ಆದರೂ ಈ ಶೀಲ ಪ್ರೀತಿಗೆ ಮೀರಿ ನಿಲ್ಲುತ್ತದೆ; ಯಾವುದೊ ಒಂದು ಗೊತ್ತಾದ ಸದ್ಗುಣಕ್ಕೆ ಎಂದಿಗೂ ತಾನು ನಿಲ್ಲುತ್ತೇನೆ ಎನ್ನುತ್ತಿರುತ್ತದೆ. ಅಂಥವರೊಡನೆ ಬಾಳು ಕಷ್ಟ. ಏಕೆಂದರೆ ಅದು ವಿಧೇಯತೆಯನ್ನು ಬಯಸುತ್ತದೆ; ಬೇಡುತ್ತದೆ. ಹನುಮಂತನಂತಹ, ಲಕ್ಷ್ಮಣನಂತಹ ಮನುಷ್ಯರು ಅದಕ್ಕೆ ಸೇವೆಸಲ್ಲಿಸಿ ತೃಪ್ತಿ ಪಡುತ್ತಾರೆ: ಭರತನಂತಹವರು ಹೇಗೊ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ನಿಲವಿನಲ್ಲಿ ಅದಕ್ಕೆ ಸಮವಾಗಿ ತೂಗಬೇಕೆಂದು ಬಯಸಿದ ಸೀತೆ ಬಲಿಯಾಗಿ ಹೋಗುತ್ತಾಳೆ.

ವಾಲ್ಮೀಕಿ ಆದರ್ಶವ್ಯಕ್ತಿಯೊಬ್ಬನನ್ನು ಚಿತ್ರಿಸುತ್ತಾನೆ: ಮಹದ್ಗುಣಗಳು, ಉನ್ನತಿ ಉಳ್ಳವನು; ಶುಚಿಶೀಲ; ಘನವಾದ ಉದ್ದೇಶಗಳುಳ್ಳವನು; ನಡತೆಯಲ್ಲಿ ಉನ್ನತವಾದ ಆದರ್ಶವೇನು ಎಂಬುದನ್ನು ತೋರಿಸುವುದಕ್ಕೆ ಇದು ಮೀಸಲು; ಮಹತಿಯುಳ್ಳ ಮತ್ತು ದಕ್ಷವಾದ ಒಂದು ಸಾವಿರ ಸಂಗತಿಗಳ ನಡುವೆ ಅದರ ಪ್ರತಿಷ್ಠೆ ಎಷ್ಟು ದೊಡ್ಡದು ಎಂಬುದನ್ನು ಕಾಣಿಸುವಂಥದು. ಎಲ್ಲರೂ ಅದಕ್ಕೆ ಗೌರವ ತೋರಿಸುತ್ತಾರೆ. ದೇವತೆಗಳೂ ಮನುಷ್ಯರಲ್ಲಿ ಯಾರೂ ಅದನ್ನು ಎದುರಿಸಿ ನಿಲ್ಲಲು ಮನಸ್ಸು ಮಾಡುವುದಿಲ್ಲ. "ಅಂತಹ ಪಾತ್ರಕ್ಕೆ ಆಳವಾದ ಸ್ವಂತ ಮನೋವೃತ್ತಿಗಳು ಲೆಕ್ಕಕ್ಕೆ ಬಾರವು; ಅದರ ಹದಿಗೆ ಬಡಿದು ಈ ಭಾವಗಳು ಒಡೆದು ಚೂರಾಗುವ ಅಲೆಗಳು. ಸ್ನೇಹ ಪ್ರೀತಿಗಳ ನಿರೀಕ್ಷೆಗೂ ಪಕ್ಷಪಾತಗಳಿಗೂ ವಿರುದ್ಧವಾಗಿ ನಿಂತು ತಮ್ಮ ನ್ಯಾಯಶೀಲತೆಯನ್ನೂ ಅಖಂಡತೆಯನ್ನೂ ದೃಢ ನಿಶ್ಚಯವನ್ನೂ ಕಾರ್ಯಕಾರಿಯಾಗಿಸಿರುವ ಅನೇಕ ನಿದರ್ಶನಗಳು ಮಾನವ ಇತಿಹಾಸದ ತುಂಬಾ ಇವೆ."[2]

ವಾಲ್ಮೀಕಿ ಶ್ಲೋಕ ಛಂದಸ್ಸನ್ನು ನಿರ್ಮಾಣ ಮಾಡಿದವನಿರಲಾರ; ಅನುಷ್ಟುಭಿನಲ್ಲಿ ಅದು ಆಗಲೇ ಇತ್ತು. ಆದರೆ, ವಾಲ್ಮೀಕಿಯಂತಹ ಕವಿಯ ಕೈಯಲ್ಲಿ ಶ್ಲೋಕ ಛಂದಸ್ಸು ಪಡೆದ ಚೆಲ್ವು, ಬೇಕಾದಂತೆ ಹಿಗ್ಗುವ ಕುಗ್ಗುವ ಗುಣ, ಪರಮಾಭಿವ್ಯಕ್ತಿ ಕೊಡಬಲ್ಲ ಲಕ್ಷಣವುಳ್ಳದ್ದಾಗಿ ಅದಕ್ಕೆ ಉನ್ನತ ಸ್ಥಾನವನ್ನೂ ಪ್ರತಿಷ್ಠೆಯನ್ನೂ ಉಂಟುಮಾಡಿ ಕೊಡುತ್ತದೆಯಲ್ಲದೆ ಸಾಹಿತ್ಯದಲ್ಲಿ ಅದನ್ನು ನೆಲೆಗೊಳಿಸಿದೆ. ವಾಲ್ಮೀಕಿಯದು ಕವಿಹೃದಯ; ಕವಿಪ್ರತಿಭೆ. ಅದು ತುಂಬಿ ಹೊರಸೂಸುವಂತೆ ಆ

2 "The emotions indeed are irrelevant to (such) character. They are waves which break themselves in vain against its base. History is full of examples of men who have exercised their justness and firmness inspite of the emotional claims of friendship and love." (Herbert Read : Collected Essays, p. 29.)

ಕಥನ ಕಾರ್ಯಕ್ಕೆ ಶ್ಲೋಕ ತಕ್ಕುದಾಗಿ ಹೊಂದಿಕೊಂಡಿತು. ಮಹಾಕಾವ್ಯವೊಂದರ ಬೆಳವಣಿಗೆಯಲ್ಲಿ ಒಂದು ಸಂಪೂರ್ಣ ನಾಗರಿಕತೆಯನ್ನೂ ಜೀವನಮೌಲ್ಯಗಳ ಒಂದು ವಿಧಾನವನ್ನೂ ನಟ್ಟು ಸ್ಥಾಪಿಸಿತು. ಒಂದು ಯುಗದ ಕೊನೆಯಲ್ಲಿ ರೂಪಗೊಂಡು ಅದರ ಆಲೋಚನೆಗಳನ್ನೂ ಭಾವಗಳಿಗೆ ರೂಪಕೊಟ್ಟೂ ನಿಲ್ಲಿಸಿತು. ಅದಕ್ಕೆ ಮುಂಚಿನ ಅಥವಾ ತರುವಾಯದ ಇನ್ನಾವ ಗ್ರಂಥರಚನೆಯೂ ಬಹುಶಃ ಇಲ್ಲಿನ ಪ್ರಸಾದ ಗುಣವನ್ನೂ ಉದಾರ ಗಂಭೀರತೆಯನ್ನೂ ಕಾಣಿಸದು. ರಾಮಾಯಣದ ಛಂದಸ್ಸು ನಮಗೆ ಕಾಣಿಸುವ ವೈಭವ, ಧಾರಾಳ, ವಾಸ್ತವತೆ ಬೇರೆಲ್ಲಿಯೂ ಕಾಣಲಾಗದ್ದು.

ತನ್ನ ಆಶ್ರಮದ ಹೊರವಲಯದಲ್ಲಿ ದಿಕ್‌ಶೂನ್ಯಳಾಗಿ ದುಃಖದಲ್ಲಿ ಕುಳಿತಿರುವ ಸೀಮಂತಿನಿ ಸೀತೆ ಅವನ ಕಣ್ಣಿಗೆ ಬಿದ್ದಾಗ ವಾಲ್ಮೀಕಿ ಮಾಡಿದುದು ಆತನನ್ನು ನಿಜವಾದ ಋಷಿಯಾಗಿಸುತ್ತದೆ. ಸಹಾನುಭೂತಿ, ಸ್ಥಿತಿಜ್ಞತೆ, ಹೃದಯವೈಶಾಲ್ಯ, ಕಷ್ಟದಲ್ಲಿರುವವರಿಗೆ ನೆರವಾಗುವ ಸಿದ್ಧತೆ ಇವು ನಿಜವಾಗಿ ಈ ಋಷಿಯ ಲಕ್ಷಣಗಳು. ಅಯೋಧ್ಯೆಯ ಅರಮನೆಯಲ್ಲಿ ಏನು ನಡೆದಿತ್ತು ಎಂಬುದನ್ನು ಅವನು ಆಂತರ್ಯದಲ್ಲಿ ಅರಿತ. ಬಡವೆ ಸೀತೆಯ ಆಗಿನ ಸ್ಥಿತಿಯಲ್ಲಿ ಅದು ಕ್ರೂರವಾದ ನಡವಳಿಕೆ. ರಾಮನ ಅರಸುತನದ ಕರ್ತವ್ಯ, ಹೊಣೆಗಾರಿಕೆಗಳ ಅಭಿವ್ಯಕ್ತಿಯಾಗಿ ಅಂಥದಕ್ಕೆ ಯಾವ ಬೆಲೆಯೇ ಇರಲಿ, ತನ್ನ ಆಶ್ರಮಕ್ಕೆ ಸೀತೆಯನ್ನು ಆತನು ಸ್ವಾಗತಿಸಿದನು; ಆಕೆಯ ಹುಟ್ಟಿಗೂ ಪದವಿಗಳಿಗೂ ತಕ್ಕಂತೆ ನೋಡಿಕೊಂಡನು; ಆಕೆಯ ಶುದ್ಧ ಚಾರಿತ್ರಕ್ಕೆ ತಕ್ಕಂತೆ ಗೌರವಿಸಿದನು. ಹುಟ್ಟಿದ ಮಕ್ಕಳಾದ ಅರಸುಕುಮಾರರಿಗೆ ತಕ್ಕ ಕಲೆಗಳಲ್ಲಿ ಶಿಕ್ಷಣ ಕೊಟ್ಟನು. ತಾನು ರಚಿಸಿದ್ದ ರಾಮಾಯಣವನ್ನು ಹಾಡಲು ಹೇಳಿಕೊಟ್ಟು ರಾಮಾಯಣವನ್ನು ಕುರಿತೂ ಸೀತೆಯನ್ನೂ ಆಕೆಯ ಮಕ್ಕಳನ್ನೂ ಕುರಿತೂ ವೃತ್ತಾಂತವು ಪ್ರಕಾಶಗೊಳ್ಳುವ ಕಾಲ ಒದಗಿದಾಗ ಒಂದು ವಿಶೇಷ ರೀತಿಯಲ್ಲಿ ಅದನ್ನು ಮಾಡಿದನು.

ವಾಲ್ಮೀಕಿ ಹೊಸದಾಗಿ ರಾಮಾಯಣ ಕೃತಿಯನ್ನು ಬರೆದಿದ್ದಿದ್ದರೆ ಆರನೆಯ ಕಾಂಡದ ಕೊನೆಯಲ್ಲಿ ವರ್ಣಿಸಿರುವ ಹಾಗೆ ರಾಮಸೀತೆಯರ ಪಟ್ಟಾಭಿಷೇಕ ಆದ ಮೇಲೆ ಅದನ್ನು ಬರೆದಿರಬೇಕು; ಅಲ್ಲದೆ, ಮಕ್ಕಳು ಆಶ್ರಮದಲ್ಲಿ ಹುಟ್ಟಿ ಸ್ವಲ್ಪಕಾಲ ಅಲ್ಲಿಯೇ ಬೆಳೆದಿರಬೇಕು. ಬಹುಪಾಲು ತಾನೇ ಎಲ್ಲವನ್ನು ಬರೆದನೊ ತನ್ನ ಕಾಲದಲ್ಲಿ ಜನಜನಿತವಾಗಿರಬಹುದಾದ ರಾಮಾಯಣ ಪ್ರಸಂಗಗಳನ್ನು ಸೇರಿಸಿ ತನ್ನ ಪಾಠವನ್ನು ಬೇರ್ಪಡಿಸಿದನೊ – ಈಗಿನ ಪಾಠ ಅವನ ಕೃತಿಯೆಂದು ನಮ್ಮ ಕಾಲಕ್ಕೆ ಬಂದಿದೆ.

ರಾಮಾಯಣದ ಕಥೆಯನ್ನು ಮೂಲ ಸಂಸ್ಕೃತದಲ್ಲಿಯೇ ಓದುವುದಕ್ಕೆ ಸಮನಾದ ಪ್ರತ್ಯಾಮ್ನಾಯ ಇನ್ನಾವುದೂ ಇಲ್ಲ. ನಮ್ಮಲ್ಲಿಯೇ ಓದಿಕೊಂಡಾಗಲೂ ಅದನ್ನು ಸ್ವಲ್ಪ ನುಡಿದು ಓದಿಕೊಂಡರೆ ಮೇಲು. ಭರತಖಂಡದವರಿಗೆ ಸಂಸ್ಕೃತ ಪ್ರಿಯವಾದ ಭಾಷೆ. ರಾಮಾಯಣ ಶ್ಲೋಕಗಳ ಉಲಿ ತುಂಬಾ ಆಹ್ಲಾದಕರವಾದುದು. ಪದಗಳು, ಪಾದಗಳು, ಖಂಡಗಳು ಸ್ಮರಣೆಯಲ್ಲಿ ನಿರಂತರವಾಗಿ ಸುಳಿಯುತ್ತಿರುತ್ತವೆ; ನಾಲಗೆಯ ಮೇಲೆ ಮಧುರವಾಗಿ ಆಡುತ್ತವೆ.

ಈ ಸಣ್ಣ ಗ್ರಂಥವನ್ನು ಬರೆಯುತ್ತಿರುವವನು ಸಂಸ್ಕೃತ ವಿದ್ವಾಂಸನಲ್ಲ ; ಮತಧರ್ಮ ದೃಷ್ಟಿಯುಳ್ಳವನಲ್ಲ. ಡಾ. ಗಳಾದ ಶ್ರೀ ಕೃಷ್ಣ ಕೃಪಲಾನಿ, ಪ್ರಭಾಕಜ ಮಾಚ್ವೆ ಅವರ ಪ್ರಸನ್ನತೆಯೂ ವಿಶ್ವಾಸವೂ ಇದನ್ನು ಬರೆಯಲು ನನಗೆ ಅಧಿಕಾರ ಕೊಟ್ಟಿತು. ರಾಮಾಯಣ ಯಾರನ್ನೂ ಒಲಿಸಿಕೊಳ್ಳುತ್ತದೆ. ಆ ಪ್ರೀತಿ ಇಲ್ಲಿ ರೂಪಿತವಾಗಿದ್ದರೆ ನಾನು ತೃಪ್ತ. ಅಂಥ ಸ್ವೀಕಾರ ಸಿಕ್ಕೀತೆಂಬ ಭರವಸೆಯಲ್ಲಿ ಮುಂದಿನ ಕೆಲವು ಪುಟಗಳನ್ನು ಮಹಾಜನಕ್ಕೆ ಅರ್ಪಿಸುತ್ತಿದ್ದೇನೆ. ಕಾರ್ಯವನ್ನು ನನಗೆ ಒಪ್ಪಿಸಿದ್ದಕ್ಕಾಗಿ ಸಾಹಿತ್ಯ ಅಕಾಡೆಮಿಯವರಿಗೆ ನಾನು ಕೃತಜ್ಞನಾಗಿದ್ದೇನೆ – ಅವರಿಗೆ ಇದು ಒಪ್ಪೀತೆಂದು ನಂಬಿ.

ಬೆಂಗಳೂರು
ಅಕ್ಟೋಬರ್ ೧೮, ೧೯೭೧ **ವಿ. ಸೀತಾರಾಮಯ್ಯ**

ಇದು ನನ್ನದೇ ಇಂಗ್ಲಿಷ್ ಕೃತಿಯು ಕನ್ನಡ ಅನುವಾದ. ಎಷ್ಟು ಅನುವಾಗಿದೆಯೋ ಹೇಳಲಾರೆ. ಈ ಎರಡು ಭಾಷೆಗಳ ನುಡಿಗಟ್ಟು, ವಾಕ್ಯ ರಚನೆ ಬೇರೆ ಬೇರೆ. ಮೂಲವನ್ನು ನಾನೇ ಬರೆದೆನಾದರೂ ಅದರ ಕನ್ನಡ ಅನುವಾದವೇ ಆಗಬೇಕಾದುದರ ಅಗತ್ಯ ನನ್ನ ಧ್ವನಿಯನ್ನೂ ಧಾರಾಳವನ್ನು ತಗ್ಗಿಸಿದೆ. ಎಷ್ಟಾದರೂ ಭಾಷಾಂತರ ಭಾಷಾಂತರವೇ. ಮೂಲದ ಹತ್ತಿರ ಕುಂಟಿಕೊಂಡು ಹೋಗಲು ಯತ್ತಿಸಿದ್ದೇನೆ. ಒಂದೆರಡು ಕಡೆ ಮಾತಿನ ಧಾರಾಳ ವಹಿಸಿಕೊಂಡಿದ್ದೇನೆ. ಆ ಭಾಷೆ ಬಳಕೆಯಿದ್ದವರಿಗೆ ಅಲ್ಲಿನ ಮಾತುಗಳ ಅರ್ಥವಂತಿಕೆ, ಕಾಂತಿ, ಭಾವಸಿದ್ಧಿ, ಖಚಿತತೆ, ನಿರ್ದಿಷ್ಟತೆ ಕನ್ನಡಕ್ಕೆ ಬಂದಿಲ್ಲ ಎನ್ನಿಸೀತು. ಇದನ್ನು ಕನ್ನಡ ಗ್ರಂಥವಾಗಿಯೇ ಓದುವವರಿಗೆ ಈ ಉಸಿರು ಕನ್ನಡವಲ್ಲ, ಇಂಗ್ಲಿಷಲ್ಲ; ಇಬ್ಬಂದಿ ಎನ್ನಿಸೀತು. 'ಬಂದಿ' ಎನ್ನುವುದನ್ನು 'ಬಂಧ್' ಎಂಬುದರ ಪಾಡಾಗಿ ಎಣಿಸಬೇಕೆಂದು ಬೇಡುತ್ತೇನೆ. ಸ್ವತಂತ್ರವಾಗಿ ರಾಮಾಯಣದ ಕೃತಿಯನ್ನು ನಾನೇ ಕನ್ನಡದಲ್ಲಿ ಬರೆದಿದ್ದರೆ –

ಅದರ ಗುಣಲಕ್ಷಣ ಯೋಗ್ಯತೆ ಹೇಗೊ!– ಬೇರೆಯಾಗುತ್ತಿತ್ತು. ಆದರೆ ಇದನ್ನು ಬರೆದುದು ಸಾಹಿತ್ಯ ಅಕಾಡೆಮಿಯವರ 'ಭಾರತೀಯ ಸಾಹಿತ್ಯ ನಿರ್ಮಾಪಕರ ಮಾಲೆ'ಯಲ್ಲಿ. ಇಂಗ್ಲಿಷಲ್ಲಿ ಒಂದು ಪುಸ್ತಕವಾಗಬೇಕೆಂದು ಅವರು ಗೊತ್ತು ಪಡಿಸಿದಾಗ, ಅವರ ಪುಟಗಳ ಮಿತಿಯನ್ನು ನನ್ನ ಬರವಣಿಗೆ ಬಹುವಾಗಿ ಮೀರಿದ್ದರಿಂದ, ಆ ಮಾಲೆಗೆ ಇದನ್ನು ಸೇರಿಸದೆ ಬೇರೆಯಾಗಿಯೇ ಪ್ರಕಟಿಸಿ ಇಷ್ಟು ವಿಸ್ತಾರದ ಅವಕಾಶವನ್ನು ದಯಪಾಲಿಸಿದರು. ಆದರೆ ವಾಲ್ಮೀಕಿ ರಾಮಾಯಣವನ್ನು ಕುರಿತು ಬರೆಯಬೇಕಾದವರಿಗೆ ಯಾವ ನಿರ್ಬಂಧವೂ ಅಂಕೆಮಿತಿಯೂ ರಚನೆಗೆ ಇಲ್ಲದಿದ್ದರೆ ಮೇಲಾಗುತ್ತಿತ್ತಾಗಿ ಇಷ್ಟಕ್ಕೇ ಸದ್ಯ ತೃಪ್ತನಾಗಬೇಕಾಗಿದೆ. ಈ ಭಾಗವನ್ನು ಕಡೆಯಲ್ಲಿ ಸ್ವಲ್ಪ ವಿಸ್ತರಿಸಿದೆ. ನಾನು ಸಂಸ್ಕೃತ ವ್ಯಾಕರಣವನ್ನು ಬಲ್ಲವನಲ್ಲವಾಗಿ ಉಧೃತಪಾಠಗಳನ್ನು ಉದಾರವಾಗಿ ಕಾಣಬೇಕೆಂದು ಬೇಡುತ್ತೇನೆ. ಕನ್ನಡಿಸಿದ ಈ ಗ್ರಂಥವನ್ನು ಸಾಹಿತ್ಯ ಅಕಾಡೆಮಿಯವರು ಸ್ವೀಕರಿಸುತ್ತಾರೆಂದು ನಂಬಿದ್ದೇನೆ. ಇದನ್ನು ಒಮ್ಮೆ ನೋಡಿ ಸಮಾಲೋಚಿಸಿದ ಗೆಳೆಯ ಡಾ. ರಂ. ಶ್ರೀ. ಮುಗಳಿ ಅವರಿಗೆ ನಾನು ಆಭಾರಿ. ಇಂಗ್ಲಿಷ್ ಮೂಲವನ್ನು ಉಕ್ತಲೇಖನವಾಗಿ ಬರೆದುಕೊಂಡು ಬೆರಳಚ್ಚಿನ ಪ್ರತಿ ತಯಾರು ಚಾಡಿದ ಶ್ರೀ. ಎಂ. ವಿ. ವಿ. ಮೂರ್ತಿ, ಎಂ. ಕಾಮ್ ಅವರೇ ಇದನ್ನು ಕನ್ನಡದಲ್ಲಿಯೂ ಬರೆದುಕೊಟ್ಟಿದ್ದಾರೆ. ಅವರ ನೆರವಿಗೆ ಅವರ ತಮ್ಮಂದಿರಾದ ಶ್ರೀ ಎಂ. ವಿ. ಸತ್ಯನಾರಾಯಣ ಎಂ. ಎ. ದುಡಿದಿದ್ದಾರೆ. ಈ ಇಬ್ಬರಿಗೂ ವಂದನೆಗಳು.
ಬೆಂಗಳೂರು

ಆಗಸ್ಟ್ ೧, ೧೯೭೫ **ವಿ. ಸೀತಾರಾಮಯ್ಯ**

# ಪರಿವಿಡಿ


ಶುಭ ಸಂದೇಶ iii

ಚೆನ್ನುಡಿ iv

ಎರಡು ನುಡಿ v

ಅಧ್ಯಕ್ಷರ ಮಾತು vi

ಪ್ರಕಾಶಕರ ಮಾತು vii

ಆಯ್ಕೆ ಸಮಿತಿ ix

ವಾಲ್ಮೀಕಿ ರಾಮಾಯಣ x

ಪ್ರಸ್ತಾವನೆ xxi

೧. ವಾಲ್ಮೀಕಿ ರಾಮಾಯಣ – ಪ್ರವೇಶ ೧

೨. ಮುಖ್ಯ ಕತೆ ೮

೩. ಕುಟುಂಬ ಜೀವನದ ಬಗೆಗಳು ೪೪

೪. ರಾಮಾಯಣದ ವ್ಯಕ್ತಿಗಳು ೫೯

೧. ದಶರಥ

೨. ರಾಮ

೩. ಲಕ್ಷ್ಮಣ

೪. ಭರತ

೫. ಸೀತೆ

೬. ಹನುಮಂತ

೭. ರಾವಣ

೮. ಇತರ ಕೆಲವು ಪಾತ್ರಗಳು :
ಮಾರೀಚ – ಸುಗ್ರೀವ – ವಾಲಿ – ವಿಭೀಷಣ – ಕುಂಭಕರ್ಣ – ವಿಶ್ವಾಮಿತ್ರ ಇತ್ಯಾದಿ.

೫. ಕೆಲವು ವಿಶೇಷ ಪ್ರಸಂಗಗಳು ೧೪೪

೬. ವಾಲ್ಮೀಕಿಯ ಕವಿತೆ ೧೮೨

# ವಾಲ್ಮೀಕಿ ರಾಮಾಯಣ

## ಅಧ್ಯಾಯ ೧

# ವಾಲ್ಮೀಕಿ ರಾಮಾಯಣ – ಪ್ರವೇಶ

ರಾಮಾಯಣ ಗ್ರಂಥದ ಕರ್ತೃವಾಗಿ ಮಾತ್ರ ವಾಲ್ಮೀಕಿಯ ಹೆಸರು ನಮ್ಮಲ್ಲಿ ಪ್ರಾಧಾನ್ಯತೆ ಪಡೆದಿದೆ. ಆ ಹೆಸರಿನ ಮನುಷ್ಯನನ್ನು ಕುರಿತ ಸಂಗತಿಗಳು ಒಂದೊ ಎರಡೊ ಮಾತ್ರ. ಎರಡೂ ಪೌರಾಣಿಕ ಅಥವಾ ಕಲ್ಪಿತ. ಅವುಗಳಲ್ಲಿ ಒಂದು ಸ್ಥಳ ಅಥವಾ ಪ್ರದೇಶಕ್ಕೆ ಸಂಬಂಧಿಸಿದ್ದು. ಬ್ರಹ್ಮನಿರ್ಮ್ಮಾಣದ ಮೊದ ಮೊದಲ ಋಷಿಗಳಲ್ಲಿ ಪ್ರಾಚೇತಸ ಒಬ್ಬ. ಅವನ ಮಗನಾಗಿ ಈತನು ಹುಟ್ಟಿದನೆಂದು ಇರುವುದರಿಂದ ಹುಟ್ಟಿನಲ್ಲಿ ಉತ್ತಮನಾಗಿಯೇ ಹುಟ್ಟಿದನೆಂದಾಯಿತು. ಯುವಕನಾಗಿದ್ದಾಗ ಕಳ್ಳರ ಮತ್ತು ಇತರ ದುರ್ಜನರ ಸಹವಾಸಕ್ಕೆ ಬಿದ್ದು ದುರ್ಮಾರ್ಗಿಯಾಗಿಯೇ ಇರುತ್ತಿದ್ದ ಅವನಿಗೆ ಒಬ್ಬ ಋಷಿ ಬಂದು ಮಂತ್ರೋಪದೇಶ ಮಾಡಿದನಂತೆ. ಅದನ್ನು ಧ್ಯಾನಿಸುತ್ತ ನಿಶ್ಚಲನಾಗಿ, ಏಕಾಗ್ರಚಿತ್ತನಾಗಿ, ಅನೇಕ ವರ್ಷ ಕಾಲ ಅವನು ಕಳೆದನಂತೆ. ಆಗ ಅವನ ಮೇಲೆ ಒಂದು ಹುತ್ತ ಬೆಳೆದುಕೊಂಡಿತು. ಸ್ವಲ್ಪ ಕಾಲ ಆದಮೇಲೆ ಅವನು ಜನರ ಕಣ್ಣಿಗೆ ಬಿದ್ದು ಲೋಕದ ಕಾರ್ಯ ಕಲಾಪಗಳಿಗೆ ಹಿಂತಿರುಗಿದಾಗ ವಲ್ಮೀಕದಲ್ಲಿ ಹುಟ್ಟಿದನೆಂದು 'ವಾಲ್ಮೀಕಿ' ಎಂಬ ಹೆಸರು ಬಂದಿತು ಎನ್ನುತ್ತಾರೆ. ಗ್ರಂಥದಲ್ಲಿಯೇ ಆರಂಭದ ಭಾಗಗಳಲ್ಲಿನ ಕೆಲವು ಪದ್ಯಗಳು ಋಷಿ ತಮಸಾ ನದಿಯ ದಡದಲ್ಲಿದ್ದನೆಂದು ತಿಳಿಸುತ್ತವೆ. ಒಮ್ಮೆ ನಾರದರು ಅಲ್ಲಿಗೆ ಬಂದರು. ಆತನಿಗೆ ಹಾಕಿದ ಪ್ರಶ್ನೆ ತನಗೆ ತಿಳಿದಿರುವ ಮನುಷ್ಯರಲ್ಲಿ, ರಾಜರಲ್ಲಿ ಯಾರು ಸರ್ವೋತ್ತಮರು? 'ಕೋನು ಅಸ್ಮಿನ್ ಸಾಂಪ್ರತಮ್ ಲೋಕೇ ಗುಣವಾನ್ ಕಶ್ಚ ವೀರ್ಯವಾನ್', ಇತ್ಯಾದಿ. ವಾಲ್ಮೀಕಿ ಋಷಿಗೆ ನಾರದರು ರಾಮನ ಕತೆಯನ್ನು ಹೇಳಿದರು – ಆ ಕಾಲದ ಮನುಷ್ಯರಲ್ಲಿ ಉತ್ಕೃಷ್ಟವಾದ ಗುಣಗಳೆಲ್ಲದರ ಮೂರ್ತಿಯಾಗಿದ್ದವನು ರಾಮ ಎಂದು. ಆ ಬಳಿಕ ಕ್ರೌಂಚ ಪಕ್ಷಿಗಳ ಸಂಗತಿ ಅವನನ್ನು ಆರ್ದ್ರನನ್ನಾಗಿ, ಮೃದುಕೋಮಲವಾಗಿ ಮಾಡಿತು. ಕ್ರೌಂಚ ಮಿಥುನದಲ್ಲಿ ಗಂಡು ಹಕ್ಕಿಯನ್ನು ಹೊಡೆದು ಕೊಂದು ಹೆಣ್ಣು ಹಕ್ಕಿಗೆ ನೋವುಂಟು ಮಾಡಿದ ಬೇಡನಿಗೆ ಶಾಪ

ಕೊಡುವಂತೆ ಮಾಡಿತು. ಸನ್ನಿವೇಶದಲ್ಲಿನ ಶೋಕ ಶ್ಲೋಕವಾಯಿತು. ಅಂಥ ಸಂದರ್ಭದಲ್ಲಿ ಬ್ರಹ್ಮನು ಅವನಿಗೆ ಕಾಣಿಸಿಕೊಂಡನಂತೆ. ಶ್ಲೋಕರೂಪದಲ್ಲಿ ಋಷಿಯ ಬಾಯಿಂದ ಹೊರಟ ವಾಣಿ ಛಂದೋಬದ್ಧವಾಗಿದೆಯೆಂದೂ ಅದು ಶ್ಲೋಕವೇ ಸರಿ ಎಂದೂ ಅದರ ನಿಜಸ್ವರೂಪವನ್ನೂ ಲಕ್ಷಣವನ್ನೂ ಸ್ಥಿರೀಕರಿಸಿದನು. ಆ ಛಂದಸ್ಸಿನಲ್ಲಿ ರಾಮನ ಜೀವನ ಚರಿತ್ರೆಯನ್ನು ಹೇಳು, ಚೆನ್ನಾಗುತ್ತದೆ ಎಂದನು.

ಅದು ಬರೆದಾದ ಮೇಲೆ ಸಣ್ಣ ವಯಸ್ಸಿನ ಇಬ್ಬರು ಶಿಷ್ಯರಿಗೆ ವಾಲ್ಮೀಕಿ ಅದನ್ನು ಹಾಡಲು ಹೇಳಿಕೊಡುತ್ತಾನೆ. ಅದನ್ನು ಕೇಳಿದ ಎಲ್ಲ ಋಷಿಗಳಿಗೂ ಮೆಚ್ಚುಗೆಯಾಗುತ್ತದೆ. ಮೆಚ್ಚಿದ ಅವರ ಮನಸ್ಸು ಕರಗುತ್ತದೆ. ಹಾಡಿದ ಹುಡುಗರನ್ನು, ಕೃತಿಯ ಕರ್ತೃವನ್ನು ಪ್ರಶಂಸೆ ಮಾಡುತ್ತಾರೆ. ಇದು ಈ ಮೊದಮೊದಲ ಕಾವ್ಯಭಾಗದ ವಿಷಯ. ಸುಮಾರು ರಾಮಾಯಣದ ಎರಡನೆಯ ಕಾಂಡದಲ್ಲಿ ಒಂದು ಕಡೆ ವಾಲ್ಮೀಕಿಯ ಆಶ್ರಮದ ವರ್ಣನೆಯಿದೆ. ವನವಾಸಕ್ಕೆ ಹೊರಡುವಾಗ ರಾಮ ಅದನ್ನು ದಾಟಿ ಮುಂದುವರಿದ ಎಂದಿದೆ. ಉತ್ತರ ಕಾಂಡದಲ್ಲಿ ವಾಲ್ಮೀಕಿ ಸೀತೆಯ ಯೋಗಕ್ಷೇಮವನ್ನು ನೋಡಿಕೊಂಡನೆಂದಿದೆ. ಆಕೆ ಅವಳಿ ಮಕ್ಕಳನ್ನು ಹೆರುವ ಸಮಯದಲ್ಲಿ ನೆರವಾದನೆಂದೂ ಆ ಮಕ್ಕಳನ್ನು ಬೆಳಸಿ ಬಿಲ್ವಿದ್ಯೆಯ ಜೊತೆಗೆ ಸಾಹಿತ್ಯ ಸಂಗೀತಗಳಲ್ಲಿ ಅವರಿಗೆ ಶಿಕ್ಷಣ ಕೊಟ್ಟನೆಂದೂ ಇದೆ. ಆ ಬಳಿಕ ರಾಮನ ಆಸ್ಥಾನಕ್ಕೆ ಮಕ್ಕಳನ್ನು ಕಳಿಸಿಕೊಡುತ್ತಾನೆ. ಅವರು ರಾಮನ ಮಕ್ಕಳೇ ಎಂದು ಗೊತ್ತಾದಾಗ ಸೀತೆಯನ್ನು ಕರೆತರಬೇಕೆಂದು ವಾಲ್ಮೀಕಿಗೆ ಹೇಳಿಕಳುಹಿಸುತ್ತಾರೆ. ವಾಲ್ಮೀಕಿಯನ್ನು ಕುರಿತು ನಮಗೆ ದೊರೆತಿರುವ ಕಥಾಭಾಗದ ಮುಖ್ಯಾಂಶವೆಲ್ಲ ಹೆಚ್ಚು ಕಡಿಮೆ ಇಷ್ಟೇ.

ರಾಮಾಯಣ ನಮಗೆ ಆದಿಕಾವ್ಯ ; ವಾಲ್ಮೀಕಿ ಆದಿಕವಿ. ಆ ಮುಂಚೆ ಭಾರತದಲ್ಲಿ ಕವಿಗಳಾಗಲಿ ಕವಿತೆ ಆಗಲಿ ಇರಲಿಲ್ಲವೆಂದಲ್ಲ. ಬ್ರಹ್ಮನಿಗೇ ಕವಿ ಎಂಬ ಹೆಸರಿದೆ. ಅವನು ಸೃಷ್ಟಿಕರ್ತ. ಅಲ್ಲಿ ಆ ಪದದ ಅರ್ಥ ದ್ರಷ್ಟಾರ ಎಂಬುದರ ಹತ್ತಿರದ್ದು. ವೇದಗಳಲ್ಲಿ, ಉಪನಿಷತ್ತುಗಳಲ್ಲಿ, ಇನ್ನಿತರ ಕಡೆಗಳಲ್ಲಿ ಭಾವಗೀತೆಯ ಲಕ್ಷಣವುಳ್ಳ ತುಂಡು ರಚನೆಗಳಿವೆ. ಆದರೆ ಸಾಹಿತ್ಯವಾಗಿ ಕವಿತೆಗೆ ಮೊದಲು ಸ್ವಾಗತ ದೊರೆತದ್ದು, ಪ್ರಧಾನವಾದ ಒಂದು ಸ್ಥಾನವನ್ನು ಅದಕ್ಕೆ ಕೊಟ್ಟು ಪುರಸ್ಕರಿಸಿದ್ದು ಈ ಕೃತಿಯನ್ನು ಕುರಿತಾಯಿತು. ಆಮೇಲಿನ ಕಾಲಗಳಲ್ಲಿ ಸಂಸ್ಕೃತದಲ್ಲಿ ಬಂದ ಕಾವ್ಯಗಳಿಗೆಲ್ಲ ಅದು ಆದರ್ಶವಾಯಿತು. ಈಗ ರಾಮಾಯಣ ಎಂಬ ಗ್ರಂಥದಲ್ಲಿನ ಎಲ್ಲವೂ ಮೊದಲು ವಾಲ್ಮೀಕಿ ಬರೆದುದೇ ಎಂಬುದಾಗಲಿ, ಅಥವಾ ಈ ರೂಪದಲ್ಲಿ ಅವನ ತಿಳಿವಳಿಕೆಗೆ ಬಂದ ಘಟನಾವಳಿಗಳಾಗಲಿ ರಚಿತ ಭಾಗಗಳಾಗಲಿ

ಆನಂತರ್ಯ ಸಂಗತಿಗಳಾಗಲಿ ದೊರಕಿ, ಅವನು ಈ ರೂಪದಲ್ಲಿ ರಚಿಸಿ ಒಟ್ಟು ಅನುಸ್ಯೂತವಾದ ಕತೆಯನ್ನು ಮಾಡಿದನೆಂದಾಗಲಿ ಹೇಳುವ ಹಾಗಿಲ್ಲ. ನಮಗೆ ಈಗ ದೊರೆತಿರುವ ಅತಿ ಮುಂಚಿನ ಹಸ್ತಪ್ರತಿ ಸುಮಾರು ಹನ್ನೊಂದನೆಯ ಶತಮಾನದ ಮೊದಲ ಭಾಗದ್ದು. ಆ ರೂಪಕ್ಕೆ ಅದು ಬರುವಾಗ್ಗೆ ರಾಮಾಯಣ ಕತೆಗೆ ಎಷ್ಟೊ ಹೆಚ್ಚಿನ ಭಾಗಗಳು ಸೇರಿಕೊಂಡಿರಬೇಕು. ಈ ಸಂಗತಿಗಳಲ್ಲಿ ಕೆಲವನ್ನು ಕಡೆಯಲ್ಲಿ ವಿಸ್ತರಿಸಿದೆ.

ವಿಮರ್ಶಕರು ಇದನ್ನು ಪುರಾಣ ಕಾವ್ಯ ಅಥವಾ ಇತಿಹಾಸ ಕಾವ್ಯ (Epic) ಎಂದು ಕರೆದಿದ್ದಾರೆ. ಆ ಮಾತಿಗೆ ಸೂತ್ರಲಕ್ಷಣ ಹೇಳಿದಂತೆ ಆ ಪದ ಅದಕ್ಕೆ ಒಪ್ಪಬಹುದು, ಬಿಡಬಹುದು. ಭಾರತದಲ್ಲಿ ನಮಗೆ ರಾಮಾಯಣ, ಮಹಾಭಾರತ ಎರಡೂ ಇತಿಹಾಸ ಕಾವ್ಯಗಳು. ಎರಡೂ ಬೇರೆ ಬೇರೆ ಬಗೆಯವು, ಮಟ್ಟದವು, ಉಕ್ತಿ ಪ್ರಕಾರಗಳವು.[೧] ರಾಮಾಯಣದ ಘಟನೆಗಳು ಒಂದು ಸಂಸಾರ ಒಂದು ರೀತಿ ಬೆಳೆದ ಕತೆಗೂ ಅದಕ್ಕೆ ಸಂಬಂಧಿಸಿದ ಸ್ಥಿತಿಗಳಿಗೂ ಸಂಬಂಧಿಸಿದ್ದು. ಮಹಾಭಾರತ ಕಾಲಕ್ಕಾಗಲೇ ಅದು ನೆನಪಿನಲ್ಲಿದ್ದ ತಿಳಿವಳಿಕೆಯ ಭಾಗ. ಏಕೆಂದರೆ, ಅಲ್ಲಿ ರಾಮಕತೆ ಬಂದಿದೆ. ಹೀಗೆ ಇದು ಭಾರತೀಯ ಇತಿಹಾಸದ ಕಾಲಮಾನದಲ್ಲಿ ಮುಂಚಿನ ಒಂದು ಘಟ್ಟಕ್ಕೆ ಸಂಬಂಧಿಸಿದ್ದು. ಮಹಾಭಾರತದ ಕಥನದಲ್ಲಿ ಇರುವಂತೆ ವಾಲ್ಮೀಕಿ ಕೃತ ರಾಮಾಯಣದ ಕತೆ ಆ ಮುಂಚೆ ಇತ್ತೊ ಇಲ್ಲವೊ – ನಮಗೆ ತಿಳಿಯದು. ಆ ಹೊತ್ತಿಗೆ ಬೌದ್ಧ ಜೈನ ಸಂಪ್ರದಾಯಗಳಲ್ಲಿ ರಾಮಾಯಣ ಕತೆಯ ಸಂಪೂರ್ಣ ಪಾಠಗಳು ಇನ್ನಾವುವು ಇದ್ದುವೊ – ಆ ಸಂಗತಿಯೂ ತಿಳಿಯದು.

ರಾಮಾಯಣ ತುಂಬಾ ಜನಪ್ರಿಯವಾದ ಕಾವ್ಯ. ವಿದ್ವಾಂಸರೂ ಅಲ್ಲದವರೂ ನಮ್ಮ ಜನ ಅನೇಕ ಮಂದಿ ಪ್ರತಿದಿನದ ಪಾರಾಯಣ ಗ್ರಂಥವಾಗಿ ಅದನ್ನು ಪಠಿಸುತ್ತಾರೆ. ಮೂಲಭೂತವಾದ ಒಂದು ಪೂಜ್ಯಭಾವ ಅದರ ಪರವಾಗಿ ನಾಡಿನಲ್ಲಿ ಹರಡಿದೆ. ಬಹುಶಃ ವೇದ ಉಪನಿಷತ್ತುಗಳೊಡನೆ– ಅವಕ್ಕಿಂತ ಮೇಲಾಗಿ ಕೂಡ– ರಾಮಾಯಣ ಮಹಾಭಾರತಗಳು ಭಾರತೀಯರ ದಿನಜೀವನವನ್ನು

---

೧ ಮಹಾಭಾರತವನ್ನು ಒಂದು ವೇದವೆಂದೇ ಕರೆಯುತ್ತಾರೆ. ಒಂದು ವಿಶ್ವಕೋಶವೇ ಅದಾಗಿ ಸ್ಮೃತಿಯ ಒಂದು ಅಂಶ ಕೂಡ ಅದರಲ್ಲಿದೆ. ವ್ಯವಹಾರ ಜೀವನ, ಸಂಸ್ಥಾ ವಿಶೇಷಗಳು, ನಡವಳಿಕೆ, ಮೌಲ್ಯ ಇರ್ಣಯಗಳಲ್ಲಿ ವಿವಿಧ ಮಾದರಿಗಳು, ಧರ್ಮ, ನೀತಿ, ತತ್ವಜ್ಞಾನ, ಮತಧರ್ಮ ಮುಂತಾದವುಗಳ ನಾನಾ ವಿಷಯ ಪ್ರಪಂಚಗಳನ್ನು ಕುರಿತ ಸಂಗತಿಗಳು ಇವೆ. ಭಿನ್ನ ಭಿನ್ನವಾದ ಹೆಚ್ಚು ಅಂಶಗಳನ್ನು ಸೇರಿಸಿ ಹೊಂದಿಸದೆ ಇಲ್ಲಿ ಹೆಚ್ಚು ವಿಶದವಾಗಿ, ಸ್ಫುಟವಾಗಿ ಕೈಕೊಂಡಂತಿದೆ.

ಸ್ಪಷ್ಟವಾಗಿ ಪ್ರಭಾವಗೊಳಿಸಿವೆ. ಒಂದು ನಿರ್ಮಲತೆ, ಎಂದರೆ ಪರಿಶುದ್ಧಿ, ಒಂದು ಉನ್ನತಿ ಮತ್ತು ಒಂದು ಪ್ರಸಾದ ಗುಣ ರಾಮಾಯಣ ಕತೆಗೂ ಅಲ್ಲಿನ ಪಾತ್ರಗಳಿಗೂ ಕಟ್ಟಿನಿಲ್ಲುತ್ತವೆ. ಮಹಾಭಾರತದಲ್ಲಿ ಕಂಡು ಬರುವ ಜೀವನದ ಮಟ್ಟಗಳಿಗಿಂತ ಅತಿಶಯವಾದ ಮೌಲ್ಯವುಳ್ಳಂತೆ ಇವು ಕಾಣುತ್ತವೆ. ಭಾವನೆ ಹಾಗೆ. ಆದರೆ ಇವೆರಡೂ ಬದುಕಿಗೆ ಉದಾಹರಣೆಗಳನ್ನೂ ನಡವಳಿಕೆಯ ಮಾದರಿಗಳನ್ನೂ ಒದಗಿಸಿವೆ. ಗಂಡಸರೂ ಹೆಂಗಸರೂ ಈ ವ್ಯಕ್ತಿಗಳ ಬದುಕಿಗೆ ಸಂಬಂಧಿಸಿದ ಘಟನೆಗಳಲ್ಲಿ ಪ್ರೀತಿವಿಶ್ವಾಸ ಉಳ್ಳವರಾಗಿದ್ದಾರೆ. ಮಹಾಭಾರತದಲ್ಲಿನ ಭಗವದ್ಗೀತೆಯ ಪ್ರಕರಣವನ್ನು ಬಿಟ್ಟರೆ ಅದರಲ್ಲಿನ ಇನ್ನಾವುದೇ ಭಾಗಕ್ಕಿಂತ ಹೆಚ್ಚಾಗಿ ರಾಮಾಯಣದ ಸಂಗತಿಗಳಲ್ಲಿ ಹೆಚ್ಚು ಗಂಭೀರವಾದ ಭಕ್ತಿಭಾವ ಉಂಟಾಗುತ್ತದೆ. ರಾಮಾಯಣದಂತೆಯೇ ಗೀತೆ ಕೂಡ ಹಿಂದೂ ಜನಾಂಗಕ್ಕೆ ನಿರಂತರವಾಗಿ ಒಂದು ಸ್ಫೂರ್ತಿ ಮೂಲವಾಗಿ ಜೀವಗೊಂಡಿದೆ. ರಾಮಭಕ್ತಿ, ಕೃಷ್ಣಭಕ್ತಿ – ಈ ಎರಡೂ ಬೇರೆ ಬೇರೆ ಬಗೆಯ ಭಕ್ತಿಗಳು. ರಾಮನನ್ನು ಕುರಿತುದು ಹೆಚ್ಚು ನಿಷ್ಠೆಯದು; ಕೃಷ್ಣನಿಗೆ ಸಂಬಂಧಿಸಿದವುಗಳಿಗಿಂತ ರಾಮಸಂಬಂಧದ ಮೌಲ್ಯಗಳು ಹೆಚ್ಚು ನಯಸಂಸ್ಕಾರವುಳ್ಳವು. ರಾಮನಿಗೂ ರಾಮಾಯಣದ ಇತರ ಪಾತ್ರಗಳಿಗೂ ಸಂಬಂಧಿಸಿದ ಕ್ರಿಯೆ, ಮಾತುಗಳ ನೆನಪು ಗಂಡಸರಿಗೂ ಹೆಂಗಸರಿಗೂ ಅನೇಕ ಬಗೆಯ ಸಾಂತ್ವನಗಳನ್ನು ತಂದು ಕೊಡುತ್ತವೆ; ಪುನಃ ಪುನಃ ಅವರಿಗೆ ಹೊಸ ಹುರುಪನ್ನು ಕೊಡುತ್ತವೆ; ಅವರ ಶಕ್ತಿಯನ್ನು ವೃದ್ಧಿಮಾಡಿ ಬದುಕಿನಲ್ಲಿ ತಮ್ಮನ್ನು ಒಂದು ನೆಲೆಗೆ ಸ್ಥಿರವಾಗಿ ನಿಲ್ಲಲು ಸಹಾಯ ಮಾಡುತ್ತವೆ. ರಾಮ, ಸೀತೆ, ಲಕ್ಷ್ಮಣ, ಭರತ, ಹನುಮಾನ್ – ಇವರು ಬೇರೆ ಬೇರೆ ರೀತಿಯಲ್ಲಿ ವಿಶೇಷ ಬಗೆಯ ಗುಣಗಳೊಡನೆ ಕಂಡು ನಿಂತು ಸ್ತ್ರೀ ಪುರುಷರಿಗೆ ಅದರ್ಶವ್ಯಕ್ತಿಗಳಾಗಿ ರೂಪಗೊಳ್ಳುತ್ತಾರೆ. ಒಬ್ಬೊಬ್ಬರ ಶೀಲವೂ ತಮ್ಮದೇ ಆದ ಗುಣಸ್ವಭಾವವುಳ್ಳದ್ದು. ಅವರು ಯಾವ ಗುಣಗಳ ಪ್ರತಿನಿಧಿಗಳೊ ಅವುಗಳ ಅತ್ಯುಚ್ಚ ಲಕ್ಷಣಗಳನ್ನು ಒಳಗೊಳ್ಳುವುದು ಮಾತ್ರವಲ್ಲ, ಪಾರ್ಥಿವ ಸ್ವಭಾವದ ಸ್ತ್ರೀ ಪುರುಷರಿಗೆ ಉಸಿರು ಕಟ್ಟಿಸುವಷ್ಟು, ನಿರಾಸೆ ಉಂಟು ಮಾಡುವಷ್ಟು ಈ ಗುಣಗಳು ಪರಾಕಾಷ್ಠೆಯಲ್ಲಿ ನಿಲ್ಲುತ್ತವೆ. ಉನ್ನತವಾಗಿ ನಿಂತ ಸ್ತಂಭಗಳಂತೆ, ಬಹುದೂರ ಪ್ರಕಾಶವಾಗುವ ದೀವಿಗೆಗಳಂತೆ ಆ ಜನ ಇದ್ದಾರೆ.

ರಾಮಾಯಣದ ಇನ್ನೊಂದು ಲಕ್ಷಣ ಯುಗಯುಗಗಳಲ್ಲಿ ಕವಿಗಳಿಗೂ ಇತರ ಸಾಹಿತಿಗಳಿಗೂ ತನ್ನ ಕವಿತಾವೈಭವದಿಂದ ಕೊಟ್ಟಿರುವ ಅದರ ಸ್ಫೂರ್ತಿ: ಆಯಾ ಕೃತಿಕಾರರ ಕಲ್ಪನಾಶಕ್ತಿ, ಉದ್ದೇಶ, ಅರ್ಥಗ್ರಹಣ, ಪರಿಶೀಲನೆಗೆ ತಕ್ಕಂತೆ

ರಾಮಾಯಣದ ಕತೆಯ ಅನೇಕ ವಿಚಿತ್ರ ರೂಪಗಳೂ ಬಳಕೆಯಲ್ಲಿವೆ. ಕೆಲವಲ್ಲಿ ಪ್ರಭಾವಯುತವಾಗಿಯೂ ಇವೆ. ಕೆಲವರಿಗೆ ಅದು ಯಾವುದೊ ಒಂದು ಶುದ್ಧ ಕೇವಲ ಸಂಕೇತಾರ್ಥವನ್ನು ಕೊಡುವಂತಿದೆ. ಇನ್ನೂ ಹೆಚ್ಚು ಮಂದಿ ಅದನ್ನು ಅವತಾರ ಕತೆಯಾಗಿ ಮಾತ್ರ ಭಾವಿಸುತ್ತಾರೆ; ಅಥವಾ ತಮ್ಮ ವಾದ ತತ್ವಪ್ರತಿಪಾದನೆಗಳಿಗೆ ಹೂಡಿಕೊಳ್ಳುತ್ತಾರೆ. ಎಷ್ಟೋ ಪ್ರತಿಪಾದನೆಗಳನ್ನು ಮತಪಂಥಗಳ ನಾನಾ ಶಾಖೆಗಳವರ ವಿವೇಚನೆಗಳಿಗೆ ಹೊಂದಿಸಿಕೊಳ್ಳುತ್ತಾರೆ. ಕೆಲವರಿಗೆ ಈ ಕತೆ ಸಾಂಸ್ಕೃತಿಕವಾಗಿಯೊ ಸಮಾಜ ವಿಜ್ಞಾನದ ವಿಸ್ತರಣಗಳಾಗಿಯೊ ಸಾಹಸಗಳಾಗಿಯೊ ಕಂಡಿದೆ. ಉತ್ತರ ಬಾರತದ ಒಬ್ಬ ವೀರ ದಕ್ಷಿಣಕ್ಕೂ ಸಮುದ್ರದ ಆಚೆಗೂ ದಾಟಿ ಹೋದ ಸಾಧನೆಯಾಗುತ್ತದೆ. ಕೃಷಿ ಅಥವಾ ವ್ಯವಸಾಯಕ್ಕೆ ಸಂಬಂಧಿಸಿದ ವ್ಯವಸಾಯದ ಕತೆಯಾಗುತ್ತಾಳೆ ಸೀತೆ. ಭೂ ವಿಜ್ಞಾನಕ್ಕೆ ಸಂಬಂಧಿಸಿದ ಸಂಕೇತವಾಗಿ ಇನ್ನು ಕೆಲವರು ಕಾಣುತ್ತಾರೆ. ಸಿದ್ಧಾಂತದ ಒಂದು ಭಾಗದವರಿಗೆ ಅದು ಕೇವಲ ಆಧ್ಯಾತ್ಮವೆಂದು ಕಾಣಿಸಿದರೆ ಇನ್ನೊಂದು ಬಗೆಯವರು ಶರೀರ ಮೀಮಾಂಸೆಯ ಪ್ರತೀಕವಾಗಿ ಮಾಡುತ್ತಾರೆ; ಅಲ್ಲಿ ಮಾನವ ಶರೀರದ ಅವಯುವಗಳು ಅವನ್ನು ಜೀವಸಾಧನೆಗಾಗಿ ಜೀವೋತ್ಪತ್ತಿಗೂ ಅದರ ಹೊಮ್ಮುಗೆಗೂ ಅಗತ್ಯವಾದ ಸುರಚನೆ ಕಾಣುತ್ತವೆ – ಎನ್ನುತ್ತಾರೆ. ಕೆಲವರಿಗೆ ಲಂಕೆ ಎಂದರೆ ಇಂದಿನ ಸಿಂಹಳದ್ವೀಪ (ಸಿಲೋನ್); ಇನ್ನು ಕೆಲವರು ಅದರ ಖಂಡ ಪರಿಮಿತಿಯನ್ನು ವಿಂಧ್ಯಪರ್ವತಗಳಿಗೆ[೨] ಆಗ್ನೇಯ ಭಾಗದಲ್ಲಿ ಹೆಚ್ಚು ಹತ್ತಿರದಲ್ಲಿಡುತ್ತಾರೆ. ಹೀಗೆ ಅಭಿಪ್ರಾಯಗಳೂ ನಿಲವುಗಳೂ ಅನೇಕ, ಪರಸ್ಪರ ವಿರುದ್ಧ ಆಗಿವೆ. ಕೆಲವು ಪಕ್ಷ ಭಕ್ತಿಗಳಲ್ಲಿ ಅತಿಪಂಥಗಳಿವೆ. ಕೃಷ್ಣ ಪಂಥಿಗಳಿರುವಂತೆಯೇ ರಾಮಪಂಥದವರದೂ ಸ್ಪಷ್ಟವಾಗಿ ಒಂದು ಶಾಖೆ; ಆದರೆ ಸಂಖ್ಯೆಯಲ್ಲಿಯೂ ಬಗೆಯಲ್ಲಿಯೂ ಅಷ್ಟಿಲ್ಲ. ಎಲ್ಲರೂ ರಾಮನ ಹಿರಿಮೆಯನ್ನು ಒಪ್ಪಿಕೊಳ್ಳುತ್ತಾರೆ. ಆತನು ಶ್ರೀರಾಮ; ವಾಲ್ಮೀಕಿ ರಾಮಾಯಣ ಶ್ರೀಮದ್ ರಾಮಾಯಣ. ಇತರ ಯಾವ ಪಾಠಕ್ಕೂ ಆ ಬಿರುದಿಲ್ಲ; ಸುಂದರವಾದ ಒಂದು ಪದ್ಯವಿದೆ:

ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಂ

---

೨. ರಾಮಾಯಣದಲ್ಲಿ ವಿಂಧ್ಯ ಪರ್ವತಗಳೆಂದರೆ ಯಾವ ನೆಲಸಿನವು ಎಂಬುದರಲ್ಲಿ ಭಿನ್ನಾಭಿಪ್ರಾಯಗಳಿವೆ.

ಕವಿ ಒಂದು ಕೋಗಿಲೆ; ಒಂದು ಮರದ ಕೊಂಬೆಗಳ ಮೇಲೆ ಕುಳಿತು ಸವಿಯಾಗಿ ಮಧುರವಾದ ಅಕ್ಷರಗಳಿಂದ ರಾಮ ರಾಮ ಎಂದು ವಾಲ್ಮೀಕಿ ಕೋಕಿಲ ಹಾಡುತ್ತಿದೆ; ಅದನ್ನು ವಂದಿಸುತ್ತೇನೆ ಎನ್ನುತ್ತದೆ.

ಭಾರತದ ನಮ್ಮ ಭಾಗದಲ್ಲಿ ರಾಮಾಯಣ ಕತೆಗೆ ಸಂಬಂಧಿಸಿ ಈ ಪದ್ಯ ರಾಮಾಯಣ ಪ್ರಿಯರಿಗೆಲ್ಲ ಮೆಚ್ಚಿನದು. ಈ ಕೋಗಿಲೆಯ ಕುಕಿಲನ್ನು ಕೇಳಲು ಎಲ್ಲರಿಗೂ ಪ್ರೀತಿಯೇ.

ಇಷ್ಟು ಆದರದಿಂದ ಜನ ಕೇಳುತ್ತಾರೆ, ಓದುತ್ತಾರೆ ಎಂಬ ಇನ್ನೊಂದು ಕಾವ್ಯವಿಲ್ಲ. ಅಷ್ಟು ಸಂಖ್ಯೆಯ ಜನಕ್ಕೆ ಅದು ಪವಿತ್ರ ಗ್ರಂಥ; ಆದರ, ಪ್ರೀತಿ ಅಷ್ಟು ಜನಕ್ಕೆ. ಅದನ್ನು ಓದುವುದು, ಹೇಳುವುದು ಒಂದು ಪುಣ್ಯಕಾರ್ಯ, ಮುಕ್ತಿದಾಯಕ ಎಂಬುದು ಭಾವನೆ.

ಮೂಲ ರಾಮಾಯಣ ಕತೆ ಯಾವುದೊ ಒಂದು ಪ್ರಕಾರದಲ್ಲಿ ಬಹಳ ಹಿಂದಿನ ಕಾಲದಿಂದಲೂ ಇದ್ದಿರಬೇಕು. ವಾಲ್ಮೀಕಿಯೇನೊ ರಾಮನ ಸಮಕಾಲೀನನೆಂದು ನಿರೂಪಿತನಾಗಿದ್ದಾನೆ. ಅವತಾರ ಕತೆ ಅದಕ್ಕೆ ಸೇರಿಕೊಂಡ ಮೇಲೆ ಅದರ ಚರಿತ್ರೆ ಮಾರ್ಪಟ್ಟಿತು. ಇನ್ನೊಂದು ಲಕ್ಷಣ ಬಹು ಜಾಣತನದಿಂದ ಕತೆಯೊಳಕ್ಕೆ ನೆಯ್ದುಕೊಂಡು ಬಂದಿದೆ. ಅದು ಹೊಸ ಲಕ್ಷಣವೇ ಅಲ್ಲ ; ಅದರ ಮೂಲ ಸ್ವಭಾವಕ್ಕೆ ಸಂಬಂಧಿಸಿದ್ದು; ಅದೇ ಅದರ ಪ್ರಧಾನಾಂಶ– ಎಂಬ ವಿಶ್ವಾಸ ಹುಟ್ಟಿ ಬೆಳೆದಿದೆ.[೩] ಅದರಲ್ಲಿ ಹೆಚ್ಚು ಏಕಾಗ್ರತೆಯಿದೆ; ಒಂದೆರಡು ಪ್ರಕರಣಗಳನ್ನು ಬಿಟ್ಟರೆ ಒಬ್ಬ ವ್ಯಕ್ತಿಯ ಕೃತಿ, ವಾಣಿ; ಇನ್ನೊಂದು ಇತಿಹಾಸ ಕಾವ್ಯಕ್ಕಿಂತ ಹೆಚ್ಚು ಕವಿತಾವಿಲಾಸ ಉಳ್ಳದ್ದು. ಈ ಕವಿಗೆ ಅರಣ್ಯದ ಜೀವನ ಹೆಚ್ಚು ಪರಿಚಿತವಾಗಿತ್ತು ಎಂಬುದುಂಟು. ಎಂದರೆ, ಅವನಿಗೆ ಪ್ರಕೃತಿಯ ಎಲ್ಲ ಭಾವಗಳೂ ತಿಳಿದಿದ್ದವು. ಮಾನವ ಸ್ವಭಾವದ ಆಂತರಿಕ ದರ್ಶನವಿತ್ತು. ಶುಚಿ ಸೌಂದರ್ಯ ಉನ್ನತಿಗಳ ವಿಷಯದಲ್ಲಿ ಅವನಿಗೆ ಹೆಚ್ಚು ಪ್ರೀತಿಯೂ ಗೌರವವೂ ಇದ್ದವು

---

೩. ರಾಮಾಯಣ ಕತೆಯ ಗಾತ್ರವಿಸ್ತಾರ ಎಷ್ಟು? ಅದರಲ್ಲಿ ಎಷ್ಟು ಕಾಂಡಗಳಿವೆ? – ಎಂಬ ಅಂಶದಲ್ಲಿಯೂ ನಿಶ್ಚಯವಿಲ್ಲ. ಉತ್ತರ ಕಾಂಡವೆಂಬ ಏಳನೆಯ ಕಾಂಡ ಮೂಲ ರಾಮಾಯಣ ಕತೆಗೆ ಸೇರಿದ್ದೇ ಅಲ್ಲ, ಅದು ವಾಲ್ಮೀಕಿಯದೂ ಅಲ್ಲ– ಎಂಬುದು ಹಲವರ ಹೇಳಿಕೆ. ಬಾಲಕಾಂಡದ ಹಲವು ಪ್ರಸಂಗಗಳು ಮೂಲ ಕತೆಗೆ ಸೇರಿದವಲ್ಲ ಎಂಬ ವಾದ ಇದೆ. ಮೊದಲ ನಾಲ್ಕು ಸರ್ಗಗಳು ಕವಿಯವಾಗಿರಲಾರದು. 'ಸರ್ವಾ ಪೂರ್ವಂ ಇಯಂ ಯೇಷಾಂ ಆಸೀತ್ ಕೃತ್ಸ್ನಾ ವಸುಂಧರಾ' (ಸುಂದರಪೃಥ್ವೀ ಆ ಮುಂಚೆ ಪೂರ್ತಿ ಅರಿವಿಗೆ ಬಂದದ್ದಲ್ಲ ಎಂಬಂತೆ ನೆಲಸಿತ್ತು) ಎಂಬುದರಿಂದ ಕತೆ ಆರಂಭವಾಗುತ್ತದೆನ್ನುತ್ತಾರೆ. ಇನ್ನು ಕೆಲವರು ಬಾಲಕಾಂಡಕ್ಕೆ ಸ್ವತಂತ್ರವಾದ ಅಸ್ತಿತ್ವವಿರಲಿಲ್ಲ, ಅದು ಅಯೋಧ್ಯಾಕಾಂಡದ್ದೇ

ಎಂಬುದು ಅವರ ಭಾವನೆ. ಋಷಿಯಾಗಿದ್ದುದು ಅವನಿಗಿದ್ದ ಒಂದು ವಿಶೇಷ ಅನುಕೂಲ ಸನ್ನಿವೇಶ. ಲೋಕಕ್ಕೆ ಹೊರಗೆ ನಿಂತು ಎಲ್ಲವನ್ನೂ ಕಾಣುತ್ತಿದ್ದವನು; ಅನಾಸಕ್ತ; ಆದರೆ ಜೀವನ ಸಂಸ್ಕೃತಿಗಳ ವಿಷಯದಲ್ಲಿ ಅತ್ಯುತ್ತಮವೆಂಬುದಕ್ಕೆ ಓಲು, ಭಕ್ತಿ ಉಳ್ಳವನು. ಮಹಾಭಾರತದ ಕರ್ತೃವಾದ ವ್ಯಾಸ ಸ್ವಲ್ಪ ಮಟ್ಟಿಗೆ ಕತೆಯಲ್ಲಿ ಭಾಗಸ್ಥ; ಆದುದರಿಂದ ಅಲ್ಲಿನ ಪ್ರಸಂಗಗಳಲ್ಲಿ ಅವನಿಗೆ ರಕ್ತಸಂಬಂಧ, ಭಾವಬಾಂಧವ್ಯ ಇದ್ದಿತು; ಪಕ್ಷಸೌಹಾರ್ದವಿತ್ತು. ವಾಲ್ಮೀಕಿಯಾದರೊ ಸೌಹಾರ್ದದಿಂದ ಎಲ್ಲವನ್ನೂ ನೋಡುತ್ತಿದ್ದವನು; ಮಾನವ ದೃಷ್ಟಿಯಿಂದ ಕತೆಗೆ ಸಂಬಂಧಿಸಿದ ಘಟನೆಗಳನ್ನು ನಿರೀಕ್ಷಿಸಬಲ್ಲವನಾಗಿದ್ದವನು. ಯಾವ ಮೌಲ್ಯಗಳು ಪರಿಶೀಲನೆಗೆ ಬರುತ್ತಿವೆ ಅಥವಾ ಪ್ರಕಾಶಗೊಳ್ಳುತ್ತವೆ ಎಂಬುದನ್ನು ಅರಿಯವಲ್ಲವನು. 'ನಾ ನೃಷಿಃ ಕುರುತೇ ಕಾವ್ಯಂ' – ಋಷಿಯಲ್ಲದವನು ಕಾವ್ಯವನ್ನು ನಿರ್ಮಾಣ ಮಾಡಲಾರ – ಎಂಬುದು ಕಾವ್ಯವಿಮರ್ಶೆಯಲ್ಲಿ ಎಲ್ಲರ ಬಳಕೆಗೂ ಬಂದಿರು ಮಾತು. ಅದು ವಾಲ್ಮೀಕಿಗೆ ಪರಮ ಅರ್ಥವಂತಿಕೆಯಲ್ಲಿ ಒಪ್ಪುತ್ತದೆ. ತನ್ನ ಕಾಲದ ಜನಜೀವನದಲ್ಲಿ ಯಾವುದನ್ನು ಕವಿ ಅತ್ಯುತ್ತಮವೆಂದು ಭಾವಿಸಿದ್ದನೊ ಅದನ್ನೆಲ್ಲ ರಾಮಾಯಣ ಪ್ರತಿಫಲಿಸುತ್ತದೆ.

* * * *

---

ಭಾಗ ಎನ್ನುತ್ತಾರೆ. ಸುಂದರ ಕಾಂಡದ ಬಹುಭಾಗವನ್ನು ಅನೇಕರು ಕಾವ್ಯದಿಂದ ಹೊರತು ಮಾಡುತ್ತಾರೆ, ಅಥವಾ ಅದರ ಬಹುಭಾಗ ಹೊಸತಾಗಿ ತುಂಬಿಸಿದ್ದು ಎನ್ನುತ್ತಾರೆ. ಅಚ್ಚರಿ ಏನೆಂದರೆ, ನಮ್ಮಲ್ಲಿ ರಾಮಾಯಣ ಪಾರಾಯಣ ಸುಂದರ ಕಾಂಡದಿಂದ ಆರಂಭವಾಗುತ್ತದೆ. ಇದು ದಕ್ಷಿಣದೇಶದ ರೂಢಿ. ಇಲ್ಲಿ ವಿಶೇಷವೇನೆಂದರೆ– ಬರೋಡಾ ಪ್ರತಿಯಲ್ಲಿ ಇದರ ಬಹುಭಾಗ ಉಳಿದುಕೊಂಡಿದೆ. ಯುದ್ಧ ಕಾಂಡದಲ್ಲಿ ಇನ್ನೆಷ್ಟೊ ಭಾಗಗಳು ಗಿಡಿದು ಬಂದು ಅದನ್ನು ಬೊಂತೆಯಾಗಿ ಮಾಡಿದೆ. ಹನುಮಂತನು ಸಮುದ್ರವನ್ನು ದಾಟಿದ ಪ್ರಕರಣ, ಲಂಕಾದಹನ ವಾಸ್ತವವಲ್ಲವೆನ್ನುತ್ತಾರೆ ಇನ್ನು ಕೆಲವರು. ಅಷ್ಟು ಯೋಜನ ವಿಸ್ತಾರದ ಸಮುದ್ರವೆ ಅವನು ದಾಟಿದ್ದು?– ಎನ್ನುವರು. ಬಹುಕಾಲದಿಂದ ರಾಮಾಯಣ ಆರು ಕಾಂಡಗಳ ಕಾವ್ಯ ಎಂಬುದು ನಂಬಿಕೆ. ಅದರಲ್ಲಿ ೫೦೦ ಸರ್ಗಗಳಿವೆ; ೨೪,೦೦೦ ಶ್ಲೋಕಗಳಿವೆ ಎಂಬ ಕೆಲವು ಸಂಗತಿಗಳು ಜನಸಾಮಾನ್ಯರಲ್ಲಿ ಖಚಿತವಾಗಿ ಸ್ವೀಕೃತವಾಗಿವೆ. ಈ ಲೆಕ್ಕ ಮಾಡುವುದರಲ್ಲಿಯೂ ಅನೇಕ ಚಮತ್ಕಾರಗಳು ಸೇರಿಕೊಳ್ಳುತ್ತವೆ. ಕಾಲ ಪ್ರಮಾಣಗಳು, ಪಾಯಸವನ್ನು ಹಂಚಿದ ಅಂಶಗಳು, ಸೀತೆ ರಾಮರು ದಂಪತಿಗಳಾದಾಗಿನ ವಯಸ್ಸು, ಮದುವೆ ಆದ ಮೇಲೆ ಅಯೋಧ್ಯೆಯಲ್ಲಿ ಎಷ್ಟು ಕಾಲವಿದ್ದರು ಎಂಬಂಶಗಳಲ್ಲಿಯೂ ಅನಿಶ್ಚಯಗಳಿವೆ.

## ಅಧ್ಯಾಯ ೨

# ಮುಖ್ಯ ಕಥೆ

ಈ ಕಾವ್ಯದಲ್ಲಿ ನಮಗೆ ದೊರಕುವ ವರ್ಣನೆಗಳನ್ನು ತಾಳೆಹಾಕಿ ನೋಡುವುದಕ್ಕೆ ಸಹಾಯಕವಾಗಲು ಆ ಕಾಲದ ಪ್ರಾಕೃತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಭಾರತೀಯ ಭೂವಿವರಣೆ ಇಂಥದು ಎಂಬುದು ನಮಗೆ ನಿಷ್ಕೃಷ್ಟವಾಗಿ ತಿಳಿದಿಲ್ಲ. ಮಹಾಭಾರತ ಕಾಲದಲ್ಲಿ ಇದ್ದಷ್ಟು ಸಂಖ್ಯೆಯ ರಾಜ್ಯಗಳು ಭರತಖಂಡದಲ್ಲಿ ಆ ಕಾಲದಲ್ಲಿ ಇದ್ದಂತಿಲ್ಲ. ಬಹುಮಟ್ಟಿಗೆ ಆಧುನಿಕ ವಿಂಧ್ಯದ ದಕ್ಷಿಣಭಾಗದಲ್ಲಿ ನಗರಜೀವನ ಇದ್ದಹಾಗೇ ಕಾಣುವುದಿಲ್ಲ.

ಇಲ್ಲಿನ ಸಮಾಜದಲ್ಲಿ ಮೂರು ಮಾದರಿಗಳು ಕಾಣುತ್ತವೆ: ಆರ್ಯ, ವಾನರ, ರಾಕ್ಷಸ. ಆರ್ಯವರ್ಗದಲ್ಲಿ ಮೂರು ಗುಂಪುಗಳಿವೆ. ಉತ್ತರ ಭಾರತದಲ್ಲಿ ಮಧ್ಯಭಾಗದ ಅಯೋಧ್ಯೆಗೂ ಕೋಸಲಕ್ಕೂ ಸೇರಿದವರು ದಶರಥ, ಕೌಸಲ್ಯೆ. ಕೈಕೆ ಪಶ್ಚಿಮ ಪಂಜಾಬಿಗೆ ಸುಮಾರು ಸೇರುತ್ತಾಳೆ. ಇಂದಿನ ಆಫ್‌ಘಾನಿಸ್ತಾನದ ಹತ್ತಿರ ಹತ್ತಿರ ಬಂದೀತು ಅದು. ಜನಕ ಇಂದಿನ ಬಿಹಾರಕ್ಕೆ ಸೇರಿದವನು. ಅದು ಮಿಥಿಲ, ವಿದೇಹ; ಇಂದಿನ ದರ್ಭಾಂಗ ಪ್ರದೇಶ. ದಕ್ಷಿಣಕ್ಕೆ ಜಬ್ಬಲ್‌ಪುರಕ್ಕೆ ಕೆಳಗೆ – ಇಂದಿನ ಸತನಾ ಹತ್ತಿರ ಆರ್ಯವರ್ಗಗಳವರು ವ್ಯಾಪಿಸಿದಂತೆ ಕಾಣುವುದಿಲ್ಲ. ದಂಡಕದ ಒಂದು ಭಾಗದಲ್ಲಿ – ಬಹುತರ ಇಂದಿನ ಹಂಪೆಯಲ್ಲಿ – ವಾನರರೆಂಬವರು ವಾಸಮಾಡುತ್ತ ಸಾಧಾರಣ ಜೀವನವನ್ನು ನಡೆಸುತ್ತಿದ್ದರು. ರಾಕ್ಷಸರು ಲಂಕೆಯಿಂದ ಆಳುತ್ತಿದ್ದರು – ಲಂಕೆ ಯಾವುದು, ಎಲ್ಲಿತ್ತು? ಎಂಬುದು ನಿಶ್ಚಯವಿಲ್ಲ. ಅವರ ಹೊರಕಟ್ಟೆಗಳೂ ಪ್ರಭಾವಕ್ಷೇತ್ರಗಳೂ ಇಂದು ಯಾವುದನ್ನು ಮಧ್ಯಪ್ರದೇಶ[೧] ವೆಂದು ಕರೆಯುತ್ತೇವೊ ಅದರ ತೆಂಕಮೇರೆಗಳವರೆಗೂ ಹರಡಿತ್ತು.

---

೧. ದುರದೃಷ್ಟವಶಾತ್ ಬಂಗಾಳದ ನಿರಾಶ್ರಿತವರ್ಗದವರಿಗೆಂದು ನಿರ್ಮಾಣ ಮಾಡಿದ ಪ್ರದೇಶವನ್ನು ದಂಡಕಾರಣ್ಯವೆಂದು ಹೆಸರಿಟ್ಟು ಅನ್ಯಾಯ ಮಾಡಿದರೇನೊ! ಅದಕ್ಕೆ ಬೇರೆ ಹೆಸರು ಕೊಡಬಾರದಿತ್ತೆ? ಆ ಹೆಸರು ಜನರನ್ನು ಆಕರ್ಷಿಸೀತೆ? ಭೂಮಿ ಎಷ್ಟು ಚೆನ್ನಾದರೂ ಅವರಿಗೆ ಅದು ವನವಾಸವೆಂದು ಕಂಡೀತು.

ಯಾರ ಆಡಳಿತಕ್ಕೂ ಒಳಪಟ್ಟಂತಿರದ ಒಂದು ಪ್ರದೇಶದಲ್ಲಿ ಋಷಿಗಳು ತಮ್ಮ ಆಶ್ರಮಗಳನ್ನು ಕಟ್ಟಿಕೊಂಡಿರುತ್ತಿದ್ದರು. ಗುಂಪು ಗುಂಪಾಗಿಯೊ ಒಂಟಿ ಒಂಟಿಯಾಗಿಯೊ ತಪಸ್ಸುಗಳಲ್ಲಿ ನಿರತರಾಗುತ್ತಿದ್ದರು. ಯಜ್ಞ ಅಗ್ನಿಕಾರ್ಯಗಳಲ್ಲಿ ತೊಡಗಿದ್ದ ಅವರ ಜೀವನವನ್ನು ರಾಕ್ಷಸರು ವಿರೋಧಿಸುತ್ತಿದ್ದರು.[೨] ಅಗಸ್ತ್ಯನಂತಹ ಮಹರ್ಷಿಯೊಬ್ಬನು ದಕ್ಷಿಣಕ್ಕೆ ಪ್ರವೇಶ ಮಾಡಿದ್ದು, ಗೋದಾವರಿಯ ತೆಂಕಲ ದಡದಿಂದ ಹೆಚ್ಚು ದೂರದ ಪ್ರದೇಶವಲ್ಲ. ದಕ್ಷಿಣದಲ್ಲಿ ಚಕ್ರವರ್ತಿಯ ಹಾಗೆ ಇದ್ದವನು ರಾವಣ; ಮಾರೀಚ ಅವನಿಗೆ ಸೋದರಮಾವ. ಅವನು ರಾವಣನ ಪ್ರತಿನಿಧಿಯ ಹಾಗೆ ಅಲ್ಲಿ ಪ್ರಬಲವಾಗಿದ್ದ ಹಾಗೆ ಕಾಣುತ್ತದೆ. ಖರ ರಾವಣನಿಗೆ ವಾವೆಯಲ್ಲಿ ಸೋದರ; ಶೂರ್ಪನಖಿ ಸ್ವಂತ ತಂಗಿ. ದಂಡಕಾರಣ್ಯದಲ್ಲಿ[೩] ಗೋದಾವರಿಯ ಪ್ರದೇಶದ ಮೇಲ್ಭಾಗದಲ್ಲಿ ಇವರ ಪಾಳೆಯವೂ ವಸತಿಗಳೂ ಇದ್ದ ಹಾಗೆ ಕಾಣುತ್ತದೆ. ತಾಟಕಿಯ ಮಗ ಮಾರೀಚ. ಉತ್ತರದಲ್ಲಿ ಅಷ್ಟು ದೂರ ಪ್ರದೇಶದಲ್ಲಿ ಹಿಂದೆ ಮಾರೀಚನು ವಿಶ್ವಾಮಿತ್ರರ ಆಶ್ರಮದಲ್ಲಿ ಕಾಟ ಕೊಡುತ್ತಿದ್ದವನು. ಆರ್ಯವರ್ಗದವರ ಹೊರವಲಯಗಳಲ್ಲಿ ಈ ರಾಕ್ಷಸರ ಬಾಧೆಯನ್ನು ಹದ್ದಿನಲ್ಲಿಡಬೇಕಾಗಿತ್ತು; ಅವರ ಹಾವಳಿಯನ್ನು ತಡೆದು ಅವರನ್ನು ನಾಶಮಾಡಬೇಕಾಗಿ, ಆರ್ಯರಿಗೆ ಒಬ್ಬ ವೀರನಾಯಕ ಬೇಕಿತ್ತು. ಇದನ್ನು ಸಾಧಿಸಲು ದಶರಥನ ಮಗನಾದ ರಾಮನಲ್ಲಿ ಇಂಥ ಯೋಗ್ಯತೆ ಸಿದ್ಧವಾಗುತ್ತಿತ್ತು. ಉತ್ತರದ ರಾಜ್ಯಗಳ ಎಲ್ಲರ ಹರಕೆ ಮತ್ತು ಶುಭಾಶಂಸೆಗಳೂ ದಕ್ಷಿಣ ಪ್ರದೇಶಗಳಲ್ಲಿ ತಪೋನಿಷ್ಠರಾಗಿದ್ದ ಆರ್ಯ ಋಷಿಗಳ ಹಾರೈಕೆ ನೆರವುಗಳೂ ಅವನಿಗೆ ಒತ್ತಾಸೆಯಾಗಿದ್ದವು. ಕೋಟಲೆಯ ಹಂದರ ಹೀಗೆ ಇದ್ದರೂ ಯಾವ ಜನಸಂಖ್ಯೆಯಾಗಲಿ ರಾಜ್ಯಗಳಾಗಲಿ ಆ ಕಾಲದಲ್ಲಿ ಒಟ್ಟು ದಕ್ಷಿಣ ಭಾರತದಲ್ಲಿ ಇದ್ದುವೆಂಬುದಕ್ಕೆ ಯಾವ ಇತರ ಪುರಾವೆಗಳೂ ಇಲ್ಲ. ಎಂದರೆ: ರಾಜಕೀಯವಾಗಿ ಅದೊಂದು ಶೂನ್ಯದಂತಹ ಭೂನೆಲಸು. ವನವಾಸಕ್ಕಾಗಿ ರಾಮನು ದಂಡಕಾರಣ್ಯಕ್ಕೆ ಬಂದುದು ದಕ್ಷಿಣಭಾರತದ ರಾಕ್ಷಸ ಪ್ರಾಬಲ್ಯದೊಡನೆ ಸಹಜವಾಗಿ ಪ್ರತಿಭಟನೆಯ

---

೨ ಉತ್ತರದಲ್ಲಿ ವಿಶ್ವಾಮಿತ್ರನ ಆಶ್ರಮವನ್ನೂ ತಪೋಕಾರ್ಯಗಳನ್ನೂ ತಾಟಕಿ ವಿಘ್ನಪಡಿಸುತ್ತಿದ್ದಳೆಂದರೆ ಅವಳ ದಾಳಿ, ಹಾವಳಿ ಇಂದಿನ ಉತ್ತರ ಪ್ರದೇಶದ ಪೂರ್ವ ಭಾಗಗಳವರೆಗೂ ವ್ಯಾಪಿಸಿದ್ದಿರಬೇಕು.

೩. ದಂಡಕ ಅಯೋಧ್ಯೆಯ ರಾಜರ ವಸಾಹತು, ಇಂದಿನ ನಾಗಪುರಕ್ಕೂ ಕೃಷ್ಣಾ ನದಿಗೂ ನಡುವೆ ವ್ಯಾಪಿಸಿದ್ದ ಭಾಗ ಇದು – ಎಂಬುದು ಒಂದು ಅಭಿಪ್ರಾಯ. ಒಟ್ಟು ದಕ್ಷಿಣ ದೇಶವೆಲ್ಲ ಭರತನ ಅಧಿಕಾರಕ್ಕೆ ಸೇರಿದ ರಾಜ್ಯ, ಭೂವಿಸ್ತಾರವೆಂದು ರಾಮನು ಒಂದು ಕಡೆ ಹೇಳುತ್ತಾನೆ.

ಕಾರ್ಯವಾಗಿಯೇ ರೂಪಗೊಂಡಿತು. ಇದು ಕೈಕೆಯ ಉದ್ದೇಶವಾಗಿರಲಾರದು. ಈ ಉದ್ದೇಶಕ್ಕಾಗಿ ಅವಳು ಅದನ್ನು ಬೇಡಿದಳೆಂದಾಗಲಿ ರಾಮನು ಒಪ್ಪಿಕೊಂಡನೆಂದಾಗಲಿ ದಶರಥನಿಗೆ ಯಾವ ಸಂಶಯವೂ ಭೀತಿಯೂ ಇದ್ದಿರಲಾರದು. ಮಂಥರೆ ಕೂಡ ಅಂಥ ಪ್ರಸಂಗಗಳನ್ನು ಮನಸ್ಸಿಗೆ ತಂದುಕೊಂಡಿದ್ದಿರಲಾರಳು. ಆಕೆಗೆ ಕೈಕೆಯ ಪ್ರಭಾವ ಕಡಿಮೆಯಾಗುವುದು ಇಷ್ಟವಿರಲಿಲ್ಲ. ತುಂಬಾ ಹೆಚ್ಚೆಂದರೆ ಭರತನಿಗೆ ರಾಜ್ಯಭಾರ ಬರುವುದರಲ್ಲಿ ಆಸಕ್ತಿ. ಅದು ಶಕ್ಯವಾಗಲು ರಾಮನಿಗೆ ಅರಣ್ಯವಾಸ ಸಾಧನವಾಗಿತ್ತು. ಈ ಸಂದರ್ಭ ಕೈಕೆಯ ಇಷ್ಟಕ್ಕೂ ಋಷಿಗಳ ಉದ್ದೇಶಕ್ಕೂ ಹೊಂದುವಂತಾಯಿತು ಮಾತ್ರ. ರಾಮನ ಸ್ವಭಾವ, ಶೀಲ, ಶಕ್ತಿ, ಧೈರ್ಯಗಳು ಒಂದು ವಿಶೇಷ ಬಗೆಯವಾದ್ದರಿಂದ ಅವನಿಗೆ ಒದಗಿ ಬಂದ ಸನ್ನಿವೇಶ ಸಹಜವಾಗಿ ಇಂಥ ಸೇವಾಕಾರ್ಯಕ್ಕೂ ಸಂಗೋಪನ ಕಾರ್ಯಕ್ಕೂ ಅವನಿಗೆ ಪ್ರೇರೇಪಣೆ ಉಂಟುಮಾಡಬಲ್ಲದಾಯಿತು– ಎಂದಾಗ ಉಳಿದುದೆಲ್ಲ ಹೀಗೆ ನಡೆಯಿತೆನ್ನಬೇಕು. ಆ ಸಾಹಸವನ್ನು ರಾಮ ಮಾಡಿದ; ಅದಕ್ಕೆ ಬೆಲೆ ತೆತ್ತ. ಅವನಿಗೆ ಮಹಾಖ್ಯಾತಿಯನ್ನೇನೊ ಅದು ತಂದಿತು. ಒಟ್ಟು ದಕ್ಷಿಣಭಾರತದ ಶಾಂತಿಯನ್ನೂ ಸುರಕ್ಷಿತತೆಯನ್ನೂ ಕದಡಿ ಅಲ್ಲಾಡಿಸಿದ್ದ ಮಹಾಶಕ್ತಿಶಾಲಿ ರಾಕ್ಷಸನನ್ನು ನಾಶಮಾಡಲು ಇನ್ನೊಬ್ಬರ ನೆರವನ್ನು ತೆಗೆದುಕೊಡನೇನೊ ಹೌದು. ಒಬ್ಬ ರಾಜನ ಅರಮನೆಯಲ್ಲಿ ಹುಟ್ಟಿಕೊಂಡ ಕೌಟುಂಬಿಕ ಘಟನೆಗಳು, ಯುವರಾಜನಾಗಬೇಕಿದ್ದ ಒಬ್ಬನ ಅದೃಷ್ಟಕ್ಕೆ ಸಂಬಂಧಿಸಿದ ಸಂಗತಿಗಳು ಸಾರ್ವಜನಿಕವಾದ ಇನ್ನೊಂದು ಕಾರ್ಯಸಾಧನೆಗೆ ಹೊಂದಿ ಸೇರಿಕೊಂಡು ಕ್ರಿಯಾವಿಧಾನದಲ್ಲಿ ಕೃತಕಾರ್ಯವಾಗುತ್ತವೆ. ಅರಣ್ಯಕಾಂಡದ ಮೊದಲ ಭಾಗದಲ್ಲಿ ಬರುವ ಒಂದೆರಡು ಪದ್ಯಗಳು ಈ ಸಂಗತಿಗೆ ನಿದರ್ಶನವಾಗುತ್ತವೆ:

> ತಸ್ಯ ಮೇsಯಂ ವನೇವಾಸೋ ಭವಿಷ್ಯತಿ ಮಹಾಫಲಃ
> ಭವತಾಂ ಅರ್ಥ ಸಿಧ್ಯರ್ಥಂ ಆಗತೋsಹಂ ಯದೃಚ್ಛಯಾ

(ಅಕಸ್ಮಾತ್ತಾಗಿ, ನಾನು ವನವಾಸಕ್ಕೆ ಬಂದುದು ನಿಮ್ಮ ಉದ್ದೇಶಸಿದ್ಧಿಗೆ ನೆರವಾಗುವುದಾದರೆ ಮಹಾಫಲವುಳ್ಳದ್ದಾಗುತ್ತದೆ.)

ಅರಣ್ಯ ಕಾಂಡದಿಂದ ಮುಂದಕ್ಕೆ ರೂಪಗೊಳ್ಳುವ ಘಟನೆಗಳೆಲ್ಲ ಒಂದು ವ್ಯಕ್ತಿಯ ಜೀವನ ಸನ್ನಿವೇಶಗಳಿಗೂ ಹೆಚ್ಚು ಅಧಿಕವಾದ ಸಾರ್ವಜನಿಕ ಕ್ರಿಯೆಗೂ

ಹೊಂದಿಕೊಡುವ ಸಂದರ್ಭಗಳವು. ತಾಟಕಾ–ಸುಬಾಹು ನಾಶ, ಮಾರೀಚನನ್ನು ಓಡಿಸುವುದು, ಇಕ್ಷ್ವಾಕುಗಳಿಗೂ ವಿದೇಹದವರಿಗೂ ಉಂಟಾದ ಸಂಬಂಧ, ಪರಶುರಾಮನ ದರ್ಪವನ್ನು ಮುರಿಯುವುದು ಇವೆಲ್ಲ ಪೂರ್ವರಂಗವಾಗುತ್ತವೆ. ಇಲ್ಲಿಂದ ಮುಂದೆ ಬಹುತರ ಸಾರ್ವಜನಿಕ ಕ್ರಿಯಾ ವ್ಯಾಪಾರವೇ ಮುಖ್ಯ.

ರಾಮಾಯಣದ ಕತೆ ಪ್ರಧಾನವಾಗಿ ದಶರಥನ ಸಂಸಾರಕ್ಕೆ ಸಂಬಂಧಿಸಿದ ಕೆಲವು ಮಂದಿಯ ಜೀವನದ ವ್ಯಕ್ತಿ ಸನ್ನಿವೇಶಕ್ಕೂ ಅದೃಷ್ಟ ಪರಂಪರೆಗೂ ಸಂಬಂಧಿಸಿದ್ದರೂ ಅಷ್ಟಕ್ಕೆ ಸ್ವಸಂಪೂರ್ಣವಾಗಬಲ್ಲದಾಗಿದ್ದರೂ ಅದಕ್ಕೆ ಇನ್ನೊಂದು ಹೊಸ ನೆಲಸು ಬಂದು ಸೇರುತ್ತದೆ – ರಾವಣನ ನಾಯಕತ್ವದಲ್ಲಿರುವ ರಾಕ್ಷಸಗಣವನ್ನು ನಾಶಮಾಡುವ ಹೆಚ್ಚು ವಿಶಾಲವಾದ ಕಾರ್ಯ ಸಾಧನೆಗೆ ಅದನ್ನು ಹೂಡಿದ್ದರಿಂದ. ಅವತಾರ ಕತೆಯೊಂದು ರಾಮಕತೆಗೆ ಕೂಡಿಬರದಿದ್ದರೂ ಋಷಿ[೪] ಮತ್ತು ರಾಕ್ಷಸವಿರೋಧದ ಸಂದರ್ಭ ಒಂದು ಹೊಸ ಆಸಕ್ತಿ ಪ್ರಯೋಜನಕಾಂಡ ಮುಖ್ಯವಾಗಿ ಇಲ್ಲಿಗೆ ಸುಲಭವಾಗಿ ಸೇರಬಲ್ಲದು. ಬಹುಕಾಲ ರಾಮಕತೆ ಭರತಖಂಡದಲ್ಲಿ ಪ್ರಚಲಿತವಾಗಿತ್ತು. ವಾಲ್ಮೀಕಿಯ ಪ್ರಶ್ನೆಗೆ – ನರರಲ್ಲಿ ಪೃಥ್ವಿಯ ರಾಜನಾದ ಯಾವು ಅತಿ ಶ್ರೇಷ್ಠ ಗುಣವಂತನು? – ನಾರದನು ಉತ್ತರ ಕೊಡುವಾಗ ಶೀಲಕ್ಕೆ, ಅಖಂಡ ಗುಣಾತಿಶಯಕ್ಕೆ, ಸ್ಥೈರ್ಯಕ್ಕೆ ಮತ್ತು ಕ್ಷತ್ರಿಯನಾದ ರಾಜನು ಸಾಧಿಸಿ ನಿಲ್ಲವೇಕಾದ ಅತ್ಯುನ್ನತ ಆದರ್ಶಗಳಿಗೆ ಹೆಸರಾದವನೆಂದು ಮಾನ್ಯನಾಗಿದ್ದಾನೊ ಅವನು ರಾಜನಾದ ರಾಮ ಎಂದಿದ್ದನು. ಅಲ್ಲಿ ನರ ಎಂಬ ಮಾತೇ ಮುಖ್ಯವಾದ್ದು. ಆದುದರಿಂದ ಇಲ್ಲಿ ಕಡಿಮೆಯೆಂದರೆ ಮೂರು ನೆಲಸುಗಳುಂಟು: ವ್ಯಕ್ತಿಯದು, ಋಷಿ ಸಂಬಂಧದ್ದು, ದೇವಕಾರ್ಯದ್ದು ಎಂಬವು. ಈ ಮೂರು ಕಾರಣಗಳೂ ರಾಮಾಯಣಕ್ಕೆ ನಾನಾ ಅರ್ಥ ಸಾಧನೆಗಳಿಗೂ ವಿಸ್ತರಣಕ್ಕೂ ಉದ್ದೇಶಸ್ಥಾಪನೆಗೂ ಅವಕಾಶ ಕೊಟ್ಟಿರುವುದಲ್ಲದೆ ತಥ್ಯಶೋಧನೆಗೆ ವಿರುದ್ಧವಾದ ಶ್ರದ್ಧೆಗಳಿಗೂ ಅಭಿಪ್ರಾಯಗಳಿಗೂ ಎಡೆ ಕೊಟ್ಟಿವೆ; ಸಾಮಗ್ರಿ ಒದಗಿಸಿವೆ. ಈ ಪುಸ್ತಕದ ಮುಖ್ಯ ಗೊಡವೆ ರಾಮನ ಮತ್ತು ಅವನ ಸಂಬಂಧದವರ ಮಾನವ ಜೀವಿತಕ್ಕೆ ಪ್ರಾಧಾನ್ಯ ಕೊಡುವುದು. ಮಹಾಕವಿ

---

೪ ಕ್ರೈಸ್ತ ಮತವಳರ ವಿಸ್ತರಣ ಚಳವಳಿಗಳು ನಿಧಾನವಾಗಿ ಏಷಿಯ, ಆಫ್ರಿಕ, ದಕ್ಷಿಣ ಅಮೇರಿಕ ಭೂವಲಯಗಳಲ್ಲಿ ಹರಡಿದುವು. ಈ ಮತವಳರು ಯಾವ ರಾಜ್ಯಕ್ಕೆ ಸೇರಿದವರೊ ಅವುಗಳ ರಾಜ್ಯಾಧಿಕಾರಿಗಳು ಸೈನ್ಯಶಕ್ತಿಯನ್ನೂ ರಾಜಕೀಯ ಪ್ರಭಾವವನ್ನೂ ಅವರಿಗೆ ಬೆಂಬಲವಾಗಿ ಒದಗಿಸಿದುವು.

ವಾಲ್ಮೀಕಿಯ ಕವಿತೆ ಅದಕ್ಕೆ ಒಂದು ಗತಿಯನ್ನೂ ವಿಲಾಸವನ್ನೂ ಎರೆದು ಮಾನವ ಹೃದಯಗಳನ್ನು ಸ್ಪಂದಿಸುವಂತೆ ಮಾಡುತ್ತದೆ. ಇದು ಪ್ರಾಚೀನ ಕಾವ್ಯವಾದ್ದರಿಂದ ಕೆಲವು ಅತಿಪ್ರಾಕೃತಿಕ ಸಂಗತಿಗಳಿಗೆ ಅವಕಾಶ ಕೊಟ್ಟಿದೆ. ಅಂಥವಕ್ಕೆ ಒಂದು ಸಂಕೇತಾರ್ಥವನ್ನು ಕೂಡ ಕೊಡಬಹುದಾಗುತ್ತದೆ.

ಮೊದಲ ಆರು ಕಾಂಡಗಳು ಸಾಂಪ್ರದಾಯಿಕವಾಗಿ ನಮ್ಮ ಜನ ಒಪ್ಪಿದುವು. ಬಾಲ, ಅಯೋಧ್ಯಾ, ಅರಣ್ಯ, ಕಿಷ್ಕಿಂಧ, ಸುಂದರ, ಯುದ್ಧ ಎಂಬವು ಈ ಆರು. ಐದನೆಯದಕ್ಕೆ ವಿಸ್ತೃತವಾದ ಒಂದು ಅರ್ಥವೂ ಸಂಬಂಧವೂ ಇದೆ. ಉಳಿದವು ಯಾವ ವಿಷಯ ಅಲ್ಲಿ ಮುಖ್ಯವೊ ಅದನ್ನು ತಿಳಿಸುತ್ತದೆ. ರಾಮನ ಬಾಲ್ಯ, ತಂದೆಯ ಮನೆಯಲ್ಲಿ ಪ್ರಚಲಿತವಾದ ಒಂದು ಸನ್ನಿವೇಶ ಮತ್ತು ಅದರ ಪರಿಣಾಮಗಳು ಅಯೋಧ್ಯದಲ್ಲಿ; ಊರು ಬಿಟ್ಟು ಕಾಡಿನಲ್ಲಿರಬೇಕಾದ ಸಂಗತಿ ಅರಣ್ಯಕಾಂಡದ್ದು; ವಾನರರನ್ನು ಕಂಡು ಅವರೊಡನೆ ಬೆಳೆದ ಸಖ್ಯ ಕಿಷ್ಕಿಂಧಾ ಕಾಂಡದ್ದು; ಯುದ್ಧ, ಯುದ್ಧ ಪ್ರಸಂಗ; ಸುಂದರ ಒಂದು ಮಧ್ಯಾಂಕದಂತಿದೆ. ಸುಂದರ ಎಂಬ ಮಾತೇ ಬಹುವಿಧವಾಗಿ[೫] ವಿವರಣೆಗೊಂಡಿದೆ. ಅದರ ಅರ್ಥವೂ ಸ್ವರೂಪದ ಲಕ್ಷಣವೂ ಅದರಿಂದ ಮಾರ್ಪುಗೊಂಡಿದೆ. ಮುಖ್ಯ ಕತೆ ಬಹುಕಾಲದಿಂದ ಪರಿಚಿತವಾಗಿತ್ತು. ಮುಂದೆ ವಿವರಿಸುವ ಕೆಲವು ವಿವೇಚನೆಗಳಿಗೆ ಹದಿಯಾಗಿ ಒದಗುವಂತೆ ಕಾಂಡಗಳಲ್ಲಿನ ಕಥಾ ಭಾಗವನ್ನು ಈಗ ಸಂಕ್ಷೇಪವಾಗಿ ತಿಳಿಸಬಹುದು.

ದಶರಥ ಅಯೋಧ್ಯೆಯ ರಾಜ. ಅವನಿಗೆ ಮೂವರು ರಾಣಿಯರು. ಅವರು ಯಾರಿಂದಲೂ ಅವನಿಗೆ ಮಕ್ಕಳಾಗಲಿಲ್ಲ. ಒಂದು ಪುತ್ರ ಕಾಮೇಷ್ಟಿ ಯಾಗವನ್ನು ಮಾಡಲು ಅದರಲ್ಲಿ ದೈವ ಪ್ರಸಾದವಾಗಿ ಪಾಯಸ ದೊರಕುತ್ತದೆ. ಆ ಅನುಗ್ರಹದಿಂದ ಅವನಿಗೆ ನಾಲ್ವರು ಮಕ್ಕಳಾಗುತ್ತಾರೆ. ಪಟ್ಟದ ರಾಣಿಯಾದ ಕೌಸಲ್ಯೆಯಿಂದ ಹಿರಿಯನಾದ ರಾಮ, ಸುಮಿತ್ರೆಯಿಂದ ಲಕ್ಷ್ಮಣ ಶತ್ರುಘ್ನರೆಂಬ

---

೫ ಸುಂದರ ಎಂಬ ಮಾತಿಗೆ ಕಪಿ ಎಂದೂ ಅರ್ಥ ಉಂಟಂತೆ. ವೀರನಾದ ವಾನರ ಹನುಮಂತನ ಕತೆ,ಕಾರ್ಯ ಇಲ್ಲಿ ಮುಖ್ಯ. ಇಲ್ಲಿ ಪ್ರಕೃತಿ ಚಿತ್ರಗಳ ಮತ್ತು ಕವಿತೆಯ ಸೌಂದರ್ಯವೂ ಕವಿತಾ ಸೌಭಾಗ್ಯವೂ ವಿಶೇಷವಾಗಿ ಸೇರಿಕೊಳ್ಳುತ್ತವೆ. ಸೀತೆ ಇದ್ದ ಲಂಕೆಗೆ ಹೋಗಿ ಆಕೆಯ ಸುದ್ದಿಯನ್ನು ರಾಮನಿಗೆ ಹನುಮಾನ್ ತರುತ್ತಾನೆ. ಆಕೆಗೆ ಭರವಸೆ ನೀಡುತ್ತಾನೆ. ಆಕೆಯ ಸ್ಥಿತಿಯನ್ನು ನಿವೇದಿಸಿ, ಕೈಕೊಳ್ಳಬೇಕಾಗಿರುವ ಕಾರ್ಯವನ್ನು ರಾಮನಿಗೆ ಅದು ನಿರೂಪಿಸುತ್ತದೆ. ರಾಮ ಸೀತೆಯರಿಗೆ ನಿಜವಾಗಿಯೂ ಹರ್ಷ ತರುವ ಶುಭಸಂದರ್ಭ ಇಲ್ಲಿದೆ. ಆದುದರಿಂದಲೇ ಪಾರಾಯಣ ಮಾಡುವವರೂ ಗ್ರಂಥ ಪ್ರಕಟನೆ ಮಾಡುವವರೂ ಸುಂದರ ಕಾಂಡದಿಂದ ತೊಡಗುತ್ತಾರೆ.

ಅವಳಿ ಮಕ್ಕಳು, ಕಿರಿಯ ರಾಣಿ ಕೈಕೆಯಲ್ಲಿ ಭರತ ಹುಟ್ಟುತ್ತಾರೆ. ದಶರಥನಿಗೆ ಸಾಕಷ್ಟು ವಯಸ್ಸಾಗಿದೆ. ಆದರೆ ಕಿರಿಯ ರಾಣಿಯ ಮೋಹದಲ್ಲಿ ಬಹುವಾಗಿ ಸಿಕ್ಕಿಕೊಂಡಿರುವುದರಿಂದ ಅರಮನೆಯಲ್ಲಿ ಬೇಕಾದಷ್ಟು ಅಸಮಾಧಾನ ಬೆಳೆದಿದೆ. ಕಾರಣ ಇಷ್ಟೇ: ಕೈಕೆ ದುರಭಿಮಾನಿ; ತನ್ನ ಇಚ್ಛೆಯಂತೆ ನಡೆವವಳು. ರಾಜನ ಮೇಲೆ ತನ್ನ ಅಧಿಕಾರ ನಡೆಯುತ್ತಿದೆಯೆಂದು ಹೆಮ್ಮೆ... ಮಕ್ಕಳು ಚೆಲುವರಾಗಿಯೂ ಶಕ್ತರಾಗಿಯೂ ಬೆಳೆಯುತ್ತಾರೆ. ಅರಸು ಮಕ್ಕಳಿಗೆ ದೊರಕುವ ಎಲ್ಲ ಶಿಕ್ಷಣದಿಂದ ಯಾವ ಯಾವ ಕಲೆ ಶಾಸ್ತ್ರಗಳ ಅಭ್ಯಾಸವಾಗುತ್ತಿತ್ತೊ ಅವುಗಳಲ್ಲಿ ಅವರು ನಿಷ್ಣಾತರಾಗುತ್ತಾರೆ. ಅಣ್ಣ ತಮ್ಮಂದಿರಲ್ಲಿ ವಯಸ್ಸಿನ ಅಂತರ ಕಡಮೆ; ಕೆಲವು ದಿನಗಳಿರಬಹುದು ಮಾತ್ರ. ಆದರೆ ರಾಮನು ಸ್ಪಷ್ಟವಾಗಿ ಅಗ್ರಜ. ಸುಮಿತ್ರೆಯ ಅವಳಿ ಮಕ್ಕಳಲ್ಲಿ ಲಕ್ಷ್ಮಣನು ರಾಮನ ಅನುವರ್ತಿಯಾಗುತ್ತಾನೆ; ಶತ್ರುಘ್ನನು ಭರತನೊಡನೆ ಸೇರಿಕೊಳ್ಳುತ್ತಾನೆ. ಈ ನಾಲ್ವರಲ್ಲಿ ಇವು ವಿಶೇಷ ಪ್ರೀತಿಗಳು, ಭಕ್ತಿಗಳು. ಆದರೆ ರಾಮನನ್ನು ಕುರಿತು ಉಳಿದೆಲ್ಲರ ಪ್ರೀತಿಯೂ ಗೌರವವೂ ಹೆಚ್ಚಿನವು. ಅವನು ಹಿರಿಯನೆಂಬ ಕಾರಣದಿಂದ ಮಾತ್ರವಲ್ಲ; ವ್ಯಕ್ತಿಯಾಗಿಯೂ ಅವನ ಗುಣ, ಶೀಲ, ವಿವೇಕಗಳ ಹಿರಿಮೆಯಿಂದ.

ವಿಶ್ವಾಮಿತ್ರ ಋಷಿ ನೆರವು ಬೇಡಲು ದಶರಥನ ಬಳಿಗೆ ಬಂದಾಗ ರಾಮನಿಗೆ ವಯಸ್ಸು ಇನ್ನೂ ಹದಿನಾರು ತುಂಬಿರಲಿಲ್ಲ. ತಾನೊಂದು ಯಾಗವನ್ನು ಮುಗಿಸಬೇಕಾಗಿದೆ; ಆಶ್ರಮದ ರಕ್ಷಣೆಯಾಗಬೇಕು; ತಾಟಕಿ–ಮಾರೀಚರ ಕಾಟದಿಂದ ಅದನ್ನು ರಕ್ಷಿಸಬೇಕು; ನನ್ನೊಡನೆ ರಾಮನನ್ನು ಕಳಿಸು; ಅದು ಮುಗಿದ ಮೇಲೆ ಅವನನ್ನು ಹಿಂದಕ್ಕೆ ಕಳಿಸುತ್ತೇನೆ ಎಂದನು. ಇಂಥ ರಾಕ್ಷಸರು ದುರ್ಜಯರು; ಅವರನ್ನು ಇದಿರಿಸಲು ತನ್ನ ಪ್ರೀತಿಯ ಮಗನನ್ನು ಕಳಿಸುವುದು ಅಪಾಯಕರ ಎಂದು ದಶರಥನು ಮೊದಲು ಇಷ್ಟಪಡಲಿಲ್ಲ. ಗುರು ವಸಿಷ್ಠ ಹೇಳಿದ ಮೇಲೆ ಮಹರ್ಷಿಯೊಡನೆ ಮಗನನ್ನು ಕಳಿಸುತ್ತಾನೆ. ರಾಮನೊಡನೆ ಲಕ್ಷ್ಮಣನೂ ಹೋಗುತ್ತಾನೆ. ವಿಶ್ವಾಮಿತ್ರನ ಆಶ್ರಮದ ಕಡೆ ಪ್ರಯಾಣ ಮಾಡುವಾಗ ಋಷಿ ಈ ಅಣ್ಣ ತಮ್ಮಂದಿರಿಗೆ ಅನೇಕ ಕತೆಗಳನ್ನೂ ಪುರಾಣ ಪ್ರಸಂಗಗಳನ್ನೂ ಹೇಳುತ್ತಾನೆ. ಅವು ಬೋಧಕವಾದವು. ಶಸ್ತ್ರಾಸ್ತ್ರಗಳ ಮತ್ತು ಯುದ್ಧ ವಿದ್ಯೆಯ ರಹಸ್ಯಗಳನ್ನೂ ರಾಮನಿಗೆ ತಿಳಿಸುತ್ತಾನೆ. ವಿಶ್ವಾಮಿತ್ರನಿಗೆ ತಿಳಿದ ಎಲ್ಲ ಅಸ್ತ್ರ ರಹಸ್ಯಗಳನ್ನೂ ಕಲಿಸುತ್ತಾನೆ. ಆ ಕಾಲದಲ್ಲಿ ಕ್ಷತ್ರಿಯರಿಗೆ ತಿಳಿದಿದ್ದ ಎಲ್ಲ ಅಸ್ತ್ರಗಳ ಸೂಕ್ಷ್ಮಗಳನ್ನೂ ಪ್ರಯೋಗಗಳನ್ನೂ ಬಲ್ಲವನು ಅವನು. ಆಯುಧಗಳ ಪ್ರಯೋಗವನ್ನು – ಯಾರ ಮೇಲಾಗಲಿ ಅಥವಾ ಎಲ್ಲರ ಮೇಲಾಗಲಿ – ಸ್ವರಕ್ಷಣೆ

ಮಾಡಿಕೊಳ್ಳಬಹುದಾದ ವಿಧಾನಗಳನ್ನು ಕಲಿಸುತ್ತಾನೆ; ಎಚ್ಚರವಾಗಿರಲು, ಎಚ್ಚರದಿಂದಿರಲು, ಆಯಾಸವಾಗದೆ ಹುರುಪಿನಲ್ಲಿ ಇರಲು, ಬಹು ಕಾಲದವರೆಗೂ ಆಯಾಸ ತೋರದಂತೆ ಶಕ್ತವಾಗಿರಲು ತಕ್ಕ ಮಂತ್ರಗಳನ್ನು ಹೇಳಿಕೊಡುತ್ತಾನೆ. ರಾಮ ಲಕ್ಷ್ಮಣರು ಆಶ್ರಮದ ರಕ್ಷಣೆಗೆ ತೊಡಗಿರುವಾಗ ತನ್ನ ಮಕ್ಕಳಾದ ಮಾರೀಚ ಸುಬಾಹುಗಳೊಡನೆ ತಾಟಕಿ ಎಲ್ಲವನ್ನೂ ತೀಕ್ಷ್ಣವಾಗಿ ಕ್ಷೋಭೆಗೊಳಿಸುತ್ತ, ತಲೆಕೆಳಗುಮಾಡುತ್ತ, ಅಶುದ್ಧಿಗೊಳಿಸುತ್ತ ಬರುತ್ತಾಳೆ. ಸಾರ್ವಜನಿಕ ಶಾಂತಿಯನ್ನೂ ಸಮಾಜದ ಕಲ್ಯಾಣವನ್ನೂ ಅತಿಯಾಗಿ ಅವಳು ಕದಡುತ್ತಿದ್ದಾಳೆ ಎಂದು ರಾಮನಿಗೆ ಋಷಿ ತಿಳಿಸಿ, ಧರ್ಮನಿಷ್ಠನಾದ ಕ್ಷತ್ರಿಯನಿಗೆ ಇಂಥವರು ಯಾರೇ ಆಗಲಿ ಅವರನ್ನು ಅಡಗಿಸಿ ನಾಶಮಾಡುವುದು ಪರಮ ಕರ್ತವ್ಯ; ಅಂಥ ವ್ಯಕ್ತಿ ಗಂಡಸೆ, ಹೆಂಗಸೆ ಎಂಬುದು ಎಣಿಕೆಗೆ ಬರತಕ್ಕದ್ದಲ್ಲ ಎಂದು ಹೇಳಿ, ಹಿಂದೆ ನಡೆದ ಕೆಲವು ಸಂಗತಿಗಳನ್ನು ವಿವರಿಸುತ್ತಾನೆ. ತಾಟಕಿ ನಾಶವಾಗುತ್ತಾಳೆ; ಸುಬಾಹು ಸತ್ತು ಬೀಳುತ್ತಾನೆ; ಸಮುದ್ರದವರೆಗೂ ನೂಕಿಕೊಂಡು ಹೋಗಿ ಬೀಳುವಂತೆ ಮಾರೀಚನ ಮೇಲೆ ಬಾಣಪ್ರಯೋಗವಾಗುತ್ತದೆ. ರಾಮನ ಬಾಣಗಳ ಎದುರು ತನ್ನಂಥವನಿಗೆ ಯಾವ ಅನುಕೂಲಾವಕಾಶವೂ ಶಕ್ಯವಿಲ್ಲವೆಂಬ ಭಯವನ್ನು ಅವನಲ್ಲಿ ಬಿತ್ತಿ ಕಳಿಸುತ್ತಾನೆ.

ಯಜ್ಞಕಾರ್ಯ ಮುಗಿದ ಮೇಲೆ ವಿಶ್ವಾಮಿತ್ರ ಋಷಿ ರಾಮಲಕ್ಷ್ಮಣರನ್ನು ಮಿಥಿಲೆಯಲ್ಲಿನ ಜನಕನ ಆಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾನೆ. ಜನಕ ಸಾಕಿ ಬೆಳಸಿದ ಮಗಳು ಸೀತೆಯ ಪಾಣಿಗ್ರಹಣಕ್ಕೆ ಒಂದು ವೀರಪಣ ಇರುತ್ತದೆ. ಅದು ಯುವಕರ ಶಕ್ತಿಯನ್ನು ಪರೀಕ್ಷಿಸುತ್ತದೆ ಎಂಬುದಾಗಿತ್ತು. ಯಜ್ಞಕಾರ್ಯಕ್ಕಾಗಿ ನೆಲವನ್ನು ರಾಜನು ಉಳುತ್ತಿದ್ದಾಗ ಒಂದು ಹೆಣ್ಣು ಮಗುವನ್ನು ಆತ ಕಂಡು ತನ್ನ ಮಗಳಂತೆ ಪ್ರೀತಿಯಿಂದ ಬೆಳಸಿದ್ದನು. ಈಗ ಬಹಳ ಚೆಲುವೆಯಾಗಿ ಬೆಳೆದು ವಿವಾಹದ ವಯಸ್ಸಿಗೆ ಬಂದಿದ್ದಳು. ಅಲ್ಲಿ ಮಾತು 'ಪತಿ ಸಂಯೋಗ ಸುಲಭಾ' ಎಂದಿದೆ. ತನ್ನಲ್ಲಿ ಒಂದು ಶಿವಧನುಸ್ಸಿದೆ; ಅದನ್ನು ಬಾಗಿಸಿ ಹೆದೆ ಕಟ್ಟಿದವರಿಗೆ ಮಗಳನ್ನು ಕೊಟ್ಟು ಮದುವೆ ಮಾಡಿಕೊಡುತ್ತೇನೆ ಎಂದು ಜನಕ ಮಹಾರಾಜನು ಘೋಷಿಸಿದ್ದನು. ಆ ಕಾಲದ ಬಹುಪ್ರಖ್ಯಾತರಲ್ಲಿ ಶಕ್ತರೆನ್ನಿಸಿಕೊಂಡ ಅರಸುಕುಮಾರರು ಅದನ್ನು ಮಾಡಲು ಶಕ್ತರಾಗಿರಲಿಲ್ಲ. ರಾಮನು ಸುಲಭವಾಗಿ ಅದನ್ನು ಬಾಗಿಸಿ ಅದಕ್ಕೆ ಹೆದೆಯೇರಿಸಲು ಯತ್ನಿಸಿದಾಗ ಅದು ಎರಡು ತುಂಡಾಗಿ ಮುರಿದುಬಿತ್ತು. ಜನಕನಿಗೆ ಹರ್ಷವಾಗಿ ರಾಮನಿಗೆ ಸೀತೆಯನ್ನು ಕೊಟ್ಟು ವಿವಾಹ ಮಾಡುವುದಾಗಿ ಹೇಳುತ್ತಾನೆ. ದಶರಥನಿಗೆ ಹೇಳಿಕಳಿಸಿ ಅವನು ಬಂದ ಮೇಲೆ

ಮದುವೆ ನಡೆಯಿತು.[೬] ವಿಶ್ವಾಮಿತ್ರನ ಕಾರ್ಯ ಇಷ್ಟಕ್ಕೆ ಮುಗಿಯಿತು. ಅಲ್ಲಿಂದ ಮುಂದೆ ರಾಮಾಯಣ ಪ್ರಪಂಚದಲ್ಲಿ ಅವನು ಕಾಣಿಸುವುದಿಲ್ಲ.

ಮಿಥಿಲೆಯಿಂದ ಹಿಂದಿರುಗುವ ದಾರಿಯಲ್ಲಿ ಜಮದಗ್ನಿಯ ಮಗನಾದ ಪರಶುರಾಮನು ರಾಮನನ್ನು ಪ್ರತಿಭಟಿಸುತ್ತಾನೆ. ಬಹುಕಾಲ ಕ್ಷತ್ರಿಯರ ಮೇಲೆ ಮುಯ್ಯಿ ತೀರಿಸಿಕೊಳ್ಳುತ್ತ ಈಗಲೂ ಅವರಿಗೆ ಭೀಕರವಾಗಿಯೇ ಇದ್ದವನು ಅವನು. ತನ್ನಲ್ಲಿರುವ ವೈಷ್ಣವ ಧನುಸ್ಸನ್ನು ಬಗ್ಗಿಸು; ಆಮರಣಾಂತ ಯುದ್ಧದಲ್ಲಿ ತನ್ನನ್ನು ಎದುರಿಸು ಎನ್ನುತ್ತಾನೆ. ಸನ್ನಿವೇಶ ರಾಮನಿಗೆ ಅರ್ಥವಾಯಿತು. ವಾಸ್ತವವಾಗಿ ಅವನಿಗೆ ಕೋಪ ಉಂಟಾಗುತ್ತದೆ. ಆ ಧನುಸ್ಸನ್ನು ರಾಮನು ಸುಲಭವಾಗಿ ಬಗ್ಗಿಸಿ ಪರಶುರಾಮನ ಮೇಲೆಯೇ ಅದನ್ನು ತಿರುಗಿಸಿ ಪ್ರಯೋಗಿಸುತ್ತೇನೆಂದು ಅವನಿಗೆ ಪ್ರತಿ ಹೇಳುತ್ತಾನೆ. ಈಗ ಗೊತ್ತಾಯಿತು ಪರಶುರಾಮನಿಗೆ ತನ್ನೆದುರಿಗೆ ಇರುವವನು ಪರಮವೀರನೆಂದು. ತನ್ನ ಆಯುಧಗಳನ್ನು ರಾಮನಿಗೆ ಒಪ್ಪಿಸಿ ಕ್ಷಮೆಗೊಂಡು ತಪಸ್ಸಿಗೆ ಹೋಗಲು ಅಪ್ಪಣೆ ಪಡೆಯುತ್ತಾನೆ. ಇದು ರಾಮನಿಗೆ ಕೀರ್ತಿಯನ್ನೂ ಕ್ಷತ್ರಿಯ ಲೋಕದಲ್ಲೆಲ್ಲ ಮಾನ್ಯತೆಯನ್ನೂ ತರುತ್ತದೆ. ಜನಕನ ಆಸ್ಥಾನದಲ್ಲಿ ಶಿವಧನುಸ್ಸನ್ನು ಮುರಿದುದಲ್ಲದೆ ತನ್ನ ಕಾಲದ ಕ್ಷತ್ರಿಯ ವರ್ಗಕ್ಕೆಲ್ಲ ದುರ್ಜಯನಾಗಿ ಪರಮಭಯಂಕರನಾಗಿದ್ದ ಪರಶುರಾಮನಲ್ಲಿದ್ದ ವೈಷ್ಣವ ಧನುಸ್ಸನ್ನೂ ಮುರಿದನೆಂಬುದು ಆ ಪ್ರಶಸ್ತಿಗೆ ಕಾರಣ. ಇಲ್ಲಿಗೆ ರಾಮನ ವಿದ್ಯಾಶಿಕ್ಷಣದ ಘಟ್ಟ ಸಂಪೂರ್ಣವಾಗುತ್ತದೆ. ಶತ್ರು ಯಾರೇ ಆಗಲಿ, ಅಗತ್ಯ ಯಾವುದೇ ಇರಲಿ, ನೆಚ್ಚಬಲ್ಲ ವೀರಯೋಧ ಎಂದು ಕೀರ್ತಿ ಸ್ಥಾಪಿತವಾಯಿತು. ದಶರಥನ ಕುಟುಂಬದವರು ಸುಖವಾಗಿ ಮನೆಗೆ ಹಿಂದಿರುಗಿದರು. ಇದು ಬಾಲ ಕಾಂಡದ ಕತೆ.

ಅಯೋಧ್ಯೆಯಲ್ಲಿ ದಶರಥನ ಕೌಟುಂಬಿಕ ಜೀವನವನ್ನು ವರ್ಣಿಸುತ್ತ ಉನ್ನತ ಪ್ರಾಚೀನ ಕಾಲದ ಆರ್ಯವಂಶದ ಒಂದು ಅರಸು ಮನೆತನದ ಚಿತ್ರವನ್ನು ರಾಮಾಯಣ ಕೊಡುತ್ತದೆ. ಪುರಾತನ ಕಾಲದಲ್ಲಿ ಒಂದು ರಾಜಧಾನಿಯನ್ನಾಗಿ

---

೬ ರಾಮನಿಗೆ ಸೀತೆಯನ್ನು ಕೊಟ್ಟು ಮದುವೆಯಾದಾಗ ಜನಕನ ಸ್ವಂತ ಮಗಳಾ ಊರ್ಮಿಳೆಯನ್ನು ಲಕ್ಷ್ಮಣನಿಗೆ ಕೊಟ್ಟು ಮದುವೆಯಾಯಿತು ಎಂದಿದೆ. ಜನಕನ ತಮ್ಮ ಕುಶಧ್ವಜನ ಇಬ್ಬರು ಹೆಣ್ಣು ಮಕ್ಕಳು ಮಾಂಡವಿ ಶ್ರುತಕೀರ್ತಿಯರನ್ನು ಭರತ ಶತ್ರುಘ್ನರಿಗೆ ಕೊಟ್ಟು ಮದುವೆಯಾಗುತ್ತದೆ.

ಅಯೋಧ್ಯೆಯನ್ನು ಮನು ಕಟ್ಟಿದನಂತೆ. ಅವನ ತರುವಾಯ ಬಂದ ಆ ವಂಶದ ರಾಜರು ಅದನ್ನು ವಿಸ್ತರಿಸಿದರು; ಇನ್ನಷ್ಟು ಚಂದಗೊಳಿಸಿದರು. ರಾಜಧಾನಿಯಲ್ಲಿ ನಡೆಯುತ್ತಿದ್ದ ನಗರಜೀವನ, ಅಲ್ಲಿನ ಬದುಕು ಹೇಗೆ ಸುವ್ಯವಸ್ಥಗೊಂಡಿದ್ದಿತು ಎಂಬುದರ ಸುಂದರ ವರ್ಣನೆ ಅಲ್ಲಿ ದೊರಕುತ್ತದೆ. ಬದುಕಿನ ಧಾರಾಳ, ಮನೋಹರತೆ, ಅನೇಕ ಮಟ್ಟಗಳಲ್ಲಿ ಜೀವನಕ್ಕಿದ್ದ ಅವಕಾಶಗಳು, ಜನದ ಕಸುಬು ಉದ್ಯೋಗಗಳು ಇವುಗಳ ಚೆಲುವಾದ ವರ್ಣನೆಗಳು ಬರುತ್ತವೆ. ಸಾವಿರಾರು ವರ್ಷಗಳ ಮೇಲೆ ಅದನ್ನು ಓದಿದವರಿಗೆ ಈಗಿನ ತಮ್ಮ ಊರು ಅಷ್ಟು ಚೆನ್ನಾಗಿ ಸುರಚಿತವಾಗಿ ಆಳಿಕೆಗೊಂಡು ಸುಖಸಂಪತ್ತುಗಳಿಂದ ಕೂಡಿ ಅಯೋಧ್ಯೆಯಂತೆ ಇರುವ ಹಾಗಿದ್ದರೆ! – ಎನ್ನಿಸುತ್ತದೆ. ಸ್ವಂತವಾಗಿ ದಶರಥನದು ಒಳ್ಳೆಯ ಆಳಿಕೆ. ಜನರಿಗೆ ಅವನಲ್ಲಿ ಪ್ರೀತಿ, ಗೌರವ ಇದ್ದು, ಉತ್ತಮರಾದ ಮಂತ್ರಿಗಳು ಅವನ ಮನಸ್ಸಿಗೆ ತೃಪ್ತಿಯಾಗುವಂತೆ ನಡೆದುಕೊಳ್ಳುತ್ತಿದ್ದರು. ಕುಲದ, ವಂಶದ ಪುರೋಹಿತನಾಗಿ ವಸಿಷ್ಠನಂತಹವರೂ ಸುಮಂತ್ರನಂತಹ ಸಲಹೆಗಾರ ಸ್ನೇಹಿತರೂ ನೆಚ್ಚಿನ ಸಚಿವರೂ ಇದ್ದರು. ಊರ ಜೀವನದ ಆವರಣ ಸುಖ ಸೌಕರ್ಯಗಳದು. ಸುತ್ತಲೂ ಸುಹೃದವರ್ಗ; ಅರಮನೆಯ ಒಳಗಿನ ಪರಿಸ್ಥಿತಿ ಮಾತ್ರ – ಎಂದರೆ, ರಾಜನ ಮೂವರು ರಾಣಿಯರಿಗೂ ಅವರ ಸಿಬ್ಬಂದಿಯವರಿಗೂ ನಡುವೆ ಬೆಳೆದ ಸಂಬಂಧಗಳಲ್ಲಿ ವಿರಸ ಇತ್ತು. ಕೌಸಲ್ಯೆ ವಯಸ್ಸಿನಲ್ಲಿ ಹಿರಿಯಳು; ಮಾನಿ; ಶ್ರೀಮಂತಳು. ರಾಜನ ಮರ್ಯಾದೆಯೇನೊ ಅವಳಿಗೆ ಸಲ್ಲುತ್ತಿದೆ. ಆದರೆ ದೂರದ ವಾಯವ್ಯ ಪ್ರಾಂತದ ಹತ್ತಿರದಿಂದ ತಂದ ಕೈಕಯಿ ಅವನ ಪ್ರೀತಿಯನ್ನೂ ವಿಶ್ವಾಸ ಅನುಗ್ರಹಗಳನ್ನೂ ಪಡೆದು ರಾಜನಿಗೆ ಮೆಚ್ಚುಗೆಯಾಗಿದ್ದಳು. ಈ ಇಬ್ಬರ ನಡುವೆ ಸುಮಿತ್ರೆ ಇದ್ದಾಳೆ, ಚಿಕ್ಕರಾಣಿಯ ಜೊತೆಗಿಂತ ಕೌಸಲ್ಯೆಯ ಜೊತೆ ಆಕೆಗೆ ಹೆಚ್ಚು ಮೆಚ್ಚು. ಅರಮನೆಯಲ್ಲಿ ಕೌಸಲ್ಯೆ ತನ್ನ ಪ್ರಾಧಾನ್ಯವನ್ನು ಪುನಃ ಸ್ಥಾಪಿಸಿಕೊಳ್ಳುವ ಭರವಸೆಯಲ್ಲಿ ಇದ್ದಳು; ಮುಂದೆ ರಾಜ್ಯಾಧಿಕಾರಿಯಾಗಲಿರುವ ರಾಮನ ತಾಯಿಯಾಗಿ. ಇತರ ಇಬ್ಬರು ರಾಣಿಯರೊಡನೆ ಕೈಕೆ ಸೊಕ್ಕಿ ನಡೆದುಕೊಳ್ಳುತ್ತಿರುತ್ತಾಳೆ. ದಶರಥನ ಪ್ರೀತಿ ತನ್ನ ಮೇಲೆ ಇಲ್ಲದಿರುವುದನ್ನು ಅನುಭವಿಸ ಬೇಕಾಗಿದ್ದುದರ ಜೊತೆಗೆ ಸವತಿಯ ಕೀಳೆಣಿಕೆಗೂ ಅಹಂಕಾರಕ್ಕೂ ನೊಂದಿರುತ್ತಾಳೆ. ಸನ್ನಿವೇಶದ ಒಂದು ಒಳ್ಳೆಯ ಲಕ್ಷಣವೆಂದರೆ ಭರತನ ಮೇಲೆ ಕೌಸಲ್ಯಗಿದ್ದ ಪ್ರೀತಿ; ಕೈಕೆಗೆ ರಾಮನಲ್ಲಿ ಅದರ, ಮೆಚ್ಚಿಕೆ; ಅಣ್ಣತಮ್ಮಂದಿರಲ್ಲಿ ಹೊಂದಿಕೆ, ಸಾಮರಸ್ಯ, ಮನಸ್ಸಿನ ಒಪ್ಪುಗೆಗಳು.

ರಾಮನು ಮದುವೆಯಾದ ಒಂದು ವರ್ಷಕಾಲ[೭] ಸುಮಾರು ಅರಸುಕುಮಾರರು ತಮ್ಮ ಮಡದಿಯರೊಡನೆ ತಮ್ಮ ಬೇರೆ ಬೇರೆ ಮಹಲುಗಳಲ್ಲಿ ಸುಖವಾಗಿದ್ದರು; 'ಸ್ವಾಂ ಸ್ವಾಂ ಭಾರ್ಯಾಂ ಉಪಾದೇಯ ರೇಮಿರೇ ಸ್ವಸ್ವಮಂದಿರೇ' ಎಂಬುದು ರಾಮಾಯಣದ ಮಾತು. ಸೀತೆಗೆ ಕೂಡ ರಾಮನ ಅರಮನೆಯಲ್ಲಿ, ಪ್ರೀತಿಯಲ್ಲಿ ಸ್ಥಾಯಿಯಾದ ನೆಲೆಯಿದ್ದಿತು ಎಂಬುದನ್ನು ತಿಳಿಸುತ್ತಾಳೆ: 'ನಿತ್ಯಂ ಹೃದಿ ಸಮರ್ಪಿತಃ'

ಒಂದು ದಿನ ದಶರಥನಿಗೆ ಅಪಶಕುನ ಕಂಡಿತಂತೆ; ತನ್ನ ಜೀವನಾವಧಿಯನ್ನು ಕುರಿತು ದುಃಸ್ವಪ್ನವಾಯಿತಂತೆ. ಇತರವಾಗಿಯೂ ಮನಸ್ಸಿತ್ತು. ರಾಮನ ಕೈಗೆ ರಾಜ್ಯವನ್ನು ಒಪ್ಪಿಸಲು ಕಾಲವಾಗಿತ್ತು ಎಂದು ಯೋಚಿಸುತ್ತಿದ್ದ. ಪ್ರಾಚೀನ ಸಂಪ್ರದಾಯಕ್ಕೆ ತಕ್ಕಂತೆ ರಾಮನೇ ಉತ್ತರಾಧಿಕಾರಿಯಾಗಲು ಅರ್ಹನಾದವನು. ಅಯೋಧ್ಯೆಯ ಜನರ ಕಣ್ಮಣಿಯೂ ಆಗಿದ್ದ. ರಾಜನ ಇಷ್ಟವನ್ನು ಘೋಷಣೆ ಮಾಡಿದಾಗ ಜನದ ಎಲ್ಲ ವರ್ಗಗಳವರಿಗೂ ಸಂತೋಷವಾಗುತ್ತದೆ. ಕೌಸಲ್ಯೆಯ ಸಂತೋಷ ಎನ್ನರಿಗಿಂತ ಹೆಚ್ಚಿನದು. ಅಭಿಷೇಕದ ಕ್ರಿಯೆಗಳನ್ನೆಲ್ಲ ಬೇಗ ಮಾಡಿ ಮುಗಿಸಬೇಕೆಂಬುದು ದಶರಥನ ಅಭಿಲಾಷೆ. ಮದುವೆಯಾದ ಕೂಡಲೆ ತನ್ನ ಸೋದರಮಾವ ಮತ್ತು ತಾತಂದಿರಲ್ಲಿಗೆ ಹೋಗಿ ಕೈಕೆಯ ತವರು ಮನೆಯಲ್ಲಿದ್ದ ಭರತನಿಗಾಗಲಿ ಕೇಕಯದವರಿಗಾಗಲಿ ಸೀತೆಯ ತಂದೆ ಜನಕನಿಗಾಗಲಿ[೮] ಅಭಿಷೇಕಕ್ಕೆ ಹೇಳಿಕಳಿಸಲಿಲ್ಲ.

ಆದರೆ ಸ್ವತಂತ್ರವಾಗಿ ಕೈಕೆಯ ಅಂತಃಪುರದಲ್ಲಿ ಒಂದು ಸನ್ನಿವೇಶ ಹುಟ್ಟಿ

---

೭ ಈ ಕಾಲಮಾನವನ್ನು ಕುರಿತು ಅಭಿಪ್ರಾಯಭೇದವಿದೆ. ಅದು ಒಂದು ವರ್ಷಕಾಲ ಎಂದು ಕೆಲವರು, ಹನ್ನೆರಡು ಎಂದು ಕೆಲವರು ಹೇಳುತ್ತಾರೆ. ಬಹುತರ ಒಂದಿರಬೇಕು.

೮ ಭರತ, ಕೈಕೆ ಈ ಸಂಬಂಧದಲ್ಲಿ ಒಂದು ಏನೊ ಕಾರ್ಪಣ್ಯವಿರುವ ಹಾಗೆ ಕಾಣುತ್ತದೆ. ಕೈಕೆಯನ್ನು ಮದುವೆ ಮಾಡಿಕೊಳ್ಳುವಾಗ ಅವಳ ಹೊಟ್ಟೆಯಲ್ಲಿ ಹುಟ್ಟುವ ಮಗನಿಗೆ ದಶರಥನು ರಾಜ್ಯವನ್ನು ಕೊಡತಕ್ಕದ್ದೆಂದು ಅವಳ ತಂದೆಗೆ ಮಾತು ಕೊಟ್ಟಿದ್ದಂತೆ ವದಂತಿ ಇತ್ತು. ಆ ಮೇಲಿನ ಒಂದು ಕಾಲದಲ್ಲಿ ಈ ಸಂಗತಿಯನ್ನ ರಾಮನು ತಿಳಿಸುತ್ತಾನೆ. ಆದರೆ ಯಾವ ಸಮಯದಲ್ಲಿಯೂ ಅದು ಎತ್ತಿನಿಂತ ವಿಷಯವಾಗಲಿಲ್ಲ. ಹೇಗೇ ಆಗಲಿ, ಯೌವರಾಜ್ಯಾಭಿಷೇಕದ ಪ್ರಯತ್ನ ಅವಸರದಲ್ಲಿ ನಡೆಯಿತು. ಭರತನು ಇದಕ್ಕೆ ಅಡ್ಡಿಯಾಗುತ್ತಾನೆಂದಲ್ಲ; ಅಥವಾ, ಸಮಾರಂಭಕ್ಕೆ ಆತಂಕವುಂಟು ಮಾಡುತ್ತಾನೆಂದೂ ಅಲ್ಲ; ಅವನ ತಾತನೂ ಸಂಬಂಧಿಗಳೂ ದಶರಥನ ವಾಗ್ದಾನವನ್ನು, ಭರತನು ತನ್ನ ಅಧಿಕಾರವನ್ನು ಸ್ಥಾಪಿಸಲು ಯಾರಾದರೂ ಯತ್ನಿಸುತ್ತಿದ್ದರು ಎಂಬುದೂ ಅಲ್ಲ. ಪಾಯಸ ಇತರ ಎಲ್ಲ ಅಧಿಕಾರಗಳನ್ನೂ ಬೇರೆ ಮಾಡಿದೆ; ಇತರ ಹಕ್ಕು ಬಾಧ್ಯತೆಗಳು ಇಲ್ಲಿ ಎಣಿಕೆಗೆ ಬರತಕ್ಕವಲ್ಲ. ಉಳಿದ ಎಣಿಕೆಗಳನ್ನು ಅದು ಮೀರಿ ಕಾರ್ಯ ಮಾಡುತ್ತದೆ.

ಬೆಳೆಯುತ್ತದೆ. ಕೈಕೆಯನ್ನು ಮಗುವಾದಾಗಿನಿಂದ ಸಾಕಿ ಬೆಳಸಿದ್ದ ಅವಳ ಅರಮನೆಯ ಸೇವಕಿ ದಾದಿ ಮಂಥರೆ; ಮುದುಕಿ. ಅವಳಿಗೆ ಪಟ್ಟಾಭಿಷೇಕದ ತಯಾರಿಕೆಯ ಸಂಗತಿಗಳು ತಿಳಿದುವು. ಕೌಸಲ್ಯೆ ಸಾಧಾರಣವಾಗಿ ಬಿಗಿಕೈ ಹೆಂಗಸು; ಆಗ ಧಾರಾಳವಾಗಿ ದಾನಧರ್ಮ ಮಾಡುತ್ತಿದ್ದಳು; ಉತ್ಸವ ಸಮಾರಂಭಗಳಲ್ಲಿ ತೊಡಗಿದ್ದುದನ್ನು ಮಂಥರೆ ಕಂಡಳು. ಮಾರನೆಯ ದಿನ ರಾಮನನ್ನು ಯುವರಾಜನನ್ನಾಗಿ ಮಾಡುವುದಿದೆ ಎಂದು ಅವಳಿಗೆ ತಿಳಿಯಬಂದಿತು. ಕಾರಣ ಅದು. ತನ್ನ ಒಡತಿಯಲ್ಲಿಗೆ ಧಾವಿಸಿ ಬಂದು ಆ ಸುದ್ದಿಯನ್ನು ತಿಳಿಸಿ ಎಚ್ಚರಿಕೆ ಕೊಟ್ಟಳು. "ನೀನು ಎಂಥ ಅವಿವೇಕಿ; ಅಪಾಯಕ್ಕೆ ಎಚ್ಚತ್ತುಕೊ" ಎಂದಳು.

ಸುದ್ದಿ ಮೊದಲು ವಾಸ್ತವವಾಗಿ ಕೈಕೆಗೆ ಪ್ರಿಯವಾಯಿತು. ರಾಮನನ್ನು ಕಂಡರೆ ತನ್ನ ಮಗನ ಮೇಲಿದ್ದ ಪ್ರೀತಿಯೇ ಅವಳಿಗಿತ್ತು. ಇನ್ನಷ್ಟು ಹೆಚ್ಚಾಗಿಯೇ ಎಂದರೂ ಸಂದೀತು. ಯಾವ ಮಗನೂ ಕಾಣಿಸದಷ್ಟು ಪ್ರೀತಿಯನ್ನೂ ಗೌರವವನ್ನೂ ರಾಮನು ಕೈಕೆಗೆ ಸಲ್ಲಿಸಿದ್ದನು. ಅದು ಆ ಮನೆಗೆ ಒಪ್ಪುವ ನಡವಳಿಕೆಯೂ ಆಗಿತ್ತು. ಮಕ್ಕಳಲ್ಲಿ ಹಿರಿಯ ಮಗ ರಾಮ; ಸರ್ವಥಾ ಯೋಗ್ಯ; ರಾಮನಿಗೆ ತಕ್ಕ ಮಾನ್ಯತೆ ದೊರಕಿತು ಎಂದುಕೊಂಡಳು. ಆದರೆ ಮಂಥರೆಯನ್ನು ಒಪ್ಪಿಸುವುದಾಗಲಿಲ್ಲ. "ಇದು ನಡೆದರೆ ಅರಮನೆಯಲ್ಲಿ ನಿನ್ನ ಎಲ್ಲ ಹಿರಿಮೆಯೂ ಕೊನೆಗೊಂಡಂತಾಗುತ್ತದೆ. ದಶರಥನಿಗೆ ನಿನ್ನಲ್ಲಿರುವ ವಿಶ್ವಾಸ ಎಷ್ಟು ಹೆಚ್ಚು ಎಂದು ನೀನು ಕೊಚ್ಚಿಕೊಳ್ಳುವುದು ವಾಸ್ತವವಲ್ಲ. ನಾಳೆ ಆಳುವ ರಾಜನ ತಾಯಿಯಾಗುತ್ತಾಳೆ ಕೌಸಲ್ಯೆ. ಅರಮನೆಯಲ್ಲಿ ಬೇಗ ಅವಳ ಕೈ ಮೇಲಾಗುತ್ತದೆ" ಎಂದಳು. "ಇಷ್ಟು ದಿನ ತನ್ನನ್ನು ಅವರ್ಯಾದೆಯಿಂದ ಕಂಡು ಕೀಳೆಣಿಸಿದ್ದ ನೀನು ಇನ್ನು ಮುಂದೆ ಪ್ರಭಾವಕ್ಕೆ ಬರುವ ಕೌಸಲ್ಯೆಯ ಇಚ್ಛೆಗೆ ಅಧೀನವಾಗಿ ನಡೆದುಕೊಳ್ಳಬೇಕಾಗುತ್ತದೆ" – ಎಂದ ಗುರಿ ತಾಕಿತು. 'ಹಿಂದೆ ಯುದ್ಧರಂಗದಲ್ಲಿ ದಶರಥನನ್ನು ರಕ್ಷಿಸಿ ಪುನಃ ಆರೋಗ್ಯಕ್ಕೆ ತಂದು ನೆರವುಗೊಳಿಸಿದ್ದನ್ನು ನೆನಸಿಕೊ; ಆಗ ನಿನಗೆ ಕೊಟ್ಟ ಮಾತನ್ನು ರಾಜನ ಕಿವಿಗೆ ಹಾಕು. ಅದು ಅವನ ಮೇಲೆ ಒತ್ತಾಯವಾಗಲಿ. ಆಗ ನಿನಗೆ ಅವನು ಎರಡು ವರಗಳನ್ನು ಕೊಟ್ಟಿದ್ದನಲ್ಲವೆ? ನಿನಗೆ ಬೇಕೆನ್ನಿಸಿದಾಗ ಅವನ್ನು ನೀನು ಕೇಳುವೆಯೆಂದು ಹೇಳಿದ್ದೆ. ಅವನ್ನು ಕೇಳಿ ಪಡೆಯಲು ಈಗ ಕಾಲ ಒದಗಿದೆ. ವರದಾನದ ಫಲವನ್ನು ಪಡೆಯಲು ಇದೇ ಸಮಯ. ರಾಮನು ಹದಿನಾಲ್ಕು ವರ್ಷಗಳ ಕಾಲ ಕಾಡಿಗೆ ವಾಸಹೋಗಲಿ, – ಒಂದು; ಅವನಿಗೆ ಪ್ರತಿಯಾಗಿ ಭರತನಿಗೆ ಪಟ್ಟವಾಗಬೇಕೆಂಬುದು ಎರಡನೆಯದು. ನಿನ್ನ ಅರಮನೆಯೊಳಗಿನ ಕೋಪಗೃಹಕ್ಕೆ ಹೋಗಿ – ಇದೊಂದು ಬಗೆಯ

ಸಂಪು, ಧಾರಣ – ಇನ್ನಾವ ಸಮಯಗಳಿಗೂ ಒಪ್ಪದೆ ಗಂಡನನ್ನು ಒಪ್ಪಿಸು' ಎಂದು ಮಂಥರೆ ಸಲಹೆ ಕೊಟ್ಟಳು.

ಕೈಕೆಯ ಅಂತಃಪುರಕ್ಕೆ ದಶರಥನು ಬಂದಾಗ ತನ್ನ ಈ ಕಿರಿಯ ರಾಣಿ ರಾಮನ ವನವಾಸ ಸಂಬಂಧದಲ್ಲಿ ಅಚಲಳಾಗಿರುವುದನ್ನು ಕಂಡ. ಎಷ್ಟು ಬಗೆಯ ಪ್ರಾರ್ಥನೆಯೂ ಇತರ ಪುರಸ್ಕಾರ ಬೆದರಿಕೆಗಳೂ ವ್ಯರ್ಥವಾದವು. ಇಂಥ ಪ್ರಾಯೋಪವೇಶವನ್ನು ಏಕೆ ಕೈಕೊಂಡಳೆಂದು ಅವನು ತಿಳಿಯಬೇಕಿದ್ದಾಗ ಒಂದು ದುರ್ವಿಧಿಯಾಗಿ ಪರಿಣಮಿಸುವ ಮಾತನ್ನು ಅವಳಿಗೆ ಕೊಡುತ್ತಾನೆ. ಅವಳು ಬೇಡಲಿರುವುದು ಏನೆಂದು ತಿಳಿಯದೆ ನೀನು ಕೇಳಿದುದನ್ನೆಲ್ಲ ಮಾಡಿಕೊಡುತ್ತೇನೆನ್ನುತ್ತಾನೆ: ರಾಮನ ಮೇಲೆಯೇ ಆಣೆಯಿಡುತ್ತಾನೆ. ಯಾವ ಲೋಪ, ದೋಷ ಇಲ್ಲದೆ ಇರುವ ತನ್ನ ಪ್ರಿಯತಮವಾದ ಮಗನನ್ನು ಕಾಡಿಗೆ ಅಟ್ಟೆಂದು ಅವಳು ಕೇಳಲಿರುವಳೆಂದು ಅವನು ಸರ್ವಥಾ ಎಣಿಸಿರಲಿಲ್ಲ. ಸ್ವಂತ ಪ್ರೀತಿ, ನಿರೀಕ್ಷೆಗಳೂ ಕಡಿದುಬಿದ್ದವು. ರಾಜನಂಥ ಸಾರ್ವಜನಿಕ ವ್ಯಕ್ತಿಗೆ ಹೀನಾಯವನ್ನು ತರುವ ಸಂಗತಿ ಅದು. ಆದರೆ ಏನು? ಅವನು ಸತ್ಯವಂತ. ಹಿಂದೆ ವಾಗ್ದಾನ ಮಾಡಿದ್ದುದು ನಿಜ; ಅದನ್ನು ನಡಸಿಕೊಡಬೇಕಾದುದು ಅವನ ಕರ್ತವ್ಯವಾಗಿತ್ತು. ಈಗಲೊ ತನ್ನ ಸುಕೃತದ ಮೇಲೆ ಆಣೆಯಿಟ್ಟು ಅವಳ ಇಷ್ಟವನ್ನು ನಡಸಿಕೊಡುತ್ತೇನೆಂದು ಭರವಸೆ ಕೊಟ್ಟಿದ್ದ. ಕೈಕೆ ರಾಮನಿಗೆ ಹೇಳಿಕಳಿಸಿದಳು. ತಂದೆ ತನಗೆ ಮಾಡಿದ ವಾಗ್ದಾನವನ್ನು ನಡಸಿಕೊಡುವುದು ಅವನ ಕರ್ತವ್ಯ ಎಂದು ಹೇಳುತ್ತಾಳೆ. ಈ ಮಾತುಗಳನ್ನು ತಂದೆ ಆಡಲಾರದವನಾಗಿದ್ದ. ಸತ್ಯನಿಷ್ಠನಾದವನು ಕ್ರಿಯಾವಂತನಾಗಬೇಕಾದ ಅಗತ್ಯ ಅಲ್ಲಿ ಕಾಣಿಸುತ್ತಿತ್ತು; ಈ ಮಾತನ್ನು ನಡಸಿಕೊಟ್ಟು ಉದ್ಧಾರವಾಗಬೇಕಿತ್ತು. ರಾಮನಿಗೂ ಸ್ವಂತವಾಗಿ ಈ ಮುಂಚೆ ಸ್ವಲ್ಪಕಾಲ ಉಲ್ಲಾಸವಾಗಿತ್ತು. ಯೌವರಾಜ್ಯದ ಪ್ರಕಟನೆ ಕೆಲವು ಗಂಟೆಗಳ ಹಿಂದೆ ಮಾತ್ರ ಸಭೆಯಲ್ಲಿ ನಡೆದಿತ್ತು. ಪುನಃ ತನ್ನ ತಂದೆಯ ಅರಮನೆಯಲ್ಲಿ ಆ ಸಂಗತಿ ಸ್ಪಷ್ಟವಾಗಿತ್ತೆಂದಿದೆ. ಕೌಸಲ್ಯೆಯ ಮಂದಿರದಲ್ಲಿಯೂ ತನ್ನ ಮನೆಯಲ್ಲಿಯೂ ಸಿದ್ಧತೆಗಳು ನಡೆದಿದ್ದವು. ಹೊರಗೆ ಊರ ಜನರ ಸಂತೋಷ ಸಮಾರಂಭಗಳು ಹೊಮ್ಮಿ ಹರಡಿದ್ದುವು. ಈ ಸಿಡಿಲ ಘಾತ ಅನಿರೀಕ್ಷಿತ. ರಾಮನಿಗೆ ಪರಿಸ್ಥಿತಿ ಅರ್ಥವಾಯಿತು. ಎಂದರೆ: ತನ್ನ ತಂದೆಯ ಸ್ಥಿತಿ ಒಂದು ನಿಮಿಷದಲ್ಲಿ ಅವನಿಗೆ ಅರ್ಥವಾಗುತ್ತದೆ. ತಾಯಿ ಕೈಕೆಗೆ ಹೀಗೆ ಉತ್ತರ ಕೊಡುತ್ತಾನೆ :

ಏವಮಸ್ತು ಗಮಿಷ್ಯಾಮಿ ವನಂ ವಸ್ತುಂ ಅಹಂತ್ವಿತಃ

ಜಟಾಚೀರಧರೋ ರಾಜ್ಞಃ ಪ್ರತಿಜ್ಞಾಂ ಅನುಪಾಲಯನ್

(ಹಾಗಾಗಲಿ: ಜಟಾಧಾರಿಯಾಗಿ ವಲ್ಕನವನ್ನುಟ್ಟು ನಾನು ಕಾಡಿಗೆ ವಾಸಕ್ಕೆ ಹೋಗುತ್ತೇನೆ – ನನ್ನ ತಂದೆ ಕೊಟ್ಟ ಪ್ರತಿಜ್ಞೆ ನೆರವೇರಿಸಲು.)

'ತಾನು ಕೊಟ್ಟ ಮಾತನ್ನು ನಡಸಿಕೊಡಲಿಲ್ಲವೆಂಬ ದುಷ್ಕೀರ್ತಿ ಜನವರ್ಗದಲ್ಲಿ ತಂದೆಗೆ ಬಾರದಿರಲಿ. ಇದನ್ನು ನಡಸಿಕೊಡುವುದಕ್ಕೆ ನನ್ನ ಬದುಕನ್ನು ಪಣವಾಗಿಡಲು ಪ್ರತಿಜ್ಞೆ ಮಾಡುತ್ತೇನೆ. ಇದಕ್ಕಾಗಿ ಆತನಾಗಲಿ ನೀನಾಗಲಿ, ಯಾವ ಸಂಕೋಚವನ್ನೂ ವಿಷಾದವನ್ನೂ ಪಡಬೇಕಿಲ್ಲ. ಭರತನಿಗೂ ನನಗೂ ನಡುವೆ ಯಾವುದೇ ವ್ಯತ್ಯಾಸವನ್ನು ನಾನು ಮಾಡುವುದಿಲ್ಲ. ಒಂದು ಮಾತು ನುಡಿಯಿರಿ: ನನ್ನೆಲ್ಲವನ್ನೂ ತ್ಯಾಗಮಾಡಲು ನಾನು ಸಿದ್ಧನಿದ್ದೇನೆ: ನಮ್ಮ ತಂದೆಯ ಋಣಭಾರ ಇಳಿಯುತ್ತದೆಂದಾದರೆ ಸಾಕು' – ಎಂದ.

ಈ ಸುದ್ದಿಯನ್ನು ತಿಳಿಸುವುದಕ್ಕಾಗಿ ರಾಮನು ತಾಯಬಳಿಗೆ ಬೇಗ ಹಿಂತಿರುಗುತ್ತಾನೆ. ಕೆಲವೇ ಗಂಟೆಗಳ ಮುಂಚೆ ಯಾವುದು ಆಕೆಗೆ ಆನಂದ ತಂದು ಬಹುಕಾಲಗಳ ಭರವಸೆ ನಿರೀಕ್ಷಗಳ ಸಿದ್ಧಿಭಾವವಾಗಿತ್ತೊ, ಒಂದು ವರಪ್ರಸಾದದಂತೆ ಮುಗಿಲು ಕವಿಯದ ಚಂದ್ರಕಾಂತಿಯಂತೆ ಕಾಣಿಸಿತ್ತೊ ಅದು ವಿನಿಪಾತದಂತಾಯಿತು. ದುಃಖ ಬಡಿಯಿತು. ತನ್ನ ತಂದೆಯುನ್ನು ಋಣಮುಕ್ತನನ್ನಾಗಿ ಮಾಡುವ ಹೊಣೆಗಾರಿಕೆ ಪೂರ್ತಿ ತನ್ನದೇ ಎಂದು ರಾಮನು ಹೇಳಿದಾಗ ಆಕೆ ತನ್ನನ್ನು ಸಂತೈಸಿಕೊಳ್ಳುವಂತಾಯಿತು. ಅಲ್ಲದೆ ಇಲ್ಲಿಂದ ಹೊರಟುಹೋಗಲು ಅವನು ತೀರ್ಮಾನಿಸಿದ್ದನು. ಸೀತೆಗೂ ಸಂಗತಿಯನ್ನು ತಿಳಿಸಲಾಯಿತು. ಆಶಾಭಂಗ ಅಲ್ಲಿಯೂ ಅಷ್ಟೇ ಸಹಜವಾದ್ದು. ಸುಲಭವಾಗಿ ಪರಿಸ್ಥಿತಿಗೂ ಮುಂದೆ ನಡೆಯಲಿರುವುದಕ್ಕೂ ತನ್ನ ಮನಸ್ಸನ್ನು ಆಕೆ ಹೊಂದಿಸಿಕೊಳ್ಳುತ್ತಾಳೆ. ಕೆಡುಕಾಯಿತೆಂಬ ಭಾವವಾಗಲಿ ನಿರೀಕ್ಷಾ ಭಂಗದ ಚಿಹ್ನೆಯಾಗಲಿ ಅವಳಲ್ಲಿ ಕಾಣಲಿಲ್ಲ. ಮೇರೆ ಮೀರುವ ಕೋಪ ಲಕ್ಷ್ಮಣನಿಗೆ. ಮೋಹಾಂಧನಾದ ತಂದೆ, ದುರ್ಬುದ್ಧಿಯ ಮಲತಾಯಿ ಎಂಥ ಅನ್ಯಾಯ ಮಾಡಿದರು ಎಂಬುದು ಅವನ ಕೋಪಕ್ಕೆ ಕಾರಣ. ಆದರೆ ಬೇಗ ಶಾಂತನಾದನು. ರಾಮನನ್ನು ಹಿಂಬಾಲಿಸಿ ಕಾಡಿಗೆ ಹೋಗುವುದರಲ್ಲಿ ಅವನನ್ನಾಗಲಿ ಸೀತೆಯನ್ನಾಗಲಿ ಸಮಾಧಾನಪಡಿಸುವುದು ಶಕ್ಯವಾಗಲಿಲ್ಲ. ವನಗಮನಕ್ಕೆ ಸಿದ್ಧತೆಗಳನ್ನು ಮಾಡುತ್ತಾರೆ. ಘಟನೆಗಳಲ್ಲಿ ಉಂಟಾದ ತಿರುವು ಎಲ್ಲ ಜನರ ಮೇಲೂ ಕತ್ತಲು ಕವಿಸುತ್ತದೆ; ಎಲ್ಲರೂ ನಿಸ್ಸಹಾಯರಾಗಿದ್ದರು. ರಾಜನನ್ನೊ

ರಾಣಿಯನ್ನೊ ಆಕ್ಷೇಪಿಸುವುದರಿಂದ ಯಾವ ಪ್ರಯೋಜನವೂ ಇರಲಿಲ್ಲ. ತನ್ನ ತಂದೆಯ ಮಾತನ್ನು ನೆರವೇರಿಸಲು ವನವಾಸಕ್ಕೆ ಹೋಗುವುದನ್ನು ರಾಮನು ಕೈಕೊಂಡಿದ್ದ ; ಅವನು ಕರಗುವಂತಿರಲಿಲ್ಲ. ದಶರಥನ ದುಃಖಕ್ಕೆ ಮಿತಿಯಿರಲಿಲ್ಲ. ಅವನು ನಿಶ್ಚೇಷ್ಟನಾದನು. ಬಾಯಿಗೆ ಮಾತುಬಾರದು; ನರಳುತ್ತ ನೆಲದ ಮೇಲೆ ಹೊರಳಾಡುತ್ತಿದ್ದ; ಮಗನನ್ನು ಹಿಂದಕ್ಕೆ ಕರೆಯಲು ಶಕ್ತನಾಗಲಿಲ್ಲ.... ಅರಮನೆಯಲ್ಲಿದ್ದ ತನ್ನ ಹೆಣ್ಣುಗಳಿಗೆಲ್ಲ ಹೇಳಿ ಕಳುಹಿಸಿ ತನ್ನ ಮಗನನ್ನು ಬೀಳ್ಕೊಡುವ ಸಮಯದಲ್ಲಿ ತನ್ನ ಜೊತೆಗಿರಲು ಕರಸಿದ. ಗಂಡುಮಕ್ಕಳಿಬ್ಬರು, ಸೊಸೆ ಊರನ್ನು ಬಿಟ್ಟು ಹೋದರು.

ಪಟ್ಟಣ ಗ್ರಹಣಹಿಡಿದು ಕಂಗೆಟ್ಟಂತಿತ್ತು; ದುಃಖದಲ್ಲಿ ಮುಳುಗಿತ್ತು. ಯಾವ ಪಟ್ಟಣ ಕೆಲವೇ ಗಂಟೆಗಳಿಗೆ ಮುಂಚೆ ಹಾಡಿ ಕುಣಿದು ಹರ್ಷ ಸಮಾರಂಭಗಳನ್ನು ನಡಸುತ್ತಿತ್ತೊ ಅದು ಗೋಳುಕರೆಯಿಂದ ತುಂಬಿತು. ಅವರನ್ನು ಕೊಂಡೊಯ್ದ ರಥ ಮುಂದಕ್ಕೆ ಸಾರಿ ಅವರು ಕಣ್ಣಿಗೆ ಕಾಣಿಸದೆ ಹೋದಮೇಲೆ ದಶರಥನು ಕೌಸಲ್ಯೆಯ ಅರಮನೆಗೆ ಬಂದನು. ಮರಳಿ ಕೈಕೆಯನ್ನು ಕಣ್ಣೆತ್ತಿ ನೋಡುವುದಿಲ್ಲ ಎಂದು ಶಪಥ ಮಾಡಿದನು. ರಾಜನಾಗಬೇಕೆಂಬ ಹೊಸ ವ್ಯವಸ್ಥೆಯನ್ನು ಭರತನು ಒಪ್ಪುವುದಾದರೆ ಅವನ ಬಗೆಗೆ ತನ್ನಿಂದ ಯಾವ ಹರಕೆಯೂ ಇಲ್ಲವೆಂದನು.

ರಾಮನು ಅಯೋಧ್ಯೆಯ ಸೀಮೆಯನ್ನು ದಾಟಿ ಹೋಗಬೇಕಾದಾಗ ಗಂಗೆಯನ್ನು ದಾಟಬೇಕಾಗುತ್ತದೆ. ಹಳೆಯ ಕಾಲದ ಸ್ನೇಹಿತನೂ ಅಯೋಧ್ಯೆಯ ರಾಜರ ಸಾಮಂತನೂ ಆಗಿದ್ದ ಗುಹನ ಸಹಾಯವನ್ನು ಗಂಗೆಯನ್ನು ದಾಟಲು ರಾಮನು ಪಡೆಯುತ್ತಾನೆ. ಅವರೆಗೂ ರಥವನ್ನು ನಡಸಿದ್ದ ಸುಮಂತ್ರನನ್ನು ಹಿಂದಕ್ಕೆ ಕಳಿಸುತ್ತಾನೆ. ವಾಸ್ತವವಾಗಿ ರಾಮನು ಕಾಡಿಗೆ ಸೇರಿದ್ದನೆಂದು ಅದರಿಂದ ಕೈಕೆಗೆ ಖಚಿತವಾಗಲಿ ಎಂಬುದನ್ನು ತಿಳಿಸಲು ಅದು ನೆರವಾಗುತ್ತದೆ. ಭರದ್ವಾಜರ ಆಶ್ರಮವನ್ನು ದಾರಿಯಲ್ಲಿ ದಾಟುತ್ತಾನೆ. ಋಷಿಯ ಸಲಹೆಯಂತೆ – ಇಂದಿನ ಜಬ್ಬಲ್‌ಪುರದ ಹತ್ತಿರ ಇರುವ – ಚಿತ್ರಕೂಟದಲ್ಲಿ ಬಿಡಾರ ಮಾಡುತ್ತಾರೆ. ಹೊಸ ಪರಿಸ್ಥಿತಿಗೆ ಮನಸ್ಸನ್ನು ಹೊಂದಿಸಿಕೊಳ್ಳುತ್ತಾರೆ. ಕ್ರಿಯಾವಂತ ಮನುಸ್ಸುಳ್ಳ ರಾಮನಂಥವರಿಗೆ ಯಾವುದೂ ಮನಸ್ಸಿಗೆ ಬಂದ ಕೂಡಲೆ ಆಲೋಚನೆಯಾಗುತ್ತದೆ; ಆಲೋಚನೆ ಕೂಡಲೆ ಕ್ರಿಯೆಯಾಗುತ್ತದೆ. ಸ್ವಲ್ಪವೇ ಕಾಲ ಅವನ ಮನಸ್ಸಿಗೆ ಖಿನ್ನತೆಯುಂಟಾಗಿದ್ದರೂ ಅದು ವ್ಯಕ್ತಪಡದ್ದು ; ಕ್ರಿಯೆಯಲ್ಲಿ ಕಾಣುತ್ತಿರಲಿಲ್ಲ. ಅವನ ಸ್ವಾಸ್ಥ್ಯ ಅಸಾಧಾರಣವಾದ್ದು. ತನ್ನ ಅದೃಷ್ಟದಲ್ಲಿ ಉಂಟಾದ ಈ ತಿರುವನ್ನು ಕುರಿತು ಅವನ ಮನಸ್ಸಿನಲ್ಲಿ ಬೇರೆ ಯಾವ ಯೋಚನೆಯೂ ಹುಟ್ಟಲಿಲ್ಲ ಎಂದರೆ,

ಅವನು ಮನುಷ್ಯನಲ್ಲವೆಂದಾಗುತ್ತಿತ್ತು. ತಂದೆಯೂ ಮಲತಾಯಿಯೂ ಇನ್ನಷ್ಟು ಕರುಣೆಯಿಂದ ನಡೆದು ಕೊಳ್ಳಬಹುದಿತ್ತೆಂದು ತೋರಿತ್ತು. ಭರತನನ್ನು ರಾಜನನ್ನಾಗಿ ಮಾಡಬೇಕಾದರೆ ತನ್ನನ್ನು ಕಾಡಿಗೆ ಅಟ್ಟಬೇಕಿರಲಿಲ್ಲ. ಅವನಿಗೆ ಈ ಭಾವ ಬಂದುದೂ ಬಹು ಸ್ವಲ್ಪ ಕಾಲ; ನಿರ್ಘೃಣವಾಗಿ ಅದನ್ನು ಬೇಗ ಅದುಮಿಬಿಟ್ಟ. ಅದನ್ನು ಕುರಿತ ಮಾತಿಗಾಗಲಿ ಆ ಸಂಬಂಧದ ಇನ್ನಾವ ನಡವಳಿಕೆಗಾಗಲಿ ಲಕ್ಷ್ಮಣನಿಗೆ ಅವಕಾಶ ಕೂಡ ಕೊಡಲಿಲ್ಲ. ಕೆಲವು ದಿನಗಳಲ್ಲಿ, ಎಂದರೆ, ಸಾರಥಿಯಾಗಿ ಹೋಗಿದ್ದ ಸುಮಂತ್ರನು ಹಿಂದಕ್ಕೆ ಬಂದು, ಮಕ್ಕಳು ಗಂಗೆಯನ್ನು ದಾಟಿ ಕಾಡಿನೊಳಕ್ಕೆ ಹೋದರು ಎಂಬ ಸುದ್ದಿಬಂತು. ರಾಜನು ತೀರಿಕೊಂಡ.

* * * *

ಅವಸರದಲ್ಲಿ ದೂರದ ಕೇಕಯದಲ್ಲಿರುವ ರಾಜಗೃಹಕ್ಕೆ ಸುದ್ದಿಗಾರರನ್ನು ಕಳಿಸಿದರು. ಇಲ್ಲಿನ ಸಂಗತಿಗಳನ್ನು ತಿಳಿಯ ಹೇಳದೆ ಅಯೋಧ್ಯೆಗೆ ಭರತನನ್ನು ಬೇಗ ಕರೆತನ್ನಿರೆಂದು ಸುದ್ದಿಹೋಯಿತು. ಅವರು ಅಲ್ಲಿಗೆ ಸೇರುವ ಹಿಂದಿನ ರಾತ್ರಿ ಭರತನಿಗೆ ಮನಸ್ಸಿನಲ್ಲಿ ಏನೊ ಮುಜಗರವಾಗಿತ್ತಂತೆ. ಒಡನೆಯೇ ಅವನು ಪ್ರಯಾಣ ಮಾಡಿ ಅಯೋಧ್ಯೆಗೆ ಬರುತ್ತಾನೆ. ದಾರಿಯಲ್ಲಿ ಉದ್ದಕ್ಕೂ ಮನಸ್ಸು ಖಿನ್ನವಾಗಿತ್ತು. ತನ್ನ ಹುಟ್ಟೂರನ್ನು ಕಂಡು ತಾಳಲಾರದಷ್ಟು ಮನಸ್ಸು ಕುಗ್ಗಿತು. ತಾಯಿಯ ಅಂತಃಪುರಕ್ಕೆ ಹೋಗಿ ನೋಡಿದರೆ ಅಲ್ಲಿ ರಾಜನಿರಲಿಲ್ಲ. ಭರತನ ಪ್ರಯೋಜನವನ್ನು ಸಾಧಿಸಲು ತಾನು ಏನೇನನ್ನು ಮಾಡಿದೆ ಎಂಬುದರ ವಿವರಗಳನ್ನು ಕೈಕೆ ತಿಳಿಸಿದಳು. ರಾಮ, ಲಕ್ಷ್ಮಣ, ಸೀತೆ ಕಾಡಿಗೆ ಹೋಗಿದ್ದಾರೆ; ನಿಮ್ಮ ತಂದೆ ಇನ್ನಿಲ್ಲ ಎಂಬ ಸುದ್ದಿಯನ್ನು ಕೇಳಿ ಅವನು ರೊಚ್ಚಿಗೇಳುತ್ತಾನೆ. ತಾಯಿಯ ಮೇಲೆ ಶಾಪದ ಮಳೆಗರೆಯುತ್ತಾನೆ. ರಾಮನು ಜೀವಂತನಾಗಿರುವಾಗ ತಾನು ಸಿಂಹಾಸನವನ್ನು ಏರಲು ಒಪ್ಪುವುದಿಲ್ಲವೆನ್ನುತ್ತಾನೆ. ಮನೆಯ ಸತ್ಕೀರ್ತಿಗೆ ಭಂಗವನ್ನು ತಂದು ತನಗೂ ಸ್ವಂತಕ್ಕೂ ಅಗೌರವವನ್ನು ತಂದಿದ್ದೀಯೆ ಎಂದೂ ತುಂಬಲಾರದ ಕೆಡಕುಂಟು ಮಾಡಿದೆ ಎಂದೂ ಆಕ್ಷೇಪಿಸಿದನು. ತಾಯ ಇಚ್ಛಾವರ್ತನೆಗಾಗಿ ತೆರಬೇಕಾಗಿರುವ ಬೆಲೆ ದುರ್ಭರವಾದ್ದು. ಭರತನು ಕೌಸಲ್ಯೆಯನ್ನು ಹೋಗಿ ಕಾಣುತ್ತಾನೆ. ಈಗ ನಡೆದಿರುವುದಕ್ಕಾಗಿ ಆಕೆಯ ಕ್ಷಮೆ ಬೇಡುತ್ತಾನೆ. ಈ ಘಟನೆಗಳಲ್ಲಿ ತನ್ನ ಭಾಗ ಏನೂ ಇಲ್ಲವೆಂದೂ ತನ್ನ ಭಕ್ತಿ ಪಕ್ಷಪಾತ ಎಂದೆಂದಿಗೂ ಪೂರ್ತಿ ರಾಮನಿಗೇ ಎಂದೂ ನುಡಿಯುತ್ತಾನೆ. ಉತ್ತರಕ್ರಿಯೆಗಳು ಸಾಂಗವಾಗಿ ನೆರವೇರಿದುವು. ಪುರೋಹಿತರೂ ಮಂತ್ರಿಗಳೂ ಅವನು ಸಿಂಹಾಸನವನ್ನು ಏರಬೇಕೆಂದು ಕೇಳಿದಾಗ ಅವನು ಒಪ್ಪಲಿಲ್ಲ. ಪ್ರತಿಯಾಗಿ

ರಾಮನು ಬೀಡುಗೊಂಡಿರುವಲ್ಲಿಗೆ ಹೋಗಿ ತನ್ನ ಜೊತೆಯಲ್ಲಿ ಬಂದು ರಾಜ್ಯಕ್ಕೆ ಹಿಂದಿರುಗುವಂತೆ ಅವನನ್ನು ಒಲಿಸಬೇಕೆಂಬ ತನ್ನ ನಿರ್ಣಯಕ್ಕೆ ಅವರನ್ನು ಒಪ್ಪಿಸಿದನು. ಅರಸುಕುಮಾರರ ತಾಯಿಯರಾದ ಮೂವರು ರಾಣಿಯರೂ ಒಡನೆ ಹೊರಟರು. ತನ್ನ ಪರವಾಗಿ ದುರಾಲಾಚನೆ ಮಾಡಿದ ತನ್ನ ತಾಯವಾತ್ಸಲ್ಯದ ಕಾರಣದಿಂದ ಪ್ರೀತಿಯ ಅಣ್ಣ ಕಾಡಿನಲ್ಲಿ ಅಲೆದಾಡಬೇಕಾಯಿತೆಂದು ಭರತನ ದುಃಖ ಭಾರವಾಯಿತು. ಗುಹನನ್ನು ಕಂಡು ಭರದ್ವಾಜಾಶ್ರಮವನ್ನೂ ದಾಟಿ ಹೋದ. ಚಿತ್ರಕೂಟಕ್ಕೆ ಹೋದರೆ ಅಲ್ಲಿ ವಾಸವಿರುವ ರಾಮನನ್ನು ಕಾಣಬಹುದೆಂದು ಭರದ್ವಾಜರು ದಾರಿ ಸೂಚಿಸಿದರು.

ಸಹೋದರರು ಒಬ್ಬರನ್ನೊಬ್ಬರು ಕಂಡ ಸನ್ನಿವೇಶ ಬಹು ಮೃದುವಾದುದು, ಅಂತಃಕರಣದಿಂದ ಕೂಡಿದ್ದು. ಆದರೆ, ಎಷ್ಟು ಬಗೆಯಲ್ಲಿ ಒಪ್ಪಿಸಲು ಯತ್ನಿಸಿದರೂ ಹಿಂದಿರುಗಲು ರಾಮ ಒಪ್ಪಲಿಲ್ಲ. ತಾನು ಕೊಟ್ಟಿದ್ದ ಮಾತಿನ ಅವಧಿಯೂ ಸಮಯಗಳೂ ನೆರವೇರುವವರೆಗೂ ಹಿಂದಿರುಗಲಾರೆನೆಂದ. ತಾನು ಕೈಕೊಂಡ ನಿರ್ಬಂಧಗಳನ್ನು ಬೇರಾರೂ ತನ್ನ ಮೇಲೆ ಹಾಕಲಿಲ್ಲ, ತಂದೆಯ ಪರವಾಗಿ ತಾನೇ ಕೈಕೊಂಡವು ಎಂದು ಹೇಳಿದ. ಈಗ ಎಲ್ಲರಿಗೂ ಗೊತ್ತಾಯಿತು: ರಾಮನು ಸದ್ಯಕ್ಕೆ ಅಯೋಧ್ಯೆಗೆ ಬರುವುದು ಅಶಕ್ಯವೆಂದು. ಭರತನು ರಾಮನನ್ನು ಬೇಡಿ ಅವನ ಜೊತೆಪಾದುಕೆಗಳು ದಾನಪಡೆದನು. ಆ ಪಾದುಕೆಗಳು ಅಣ್ಣನ ಪ್ರತಿನಿಧಿ ಎಂದೆಣಿಸಿ ಅಯೋಧ್ಯೆಯಲ್ಲಿ ಅವನು ಆಳಲು ಇದರಿಂದ ಶಕ್ಯವಾಗುತ್ತದೆ.ರಾಮನು ಹಿಂದಕ್ಕೆ ಬರುವ ಪರ್ಯಂತವೂ ತಾನು ಅವಕ್ಕೆ ರಾಜಕಾರ್ಯವನ್ನು ನಿವೇದಿಸುವೆ ಎಂದ. ಇನ್ನೊಂದು ನಿರ್ಬಂಧ:[೯] ಹದಿನಾಲ್ಕನೆಯ ವರ್ಷದ ಕೊನೆಯಲ್ಲಿ ರಾಮನು ಹಿಂದಿರುಗದಿದ್ದರೆ ತಾನು ಅಗ್ನಿಪ್ರವೇಶ ಮಾಡುತ್ತೇನೆಂದು ಹೇಳಿದ. ಈ ಒಡಂಬಡಿಕೆ ಭರತನ ಯೋಗ್ಯತೆಯನ್ನು ಸ್ಥಾಪಿಸಿತಲ್ಲದೆ ಅವನಿಗೆ ಮಾನ್ಯತೆಯನ್ನು ತಂದು ಕೊಟ್ಟಿತು. ನಿಜವಾಗಿ ಭರತನ ಭಾವನೆ ಸಾತ್ತ್ವಿಕವಾದ್ದೆಂಬ ಅಂಶದಲ್ಲಿ ಯಾರ ಮನಸ್ಸಿನಲ್ಲಿಯೂ ಯಾವ ತಪ್ಪು ಆಲೋಚನೆಯೂ ಬಾರದಂತೆ ಮಾಡಿತು.

ಭರತ ಹಿಂದಿರುಗುತ್ತಾನೆ. ಅಯೋಧ್ಯೆಗಲ್ಲ. ಹತ್ತಿರದ ನಂದಿಗ್ರಾಮದಲ್ಲಿ ಆಡಳಿತದ ಮುಖ್ಯ ಕಚೇರಿಯನ್ನು ಸ್ಥಾಪಿಸಿ ಹದಿನಾಲ್ಕು ವರ್ಷಗಳ ಕಾಲ

---

[೯] ಇವೊತ್ತಿನ ದೃಷ್ಟಿಕೋನದಿಂದ ಇದು ಸಾರತಃ ಒಂದು ವಿಚಿತ್ರ ತೀರ್ಮಾನ. ರಾಮ ಹೇಗೆ ಇದಕ್ಕೆ ಒಪ್ಪುತ್ತಾನೊ? ಆಗ ಅಯೋಧ್ಯೆಯಲ್ಲಿ ರಾಜನಾರು?

ಅಯೋಧ್ಯೆಯನ್ನು ವಿವೇಕದಿಂದಲೂ ಚೆನ್ನಾಗಿಯೂ ಆಳುತ್ತಿದ್ದನು. ಅಷ್ಟು ಕಾಲವೂ ಭರತನು ರಾಮನ ಪ್ರತಿನಿಧಿಯಂತೆ ನಡೆದುಕೊಳ್ಳುತ್ತಾನೆ.

ಚಿತ್ರಕೂಟ ಅಯೋಧ್ಯೆಗೆ ತುಂಬಾ ಹತ್ತಿರವಾಗಿದೆಯೆಂದು ಆಲೋಚಿಸಿ ರಾಮನು ಇನ್ನಷ್ಟು ತೆಂಕಲಿಗೆ ಪ್ರಯಾಣ ಮಾಡುತ್ತಾನೆ. ಒಂದು ರಾತ್ರಿಯ ಮಟ್ಟಿಗೆ ಅತ್ರಿಯ ಆಶ್ರಮದಲ್ಲಿ ಉಳಿದಾಗ ಋಷಿಪತ್ನಿ ಅನಸೂಯೆ ಸೀತೆಯನ್ನು ಆದರಿಸಿ ಹರಸುತ್ತಾಳೆ. ಮಾರನೆಯ ಬೆಳಿಗ್ಗೆ ಇನ್ನೂ ದಕ್ಷಿಣಕ್ಕೆ ಪ್ರಯಾಣ ಮಾಡುತ್ತಾರೆ. ಅಯೋಧ್ಯಾ ಕಾಂಡದ ಕತೆ ಮುಗಿಯುತ್ತದೆ. ಈ ಕಾಂಡ ರಾಮಾಯಣದಲ್ಲಿ ದೊಡ್ಡದು. ಅಲ್ಲಿನ ಮಾನವೀಯತೆ ಅತಿಶಯವಾದುದು. ಇಂದಿನ ಬಳಕೆ ಪ್ರಯೋಗದಲ್ಲಿ ಒಂದು ರಾಜ ಮನೆತನವನ್ನು ಕುರಿತ ಅತ್ಯುತ್ತಮವಾದ ಒಂದು ಸಾಕ್ಷಿಚಿತ್ರ ಅದು.

ಅರಣ್ಯಕಾಂಡದ ಸಂಗತಿಗಳು ಋಷಿಗಳ ಸಂದರ್ಶನ, ರಾಕ್ಷಸರ ನಾಶಕ್ಕೆ ಸಂಬಂಧಿಸಿ ದಾರಿ ಉದ್ದಕ್ಕೂ ನಡೆದ ಸಂಗತಿಗಳ ಮತ್ತು ಸಾಹಸಗಳ ಶ್ರೇಣಿ. ರಾಮ ಸೀತೆಯರಿಗೆ ತಮ್ಮ ಅರಮನೆಯ ಸುಖಸೌಕರ್ಯಗಳು ಇಲ್ಲಿ ಇಲ್ಲವೆಂಬುದು ಮರೆತುಹೊಗುತ್ತದೆ. ನಷ್ಟ, ಕಷ್ಟ ತೋರುವುದಿಲ್ಲ. ಪ್ರಕೃತಿಯ ಸೊಬಗಿನ ನಡುವೆ ಸಂತೋಷದಲ್ಲಿ ಕಾಲಕಳೆಯುತ್ತಾರೆ. ಬದುಕು ಸೀತೆಗೆ ಅಲ್ಲಿ ಸುಖವಾಗಿರುತ್ತದೆ. ಗಂಡನ ಜೊತೆಯಲ್ಲಿ ಇರುವವರೆಗೂ ಇನ್ನೇನಿದೆ ಏನಿಲ್ಲ ಎಂಬುದರ ಚಿಂತೆ ಆಕೆಗಿಲ್ಲ. ದಾರಿಯಲ್ಲಿ ಶಾಂತಿಭಂಗ ಮಾಡುತ್ತಿದ್ದ ವಿರಾಧ ಮತ್ತು ಇತರರ ನಾಶವಾಗುತ್ತದೆ. ಶರಭಂಗರ ಆಶ್ರಮದಲ್ಲಿ ರಾಮನು ಬೀಡು ಬಿಡಬೇಕೆಂದು ಬಯಸುತ್ತಾನೆ. ಅವರು ಹತ್ತಿರದ ಸುತೀಕ್ಷ್ಣರ ಆಶ್ರಮಕ್ಕೆ ಹೋಗಬೇಕೆಂದು ನಿರ್ದೇಶಿಸುತ್ತಾರೆ. ಮುಂದಿನ ೧೦-೧೨ ವರ್ಷಗಳ ಕಾಲ ಇವರು ತಂಗಿದ್ದು,ಸುತ್ತಾಡಿದ್ದು ಮತ್ತು ಆ ಸುತ್ತಮುತ್ತಲ ಪ್ರದೇಶದಲ್ಲಿ ಎನ್ನಿಸುತ್ತದೆ.

ಸುತೀಕ್ಷ್ಣರ ಆಶ್ರಮದಿಂದ ಇನ್ನೂ ಕೆಳಗೆ ಸಂಚಾರ ಮಾಡುತ್ತಾರೆ. ಈ ಪ್ರಯಾಣದಲ್ಲಿ ಅಗಸ್ತ್ಯರ ಆಶ್ರಮಕ್ಕೆ ಹೋದ್ದನ್ನು ಕವಿ ವಿಶೇಷವಾಗಿ ಚಿತ್ರಿಸುತ್ತಾನೆ. ಅಗಸ್ತ್ಯರು ಅವನಿಗೆ ಒಂದು ಖಡ್ಗವನ್ನು (!) ಪ್ರಸಾದವಾಗಿ ಕೊಡುತ್ತಾರೆ. ಗೋದಾವರಿಯ ದಡದಲ್ಲಿ ಜನಸ್ಥಾನಕ್ಕೆ ಹೋಗಿ ಅಲ್ಲಿ ನೆಲಸಬೇಕೆಂದೂ ಎಲ್ಲ ರೀತಿಯಲ್ಲಿಯೂ ಅದು ವಾಸಕ್ಕೆ ತಕ್ಕುದೆಂದೂ ತಿಳಿಸುತ್ತಾರೆ. ಅಲ್ಲಿಗೂ ಹೋಗಿ ಸ್ವಲ್ಪ ಕಾಲ ಸುಖವಾಗಿರುತ್ತಾರೆ. ಈ ಕಾಲ ಸ್ವಲ್ಪ ಹೆಚ್ಚು ಕಡಿಮೆ ವನವಾಸದ ಕಡೆ ಕಡೆಯ ವರ್ಷಗಳು. ಶೂರ್ಪನಖಿಯ ಕಣ್ಣಿಗೆ ಈ ಸೋದರರು ಬಿದ್ದದ್ದು, ನಡೆದ ಸಂಗತಿಗಳು ಒಂದು ಉತ್ಕಟತೆಗೆ ಬರುತ್ತವೆ. ರಾಮನನ್ನು ಕಂಡು

ಅವಳು ಮೋಹಗೊಳ್ಳುತ್ತಾಳೆ. ಸೀತೆಗೆ ಬದಲಾಗಿ ತನ್ನನ್ನು ಹೆಂಡತಿಯಾಗಿ ಸ್ವೀಕರಿಸಬೇಕೆಂದು ಬೇಡುತ್ತಾಳೆ. ಒಂದು ಕ್ಷಣಕಾಲ ವಿನೋದಕ್ಕಾಗಿ ಸೋದರರು ಇವನು ಅವನಲ್ಲಿಗೆ, ಅವನು ಇವನಲ್ಲಿಗೆ ಅವಳನ್ನು ಒಲಿಯಲು ಕಳಿಸಿ ಆಡಿಸುತ್ತಾರೆ. ಸೀತೆಗೆ ಅಪಾಯ ತರುತ್ತೇನೆಂದು ಅವಳು ಬೆದರಿಗೆ ಹಾಕಿದಾಗ ಅವಳನ್ನು ವಿರೂಪಗೊಳಿಸಿ ಕಳಿಸಿಬಿಡುತ್ತಾರೆ. ಶೂರ್ಪನಖಿ ರಾವಣನ ತಂಗಿ. ಈ ಗಡಿಪ್ರದೇಶದಲ್ಲಿ ರಾವಣನ ಅಧಿಕಾರಿಯಾಗಿ ಸುಮಾರು ಖರನಿದ್ದನು. ಶೂರ್ಪನಖಿಯ ವರದಿಗಳಿಂದ ಖರನಿಗೆ ಕೋಪವುಂಟಾಯಿತು. ೧೪,೦೦೦ ಮಂದಿ ರಾಕ್ಷಸರುಳ್ಳ ತನ್ನ ಸೈನ್ಯವನ್ನು ತೆಗೆದುಕೊಂಡು ರಾಮನ ಮೇಲೆ ಅವನು ಏರಿ ಹೋಗುತ್ತಾನೆ. ಏಕಾಂಗಿಯಾಗಿ ನಿಂತು ರಾಮನು ಆ ಸಮಸ್ತ ಸೇನೆಯನ್ನೂ ನಾಶ ಮಾಡುತ್ತಾನೆ.

ಶೂರ್ಪನಖಿ ಸುಮ್ಮನಿರುವ ಹೆಂಗಸಲ್ಲ. ನಡೆದ ಸಂಗತಿಗಳನ್ನೆಲ್ಲ ರಾವಣನಲ್ಲಿ ಹೋಗಿ ತಿಳಿಸಿ ಆಕ್ಷೇಪಿಸಲು ತ್ವರೆ ಮಾಡಿದಳು; ರಾಮನನ್ನು ಶಿಕ್ಷಿಸಬೇಕೆಂದು ಒತ್ತಾಯಿಸಿದಳು – ತನಗೆ ಮಾಡಿದ ಅಪಚಾರಕ್ಕೆ ಮಾತ್ರವಲ್ಲ, ಖರನನ್ನೂ ಅವನ ಸೈನ್ಯವನ್ನೂ ನಾಶ ಮಾಡಿದುದಕ್ಕಾಗಿ ಕೂಡ. ಸೀತೆ ಅತ್ಯಂತ ಸುಂದರಿ; ರಾಮನಿಗಿಂತ ರಾವಣನಿಗೆ ಹೆಚ್ಚು ತಕ್ಕವಳು ಎಂದು ಅವಳು ಮಾಡಿದ ವರ್ಣನೆ ರಾವಣನಿಗೆ ಒಂದು ಹೆಚ್ಚಿನ ಉತ್ತೇಜನ ಕ್ರಿಯೆಯಾಗುತ್ತದೆ. ಉಪಾಯ ಹೂಡಿ ಅಣ್ಣತಮ್ಮಂದಿರು ಬೇರೆಯಾಗಿರುವಾಗ ಸೀತೆಯನ್ನು ಹೊತ್ತು ತರಲು ರಾವಣನು ಒಂದು ತಂತ್ರವನ್ನು ಆಲೋಚಿಸಿದನು. ತನ್ನ ಸೋದರಮಾವ– ಮಾರೀಚ– ಆ ಹತ್ತಿರದಲ್ಲಿಯೇ ವಾಸಮಾಡುತ್ತಿದ್ದನು.

ರಾವಣನು ಅವನ ಬಳಿಗೆ ಹೋಗಿ ಆ ತಂತ್ರ ಪ್ರಯೋಗಕ್ಕಾಗಿ ಅವನ ಮೇಲೆ ಒತ್ತಾಯ ಹಾಕಿದನು. ಚೆಲುವಾದ ಬಂಗಾರದ ಚರ್ಮವುಳ್ಳ ಚುಕ್ಕೆ ಚುಕ್ಕೆಯ ಜಿಂಕೆಯ ಹಾಗೆ ಮಾರೀಚನು ಪರ್ಣಶಾಲೆಯ ಹತ್ತಿರ ಸುಳಿದಾಡಬೇಕು,ಸೀತೆ ಅದನ್ನು ಬಯಸುವಂತೆ ಮಾಡಬೇಕು, ರಾಮ ಲಕ್ಷ್ಮಣರು ಅದನು ಅಟ್ಟಿಕೊಂಡು ತಕ್ಕಷ್ಟು ದೂರ ಹೋದಾಗ ತಾನು ಪರ್ಣಶಾಲೆಯನ್ನು ಹೊಕ್ಕು ಸೀತೆಯನ್ನು ಹೊತ್ತುಕೊಂಡು ಹೋಗುವುದು ಎಂದು ತಿಳಿಸಿದ್ದನು. ಈ ಕಾರ್ಯ ಬೇಡೆಂದು ಮಾರೀಚ ಎಷ್ಟೋ ಹೇಳಿದ. ರಾವಣನ ಸ್ವಂತ ಜೀವಕ್ಕೆ ಈ ಕಾರ್ಯ ಅಪಾಯ ತರುವುದೆಂದೂ ಅವನ ವಂಶನಾಶಕ್ಕೂ ರಾಜ್ಯನಾಶಕ್ಕೂ ಇದು ಕಾರಣವಾಗುವುದೆಂದೂ ಎಷ್ಟು ಹೇಳಿದರೂ ಪ್ರಯೋಜನವಾಗಲಿಲ್ಲ. ತನ್ನನ್ನೇ ಕೊಲ್ಲುವ ಬೆದರಿಕೆ ತಟ್ಟಿದಾಗ ಒಪ್ಪಿಕೊಳ್ಳಬೇಕಾಯಿತು.

ರಾಕ್ಷಸನು ಆಲೋಚನೆ ಮಾಡಿದಂತೆ ಎಲ್ಲವೂ ರೂಪಗೊಳ್ಳುತ್ತದೆ. ಅಂಥ ಚೆಲುವಾದ ಜಿಂಕೆಯನ್ನು ನೋಡಿ ಸೀತೆಗೆ ಅದರ ಬಗೆಗೆ ಬಯಕೆ ಉಂಟಾಗುತ್ತದೆ. ಬದುಕಿರುವಂತೆ ಕೊಂಡು ತನ್ನಿ ; ಸತ್ತರೂ ತನ್ನಿ ಎಂದು ಹೇಳಿದಳು. ಲಕ್ಷ್ಮಣನಿಗೆ ಸಂಶಯಗಳಿರುತ್ತವೆ. ಸ್ವಲ್ಪ ಹೆಚ್ಚು ಕಡಿಮೆ ಇದು ಮಾರೀಚನ ಮಾಯೋಪಾಯವೇ ಇರಬೇಕು ಎಂಬುದು ಅವನ ಸಂಶಯ. ಅಣ್ಣ ಅತ್ತಿಗೆಯರಿಗೆ ಇದು ಒಪ್ಪಿಕೆಯಾಗಲಿಲ್ಲ. ಕ್ಷಣಕಾಲ ರಾಮನಿಗೂ ಇದರ ಆಕರ್ಷಣೆಯಾಗುತ್ತದೆ. ರಾಮನ ಮನಸ್ಸು ಈ ಕಡೆಗೆ ನಟ್ಟಿದೆಯೆಂದು ಮಾರೀಚನಿಗೆ ಗೊತ್ತಾಗಿ ತುಂಬಾ ದೂರ ಅವನನ್ನು ಹಿಂಬಾಲಿಸಿ ಕಾಡಿನ ಒಳಪ್ರದೇಶಗಳಲ್ಲಿಗೆ ಅಟ್ಟಿಸಿಕೊಂಡು ಬರುವಂತೆ ಮಾಡುತ್ತಾನೆ. ಇನ್ನು ಹೆಚ್ಚು ಮುಂದೆ ಹೋಗಿ ಜಿಂಕೆಯನ್ನು ಹಿಡಿಯುವುದು ಅಶಕ್ಯವೆಂದು ತಿಳಿದಾಗ ರಾಮನು ಬಾಣಪ್ರಯೋಗ ಮಾಡಿದ ; ಜಿಂಕೆ ಸತ್ತು ಬೀಳುತ್ತದೆ. ಕೆಳಗೆ ಬೀಳುವಾಗ ಜಿಂಕೆ ರಾಕ್ಷಸನಾಗುತ್ತದೆ. ಇನ್ನೂ ಒಂದಾಗುತ್ತದೆ: ರಾಮನ ಧ್ವನಿಯನ್ನು ಅನುಕರಿಸಿ ರಾಮನ ಸಹಾಯಕ್ಕೆ ಓಡಿಬರುವಂತೆ ಮಾರೀಚನು ಲಕ್ಷ್ಮಣನನ್ನು ಕೂಗಿ ಕರೆಯುತ್ತಾನೆ. ಲಕ್ಷ್ಮಣನಿಗೆ ನಿಜವಾಗಿ ಗೊತ್ತು – ಅದು ರಾಮನ ಧ್ವನಿಯಲ್ಲವೆಂದು. ಭೂಮಿಯ ಮೇಲಿನವರಾಗಲಿ, ಸ್ವರ್ಗದವರಾಗಲಿ ಯಾರಿಗೂ ಬಿಲ್ಲುಗಾರಿಕೆಯಲ್ಲಿ ರಾಮನಿಗೆ ಸಮನಾದವರಿಲ್ಲವೆಂದೂ ಅವನನ್ನು ಎದುರಿಸಿ ನಿಲ್ಲಬಲ್ಲವರಿಲ್ಲವೆಂದೂ ಲಕ್ಷ್ಮಣನಿಗೆ ಗೊತ್ತಿತ್ತು. ಆದರೆ ಸೀತೆಯು ಚಿಂತೆ, ಶೋಕ ದುರ್ಭರವಾಯಿತು; ಆಶಾರಹಿತಳಾಗಿದ್ದಳು. 'ಅಣ್ಣನ ನೆರವಿಗೆ ತಕ್ಷಣ ಹೋಗಬೇಕು. ಲಕ್ಷ್ಮಣ; ಇದು ಸಾವುಬದುಕುಗಳ ಪ್ರಸಂಗ' ಎನ್ನುತ್ತಾಳೆ. ಬೈಗುಳ ಸುರಿಮಳೆಯಾಗುತ್ತದೆ; ಬಳಸುವ ಮಾತುಗಳು ಕ್ರೂರವಾಗಿರುತ್ತವೆ. ಅಂಥ ಆಪಾದನೆಗಳಿಗೆ ಒಳಗಾಗಿ ಲಕ್ಷ್ಮಣನು ಆಶ್ರಮದಲ್ಲಿ ಉಳಿಯಲಾಗಲಿಲ್ಲ. ವ್ಯಥೆಯಿಂದ ಭಾರವಾದ ಮನಸ್ಸಿನಿಂದ ಆಕೆಯನ್ನು ವನದೇವತೆಗಳ ರಕ್ಷಣೆಗೊಪ್ಪಿಸಿ ಅಂಥ ಅಮೂಲ್ಯವಾದ ಜೀವನವನ್ನು ಆ ಶಕ್ತಿಗಳು ಕಾಪಾಡಬೇಕೆಂದು ಪ್ರಾರ್ಥಿಸಿ ಹೋಗುತ್ತಾನೆ.

ಅವನು ಸೀತೆಯನ್ನು ಬಿಟ್ಟು ಹೋದ ಕೂಡಲೆ ಪರಿವ್ರಾಜಕನ ವೇಷದಲ್ಲಿ ರಾವಣನು ಪರ್ಣಶಾಲೆಗೆ ಬರುತ್ತಾನೆ. ಕೇವಲ ಮನುಷ್ಯನಾದ ರಾಮನಿಗಿಂತ ನೀನು ನನಗೆ ಹೆಚ್ಚು ಯೋಗ್ಯಳಾದ ಮಡದಿಯಾಗುವೆ. ಇನ್ನು ಗಂಡನನ್ನು ಕುರಿತ ಎಲ್ಲ ಯೋಚನೆಗಳನ್ನೂ ಬಿಟ್ಟುಬಿಡು ಎಂದು ಅವಳಿಗೆ ಹೇಳುತ್ತಾನೆ. ತನ್ನ ಗಂಡನೂ ಮೈದುನನೂ ಇಲ್ಲದಿದ್ದ ಸಮಯವನ್ನು ಆಶ್ರಯಿಸಿ ಕಳ್ಳನಂತೆ ತಾನಿರುವ ಸ್ಥಳಕ್ಕೆ ಬಂದು ಈ ರೀತಿ ಮಾಡುವುದು ಹೇಡಿಯ ಕೆಲಸವೆಂದು

ಸೀತೆ ಕೋಪದಿಂದ ರಾವಣನನ್ನು ಧಿಕ್ಕರಿಸಿ ನುಡಿಯುತ್ತಾಳೆ. ಆಗ ಹತ್ತು ತಲೆಯ ತನ್ನ ಆಕೃತಿಯನ್ನು ಧರಿಸಿ ಅವಳಿಗೆ ಭೀತಿ ಉಂಟುಮಾಡಿ ರಾವಣನು ತನ್ನ ರಥಕ್ಕೆ ಅವಳನ್ನು ಎತ್ತಿಕೊಂಡು ಹೋಗುತ್ತಾನೆ. ರಥವನ್ನು ಅಲ್ಲಿಂದ ನಡಸಿಕೊಂಡು ಹೋಗುವಾಗ್ಗೆ ಆಕೆ ಕೂಗುಗಳಿಕ್ಕುವಳು. ಸುತ್ತಲಿದ್ದ ಎಲ್ಲರ ಗಮನಕ್ಕೂ ಕರುಣಾಜನಕವಾದ ಆಕೆಯ ಗೋಳುಕರೆ–ತನ್ನನ್ನು ರಕ್ಷಿಸಬೇಕೆಂದೂ ರಾಮಲಕ್ಷ್ಮಣರಿಗೆ ಈ ಸಂಗತಿ ತಿಳಿಯಪಡಿಸಬೇಕೆಂದೂ ತನ್ನ ಇಷ್ಟಕ್ಕೆ ವಿರುದ್ಧವಾಗಿ ರಾಕ್ಷಸನು ತನ್ನನ್ನು ಬಲಾತ್ಕಾರದಿಂದ ಎತ್ತಿಕೊಂಡು ಹೋಗುತ್ತಿದ್ದಾನೆ ಎಂದು ತಿಳಿಸಬೇಕೆಂದೂ ಹೇಳುತ್ತಿರುವುದು – ಕೇಳಿಸುತ್ತದೆ. ದಶರಥನ ಸ್ನೇಹಿತನಾಗಿದ್ದ ಜಟಾಯುವೆಂಬ ವಯೋವೃದ್ಧ ಗೃಧ್ರರಾಜನು ಈ ಕೂಗುಗಳನ್ನು ಕೇಳಿ ರಾವಣನನ್ನು ತಡೆದು ಅವನನ್ನು ಯುದ್ಧಕ್ಕೆ ಕರೆಯಲು ರಾವಣನಿಗೆ ಪೆಟ್ಟು ಬೀಳುವುದು. ಕೋಪಗೊಂಡ ರಾವಣನು ಕೊನೆಗೆ ಜಟಾಯುವಿನ ರೆಕ್ಕೆಗಳನ್ನು ಕತ್ತರಿಸಲು ಅವನು ಶಕ್ತಿ ಕಳೆದುಕೊಂಡು ಕೆಳಗೆ ಬೀಳುವನು. ಸೀತೆಯನ್ನು ಬಲವಾಗಿ ಹಿಡಿದುಕೊಂಡು ದುರ್ಬಲಳಾದ ಆಕೆಯನ್ನು ಲಂಕೆಗೆ[೧೦] ತೆಗೆದುಕೊಂಡು ಹೋದನು.

ಲಂಕೆಗೆ ಸೀತೆಯನ್ನು ಎತ್ತಿಕೊಂಡು ಹೋದವನೇ ತನ್ನ ವಿಲಾಸಕ್ಕಾಗಿ ಕಟ್ಟಿಕೊಂಡಿದ್ದ ರಮ್ಯವಾದ ಸಂಪದ್ಯುಕ್ತವಾದ ಅರಮನೆಯಲ್ಲಿ ಅವಳನ್ನು ಇಳಿಸುತ್ತಾನೆ. ಅವಳು ತನ್ನ ಹೆಂಡತಿಯಾಗಲು ಒಪ್ಪಿದರೆ ತನ್ನಲ್ಲಿರುವ ಎಲ್ಲರ ಮೇಲೂ ಆಕೆ ಅಧಿರಾಣಿಯಾಗುವಳೆಂದೂ ತನ್ನ ಸಮಸ್ತ ಸಂಪತ್ತೂ ಸುಖಭೋಗ ಸೌಕರ್ಯಗಳೂ ಅವಳವಾಗುವುವು ಎಂದೂ ತಿಳಿಸುತ್ತಾನೆ. ಮುಂಚೆಗಿಂತ ಗಟ್ಟಿಯಾಗಿ ಸೀತೆ ಅಳುತ್ತಾಳೆ. ಅವನ ದುರ್ಮಾರ್ಗತೆಯನ್ನು ಹೆಚ್ಚು ಉಗ್ರವಾಗಿ ಜರಿಯುತ್ತಾಳೆ. ತನ್ನ ಜೀವ ಇರುವವರೆಗೂ ರಾಮನ ಸತಿಯಾಗಲ್ಲದೆ ಬೇರೆಯಾಗೆನೆಂದು ಸೀತೆ ನುಡಿದಳು. ರೊಚ್ಚಿಗೆದ್ದ ರಾವಣನು ಅವಳನ್ನು ಸೆರೆ ಇಡಬೇಕೆಂದೂ ಅಗತ್ಯ ಬಿದ್ದರೆ ಹೊಡೆದು ಬಡಿದು ಅವಳು ತನ್ನ ವಶವಾಗುವಂತೆ ಮಾಡಬೇಕೆಂದೂ ಅಪ್ಪಣೆಮಾಡಿದನು. ಅಶೋಕವನವೆಂಬ ಹೆಸರಿನ ತನ್ನ ವಿಲಾಸವನಕ್ಕೆ ಒಯ್ದು ಇಟ್ಟನು. ಅಲ್ಲಿ ಕುರೂಪಿಗಳೂ ಭೀಕರಾಕೃತಿಯವರೂ

---

೧೦ ಸೀತೆಯ ಶೋಕವೂ ಆಕೆ ಇಡುತ್ತಿದ್ದ ಶಾಪಗಳೂ ಎಲ್ಲ ದಿಕ್ಕುಗಳಲ್ಲಿಯೂ ಮೊಳಗುತ್ತವೆ. ರಾವಣನಿಗೆ ತಿಳಿಯದಂತೆ ತನ್ನ ಒಡವೆಗಳಲ್ಲಿ ಕೆಲವನ್ನು ಋಷ್ಯಮೂಕ ಗಿರಿಯ ಮೇಲೆ ಕುಳಿತಿದ್ದ ಒಂದು ಗುಂಪು ಕಪಿಗಳನ್ನು ಕಂಡು ಅವರ ಕಣ್ಣೆದುರಿಗೆ ಬೀಳುವಂತೆ ಸೀತೆ ಹಾಕುತ್ತಾಳೆ.

ಕ್ರೂರಿಗಳೂ ಆದ ಹೆಂಗಸರು ಕಾವಲಿದ್ದರು. ಅವಳು ಮನಸ್ಸನ್ನು ಬದಲಾಯಿಸಲು ರಾವಣನು ಅವಳಿಗೆ ಒಂದು ವರ್ಷಕಾಲ ಅವಧಿ ಕೊಡುತ್ತಾನೆ. ಆಗಲೂ ಅವಳು ಒಪ್ಪದಾದರೆ ಆಕೆಯನ್ನು ಕತ್ತರಿಸಿ ಒಂದು ದಿನ ಬೆಳಿಗ್ಗೆ ತನ್ನ ಉಪಾಹಾರಕ್ಕಾಗಿ ('ಪ್ರಾತರಾಶರಾರ್ಥಂ') ಅಡಿಗೆ ಮಾಡಲಾಗುವುದೆಂದು ತಿಳಿಸುತ್ತಾನೆ.

ಇತ್ತ ಜಿಂಕೆ ರಾಕ್ಷಸನಾಗಿ ಬಿದ್ದು ಸತ್ತುದು, ತನ್ನ ಧ್ವನಿಯನ್ನು ಅನುಕರಿಸಿ ಲಕ್ಷ್ಮಣನನ್ನು ಕರೆದುದು ವಿಪರೀತವಾಗಿ ಕಂಡು ರಾಮನ ಮನಸ್ಸಿನಲ್ಲಿ ಶಂಕೆ ಹುಟ್ಟಿತು. ಪರ್ಣಶಾಲೆಯ ಕಡೆಗೆ ಅವಸರದಿಂದ ಹಿಂದಿರುಗುವಾಗ ದಾರಿಯಲ್ಲಿ ಲಕ್ಷ್ಮಣ ಸಿಕ್ಕುತ್ತಾನೆ. ಚಿಂತಾಕುಲನಾಗಿ ಕುಗ್ಗಿದ ಮನಸ್ಸಿನಲ್ಲಿ ಅವನಿರುವುದು ಕಾಣುತ್ತದೆ. ನಡೆದ ಸಂಗತಿ ಕಿವಿಗೆ ಬೀಳುತ್ತದೆ. ಸೀತೆಯನ್ನು ಏಕಾಂಗಿಯಾಗಿ ರಕ್ಷಣೆಯಿಲ್ಲದೆ ಬಿಟ್ಟು ಬಂದುದಕ್ಕಾಗಿ ಲಕ್ಷ್ಮಣನನ್ನು ಅವನು ನಿಷ್ಠುರವಾಗಿ ಆಕ್ಷೇಪಿಸಿದನು. 'ಹೆಂಗಸು, ಏನಾದರೂ ಹೇಳಬಹುದು, ಅದನ್ನು ಕೇಳಬಾರದಾಗಿತ್ತು; ಆಗಬಾರದ್ದಾಗಿದೆ' ಎಂದನು. ಪರ್ಣಶಾಲೆಯಲ್ಲಿ ಸೀತೆ ಇಲ್ಲದಿರುವುದು ಕಂಡಿತು. ಸುತ್ತಲೂ ಎಲ್ಲಿಯೂ ಸುಳಿವಿಲ್ಲ. ರಾಮನು ಹುಚ್ಚಾದನು. ಅವನನ್ನು ಸಂತೈಸಲಾಗಲಿಲ್ಲ. ಲಕ್ಷ್ಮಣನ ಕಾರ್ಯ ಕಠಿಣವಾಯಿತು. 'ನೀನು ಸ್ವಭಾವತಃ ಧೈರ್ಯಶಾಲಿ; ಸ್ವಾಸ್ಥ್ಯ, ಸಂಯಮಗಳಿಗೆ ಹೆಸರಾದವನು' ಎಂದು ಅವನಿಗೆ ನೆನಪುಕೊಟ್ಟು ಧೀರನಾದ ಆತನು ಅವಳನ್ನು ಹುಡುಕಿ ಪುನಃ ಪಡೆಯಬೇಕೆಂದನು. ಸ್ವಲ್ಪ ಸಮಯದಲ್ಲಿಯೇ ಸಾಯುವ ಸ್ಥಿತಿಯಲ್ಲಿ ಬಿದ್ದಿದ್ದ ಜಟಾಯುವನ್ನು ಅವರು ಕಂಡರು. ರಾವಣನಿಗೆ ವಿರುದ್ಧವಾಗಿ ಸೀತೆಯನ್ನು ರಕ್ಷಿಸಲು ಹೋಗಿ ಅವನಿಗೆ ಆ ಗತಿ ಬಂದಿದ್ದುದು ಗೊತ್ತಾಯಿತು. ಏನು ನಡೆಯಿತೆಂಬುದಕ್ಕೆ ಇಲ್ಲೊಂದು ಸೂಚಿಕೆ ಸಿಕ್ಕಿತು. ಜಟಾಯು ಮೃತವಾಗಲು, ರಾಮಲಕ್ಷ್ಮಣರು ಅವನಿಗೆ ಪಿತೃಕಾರ್ಯವೆಂಬಂತೆ ಅಗ್ನಿ ಸಂಸ್ಕಾರ ಮಾಡಿದರು.

ಅಲ್ಲಿಂದ ಮುಂದುವರಿಯುತ್ತಿರುವಾಗ ಭೂತದಂತಹ ಒಂದು ಪ್ರಾಣಿ ಅವರಿಗೆ ಅಡ್ಡ ಬರುತ್ತದೆ. ಭೀಷಣ ಆಕೃತಿ, ತಲೆಮುಖ ಹೊಟ್ಟೆಯಲ್ಲಿ ಅಡಗಿತ್ತು; ದೀರ್ಘವೂ ಬಲಿಷ್ಠವೂ ಆದ ತೋಳುಗಳನ್ನು ಚಾಚಿ ಕೈಗೆ ಸಿಕ್ಕಿದ ಎಲ್ಲವನ್ನೂ ಹಿಡಿದು ಕಬಳಿಸುತ್ತಿತ್ತು. ರಾಮಲಕ್ಷ್ಮಣರು ಆ ರಾಕ್ಷಸ ಕೈಗಳಿಗೆ ಸಿಕ್ಕುತ್ತಾರೆ. ಕಬಂಧನ ಎರಡೂ ತೋಳನ್ನು ಅವರು ಕತ್ತರಿಸಿ ಹಾಕುತ್ತಾರೆ. ಆಗ ಕಬಂಧ ಇವರಾರೆಂಬುದನ್ನು ಕೇಳಲು ಇವರು ತಮ್ಮ ಹೆಸರುಗಳನ್ನು ಹೇಳುತ್ತಾರೆ. ಅವನು ತನ್ನ ಹೆಸರು ದನುವೆಂದೂ ತನ್ನ ಯಾವುದೊ ದುರ್ನಡತೆಗಾಗಿ ಅವನ

ಮೇಲೆ ಒಂದು ಶಾಪ ಎರಗಿತೆಂದೂ ರಾಮಲಕ್ಷ್ಮಣರು ಬಂದು ತನ್ನ ತೋಳನ್ನು ಕತ್ತರಿಸಿದಾಗ ಆ ಶಾಪ ನಿವಾರಿತವಾಗುವುದೆಂದು ತಿಳಿಯ ಬಂದಿತ್ತೆಂದೂ ಹೇಳಿದನು. ಶಾಪ ನಿವಾರಣೆ ಮಾಡಿದುದಕದಕಾಗಿ ತನ್ನ ಕೃತಜ್ಞತೆಯನ್ನು ಸೂಚಿಸಿದನು. ಅವನ ಸಲಹೆಯಂತೆ ಅವನಿಗೆ ಅಗ್ನಿ ಸಂಸ್ಕಾರ ಮಾಡಿದರು. ಅವನಿಗೆ ಒಂದು ದಿವ್ಯಾಕೃತಿ ಬಂದಿತು. ಅವರು ಹೋಗಿ ಸುಗ್ರೀವನ ಸಹಾಯವನ್ನು ಪಡೆಯಬೇಕೆಂದೂ ನಾಲ್ವರು ಹಿಂಬಾಲಕರೊಡನೆ ಪಂಪಾಸರೋವರದ ಬಳಿ ಋಷ್ಯಮೂಕ ಗಿರಿಯಲ್ಲಿ ಸುಗ್ರೀವನು ಮರೆಯಾಗಿದ್ದಾನೆಂದೂ ಹೇಳಿದನು. ಸುಗ್ರೀವನು ಶಕ್ತ, ಅವನಿಗೆ ಸಮಸ್ತ ಪ್ರಪಂಚವೂ ತಿಳಿದಿದೆ; ಎಲ್ಲಿಯೇ ಇರಲಿ, ಸೀತೆಯನ್ನು ಪತ್ತೆ ಹಚ್ಚಲು ಅವನು ಸಹಾಯ ಮಾಡಬಲ್ಲ ಎಂದು ಕಬಂಧನು ತಿಳಿಸಿದನು. ಸುಗ್ರೀವನ ಬಳಿಗೆ ಹೋಗುವ ದಾರಿಯಲ್ಲಿ ಮತಂಗಾಶ್ರಮ; ಅಲ್ಲಿ ಶಬರಿ ಎಂಬಾಕೆಯಿದ್ದಾಳೆ; ಸುಗ್ರೀವನನ್ನು ಕಾಣುವ ಮುಂಚೆ ಆಕೆಯ ಆತಿಥ್ಯವನ್ನು ಸ್ವೀಕರಿಸಿ ಎಂದು ಹೇಳುತ್ತಾನೆ.

ಈ ನಿರ್ದೇಶವನ್ನು ಅನುಸರಿಸಿ ರಾಮಲಕ್ಷ್ಮಣರು ಪಂಪಾ ಸರಸ್ಸಿಗೆ ಹೋಗಿ ವೃದ್ಧ ಶ್ರಮಣಿಯನ್ನು ಕಾಣುತ್ತಾರೆ. ಆಕೆ ಅವರನ್ನು ಪ್ರೀತಿಯಿಂದ ಸ್ವಾಗತಿಸಿ ಬಗೆಬಗೆಯ ಹಣ್ಣು ಹಂಪಲನ್ನೂ ಇತರ ವನ್ಯಗಳನ್ನೂ ಕೊಟ್ಟು ಆತಿಥ್ಯ ನೀಡುತ್ತಾಳೆ. ಮಾರನೆಯ ಬೆಳಿಗ್ಗೆ ಅವರ ಅಪ್ಪಣೆ ಪಡೆದು ತನ್ನ ಒಡಲನ್ನು ಅಗ್ನಿಗೆ ಅರ್ಪಣೆ ಮಾಡಿಕೊಳ್ಳುತ್ತಾಳೆ. ಮತಂಗಾಶ್ರಮದಲ್ಲಿ ಸೋದರರು ತಂದೆಗೆ ತರ್ಪಣಾದಿಗಳನ್ನು ಕೊಟ್ಟು ವಿಶ್ರಾಂತಿ ಪಡೆಯುತ್ತಾರೆ. ಸುಗ್ರೀವನನ್ನು ಅರಸಲು ನಿಶ್ಚಯಿಸಿ ಅವನೂ ಅವನ ಜೊತೆಯವರೂ ಇರುವಲ್ಲಿಗೆ ಲಕ್ಷ್ಮಣನು ಹೋಗತಕ್ಕದ್ದೆಂದು ತೀರ್ಮಾನವಾಗುತ್ತದೆ. ಇಲ್ಲಿಗೆ ಅರಣ್ಯ ಕಾಂಡದ ಕಥೆ ಮುಗಿಯುತ್ತದೆ. ಎಂದರೆ, ಸುಮಾರು ಹನ್ನೆರಡು ವರ್ಷಗಳ ವನವಾಸದ ಕಾಲ ಇಲ್ಲಿಗೆ ಸುಮಾರು ಮುಗಿವಂತಾಗಿರುತ್ತದೆ. ಅರಣ್ಯಗಳಲ್ಲಿ ಸೋದರರು ಸುತ್ತಾಡಿರುತ್ತಾರೆ. ಮುನಿಗಳನ್ನೂ ಋಷಿಗಳನ್ನು ಆಶ್ರಮಗಳನ್ನೂ ನೋಡಿಕೊಂಡು ಬಂದಿರುತ್ತಾರೆ. ಅಲ್ಲಿಯ ಸಂಸ್ಕೃತಿ ಜೀವನರೀತಿ ಅವರ ಮನಸ್ಸಿಗೆ ಆ ಬಗೆಯ ಜೀವನದ ಸ್ವರೂಪವನ್ನು ತಿಳಿಸಿರುವುದಲ್ಲದೆ ಆರ್ಯಸಂಸ್ಕೃತಿಯ ಈ ಪ್ರತಿನಿಧಿಗಳ ಅಗತ್ಯಗಳೇನು ಆಕಾಂಕ್ಷೆಗಳೇನು, ದಂಡಕಾರಣ್ಯದಲ್ಲಿ ತಪಸ್ಸನ್ನು ಆಚರಿಸುತ್ತ ಆತ್ಮಶುದ್ಧಿ ಸಂಪಾದಿಸತೊಡಗಿರುವವರ ಕಷ್ಟ ಸುಖಗಳೇನು ಎಂಬುದೂ ಗೊತ್ತಾಗುತ್ತದೆ. ಇಂಥ ತಪಶ್ಚರ್ಯೆಯಲ್ಲಿ ತೊಡಗಿ ಮಗ್ನರಾಗಿರುವವರಿಗೆ ರಾಕ್ಷಸರಿಂದ ರಕ್ಷಣೆಯ ಅಗತ್ಯವಿರುವುದು ಕಂಡು ಬರುತ್ತದೆ. ಈ ಮುಂಚೆ

ವಿಶ್ವಾಮಿತ್ರನೂ ಇಂಥ ರಕ್ಷಣೆಯನ್ನೇ ಬಯಸಿದ್ದು; ಕೇಳಿದ್ದು. ದೇಶದ ಈ ಭಾಗ ದಟ್ಟ ಕಾಡು. ಇಲ್ಲಿ ರಾಕ್ಷಸರ ಉಪಟಳ ಇನ್ನಷ್ಟು ಹೆಚ್ಚಾಗಿ ಹರಡಿತ್ತು. ಅವರು ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ಶಕ್ತರಾಗಿ ಆ ಪ್ರದೇಶಗಳಲ್ಲೆಲ್ಲ ಕಾಟ ಕೊಡುತ್ತಿದ್ದರು; ಮಂಡಲಗಳನ್ನೂ ಕೇಂದ್ರಗಳನ್ನೂ ರಚಿಸಿಕೊಂಡಿದ್ದರು. ಆಶ್ರಮಗಳಿಗೆ ನಡುವೆ ಸಂಪರ್ಕ ಸಂಚಾರಗಳೇನೊ ಧಾರಾಳವಾಗಿ ನಡೆಯುತ್ತಿದ್ದವು. ಅಗಸ್ತ್ಯರ ಆಶ್ರಮದವರೆಗೂ ಶಬರಿಯಿದ್ದ ಮತಂಗಾಶ್ರಮದವರೆಗೂ ಅವು ಹಬ್ಬಿದ್ದವು. ಇವರು ಬರುತ್ತಾರೆಂದು, ಏಕೆ ಇನ್ನೂ ಬರಲಿಲ್ಲವೆಂದು ಅಗಸ್ತ್ಯರು ಯೋಚಿಸುತ್ತಿದ್ದರು. ಗುರು ಮತಂಗರು ತಮ್ಮ ಆಶ್ರಮಕ್ಕೂ ಇವರ ಬರವನ್ನು ನಿರೀಕ್ಷಿಸುತ್ತ ತನ್ನ ಕಾಲವನ್ನಪ್ಪಲು, ಅವರು ಬರುವವರೆಗೂ ತಾನು ಉಳಿಯಬೇಕೆಂದು ಗುರು ಶಬರಿಗೆ ಹೇಳಿದ್ದರಂತೆ. ದಂಡಕಾರಣ್ಯದಲ್ಲಿ ಇದ್ದ ಬಹುಕಾಲ ಈ ಋಷಿಗಳ ನಡುವೆಯೇ ಅವರು ಕಳೆದರು. ಮುಖ್ಯ ಅಪಾಯ ಅಲ್ಲಿ ಎದುರುಗೊಳ್ಳಬೇಕಾದ್ದು ರಾವಣನಿಂದ ಉಂಟಾಗುತ್ತಿರುವ ಕೆಡುಕು; ಅದರ ಭೀತಿ. ಅದೇ ರಾಮಾಯಣದ ಎರಡನೆಯ ಕ್ರಿಯಾಕಲ್ಪ; ಮುಖ್ಯಾಂಶ. ಅದನ್ನು ಎದುರಿಸು ಘಟನೆ ಇನ್ನೂ ಸಂಭವಿಸಿರಲಿಲ್ಲ. ಜನಸ್ಥಾನದಲ್ಲಿ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದಾಗ ಋಷಿಗಳ ಕಾರ್ಯವೂ ರಾಮನದೂ ಬೆರೆದು ಒಂದಾಗುತ್ತವೆ.

ಕಿಷ್ಕಿಂಧೆಯಲ್ಲಿ ರಾಮಾಯಣದ ಕಥಾ ಸನ್ನಿವೇಶಕ್ಕೆ ಮೂರನೆಯ ಸಂಗತಿ ಹೀಗೆ ಹೊಸತಾಗಿ ಸೇರಿಕೊಳ್ಳುತ್ತದೆ. ಸುಗ್ರೀವನಿಗೆ ಅಲ್ಲಿ ಸ್ಥಾನ ಸ್ಥಿತಿ[೧೧] ಎರಡೂ ಅಪಹಾರವಾಗಿರುವುದರ ಜೊತೆಗೆ ಅವನ ಹೆಂಡತಿಯ ಅಪಹಾರವೂ ಆಗಿರುತ್ತದೆ. ಸುಗ್ರೀವನಿಗೂ ರಾಮನಿಗೂ ವಡುವೆ ಉಂಟಾದ ಸ್ನೇಹಸಂಬಂಧ ಕಿಷ್ಕಿಂಧಾಕಾಂಡದ ಕಥಾವಸ್ತು ಈವರೆಗೂ ಅಯೋಧ್ಯೆಯ ರಾಜರಿಗೂ ರಕ್ಷಸರಿಗೂ ನಡುವೆ ಉಂಟಾದ ಘರ್ಷಣೆ ವಿಷಯವಾಗಿತ್ತು. ಈಗ ಅದು ರಾಕ್ಷಸರ ಬಲಕ್ಕೆ ವಿರುದ್ಧವಾಗಿ ವಾನರರೊಡನೆ ಬೆಳಸಿದ ಸ್ನೇಹಸಂಬಂಧವೂ ಸೇರುವಂತಾಯಿತು.

---

೧೧ ನ್ಯಾಯ ಪ್ರಕಾರ ಅದಾವುದು? ಕಿಷ್ಕಿಂಧೆಯ ರಾಜ ವಾಲಿ. ಅವನಿಗೆ ಬೆಳೆದ ಮಗ ಅಂಗದನಿರುತ್ತಾನೆ. ಯಾವ ಕಾಲದಲ್ಲಿಯೂ ಸುಗ್ರೀವನು ಯುವರಾಜನಾಗಿದ್ದ ಹಾಗೆ ಕಾಣುವುದಿಲ್ಲ. ತನ್ನನ್ನು ತನ್ನ ತವರುನಾಡಿನಿಂದ ಓಡಿಸಲಾಗಿದೆ; ತನ್ನನ್ನು ಅಟ್ಟಿ ಬೇಟೆಯಾಡಿದ್ದಾನೆ ಎಂಬುದು ಅವನ ಆಕ್ಷೇಪಣೆ. ವಾಲಿಯ ಮೇಲೆ ಜಯಪಡೆದ ಹೊರತು ಎಂದೂ ಸುಗ್ರೀವನಿಗೆ ಅಧಿಕಾರ, ಹಕ್ಕು ಬರವುದಿಲ್ಲ.

ವಾನರ ಸೈನ್ಯದ ಸಹಾಯ ದೊರಕದಿದ್ದರೆ ಸೀತೆ ಇದ್ದ ಸ್ಥಳವನ್ನು ಪತ್ತೆ ಹಚ್ಚುವುದಾಗಲಿ, ಆ ಸ್ಥಳಕ್ಕೆ ಹೋಗಿ ರಾವಣನಂತಹ ಪ್ರಬಲನನ್ನು ಸೋಲಿಸಿ ಅಡಗಿಸುವುದಾಗಲಿ ಕಷ್ಟವಾಗುತ್ತಿತ್ತು. ರಾವಣನ ಶಕ್ತಿ ಸ್ಥಾನ ಅಜೇಯ; ದುರ್ಗಮ. ಲಂಕೆ ಎಂಬ ದ್ವೀಪ ಆತನ ರಾಜಧಾನಿ: ಅಲ್ಲಿ ಅವನ ಶಕ್ತಿ ಸನ್ನಾಹಗಳು ಪ್ರತಿಷ್ಠಿತವಾಗಿದ್ದವು.

ಸುಗ್ರೀವನಿಗೆ, ಅವನ ಜೊತೆಯವರಿಗೆ ಈ ಹೊತ್ತಿಗಾಗಲೆ ಈ ಸೋದರರು ಕಣ್ಣಿಗೆ ಬಿದ್ದಿದ್ದರು. ಮೊದಲು ಸುಗ್ರೀವನಿಗೆ ದಿಗಿಲು. ಇಂಥ ಉದ್ವೇಗ ಉಂಟಾದ ಮೊದಲಿಗೇ ಹನುಮಂತನು ಆತನಿಗೆ ಸಮಾಧಾನ ತರುತ್ತಾನೆ. ಅವರ ಆಕೃತಿಯನ್ನು ನೋಡಿದರೆ ಅವರಿಂದ ತಮಗೆ ಭಯವೇನೂ ಇರಬೇಕಾದ್ದಿಲ್ಲವೆಂದು ಹೇಳಿದ. ಮುಖಲಕ್ಷಣ, ನಡೆ, ವರ್ಣ, ನಿಲವು ಮತ್ತು ನಡವಳಿಕೆ ವಿಶ್ವಾಸಾರ್ಹವಾಗಿದ್ದವು. ಉಳಿದೆಲ್ಲ ಹೇಗೇ ಇರಲಿ, ಮತಂಗಾಶ್ರಮದಲ್ಲಿ ತಾವಿರುವವರೆಗೂ ವಾಲಿಯಿಂದ ಯಾವ ಅಪಾಯವೂ ತಟ್ಟದಲ್ಲವೆ? ಅದನ್ನು ಪ್ರವೇಶ ಮಾಡಿದರೆ ಅವನು ಸಾಯುತ್ತಾನೆಂದು ಶಾಪವಿತ್ತಲ್ಲ? ಹೋಗಿ ಅವರು ಯಾರು, ಅವರು ಇಲ್ಲಿಗೆ ಬಂದ ಉದ್ದೇಶವೇನು ಎಂದು ತಿಳಿದುಬರಬೇಕೆಂದು ಹನುಮಂತನನ್ನು ಸುಗ್ರೀವನು ಕಳಿಸುತ್ತಾನೆ. ರಾಕ್ಷಸರಂತೆಯೇ ವಾನರರೂ ಕಾಮರೂಪಿಗಳು. ಹನುಮಂತನು ಭಿಕ್ಷುವಿನ[೧೨] ವೇಷದಲ್ಲಿ ರಾಮನ ಬಳಿಗೆ ಬರುತ್ತಾನೆ. ಲಲಿತವಾಗಿ ಮೃದುವಾಗಿ, ತುಂಬಾ ಮರ್ಯಾದೆಯಿಂದ, ಆದರೂ ದಿಟ್ಟನಾಗಿ ಹನುಮಂತ ಮಾತನಾಡುತ್ತಾನೆ. ಈ ಪ್ರದೇಶಕ್ಕೆ ಅವರನ್ನು ಕರೆತಂದ ಉದ್ದೇಶವಾವುದು ಎಂದು ವಿಚಾರಿಸುತ್ತಾನೆ. ಅವರಿಂದ ಒಡನೆಯೇ ಉತ್ತರ ಬಾರದಿರಲು ತನ್ನ ಸಂಗತಿಯನ್ನು ವಿವರಿಸುತ್ತಾನೆ. ಸುಗ್ರೀವನ ಕಡೆಯವನಾಗಿ ಬಂದಿದ್ದೇನೆ. ಅವನ ಅಣ್ಣ ವಾಲಿಯ ಭಯದಿಂದ ಅವನ ಪೀಡೆಯನ್ನು ತಪ್ಪಿಸಿಕೊಳ್ಳನು ಇಲ್ಲಿ ಅವನಿದ್ದಾನೆ; ತಮ್ಮೊಡನೆ ಸ್ನೇಹ ಬೆಳಸಲು ಬಯಸುತ್ತಾನೆ ಎಂದನು. ಹನುಮಂತನ ಮಾತು, ನಡವಳಿಕೆ ರಾಮನ ಮನಸ್ಸಿಗೆ ಬರುತ್ತವೆ. ಮಾತಿನಲ್ಲಿನ, ನಡವಳಿಕೆಯಲ್ಲಿನ ಸಂಸ್ಕಾರಗಳನ್ನು ಕುರಿತ ಲಕ್ಷಣಗಳನ್ನು ನಿರೂಪಿಸುವ ಒಂದು ಶ್ಲಾಘ್ಯವಾದ ವರ್ಣನೆ ಇಲ್ಲಿ ಹನುಮಂತನನ್ನು ಕುರಿತಿದೆ –

---

೧೨ ಭಿಕ್ಷು, ಶ್ರಮಣಿ ಎಂಬ ಎರಡು ಮಾತುಗಳು ವಿಶಿಷ್ಟವಾಗಿವೆ. ಬೌದ್ಧಧರ್ಮದ ಸೆಲೆ ಅವುಗಳಲ್ಲಿರುವಂತೆ ಕೆಲವರಿಗೆ ಕಂಡರೆ ಆಶ್ಚರ್ಯವಲ್ಲ.

ನಾನೃಗ್ವೇದ ವಿನೀತಸ್ಯ ನಾ ಯಜುರ್‌ವೇದ ಧಾರಿಣಃ
ನಾಸಾಮವೇದ ವಿದುಷಃ ಶಕ್ಯಂ ಏವಮ್ ಪ್ರಭಾಷಿತುಂ
ನೂನಂ ವ್ಯಾಕರಣಂ ಕೃತ್ಸ್ನಂ ಅನೇನ ಬಹುಧಾಶ್ರುತಂ
ಬಹು ವ್ಯಾಹರತಾನೇನ ನ ಕಿಂಚಿದಪಶಬ್ದಿತಂ
ನ ಮುಖೇ ನೇತ್ರಯೋರ್ವಾಪಿ ಲಲಾಟೇಚ ಭ್ರುವೋಸ್ತಥಾ
ಅನ್ಯೇಷ್ವಪಿಚ ಗಾತ್ರೇಷು ದೋಷಃ ಸಂವಿದಿತಃ ಕ್ವಚಿತ್
ಅವಿಸ್ತರಮಸಂದಿಗ್ಧಮವಿಲಂಬಿತಮದ್ರುತಮ್
ಉರಃಸ್ಥಂ ಕಂಠಗಂ ವಾಕ್ಯಂ ವರ್ತತೇ ಮಧ್ಯಮೇ ಸ್ವರೇ
ಸಂಸ್ಕಾರ ಕ್ರಮಸಂಪನ್ನಾಂ...
ಉಚ್ಚಾರಯತಿ ಕಲ್ಯಾಣೀಂ ವಾಚಂ ಹೃದಯ ಹಾರಿಣೀಂ
ಅನಯಾ ಚಿತ್ರಯಾ ವಾಚಾ ತ್ರಿಸ್ಥಾನ ವ್ಯಂಜನಸ್ಥಯಾ
ಕಸ್ಯನಾರಾಧ್ಯತೇ ಚಿತ್ತಂ ಉದ್ಯತಾಸೇರರೇರಪಿ
ಏವಂ ವಿಧೋ ಯಸ್ಯ ದೂತೋ ನಭವೇತ್ ಪಾರ್ಥಿವಸ್ಯತು
ಸಿದ್ಧ್ಯಂತಿ ಹಿ ಕಥಂ ತಸ್ಯ ಕಾರ್ಯಾಣಾಂ ಗತಯೋನಘ

(ಋಗ್ವೇದವನ್ನು ಕಲಿತ ಬಲ್ಲವನಿಗಾಗಲಿ, ಯಜುರ್ವೇದ ಸಾಮವೇದಗಳನ್ನು ತಿಳಿದವನಿಗಾಗಲಿ ಇವನು ಮಾತನಾಡುವಷ್ಟು ಚೆನ್ನಾಗಿ ಮಾತನಾಡುವುದು ಕಷ್ಟ; ಅವನ ವ್ಯಾಕರಣದಲ್ಲಿ ಯಾವ ನ್ಯೂನತೆಯೂ ಇಲ್ಲ; ಮನೋಹರವಾಗಿ ಮಾತನಾಡುತ್ತಾನೆ; ಬಹು ಬಗೆಯ ತಿಳಿವಳಿಕೆ ಉಳ್ಳವನಂತಿದ್ದಾನೆ; ಅನೇಕ ಬಗೆಯ ವ್ಯವಹಾರ ಉಳ್ಳವನಾಗಿ ಕಾಣುತ್ತಾನೆ. ಒಂದಿಷ್ಟು ಅಪಶಬ್ದವಿಲ್ಲ. ಬಾಯಿ ಕಣ್ಣುಗಳಲ್ಲಿ, ಹಣೆಯಲ್ಲಿ ಹುಬ್ಬಿನಲ್ಲಿ ಹಾಗೆಯೇ, ಇತರ ಯಾವ ಅಂಗಭಂಗಿಯಲ್ಲಿ ಒಂದಿಷ್ಟೂ ದೋಷ ಕಾಣುವುದಿಲ್ಲ. ವಿಸ್ತಾರವಿಲ್ಲ, ಸಂದಿಗ್ಧತೆಯಿಲ್ಲ, ವಿಲಂಬವಿಲ್ಲ, ದ್ರುತವಿಲ್ಲ ಮಾತು. ಎದೆಯಿಂದ ಕಂಠ ಮೂಲಕವಾಗಿ ಹೊರಟ ವಾಕ್ಯ ಮಧ್ಯಮ ಸ್ವರದಲ್ಲಿ ನುಡಿಯುತ್ತದೆ. ಸಂಸ್ಕಾರಕ್ರಮ ಸಂಪನ್ನನಾಗಿದ್ದಾನೆ. ಹೃದಯಹಾರಿಣಿಯಾದ ಕಲ್ಯಾಣಗುಣವುಳ್ಳ ಸಂಸ್ಕೃತವನ್ನು ಉಚ್ಚಾರಮಾಡುತ್ತಾನೆ: ಮೂರು ಸ್ಥಾನಗಳಲ್ಲಿಯೂ ವ್ಯಂಜನಸ್ಥವಾಗಿ ಸುಂದರವಾಗಿರುವ ಮಾತು ಬೇರೆಲ್ಲಿಯೂ ಬರಲಾರದು. ಕೊಲ್ಲಲು ಎತ್ತಿದ ಅರಿಯ ಆಯುಧವೂ ಇವುಗಳನ್ನು ಕೇಳಿ ಗೌರವದಿಂದ ಬಾಗಬಲ್ಲದು. ಯಾವ ರಾಜನಿಗೆ ಇಂಥ ದೂತನು ಇರುತ್ತಾನೊ ಅವನು ತನ್ನ ಕಾರ್ಯಗಳಲ್ಲಿ ಸಿದ್ಧಿಯನ್ನು ಪಡೆಯದೆ ಹೇಗೆ ಹೋದಾನು?)

ಹನುಮಂತನು ಆಮೇಲೆ ಅವರನ್ನು ಸುಗ್ರೀವನ ಬಳಿಗೆ ಒಯ್ಯುವನು. ಅವರ ಮುಖಭಾವವನ್ನೂ ರೂಪಲಕ್ಷಣವನ್ನೂ ನೋಡಿ ಅವನೂ

ಸಂತುಷ್ಟನಾಗುವನು. ವಿಶ್ವಾಸದಿಂದ ಕೈಚಾಚಿ ಸುಗ್ರೀವನು ಸ್ನೇಹದಲ್ಲಿ ಇವರಿಗೆ ಸ್ವಾಗತ ಕೊಡುವನು. ಹನುಮಂತನು ಬೆಂಕಿಯನ್ನು ಹೊತ್ತಿಸಲು ಇಬ್ಬರೂ ಪರಸ್ಪರ ಸ್ನೇಹವಿಶ್ವಾಸಗಳ ವಾಗ್ದಾನ ಮಾಡುತ್ತಾರೆ. ವಾಲಿಯನ್ನು ಕೊಲ್ಲುತ್ತೇನೆಂದು ರಾಮನು ಮಾತು ಕೊಡುತ್ತಾನೆ. ಅದನ್ನು ಮಾಡಬಲ್ಲೆನೆಂಬ ನಂಬಿಕೆಯನ್ನು ಉಂಟುಮಾಡಲು ತನ್ನ ಒಂದು ಬಾಣದಿಂದ ಏಳು ತಾಲವೃಕ್ಷಗಳನ್ನು ಭೇದಿಸಿದನೆಂದಿದೆ; ದುಂದುಭಿಯ ಕಂಕಾಳವನ್ನು ಒಂದು ಸಲ ಕಾಲಿಂದ ಬಹುದೂರಕ್ಕೆ ಒದೆದೂ ಅದನ್ನು ತೋರಿಸುತ್ತಾನೆ. ಸೀತೆಯನ್ನು ಹುಡುಕಿ ಕೊಡುವೆನೆಂದೂ ಅವಳನ್ನು ಹಿಂದಕ್ಕೆ ಪಡೆಯಲು ರಾಮನಿಗೆ ಸಹಾಯ ಮಾಡುತ್ತೇನೆಂದೂ ಸುಗ್ರೀವನು ಕೈಕೊಂಡು ಮಾತು ಕೊಡುತ್ತಾನೆ. ವಾಲಿಯ ಪ್ರತಾಪವನ್ನು ರಾಮನಿಗೆ ವರ್ಣಿಸಿದಾಗ ಅದರಿಂದ ರಾಮನಿಗೆ ಯಾವ ಭೀತಿಯೂ ಇಲ್ಲವೆಂಬುದು ಗೊತ್ತಾಗುತ್ತದೆ. ಸುಗ್ರೀವನು ಅವನನ್ನು ಕಾಳಗಕ್ಕೆ ಮೂದಲಿಸಿ ಕರೆಯಬಹುದೆಂದು ರಾಮನು ಹೇಳುತ್ತಾನೆ.

ವಾಲಿಗೆ ತುಂಬಾ ಕೋಪ ಬರುತ್ತದೆ. ಕಡೆಯ ಸಾರೆಗೆ ತಮ್ಮನ ಮೇಲೆ ಯುದ್ಧಕ್ಕೆ ಹೋಗಲೂ ಅವನನ್ನು ಶಿಕ್ಷಿಸುತ್ತೇನೆಂದೂ ನಿಶ್ಚಯಿಸಿದಾಗ ಹೆಂಡತಿ ತಾರೆ ಹಾಗೆ ಮಾಡತಕ್ಕದ್ದಲ್ಲವೆಂದೂ ಸುಗ್ರೀವನನ್ನು ಸೋದರನಂತೆ ಕಾಣುವುದು ತಕ್ಕುದೆಂದೂ ಗಂಡನಿಗೆ ತಿಳಿಯಹೇಳುವಳು. ಅವಳ ಮನಸ್ಸಿನಲ್ಲಿ ಒಂದು ಭಾವ ಉಂಟಾಗಿತ್ತು. ಸುರಕ್ಷಿತವಾಗಿ ಈವರೆಗೂ ಮರೆಯಾಗಿದ್ದ ಸ್ಥಾನದಿಂದ ಹೊರಕ್ಕೆ ಬಂದು ಅಣ್ಣನನ್ನು ಎದುರಿಸಿ ನಿಲ್ಲುತ್ತಿರುವ ಸುಗ್ರೀವನಿಗೆ ಶಕ್ತರ ಬೆಂಬಲವಿರಬೇಕೆನ್ನಿಸಿತ್ತು. ಸುಗ್ರೀವನ ಸ್ನೇಹಿತನಾಗಿ ಆರ್ಯ ರಾಜಕುಮಾರನಾದ ರಾಮನು ಬಂದಿದ್ದಾನೆಂದು ಆಕೆ ಕೇಳಿದ್ದಳು. ವಾಲಿಗೂ ಕೇಳಿಬಂದಿತ್ತು – ಆ ಸಂಗತಿ. ಆದರೆ ರಾಮನು ಸಜ್ಜನನೂ ಗೌರವಾರ್ಹನೂ ಎಂದು ವಾಲಿ ಕೇಳಿದ್ದನು. ಆದ್ದರಿಂದ ಆಕೆಯ ಎಚ್ಚರವನ್ನು ಲಕ್ಷ್ಯಮಾಡದೆ ಸುಗ್ರೀವನನ್ನು ಎದುರಿಸಿ ಅವನಿಗೆ ತಕ್ಕ ಶಾಸ್ತಿ ಮಾಡುವೆನೆಂದು ಹೇಳಿದನು. ವಾಲಿಸುಗ್ರೀವರು ಎರಡನೆಯ ಬಾರಿಗೆ ಸಂಧಿಸಿದಾಗ ರಾಮನು ಅವನ ಮೇಲೆ ಬಾಣಪ್ರಯೋಗಮಾಡಿದನು. ಅವನ ಒಡಲಿಂದ ಬಾಣವನ್ನು ಎಳೆಯುವ ಮತ್ತು ವಾಲಿ ಸಾಯುವ ಮುಂಚೆ ತನ್ನ ಹೆಂಡತಿ ತಾರೆ, ಮಗ ಅಂಗದ ಇವರನ್ನು ರಾಮ – ಸುಗ್ರೀವರ ರಕ್ಷಣೆಗೆ ಒಪ್ಪಿಸಿ ಸಮಾಧಾನವಾಗಿ ತೀರಿಕೊಳ್ಳುತ್ತಾನೆ. ಬಳಿಕ ಯುಕ್ತವಾದ ಉತ್ತರಕ್ರಿಯೆಗಳು ನೆರವೇರಿದುವು. ಸುಗ್ರೀವನಿಗೆ ರಾಜ್ಯವೂ ಅಲ್ಲಿನ ಸರ್ವಾಧಿಕಾರವೂ ದೊರಕಿ ಅವನು ಸುಸ್ಥಾಪಿತನಾಗುವನು.

ಸುಗ್ರೀವ ಸಖ್ಯದ ವಾಗ್ದಾನ ಈಗ ರಾಮನ ಕಡೆಯಿಂದ ನೆರವೇರಿದಂತಾಗುತ್ತದೆ. ಸುಗ್ರೀವನ ಭಾಗ ಆಗಬೇಕಿದೆ. ಯಾವ ಯತ್ನಗಳನ್ನೂ ಕೈಕೊಳ್ಳುವ ಮುಂಚೆ ಮಳೆಗಾಲ ಆರಂಭವಾದ್ದರಿಂದ ಮಳೆಗಾಲ ಮುಗಿಯುವವರೆಗೂ ಏನು ಮಾಡಲೂ ಆಗುತ್ತಿರಲಿಲ್ಲ. ಎಲ್ಲ ದಿಕ್ಕುಗಳಲ್ಲಿಯೂ ಸೀತಾನ್ವೇಷಣೆಗಾಗಿ ಸುದ್ದಿ ತರಿಸುವುದಾಗಿ ಮಾತುಕೊಟ್ಟನು. ಮಳೆಗಾಲ ಮುಗಿಯುವವರೆಗೆ ರಾಮಲಕ್ಷ್ಮಣರು ಸುಮ್ಮನಿರಲೇಬೇಕಾಯಿತು. ಬಹುಕಾಲ ಶಕ್ತಿಯನ್ನು ಕಳೆದುಕೊಂಡು ಸುಖಸಂತೋಷಗಳಿಲ್ಲದೆ ಸುಗ್ರೀವನು ಕಳೆಯಬೇಕಿತ್ತು. ಅಂತಃಪುರದವರಾರೂ ಇಲ್ಲದಿದ್ದು ಹೆಂಡತಿ ರುಮೆ ಮತ್ತು ತಾರಾ ಇವರ ಸಹವಾಸವೂ ಈಗ ದೊರಕಿತ್ತು. ತನ್ನ ಸಮಸ್ತ ಕಾಲವನ್ನೂ–ರಾಮನ ಇರವನ್ನೂ ಅವನ ಪರವಾಗಿ ತನ್ನ ಕರ್ತವ್ಯವನ್ನೂ ಮರೆತು–ಸುಖಭೋಗಗಳಲ್ಲಿ ಕಳೆದನು. ಹನುಮಂತನು ರಾಮನ ಪರವಾದ ವಾಗ್ದಾನವನ್ನು ಅವನ ನೆನಪಿಗೆ ತಂದನು. ವಾನರ ಬಲವನ್ನು ಕೂಡಿಸುವ ಕಾರ್ಯವನ್ನು ಅವನಿಗೆ ಒಪ್ಪಿಸಿ ಸುಗ್ರೀವನು ತಾನು ಲೋಲುಪ್ತಿಗೆ ಹಿಂದಿರುಗಿದನು.

ವರ್ಷಾಕಾಲ ಮುಗಿದು ಕಾರ್ಯಾರಂಭಕ್ಕೆ ಸಮಯ ತೆರೆಯಿತು. ಸುಗ್ರೀವನು ಕೊಟ್ಟ ಮಾತನ್ನು ಅವನ ನೆನಪಿಗೆ ತಂದು ಆ ಬಗೆಗೆ ಕೈಕೊಳ್ಳಬೇಕಾದ ಕಾರ್ಯಗಳನ್ನು ಜ್ಞಾಪಿಸಿ ಎಚ್ಚರಿಕೆ ಕೊಡಲು ರಾಮನು ಲಕ್ಷ್ಮಣನನ್ನು ಕಳಿಸುತ್ತಾನೆ. ಬೆದರಿಕೆ ಹಾಕುತ್ತ ಅವನ ಸೈನ್ಯ ಸಿಬ್ಬಂದಿಯನ್ನೆಲ್ಲ ನಾಶಮಾಡುತ್ತೇನೆಂದು ನುಡಿಯುತ್ತ ಲಕ್ಷ್ಮಣನು ಸುಗ್ರೀವನಿರುವಲ್ಲಿಗೆ ಹೋಗುತ್ತಾನೆ. ಸುದ್ದಿ ಸುಗ್ರೀವನಿಗೆ ಮುಟ್ಟುತ್ತದೆ: ತಾನು ಅವನನ್ನು ನೋಡುವ ಸ್ಥಿತಿಯಲ್ಲಿರಲಿಲ್ಲವಾದುದರಿಂದ ನಯವಾಗಿ ಹೋಗಿ ಸಮಾಧಾನದ ಮಾತುಗಳನ್ನಾಡಿ ಅವನ ಕೋಪವನ್ನು ಇಳಿಸುವಂತೆ ನುಡಿಯಬೇಕೆಂದು ತಾರೆಯನ್ನು ಕಳಿಸುತ್ತಾನೆ – ತಾನು ಕಾಣುವ ಮುಂಚೆ, ಹೆಂಗಸರ ಮಾತು, ನಡವಳಿಕೆ ಲಕ್ಷ್ಮಣನಿಗೆ ಬಳಕೆಯವಲ್ಲ. ತಾರೆಯೊ ತುಂಬ ವಿವೇಕದಿಂದ, ಮನೋಹರವಾಗಿ ಮಾತನಾಡಿದಳು. ಅಂತಃಪುರದಲ್ಲಿ ಸುಗ್ರೀವನಿರುವ ಸ್ಥಳಕ್ಕೆ ಲಕ್ಷ್ಮಣನನ್ನು ಕರೆದುಕೊಂಡು ಹೋದಾಗ ಅವನಿಗೆ ಇರುಸುಮುರುಸಾಯಿತು. ಇಷ್ಟುಬಗೆಯಾದ ಅಮನ್ನಣೆಗಳು ಸಾವಕಾಶಗಳೂ ತನ್ನಿಂದ ಆದುದಕ್ಕಾಗಿ ಸುಗ್ರೀವ ಕ್ಷಮಾಪಣೆ ಬೇಡಿಕೊಳ್ಳುತ್ತಾನೆ. ಸೀತೆಯನ್ನು ಅರಸಲು ಬೇಕಾದ ಎಲ್ಲವನ್ನೂ ಮಾಡಲಾಗುತ್ತಿದೆ ಎಂದು ನಂಬಿಕೆ ಕೊಟ್ಟನು. ಬೇಗ ಸಮಸ್ತ ವಾನರ ಸೈನ್ಯವೂ ಇಲ್ಲಿಗೆ ಬಂದು ಸೇರುತ್ತದೆ; ಸೀತೆಯ ಸುದ್ದಿ ಬಂದ ತಕ್ಷಣ ಪ್ರಯಾಣಕ್ಕೆ ಸಿದ್ಧವಾಗುತ್ತದೆ ಎನ್ನುತ್ತಾನೆ. ರಾಮನಲ್ಲಿಗೆ ಹೋಗಿ

ಅವನನ್ನು ಸಮಾಧಾನ ಪಡಿಸಬೇಕೆಂದು ಲಕ್ಷ್ಮಣನು ಸುಗ್ರೀವನಿಗೆ ಸಲಹೆ ಕೊಡುತ್ತಾನೆ.

ಸ್ನೇಹಿತರು ಒಬ್ಬರನ್ನೊಬ್ಬರು ಇದಿರುಗೊಳ್ಳುತ್ತಾರೆ. ಅವರ ನಡುವೆ ಇರಬಹುದಾದ ಮನಸ್ಸಿನ ವಿರಸಗಳೂ ಭಿನ್ನಾಭಿಪ್ರಾಯಗಳೂ ಕಳೆದು ಸಮಾಧಾನ ಉಂಟಾಗುತ್ತದೆ. ತನ್ನ ಸೇನಾಧಿಪತಿಗಳನ್ನೆಲ್ಲ ಕರೆದು ಸುಗ್ರೀವನು ಎಲ್ಲ ದಿಕ್ಕುಗಳಿಗೂ ಹೋಗಿ ಹುಡುಕಲು ಕಳಿಸುತ್ತಾನೆ. ದಕ್ಷಿಣಕ್ಕೆ ಹೋಗಲಿರುವ ಸೇನೆಗೆ ಅಂಗದನನ್ನೂ ಹನುಮಂತನನ್ನೂ ನೇಮಿಸುತ್ತಾನೆ. ಸುದ್ದಿ ತರಲು ಒಂದು ಕಾಲಾವಧಿಯನ್ನು ಗೊತ್ತು ಮಾಡಲಾಗುತ್ತದೆ. ಬೇರೆ ಹೋಗಿದ್ದವರೆಲ್ಲ ವಿಫಲರಾದ ಸುದ್ದಿ ತರುತ್ತಾರೆ.

ದಕ್ಷಿಣಕ್ಕೆ ಹೋದವರು ಆಯಾಸ ಬೇಸರ ಪಡದೆ ಎಲ್ಲೆಲ್ಲಿಯೂ ಸುತ್ತಿ ಕಾರ್ಯವಾಗದುದಕ್ಕೆ ಖಿನ್ನರಾಗುತ್ತಾರೆ. ಒಂದು ಕಡೆ ಗಂಟಲೊಣಗಿ ಬಾಯಾರಿಕೆಯಾಗುತ್ತದೆ. ಒಂದೆಡೆಯಲ್ಲಿ ಭೂಮಿ ಬಿರಿದಂತೆ ಸ್ಥಳ ಕಾಣಲು ಅಲ್ಲಿ ನೀರು, ಆಹಾರ ದೊರೆಯಬಹುದೆಂಬ ಭರವಸೆ ತೋರುತ್ತದೆ. ಧೈರ್ಯ ಮಾಡಿ ಒಳಕ್ಕೆ ಹೋಗುತ್ತಾರೆ. ಅಲ್ಲಿ ವ್ರತಿಯಾದ ಮಹಿಳೆ ಒಬ್ಬಳನ್ನು ಕಂಡು ವಿನಯದಿಂದಲೂ ಮರ್ಯಾದೆಯಿಂದಲೂ ಆಕೆಯ ಬಳಿಗೆ ಹೋಗುತ್ತಾರೆ. ಆಕೆ ಸ್ವಯಂಪ್ರಭೆ; ಆ ಪ್ರದೇಶದ ಒಡೆಯರ ಪರವಾದ ಗುಹಾ ಪಾಲಕಳು. ಅವರಿಗೆ ಬೇಕಾದಷ್ಟು ಅನ್ನಪಾನಾದಿಗಳು ದೊರೆತಾದ ಮೇಲೆ ಆಕೆಯ ಸಹಾಯದಿಂದ ಕಡಲ ಕರೆಯ ಪ್ರದೇಶವನ್ನು ಸೇರುತ್ತಾರೆ. ಇಷ್ಟುಹೊತ್ತಿಗೆ ಸುಗ್ರೀವನು ಅವರಿಗೆ ಕೊಟ್ಟಿದ್ದ ಕಾಲದ ಮಿತಿ ಮುಗಿದುಹೋಗಿದ್ದು ದಳದವರೆಲ್ಲ ಮನಗುಂದಿದವರಾಗಿದ್ದರು. ಯುವರಾಜ ಅಂಗದನು ಕಿಷ್ಕಿಂಧೆಗೆ ಹಿಂದಿರುಗಿ ಹೋಗಿ ತನ್ನ ಚಿಕ್ಕತಂದೆಯ ಕೋಪಕ್ಕೆ ಪಾತ್ರನಾಗಲು ಇಷ್ಟ ಪಡೆನೆಂದನು. ಇದೇ ದಳದ ಬಹುಮಂದಿಯ ಅಭಿಪ್ರಾಯವಾಯಿತು. ನಿಷ್ಕ್ರಿಯೆಯ ಮತ್ತು ಸಾಯುವ ತೀರ್ಮಾನದಿಂದ ಅವರನ್ನು ಸ್ವಲ್ಪ ಕಷ್ಟ ಪಟ್ಟು ಹಿಂದಿರುಗಿಸಬೇಕಾಯಿತು. ಸ್ವಲ್ಪ ಹೊತ್ತಿನಲ್ಲಿಯೇ ದೊಡ್ಡದಾದ ಸಂಪಾತಿಯೆಂಬ ಒಂದು ಮುದಿಹದ್ದಿನ ಕಣ್ಣಿಗೆ ಸತ್ತಂತೆ ಬಿದ್ದ ವಾನರಸೈನ್ಯ ಕಾಣುತ್ತದೆ. ತನ್ನ ಸೋದರ ಜಟಾಯು ಸೀತೆಯನ್ನು ಕಾಪಾಡುವ ಕಾರ್ಯದಲ್ಲಿ ಸತ್ತ ಸಂಗತಿ ಸಂಪಾತಿಗೆ ತಿಳಿಯಲು 'ಸಮುದ್ರದ ಆಚೆ ಇರುವ ಲಂಕೆಗೆ ಸೀತೆಯನ್ನು ರಾವಣ ಒಯ್ದು ಹೋಗಿದ್ದಾನೆ, ಅದು ಈ ಸ್ಥಳದಿಂದ ನೂರು ಯೋಜನ ದೂರವಿದೆ; ಸೀತೆ ರಾವಣನ ವಿಲಾಸವನದಲ್ಲಿ ಸೆರೆಯಾಗಿ ಇರುವುದು ನನಗೆ ಇಷ್ಟುದೂರದಿಂದ ಕೂಡ ಕಾಣಿಸುತ್ತಿದೆ' ಎಂದು ಹೇಳಿ ವಾನರರಿಗೆ ನೆರವು ಕೊಡುತ್ತಾನೆ.

ಮುಂದಿನ ಪ್ರಶ್ನೆ ಸಮುದ್ರವನ್ನು ದಾಟಿಹೋಗುವವರು ಯಾರು ಎಂಬುದು. ಶಕ್ತನಾದ, ದೂರದಲ್ಲಿ ಮೌನವಾಗಿ ಕುಳಿತಿದ್ದ ಹನುಮಂತನು ಈ ಕಾರ್ಯವನ್ನು ಕೈಕೊಳ್ಳಬೇಕೆಂದು ಮುಖ್ಯಸ್ಥರು ಪ್ರಾರ್ಥಿಸಲು ಹನುಮಂತನು ಒಪ್ಪಿಕೊಳ್ಳುತ್ತಾನೆ.

ಮುಂದಿನದು ಸುಂದರಕಾಂಡ. ಹನುಮಂತನು ಸಮುದ್ರವನ್ನು ದಾಟಿ ಲಂಕೆಗೆ ಹೋಗುತ್ತಾನೆ. ಇತರರ ಕಣ್ಣಿಗೆ ಕಾಣದಂತೆ ರಾತ್ರಿಯ ಕತ್ತಲಲ್ಲಿ ಊರೊಳಗೆ ತಿರುಗಾಡಿ ಅರಮನೆಯೊಳಗೆ ರಾವಣನ ವಿಲಾಸಮಂದಿರಗಳಲ್ಲಿ ಸುತ್ತಾಡಿದರೆ ಅಲ್ಲಿ ಸೀತೆ ಕಾಣುವುದಿಲ್ಲ. ಅಶೋಕವನಕ್ಕೆ ಹೋದಾಗ ಅಲ್ಲಿ ತಬ್ಬಲಿಯಂತೆ ವ್ಯಸನದಿಂದ ಕಳೆಗುಂದಿ ಒಂದು ಮರದ ಕೆಳಗೆ ಸೀತೆ ಕುಳಿತಿರುವುದು ಕಾಣುತ್ತದೆ. ಕುರೂಪಿಗಳೂ ಕ್ರೂರರೂ ಆದ ಕಾವಲವರ ಮತ್ತು ಪಾಲಕ ಸ್ತ್ರೀಯರ ನಡುವೆ ಆಕೆ ಇರುವುದು ಕಣ್ಣಿಗೆ ಬೀಳುತ್ತದೆ. ಆಕೆ ಒಬ್ಬಳೇ ಇರುವಾಗ ಅವನು ಕಾಣಿಸಿಕೊಳ್ಳುತ್ತಾನೆ. ತನ್ನ ಗುರುತಾಗಿ ಅವಳಿಗೆ ಕೊಡಬೇಕೆಂದು ರಾಮನು ಕಳಿಸಿದ್ದ ಮುದ್ರೆಯುಂಗುರವನ್ನು ಆಕೆಯ ಕೈಗೆ ಅರ್ಪಿಸುತ್ತಾನೆ. ಸ್ವತಃ ರಾಮನನ್ನೇ ಕಣ್ಣೆದುರಿಗೆ ಕಂಡ ಹಾಗೆ ಆಕೆಗೆ ಸಂತೋಷವಾಯಿತು. ತನಗೆ ಅಧೀನವಾಗುವುದಕ್ಕೆ ರಾವಣನು ಆಕೆಗೆ ಕೊಟ್ಟಿದ್ದ ಕಾಲದ ಅವಧಿಯಲ್ಲಿ ಆಗ್ಗೆ ಇನ್ನು ಎರಡು ತಿಂಗಳು ಮಾತ್ರ ಉಳಿದಿದ್ದುವು. 'ರಾಮಲಕ್ಷ್ಮಣರಿಗೆ ಈ ಪರಿಸ್ಥಿತಿಯನ್ನು ಅರುಹು; ನನ್ನ ಸ್ಥಿತಿಯನ್ನು ನಿವೇದಿಸು, ಅಷ್ಟರೊಳಗೆ ನನ್ನ ಬಿಡುಗಡೆಯಾಗದಿದ್ದರೆ ನನ್ನನ್ನು ಕೊಂದುಕೊಳ್ಳಲಿದ್ದೇನೆ' ಎಂದಳು ಸೀತೆ. ಪತಿಯ ಪರವಾಗಿ ಹನುಮಂತನು ಸೀತೆಗೆ ಮಾತು ಕೊಡುತ್ತಾನೆ–ತಾವೆಲ್ಲರೂ ಬೇಗ ಲಂಕೆಗೆ ಬಂದು ಆ ಅವಧಿಯ ಒಳಗಾಗಿ ಆಕೆಯನ್ನು ಬಿಡಿಸಿಕೊಳ್ಳುತ್ತೇವೆ ಎಂದು. ಅಥವಾ, ಈಗಲೇ ಅನುಗ್ರಹ ಮಾಡಿದರೆ ತಾನೇ ಆಕೆಯನ್ನು–ಅಗ್ನಿ ಇಂದ್ರನಲ್ಲಿಗೆ ಹವಿಸ್ಸನ್ನು ಒಯ್ಯುವಂತೆ–ರಾಮನ ಬಳಿಗೆ ಒಯ್ದು ಹೋಗುತ್ತೇನೆಂದು ಬೇಡುವನು. ಸೀತೆ ಅದಕ್ಕೆ ಒಪ್ಪುವುದಿಲ್ಲ. ತನ್ನ ಚೂಡಾರತ್ನವನ್ನು ಹನುಮಂತನ ಕೈಗೆ ಕೊಟ್ಟು ರಾಮನಿಗೆ ಕಳಿಸಿ ರಾಮಲಕ್ಷ್ಮಣರ ಆರೋಗ್ಯಕ್ಕೂ ವಿಜಯಕ್ಕೂ ಹಾರೈಸುವಳು. ಹನುಮಂತನು ಹೀಗೆ ಸೀತೆಯನ್ನು ಹುಡುಕಿ ಆಕೆಯನ್ನು ಸಂದರ್ಶಿಸಿದುದರ ಜೊತೆಗೆ ತನ್ನ ಶಕ್ತಿ ಪ್ರಭಾವಗಳ ಅನೇಕ ಕುರುಹುಗಳನ್ನೂ ಅಲ್ಲಿ ಉಳಿಸಿಹೋಗುವನು. ಇಂದ್ರಜಾಲದಂತಿರುವ ಒಟ್ಟು ಆ ಊರನ್ನೆಲ್ಲ ನೋಡಿ, ಅದರ ಬಲಾಬಲಗಳನ್ನು ಕೋಟೆ ದುರ್ಗಗಳನ್ನು ಅರಿತುಕೊಳ್ಳುವನು. ತರುವಾಯ ತನ್ನ ಸ್ನೇಹಿತರ ಬಳಿಗೆ ಹಿಂದಿರುಗಿದಾಗ ಸ್ನೇಹಿತರಿಗೆ ಸಂತೋಷವಾಯಿತೆನ್ನಬೇಕೆ? ಅಲ್ಲಿಂದ ಅವರು ಸುಗ್ರೀವನಲ್ಲಿಗೆ ಹಿಂದಿರುಗಿ ತಾವು ತಂದ ಸುದ್ದಿಯನ್ನು ರಾಮನಿಗೆ

ಒಪ್ಪಿಸುವರು. ಸೈನ್ಯದ ಪ್ರಯಾಣ ಬೇಗ ಆರಂಭವಾಗಿ ದಕ್ಷಿಣ ತೀರ ಪ್ರದೇಶಕ್ಕೆ ವಾನರ ಸೈನ್ಯವೆಲ್ಲ ಬಂದು ಮುಟ್ಟುತ್ತದೆ.

ಇತ್ತ ರಾವಣನು ಒಂದು ಮಂತ್ರಾಲೋಚನೆ ಸಭೆಯನ್ನು ನೆರಸಿ ಲಂಕೆಯ ಮೇಲೆ ಒದಗಲಿರುವ ಕೇಡನ್ನು ರಾಕ್ಷಸ ಅಧಿಪತಿಗಳಿಗೆ ವಿವರಿಸುತ್ತಾನೆ. ರಾವಣ ಕುಂಭಕರ್ಣರ ಚಿಕ್ಕಜ್ಜ ಒಬ್ಬ, ಕಡೆಯ ತಮ್ಮನಾದ ವಿಭೀಷಣ ಹೊರತು ಉಳಿದವರೆಲ್ಲರೂ ಯುದ್ಧಕ್ಕೆ ಒಟ್ಟಿನಲ್ಲಿ ಒಪ್ಪುವರು. ಇವರಲ್ಲಿ ಕೆಲವರಿಗೆ ರಾವಣನು ಸೀತೆಯನ್ನು ತಂದಿರುವುದು ಒಪ್ಪಿಕೆಯಾಗಲಿಲ್ಲ. ಕುಂಭಕರ್ಣನಿಗೂ ಒಪ್ಪಿತವಾಗದಿದ್ದರೂ ರಾವಣನ ತೀರ್ಮಾನವನ್ನು ವಿಭೀಷಣನಷ್ಟು ಪ್ರತಿಭಟಿಸಲಿಲ್ಲ. ಸೀತೆಯನ್ನು ಅವಳ ಪತಿಗೆ ಒಪ್ಪಿಸಬೇಕೆಂದು ವಿಭೀಷಣನು ರಾವಣನನ್ನು ಬೇಡಿದ. ಮಾತು ನಡೆಯದೆ ಸುಮ್ಮನಾಗಬೇಕಾಯಿತಲ್ಲದೆ ವಿಭೀಷಣನು ಹೇಡಿತನದಿಂದ ನಡೆದುಕೊಳ್ಳುತ್ತಿದ್ದಾನೆಂದೂ ಸ್ವಾಮಿಭಕ್ತಿ ಇಲ್ಲದೆ, ದೇಶ ಪ್ರೀತಿ ಇಲ್ಲದೆ ಮಾತನಾಡುತ್ತಿದ್ದಾನೆಂದೂ ನುಡಿ ಬೆಳೆದು ಲಂಕೆಯನ್ನು ಬಿಟ್ಟು ಹೋಗಬೇಕಾಗುತ್ತದೆ. ನಾಲ್ವರೊಡನೆ[೧೩] ವಿಭೀಷಣನು ರಾಮನ ಬಳಿಗೆ ಬಂದು ಅವನ ಆಶ್ರಯವನ್ನು ಬೇಡಲು ರಾಮನು ವಿಭೀಷಣನನ್ನು ಸ್ವೀಕರಿಸುತ್ತಾನೆ. ರಾಮನನ್ನು ಲಂಕೆಗೆ ಕೊಂಡುಹೋದ ಯುದ್ಧಕಾರ್ಯದಲ್ಲಿ ವಿಶ್ವಾಸಪಾತ್ರವಾದ ಸ್ನೇಹಿತನಂತೆ ಭಕ್ತಿಯಿಂದಲೂ ಶ್ರದ್ಧೆಯಿಂದಲೂ ನೆರವಾದನು. ನಳನ ಸಹಾಯದಿಂದ ಕಡಲ ಮೇಲೆ ಬೇಗ ಒಂದು ಸೇತುವೆಯನ್ನು ಕಟ್ಟುವರು. ರಾಮನ ಸೈನ್ಯ ಲಂಕೆಯನ್ನು ಪ್ರವೇಶಮಾಡುವುದು. ದಾಳಿಮಾಡಿದ ಸೈನ್ಯಕ್ಕೂ ರಾಕ್ಷಸರಿಗೂ ನಡುವೆ ಭೀಕರ ಯುದ್ಧಗಳು ನಡೆಯುವುವು. ರಾವಣನ ಮಗನಾದ ಇಂದ್ರಜಿತ್, ತಮ್ಮನಾದ ಕುಂಭಕರ್ಣ ಇವರಿಗೂ ರಾಮ ಸೈನ್ಯಕ್ಕೂ ನಡೆದ ಯುದ್ಧಗಳು ಅದ್ಭುತವಾದವು. ಇಂದ್ರಜಿತ್ ಮಾಯಾ ಯುದ್ಧದಲ್ಲಿ ನಿಪುಣ; ಹಗೆಯ ಕಣ್ಣಿಗೆ ಬೀಳದೆ ಕಾಳಗ ಮಾಡಬಲ್ಲವನು. ಸ್ವಲ್ಪ ಕಾಲ ರಾಮಲಕ್ಷ್ಮಣರೇ ಪ್ರಜ್ಞೆತಪ್ಪಿ ಬೀಳಬೇಕಾಗುತ್ತದೆ. ಲಕ್ಷ್ಮಣನನ್ನು ಎಚ್ಚರಕ್ಕೆ ತರುವುದಕ್ಕೆ ಸ್ವಲ್ಪ ಪ್ರಯಾಸವೇ ಆಯಿತು. ಇದಾದ

೧೩. ರಾಮಾಯಣದಲ್ಲಿ ನಾಲ್ವರ ಸಂಖ್ಯೆ ವಿಶಿಷ್ಟ. ದಶರಥನ ಮಕ್ಕಳು ನಾಲ್ವರು; ಜನಕನ, ಅವನ ತಮ್ಮನ ಹೆಣ್ಣುಮಕ್ಕಳು ಒಟ್ಟು ನಾಲ್ವರು; ಖರನೂ ಅವನ ಮೂವರು ನೆಚ್ಚಿನ ವೀರಯೋಧರೂ ರಾಮನೊಡನೆ ಕಾಳಗಕ್ಕೆ ಬರುವರು; ಋಷ್ಯಮೂಕದಲ್ಲಿ ಸುಗ್ರೀವನೊಡನೆ ಇರುವವರು ನಾಲ್ವರು; ಅಂಗದನ ಜೊತೆಗೆ ದಕ್ಷಿಣಕ್ಕೆ ಹೋದ ದಳಪತಿ ಕಪಿಗಳ ಸಂಖ್ಯೆ ನಾಲ್ಕು; ಸುಗ್ರೀವನ ಮೇಲೆ ತಿರುಗಿಬೀಳುವುದಕ್ಕೂ ಅಂಗದನ ಪ್ರಾಯೋಪವೇಶಕ್ಕೂ ಒಪ್ಪದವರು ಅವರು; ಈಗ ವಿಭೀಷಣ ಬಂದುದೂ ನಾಲ್ವರೊಡನೆ.

ಮೇಲೆ ಬೇಗ ಲಕ್ಷ್ಮಣನು ಇಂದ್ರಜಿತ್ತನ್ನು ಸಂಹರಿಸುವನು. ಕಡೆಯ ಯುದ್ಧ ನಡೆದುದು ರಾಮರಾವಣರಿಗೆ. ಇದು ಸ್ವಲ್ಪ ದೀರ್ಘಕಾಲ ಹಿಡಿಯಿತು; ಕಠಿಣವೂ ಆಯಿತು. ರಾವಣನ ಸೈನ್ಯ ನಾಶವಾಗಿ, ಅವನ ಯುದ್ಧ ಸಾಮರ್ಥ್ಯ ಮುರಿದು ಕಡೆಯಲ್ಲಿ ಬ್ರಹ್ಮಾಸ್ತ್ರ ಪ್ರಯೋಗದಿಂದ ರಾವಣನು ಸತ್ತುಬಿದ್ದನು. ಜಯ ದೊರೆತ ಮೇಲೆ ಲಂಕೆಯಲ್ಲಿ ವಿಭೀಷಣನಿಗೆ ಪಟ್ಟಾಭಿಷೇಕವಾಗುತ್ತದೆ.

ಅಗ್ನಿ ಪರೀಕ್ಷೆಯಲ್ಲಿ ಸೀತೆಯ ಪರಿಶುದ್ಧಿ ಕಂಡಮೇಲೆ ರಾಮನು ಅವಳನ್ನು ಸ್ವೀಕರಿಸಿದನು. ಪೂರ್ತಿ ಹನ್ನೆರಡು ತಿಂಗಳ ಕಾಲ ಇನ್ನೊಬ್ಬನ ಮನೆಯಲ್ಲಿದ್ದ ಹೆಂಗಸಿನ ಶುಚಿಯಲ್ಲಿ ಸಂದೇಹವಿರುವವಳನ್ನು ರಾಮನು ಒಪ್ಪಿಕೊಂಡನೆಂದು ಲೋಕದ ಜನ ಹೇಳುವಂತಾಗಬಾರದೆಂದು ಈ ಅಗ್ನಿ ಪರಿಶೋಧನೆ ನಡೆಯಿತೆಂದಿದೆ. ಉಳಿದೆಲ್ಲವೂ ಸರಿಗೊಳ್ಳುತ್ತವೆ. ಸ್ವಂತವಾಗಿ ರಾಮನಿಗೆ ಅವಳ ಪರಿಶುದ್ಧಿಯಲ್ಲಿ ಸಂದೇಹಲೇಶವೂ ಇರಲಿಲ್ಲ.

ಇಷ್ಟುಹೊತ್ತಿಗೆ ತಂದೆಗೆ ಮಾತು ಕೊಟ್ಟಿದ್ದ ವನವಾಸದ ಹದಿನಾಲ್ಕು ವರ್ಷದ ಅವಧಿ ಮುಗಿಯುತ್ತ ಬಂದಿತ್ತು. ಆದ್ದರಿಂದ ಭರತನಿಗೆ ಮಾತು ಕೊಟ್ಟಿದ್ದಂತೆ ಅಯೋಧ್ಯೆಗೆ ಅವಸರದಿಂದ ರಾಮನು ಹಿಂದಿರುಗುತ್ತಾನೆ. ಸ್ವಂತವಾಗಿ ಯಾರ ಆತಿಥ್ಯವನ್ನೂ ಉಪಚಾರವನ್ನೂ ಒಪ್ಪಿಕೊಳ್ಳದೆ ಸೀತೆ ಲಕ್ಷ್ಮಣರೊಡನೆಯೂ ವಿಭೀಷಣ ಮತ್ತು ವಾನರರ ಜೊತೆಯಲ್ಲಿಯೂ ಅಯೋಧ್ಯೆಗೆ ಅವನು ಧಾವಿಸುತ್ತಾನೆ. ಭರದ್ವಾಜಾಶ್ರಮವನ್ನು ತಲುಪಿದ ಕೂಡಲೆ ಈಗ ಭರತನ ಮನಸ್ಸು ಹೇಗಿದೆಯೆಂದು ತಿಳಿದು ಬರಲು ಹನುಮಂತನನ್ನು ಕಳಿಸುತ್ತಾನೆ. ಅದು ತಿಳಿಯುವವರೆಗೂ ಊರೊಳಕ್ಕೆ ಹೋಗಲು ಅವನಿಗೆ ಮನಸ್ಸುಂಟಾಗುವುದಿಲ್ಲ.

ನಂದಿಗ್ರಾಮಕ್ಕೆ ಹೋಗಿ ರಾಮನು ಬಂದಿದ್ದಾನೆಂಬ ಸುದ್ದಿಯನ್ನು ಹನುಮಂತನು ತಿಳಿಸಿದನು. ಈ ಸುದ್ದಿಯನ್ನು ಕೇಳಿ ಭರತನು ಎಷ್ಟು ಸಂತೋಷಪಟ್ಟನೆಂಬುದನ್ನು ಹನುಮಂತನು ಕಂಡ ಒಡನೆಯೇ ಭರತನು ರಾಮಸೀತೆಲಕ್ಷ್ಮಣರನ್ನು ಊರಿಗೆ ಸ್ವಾಗತಿಸಿ ಬರಮಾಡಿಕೊಳ್ಳಹೋಗುವನು. ಪುನಸ್ಸಮಾಗಮ ತುಂಬ ಹಾರ್ದಿಕವಾಯಿತು. ಯಥಾ ವಿಧಿಯಾಗಿ ಸ್ನಾನ ಮುಂತಾದ ಕರ್ಮಗಳು ನೆರವೇರಿದ ಕೂಡಲೆ ರಾಮನು ಸಿಂಹಾಸನಸ್ಥನಾಗುತ್ತಾನೆ. ಅವನು ಹೊರಗಿದ್ದ ಕಾಲದಲ್ಲಿ ಅವನ ಪ್ರತಿನಿಧಿಯಾಗಿದ್ದ ಪಾದುಕೆಗಳಿಂದ ರಾಮನ ಪಾದವನ್ನು ಭರತನು ಸಿಂಗರಿಸುತ್ತಾನೆ. ವಿಶ್ವಾಮ, ಭಕ್ತಿ, ಸೇವೆಗಳ ಕಾರ್ಯ ಒಂದು ಮಹಾ ಸಮಾರಂಭವಾಗುತ್ತದೆ. ಭಯದಿಂದಲೂ ಭಕ್ತಿಯಿಂದಲೂ ತಾನು ಹೇಗೆ ರಾಜಕಾರ್ಯವನ್ನು ನಿರ್ವಹಿಸಿದ್ದೇನೆಂದು ಭರತನು ವರದಿ

ಒಪ್ಪಿಸುತ್ತಲೂ ಸರ್ವತ್ರ ಸುಖಸಂತೋಷ ಹಬ್ಬುತ್ತವೆ. ಅಣ್ಣತಮ್ಮಂದಿರಲ್ಲಿ ಎಷ್ಟು ದೊಡ್ಡ ಪ್ರೀತಿ, ಆದರ ಇದ್ದವೆಂದು ಕಂಡು ವಾನರರೂ ರಾಕ್ಷಸರೂ ಭಾವಪರವಶರಾಗುತ್ತಾರೆ. ಸ್ವಾರ್ಥನಿರಪೇಕ್ಷವಾದ ಭರತನ ಭಕ್ತಿಗೌರವಗಳೂ ಅಖಂಡಶೀಲಸಂಪತ್ತಿಯೂ ಅವರನ್ನು ಬೆರಗುಗೊಳಿಸುತ್ತವೆ. ಆರನೆಯ ಕಾಂಡವಾದ ಯುದ್ಧಕಾಂಡ ಸಾರ್ವತ್ರಿಕವಾಗಿ ಆಶೀರ್ವಚನದಿಂದ ಒಂದು ಮಹಾಕೃತಿಗೆ ಸಹಜವಾದ ಸಮಾಪ್ತಿಯನ್ನು ಕಾಣುತ್ತದೆ.

ಈ ಕಾಂಢದ ಕಡೆಯಲ್ಲಿ ಬಂದಿರುವ ಕೆಲವು ಪದ್ಯಗಳನ್ನು ಹಿಂದೂ ಮನೆಗಳಲ್ಲಿ ಶುಭಸಮಯಗಳಲ್ಲಿಯೂ ಪೂಜಾಮಂದಿರಗಳಲ್ಲಿಯೂ ಸಾಮಾನ್ಯವಾಗಿ ಇಂದಿಗೂ ಹೇಳುತ್ತಾರೆ.

ಏಳನೆಯ ಉತ್ತರಕಾಂಡ ರಾಮಾಯಣಕ್ಕೆ ಆಮೇಲೆ ಸೇರಿದುದೆಂಬುದು ಅನೇಕರ ಅಭಿಪ್ರಾಯ. ಆದರೆ ಅದು ರಾಮಕಥೆಗೆ ಸೇರಿದ ಭಾಗವೆಂಬ ನಂಬಿಕೆ ಬಹುಕಾಲದಿಂದ ಇದ್ದು ನಮಗೆ ದೊರೆತಿರುವ ಎಲ್ಲ ರಾಮಾಯಣ ಹಸ್ತಪ್ರತಿಗಳಲ್ಲಿಯೂ ದೊರಕುತ್ತದೆ. ಸಂಪ್ರದಾಯ ಅದನ್ನು ಒಪ್ಪಿಕೊಂಡಿದೆ. ಅಯುಕ್ತವಾಗಿ ಮಾಡಿದ ಆಕೆಯ ತ್ಯಾಗದ ಪರಿಣಾಮವಾಗಿ ಉಂಟಾದ ವ್ಯತಿರೇಕದಲ್ಲಿ ವಾಲ್ಮೀಕಿ ಮಹರ್ಷಿಗಳ ಪ್ರೀತಿಯನ್ನೂ ಅನುಕಂಪೆಯನ್ನೂ ಈ ಪ್ರಸಂಗದಲ್ಲಿ ಕಾಣಬಹುದು. ಆತನ ಆಶ್ರಮದಲ್ಲಿ ಅವಳಿಮಕ್ಕಳು ಹುಟ್ಟಿದರು. ಆಕೆಗೆ ದೊರೆತ ಪ್ರೀತಿ ಅಕ್ಕರೆಗಳ ರಕ್ಷಣೆಪಾಲನೆ ಇಲ್ಲದಿದ್ದಿದ್ದರೆ ಆಕೆಯ ಬದುಕು ದುಸ್ಸಹವಾಗುತ್ತಿತ್ತು. ಅಲ್ಲಿನ ನುಡಿತ, ಮನೋಧರ್ಮ, ಕಥನ, ಪುರಾಣಕತೆಗಳ ವರಶಾಪಗಳ ಗಿಡಿತ, ಕವಿತೆಯ ಕೀಳ್ಮೆ–ಒಟ್ಟಿನಲ್ಲಿ ಈ ಕಾಂಡದ ವಾಣಿಯೇ ಮೊದಲ ಆರರಲ್ಲಿರುವುದಕ್ಕಿಂತ ಬೇರೆ. ಯಾವ ದೈವೀ ಉದ್ದೇಶದಿಂದ ರಾಮನು ಭೂಮಿಗೆ ಹುಟ್ಟಿ ಬಂದು ಆ ಕಾರ್ಯ ಮುಗಿಯುವಂತಾಯಿತೊ ಅವನ 'ಅವತಾರ' ಕತೆ ಸ್ಫುಟವಾಗಿ ಉಲ್ಲೇಖಿತವಾಗುತ್ತದೆ.

ಈ ಕಾಂಡದಲ್ಲಿ ರಾವಣನ ಇತಿಹಾಸವಿದೆ. ಯಾವ ದುಷ್ಕಾರ್ಯಗಳಿಂದ ಅವನಿಂದ ದೇವಲೋಕದವರಿಗೆ ಕೋಪವೂ ಭಯವೂ ಉಂಟಾಯಿತೊ ಆ ಎಲ್ಲದರ ಕಥನವಿದೆ. ತಪಸ್ವಿನಿ ವೇದವತಿ ಮತ್ತು ಕುಬೇರನ ಮಗನಾದ ನಳಕೂಬರನ ಶಾಪಕ್ಕೆ ಕಾರಣ ದೊರೆಯುತ್ತದೆ. ಹನ್ನೆರಡು ತಿಂಗಳ ಕಾಲ ಅವನ ಕ್ರೀಡಾವನದಲ್ಲಿದ್ದ ಸೀತೆಯನ್ನು ಕೆಡಿಸಲು ಯತ್ನಮಾಡದಿದ್ದುದಕ್ಕೆ ಇದು ಪರ್ಯಾಯ ಕಾರಣವೆಂಬಂತಾಗಿತ್ತು. ಇದೊಂದು ದೈವಕಲ್ಪಿತವಾದ ಅವಕಾಶದಂತೆ ಆಯಿತು. ರಾಮನು ಕ್ರಿಯಾಮಂಡಲವೊಂದನ್ನು ರಚಿಸಿ ಯುದ್ಧರಂಗದಲ್ಲಿ

ರಾವಣನನ್ನು ಕೊಲ್ಲಲು ಸಮಯ ದೊರೆಯಿತು.

ಭರತ, ಲಕ್ಷ್ಮಣ, ಶತ್ರುಘ್ನರಿಗೆ ರಾಜ್ಯದ ಬೇರೆ ಬೇರೆ ಭಾಗಗಳನ್ನು ಕೊಟ್ಟು ಅವರು ಆಳಿಕೊಂಡಿರಲು ಏರ್ಪಾಡು ನಡೆಯುತ್ತದೆ. ಆಗೀಗ ಅಣ್ಣನನ್ನು ಕಂಡುಹೋಗಲು ಅವರು ಅಯೋಧ್ಯೆಗೆ ಬಂದು ಹೋಗುತ್ತಿದ್ದರು. ಆಮೇಲೆ ಅಶ್ವಮೇಧ ನಡೆಯುತ್ತದೆ. ರಾಮನಷ್ಟು ದೊಡ್ಡವನಾದ ರಾಜನು ಸಾಂಪ್ರದಾಯಿಕವಾಗಿ ಏನು ಮಾಡಬೇಕೊ ಅಂಥ ಅಶ್ವಮೇಧ ಯಾಗವೊಂದು ನೆರವೇರುತ್ತದೆ. ಅವನೂ ಅವತಾರಕ್ಕೆ ಸಂಬಂಧಪಟ್ಟ ಇತರರೆಲ್ಲರೂ ತಮ್ಮ ಕಡೆಯ ವಿಶ್ರಮಣಕ್ಕೆ ರಾಮನ ಜೊತೆಗೆ ಹೋಗುತ್ತಾರೆ. ಹನುಮಂತ, ವಿಭೀಷಣ ಆಕಾಲ ಪರ್ಯಂತ ಉಳಿಯಬೇಕೆಂದು ನಿರ್ಣಯವಾಗುತ್ತದೆ. ಲವಕುಶರು ಅರಮನೆಯ ಸಭಾಮಂದಿರದಲ್ಲಿ ರಾಮನಿಗೆ ವಾಲ್ಮೀಕಿ ರಾಮಾಯಣ ಕಥೆಯನ್ನು ಹೇಳುತ್ತಾರೆ. ರಾಮಾಯಣದ ಕವಿತಾ ಸೌಂದರ್ಯವೂ ರಾಮಸೀತೆಯರ ಜೀವನದ ಉದಾತ್ತತೆಯೂ ಎಲ್ಲರ ಹೃದಯವನ್ನೂ ಆರ್ದ್ರಮಾಡುತ್ತದೆ. ಸತಿ ಸೀತೆಯ ಗಾಂಭೀರ್ಯ ಎಲ್ಲರ ಹೃದಯವನ್ನೂ ಒಳಗುಮಾಡಿಕೊಂಡು ರಾಮನ ಮನಸ್ಸನ್ನೂ ಗೆಲ್ಲುತ್ತದೆ. ಕಾವ್ಯವನ್ನು ಹಾಡಿದ ಹುಡುಗರು ಅವನಿಂದ ಯಾವ ಬಹುಮಾನವನ್ನೂ ತೆಗೆದುಕೊಳ್ಳುವುದಿಲ್ಲ. ಅವರನ್ನು ನೋಡುತ್ತಿದ್ದವರಿಗೆ ಕವಿತೆಯ ಮತ್ತು ಅದರ ಪಠನದ ಸೌಂದರ್ಯದ ಜೊತೆಗೆ ಹಾಡಿದ ಹುಡುಗರ ರೂಪಸೌಭಾಗ್ಯವೂ ಮನಸ್ಸಿಗೆ ತಟ್ಟುತ್ತದೆ. ಅವರು ಧರಿಸಿದ್ದ ಉಡುಗೆ ಒಂದು ಬಿಟ್ಟರೆ ಅವರಿಗೂ ರಾಮನಿಗೂ ಇರುವ ಅತಿಶಯದ ಹೋಲಿಕೆ ಎಲ್ಲರಿಗೂ ಕಂಡುಬರುತ್ತದೆ. ನೀವು ಯಾರೆಂದು ರಾಮನು ಅವರನ್ನು ಕೇಳುತ್ತಾನೆ. ರಾಮಾಯಣದ ಕರ್ತೃವಾದ ವಾಲ್ಮೀಕಿಯ ಶಿಷ್ಯರೆಂದು ಅವರ ಉತ್ತರ. ವಾಲ್ಮೀಕಿಯಲ್ಲಿಗೆ ದೂತರನ್ನು ಕಳಿಸಲು ಇವರು ರಾಮನ ಮಕ್ಕಳೆಂದು ತಿಳಿದುಬರುತ್ತದೆ. ಸೀತೆಯನ್ನು ಇಲ್ಲಿಗೆ ಕರೆತರಬೇಕೆಂದೂ ಒಡ್ಡಿದ ಸಭೆಯಲ್ಲಿ ತನ್ನ ಪರಿಶುದ್ಧಿಯನ್ನು ಕುರಿತು ಆಕೆ ಆಣೆಯಿಟ್ಟು ಘೋಷಿಸಬೇಕೆಂದೂ ಆಕೆಗೆ ತಿಳಿಸಲಾಗುತ್ತದೆ. ಸೀತೆಯನ್ನು ಅಲ್ಲಿಗೆ ಕರೆತರುತ್ತಾರೆ. ಆಕೆ ಪರಿಶುದ್ಧಳೆಂದೂ ನಿರ್ದೋಷಿಯಿಂದೂ, ರಾಮಸೀತೆಯರ ಮಕ್ಕಳಿವರೆಂದೂ ವಾಲ್ಮೀಕಿ ಋಷಿ ತಿಳಿಸುತ್ತಾನೆ. ತನಗೆ ಆಕೆಯ ಪರಿಶುದ್ಧಿಯಲ್ಲಿ ಶುಚಿಯಲ್ಲಿ, ನಿರ್ದೋಷದಲ್ಲಿ ಖಂಡಿತವಾಗಿ ವ್ಯಕ್ತಿಶಃ ನಂಬಿಕೆಯಿದೆಯೆಂದು ರಾಮನು ಹೇಳುತ್ತಾನೆ. ಅಶ್ವಮೇಧದ ಸಭೆಯಲ್ಲಿ ಆಕೆ ಆಣೆಯಿಟ್ಟು ನುಡಿದರೆ ಆಕೆಗೆ ಬಂದ ಅಪಯಶಸ್ಸು ಸಾರ್ವಜನಿಕವಾಗಿ ನಿವಾರಿತವಾಗುತ್ತದೆ ಎನ್ನಲು ಸೀತೆ ಮುಂದೆ ಬಂದು ಕಣ್ಣು

ಮುಖ ತಗ್ಗಿಸಿ ಬದ್ಧಾಂಜಲಿಯಾಗಿ–

ಯಥಾಹಂ ರಾಘವಾದನ್ಯಂ ಮನಸಾಪಿ ನ ಚಿಂತಯೇ
ತಥಾ ಮೇ ಮಾಧವೀ ದೇವೀ ವಿವರಂ ದಾತುಮರ್ಹತಿ
ಮನಸಾ ಕರ್ಮಣಾ ವಾಚಾ ಯಥಾ ರಾಮಂ ಸಮರ್ಚಯೇ
ತಥಾ ಮೇ ಮಾಧವೀ ದೇವೀ ವಿವರಂ ದಾತುಮರ್ಹತಿ
ಯಥೈತತ್ ಸತ್ಯಮುಕ್ತಂ ಮೇ ವೇದ್ಮಿ ರಾಮಾತ್ ಪರಂ ನಚ
ತಥಾ ಮೇ ಮಾಧವೀ ದೇವೀ ವಿವರಂ ದಾತುಮರ್ಹತಿ

(ರಾಘವನನ್ನು ಬಿಟ್ಟು ಇನ್ನಾರನ್ನೂ ಮನಸಾಪಿ ನಾನು ಚಿಂತಿಸದಿದ್ದುದು ನಿಜವಾದರೆ, ಓ ಮಾಧವೀ ದೇವಿ, ನನಗೆ ವಿವರನ್ನು ಕೊಡು. ಮನಸಾ ಕರ್ಮಣಾ ವಾಚಾ ನಾನು ರಾಮನನ್ನು ಮಾತ್ರ ಸಮರ್ಚಿಇರುವುದು ನಿಜವಾದರೆ, ಓ ಮಾಧವೀ ದೇವಿ, ತೆರೆದುಕೊಂಡು ನೀನು ನನಗೆ ಆಶ್ರಯಕೊಡು. ರಾಮನಿಗಿಂತ ಬೇರೆಯವನನ್ನು ಅರಿತವಳಲ್ಲ ಎಂಬ ಮಾತು ಸತ್ಯವಾಗಿದ್ದರೆ, ಓ ಮಾಧವೀ ದೇವಿ, ನನಗೆ ತೆರೆದು ಆಶ್ರಯಕೊಡು.)

ಎಂದು ಹೇಳುತ್ತಾಳೆ, ಮೂರು ಸಲ[೧೪] ಆಕೆ ಇದನ್ನು ಹೇಳಿದಳು. ಭೂಮಿ ತೆರೆಯಿತು. ಒಂದು ಸ್ವರ್ಣ ಸಿಂಹಾಸನ ಮೇಲಕ್ಕಿ ಬಂದಿತು. ತಾಯಿ ಮಗಳನ್ನು ಕೈ ಕೊಂಡಳು; ಸೀತೆ ಲೋಕಕ್ಕೆ ಇನ್ನಿಲ್ಲದಂತೆ ತಾಯಿ ಅವಳನ್ನು ಒಳಕ್ಕೆ ಕೊಂಡು ಹೋದಳು. 'ಸಾಧು', 'ಸಾಧು' ಎಂಬ ಘೋಷದೊಡನೆ ದೇವಲೋಕ ಪುಷ್ಪವೃಷ್ಟಿ ಕರೆಯಿತು. ಹಿಂದೆ ಕಾಣದಂಥ ಸಂಗತಿಯೊಂದು ತಮ್ಮ ಕಣ್ಣ ಮುಂದೆ ನಡೆಯಿತೆಂದು ಸಮಸ್ತಲೋಕವೂ ಸಂತೋಷದಿಂದ ಕೋಲಾಹಲಮಾಡಿತು.

ರಾಮನು ಇಂಥ ಪರಿಣಾಮಕ್ಕೆ ಸಿದ್ಧನಾಗಿರಲಿಲ್ಲ. ಒಂದು ಕಡೆ ವ್ಯಸನ, ಇನೊಂದು ಕಡೆ ಕೋಪ ಎರಡೂ ಉಂಟಾಗಿ ಸೀತೆಯನ್ನು ಹಿಂದಿರುಗಿ ತನಗೆ ಒಪ್ಪಿಸದಿದ್ದರೆ ಭೂಮಿಯನ್ನೇ ನಾಶಮಾಡುತ್ತೇನೆಂದು ಪ್ರತಿಜ್ಞೆಮಾಡಿದ. ದೇವತೆಗಳು ಮನುಷ್ಯರೂ ಅವನ ಕೋಪವನ್ನು ಇಳಿಸುತ್ತಾರೆ. ತನಗೆ ಇಷ್ಟಬಂದರೆ ಸ್ವಂತ ಬದುಕನ್ನೇ ಮುಗಿಸಿಕೊಳ್ಳುವ ಯೋಚನೆ ಮಾಡಲು ಸಮಯ ಒದಗಿದೆಯೆಂದು ಕತೆ ಹೇಳುತ್ತದೆ. ಅವತಾರದ ಉದ್ದೇಶ ನೆರವೇರಿದೆ. ಇದು ರಾಮಾಯಣದ ಮಾತಿನ ಮತ್ತು ಭಾವನೆಯ ಮಟ್ಟಕ್ಕಿಂತ ಪೂರ್ತಿ ಬೇರೆಯಾದ್ದು. ಸ್ವಲ್ಪ ಸಮಯದಲ್ಲಿಯೇ ಲಕ್ಷ್ಮಣನು ತೀರಿಕೊಳ್ಳುತ್ತಾನೆ. ರಾಮನು ಮಹಾಪ್ರಸ್ಥಾನಕ್ಕೆ, ಎಂದರೆ ಕೊನೆಯ ಪ್ರಯಾಣಕ್ಕೆ, ಸಿದ್ಧನಾಗುತ್ತಾನೆ. ಭರತ ಶತ್ರುಘ್ನರು ಅವನ

---

೧೪ ಆಣೆ, ಶಪಥ ಇಡುವಾಗ ರಾಮಾಯಣದಲ್ಲಿ ಇದು ವಾಡಿಕೆ.

ಜೊತೆಗೆ ಸೇರಿಕೊಳ್ಳುತ್ತಾರೆ. ಅವನೊಡನೆ ಸಲ್ಲುವುದಕ್ಕೆ ಯಾರು ಯಾರಿಗೆ ಮನಸ್ಸು ಉಂಟಾಗುತ್ತದೆಯೊ ಅವರೆಲ್ಲ ಹಾಗೆ ಮಾಡುತ್ತಾರೆ. ಸ್ತ್ರೀಪುರುಷರ ಒಂದು ಮಹಾಮೇಳ ಜೀವವನ್ನು ಕಡೆಗಾಣಿಸುವ ಈ ಸಮಾರಂಭದಲ್ಲಿ ಸರಯೂ ನದಿಯೊಳಕ್ಕೆ ಹೋಗಿ ಸೇರಿಕೊಳ್ಳುತ್ತಾರೆ. ಇಲ್ಲಿಗೆ ಉತ್ತರಕಾಂಡವೂ ಮುಗಿಯುತ್ತದೆ.

ಈ ಕಾಂಡದಲ್ಲಿ ಅನೇಕ ಬಗೆಯ ಪುರಾಣದ ಕತೆಗಳಿವೆ. ಬಾಲಕಾಂಡದ ಆರಂಭ ಭಾಗಗಳಲ್ಲಿನ ಮಾತಿನಿಂದಲೂ ಯುದ್ಧಕಾಂಡದಲ್ಲಿ ರಾಮನೇ ತಾನು ಮನುಷ್ಯ ಮಾತ್ರ, ದಶರಥನ ಮಗ, ಅದಕ್ಕಿಂತ ಹೆಚ್ಚೇನೂ ಅಲ್ಲ ಎಂದು ಹೇಳಿದ್ದರೂ ಅವನು ವಿಷ್ಣುವಿನ ಅವತಾರವೆಂದು ಇವನಿಗೆ ಇಲ್ಲಿ ಹೇಳುತ್ತಾರೆ. ವಿಷ್ಣು ಕೈಕೊಂಡಿದ್ದ ಕಾರ್ಯ ಈಗ ಮುಗಿದಿರುವುದರಿಂದ ಹಿರಿಯರೂ ದೇವತೆಗಳೂ ಅವನ ಸಹಜಸ್ಥಾನವಾದ ವಿಷ್ಣುಲೋಕಕ್ಕೆ ಹಿಂದಿರುಗಲು ಸಮಯ ಉಂಟಾಗಿದೆಯೆಂದು ಹೇಳುತ್ತಾರೆ. ಬಹುಶಃ ರಾವಣನ ಪರಾಕ್ರಮವೂ ವಾಲಿಯದೂ ಹನುಮಂತನವೂ ಎಂಥವು, ಹೇಗೆ ಉಂಟಾದವು ಎಂಬುದನ್ನು ಕುರಿತು ಕತೆಯಲ್ಲಿ ಹೇಳಬೇಕೆನ್ನಿಸಿದ್ದೀತು. ಸೀತೆಯ ಪರಿತ್ಯಾಗವನ್ನು ಕುರಿತ ಕೆಲವು ಕತೆಗಳು ನಾಡಿನ ಮೇಲೆಲ್ಲ ವಾಡಿಕೆಯಲ್ಲಿದ್ದಿರಬೇಕು. ಅವನ್ನು ರಾಮಕತೆಗೆ ಸೇರಿಸಬೇಕಾಗಿತ್ತು. ಕ್ರಿ.. ಶ. ನಾಲ್ಕನೆಯ ಶತಮಾನದ ಹೊತ್ತಿಗೇ ಅದು ರಾಮಾಯಣಕ್ಕೆ ಸೇರಿದ್ದ ಸಂಗತಿ.

ಉತ್ತರಕಾಂಡದ ಕತೆಗೆ ಸಂಬಂಧಿಸಿದ ಕೆಲವು ಪಾಠಭೇದ, ವಿಸ್ತರಣಗಳು ಇಲ್ಲಿಲ್ಲದ ಇನ್ನೊಂದು ಅಂಶವನ್ನು ಪ್ರವೇಶಗೊಳಿಸಿವೆ. ವಾಲ್ಮೀಕಿಯ ಆಶ್ರಮದಲ್ಲಿ ಅಶ್ವಮೇಧದ ಕುದುರೆ ಸುಳಿದಾಗ ತಂದೆಗೂ ಮಕ್ಕಳಿಗೂ ನಡೆದ ಕಾಳಗದ ಅಂಶ ಅದು. ಚಿಕ್ಕ ಹುಡುಗರಾದ ಲವಕುಶರು ಅದನ್ನು ಹಿಡಿದು ಕಟ್ಟಿ ರಾಮನ ಸೈನ್ಯಗಳನ್ನು ಎದುರಿಸಿ ಅಶಕ್ತವಾಗಿ ಮಕ್ಕಳು ರಾಮನನ್ನೂ ಹನುಮಂತನನ್ನೂ ಸೆರೆಹಿಡಿದು ತಾವು ಏನು ಮಾಡಿದೆವೆಂಬುದನ್ನು ಸೀತೆಗೆ ತಿಳಿಸಿದಾಗ ಅದನ್ನು ಕೇಳಿ ಆಕೆಗೆ ವ್ಯಥೆಯಾಯಿತಂತೆ. ಮಕ್ಕಳಿಗೆ ತಿಳಿಯ ಹೇಳಿ ತಾವು ಸೆರೆಹಿಡಿದವರನ್ನೂ ಕುದುರೆಯನ್ನೂ ಬಿಡುಗಡೆ ಮಾಡಬೇಕೆಂದು ಆಕೆ ಹೇಳುತ್ತಾಳೆ. ಮಕ್ಕಳು ರಾಮನ ಮಕ್ಕಳು, ಸೀತೆಯ ಹೊಟ್ಟೆಯಲ್ಲಿ ಹುಟ್ಟಿದವರು ಎಂಬ ಸಂಗತಿ ರಾಮಾದಿಗಳಿಗೆ ತೀಳಿದು ಬರುತ್ತದೆ. ಅವರನ್ನು ಕರೆತರಲು ಒಡನೆಯೇ ರಾಮನಿಂದ ಲಹೆ ಬರುತ್ತದೆ. ಈ ಮುಂಚೆ ವರ್ಣಿಸಿರುವ ಆಕೆಯ ಭೂಪ್ರಾರ್ಥನೆ ಮುಂತಾದ ಸಂಗತಿಗಳು ಹಿಂದೆ ವರ್ಣಿಸಿರುವಂತೆ ಕಥೆಗೆ ಸೇರುತ್ತವೆ. ವಾಲ್ಮೀಕಿಯ ಮೂಲಗ್ರಂಥದಲ್ಲಿ ಬಹುಶಃ ಇದು ಇದ್ದಿರಲಾರದು.

ರಾಮಾಯಣ ಪಾರಾಯಣದಲ್ಲಿ ವಾಡಿಕೆಯಲ್ಲಿರುವುದು ಮೊದಲ ಆರು ಕಾಂಡಗಳೇ. ಲಂಕೆಯಲ್ಲಿ ಜಯದೊರೆತು ಹದಿನಾಲ್ಕು ವರ್ಷದ ವನವಾಸಾಂತ್ಯದಲ್ಲಿ ಇವರೆಲ್ಲ ಹಿಂದಿರುಗಿ ಅಯೋಧ್ಯೆಯಲ್ಲಿ ರಾಮನ ಪಟ್ಟಾಭಿಷೇಕ ಆದ ಮೇಲೆ ಕತೆ ಮುಗಿದು ನಿಲ್ಲುತ್ತದೆ. ಕಡೆಗೆ ಅಲ್ಲಿ ಒಂದು ಫಲಶ್ರುತಿಯಿರುವುದೂ ಕೃತಿ ಮುಕ್ತಾಯಗೊಂಡ ಸ್ಪಷ್ಟ ಸೂಚನೆ.

* * * *

## ಅಧ್ಯಾಯ ೩

# ಕುಟುಂಬ ಜೀವನದ ಬಗೆಗಳು

ರಾಮಾಯಣದಲ್ಲಿ ರೂಪಿತವಾಗುವ ನಾಗರಿಕತೆಯ ಚಿತ್ರಣದಲ್ಲಿ ಮೂರು ಬಗೆಯ ಸಂಸಾರ ಚಿತ್ರಗಳು ಎದ್ದು ಕಾಣುತ್ತವೆ; ಅಯೋಧ್ಯೆಯ ರಾಜನಾದ ದಶರಥನ ಆರ್ಯಗೃಹದಲ್ಲಿನ ಸಂಸಾರ ಚಿತ್ರ; ಮೊದಲು ವಾಲಿ, ಆಮೇಲೆ ಸುಗ್ರೀವನ ಕಿಷ್ಕಿಂಧೆಯಲ್ಲಿದ್ದ ವಾನರ ಸಂಸಾರ ಚಿತ್ರ; ಲಂಕೆಯಲ್ಲಿನ ರಾಕ್ಷಸ ಚಕ್ರವರ್ತಿ ರಾವಣನ ಜೀವನಪ್ರಕಾರ. ಮೊದಲನೆಯದನ್ನು ಹೆಚ್ಚು ವಿವರವಾಗಿ ಕವಿ ವರ್ಣಿಸುತ್ತಾನೆ. ಕತೆಯ ಮೂಲಸ್ಥಾನ ಅಲ್ಲಿ. ಯಾವ ಕತೆ ಹುಟ್ಟಿ ಅಲ್ಲಿನ ಮುಖ್ಯರಲ್ಲಿ ಕೆಲವರ ಅದೃಷ್ಟ ಪರಂಪರೆ ಆಕೃತಿಗೊಂಡು ಪರಿಣಾಮಗೊಳ್ಳುವುದೊ ಅದರ ತವರುನೆಲಸು ಅದು. ರಾಮಾಯಣವೆಂಬ ಹೆಸರಲ್ಲಿ ರಾಮನ ಪ್ರಾಧಾನ್ಯ ಸಹಜವಾಗಿ ಸ್ಥಾಪಿತವಾಗಬೇಕಲ್ಲವೆ? ಹೇಗೆ ಹುಟ್ಟಿ ಬೆಳೆದ; ಅವನಿಗೆ ಹೇಗೆ ವಿದ್ಯಾಶಿಕ್ಷಣವಾಯಿತು ವಿವಾಹ ಏರ್ಪಟ್ಟಿತು; ರಾಜ್ಯದಿಂದ ಗಡಿಪಾರಾದ; ಅನೇಕ ಸಾಹಸಕಾರ್ಯಗಳನ್ನು ಮಾಡಿದ; ಹೆಂಡತಿಯನ್ನು ಕಳೆದುಕೊಂಡ; ಆಕೆಯನ್ನು ಬಲಾತ್ಕಾರದಿಂದ ಕೊಂಡೊಯ್ದು ಸೆರೆಮಾಡಿದ್ದ ಮನುಷ್ಯನನ್ನು ಒಬ್ಬ ಸ್ನೇಹಿತನ ಸಹಾಯದಿಂದ ನಾಶಮಾಡಿ ಆಕೆಯನ್ನು ಹಿಂದಕ್ಕೆ ಪಡೆದ; ನ್ಯಾಯವಾಗಿ ತನಗೆ ಬರಬೇಕಾಗಿದ್ದ ಅಯೋಧ್ಯಾ ರಾಜ್ಯವನ್ನು ಪುನಃ ಪಡೆದುಕೊಂಡ ಎಂಬುದು ರಾಮನ ಅಯನ; ಎಂದರೆ ನಡೆದದ್ದು; ಕತೆ. ಮನಸ್ಸು ಮಾಡಿದ್ದರೆ ಭರತನೇ ವಾಸ್ತವವಾಗಿ ಆಳಬಹುದಾಗಿತ್ತು. ಕೆಟ್ಟ ಬಾಯ ಜನ ಆಡಿದ ಸುಳ್ಳು ನುಡಿಯ ಪರಿಣಾಮವಾಗಿ ತನ್ನ ಮಕ್ಕಳನ್ನು ಹೆರಲು ಗರ್ಭಿಣಿಯಾಗಿದ್ದ ಸೀತೆಯನ್ನು ರಾಮನು ತ್ಯಜಿಸಬೇಕಾಗಿ, ಕಾಡಿಗೆ ಅಟ್ಟಬೇಕಾಗಿ ಬಂದದ್ದು ದುರದೃಷ್ಟ ಪ್ರಸಂಗ. ಮಕ್ಕಳನ್ನೂ ಹೆಂಡತಿಯನ್ನೂ ಪುನಃ ಒಪ್ಪಿಕೊಂಡ ಸಂಗತಿಯಿಂದ ಕತೆ ಮುಗಿಯುವುದಾದರೂ ತನ್ನ ಪರಿಶುದ್ಧಿಯನ್ನು ಸ್ಥಾಪಿಸಿಯಾದ ಮೇಲೆ ಭೂಮಿಯಿಂದ ಕಾಣದಾಗಲು ಸೀತೆ ಬಯಸುತ್ತಾಳೆ. ತಾಯಿ, ತಂದೆ, ಮಕ್ಕಳು, ರಾಜ್ಯ, ಆಡಳಿತ, ಅಲ್ಲಿನ ಬಾಂಧವ್ಯಗಳ ಸ್ವರೂಪ ಗ್ರಂಥದ ಮಹಾವಸ್ತು. ಅತಿಪ್ರಾಕೃತಿಕ

ಶಕ್ತಿಗಳೂ ಸೇರಿ ರಾಮನು ತಾನಾಗಿ ಈ ಮರ್ತ್ಯ ದೇಹವನ್ನು ಕಳೆದುಕೊಂಡು ಹೋಗುವ ಮನಸ್ಸು ಮಾಡುವಂತೆ ಆಗುತ್ತದೆ. ಹೀಗೆ ರಾಮ, ಅವನ ಹೆಂಡತಿ, ಸೋದರರು ಪ್ರಧಾನವ್ಯಕ್ತಿಗಳಾಗಿ ಇರುವ ಮತ್ತು ಅವನ ಜೀವನಕತೆಯ ನಾನಾ ಮಜಲುಗಳ ಕತೆಯ ಬೆಳವಣಿಗೆ ಆರು (ಏಳು) ಕಾಂಡಗಳಲ್ಲಿ ರೂಪಿತವಾಗಿದೆ.

* * * *

ಕತೆಯ ಒಂದು ಘಟ್ಟದಲ್ಲಿ ರಾಮ ಇನ್ನೂ ಹುಟ್ಟಿರುವುದಿಲ್ಲ. ಬಹು ಕಾಲ ಸುಮಾರು – ಅವನ ಜೀವನ ಕಾಲದ ಸುಮಾರು ಕೊನೆಯ ಹದಿನೆಂಟು ವರ್ಷಗಳವರೆಗೂ–ದಶರಥನಿಗೆ ಮಕ್ಕಳಿರಲಿಲ್ಲ. ರಾಜನ ಸಂಸಾರ ದೊಡ್ಡದು. ಅರಮನೆಯಲ್ಲಿ ೩೫೦ ಮಂದಿ ರಾಜನು ಕೈ ಹಿಡಿದ ಹೆಣ್ಣುಗಳಿದ್ದರು; ಮೂವರು ರಾಣಿಯರು. ಮೂವರು ರಾಣಿಯರಾರಿಂದಲೂ ಗಂಡುಮಕ್ಕಳಾಗದೆ ಒಂದು ಪುತ್ರಕಾಮೇಷ್ಟಿಯಾಗವನ್ನು ಮಾಡಬೇಕಾಯಿತು. ಪುರೋಹಿತರು ಅಲ್ಲಿ ಒಂದು ಪಾಯಸವನ್ನು[೧] ಉತ್ಪತ್ತಿ ಮಾಡಿದರು. ಇದರ ಫಲವಾಗಿ ದಶರಥನಿಗೆ ಪುತ್ರಲಾಭವಾಗುತ್ತದೆ. ಮೂವರು ರಾಣಿಯರಿಗೂ ಪಾಯಸ ಹಂಚಲಾಗುತ್ತದೆ.

ರಾಮನ ಈ ಕತೆಯ ಜೊತೆಗೆ ಬೇರೆ ಕಡೆ ಸೀತೆಯ ಕತೆಯೂ ಹುಟ್ಟಿಕೊಂಡಿದೆ. 'ಸೀತಾಯಾಃ ಚರಿತಂ ಮಹತ್' ಎಂದು ವರ್ಣಿಸಿರುವ ರಾಮಾಯಣ ಕತೆಯಲ್ಲಿ ಅವಳ ಪಾತ್ರ, ಸ್ಥಾನ ಮುಖ್ಯವಾದವು. ಅವಳಿಲ್ಲದಿದ್ದರೆ ಸೀತಾಪಹರಣದ ಕತೆ, ರಾವಣವಧೆ ಆಗಬೇಕಾಗಿರಲಿಲ್ಲ. ಕತೆಯ ಎರಡನೆಯ ಸ್ತರದ ಅಂಗವಾಗಿ ವಾನರ ರಾಕ್ಷಸ ವಿಭಾಗಗಳ ವರ್ಣನೆಗೆ ಅಗತ್ಯವಿರುತ್ತಿರಲಿಲ್ಲ. ರಾವಣನ ನಾಶವೇ ರಾಮಾವತಾರದ ಕತೆಯ ಮುಖ್ಯಾಂಶವೆಂಬುದು ಈ ಎರಡನೆಯ ಸ್ತರದ ಸಂಗತಿ. ಈಗ ಇರುವಂತೆ ರಾಮಾಯಣವು ವ್ಯಕ್ತಿಶವಾಗಿ ರಾಮನ ಕತೆ ಎಷ್ಟೋ ಅಷ್ಟೇ ಮಟ್ಟಿಗೆ ರಾಮನು ಪ್ರತಿನಿಧಿಸುವ ನಾಗರಿಕತೆ, ಸಂಸ್ಕೃತಿಗಳಿಗೆ ವಿರೋಧಿಗಳಾಗಿದ್ದ ರಾಕ್ಷಸರೊಡನೆ ನಡೆದ ಯುದ್ಧದ ಕತೆ ಪ್ರಧಾನವಾಗುತ್ತದೆ. ತಾಟಕಿಯ ವಿರುದ್ಧವಾಗಿ ತನ್ನ ಆಶ್ರಮವನ್ನು ರಕ್ಷಿಸಲು ರಾಮನ ಸಹಾಯವನ್ನು ಅರಸಿಕೊಂಡು ವಿಶ್ವಾಮಿತ್ರನು ಬಂದ ದಿವಸದಿಂದ ಕತೆಯ ಈ ಎರಡು ಎಳೆಗಳೂ ಹೊಸೆದುಕೊಳ್ಳುತ್ತವೆ.

ಪುರಾತನವಾದ ಆರ್ಯ ಕ್ಷತ್ರಿಯ ರಾಜಮನೆತನಗಳಲ್ಲಿ ಶ್ರೇಷ್ಠವಾಗಿದ್ದ ಒಂದು ಮನೆತನಕ್ಕೆ ದಶರಥನು ರಾಜ. ಶೀಲದಲ್ಲಿ, ಸಾಧನೆಯಲ್ಲಿ, ಸಾರ್ವಜನಿಕ

---

೧ ಅದರೊಳಕ್ಕೆ ವಿಷ್ಣು ಬಂದು ಸೇರಿಕೊಂಡನಂತೆ.

ಹಿತಕಾರ್ಯಗಳಲ್ಲಿ ಆ ವಂಶದ ರಾಜರು ಹೆಸರಾಗಿದ್ದರು. ಅಂಥವರು ಆ ಮನೆತನದಲ್ಲಿ ಅನೇಕರು. ಅಯೋಧ್ಯೆ ಅವರ ರಾಜಧಾನಿ. ನಗರರಚನೆ, ಸಂಧಿ, ವಿಗ್ರಹ, ಕಲೆಗಳ ವ್ಯವಸಾಯದಲ್ಲಿ ಬೆಳೆಯಲು ಸಾಮಾಜಿಕ ಮತ್ತು ಲೌಕಿಕ ವ್ಯವಸ್ಥೆ; ರಕ್ಷಣೆಗೆ, ಆಕ್ರಮಣ ಕಾರ್ಯಗಳಿಗೆ ಅಗತ್ಯವಾದ ಸಜ್ಜು ಸಂಗ್ರಹ; ಇಂಥವು ಯಾವುವನ್ನೂ ತನ್ನ ಉಗ್ರಾಣಗಳಲ್ಲಿ ಆಯುಧಾಗಾರಗಳಲ್ಲಿ ಬಲಿಷ್ಠವಾದ ಶಕ್ತಿಸಂಪನ್ನವಾದ ಒಂದು ರಾಜ್ಯ ಕೂಡಿಟ್ಟುಕೊಳ್ಳಬೇಕಾಗಿತ್ತೊ ಅದು; ಉತ್ಸವ, ಹರ್ಷ ಸಮಾರಂಭ, ಮನರಂಜನೆ, ಸುಖಸೌಕರ್ಯಗಳು ಮುಂತಾದವನ್ನು ಶ್ರೀಮಂತವಾದ ಸುಗುಪ್ತವಾದ ಸಂತೃಪ್ತವಾದ ಒಂದು ನಗರ ತನ್ನ ಜನತೆಗೆ ಒದಗಿಸಬೇಕೆಂಬ ಉದ್ದೇಶದಿಂದ ರಸ್ತೆ, ಉಪವನ, ಕಾರಂಜಿ, ಅರಮನೆ, ದೇವಾಲಯ, ಸ್ಮಾರಕ ಮಂದಿರಗಳು, ವಾಣಿಜ್ಯ–ವ್ಯಾಪಾರ ಕೇಂದ್ರಗಳು, ವಿನೋದವಿಲಾಸಗಳ ಏರ್ಪಾಡು, ಜನರ ಸಂತೋಷಕ್ಕೆ ಒದಗಿಸಬಲ್ಲವೊ– ಅಂಥವೆಲ್ಲ ಆ ನಗರದಲ್ಲಿದ್ದುವು. ಒಂದು ಕ್ಷಣದ ಅವಕಾಶದಲ್ಲಿ ದೊಡ್ಡ ಸೈನ್ಯಗಳು ಕೂಡಬಲ್ಲವಾಗಿದ್ದುವು. ರಸ್ತೆ ಬಾವಿ ಮರಗಳನ್ನು ಬಹು ದೂರದ ಪ್ರದೇಶಗಳವರೆಗೂ ಊರ ಹೊರಭಾಗಗಳಲ್ಲಿ ದೂರದ ಕಾಡುಗಳಲ್ಲಿ ನೆಲೆಗೊಳಿಸಲು ನಿಯುಕ್ತರಾಗಬಹುದಾದ ಕುಶಲ ಕರ್ಮಿಗಳೂ ಶಿಲ್ಪಿಗಳೂ ಅಲ್ಲಿದ್ದರು. ಹಿರಿಯರೂ ಅನೇಕ ಜೀವನ ವರ್ಗಗಳ ಪ್ರತಿನಿಧಿಗಳೂ ಮಂತ್ರಿಗಳೂ ಪ್ರಾಜ್ಞರೂ ಸಲಹೆಗೆ ಸುಲಭವಾಗಿ ಬೇಗ ದೊರೆಯುತ್ತಿದ್ದರು. ನಗರ ಚಿತ್ರ ನೆಮ್ಮದಿ, ಸುವ್ಯವಸ್ಥೆ, ಶಾಂತಿ ಸುರಕ್ಷಿತತೆಗಳನ್ನು ಕಾಣಿಸುತ್ತಿತ್ತು. ದಶರಥನ ಆಳಿಕೆಗಳನ್ನು ಯಾವ ಹಗೆಯೂ ಪ್ರತಿಭಟಿಸುವಂತಿರಲಿಲ್ಲ. ರಾಜನು ಜನಪ್ರಿಯ. ತನ್ನ ಜನರ ಮೇಲೆ ವಿವೇಕದಿಂದಲೂ ಚೆನ್ನಾಗಿಯೂ ಬಹುಕಾಲ ಆಳಿಕೊಂಡಿರಲು ಮಾಡಬಹುದಾದ್ದನ್ನೆಲ್ಲ ಮಾಡಿದ್ದಂತೆ ಕಾಣುತ್ತಿತ್ತು.

ರಾಮನಲ್ಲಿ ಎಲ್ಲರಿಗೂ ಪ್ರೀತಿ. ಅರಮನೆಯಲ್ಲಿದ್ದ ಎಲ್ಲರಿಗೂ ತಮ್ಮಲ್ಲಿ ಅವನಿಗೆ ವಿಶ್ವಾಸವಿತ್ತೆಂಬುದು ತಿಳಿದಿತ್ತು. ದಶರಥನಿಗೆ ಅವನನ್ನು ಕಂಡರೆ ಅಪರಿಮಿತ ಪಕ್ಷಪಾತ. ತಂದೆಯ ಕಣ್ಮಣಿಯೇ ಆಗಿದ್ದ ರಾಮ. ಅವನ ನೆರವಿಗಾಗಿ ವಿಶ್ವಾಮಿತ್ರನು ಬೇಡಲು ಮಗನನ್ನು ಕೇಡಿಗೆ ಈಡುಮಾಡಲು ಅವನು ಒಪ್ಪಲಿಲ್ಲ. 'ನನ್ನ ರಾಮನಿಗೆ ಇನ್ನೂ ಹದಿನಾರು ತುಂಬಿಲ್ಲ' ಎಂದ. ಸಣ್ಣ ವಯಸ್ಸಿನ ಈ ಮಗನ ಪರವಾಗಿ ಅವನ ಮನಸ್ಸು ಎಷ್ಟು ಕೋಮಲವಾಗಿತ್ತು ಎಂಬ ಸಂಗತಿ ತಿಳಿಯುತ್ತದೆ. ಜನಕನ ಸಭೆಯಲ್ಲಿ ಶಿವಧನುಸ್ಸನ್ನು ರಾಮನು ಮುರಿದನೆಂದೂ ಸೀತೆಯೊಡನೆ ಪರಿಣಯವಾಗಲಿದೆಯೆಂದೂ ಜನಕನೊಡನೆ ಹೊಸ ಸಂಬಂಧ

ಏರ್ಪಡಲಿದೆಯೆಂದೂ ಕೇಳಿ ತಂದೆಗೆ ಸಂತೋಷವಾಯಿತು. ಮರುಪ್ರಯಾಣದಲ್ಲಿ ಪರಶುರಾಮನು ಎದುರಿಗೆ ಬಂದಾಗ ಭಯವಿಲ್ಲದೆ ಇರಲಿಲ್ಲ. ಆಗ ರಾಮನು ತೋರಿಸಿದ ಶಕ್ತಿಸಾಮರ್ಥ್ಯ ಅವನ ಮೇಲೆ ಅಚ್ಚೊತ್ತಿ ತಂದೆ ಹೆಮ್ಮೆಪಡುವಂತಾಯಿತು. ಭರತನನ್ನು ಕುರಿತು ಅವನ ಮನಸ್ಸಿನಲ್ಲಿ ಅಷ್ಟು ತೃಪ್ತಿಯ ಭಾವವಿದ್ದ ಹಾಗೆ ಕಾಣುವುದಿಲ್ಲ. ರಾಮನಿಗೆ ಯುವರಾಜ ಪಟ್ಟ ಕಟ್ಟುವಾಗ ಅವನು ಅಯೋಧ್ಯೆಯಲ್ಲಿ ಇಲ್ಲವೆಂಬ ಅಂಶ ಎಣಿಕೆಗೆ ಬರಲಿಲ್ಲವಾದರೂ ಭರತನ ಗುಣಶೀಲವನ್ನೂ ಅವನು ಬಲ್ಲವನೇ.

ಕಾಮಂ ಖಲು ಸತಾಂ ವೃತ್ತೇ ಭ್ರಾತಾ ತೇ ಭರತಃ ಸ್ಥಿತಃ
ಜ್ಯೇಷ್ಠಾನುವರ್ತೀ ಧರ್ಮಾತ್ಮಾ ಸಾನುಕ್ರೋಶೋ ಜಿತೇಂದ್ರಿಯಃ
ಕಿಂತು ಚಿತ್ತಂ ಮನುಷ್ಯಾಣಾಂ ಅನಿತ್ಯಮಿತಿ ಮೇ ಮತಿಃ
ಸತಾಂ ಚ ಧರ್ಮನಿತ್ಯಾನಾಂ ಕೃತ ಶೋಭಿ ಚ ರಾಘವ

(ನಿನ್ನ ತಮ್ಮ ಭರತ ಹಿರಿಯರಲ್ಲಿ ಒಳ್ಳೆಯ ನಡತೆಯುಳ್ಳವನು; ಹಿರಿಯರನ್ನು ಅನುಸರಿಸಿ ನಡೆಯುವವನು; ಧರ್ಮಾತ್ಮ; ಅನುಕ್ರೋಶವುಳ್ಳವನು; ಜಿತೇಂದ್ರಿಯನು. ಆದರೆ ಮನುಷ್ಯರ ಚಿತ್ತ ಅನಿತ್ಯವೆಂಬುದು ನನ್ನ ಭಾವ; ಎಲ್ಲ ಸಮಯದಲ್ಲಿಯೂ ಧರ್ಮನಿರತರಲ್ಲಿಯೂ ಒಂದೇ ರೀತಿಯಲ್ಲಿ ಇರಬಲ್ಲುದೊ ಆರದೊ....)

ಭರತನಿಗಾಗಲಿ, ಅವನ ಸೋದರಮಾವನಿಗಾಗಲಿ, ಅಜ್ಜನಿಗಾಗಲಿ ಹೇಳಿ ಕಳಿಸಲಿಲ್ಲ. ರಾಮನ ಸುರಕ್ಷಿತತೆಯ ವಿಷಯದಲ್ಲಿಯೇ ದಶರಥನಿಗೆ ಸಂಶಯಗಳಿದ್ದಿರಬೇಕು. ಆದುದರಿಂದ ಆ ರಾತ್ರಿ ತನ್ನ ರಕ್ಷಣೆಗಾಗಿ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದನು.

ಸುಹೃದಶ್ಚಾಪ್ರಚತ್ತಾಸ್ತ್ವಾಂ ರಕ್ಷಂತ್ವದ್ಯ ಸಮಂತತಃ
ಭವಂತಿ ಬಹು ವಿಘ್ನಾನಿ ಕಾರ್ಯಾಣ್ಯೇವಂ ವಿಧಾನಿ ಹಿ
ವಿಪ್ರೋಷಿತಶ್ಚ ಭರತೋ ಯಾವದೇವ ಪುರಾದಿತಃ
ತಾವದೇವಾಭಿಷೇಕಸ್ತೇ ಪ್ರಾಪ್ತ ಕಾಲೋ ಮತೋ ಮಮ–

(ನಿನ್ನ ವಿಶ್ವಾಸದ ಸ್ನೇಹಿತರು ನಿನ್ನನ್ನು ಈ ದಿನ ಎಚ್ಚರಿಕೆಯಿಂದ ಕಾಪಾಡಲಿ; ಇಂಥ ಕಾರ್ಯಗಳಿಗೆ ಅನೇಕ ವಿಘ್ನಗಳು ಬರುವುದುಂಟು. ಭರತನು ಊರಿಂದ ಹೊರಗೆ ಹೋಗಿದ್ದಾನೆ. ನಿನ್ನ ಅಭಿಷೇಕವನ್ನು ನೆರವೇರಿಸುವುದಕ್ಕೆ ಇದು ಪ್ರಾಪ್ತಕಾಲವೆಂಬುದು ನನ್ನ ಮತ.)

ತನ್ನ ಇಚ್ಛೆಗೆ ವಿರೋಧವಾಗಿ ರಾಮನ ವನವಾಸಕ್ಕೆ ದಶರಥನನ್ನು ಒಪ್ಪಿಸುವ ಚಿತ್ರ ಕನಿಕರ ತರುತ್ತದೆ. "ಧರ್ಮಬಂಧೇನ ಬದ್ಧೋಽಸ್ಮಿ" ಎಂಬ ಮಾತನ್ನು

ಅವನು ಆಡುತ್ತಾನೆ. ತಾನಾಗಿ ಬಹುಕಾಲದ ಹಿಂದೆ ಯುದ್ಧರಂಗದಲ್ಲಿ ತನಗೆ ಸೇವೆಮಾಡಿದ್ದಕ್ಕೆ ಪ್ರತಿಯಾಗಿ ಹೆಂಡತಿ ಕೈಕೆಗೆ ಕೊಟ್ಟ ಮಾತನ್ನು ಇಲ್ಲವೆನ್ನುವ ಹಾಗಿಲ್ಲ. ಆ ವಾಗ್ದಾನವನ್ನು ನೆರವೇರಿಸಬೇಕಾದರೆ ಆಕೆ ಕೇಳುವುದನ್ನು ತಪ್ಪಿಸುವ ಮಾರ್ಗವಿರಲಿಲ್ಲ. ಧರ್ಮಬಂಧ ಅವನನ್ನು ಬಲಹೀನನನ್ನಾಗಿ ಮಾಡಿದೆ. ಅಯೋಧ್ಯೆಯ ಪ್ರಜೆಗಳಿಗೆಲ್ಲ ಆಶಾಭಂಗ ಮಾಡುತ್ತಿದ್ದಾನೆ. ತನ್ನ ಅರಮನೆಯಲ್ಲಿರುವ ಇತರರಿಗೂ ತನಗೂ ಅದೇ ದುಃಸ್ಥಿತಿ;– ತನ್ನ ಜೀವಕ್ಕೇ ಇದರಿಂದ ಹಾನಿ ಉಂಟೆಂದು ಅವನು ಬಲ್ಲ.

ಈ ಮನೆತನದಲ್ಲಿ ಯುಕ್ತವಾದದ್ದನ್ನೆಲ್ಲ ನೆರವೇರಿಸುವುದು ಸಂಪ್ರದಾಯ. ಎಲ್ಲದರಲ್ಲಿಯೂ ಯಾವುದು ಸರಿಯೊ ನ್ಯಾಯವೊ ಅದರ ಪರಿವೆ, ನಡವಳಿಕೆ, ವಾಡಿಕೆ. ಮಹಾಪುರೋಹಿತನಾದ ವಸಿಷ್ಠನನ್ನು ಕಂಡರೆ ಪೂಜ್ಯಭಾವವಿದೆ. ಸೂತ ಸುಮಂತ್ರನು ಅನೇಕರ ಗೌರವಾಭಿಮಾನಗಳಿಗೆ ಪಾತ್ರನಾಗಿರುತ್ತಾನೆ. ರಾಜನಲ್ಲಿ ಭಕ್ತ. ದಶರಥ, ರಾಮ ಇವರ ಅಂತಃಪುರಗಳಿಗೆ ಧಾರಾಳವಾಗಿ ಪ್ರವೇಶಮಾಡುವಷ್ಟು ವಿಶ್ವಾಸಕ್ಕೆ ಪಾತ್ರನಾಗಿರುತ್ತಾನೆ. ರಾಜ್ಯದಲ್ಲಿ ಮಂತ್ರಿಗಳು ತತ್ವಜ್ಞರು, ಕಾರ್ಯದಕ್ಷರು. ಎಲ್ಲ ವರ್ಗದ ಮತ್ತು ಬಗೆಯ ಸ್ತ್ರೀ ಪುರುಷರಿಗೂ ರಾಜನಲ್ಲಿ, ರಾಮನಲ್ಲಿ ವಿಶೇಷ ಪ್ರೀತಿ, ಆದರ ಇದ್ದುವು. ವೃದ್ಧ ಮಹಾರಾಜನು ಕಡೆಗೆ ರಾಮನಿಗೆ ಯುವರಾಜ ಪದವಿಯನ್ನೂ ಜವಾಬ್ದಾರಿಯನ್ನೂ ವಹಿಸಿಕೊಡುತ್ತಾನೆಂಬ ಸುದ್ದಿಯನ್ನು ಕೇಳಿದಾಗ ಅವರೆಲ್ಲ ಸಂತೋಷ ಪಟ್ಟಿದ್ದರು. ಅವನು ಸರ್ವಥಾ ಅದಕ್ಕೆ ಯೋಗ್ಯನೆಂದೂ ಜನಪ್ರಿಯನೆಂದೂ ಕೀರ್ತಿ ಇತ್ತು. ಹಗಲು ರಾತ್ರಿ ಊರಲ್ಲಿ ಉತ್ಸವಗಳು ಸಮಾರಂಭಗಳು ಹೇಗೆ ನಡೆದುವೆಂಬುದನ್ನು ಓದಲು ಹರ್ಷವಾಗುತ್ತದೆ. ಹಠಾತ್ತಾಗಿ ನಡವಳಿಕೆಗಳಲ್ಲಿ ತಿರುವು ಬಂದುದನ್ನು ಕೇಳಿ ಎಲ್ಲರೂ ಸಮನಾಗಿ ದುಃಖಪೀಡಿತರಾಗುತ್ತಾರೆ: ಅವರಿಗೆಲ್ಲ ಹೃದಯಘಾತವಾದಂತಾಗುತ್ತದೆ. ಜನರ ರೀತಿನೀತಿಗಳಲ್ಲಿಯೂ ಮಾತಿನಲ್ಲಿಯೂ ಸಾರ್ವಜನಿಕ ನೀತಿನಡವಳಿಕೆಗಳಲ್ಲಿಯೂ ಒಂದು ಕ್ರಮ, ಸರಿತಪ್ಪುಗಳ ವಿವೇಚನೆ ಇರುತ್ತಿತ್ತು. ರಾಜನೆಂಬವನು ತಪ್ಪು ಮಾಡುತ್ತಿದ್ದಾನೆಂದು ಕಂಡಾಗ ಕೂಡ ಜನರು ಸತ್ಯವನ್ನು ನುಡಿಯುತ್ತಾರೆ. ಮಾಡದ ತಪ್ಪಿಗೆ ಯಾರಿಗೂ ಶಿಕ್ಷೆಯಾಗುತ್ತಿರಲಿಲ್ಲ. ಯೋಗ್ಯತೆ ಇಲ್ಲದವನಿಗೆ ಪುರಸ್ಕಾರವೂ ದೊರೆಯುತ್ತಿರಲಿಲ್ಲ. ಭರತನ ಕಿವಿಗೆ ರಾಮನ ಗಡಿಪಾರು ಸಮಾಚಾರ ಬಿದ್ದ ಕೂಡಲೆ ಭರತನು ಕೇಳುವ ಮೊದಲ ಪ್ರಶ್ನೆ – ಅಂಥ ಶಿಕ್ಷೆಗೆ ಈಡಾಗಲು ಅವನು ಮಾಡಿದ್ದ ತಪ್ಪೇನು? – ಎಂದು. ರಾಜ್ಯವನ್ನು ಆಳಲು ಒಬ್ಬ ರಾಜನಿಲ್ಲದಿರುವ ಪರಿಸ್ಥಿತಿಯನ್ನು ಜನ

ಒಪ್ಪಿಕೊಳ್ಳುತ್ತಿರಲಿಲ್ಲ. ಅರಾಜಕಸ್ಥಿತಿಯ ದುಷ್ಪರಿಣಾಮಗಳಿಗೆ ಒಟ್ಟು ಒಂದು ಸರ್ಗವೇ ವಿನಿಯೋಗವಾಗಿದೆ. ರಾಮನು ಭರತನನ್ನು ಸ್ವಲ್ಪ ಕಾಲದ ತರುವಾಯ ಕಂಡಾಗ ರಾಜ್ಯವನ್ನು ಸಮರ್ಪಕವಾಗಿ ಆಳುತ್ತಿದ್ದೀಯ ಎಂದು ಕೇಳುವುದರ ಜೊತೆಗೆ ವಿವೇಕಯುತವಾದ ರಾಜ್ಯಪಾಲನೆಯ ತತ್ವಗಳನ್ನು ಪ್ರತಿಪಾದಿಸುತ್ತಾನೆ.[೨] ಸ್ನೇಹಿತರ ಪರವಾಗಿ, ಗುರುಗಳ ತಾಯಿತಂದೆಯರ ಪರವಾಗಿ ಸರಿಯಾದ ನಡತೆ ಎಂಥದು, ರಾಜರಿಗೂ ಅವರ ಅಧೀನ ವರ್ಗದವರಿಗೂ ಸಂಬಂಧಗಳು ಹೇಗಿರಬೇಕು, ಆಶ್ರಮಗಳಲ್ಲಿ ಯಾವುದು ನಡವಳಿಕೆ–ಇವೆಲ್ಲ ಜನಕ್ಕೆ ವಿದಿತವಾಗಿವೆ. ಜ್ಯೇಷ್ಠ ಪುತ್ರನಿಗೆ ರಾಜ್ಯದ ಮತ್ತು ಆಸ್ತಿಯ ಹಕ್ಕು ಎಂಬುದನ್ನೂ ಎಲ್ಲರೂ ಒಪ್ಪುತ್ತಾರೆ. ಅದನ್ನು ಮೀರಲು ಅಥವಾ ಮುರಿಯಲು ಯಾರೂ ಒಪ್ಪರು. ಅದರಿಂದ ಪ್ರಯೋಜನ ಪಡೆಯುವವರಿಗೂ ಅದು ಸಮ್ಮತವಲ್ಲ. ಇಂಥ ಸಂಗತಿಗಳಲ್ಲಿ ಜನರ ನಿಷ್ಕೃಷ್ಟವಾದ ಅಭಿಮತ ಇಂಥದು ಎಂಬುದಕ್ಕೆ ವಿರೋಧವಾಗಿ ನಡೆಯಲು ಭರತನಿಗೇ ಇಷ್ಟವಿರಲಿಲ್ಲ ಇಂಬುದು ಪ್ರಮಾಣವಾಗುತ್ತದೆ. ಅದು ಸಂಪ್ರದಾಯ; ಸಂಸ್ಕೃತಿ. ಪ್ರತಿಯೊಬ್ಬರೂ ಯುಕ್ತವಾಗಿ ನಡೆದುಕೊಳ್ಳುತ್ತಾರೆ. ಇತರರಿಂದ ಅಂಥ ನಡತೆಯನ್ನು ನಿರೀಕ್ಷಿಸುತ್ತಾರೆ. ನಡವಳಿಕೆಯ ಮರ್ಯಾದೆಗಳು ಉದಾರವಾದುವು. ಶಪಥಪೂರ್ವಕವಾಗಿ ಮಾಡಿದ ವಾಗ್ದಾನಕ್ಕೆ ಪೂಜ್ಯತೆ ಇತ್ತು. ಪರಿಣಾಮಗಳು ಯವುವೇ ಆಗಲಿ, ಕೊಟ್ಟ ಮಾತನ್ನು ನಡಸಿಕೊಳ್ಳಬೇಕು ಎಂಬುದನ್ನು ಧರ್ಮವೆಂದು ಎಣಿಸಿದ್ದರು.

ತಮ್ಮ ಪಟ್ಟಣವನ್ನು ಕುರಿತು ಆ ಜನಕ್ಕೆ ಇರುವ ಪ್ರೀತಿ ಹಾರ್ದಿಕವಾದ್ದು; ಆಳವಾದ್ದು ; ತುಂಬಿದ್ದು. ಸಾಧಾರಣವಾಗಿ ಊರು ಸಂತತವಾಗಿ ನಗು ನಗುತ್ತ ಹೇಗೆ ಇರುತ್ತಿದ್ದುದು ಎಷ್ಟು ತಬ್ಬಲಿಯಾಗಿ, ಹರ್ಷಶೂನ್ಯವಾಗಿ ಕಾಣಬಲ್ಲದು ಎಂಬುದನ್ನು ಭರತನು ಅಯೋಧ್ಯೆಗೆ ಹಿಂದಿರುಗಿದಾಗ ವರ್ಣಿಸುತ್ತಾನೆ. 'ನಿರಾಕಾರಾ, ನಿರಾನಂದಾ, ದೀವಾ, ಪ್ರತಿಹತಸ್ವನಾ' ಎಂದು ಒಂದು ಪಟ್ಟಣವನ್ನು ಕುರಿತು ನುಡಿದಿರುವ ಅವನ ಮಾತು ಅವನ ಮನಸ್ಸಿನ ಬೇನೆಯನ್ನು ಕಾಣಿಸುತ್ತದೆ. ಎಷ್ಟು ಬಗೆಯ ಸಂತೋಷ ವಿನೋದಗಳಿಂದ ಆಟಪಾಟಗಳಿಂದ ಗಾನನೃತ್ಯಗಳಿಂದ ದಿನಜೀವನ ಅಲ್ಲಿ ನಡೆಯುತ್ತಿತ್ತು; ಈಗ ಅವೆಲ್ಲ ಎಲ್ಲಿ? ಏಕೆ? – ಎನ್ನಿಸುತ್ತದೆ. ರಾಮ ಸೀತೆಯರಿಗೆ ಪಟ್ಟಣದ ನೆನಪುಗಳು ಸೊಗಸಾದವು, ಸವಿಯಾದವು.

---

೨ ಇವು ರಾಜಧರ್ಮಬೋಧೆಗಾಗಿ ಕವಿ ಸೇರಿಸಿಕೊಂಡ ಭಾಗವೊ, ಉತ್ತರಕಾಲದಲ್ಲಿ ಬೇರೆ ಯಾರಾದರೂ ಸೇರಿಸಿದ್ದೊ – ಹೇಳುವ ಹಾಗಿಲ್ಲ.

ದೂರದ ಕಿಷ್ಕಿಂಧೆಯಲ್ಲಿ ರಾಮನು ಲಕ್ಷ್ಮಣನಿಗೆ ಹೇಳುತ್ತಾನೆ: ಇಂಥ ದಿವಸದಲ್ಲಿ ಭರತನು ಸರಯೂ ನದಿಯಲ್ಲಿ ಸ್ನಾನ ಮಾಡುತ್ತಿರಬೇಕು ಎಂದು.

ಮದುವೆಯ ಮಂಗಳವನ್ನು ಕುರಿತು ಜನಕನಿಗೂ ದಶರಥನಿಗೂ ನಡುವೆ ಬೆಳೆಯುವ ಮರ್ಯಾದೆಗಳು ಚೆಲುವಾದ ಚಿತ್ರಗಳು; ತುಂಬ ಗೌರವಯುತವಾದವು. ಒಟ್ಟು ಒಂದು ಸಂಸ್ಕೃತಿಯೇ ಇಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಆ ರಾಜಧಾನಿಯಲ್ಲಿ ಒಂದು ಆರ್ಯಮನೆತನದ ಮನೆಯಲ್ಲಿ ಕಾಣುವ ಸಾಂಸಾರಿಕ ಜೀವನ ಸಂಬಂಧಗಳು, ನಡವಳಿಕೆಗಳು ಉತ್ತಮವೆನ್ನಬಹುದಾದ ಜೀವನದ ಒಂದು ಪ್ರಕಾರ ಅಲ್ಲಿ ಸಂಪೂರ್ಣವಾಗಿ ದೊರಕುತ್ತವೆ. ಅಂಥ ವಂಶದ ರಾಜರಿಂದ ಆದರ್ಶಪ್ರಾಯವಾದ ನಡವಳಿಕೆಯುಳ್ಳ ಜನ ಹುಟ್ಟಿ ಬೆಳೆಯುತ್ತಿದ್ದರು. ಜನನಾಯಕರೆಂದು ಋಷಿಗಳು ನಿರೀಕ್ಷೆ ಇಟ್ಟುಕೊಂಡಿದ್ದರು. ಸಮಗ್ರ ದೇಶದಲ್ಲಿ ಇವರು ಧರ್ಮವನ್ನೂ ಆಶ್ರಮ ಜೀವನವನ್ನೂ ರಕ್ಷಿಸುತ್ತಾರೆಂದು ನಂಬಿದ್ದರು.[೩] ದಶರಥನು ತನ್ನ ಮಂತ್ರಿಮಂಡಲದ ತೀರ್ಮಾನಗಳಂತೆ ನಡೆಯುವವನು ಎಂದರೆ, ತನ್ನ ಹೊಣೆಗಾರಿಕೆಗಳನ್ನು ಒಪ್ಪಿಕೊಂಡು ರಾಮನಂಥ ಮನುಷ್ಯನೊಬ್ಬನು ಸ್ವಂತ ಸಂತೋಷದಿಂದ ನಡಸಿಕೊಡುವನು ಎಂಬ ನಂಬಿಕೆ ಇದ್ದವನು. ತಾಯಿತಂದೆಯರು ಮಕ್ಕಳು, ಹೆಂಡತಿಯರು, ಗಂಡಂದಿರು, ಸೋದರರು, ಸ್ನೇಹಿತರು ಸುಶಾಂತವಾದ, ಆದರೆ ಗೊತ್ತಾದ ಒಂದು ಆವರಣದಲ್ಲಿ ತಮ್ಮ ಸಂಬಂಧಗಳಲ್ಲಿಯೂ ಪರಸ್ಪರ ಹೊಣೆಗಾರಿಕೆಗಳಲ್ಲಿಯೂ ನಡೆದುಕೊಳ್ಳುತ್ತಿರುವ ಚಿತ್ರ ಖಚಿತವಾಗಿರುವಂತೆ ಕಾಣುತ್ತದೆ.

ಲಂಕೆಯ ವರ್ಣನೆಯೂ ಸಂಪನ್ನವಾದ್ದು; ವರ್ಣರಂಜಿತವಾದ್ದು; ಅದೊಂದು ದ್ವೀಪನಗರ. ಬೆಟ್ಟಗಳ ನಡುವೆ ಕಣಿವೆಗಳಲ್ಲಿಯೊ ಮೇಲ್ಗಡೆಯೊ ಕಟ್ಟಿದುದು. ಸಂಪತ್ಪೂರ್ಣವಾಗಿತ್ತು. ಒಬ್ಬ ರಾಜನು ತನಗೂ ತನ್ನ ಜನಗಳಿಗೂ ಸಕಲ ಸೌಕರ್ಯಗಳನ್ನೂ ಒದಗಿಸಿ ಬಲವಾದ ರಕ್ಷಣೆಯುಳ್ಳಂತೆ ಕಟ್ಟಿದ್ದ ಊರು. ಅಲ್ಲಿನ ಬೀದಿಗಳೂ ಸೌಧಗಳೂ ದೊಡ್ಡವು. ಉಪವನಗಳೂ ವಿನೋದ ಗೃಹಗಳೂ ಅನೇಕ. ಅಲ್ಲಿ ವೇದ ಘೋಷಗಳು ಕೇಳುತ್ತಿದ್ದವು; ಬಲಿ ಹೋಮಗಳಾಗುತ್ತಿದ್ದುವು. ರಾವಣನ ಅರಮನೆಯಲ್ಲಿ ವರ್ಣಿತವಾಗಿರುವ ಸ್ವೇಚ್ಛಾವೃತ್ತಿ ನಮ್ಮ ಆ ಕಾಲದ ಸಾಹಿತ್ಯದಲ್ಲಿ ಬೇರೆಲ್ಲಿಯೂ ಸಾಟಿಯಾದುದಿಲ್ಲ. ಅವನು ಮೂರು ಲೋಕಗಳನ್ನೂ

---

೩ ಇಕ್ಷ್ವಾಕು ವಂಶದಲ್ಲಿ ಹಿಂದಿನ ಒಬ್ಬ ರಾಜನು ಸಾರ್ವಜನಿಕ ಜೀವನದಲ್ಲಿ ಜನಕ್ಕೆ ಪೀಡೆಯಾಗಿ ದುರ್ಮಾರ್ಗನಾಗಿ ಇದ್ದ ತನ್ನ ಮಗನನ್ನು ದೇಶಭ್ರಷ್ಟನನ್ನಾಗಿ ಮಾಡಿದ್ದನಂತೆ.

ಕೊಳ್ಳೆಹೊಡೆದಿದ್ದಾನೆ. ತನ್ನ ಸುಖಭೋಗಗಳಿಗೂ ಪ್ರತಿಷ್ಠೆಗೂ ಏನೇನು ಬೇಕೊ ಅವುಗಳಲ್ಲಿ ಉತ್ತಮವಾದ ಸಾಮಗ್ರಿಯನ್ನು ತನ್ನ ಲೋಲುಪತೆಗಾಗಿ ತಂದು ತುಂಬಿಕೊಂಡಿದ್ದ. ನೇರವಾಗಿ ಬ್ರಹ್ಮನ ವಂಶದಲ್ಲಿ ಹುಟ್ಟಿದವನು; ಕುಬೇರನ ತಮ್ಮ ; ಅಣ್ಣನ ಪುಷ್ಪಕ ವಿಮಾನವನ್ನು ಅಪಹರಿಸಿದ್ದಾನೆ. ಯಾರು ಏನನ್ನು ಬೇಡಿದರೂ ದೊರಕಿಸಬಲ್ಲ ಶಕ್ತಿ ಉಳ್ಳದ್ದು ಅದು. ಲೆಕ್ಕವಿಲ್ಲದಷ್ಟು ಜನರನ್ನು ಎಲ್ಲಿಗೆಂದರಲ್ಲಿಗೆ ಅತ್ಯಲ್ಪಕಾಲದಲ್ಲಿ ಕೊಂಡೊಯ್ಯಬಲ್ಲದ್ದು. ರಾಜನ ಇಚ್ಛೆಯನ್ನು ನೆರವೇರಿಸಲು ಶಕ್ತರಾದ ವೀರಾಳುಗಳು ಊರು ತುಂಬ ಇದ್ದರು. ಆನೆ, ಕುದುರೆ, ಶಸ್ತ್ರಗಳು, ನಗರ ಗುಪ್ತಿಗೆ ಅಗತ್ಯವಾದ ಕೋಟೆಕೊತ್ತಲ ಇದ್ದವು. ತನಗೆ ಸ್ನೇಹಿತರಾಗಿ ತನ್ನ ಅಪ್ಪಣೆಗಳನ್ನು ಪಾಲಿಸಲು ಸಿದ್ಧರಾಗಿದ್ದವರಿಗೆ ಉದಾರ ದಾನಿಯಾಗಿದ್ದ. ಸಮಸ್ತರನ್ನೂ ಹೊಡೆದು ಬಡಿದು ಸಿಕ್ಕಿದುದನ್ನು ಬಾಚಿಕೊಂಡು ತಂದಿದ್ದಾನೆಂಬುದರಲ್ಲಿ ಸಂದೇಹವಿಲ್ಲ; ಅವನು ಸ್ವೇಚ್ಛಾಚಾರಿ; ಆದರೆ ತಪಸ್ಸನ್ನೂ ನಿಯಮಗಳನ್ನೂ ನೆರವೇರಿಸಿ ದೇವತೆಗಳಿಂದ ಉತ್ತಮ ವರಗಳನ್ನು ಪಡೆದುಕೊಳ್ಳಬಲ್ಲವನಾಗಿದ್ದ. ರಾಮನ ವಯಸ್ಸಿಗೆ ೨–೩ರಷ್ಟು ಅಥವಾ ಇನ್ನೂ ಹೆಚ್ಚಿನ ವಯಸ್ಸಿನವರಾದರೂ ರಾಮನಿಗೇ ಕಷ್ಟಸಾಧ್ಯವಾದ ಎದುರಾಳಿಯಾಗಿದ್ದ. ದೇವತೆಗಳು ಅವನಿಗೆ ಕೊಟ್ಟಿರುವ ವರಗಳಲ್ಲಿ ಏನು ಸೇರಿಲ್ಲವೆಂಬುದನ್ನು ಅನುಮಾನಿಸಿ ಅವನ ದೌರ್ಬಲ್ಯ ಸ್ಥಾನವನ್ನು ಕಂಡು ಕೊಳ್ಳಬೇಕಾಗಿರುವಂತಿತ್ತು. ಶತ್ರುಗಳ ಮೇಲೆ ಅವನೂ ಅವನ ಮಗನಾದ ಇಂದ್ರಜಿತುವೂ ಮಾಯಾ ಯುದ್ಧಗಳನ್ನು ಮಾಡುವ ಸಾಮರ್ಥ್ಯ ಪಡೆದುಕೊಂಡಿದ್ದರು. ವಿಶೇಷ ಪೂಜೆ ಆರಾಧನೆಗಳನ್ನು ಮಾಡಿ ಇತರರ ಕಣ್ಣಿಗೆ ಕಾಣಿಸದಿರುವುದಕ್ಕೂ ದುರ್ಜಯರಾಗುವುದಕ್ಕೂ ಅಗತ್ಯವಾದ ವರಗಳನ್ನು[೪] ಸಂಪಾದಿಸಿದ್ದರು. ಲಂಕೆಯಲ್ಲಿ ಇನ್ನೂ ಒಬ್ಬಿಬ್ಬರು ಇದ್ದರು,–ಸೀತೆಯನ್ನು ಹಿಂದಿರುಗಿಸು; ಅವಳ ಮೇಲೆ ಕೈಮಾಡಬೇಡ ಎಂದು ಸಲಹೆ ಕೊಡುವವರು. ಸಭಾಮಂದಿರದಲ್ಲಿ ಮುಖ್ಯಮಂತ್ರಿ

---

೪ ವರಗಳೆಂಬವು ಆ ಕಾಲದ ಜನಜೀವನದಲ್ಲಿ ಒಂದು ಸಂಸ್ಥೆಯಂತಿದ್ದವು – ನಮ್ಮ ಕಾಲದ ಪರೀಕ್ಷೆಗಳ ಹಾಗೆ. ಮನುಷ್ಯನು ಯಾವನೇ ಆಗಲಿ, ಅವನ ಶೀಲ ಚರಿತ್ರೆ (ಪೂರ್ವ ಕತೆ) ಎಂಥದೇ ಆಗಲಿ, ಪರೀಕ್ಷೆಯಲ್ಲಿ ಕೇಳುವ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಗಳನ್ನು ಬರೆದರೆ ಅಂಥವನಿಗೆ ಪೂರ್ಣಾಂಕಗಳನ್ನು ಕೊಡಬೇಕು. ಕೊಟ್ಟ ವರಗಳನ್ನು ಅವನು ಹೇಗೆ ಉಪಯೋಗಿಸಿಕೊಳ್ಳುತ್ತಾನೆ ಎಂಬುದೂ ಲಕ್ಷ್ಯವಿಲ್ಲ. ಏಕಾಂತಭಕ್ತಿಯಲ್ಲಿ ೨೦ ವರ್ಷಗಳ ಕಾಲ ಹೆಬ್ಬೆರಳ ಮೇಲೆ ನಿಂತು ಲಪಸ್ಸು ಮಾಡಿದ್ದಾನೆ ಎಂದರಾಯಿತು: ವಿಧಿಸಿದ ನಿಯಮ ಅದು; ಅವನು ಆರಾಧಿಸುವ ದೇವರು ಅವನ ಎದುರಿಗೆ ಬಂದು ನಿಲ್ಲಬೇಕು; ಬೇಡಿದ ವರವನ್ನು ನೀಡಲೇಬೇಕು. ಆ ದೇವರಿಗೇ ಇದು ನಿರ್ಬಂಧ. ವರ ಕೊಡದೆ ಬೇರೆ ಮಾರ್ಗವೇ ತೆರೆದಿರುವುದಿಲ್ಲ.

ಪ್ರಹಸ್ತನು ತನ್ನ ಒಡೆಯನ ನಡತೆಯನ್ನು ಸರಿ ಎಂದು ಒಪ್ಪಿಕೊಳ್ಳುವುದಿಲ್ಲ ; ಆದರೆ ಕಡೆಯ ಅಗತ್ಯವನ್ನು ಎದುರಿಬೇಕಾಗಿರುವಾಗ ಅವನಿಗೆ ಸೇವೆ ಸಲ್ಲಿಸಲು ಅವನು ಮನಸ್ಸು ಮಾಡಬೇಕಾಯಿತು. ವಿಭೀಷಣ ಒಬ್ಬ ಮಾತ್ರ ಅಣ್ಣನ ನಡತೆಯನ್ನು ಕುರಿತು ದೋಷಾರೋಪಣೆ ಮಾಡುತ್ತಾನೆ. ಆದುದರಿಂದ ತನ್ನ ಹುಟ್ಟಿದೂರನ್ನೂ ಅಣ್ಣನನ್ನೂ ಬಿಟ್ಟು ಲಂಕೆಯಿಂದ ಹೊರಗೆ ಹೋಗಬೇಕಾಗುತ್ತದೆ. ವಿಭೀಷಣನ ಹೆಂಡತಿಯಾಗಲಿ ಮಕ್ಕಳಾಗಲಿ ಅವನು ಊರಲ್ಲಿ ಇಲ್ಲದಿರುವಾಗ ಹಿಂಸೆಗೆ ಈಡಾದರೆಂದಾಗಲಿ ಅಮಾನ್ಯರಾದರೆಂದಾಗಲಿ ಹೇಳಿಲ್ಲ; ಈ ಸಂಗತಿ ಲಂಕೆಯಲ್ಲಿ ಏರ್ಪಟ್ಟಿದ್ದ ಜೀವನ ವ್ಯವಸ್ಥೆಯನ್ನು ಕುರಿತು ಗೌರವಭಾವ ತರಿಸುತ್ತದೆ.

ಆದರೆ, ಎಲ್ಲಿಯೇ ಆಗಲಿ, ರಾವಣನ ಇಚ್ಛೆಗೆ ವಿರೋಧವಿಲ್ಲ. ಅವನ ಆಕ್ರಮಣ ನೀತಿಗೂ ದುರ್ನೀತಿಗೂ ಮಗ ಇಂದ್ರಜಿತುವಿನಂತೆ ಒತ್ತಾಸೆ ಕೊಟ್ಟವರಿಗೆ ಅಭಿಮಾನದ ಸ್ಥಾನವಿತ್ತು. ವಿರೋಧದೃಷ್ಟಿ ತಳ್ಳಿ ಬೀಳುತ್ತಿತ್ತು; ಅದಕ್ಕೆ ಮೂದಲೆ ಇರುತ್ತಿತ್ತು. ರಾವಣನ ಚಿಕ್ಕತಾತನೊಬ್ಬ ಸಭೆಯಲ್ಲಿ ರಾವಣನಿಗೆ ಸಲಹೆ ಕೊಡಲು ಒಂದು ವ್ಯಂಗ್ಯವಾದ 'ಏಷಮೇ ಸಹಜೋ ದೋಷಃ ಸ್ವಭಾವೋ ದುರತಿಕ್ರಮಃ' – 'ಇದು ನನ್ನ ಸ್ವಭಾವದೋಷ; ಸ್ವಭಾವವನ್ನು ಮೀರುವುದು ಶಕ್ಯವಿಲ್ಲ' – ಎಂಬ ಉತ್ತರವನ್ನು ಕೊಟ್ಟಿದ್ದ. ಅಣ್ಣನ ತಪ್ಪನ್ನು ವಿರೋಧಿಸಿ ವಿಭೀಷಣನು ಇದಿರಿಸಿದಾಗ ತನ್ನ ಕಡೆಯನ್ನೂ ಜನವನ್ನೂ ದೇಶವನ್ನೂ ಕೆಡೆನುಡಿದನೆಂದು ಅವನನ್ನು ಛೀಗುಟ್ಟುತ್ತಾರೆ; ಅವನ ಮೇಲೆ ಬೈಗಳನ್ನು ಸುರಿಸುತ್ತಾರೆ.

ಸೀತೆಯನ್ನು ಕೆಡಿಸುವುದಕ್ಕೆ ಇಷ್ಟಪಡದೆ ರಾವಣನು ಹಿಮ್ಮೆಟ್ಟುತ್ತಾನೆ. ಆದರೆ ಜೀವಕ್ಕೆ ಹಾನಿ ತಂದುಕೊಂಡಾಳು ಎಂಬ ಭಯವಿರಬಹುದು ಅಥವಾ ಋಷಿಗಳ ಶಾಪವೊ ವೇದವತಿಯಂತಹ ಮಹಿಳೆಯರ ಮತ್ತು ನಳಕೂಬರನಂತಹ ವ್ಯಕ್ತಿಗಳ ಶಾಪವೊ ಅವನನ್ನು ತಡೆದಿರಬೇದು.[೫] ಆ ಕಾಲದಲ್ಲಿ ಸರ್ವಸಾಮಾನ್ಯವಾಗಿ ಇಂಥ ಒಂದು ನಂಬಿಕೆ ಇದ್ದಿರಬೇಕು. ಅಥವಾ ಇಚ್ಛೆಗೆ ವಿರುದ್ಧವಾಗಿ ಒಂದು ಹೆಣ್ಣಿನ ಪ್ರೀತಿಯನ್ನು ಬಲಾತ್ಕಾರದಿಂದ ಸಾಧಿಸಿ ಹೊಗುವುದು ಯಾವ ಸಂತೋಷವನ್ನೂ ತರಲಾರದು ಎಂಬ ಆಲೋಚನೆ ಇದ್ದಿರಬೇಕು. ರಾವಣನಿಗೆ ಗೊತ್ತು : ತನ್ನ ಕೈಯಲ್ಲೇ ಅವಳಿದ್ದಾಳೆ; ಅವಳ ಬಿಡುಗಡೆ ಶಕ್ಯವಿಲ್ಲ ಎಂದು; ತನ್ನನ್ನು ಸ್ವೀಕರಿಸಬೇಕಾದ ಅಗತ್ಯಕ್ಕೆ ಅವಳನ್ನು ಒಪ್ಪಿಸಲಾದೀತು ಎಂದು.

---

೫. ಈ ದುಷ್ಕ್ರಿಯೆಗಳು ಉತ್ತರಕಾಂಡದಲ್ಲಿ ವಿವರಣೆಗೆ ಬರುತ್ತವೆ. ಇಂಥ ವಿಷಯಗಳಲ್ಲಿ ದಶರಥ, ವಾಲಿ,ರಾವಣ – ಈ ಮೂವರಿಗೂ ನಂಬಿಕೆ ಭಯ ಸಾಮಾನ್ಯ. ಆದರೆ ವರಶಾಪಗಳನ್ನು ನಿರ್ದೇಶಿಸುವುದು ಬಿರುಕು ಮುಚ್ಚುವ ಕಾಂಡ, ಸಿಮೆಂಟ್ ಎನ್ನಿಸುತ್ತದೆ.

ರಾವಣನ ವಶದಲ್ಲಿದ್ದ ವೀರಾಳುಗಳು ಅನೇಕರು; ಬಗೆಬಗೆಯ ಶಸ್ತ್ರ ಪ್ರಯೋಗದಲ್ಲಿ ನಿಪುಣರು. ಯಾವ ಸಮಯದಲ್ಲಿಯೇ ಆಗಲಿ, ಎಂಥ ಪರಿಸ್ಥಿತಿಯಲ್ಲಿಯೇ ಆಗಲಿ, ಅವನಿಗಾಗಿ ಕಾದಾಡಲು ಸಿದ್ಧರಾಗಿದ್ದರು. ತನ್ನ ಪರವಾಗಿ ಯಾವುದಾದರೂ ಸಾಹಸವನ್ನು ಬಯಸುವಾಗಲೂ ರಾವಣನು ಅವರ ಮುಖಸ್ತುತಿ ಮಾಡುವನು. ಬಹುಮಾನ ಮಾಡಿ ಗೌರವಗಳನ್ನು ತೋರಿಸುವನು. ಅವನೇ ಮಹಾಯೋಧ. ಸಾಧಾರಣವಾಗಿ ಯಾವ ಭೀತಿಯೂ ಅವನನ್ನು ತಡೆಯುತ್ತಿರಲಿಲ್ಲ. ರಾಕ್ಷಸ ಯೋಧರು ಬೇರೆ ಬೇರೆ ಬಗೆಯ ಆಯುಧಗಳನ್ನು ಹಿಡಿದು ಯುದ್ಧ ಮಾಡಬಲ್ಲವರಾಗಿದ್ದರು. ಅವರಲ್ಲಿ ಕೆಲವರಿಗೆ ವಿಶೇಷ ಅಸ್ತ್ರಗಳ ತಿಳಿವಳಿಕೆ ಇತ್ತು. ಅವರೂ ಕಾಮರೂಪಿಗಳು. ಮಾಯಾ ವಿಧಾನಗಳನ್ನು ಬಳಸಿ ಸುಳ್ಳು ಸೀತೆಯನ್ನು ಕೊಂದೆವೆಂದು ವಾನರರ ಸೈನ್ಯಕ್ಕೆ ಕಾಣಿಸಬಲ್ಲರು. ರಾಮನು ಸತ್ತುಹೋದನೆಂದು ಸೀತೆ ಕಾಣಬಲ್ಲಂತೆ ಮಾಡಬಲ್ಲರು. ಒಂದು ಭಯೋತ್ಪಾದಕ ವಿಧಾನ ಇದು; ವಿರೋಧಿಪಕ್ಷದ ಬಲವನ್ನು ಕಡಮೆ ಮಾಡಿ ಹಗೆಯ ಧೈರ್ಯವನ್ನು ಕೆಡಿಸುವ ವಿಧಾನ. ಶಕ್ತವಾದ ಒಂದು ಸಮಗ್ರ ತಂತ್ರವನ್ನು ನಿರ್ಮಾಣ ಮಾಡಿ ರಾವಣನು ತನ್ನ ಸೈನ್ಯದ ನಾಶಕ ಶಕ್ತಿಯನ್ನು ತುಂಬ ಪ್ರಬಲವಾಗುವ ಹಾಗೆ ಮಾಡಿಕೊಂಡಿದ್ದನು. ದೇವತೆಗಳೇ ಅವನ ಭಯದಲ್ಲಿದ್ದರು; ರಾಮಾಯಣದ ಈ ಉದ್ದೇಶವನ್ನು ನಂಬಿ ಅದಕ್ಕೆ ಒಂದು ಸ್ಥಾನ ಕೊಡಬೇಕಾಗಿದ್ದ ರಾಮ ಮನುಷ್ಯ ರೂಪದಲ್ಲಿ ವಿಷ್ಣು – ಹುಟ್ಟಬೇಕಾಗಿ ಬಂದುದರ ಮುಖ್ಯ ಕಾರಣ. ದುಷ್ಟ ರಾಕ್ಷಸನನ್ನು ನಾಶ ಮಾಡುವುದೇ ಉದ್ದೇಶ ಆಗಿತ್ತು. ಹೇಗೇ ಆಗಲಿ, ಲಂಕೆಯ ಆವರಣ ಹಿಂಸೆ ಭೀತಿಗಳದು. ಅಲ್ಲಿ ಉಗ್ರ, ಅತಿಕ್ರಮ, ತೈಕ್ಷ್ಣ್ಯ, ಲಂಪಟತೆ ಇವೆ. ಯಾರೂ ರಾವಣನ ಇಚ್ಛೆಗೆ ಪೂರ್ತಿ ತಗ್ಗಿ ನಡೆಯಬೇಕಾಗಿದೆ. ಎಲ್ಲರಿಗೂ ಗೊತ್ತು – ರಾವಣನು ಅಜೇಯನೆಂದು. ದೇವತೆಗಳನ್ನು ಬಡಿದಿರಲಿಲ್ಲವೆ? ಚಕ್ರವನ್ನೂ ವಜ್ರವನ್ನೂ ಇದುರಿಸಿ ನಿಲ್ಲಲಿಲ್ಲವೆ? ಬಯಸಿದ ಸಮಸ್ತವನ್ನೂ ದರೋಡೆಮಾಡಿ ತಂದಿರಲಿಲ್ಲವೆ?

ದೇವತೆಗಳಲ್ಲಿ ನಂಬಿಕೆ, ಅವರ ಕೊಡುಗೆಗಳಲ್ಲಿ ಆಸೆ, ಕೆಲವು ನಿಯಮ ನಿರ್ಬಂಧಗಳನ್ನು ನೆರವೇರಿಸಿದರೆ ನರನಾರಿಯರಿಗೆ ವರಗಳನ್ನು ಕೊಡಲು ಅವರು ಸಿದ್ಧರಾಗಿದ್ದಾರೆಂಬುದು ಸರ್ವತ್ರ ವಿದಿತವಾಗಿತ್ತು. ಋಷಿಗಳು ಶಾಪಕೊಡಬಲ್ಲರು; ಇಚ್ಛೆ ಬಂದಂತೆ ನಾಶಮಾಡಬಲ್ಲರು ಎಂಬ ನಂಬಿಕೆಯೂ ಹಾಗೇ. ಆ ಸಂಗತಿ ಋಷಿಗಳಿಗೂ ಗೊತ್ತಿದೆ. ಇತರರು ಅವರಿಗೆ ಹೆದರಿಕೊಂಡು ನಡೆಯುತ್ತಾರೆ. ಆದರೆ ಸಾಧಾರಣವಾಗಿ ತಮ್ಮ ತಪಃಶಕ್ತಿಯನ್ನು ಇತರರ ನಾಶಕ್ಕೆ

ಬಳಸಿ ಪೋಲು ಮಾಡಲು ಅವರಿಗೆ ಇಷ್ಟವಿರುವುದಿಲ್ಲ.

* * * *

ಕಿಷ್ಕಿಂಧೆಯ ವಾನರರದು ಇನ್ನೊಂದು ಬಗೆಯ ಜನವರ್ಗ. ಆ ಕಾಲಕ್ಕೆಲ್ಲ ಅತಿಶಕ್ತವಾದ ಯೋಧ ವಾಲಿ. ಅವನ ತಲೆಯ ಮೇಲಿದ್ದ ಮತಂಗ ಋಷಿಯ ಶಾಪ ಒಂದೇ ಅದಕ್ಕೆ ಇದ್ದ ಮಿತಿ. ಉತ್ತರ ಕಾಂಡದಲ್ಲಿನ ಕಥಾಭಾಗ ನಿಜವಾದುದಾದರೆ ಅವನು ರಾವಣನನ್ನು ತನ್ನ ವಿಕ್ರಮಕ್ಕೆ ಒಳಪಡಿಸಿಕೊಂಡಿದ್ದ. ತನಗೆ ಸ್ನೇಹಿತನಾಗಿರಲು ಬಲಪ್ರಕಾಶ ಮಾಡಿದ್ದ. ಸುಗ್ರೀವನೊಡನೆ ಅವನ ಸಂಬಂಧ ಅನಗತ್ಯವಾದ, ಕ್ರೂರವಾದ ಒಂದು ಕೆಟ್ಟ ಛಲದ ಬಣ್ಣದಿಂದ ತುಂಬಿದ್ದು. ಸುಗ್ರೀವನಿಗೇನೊ ಒಳ್ಳೆಯ, ವಿಶ್ವಾಸಪರವಾದ ತಮ್ಮನಂತೆ ಇರಬೇಕೆಂದು ಇಷ್ಟ. ಆದರೆ ಅವನನ್ನು ವಾಲಿ ಕಿಷ್ಕಿಂಧೆಯಿಂದ ಓಡಿಸುತ್ತಾನೆ. ಯುದ್ಧಕ್ಕೆ ಹೋದ ವಾಲಿ ಬಹುಕಾಲ ಕಾಣಿಸಿಕೊಳ್ಳದ್ದರಿಂದ ತೀರಿಕೊಂಡಿದ್ದನೆಂದೂ ಅವನು ಮೃತನಾದನೆಂದೂ ಸುದ್ದಿ ಹರಡಿತ್ತಾಗಿ, ಆ ಸಂದರ್ಭದಲ್ಲಿ ಸುಗ್ರೀವ ತಾನು ಕಿಷ್ಕಿಧೆಯ ರಾಜ್ಯಭಾರವನ್ನು ವಹಿಸಿಕೊಂಡಿದ್ದ. ಅನೇಕ ಸ್ನೇಹಿತರು ಅವನಿಗೆ ರಾಜ್ಯ ಸ್ವೀಕರಿಸಲು ಸಲಹೆ ಕೊಟ್ಟರು[೬] ಮುಂತಾಗಿ ಎಷ್ಟು ಬಗೆಯಲ್ಲಿ ವಿವರಿಸಿದರೂ ಅದು ವಾಲಿಗೆ ತಟ್ಟಲಿಲ್ಲ. ಅವನು ಅದಕ್ಕೆ ಬೆಲೆಕೊಡಲಿಲ್ಲ.

ವಾಲಿಯನ್ನು ಕೊಂದು ರಾಜ್ಯವನ್ನು ಸುಗ್ರೀವನಿಗೆ ಕೊಡಿಸುತ್ತೇನೆಂದು ರಾಮನು ವಾಗ್ದಾನ ಮಾಡಿದ್ದ. ವಾಲಿಯನ್ನು ಕೊಂದಾದ ಮೇಲೆ ಸುಗ್ರೀವನನ್ನು ರಾಜನನ್ನಾಗಿ ಮಾಡುತ್ತಾರೆ. ಕ್ಷಣಕಾಲ ತಾನು ತನ್ನ ಅಣ್ಣನ ಸಾವಿಗೆ ಕಾರಣವಾದುದಕ್ಕಾಗಿ ಅವನಿಗೆ ವ್ಯಥೆ, ಪಶ್ಚಾತ್ತಾಪ ಉಂಟಾಗುತ್ತವೆ. ಆ ಕ್ಷಣವೇ ಆ ಮನೋಭಾವ ದಾಟಿಹೋಯಿತು. ಈ ಚರಿತ್ರೆಯನ್ನು ಬಲ್ಲವನೂ ರಾಮಸುಗ್ರೀವರ ನಡುವೆ ನಡೆದ ಒಪ್ಪಂದವನ್ನು ಅರಿತವನೂ ಆದ ಹನುಮಂತನು ಒಂದು ಕ್ಷಣಕಾಲ ತಾರೆಯನ್ನು ಸಂತೈಸುತ್ತಾನೆ: ವಾಲಿಯ ಮೃತಿಗಾಗಿ ಅವಳು ದುಃಖವನ್ನು ನಿಲ್ಲಿಸಬೇಕೆಂದೂ ಮಗನಾದ ಅಂಗದನನ್ನು ರಾಜ್ಯವನ್ನಾಳಲು ಪಟ್ಟಾಭಿಷಕ್ತನನ್ನಾಗಿ ಮಾಡಬಹುದೆಂದೂ ನುಡಿಯುತ್ತಾನೆ. ಇದರ ಬಲಾಬಲ ಹಿತಾಹಿತಗಳನ್ನು ತಾರೆ ಅರಿತಿದ್ದ ವಿವೇಕಶಾಲಿ. ಆಕೆಯ ಉತ್ತರ ಒಡನೆಯೇ ಬರುತ್ತದೆ. ಗೆಲವಿನ ಹಕ್ಕಿನಿಂದಾಗಿ ರಾಜ್ಯ ಈಗ ಸುಗ್ರೀವನದು; ಈಗ ಅದನ್ನು

---

೬ ಈ ಘಟನೆಯ ಸಂಬಂಧದಲ್ಲಿ ಅಭಿಪ್ರಾಯ ಭಿನ್ನತೆ ಇರುವುದು ಸ್ಪಷ್ಟ. ಕೆಲವರು ತಮ್ಮ ಮನಸ್ಸನು ಮುಚ್ಚಿ ಮರೆ ಮಾಡಿದ್ದರೆಂಬುದೂ ನಿಸ್ಸಂದೇಹವಾದ ಸಂಗತಿ.

ಅವನು ಬೇಕಾದಂತೆ ಮಾಡಬಹುದು ಎಂದಳು. ಸುಗ್ರೀವನನ್ನು ಯುವರಾಜನನ್ನಾಗಿ ಮಾಡಿ ಒಳ್ಳೆಯ ಸೋದರ ಸಂಬಂಧದಲ್ಲಿ ಅವನನ್ನು ನಿಲ್ಲಿಸಬೇಕೆಂದು ಆಕೆ ಗಂಡ ವಾಲಿಗೆ ಹಿಂದೆ ಸಲಹೆ ಕೊಟ್ಟಿದ್ದಳು ಎಂಬುದನ್ನು ನೆನಯಬಹುದು; ವಾಲಿ ಕೇಳಲಿಲ್ಲ ಮಾತ್ರ. ಸುಗ್ರೀವನಿಗೆ ಪಟ್ಟಾಭಿಷೇಕವಾಗುವಾಗ ರಾಜ್ಯದ ಯುವರಾಜನಾಗಿ ಅಂಗದನನ್ನು ಮಾಡಬೇಕೆಂಬುದು ರಾಮನ ಸಲಹೆ. ಸುಗ್ರೀವನೇ ಸ್ವಂತವಾಗಿ ಅದನ್ನು ಮಾಡುತ್ತಿರಲಿಲ್ಲವೆಂದಲ್ಲ; ಅಂಗದನ ಮನಸ್ಸಿಗೆ ಸಂಗತಿ ಹೀಗೆ ಕಾಣಿಸಿದೆ. ಮುಂದೆ ಒಂದು ಅಧೀರತೆಯ ಸಂದರ್ಭದಲ್ಲಿ ತನ್ನ ಕಡೆಯ ಕಪಿಗಳೆಲ್ಲ ಬಂಡಾಯವೆದ್ದಾಗ ರಾಮನ ಅನುಗ್ರಹದಿಂದ ತನಗೆ ಯೌವರಾಜ್ಯ ಬಂದಿತೇ ಹೊರತು ಚಿಕ್ಕಪ್ಪನ ವಿಶ್ವಾಸದಿಂದಲ್ಲ ಎಂದು ನುಡಿಯುತ್ತಾನೆ. ವಾನರರನ್ನು ಕೂಡಿಹಾಕಿ ಬೇಕಾದಾಗ ನಿಷ್ಠುರವಾದ ನೇಮಗಳನ್ನು ಹಾಕಿ ಸುಗ್ರೀವನು ಅವರನ್ನೆಲ್ಲ ಜಮಾಯಿಸಲು ತಿಳಿಸಿದ್ದಾನೆ. ಗೊತ್ತಾದ ಒಂದು ದಿನ ಅವರೆಲ್ಲ ಬಂದು ಸೇರದಿದ್ದರೆ ಯಾವ ಕೃಪೆಯನ್ನೂ ತೋರಿಸದೆ ಅವರ ವಧೆ ಆಗುವುದೆಂದು ಪ್ರಕಟಪಡಿಸಿದ್ದಾನೆ.[೭]

ರಾವಣನಿಗೆ ದೊಡ್ಡ ಅಂತಃಪುರವಿತ್ತು. ಭೋಗೋತ್ಸವಗಳು, ಸಾಮೂಹಿಕ ವಿಷಯವಿಲಾಸ, ಹರ್ಷಸಮಾರಂಭ, ವೈಭವ, ಅಸಂಖ್ಯವಾದ ತನ್ನ ಸುಂದರಿಯರೊಡನೆ – ಒಂದು ಲೆಕ್ಕದಲ್ಲಿ ೭೦೦೦ ಮಂದಿ! – ಏರ್ಪಡಿಸುತ್ತಿದ್ದ. ಅವರಲ್ಲಿ ಅನೇಕರನ್ನು ಬಲಾತ್ಕಾರದಿಂದ ಹಿಡಿದು ತಂದು ತನ್ನ ರಾಣೀವಾಸಕ್ಕೆ ಸೇರಿಸಿಕೊಂಡಿದ್ದ. ಅವನ ಶಕ್ತಿಗೂ ಜೀವ ಚೈತನ್ಯಕ್ಕೂ ಸಾಕ್ಷಿ–ಈ ಬಗೆಯ ಎಲ್ಲ ಸಮಾರಂಭ. ಯಾವುದನ್ನು ಮಾಡಿದರೂ ಅದನ್ನು ದೊಡ್ಡ ಪ್ರಮಾಣದಲ್ಲಿಯೇ ಮಾಡುತ್ತಿದ್ದ. ಅವನು ಮಾಡಿದುದೇ ಶಾಸನ. ರಾಕ್ಷಸ ಚಕ್ರವರ್ತಿಯ ರೀತಿ ಹೀಗಾದರೆ ಸ್ತ್ರೀ ಮೋಹಕ್ಕೆ ಸುಗ್ರೀವನೂ ಅಷ್ಟೇ ಓಲುಳ್ಳವನು. ನಾಲ್ಕು ತಿಂಗಳ ಕಾಲ ಅವನು ಅಂತಃಪುರದ ಒಳಕೋಣೆಗಳಲ್ಲಿ ಸೇರಿ ಕೊಂಡು ಆ ಸಮಯವನ್ನೆಲ್ಲ ಹಾಡು ನೃತ್ಯ ಭೋಗಗಳಲ್ಲಿ ಹೆಣ್ಣುಗಳ ನಡುವೆ ಕಳೆದ. ಸ್ನೇಹಿತವಾದ ರಾಮನ ಸುಖ ಸೌಕರ್ಯಗಳನ್ನು ಕುರಿತು ಒಮ್ಮೆಯೂ ಹೋಗಿ ವಿಚಾರಿಸಿಕೊಳ್ಳಲಿಲ್ಲ. ತನ್ನ ಕರ್ತವ್ಯವನ್ನು ಕುರಿತು ಅವನಿಗೆ ಲಕ್ಷ್ಮಣನು ಎಚ್ಚರಕೊಡಬೇಕಾಗಿ ಬಂತು. ಅವನು ಅರಮನೆಯ ಬಾಗಿಲಲ್ಲಿ ನಿಂತು ರಾಮನಿಗೆ ತಾನು ಕೊಟ್ಟ ವಾಗ್ದಾನವನ್ನು ನೆರವೇರಿಸುವ ಕಾರ್ಯ ಕೈಕೊಳ್ಳಬೇಕೆಂದು ಖಡಾಖಂಡಿತವಾಗಿ ಕೇಳಬೇಕಾಗಿ ಬಂತು. ಅವನು ಬಂದ ಸುದ್ದಿಯನ್ನು ಸುಗ್ರೀವನಿಗೆ ಕೊಡೊಯ್ದಾಗ ಇತರರಿಗೆ ಕಾಣಿಸಿಕೊಳ್ಳುವುದಕ್ಕಾಗಲಿ ನುಡಿಯುವುದಕ್ಕಾಗಲಿ ತಕ್ಕ ಸ್ಥಿತಿಯಲ್ಲಿ ಸುಗ್ರೀವನಿರಲಿಲ್ಲ. 'ಸ ನಿದ್ರಾ ಮದ ಸಂವೀತೊ ವಾನರೊ ನ ವಿಬುದ್ಧವಾನ್, ಬಭೂವ ಮದ

ಮತ್ತಶ್ಚ' – (ಭೋಗಮಗ್ನನಾದವನು ನಿದ್ರೆ ಕವಿದಿದ್ದ ಹಾಗೆ ಇದ್ದ. ನಿದ್ರಾಮದದಿಂದ ಅವನಿಗೆ ಪೂರ್ತಿ ಎಚ್ಚರವಿರಲಿಲ್ಲ) – ಎಂಬ ವರ್ಣನೆ ಇದೆ. ಮೊದಲು ಹೋಗಿ ಲಕ್ಷ್ಮಣನನ್ನು ಮಾತನಾಡಿಸೆಂದು ತಾರೆಯನ್ನು ಕಳಿಸಿದ. ವಾನರ ಸೈನ್ಯವನ್ನು ಕೂಡಿಸುವುದಕ್ಕೆ ಬೇಕಾದ ಎಲ್ಲವನ್ನೂ ಮಾಡಲಾಗಿದೆ. ಬಹುಬೇಗ ಆ ಸೈನ್ಯ ಕಿಷ್ಕಿಂಧೆಯಲ್ಲಿ ಸೇರಲಿದೆ ಎಂದು ಹೇಳಿ ಲಕ್ಷ್ಮಣನ ಕೋಪವನ್ನು ತಗ್ಗಿಸೆಂದು ಅವಳ ಮೂಲಕ ಹೇಳಿಕಳುಹಿಸಿದ.

ಸುಗ್ರೀವನ ಸಮಕ್ಷಮಕ್ಕೆ ಲಕ್ಷ್ಮಣನನ್ನು ಕರೆದುಕೊಂಡು ಹೋದಾಗ ಎಷ್ಟೋ ಮಂದಿ ಹೆಣ್ಣುಗಳ ನೆರವಿಯನ್ನು ದಾಟಿ ಅವನು ಹೋಗಬೇಕಾಗಿತ್ತು. ಇಂಥ ಅನುಭವ ಲಕ್ಷ್ಮಣನ ಬದುಕಿನಲ್ಲಿರಲಿಲ್ಲ. ಸುಗ್ರೀವನನ್ನು ಕಿಷ್ಕಿಂಧೆಯಿಂದ ಓಡಿಸಿದಾಗ ವಾಲಿ ರುಮೆಯನ್ನೂ ವಶಪಡಿಸಿಕೊಂಡಿದ್ದನು. ಸುಗ್ರೀವನಿಗೆ ಈಗ ಪುನಃ ಹೆಂಡತಿ ರುಮೆ ದೊರಕಿದ್ದಳಾಗಿ ಸುಖವಾಗಿದ್ದಾನೆ. ಮೃತನ ಪತ್ನಿಯನ್ನು ಮೈದುನನು ಸ್ವೀಕರಿಸುವ ದೇವರ ಅಧಿಕಾರವನ್ನು ಅನುಸರಿಸಿ ಇವನಿಗೆ ತಾರೆಯೂ ದೊರಕಿರುತ್ತಾಳೆ; ಆ ಸನ್ನಿವೇಶದಲ್ಲಿ ತಾರೆಗೂ ಯಾವ ಬಗೆಯ ಸಂಕೋಚವುಂಟಾದಂತೆ ಕಾಣುವುದಿಲ್ಲ. ಬಹುಕಾಲ ಹಸಿದಿದ್ದ ಸುಗ್ರೀವನು ವಿಷಯ ಭೋಗಗಳಲ್ಲಿ ತನ್ನನ್ನೇ ಮರೆತುಕೊಂಡಿದ್ದ. ಹೊಸದಾಗಿ ದೊರೆತಿದ್ದ ಮಾನ್ಯ ಸ್ನೇಹಿತನ ಚಿತ್ತವೃತ್ತಿವಿಶೇಷಗಳನ್ನೂ ಅಗತ್ಯಗಳನ್ನೂ ಮನಸ್ಸಿಗೆ ತಂದುಕೊಳ್ಳಲಿಲ್ಲ; ರಾಜ ಕರ್ತವ್ಯವನ್ನು ಲಕ್ಷಿಸಲಿಲ್ಲ. ಸುಗ್ರೀವನ ನಡತೆಯನ್ನು ಆತನ ಸನ್ನಿವೇಶದಲ್ಲಿ ಅರ್ಥಮಾಡಿ ಕ್ಷಮೆ ವಹಿಸಬೇಕೆಂದು ತಾರೆ ಅವನ ಪರವಾಗಿ ಮಾತನಾಡಬೇಕಾಯಿತು. ರಾಕ್ಷಸರು ತಮಗೆ ಬೇಕಾದುದನ್ನು ಬಲಪ್ರಯೋಗ ಮಾಡಿ ವಶಪಡಿಸಿಕೊಳ್ಳುತ್ತಿದ್ದರು. ವಾನರರು ತಮಗೆ ಬೇಕಾದ್ದನ್ನು ತೆಗೆದುಕೊಂಡು ಆ ಬಗ್ಗೆ ಪುನಃ ಕ್ಷಣಕಾಲ ಕೂಡ ಆಲೋಚಿಸದವರಾಗಿದ್ದರು. ಸ್ತ್ರೀ ಸಂಬಂಧದಲ್ಲಿ ವಾನರ ವರ್ಗ ಸಡಿಲವಾಗಿ ನಡೆದುಕೊಳ್ಳುತ್ತಿತ್ತೆನ್ನಿಸುತ್ತದೆ. ಸುಗ್ರೀವನಿಂದ ವಾಲಿಗೆ, ವಾಲಿಯಿಂದ ಸುಗ್ರೀವನಿಗೆ ರುಮೆ ತಾರೆಯರು ಕೈ ಬದಲಾದಾಗ ಅವರಿಗೆ ಯಾವ ಚಿಂತೆಯೂ ಬಂದ ಹಾಗೆ ಕಾಣಲಿಲ್ಲ.[೮] ರಾಕ್ಷಸ ರಾಜ್ಯದಲ್ಲಿ ಅಂಥ ನಡತೆಯನ್ನು ಕುರಿತು ಯಾವ ಪ್ರಸಂಗದ ಮಾತುಕತೆಯೂ ಬರುವುದಿಲ್ಲ. ಆದರೆ ಹೆಂಡತಿಯ ಹೆಸರನ್ನು ಕುರಿತು ಬುಡವಿಲ್ಲದ ಗಾಳಿಮಾತೆದ್ದರೆ, ಒಂದು

---

೮ ವಾಲಿಯ ಮಗ ಅಂಗದನೇನೊ ನೊಂದುಕೊಂಡಿದ್ದಾನೆ. ಸುಗ್ರೀವನ ಪರವಾಗಿ ದುಮ್ಮಾನಗೊಂಡಿದ್ದಾನೆ. ತನ್ನ ಚಿಕ್ಕಪ್ಪನ ಮೇಲೆ ಬಂಡೆಬ್ಬಿಸಲು ತೊಡಗುತ್ತಾನೆ.

ಸಣ್ಣ ಸಂಶಯದ ನೆಳಲು ಸುಳಿದರೆ ಅದನ್ನು ಒಂದು ಮಾಲಿನ್ಯವೆಂದು, ಕರೆಯೆಂದು ದಾಂಪತ್ಯ ಸಂಬಂಧದಲ್ಲಿ ರಾಮನಂಥವನು ನಡಸುತ್ತಾನೆ. ಒಂದು ಸಣ್ಣಕರೆಯನ್ನು ಒಂದು ಗಾಯದಂತೆ ಭಾವಿಸುತ್ತಾನೆ. ಸೀತೆಯ ಹೆಸರಿಗೆ ವಿರೋಧವಾಗಿ ತನ್ನ ನಡತೆಯನ್ನು ಸ್ಥಾಪಿಸುವುದಕ್ಕೆ ಸಾರಭೂತವಾದ ಒಂದು ಎದುರು ಮಾತು ಇಲ್ಲದಿದ್ದರೂ ಅವಳನ್ನು ಅಗ್ನಿಪರೀಕ್ಷೆಗೆ ಈಡು ಮಾಡುತ್ತಾನೆ; ಅಥವಾ, ಅವಿಚಾರದಿಂದ ಕಾಡಿಗಟ್ಟುತ್ತಾನೆ. ಗಂಡಹೆಂಡಿರ ನಡುವೆ, ತಾಯಿತಂದೆಯರ ಮತ್ತು ಮಕ್ಕಳ ನಡುವೆ, ಸಹೋದರರ ನಡುವೆ ಬೆಳೆದು ಕಾಣುವ ಈ ಸಂಬಂಧಗಳಲ್ಲಿ ಹೋಲಿಕೆಯ–ವಿರೋಧದ ಚಿತ್ರಗಳು ಸ್ಪಷ್ಟವಾಗಿ ಎದ್ದು ಕಾಣುತ್ತವೆ. ರಾಕ್ಷಸ ಕುಟುಂಬಗಳಲ್ಲಾಗಲಿ, ವಾನರ ಕುಟುಂಬಗಳಲ್ಲಾಗಲಿ ಬಳಕೆಯಲ್ಲಿರುವ ಸ್ಥಿತಿಗತಿಗಳನ್ನು ಪರಿಶೀಲಿಸಿದರೆ ಒಂದು ಉತ್ತಮ ಆರ್ಯ ಕುಟುಂಬ ಎಷ್ಟು ಹೆಚ್ಚು ಕಟ್ಟುನಿಟ್ಟಿನದು, ಶುಚಿಯದು, ಸಂಸ್ಕಾರಗೊಂಡದ್ದು, ಮೇಲ್ತರದ ನಯನೀತಿಗಳದು ಎಂದು ಗೊತ್ತಾಗುತ್ತದೆ.

ಮೂರು ವರ್ಗಗಳವರೂ ಶಕುನ, ಕನು, ಶಾಪಗಳನ್ನು ನಂಬುತ್ತಾರೆ. ಎಲ್ಲರೂ ಋಷಿಮುನಿಗಳಿಗೆ ಇರುವ ಶಕ್ತಿಯನ್ನು ಬಲ್ಲವರಾಗಿದ್ದಾರೆ. ಅವರವರಿಗೇ ವಿಶೇಷವಾದ ಪೂಜಾವಿಧಾನ, ನಡವಳಿಕೆಯ ವ್ಯವಸ್ಥೆ, ತಂತ್ರ ಇರುತ್ತವೆ. ಆದರೆ ಒಬ್ಬ ಋಷಿಯನ್ನು ಲಂಕೆಯಲ್ಲಿ ಹೇಗೆ ಕಾಣುತ್ತಿದ್ದರೆಂಬುದಕ್ಕೆ ಯಾವ ನಿದರ್ಶನವೂ ಇಲ್ಲ. ವಾನರ ಸಂಬಂಧದಲ್ಲಿಯೂ ಹೆಚ್ಚಿಲ್ಲ. ಸಭೆಗಳೂ ಸಲಹಾಮಂದಿರಗಳೂ ವಿಶಿಷ್ಟವಾದುವು. ತನ್ನ ತೀರ್ಮಾನವನ್ನು ದಶರಥ ತನ್ನ ಸಭೆಯವರ ಮುಂದೆ ಇಟ್ಟು ಅವರ ಸಲಹೆ ಶಿಫಾರಸುಗಳಂತೆ ನಡೆದುಕೊಳ್ಳುತ್ತೇನೆನ್ನುತ್ತಾನೆ. ರಾಕ್ಷಸ ವಾನರ ಕ್ರಿಯಾಕಲಾಪಗಳು ಹೆಚ್ಚು ತೀಕ್ಷ್ಣ, ತ್ವರಿತ ಪರಿಣಾಮಕಾರಿಯಾದವು. ಆಳುವವನು ಆಳುತ್ತಾನೆ. ಲಂಕೆಯಲ್ಲಿ ಹಿತಕರವಾದ ಸಲಹೆ ಬಂದಾಗಲೂ ಹಿತವಾದವನ್ನು ರಾವಣನು ತಳ್ಳಿಹಾಕುತ್ತಾನೆ. ವಾನರರ ಇಚ್ಛಾವಿಲಾಸವೂ ಸಲಹೆಗಳೂ ಒಡೆದು ಕಾಣುತ್ತವೆ. ಯಾವ ಕ್ರಮವನ್ನೂ ಅನುಸರಿಸದೆ ಸಲಹೆಗಳನ್ನು ಮಾಡಬಹುದಿತ್ತು. ಅವನ್ನು ಮನಸ್ಸಿಗೆ ತಂದುಕೊಳ್ಳಬೇಕಾಗಿರಲಿಲ್ಲ. ವಾನರರ ಶಿಸ್ತಿನ ಸ್ವರೂಪಕ್ಕೆ ಮಧುವನದ ಪ್ರಂಗವು ಟೀಕೆಯೂ ವಿವರಣೆಯೂ ಆಗುತ್ತದೆ.

ಮರದ ಕೊಂಬೆಗಳು, ಕಲ್ಲು, ಉಗುರು, ಹಲ್ಲು ವಾನರರು ಬಳಸುವ ಆಯುಧಗಳು. ಗದೆಯನ್ನು ಪ್ರಯೋಗಿಸಬಲ್ಲರು. ಕುಸ್ತಿಮಾಡಬಲ್ಲರು. ಅಂಗೈಯಿಂದ, ಮುಷ್ಟಿಯಿಂದ ಬಲವಾಗಿ ಹೊಡೆಯಬಲ್ಲರು. ನಳ ಸುಷೇಣರ ಸಹಾಯ ಸಲಹೆ ಅವರಿಗಿದೆ. ವಿವೇಕದಲ್ಲಿ ಅನುಭವದಲ್ಲಿ ಲೋಕಜ್ಞಾನದಲ್ಲಿ

ಜಾಂಬವಂತನಂತಹ ಮುದುಗಣ್ಣಿಗಳಿದ್ದಾರೆ. ಹಾಗೆಯೇ ಯಾವ ಗಾಯಗಳಿಗೂ ಈಡಾಗದ, ಅಜೇಯನಾದ ಹನುಮಾನನು ವಾನರರ ಕಡೆ ಇದ್ದಾನೆ. ಯಾವ ನಿಯಮ ಸೂತ್ರಗಳಿಗೂ ಲಕ್ಷ್ಯ ಕೊಡದೆ ಪರಿಸ್ಥಿತಿಯನ್ನು ಪೂರ್ತಿಯಾಗಿ ಮನಸ್ಸಿಗೆ ತಂದುಕೊಳ್ಳದೆ ನಡೆಯುವ ಪ್ರವೃತ್ತಿ ಉಳ್ಳವರು ಅವರು. ರಾಕ್ಷಸರಾಗಲಿ, ಆರ್ಯವರ್ಗಗಳವರಾಗಲಿ ಹಾಗೆ ಮಾಡರು. ವಾನರರೂ ಶಕ್ತರು. ಒಟ್ಟು ನಾಡಿನ ಮೇಲೆ ಹರಡಿಕೊಂಡಿರುವವರಾದರೂ ರಾಕ್ಷಸರಿಗಾಗಲಿ ಮಾನವರಿಗಾಗಲಿ ಅವರ ಬಲಶಕ್ತಿಗಳ ವಿಷಯಗಳ ಬಗೆಗೆ ದೊಡ್ಡ ಬೆಲೆ ಕಟ್ಟಿದ ಹಾಗಿಲ್ಲ. ಅವರನ್ನು ಕಂಡರೆ ಅಷ್ಟು ತಾಳಿಕೆ ಇರುವ ಹಾಗಿಲ್ಲ. ವಾನರತ್ವ, ಶಾಖಾಮೃಗತ್ವ ಎಂದು ಅವರನ್ನು ಕುರಿತಾಡುವ ಮಾತು ಅವರು ತಿಕ್ಕಲು ಬುದ್ಧಿಯವರು, ಅವರ ಭಕ್ತಿ ವಿಶ್ವಾಸ ಅಷ್ಟೇನೂ ದೊಡ್ಡವಲ್ಲವೆಂಬುದನ್ನು ತಿಳಿಸುತ್ತದೆ. ಹನುಮಂತನು ಕೂಡ ಅವರ ವಿಶ್ವಾಸ ಯೋಗ್ಯತೆಯನ್ನು ಕುರಿತಾಗಲಿ ನಿಷ್ಠೆಯನ್ನು ಕುರಿತಾಗಲಿ, ಅತಿಯಾಗಿ ನೆಚ್ಚತಕ್ಕದ್ದಲ್ಲವೆಂದು ಅಂಗದನಿಗೆ ಹೇಳುತ್ತಾನೆ. ಸ್ವಭಾವತಃ ಸೋಮಾರಿ ಜನ; ಕರ್ತವ್ಯ ಬುದ್ಧಿ ಕಡಮೆ; ಸುಖಭೋಗಗಳಿಗೆ ಓಲುವವರು. ವಾಲಿಸುಗ್ರೀವ ಪಕ್ಷಪಾತಗಳ ನಡುವೆ ವಿಶ್ವಾಸ, ಪಕ್ಷಪಾತ ಒಡೆದು ಹಂಚಿರುವಂತೆ ಕಾಣುತ್ತದೆ. ಸುಗ್ರೀವ, ಅಂಗದ, ಹನುಮಾನ್ ಮೂವರು ಸೇರಿ ಕೆಲಸ ಮಾಡಿದರೆ ವಾನರ ಬಲ ಮಹಾಪರಿಣಾಮಗಳನ್ನು ಸಾಧಿಸಬಲ್ಲದೆಂಬುದು ಸುಗ್ರೀವನ ನಂಬಿಕೆ. ನಳನದು. ರಚನಾಶಿಲ್ಪ. ಸುಷೇಣನದು ಚಿಕಿತ್ಸಾನುಭವ. ಸಮಯಪ್ರಜ್ಞೆ, ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುವುದು ಸುಷೇಣನ ಶಕ್ತಿ. ಜಾಂಬವಾನನ ಅನುಭವ ಮತ್ತು ಲೋಕವಿವೇಕ ಪ್ರಖ್ಯಾತವಾದವು. ಸಮಸ್ತವನ್ನೂ ಗೆದ್ದು ಬರಬಲ್ಲ ಹನುಮಂತನ ಯೋಗ್ಯತೆ ಯಾವ ಎಣಿಕೆಯಲ್ಲೂ ಕ್ರಿಯಾಸಿದ್ಧಿಗೆ ವಿಮಾಕ್ರಿಯೆಯಂತೆ ಸಂಪೂರ್ಣವಾಗಿ ಸಲ್ಲವಲ್ಲವಾಗಿದ್ದುವು. ಅವರಿರುವಲ್ಲಿ ಅಧೀರತೆಗಾಗಲಿ ನಿರಾಶೆಗಾಗಲಿ ಅಗತ್ಯ, ಎಡೆ ಇರುತ್ತಿರಲಿಲ್ಲ.

---

ಅಂಗದ ಸುಗ್ರೀವನ ದುಷ್ಕರ್ಮಗಳನ್ನು ಕುರಿತು ಒಕ್ಕಣಿಸುತ್ತಿದ್ದಾಗ ಅವನು ಕ್ರೂರ, ಶಠ, ನೃಶಂಸ ಮುಂತಾಗಿ ನುಡಿದಾಗ, 'ನಿನ್ನ ಚಿಕ್ಕಪ್ಪ ಸ್ವಭಾವತಃ ಧರ್ಮಕಾಮಃ ಪಿತೃವ್ಯಸ್ತೇ ಪ್ರೀತಿ ಕಾಮೋ ದೃಢವ್ರತಃ ಶುಚಿಃ ಸತ್ಯಪ್ರತಿಜ್ಞಶ್ಚ ನ ತ್ವಂ ಜಾತು ಜಿಘಾಂಸತಿ' ಎಂದು ಹನುಮಂತನು ಅವನಿಗೆ ತಿಳಿಯ ಹೇಳುತ್ತಾನೆ. ನಿನ್ನ ಚಿಕ್ಕಪ್ಪ ಧರ್ಮತತ್ಪರನು; ಜನರಲ್ಲಿ ಪ್ರೀತಿ ಉಳ್ಳವನು, ಬಯಸುವವನು; ದೃಢಶೀಲನು; ಶುಚಿಯಾದವನು; ಸತ್ಯಪ್ರತಿಜ್ಞನು; ಕೊಟ್ಟ ಮಾತನ್ನು ನಡಸಿಕೊಡುವವನು. ಅಂಥವನನ್ನು ಹೊಗಳಬೇಕೇ ಹೊರತು ತೆಗಳತಕ್ಕದ್ದಲ್ಲ')

## ಅಧ್ಯಾಯ ೪

# ರಾಮಾಯಣದ ವ್ಯಕ್ತಿಗಳು

**೧ ದಶರಥ :**

ರಾಮಾಯಣದಲ್ಲಿ ಬರುವ ವ್ಯಕ್ತಿಗಳ ಶೀಲಸ್ವಭಾವ ಮತ್ತು ಗುಣವನ್ನು ಸಂಕ್ಷೇಪವಾಗಿ ಪರಿಶೀಲಿಸಲು ದಶರಥನಿಂದ ಆರಂಭಿಸಬಹುದು. ಅವನು ತನ್ನ ಕಾಲದಲ್ಲಿ ಒಳ್ಳೆಯ ಮನುಷ್ಯನೆಂದೂ ದೊಡ್ಡ ರಾಜನೆಂದೂ ಹೆಸರುಳ್ಳವನಾಗಿದ್ದ. ಪ್ರಜಾವರ್ಗದ ಯೋಗಕ್ಷೇಮಗಳನ್ನು ಚೆನ್ನಾಗಿ ನೊಡಿಕೊಳ್ಳುತ್ತಿದ್ದ. ಒಂದು ತುಂಬು ಜೀವನವನ್ನು ಬಾಳಿ ಸಂತೋಷ ಪಡುವುದಕ್ಕೆ ಬೇಕಾದ ಎಲ್ಲ ಅನುಕೂಲಗಳನ್ನೂ ಅಯೋಧ್ಯೆಯಲ್ಲಿ ಕಲ್ಪಿಸಿಕೊಟ್ಟಿದ್ದ. ಅವನಿಗೆ ಶತ್ರುಗಳು ಯಾರೂ ಇದ್ದಂತೆ ಕಾಣುವುದಿಲ್ಲ. ಸುತ್ತಲವರು ಸ್ನೇಹಿತರಾಗಿದ್ದರು. ಗುಹ ಒಳ್ಳೆಯ ಸಾಮಂತ, ಜಟಾಯು ಸ್ನೇಹ ಪ್ರೀತಿಗಳಿಂದ ಕೂಡಿದ್ದ. ಅವನಿಗೆ ವಯಸ್ಸಾಗಿತ್ತು. ವೃದ್ಧಾಪ್ಯದಲ್ಲಿ ಮಕ್ಕಳಾದ್ದರಿಂದ ಅವರಲ್ಲಿ ಅತಿಶಯ ಪ್ರೀತಿ. ಎಲ್ಲರಿಗಿಂತ ಹೆಚ್ಚಾಗಿ ರಾಮನ ಮೇಲಿನ ಮೋಹ ಹೆಚ್ಚಾಗಿತ್ತು. ಅರಮನೆಯಲ್ಲಿ ೩.೫೦ ಮಂದಿ ಅವನ ಹೆಂಗಸರಿದ್ದರು ; 'ದಾರಾಃ' ಎಂಬುದು ಮಾತು.[೧] ಮೂವರು ರಾಣಿಯರು, ಅವರಲ್ಲಿ ಕೈಕೆಯ ಮೇಲಿನ ಮೋಹ ಅತೀವವಾದ್ದು. ಅದರಿಂದಾಗಿ ಬಹುಕಾಲ ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ಉಪೇಕ್ಷೆ ಮಾಡಿದ್ದ. ಆತನನ್ನು ಕಂಡರೆ ಅವರಿಗೆ ಗೌರವವಿತ್ತಾದರೂ ಆತನು ಕೈಕೆಯ ಪಕ್ಷಪಾತಿಯಾಗಿದ್ದುದರಿಂದ ಅವರು ಹೇಗೆ ನೆಮ್ಮದಿಯಿಂದ ಇದ್ದಾರು? ಅರಮನೆಯಲ್ಲಿ ಕೈಕೆಯ ಅಧಿಕಾರ ನಡೆಯುತ್ತಿತ್ತು.

ಉಳಿದ ಎಲ್ಲಕ್ಕಿಂತ ಹೆಚ್ಚಾಗಿ ದಶರಥನಿಗೆ ರಾಮನ ಮೇಲಿನ ಪ್ರೇಮ ಅಧಿಕ ಎಂದೆ. ಅವನ ಹಿತಕ್ಕಾಗಿ ಏನನ್ನು ಬೇಕಾದರೂ ಮಾಡಲು ಸಿದ್ಧನಿದ್ದ. ರಾಮನ ಸಹಾಯ ಬೇಕೆಂದು ವಿಶ್ವಾಮಿತ್ರನು ಬೇಡಿದಾಗ ಋಷಿಯನ್ನು ತನಗೆ ಭೇಟಿ ಕೊಟ್ಟುದಕ್ಕಾಗಿ ಉದಾರವಾಗಿ ಸ್ವಾಗತಿಸಿದ್ದ, ನಿಜ. ಅವರ ದರ್ಶನ ತನ್ನ

---

೧ ಇದು ಪುಲ್ಲಿಂಗ ಪದ, ಬಹುವಚನ!

ಜೀವನದ ಸಫಲತೆ ಎನ್ನುವವರೆಗೂ ಅವನ ಮಾತು ಹೋಗುತ್ತದೆ:

ಕಂ ಚತೇ ಪರಮಂ ಕಾಮಂ ಕರೋಮಿ ಕಿಮುಹರ್ಷಿತಃ
ಪಾತ್ರಭೂತೋಽಸಿ ಮೇ ಬ್ರಹ್ಮನ್, ದಿಷ್ಟ್ಯಾ, ಪ್ರಾಪ್ತೋಸಿ ಧಾರ್ಮಿಕಾ
ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸಂಜೀವಿತಂ – ಇತ್ಯಾದಿ.

(ಋಷಿಗೆ ಏನನ್ನು ಬೇಕಾದರೂ ಕೊಡುತ್ತೇನೆ. ನನ್ನ ಹುಟ್ಟು, ಬದುಕು ಈಗ ಸಫಲಗೊಂಡಿದೆ ನಿಮ್ಮನ್ನು ಕಂಡು, ನಿಮಗೆ ಹರ್ಷವುಂಟಾಗುವುದನ್ನೆಲ್ಲ ಮಾಡಿ) 'ಪರಮಂ ಕಾಮಂ' ಎಂಬುದಲ್ಲವೆ ಮಾತು? – ನಿಮಗೆ ಸೇವೆ ಸಲ್ಲಿಸುತ್ತೇನೆ ಎಂದಿದ್ದ. ರಾಮನನ್ನು ಕಳಿಸುವುದು ಶಕ್ಯವಿಲ್ಲವೆಂದಾಗ ವಿಶ್ವಾಮಿತ್ರನು ಅಸಮಾಧಾನದಿಂದ ಇವನನ್ನು 'ಮಿಥ್ಯಾಪ್ರತಿಜ್ಞಃ' ಎಂದು ನುಡಿದು[೨] ಹೊರಟುಹೋಗುವುದರಲ್ಲಿದ್ದ. ವಸಿಷ್ಠನು ನಡುವೆ ಬಾಯಿಹಾಕಿ ಋಷಿಯ ಕೋಪವನ್ನು ಉಪಶಮಿಸಬೇಕಾಯಿತು.... ತನ್ನ ಸಮಸ್ತ ಸುಕೃತವನ್ನೂ ಒತ್ತೆಯಿಟ್ಟು ಮಾಡೆಂದು ಕೈಕೆ ಹೇಳಿದ ಏನನ್ನಾದರೂ ಮಾಡುತ್ತೇನೆಂದು ಆಣೆಯಿಟ್ಟುಕೊಂಡ ಮೇಲೆ–ಈ ಕಾರಣದಿಂದಲೇ ಮುಂದೆ ಚಿತ್ರಕೂಟದಲ್ಲಿ ಅವಳೇ ಬಯಸಿದರೂ ಹಾಗೆ ಮಾಡಲು ರಾಮನು ತಾನು ಅಶಕ್ತನೆನ್ನುತ್ತಾನೆ–ಕೈಕೆಗೆ ದಶರಥನು ವಾಗ್ದಾನ ಮಾಡಿದ್ದುದು ಏನೆಂಬುದು ಈಗ ಕಾಣಿಸಿತು: ತನ್ನ ಅತಿಪ್ರಿಯವಾದ ಇಷ್ಟಾರ್ಥಗಳನ್ನೂ ಕೌಸಲ್ಯೆ ಮತ್ತು ಅಯೋಧ್ಯೆಯ ಎಲ್ಲ ಜನರ ಸಂತೋಷವನ್ನೂ ಭಂಗಪಡಿಸುವುದೆಂದು ತಿಳಿದಿದ್ದರೂ ನಡೆಯಬೇಕಾಯಿತೆಂಬುದಕ್ಕೆ ಕಾರಣವಾಗುತ್ತದೆ. ತಂದೆ ಕೊಟ್ಟಿದ್ದ ಮಾತನ್ನು ತಾನು ನಡಸಿಕೊಡುತ್ತೇನೆಂದು ಕರ್ತವ್ಯವನ್ನು ಕೈಕೊಂಡು ರಾಮನು ದಶರಥನನ್ನು ಪಾರು ಮಾಡುತ್ತಾನೆ. ವಾಗ್ದಾನ ಎಂದರೆ ಮಾನಸ್ಥಾಪನೆಗೆ ಅಗತ್ಯವಾಗಿದ್ದ ಋಣಭಾರ, ಪರಿಣಾಮಗಳು ಎಂಥವೇ ಆಗಲಿ, ಕೈಕೆ ದಶರಥನ ಅತ್ಯಂತ ದುರ್ಬಲಸ್ಥಾನದಲ್ಲಿ ಘಾತಿಸಿದ್ದಳು. ಆಕೆಯನ್ನು ಅವನು ಎಲ್ಲರಿಗಿಂತ ಹೆಚ್ಚಾಗಿ ಪ್ರೀತಿಸಿದ್ದ. ಅಳತೆ ಮೀರಿ ಆಕೆಯಲ್ಲಿ ನಂಬಿಕೆಯಿಟ್ಟಿದ್ದ. ಅಂಥವಳಿಂದ ಇದನ್ನು ನಿರೀಕ್ಷಿಸಿರಲಿಲ್ಲ.

---

೨. ರಾಮಾಯಣ ಕತೆಯಲ್ಲಿ ಇದು ಗುರುತರವಾದ ಪಾಪ. ಮುಂದಿನ ಕಾಲಗಳಲ್ಲಿ ಇದು ಕಥಾಖಂಡದ ಮುಖ್ಯಧಾತುವೇ ಆಗುತ್ತದೆ. ಈ ಸಂಬಂಧದಲ್ಲಿ ರಾಮನು ಅಪರಾಧಿಯಾಗುವುದಿಲ್ಲ. ತನ್ನ ತಂದೆ ಕೊಟ್ಟ ಮಾತನ್ನು ತಾನು ನೆರವೇರಿಸದೆ ಹೋದರೆ, ವಿಭೀಷಣನಿಗೆ ರಾಜ್ಯವನ್ನು ಕೊಡಿಸದೆ ಸತ್ತರೆ ತನ್ನ ಬದುಕು ಸಾರ್ಥಕವಾಗುವುದಿಲ್ಲ ಎಂದುಕೊಂಡಿದ್ದ. ಸುಗ್ರೀವನಿಗೆ ಕೊಟ್ಟ ಮಾತನ್ನು ನಡಸಲೇ ವಾಲಿಯ ನಿಗ್ರಹವನ್ನು ಅವನು ಮಾಡಿದುದು. ತಪ್ಪಾಯಿತೇನೊ ವಿಧಾನದಲ್ಲಿ; ತಂತ್ರದಲ್ಲಿ. ಅದನ್ನು ಮುಂದೆ ಸ್ವಲ್ಪ ವಿಸ್ತರಿಸಿದೆ.

ರಾಮನಿಗೇ ಈ ಸನ್ನಿವೇಶ ಬಡಿದ ಸಿಡಿಲಿನಂತಾಗುತ್ತದೆ. ಕೈಕೆಯನ್ನು ಕಂಡರೆ ಅವನಿಗೂ ಗೌರವ ಮಾನ್ಯತೆ ಇತ್ತು. ಅವಳಿಗೂ ಅವನಲ್ಲಿ ಪ್ರೀತಿಯಿತ್ತು. ಕೈಕೆಯ ಅಂತಃಪುರದಲ್ಲಿ ತಂದೆಯನ್ನು ಹೋಗಿ ಕಾಣಲು ಅವನಿಗೆ ಕರೆ ಬಂದಾಗ ಅವನ ಆಲೋಚನೆ ಹೀಗಿತ್ತು: ಪ್ರಾಯಶಃ ಒಟ್ಟಿಗೆ ಇಬ್ಬರೂ ತಮ್ಮ ಸಂತೋಷವನ್ನು ವ್ಯಕ್ತಪಡಿಸಲಿದ್ದಾರೆ, ಮುಂದೆ ನೆರವೇರಲಿರುವ ಅಭಿಷೇಕಕ್ಕಾಗಿ ನನ್ನನ್ನು ಹರಸುವವರಿದ್ದಾರೆ ಎಂದುಕೊಂಡ. ಸಾರ್ವಜನಿಕ ಸಭಾಮಂಡಲದಲ್ಲಿ ಸ್ವಲ್ಪ ಕಾಲಕ್ಕೆ ಮುಂಚೆ ದಶರಥನ ಸ್ವಂತ ಅರಮನೆಯಲ್ಲಿ ತಂದೆಯ ಶುಭಾಶಂಸನೆ ಪಡೆದಿದ್ದ. ಈಗ ಅವನು ಕಂಡ ದಶರಥನ ಚಿತ್ರ ಎಂಥದು! ಶೋಕಾಕುಲನಾಗಿ, ನುಡಿವ ಶಕ್ತಿ ಇಲ್ಲದೆ ತಬ್ಬಲಿಯಂತೆ, ನೆಲದ ಮೇಲೆ ಹೊರಳಾಡುತ್ತಿದ್ದ. ಕೈಕೆ ಅವನನ್ನು ಕುರಿತು ಅತಿಕಠಿಣವಾಗಿ ಮಾತನಾಡುತ್ತಿರುವಾಗ ಏನನ್ನು ನುಡಿಯಲೂ ಅಶಕ್ತವಾಗಿದ್ದ. ಅವನ ಉದ್ದೇಶಗಳನ್ನು ಅಪಾರ್ಥ ಮಾಡುತ್ತಿರುವುದರಿಂದ ವಾಕ್ ಶೂನ್ಯನಾಗಿದ್ದಾನೆ. ತನ್ನ ತಂದೆಯ ಪ್ರತಿಜ್ಞಾಪಾಲನೆಗಾಗಿ ಅದನ್ನು ಈಡೇರಿಸಿ ಋಣಭಾರದಿಂದ ಆತನನ್ನು ಬಿಡುಗಡೆ ಮಾಡುತ್ತೇನೆಂದೂ ವಿಧಾಯವಾಗಿ ನಡೆದುಕೊಳ್ಳುತ್ತೇನೆಂದೂ ತಾನು ಏನು ಬೇಕಾದರೂ ಮಾಡಲು ಸಿದ್ಧನಾಗಿರುತ್ತೇನೆಂದೂ ತನ್ನ ಮಲತಾಯಿಗೆ ಹೇಳಲು ಸಿದ್ಧನಾಗಿರುತ್ತಾನೆ. ರಾಮನು ಅಯೋಧ್ಯೆಯಿಂದ ಕಾಡಿಗೆ ಹೋಗುವವರೆಗೂ ತಂದೆಗೆ ನಿದ್ರೆಯಿಲ್ಲ, ಊಟವಿಲ್ಲ, ಸ್ನಾನವಿಲ್ಲ ಎನ್ನುತ್ತಿರುವಾಗ ದಶರಥನ ಕೊರಲು ಕಟ್ಟಿದಂತಾಗಿರುತ್ತದೆ. ತನ್ನ ಬಾಳು ಮತ್ತು ವಂಶದ ಅತಿದೊಡ್ಡ ಶತ್ರು ಕೈಕೆ ಎಂದು ಆಪಾದನೆ ಮಾಡುತ್ತಾನೆ. ಮಕ್ಕಳು ಅಯೋಧ್ಯೆಯನ್ನು ಬಿಟ್ಟುಹೋದ ಮೇಲೆ ಅವಳ ಕಡೆ ಕಣ್ಣೆತ್ತಿ ನೋಡುವುದಿಲ್ಲ. ನೇರ ಕೌಸಲ್ಯೆ ಇದ್ದ ಅರಮನೆಗೆ ಹೊಗುತ್ತಾನೆ. ಕಡೆಯ ಉಸಿರು ಎಳೆಯುವ ಮುಂಚೆ ಕೈಕೆ ತನಗೆ ಅಸಹ್ಯಳೆಂದು ಹೇಳುತ್ತಾನೆ.

ಕೋಪಗೃಹದಲ್ಲಿ ತನ್ನ ಧಾರಣೆಗೆ ಕಾರಣವನ್ನು ಅವನಿಗೆ ತಿಳಿಸುವ ಮುಂಚೆ ಕೈಕೆ ತನಗೆ ಪ್ರಿಯಳೆಂದು ಅವಳಿಗೆ ಎಷ್ಟು ಆಶ್ವಾಸನೆಗಳನ್ನು ಕೊಟ್ಟಿರುತ್ತಾನೆ! ರಾಜನನ್ನು ಕೇಳಬಾರದ್ದೆನ್ನುವ ಕೇಡುಗಳನ್ನು ಮಾಡಲು ಸಿದ್ಧನಾಗಿದ್ದೇನೆನ್ನುತ್ತಾನೆ. ಏನೇ ಆಗಲಿ, ತನಗೆ ಕೊಟ್ಟ ಮಾತನ್ನು ರಾಜನು ನೆರವೇರಿಸಬೇಕೆಂದು ಅವಳು ಒತ್ತಾಯ ಹಾಕುತ್ತಾಳೆ. ರಾಮನ ಯೌವ ರಾಜಾಧಿಪತ್ಯ ನಡೆವುದೆಂದಾದರೆ ಒಂದು ದಿನ ಕೂಡ – 'ಏಕಾಹಮಪಿ' – ತಾನು ಜೀವದಿಂದ ಇರುವುದಿಲ್ಲವೆಂದು ಹೇಳುತ್ತಾಳೆ. ಅವನು ಒಂದು ಮಾತನ್ನೂ ಆಡದಿರುವಾಗ ರಾಮನು ಒಳಗೆ ಬಂದವನೇ ತಂದೆ ಏಕೆ ಅಧೋ ದೃಷ್ಟಿಯಾಗಿ ಅಧೀರನಾಗಿದ್ದಾನೆ, ತನ್ನ ಕಡೆ

ನೋಡದಷ್ಟು, ತನ್ನೊಡನೆ ಮಾತನಾಡದಷ್ಟು – ಎನ್ನುತ್ತ ರಾಜನಿಗೆ ತನ್ನ ಮೇಲೆ ಕೋಪವಿದ್ದರೆ ತನ್ನ ಬದುಕಿಗೇ ಬೆಲೆಯಿಲ್ಲದಾಗುತ್ತದೆ ಎನ್ನುತ್ತಾನೆ. ಎಷ್ಟು ಕಠಿಣಹೃದಯಿ ಆಕೆ! 'ಧೃಷ್ಟಂ ಆತ್ಮಹಿತಂ ವಚಃ' ಎಂದು ಕವಿ ಹೇಳುವುದನ್ನು ಇಲ್ಲಿ ಕಾಣಬಹುದು. ತಂದೆ ಬಯಸಿದರೆ ತಾನು ಮಾಡಬೇಕಾಗಿ ಬಂದುದನ್ನೆಲ್ಲ ಮಾಡುತ್ತೇನೆಂದು ರಾಮನು ಆಕೆಗೆ ನಂಬಿಕೆ ಕೊಟ್ಟನು. 'ಕರಿಷ್ಯೇ ಪ್ರತಿಜಾನೇ ಚ ರಾಮೋ ದ್ವಿರ್ನಾಭಿಭಾಷತೇ' ಎಂಬುದು ರಾಮನ ಮಾತು. ಅದು ಅವನ ಶೀಲಲಕ್ಷಣ. ತನ್ನ ಎರಡು ನಿರ್ಬಂಧಗಳನ್ನು ಕೈಕೆ ತಿಳಿಸಿ ಅವನ್ನು ನಡಸಿಕೊಡಬೇಕೆಂದು ರಾಮನನ್ನು ಕೇಳಿದಾಗ ಆ ಸಮಯಗಳನ್ನು ತಾನು ಒಪ್ಪಿಕೊಳ್ಳುತ್ತೇನೆ, ಅದೇನೊ ಕಷ್ಟಕರವಲ್ಲ ಎನ್ನುತ್ತಾನೆ. ತಂದೆ ಬಯಸಿದ ಯಾವುದನ್ನು ಮಾಡಲೂ ಸಿದ್ಧನೇ. ಸಮಸ್ತವನ್ನೂ ಭರತನಿಗೆ ಒಪ್ಪಿಸುತ್ತೇನೆನ್ನುತ್ತಾನೆ:

ಅಹಂ ಹಿ ಸೀತಾಂ[೩] ರಾಜ್ಯಂ ಚ ಪ್ರಾಣಾನ್ ಇಷ್ಟಾನ್ ಧನಾನಿಚ
ಹೃಷ್ಟೋಭ್ರಾತ್ರೇ ಸ್ವಯಂ ದದ್ಯಾಂ ಭರತಾಯಾಪ್ರಚೋದಿತಃ

(ತನ್ನನ್ನು, ಸೀತೆಯನ್ನು, ರಾಜ್ಯವನ್ನು,ನನ್ನ ಪ್ರಾಣಗಳನ್ನು, ಧನವನ್ನು, ನನಗೆ ಪ್ರಿಯವಾದ ಎಲ್ಲವನ್ನೂ ಮನಸ್ಸಿನ ಹರ್ಷದಿಂದ ತಮ್ಮನಿಗಾಗಿ ಕೊಡುತ್ತೇನೆ. ಯಾರೂ ಅದಕ್ಕಾಗಿ ಕೇಳಿಕೊಳ್ಳಬೇಕಿಲ್ಲ.)

ನಿರ್ಬಂಧ ದಶರಥನನ್ನು ನಿರ್ಬಲನನ್ನಾಗಿ ಮಾಡುತ್ತದೆ: ಅವನ ಚೈತನ್ಯ ನಷ್ಟವಾಗಿತ್ತು. ರಾಮನ ಹೆಸರನ್ನು ಅಸ್ಪಷ್ಟವಾಗಿ ನುಡಿಯುತ್ತ ಪ್ರಜ್ಞಾಶೂನ್ಯವಾಗುವುದೊಂದೇ ಆಗ ಅವನು ಮಾಡಬಲ್ಲವನಾಗಿದ್ದದ್ದು. ನೋವಿನ, ಸಂಕಟದ, ಆಕ್ಷೇಪಣೆಯ ಒಂದೊಂದು ಮಾತು ಮಾತ್ರ ಅವನ ಬಾಯಿಂದ ಬರುತ್ತಿತ್ತು. ದುಷ್ಟ ಹೆಂಡತಿಯ ಇಷ್ಟಾರ್ಥಗಳಿಗೆ ವಶವಾಗಿ ಅಧರ್ಮೀ ರಾಜನೊಬ್ಬನೆಂಬಂತೆ ಅನ್ಯಾಯ ಮಾಡುತ್ತಿದ್ದ ತನ್ನನ್ನು ನಿಗ್ರಹಿಸಬೇಕೆಂದೂ ಸಿಂಹಾಸನವನ್ನು ಬಲಾತ್ಕಾರವಾಗಿ ತನ್ನ ಕೈಗೆ ತೆಗೆದುಕೊಳ್ಳಬೇಕೆಂದೂ ಮಗನನ್ನು ಬೇಡಿಕೊಳ್ಳುತ್ತಾನೆ. ಇನ್ನಾರಾದರೂ ಅದನ್ನು ಮಾಡಿದರೆಯೂ ಅವನಿಗೆ ಸಂತೋಷವೇ. ಆದರೆ ರಾಮನು ಸಮಯಗಳಿಗೆ ಒಪ್ಪಿ ತಂದೆಯ ಸತ್ಯ ಸಂಧತೆಯನ್ನು ಭೂಮಿಯ ಮೇಲೆ, ಸ್ವರ್ಗದಲ್ಲಿ ಸ್ಥಾಪಿಸುತ್ತೇನೆನ್ನುತ್ತಾನೆ: ದಶರಥನು ಒಂದು ಮಾತನ್ನೂ ಆಡಲಾಗಲಿಲ್ಲ. ಒಂದು ದಿನ ತಡಮಾಡು ಎಂದು ತಂದೆ ಬೇಡಿಕೊಳ್ಳುತ್ತಾನೆ. ರಾಮನು ಒಪ್ಪುವುದಿಲ್ಲ. ಇನ್ನೊಂದು ದಿವಸ ತಡಮಾಡಿದರೆ

---

೩ ಎಷ್ಟು ಹಗುರವಾಗಿ ಸೀತೆಯನ್ನು ಕೂಡ 'ದದ್ಯಾಂ' ಎನ್ನುತ್ತಾನೆಂಬುದು ವ್ಯಸನಕರವಾದ ಪ್ರಸಂಗ.

ಮನಸ್ಸಿನಲ್ಲಿ ಇನ್ನಾವ ಬದಲಾವಣೆಗಳಾಗಬಲ್ಲವೊ – ಯಾರಿಗೆ ಗೊತ್ತು? ಪಟ್ಟಣಕ್ಕೆ ದುಃಖ. ಲಕ್ಷ್ಮಣ ಸೀತೆ ಇಬ್ಬರೂ ರಾಮನೊಡನೆ ಕಾಡಿಗೆ ಹೊಗುತ್ತೇವೆಂದಾಗ ಕುದುರೆ, ಆನೆ, ಹಣ, ಒಡವೆ, ವಸ್ತು ತೆಗೆದುಕೊಂಡು ಹೋಗಿ, ವನವಾಸಕಾಲದಲ್ಲಿ ಸುಖವಾಗಿರಿ ಎಂದು ರಾಜನು ಹೇಳಿದ. ದಶರಥನೂ ಕೌಸಲ್ಯೆಯೂ ರಥದ ಹಿಂದೆ ಓಡುವಾಗ ರಾಮನು ಹಿಂದಿರುಗಿ ನೋಡಲೊಪ್ಪಲಿಲ್ಲ. ರಥವನ್ನು ನಿಧಾನವಾಗಿ ನಡಸಿಕೊಂಡು ಹೋಗೆಂದು ದಶರಥನು ಸುಮಂತ್ರನನ್ನು ಕೇಳಿದಾಗ ಈ ದುಃಖವನ್ನು ಕಡಮೆ ಮಾಡಲು ಇನ್ನಷ್ಟು ವೇಗವಾಗಿ ಹೋಗೆಂದು ರಾಮನು ಅವನಿಗೆ ಅಪ್ಪಣೆ ಮಾಡುತ್ತಾನೆ. ಕೌಸಲ್ಯೆಯ ಅರಮನೆಯೊಳಕ್ಕೆ ದಶರಥನು ಹೋಗಿದ್ದಾಗ ರಾಮನು ಗಂಗೆಯನ್ನು ದಾಟಿಹೋದನೆಂದು ಅವನಿಗೆ ಸುದ್ದಿ ಬರುತ್ತದೆ. ಸುಮಂತ್ರನು ಬಂದು ಸುದ್ದಿಕೊಟ್ಟು ರಾಮನು ತನ್ನನ್ನು ಹಿಂದಕ್ಕೆ ಕಳಿಸಿದನೆಂದು ಹೇಳಿದನು. ದಶರಥನು ಯಾವ ಮಾತನ್ನೂ ಆಡಲಿಲ್ಲ. ಕೌಸಲ್ಯೆಗೆ ಒಳಗೆ ತನ್ನ ಉಮ್ಮಳವಿದ್ದದ್ದರಿಂದ ಗಂಡನಿಗೆ ಹೇಳಿದಳು: ಇಲ್ಲಿ ಕೈಕೆ ಇಲ್ಲ; ಯಾವ ಭಯವೂ ಇಲ್ಲದೆ ಸುಮಂತ್ರನೊಡನೆ ಮಾತನಾಡಬಹುದು – ಎಂದು. ತನ್ನ ಕಣ್ಣುಗಳಿಗೆ ನೋಟಹೋಗಿದೆ – 'ಚಕ್ಷುರ್ಭ್ಯಾಂ ತ್ವಾಂ ನ ಪಶ್ಯಾಮಿ' – ಎನ್ನುತ್ತಾನೆ. ದಶರಥ ರಾಮನಲ್ಲಿ ತನಗಿರುವ ಪ್ರೀತಿಯೂ ಆ ಬಗ್ಗೆ ತನಗಿರುವ ಎದೆ ಬೇನೆಯೂ ಕೌಸಲ್ಯೆಯದಕ್ಕಿಂತ ಕಡಮೆಯಲ್ಲವೆಂದೂ ಸ್ಪಷ್ಟಪಡಿಸುತ್ತಾನೆ.

ಪ್ರಸಾದಯೇತ್ವಾಂ ಕೌಸಲ್ಯೇ ರಚಿತೋಽಯಂ ಮಯಾಂಜಲಿಃ
ವತ್ಸಲಾ ಚಾಽನೃಶಂಸಾಚ ತ್ವಂ ಹಿ ನಿತ್ಯಂ ಪರೇಷ್ವಪಿ
ನಾರ್ಹಸೇ ವಿಪ್ರಿಯಂ ವಕ್ತುಂ ದುಃಖಿತಾಪಿ ಸುದುಃಖಿತಾಂ

(ನನಗೆ ಅನುಗ್ರಹ ಮಾಡು ಕೌಸಲ್ಯೇ, ಅಂಜಲಿಬದ್ಧನಾಗಿ ನಿನ್ನನ್ನು ಬೇಡಿಕೊಳ್ಳುತ್ತಿದ್ದೇನೆ. ನೀನು ಇತರರನ್ನು ಕುರಿತು ಎಂದಿಗೂ ವಾತ್ಸಲ್ಯವುಳ್ಳವಳು. ಕರುಣಾಶಾಲಿ. ಎಷ್ಟೇ ದುಃಖ ನಿನ್ನನ್ನು ಪೀಡಿಸುತ್ತಿರಲಿ, ಅಷ್ಟೇ ದುಃಖದಲ್ಲಿ ಇರುವ ನನ್ನ ವಿಷಯದಲ್ಲಿ ವಿಪ್ರಿಯಳಾಗಿ ಮಾತನಾಡುವುದು ತಕ್ಕುದಲ್ಲ.)

'ಪ್ರಸಾದಯೇತ್ವಾಂ ಕೌಸಲ್ಯೇ' ಎಂದು ಅವನು ಕೇಳಿಕೊಂಡಾಗ ಕೌಸಲ್ಯೆಗೆ ಬಿದ್ದ ಪೆಟ್ಟು ಬಲವಾದ್ದು. ಆಕೆಯ ಸ್ಥಿತಿ ಕರುಣಾಜನಕವಾಯಿತು :

ಕೌಸಲ್ಯಾ ವ್ಯಸೃಜತ್ ಬಾಷ್ಪಂ ಪ್ರಣಾಲೀವ ನವೋದಕಂ
ಸಾ ಮೂರ್ಧ್ನಿ ಬಧ್ವಾರುದತೀ ರಾಜ್ಞಃ ಪದ್ಮಮಿವಾಂಜಲಿಂ
ಸಂಭ್ರಮಾತ್ ಅಬ್ರವೀತ್ ತ್ರಸ್ತಾ ತ್ವರಮಾಣಾಕ್ಷರಂ ವಚಃ,–ಇತ್ಯಾದಿ

(ಮಾಳಿಗೆಯ ಮೇಲಿನ ನಾಳಿಕೆಯಲ್ಲಿ ಹೊಸತಾಗಿ ಮಳೆನೀರು ಧಾರಾಳವಾಗಿ ಹರಿವಂತೆ

ಕೌಸಲ್ಯೆಯ ಕಣ್ಣೀರು ಹರಿಯಿತು. ದಶರಥನ ಎರಡೂ ಕೈಗಳನ್ನು ಪದ್ಮದ ಹಾಗಿರುವ ತನ್ನ ಬೊಗಸೆಗೈಗಳಿಂದ ಎತ್ತಿ ತನ್ನ ತಲೆಯ ಮೇಲಿಟ್ಟುಕೊಂಡಳು; ತುಂಬಾ ಸಂಭ್ರಮದಿಂದ ಮಾತುಗಳನ್ನಾಡಿದಳು.)

ಇಂತಹ ಸಂದರ್ಭದಲ್ಲಿನ ಭಾವಪ್ರಕಾಶನೆಗೂ ನಡವಳಿಕೆಗೂ ಇದೊಂದು ಮುಡಿನುಡಿ, ಕ್ರಿಯೆ ಆಗುತ್ತದೆ. ಇನ್ನು ಹೆಚ್ಚು ಕಾಲ ಭೂಮಿಯ ಮೇಲೆ ದಶರಥನು ಇರುವ ಅವಕಾಶವಿಲ್ಲ. ಸ್ಮೃತಿ ಹೋಗುತ್ತಿತ್ತು; ಕಣ್ಣು ಕಾಣಿಸುತ್ತಿರಲಿಲ್ಲ; ಯಾವುದನ್ನೂ ಮುಟ್ಟಿ ಗುರುತಿಸಬೇಕಿತ್ತು.[೪] ಯಮನ ಅಪ್ಪಣೆಯನ್ನು ಹೊತ್ತುಬಂದ ಸೇವಕರು ಅವನನ್ನು ಒತ್ತುತ್ತಿರುವಂತೆ ಕಂಡಿತು. ವನವಾಸ ಮುಗಿಸಿಕೊಂಡು ಇನ್ನು ಹದಿನೈದು ವರ್ಷಗಳಲ್ಲಿ ಹಿಂದಿರುಗುವ ರಾಮನನ್ನು ಕಾಣುವವರು ಎಂಥ ಭಾಗ್ಯವಂತರು ಎಂದು ಪುತ್ರಮೋಹದಿಂದ ಅವನು ಕಲ್ಪಿಸಿಕೊಳ್ಳುತ್ತಿದ್ದನು:

ನ ತೇ ಮನುಷ್ಯಾ ದೇವಾಸ್ತೇ ಯೇ ಚಾರು ಶುಭ ಕುಂಡಲಂ
ಮುಖಂ ದ್ರಕ್ಷ್ಯಂತಿ ರಾಮಸ್ಯ ವರ್ಷೇ ಪಂಚದಶೇ ಪುನಃ

(ಕುಂಡಲಧಾರಿಯಾದ ರಾಮನ ಮನೋಹರವಾದ ಮುಖವನ್ನು ಪುನಃ ಹದಿನೈದು ವರ್ಷಗಳಲ್ಲಿ ಕಾಣುವವರು ಮನುಷ್ಯರಲ್ಲ, ದೇವತೆಗಳು; ಧನ್ಯರು.)

ಈಗ ತಾನು ಪೂರ್ತಿ ಅನಾಥನಂತಾಗಿದ್ದೇನೆ ('ಅನಾಥವತ್') ಎಂದು ನುಡಿಯುತ್ತ ದಶರಥನು ಕಡೆಯುಸಿರನ್ನು ಎಳೆದನು.

* * * *

ಮೂವರು ರಾಣಿಯರನ್ನು ಕುರಿತು ಹೋಲಿಕೆ–ವ್ಯತ್ಯಾಸಗಳನ್ನು ಕಾಣಿಸುವ ಅಗತ್ಯವಿಲ್ಲ. ಕೌಸಲ್ಯೆ ಹಿರಿಯಳು. ಪಟ್ಟದ ರಾಣಿ. ಅರಮನೆಯ ವ್ಯವಸ್ಥೆಯಲ್ಲಿ ತನ್ನ ಸ್ಥಾನ ಮಾನ ಇನ್ನು ಮುಂದೆಯಾದರೂ ಹೆಚ್ಚುತ್ತವೆಂದು ನಿರೀಕ್ಷಿಸಿದ್ದಳು. ರಾಮನು ಯುವರಾಜನಾದ ಮೇಲೆ ರಾಜ್ಯದಲ್ಲಿಯೂ ತನಗೆ ಹೆಚ್ಚು ಪ್ರತಿಷ್ಠೆ ಬರುವುದೆಂದಿದ್ದಳು. ಭರತನ ತಾಯಲ್ಲಿ ರಾಜನ ಮೋಹ ಅತೀವವಾಗಿರುವುದರಿಂದ ಆ ಸ್ಥಿತಿ ತನಗೆ ದೊರಕುತ್ತದೆಯೊ ಇಲ್ಲವೊ ಎಂಬ ಸಂಶಯ ಅವಳಿಗಿತ್ತು. ಸಿಂಹಾಸನಕ್ಕೆ ಉತ್ತರಾಧಿಕಾರವನ್ನು ಅವಳ ಮಗನಿಗೆ ಕೊಡುತ್ತೇನೆಂದು ರಾಜನು ಕೈಕೆಯ ತಾಯಿತಂದೆಗಳಿಗೆ ಮಾತುಕೊಟ್ಟಿದ್ದಾನೇನೊ ಎಂಬ ಶಂಕೆ ಅವಳಿಗಿತ್ತು. ಆದರೂ ಅವಳಿಗೆ ಗೊತ್ತಿತ್ತು : ರಾಮನಲ್ಲಿ ದಶರಥನ ಪ್ರೀತಿ ಅಪರಿಮಿತವಾದುದು,

---

೪ ಈ ಸಂದರ್ಭದಲ್ಲಿಯೇ ದಶರಥನ ಬಾಣ ಹಿಂದೆ ಋಷಿಕುಮಾರನನ್ನು ಕೊಂದಾಗ ತನಗೆ ಶಾಪ ಬಂದಿತೆಂದು ರಾಮಾಯಣದಲ್ಲಿ ಹೇಳಲಾಗುತ್ತದೆ.

ನಿರ್ಮೂಲವಾದುದು ಎಂಬುದು. ಮಾರನೆಯ ದಿನವೇ ಅಭಿಷೇಕ ನೆರವೇರಲಿರುವುದೆಂದು ಪ್ರಕಟವಾದ ಘೋಷಣೆ ಆಕೆಯನ್ನು ತುಂಬಾ ಸುಖಗೊಳಿಸಿತ್ತು. ಅದನ್ನು ಕೇಳಿ ಸಂತೋಷಪಟ್ಟಿದ್ದಳು. ವಂಶದಲ್ಲಿ ನಡೆದುಕೊಂಡು ಬಂದ ಸಂಪ್ರದಾಯವನ್ನು ನಡಸಿಕೊಡುವುದರಲ್ಲಿ, ರಾಜ್ಯಹಿತವನ್ನು ಸಾಧಿಸಲು, ತನಗೂ ಅವನಿಗೂ ಕಡೆಯಲ್ಲಿ ಹೀಗೆ ಸರಿಯಾಗಿ ನಿರ್ಣಯ ಮಾಡಿದನೆಂದು. ಘಟನೆಗಳು ಇದ್ದಕ್ಕಿದ್ದಂತೆ ಈ ತಿರುವು ತೆಗೆದುಕೊಂಡದ್ದು ಅವಳಿಗೆ ಹುಚ್ಚು ಹಿಡಿಸಿದಂತಾಯಿತು. ಈಗ ಸಮಸ್ತವೂ ನಷ್ಟವಾದಂತೆ ಕಂಡಿತು. ತನ್ನ ಮಾತು ಬೇಡ, ಲಕ್ಷ್ಮಣನ ಮಾತನ್ನಾದರೂ ಕೇಳಿ ನಡಸಿಕೊಡಲಿ ಎಂದು ರಾಮನಿಗೆ ಆಕೆ ಹೇಳುತ್ತಾಳೆ. ಇಲ್ಲವಾದರೆ ತನ್ನನ್ನೂ ಕಾಡಿಗೆ ಕರೆದುಕೊಂಡುಹೋಗು ಎಂದು ಕೇಳುತ್ತಾಳೆ. ಆ ಮಾರ್ಗ ಆಕೆಗೆ ತೆರೆದಿಲ್ಲವೆಂದೂ ತಂದೆಯ ಸಂಬಂಧದಲ್ಲಿ ಮಗನ ನಡತೆಗೆ ಒಪ್ಪುವ ನಡತೆಯಲ್ಲ, ಗಂಡ ಬದುಕಿರುವಾಗ ಹೆಂಡತಿ ಹಾಗೆ ಮಾಡುವುದು ಯುಕ್ತವಾಗದು ಎಂದು ಆಕೆಯನ್ನು ತಡೆದು ನಿಲ್ಲಿಸಬೇಕಾಯಿತು. ಇದು ತಾಯ ನಡತೆ : ಎಲ್ಲಿಯೇ ಆಗಲಿ, ಪುತ್ರವತ್ಸಲಳಾದ ಹೆಂಗಸಿಗೆ, ಅದರಲ್ಲಿಯೂ ವಿಶೇಷವಾಗಿ ಬಹುಕಾಲ ಮಕ್ಕಳಿಲ್ಲದೆ ಎಷ್ಟೋ ಕಾಲ ಕಳೆದ ಮೇಲೆ ರಾಮನಂತಹ ಗುಣಶಾಲಿ ಮಗನನ್ನು ಹೆತ್ತ ಸೌಭಾಗ್ಯವತಿಗೆ. ಆಕೆಯ ದುಃಖ ದುಸ್ಸಹ. ಕವಿ ಬಳಸುವ ಉಪಮೆಗಳು – ಕೌಸಲ್ಯೆಯನ್ನು ಹಸುವಿಗೆ, ರಾಮನನ್ನು ಕರುವಿಗೆ : ಅಥವಾ ಆಕೆಯನ್ನು ತಾಯಿ ಕುದುರೆಗೆ, ಅವನನ್ನು ಕುದುರೆಮರಿಗೆ–ತುಂಬಾ ಸಹಜವಾದವು, ಹಾರ್ದವಾದವು. ರಾಮಲಕ್ಷ್ಮಣ ಸೀತೆಯರು ಹೊರಟು ಹೋದ ಮೇಲೆ ಆಕೆ ಸ್ವಾಸ್ಥ್ಯ ತಂದುಕೊಳ್ಳುತ್ತಾಳೆ. ಸುಮಿತ್ರೆಯ ಪರಿಸ್ಥಿತಿಯೂ ಅಷ್ಟೇ ಕೆಟ್ಟಿತ್ತು. ಆದರೆ ಅವಳಾಡುವ ಮಾತು ರಾಮನ ಬಳಿ ಸೇವೆಗೆ ಲಕ್ಷ್ಮಣನಿರುವಾಗ, ಒಲವನ್ನೂ ಸಹವಾಸವನ್ನೂ ಒದಗಿಸಿ ಅವನನ್ನು ಪೋಷಿಸಲು ಸೀತೆಯಿರುವಾಗ ಹದಿನಾಲ್ಕು ವರ್ಷಗಳನ್ನು ಕಳೆಯುವುದು ದುಸ್ಸಹವಾಗದು; ಆ ಕಾಲ ಬೇಗ ಮುಗಿದುಹೋಗುತ್ತದೆ. ರಾಮನು ಹಿಂದಕ್ಕೆ ಬಂದು ನಿನ್ನ ಕಾಲುಗಳನ್ನು ಒತ್ತಿ ಸೇವೆ ಮಾಡುತ್ತಾನೆ. ಸುಮಿತ್ರೆಯ ಮಾತು: 'ಮೃದುವಾದ ಮಾಂಸಲವಾದ ('ಮೃದುಪೀನ') ತನ್ನ ಕೈಗಳಿಂದ ನಿಮಗೆ ಸೇವೆ ಸಲ್ಲಿಸುತ್ತಾನೆ' ಎನ್ನುತ್ತಾಳೆ.

"ಎರಡನೆಯ ರಾಣಿಯಾಗಿ ಮಧ್ಯವಯಸಿನ ರಾಜನನ್ನು ವರಿಸಿದವಳು ಎಷ್ಟು ಪ್ರೇಮವನ್ನು ನಿರೀಕ್ಷಿಸಬಹುದು? ರಾಜನಿಗೆ ಸುಮಿತ್ರೆಯಲ್ಲಿ ಸ್ವಲ್ಪ ಸ್ನೇಹವೇನೊ ಇತ್ತು. ಅಷ್ಟೇ ಅವಳಿಗೆ ತೃಪ್ತಿ. ಎರಡು ಮಕ್ಕಳನ್ನು ಹೆತ್ತಳು. ಒಬ್ಬನು ಒಬ್ಬ

ಅಣ್ಣನೊಂದಿಗೆ, ಇನ್ನೊಬ್ಬನು ಇನ್ನೊಬ್ಬ ಅಣ್ಣನೊಂದಿಗೆ ಸೇರಿಕೊಂಡು ಬೆಳೆದರು. ಅವರ ಕಷ್ಟಸುಖದ ವಿಷಯವಾಗಿ ಸುಮಿತ್ರೆ ಯೋಚಿಸಬೇಕಾಗಿರಲಿಲ್ಲ. ರಾಮನಿಗೆ ಆದದ್ದು ಲಕ್ಷ್ಮಣನಿಗೆ, ಭರತನಿಗೆ ಆದದ್ದು ಶತ್ರುಘ್ನನಿಗೆ. ಕೈಕಯೀದೇವಿ ಅಭಿಮಾನಿಯಾದ ಕಾರಣ ಸುಮಿತ್ರೆ ಕೌಸಲ್ಯೆ ಜೊತೆ ಸೇರಿದಳು. ಅಲ್ಲದೆ ರಾಜನು ಕಿರಿಯರಾಣಿಯೊಂದಿಗೆ ಇರುತ್ತಿರಲಾಗಿ ಹಿರಿಯರಾಣಿಯರು ಸಹಜವಾಗಿ ಒಬ್ಬರಿಗೊಬ್ಬರು ಜೊತೆಯಾದರು. ಕೌಸಲ್ಯೆಗೆ ಆದದ್ದು ತನಗೆ. ಹೀಗೆ ಸುಮಿತ್ರೆಯ ಜೀವನದ ತತ್ವ ಆತ್ಮನಿರಾಕರಣವಾಯಿತು.... ಮೂವರು ಹೆಂಡಿರಲ್ಲಿ ಮಧ್ಯದವಳಾಗಿ ಪ್ರೀತಿಯಿಲ್ಲದ ಅರಮನೆಯಲ್ಲಿ ಬಾಳಿದ ಬಾಳಿನಿಂದ ಸುಮಿತ್ರೆಗೆ ಒಂದು ವಿಷಯ ಮಂದಟ್ಟಾಗಿತ್ತು. ಬೇಕಾದ ಜನವಿದ್ದರೆ ಕಾಡೇ ಊರು. ಅಂಥ ಜನವಿಲ್ಲದಿದ್ದರೆ ಊರೇ ಕಾಡು... ತನ್ನ ದುಃಖ ಕೌಸಲ್ಯೆಯ ದುಃಖಕ್ಕಿಂತ ಕಡಮೆಯಲ್ಲದಿದ್ದರೂ ಅವಳು ಕೌಸಲ್ಯೆಗೆ ಧೈರ್ಯ ಹೇಳಿದಳು; ಸಮಾಧಾನ ಹೇಳಿದಳು.... ಇವಳ ನಡತೆ ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿರಬೇಕು. ಮೃತ್ಯುಶಯ್ಯೆಯಲ್ಲಿ ಮಲಗಿ ಇವರನ್ನು ನೋಡುತ್ತ ಇವರ ಮಾತನ್ನು ಕೇಳುತ್ತ ಇದ್ದ ದಶರಥನಿಗೆ ತನ್ನ ಎರಡನೆಯ ರಾಣಿಯ ಮನೋಧರ್ಮವನ್ನು ಕಂಡು ಗೌರವಬುದ್ಧಿ ಹುಟ್ಟಿತೆಂದು ಕಾಣುತ್ತದೆ. ಸಾಯುವ ಮೊದಲು ಅವನು ಆಡಿದ ಮಾತಿನಲ್ಲಿ ಕೈಕಯೀದೇವಿಯನ್ನು 'ಅಮಿತ್ರೇ', 'ಕುಲಪಾಂಸನಿ' ಎಂದು ನಿಂದಿಸಿದಂತೆ ಸುಮಿತ್ರೆಯನ್ನು 'ಹಾ ಸುಮಿತ್ರೇ ತಪಸ್ವಿನೀ' ಎಂದನು. ದಶರಥನ ಆ ಮಾತಿನ ಭಾವನೆ ನಿಜವಾದದ್ದು."[೫]

**೨. ರಾಮ**

ರಾಮಾಯಣ ಕಾವ್ಯ ಒಂದು ಪ್ರಶ್ನೆಯಿಂದ ತೊಡಗುತ್ತದೆ:

ಕೋನು ಅಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ
ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಷು ಕೋ ಹಿತಃ
ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ ಕೋSನಸೂಯಕಃ
ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ
ಏತದಿಚ್ಛಾಮಿ ಅಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ

---

೫ 'ಆದಿಕವಿ ವಾಲ್ಮೀಕಿ' ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್.

ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂ ವಿಧಂ ನರಂ

(ಇಂದಿನ ಲೋಕದಲ್ಲಿ ಗುಣವಂತನೂ ವೀರ್ಯವಂತನೂ ಧರ್ಮಜ್ಞನೂ ಕೃತಜ್ಞನೂ ಸತ್ಯವಾಕ್ಯನೂ ದೃಢವ್ರತನೂ ಆಗಿರುವ ರಾಜನಾರು? ಯುಕ್ತ ಚಾರಿತ್ರವುಳ್ಳವನು, ಸರ್ವಭೂತಗಳಿಗೂ ಹಿತವಾದವನು ಯಾರು? ಆತ್ಮವಂತನೂ ಜಿತಕ್ರೋಧನೂ ದ್ಯುತಿವಂತನೂ ಅಸೂಯೆಯಿಲ್ಲದವನೂ ಯಾರು? ಯುದ್ಧರಂಗದಲ್ಲಿ ರೋಷ ಉಂಟಾದಾಗ, ಯಾರನ್ನು ಕಂಡರೆ ದೇವತೆಗಳಿಗೂ ಭಯ ಉಂಟಾಗುತ್ತದೆ? ನನಗೆ ತುಂಬ ಕುತೂಹಲವಿದೆ : ಇಂಥವನನ್ನು ಕುರಿತು ನಿನ್ನನ್ನು ಕೇಳುವ ಇಚ್ಛೆ ಉಂಟಾಗಿದೆ; ಮಹರ್ಷಿ, ಈ ವಿಧದ ನರನನ್ನು ಕುರಿತು ನನಗೆ ತಿಳಿವಳಿಕೆ ಕೊಡು. ಅದನ್ನು ತಿಳಿಸಲು ನೀನು ಸಮರ್ಥನು).

ಇದು ಮನುಷ್ಯನಾದವನನ್ನು ಕುರಿತು ಸ್ಪಷ್ಟವಾಗಿ ಕೇಳಿದ ಪ್ರಶ್ನೆ, ಮನುಷ್ಯವರ್ಗದಲ್ಲಿ ಅಂಥ ಪುರುಷಶ್ರೇಷ್ಠನು ರಾಮನೆಂದು ಉತ್ತರ ಬರುತ್ತದೆ. ಕೃತಿಯ ಪೂರ್ತ ರಾಮನ ದೇಹದ ಅಂಗಾಂಗಗಳ ರಚನೆ, ಎತ್ತರ ಇವನ್ನು ಕುರಿತೇ ವರ್ಣನೆಗಳು ಬರುತ್ತವೆ. ಎಷ್ಟು ಜನರಿಂದ, ಎಷ್ಟು ಸಲ! ಅವನ ಆಕೃತಿಚಿತ್ರವನ್ನು ಕೊಡುತ್ತ ಅವನ ಉನ್ನತಿ ಗಂಭೀರ ಹಿರಿಮೆ ಎಲ್ಲರಿಗೂ ತಟ್ಟುತ್ತವೆ. ಮಾರೀಚ, ಶೂರ್ಪನಖಿ, ಅಷ್ಟೇ ಏಕೆ? – ರಾಮನ ಆಕೃತಿ ವಿಶೇಷ ಪರಮ ಶತ್ರುವಾಗುವ ರಾವಣನನ್ನೂ ಕಟ್ಟಿ ನಿಲ್ಲುತ್ತದೆ. 'ಸಮಃ ಸಮವಿಭಕ್ತಾಂಗಂ'[೬] (ಸಮವಾದ ಮೈ ಕಟ್ಟುಳ್ಳವನು). ಅವನ ಸುರಚನೆಯ ಲಕ್ಷಣವಾಗುತ್ತದೆ ಈ ವರ್ಣನೆ; ಅವನನ್ನು ಕಂಡು ಅವನೊಡನೆ ನಡೆದುಕೊಳ್ಳುವವರಿಗೆಲ್ಲ ಅವನಲ್ಲಿ ವಿಶ್ವಾಸ ಉಂಟಾಗಿಸುವ, ಒಲಿಸುವ ಗುಣವಾಗುತ್ತದೆ. ಗಂಡಸರು, ಹೆಂಗಸರು, ಅಯೋಧ್ಯೆಯ ಜನ, ವಾನರರು, ರಾಕ್ಷಸರು – ಎಲ್ಲ ಅವನ ನಡೆ, ರೀತಿ, ಮಾತುಗಳಿಂದ ಆಕರ್ಷಿತರಾಗುತ್ತಾರೆ. ಒಮ್ಮೆ ವಿ. ಎಮ್. ಶ್ರೀನಿವಾಸ ಶಾಸ್ತ್ರಿಗಳು ಅವನ ಮಹದ್ಗುಣಗಳಲ್ಲಿ ಮೂರು ವಿಶೇಷಾಂಗಳನ್ನು ಬಿಡಿಸಿ ಒತ್ತಿ ಹೇಳಿದರು. ಸ್ಮಿತಭಾಷಿ, ಮೃದುಭಾಷಿ, ಪೂರ್ವಭಾಷಿ ಎಂಬುವು ಆ ಮಾತುಗಳು. ಮಂದಹಾಸದಿಂದ ಮಾತನಾಡುವವನು; ಮೃದುವಾಗಿ ಮಾತನಾಡುವವನು; ಯಾರೊಡನೆಯೂ ಮೊದಲು ಮಾತನಾಡುವವನು ಎಂಬುವು. ಯಾವ ರಾಜನ ಸಂಬಂಧದಲ್ಲಿಯೇ ಆಗಲಿ, ಜನನಾಯಕನಲ್ಲಿಯೇ ಆಗಲಿ, ಇವು ಪ್ರೀತಿಯುಂಟುಮಾಡುವ ಗುಣಗಳು. ಇಂಥ ಗುಣಾಂಶ ಅಪರೂಪವಾಗಿರುವ

---

೬ ಆಮೇಲೆ ಒಂದು ಕಡೆಯಲ್ಲಿ ಸೀತೆಗೂ ಹೆಚ್ಚು ಕಡಮೆ ಇಂಥದೇ ವರ್ಣನೆ ಬರುತ್ತದೆ.

ಪ್ರಪಂಚದಲ್ಲಿ, ಕಾಲದಲ್ಲಿ ಅವು ಸ್ವಭಾವ ಜನ್ಯವಲ್ಲದಿರುವಾಗ ಸಂಸ್ಕಾರದ ಅಂಗಗಳಾಗಿ ಕಲಿತು ಅಭ್ಯಾಸ ಮಾಡಬೇಕಾಗುತ್ತದೆ. ಆಗ ಲೋಕ ಬದುಕಿಗೆ ಹೆಚ್ಚು ಪ್ರಿಯವಾಗುತ್ತದೆ; ನಯ ನಾಗರಿಕವುಳ್ಳದ್ದಾಗುತ್ತದೆ. ಅಂಥದೇ ಇನ್ನೊಂದು ಗುಣ: 'ಅಕ್ಲಿಷ್ಟ ಕರ್ಮಣಃ' ಎಂಬುದು. ಅತಿಕ್ಲಿಷ್ಟವಾದ ಕಾರ್ಯಗಳನ್ನು ಮಾಡಬೇಕಿರುವಾಗಲೂ ಅವನಲ್ಲಿ ಯಾವ ಶ್ರಮವೂ ಕಾಣುವುದಿಲ್ಲ. ಸಹಜವಾಗಿ ಎಲ್ಲವನ್ನೂ ಮಾಡುತ್ತಿದ್ದನು. 'ಸರ್ವಭೂತ ಹಿತೇ ರತಃ' ಎಂಬುದು ಋಷಿಯಲ್ಲಿ ಸಾಮಾನ್ಯವಾಗಿ ಕಾಣುವ ಲಕ್ಷಣ.[೭] ಅವನ ಕರುಣೆಯೂ ಸೇವೆಯೂ ಸಮಸ್ತ ಜೀವಲೋಕಕ್ಕೂ ತೆರೆದದ್ದು. ತಾಯಿ, ತಂದೆ. ಅರಮನೆಯ ಒಳಗೆ ಹೊರಗೆ, ತಮ್ಮಂದಿರು, ಹೆಂಡಿರು ಅವನ ಒಳ್ಳೆಯತನಕ್ಕೂ ವಿನಯಕ್ಕೂ ಮಾರು ಹೋದವರೇ. ಅವನ ಅಖಂಡ ಶೀಲಕ್ಕೂ ವಿವೇಕಕ್ಕೂ ಒಲಿದವರೇ. ಇತರರಿಗಿಂತ ಎಲ್ಲ ರೀತಿಯಲ್ಲಿಯೂ ಎಲ್ಲ ಗುಣಗಳಲ್ಲಿಯೂ ಮೇಲಾದವನೆಂದು ಗಂಡಸರು ಹೆಂಗಸರು ಅಕ್ಕರೆಯುಳ್ಳವರಾಗುತ್ತಾರೆ. ಗೌರವ ಕೊಡುತ್ತಾರೆ. ಎಲ್ಲರ ಪರವಾಗಿ ಉದಾರವಾಗಿ ವರ್ತಿಸುತ್ತಾನೆಂದು, ವಿವೇಕ ಶಾಲಿಯೆಂದು, ಜನಗಳ ನಡತೆಯನ್ನು ಮೇಲಾಗಿ ಬೆಲೆಗಟ್ಟುತ್ತಾನೆಂದು ನಂಬಿದ್ದಾರೆ. ಅವನ ತೀರ್ಮಾನಗಳು ಬೇಗ ಆಗುತ್ತವೆ. ಒಮ್ಮೆ ತೀರ್ಮಾನ ಮಾಡಿದ ಮೇಲೆ ಅದರಿಂದ ಅವನನ್ನು ತಿರುಗಿಸುವುದು ಶಕ್ಯವಿರುತ್ತಿರಲಿಲ್ಲ. ಇದೊಂದು character trait – ಶೀಲಲಕ್ಷಣ. ಅವನ ಶಕ್ತಿಗೆ ಹೇಗೊ ದೌರ್ಬಲ್ಯಕ್ಕೂ ಇದು ಹಾಗೇ ಕಾರಣವಾಗುವುದುಂಟು. ಆಡಿದ ಒಂದು ಮಾತು ಕಡೆಯ ಮಾತಾಗುತ್ತದೆ. 'ದ್ವಿರ್ನಾಭಿಭಾಷತೇ' – ಎರಡನೆಯ ಪ್ರತಿಮಾತನ್ನು ಆಡುವುದಿಲ್ಲ–ಎಂಬುದು ಅವನ ಧರ್ಮದ ಒಂದು ಅಂಗ. ಅದನ್ನು ಹಿಡಿದು ನಡಸಿಕೊಡುವುದು ತನ್ನ ಪರಮ ಕರ್ತವ್ಯವೆಂಬುದು ಅವನ ಭಾವನೆ. ತನ್ನ ಕಾಲದ ಜನರ ಉತ್ತಮ, ಮಹತ್ತಮ ಆಲೋಚನೆಯನ್ನು ತನ್ನ ಅನುಭವಕ್ಕೆ ತಂದು ಕೊಂಡಿದ್ದಾನೆಂಬುದು ಎಲ್ಲ ಸಂದರ್ಭಗಳಲ್ಲಿಯೂ ಕಾಣುತ್ತದೆ. ಯಾರ ಭಯವಾಗಲಿ ಪ್ರಸಾದವಾಗಲಿ ಇಲ್ಲದೆ ತನ್ನ ತೀರ್ಮಾನಕ್ಕೆ ಬರುತ್ತಾನೆ. ಅವನ ಮನೋರಚನೆಯಲ್ಲಿ ಇದೊಂದು ನಿಷ್ಠುರ ಭಾವವೆಂಬಂತೆ ಒಮ್ಮೊಮ್ಮೆ ಕಾಣುತ್ತದೆ.

---

೭ ಅವನೇ ಕೈಕೆಗೆ ಒಮ್ಮೆ 'ನಾಹಂ ಅರ್ಥಪರೋ ದೇವಿ ಲೋಕಮಾವಸ್ತುಂ ಉತ್ಸಹೇ / ವಿದ್ಧಿಮಾಂ ಋಷಿಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಂ' ಎಂದು ನುಡಿದಿದ್ದ. (ಧನದ ಆಸೆ, ಅರಕೆಗಳಲ್ಲಿ ನಾನು ಭೂಮಿಯಲ್ಲಿ ಬದುಕಲು ಇಷ್ಟವುಳ್ಳವನಲ್ಲ ; ಋಷಿಗಳಂಥವನು; ನನಗೆ ಕೇವಲ ಧರ್ಮದಲ್ಲಿ ವಿಶ್ವಾಸ.)

ಅವನ ಇಚ್ಛೆ ಅದನ್ನು ಹಿಡಿದು ಪುಷ್ಟಿಗೊಳಿಸುತ್ತದೆ. ಅವನ ಕ್ರಿಯಾಸಾಧನ ಶಕ್ತಿ ಅದನ್ನು ನಿರ್ವಹಿಸುತ್ತದೆ; ವಿಶ್ವಾಸವನ್ನು ಸ್ಥಿರಗೊಳಿಸುತ್ತದೆ. ಆದುದರಿಂದಲೇ ಅವನು 'ನಾನು ಕೊಲ್ಲುತ್ತೇನೆ' – 'ಹನಿಷ್ಯಾಮಿ'[೮] ಎಂದು ಅಷ್ಟು ಸುಲಭವಾಗಿ ಹೇಳಬಲ್ಲವನಾಗಿದ್ದದ್ದು. ಎದುರಾಳಿ ಒಬ್ಬ ವ್ಯಕ್ತಿಯಾಗಲಿ, ಸೇನಾಸಮೂಹಗಳೇ ಒಟ್ಟಿಗಾಗಲಿ ಇದ್ದರೂ ಈ ಒಂದು ಗುಣ ಅವನು ಅದನ್ನು ಮಾಡುತ್ತಾನೆನಿಸುತ್ತದೆ. ದೊಡ್ಡ ಸೈನ್ಯಗಳುಳ್ಳ ಸ್ವದುರ್ಗ ರಕ್ಷಿತ ರಾಜಧಾನಿಗಳಲ್ಲಿ ಇರುವವರೆಂಬುದೂ ಅವನ ಗಣನೆಗೆ ಬರುವುದಿಲ್ಲ.

ಹುಟ್ಟುಗುಣ, ಶಿಕ್ಷಣಗಳ ಜೊತೆಗೆ ವಿಶ್ವಾಮಿತ್ರನು ಅವನಿಗೆ ಕೊಟ್ಟಿದ್ದ ವಿದ್ಯಾಸಂಸ್ಕಾರ ಅವನಿಗೆ ಅನುಕೂಲ ತಂದಿರುತ್ತದೆ. ಸಣ್ಣ ವಯಸ್ಸಿನವನು – 'ಕಾಕಪಕ್ಷ ಧರಃ' – ಆಗಿದ್ದರೂ ವಿಶ್ವಾಮಿತ್ರನಿಗೆ ಅವನಲ್ಲಿ ನೆಚ್ಚಿಕೆ. ಸಮಸ್ತರಿಗೂ ಪೀಡೆಯಾಗಿ ಹಿಂಸಕಳಾಗಿ ಇದ್ದ ತಾಟಕಿಯನ್ನು ನಾಶ ಮಾಡಲು ಅವನನ್ನು ಋಷಿ ಆರಿಸುತ್ತಾನೆ. ಆ ಘಟನೆ ನಡೆದ ಮೇಲೆ ರಾಮನಿಗೆ ಅಸ್ತ್ರ ವಿದ್ಯೆಯ ಉಪದೇಶವಾಗುತ್ತದೆ. ಅಯೋಧ್ಯೆಯಿಂದ ಕಾಮಾಶ್ರಮದವರೆಗೂ ಅಲ್ಲಿಂದ ಮಿಥಿಲೆಗೆ ಹೋಗುವ ದಾರಿಯಲ್ಲಿಯೂ ಈ ಶಸ್ತ್ರಾಸ್ತ್ರ ಉಪದೇಶಗಳನ್ನು ಮಾಡುತ್ತಾನೆ. ಹಿಂದೆಯೂ ಈಗಲೂ ಪ್ರಚಲಿತಗೊಂಡ ಎಷ್ಟೋ ಕತೆಗಳಿಂದ ತನ್ನ ಬೋಧನೆಯನ್ನು ಬಲಪಡಿಸುತ್ತಾನೆ. ಧರ್ಮ ಸ್ವರೂಪ ಎಂಥದು, ಆಲೋಚನೆಯಲ್ಲಿ ಕಾರ್ಯಸಾಧನೆಯಲ್ಲಿ ಯಾವುದು ಬಲ, ಯಾವುದು ದೌರ್ಬಲ್ಯ ಎಂಬುದನ್ನು ತಿಳಿಸಿದನು. ಹೆಣ್ಣಾಗಲಿ ಗಂಡಾಗಲಿ, ದುಷ್ಟರಿಗೆ ಯಾವ ಕೃಪೆಯನ್ನೂ ತೋರಿಸತಕ್ಕದ್ದಲ್ಲವೆಂದೂ ಶಾಂತಿಗೂ ಮಾನವ ಹಿತಕ್ಕೂ ಭಂಗ ತರುವವರಾದರೆ ಅವರು ನಿಗ್ರಹಯೋಗ್ಯರೆಂದೂ ಬೋಧಿಸಿದನು.

ಸ್ವಂತ ಜೀವನದಲ್ಲಿ ತಾನು ಕಂಡಿದ್ದ: ತಪ್ಪು ಮಾಡುವುದೂ ಸಂದರ್ಭ ಒದಗಿ ಚಂಚಲವಾಗಿ ದಾರಿತಪ್ಪುವುದೂ ಮನುಷ್ಯನ ಬದುಕಿನಲ್ಲಿ ಸ್ವಭಾವತಃ ಬರುತ್ತದೆ. ಪ್ರಾಯಶ್ಚಿತ್ತ ಕರ್ಮವೂ ತಾಳ್ಮೆಯಿಂದ ದುಃಖ ಬಂದಾಗ ಅನುಭವಿಸುವುದೂ ಅಂಥ ಮನುಷ್ಯನನ್ನು ಉದ್ಧರಿಸುತ್ತವೆ ಎಂಬುದನ್ನು ತನ್ನ ಜೀವನದಲ್ಲಿಯೇ ವಿಶ್ವಾಮಿತ್ರನು ಬಲ್ಲನು. ಈ ಸಂಗತಿಯೇ ರಾಮನಿಗೆ ಅಹಲ್ಯೆಯ ಪರವಾಗಿ ಸಹಾನುಭೂತಿಯನ್ನು ಕಾಣಿಸಿದುದು. ಅಂತಹ ಕರುಣಾಳುತೆ ಮತ್ತು

---

೮ ನಮ್ಮ ಶತಮಾನದಲ್ಲಿ ಇಂಥ ಮಾತಿಗೆ ಏನು ಔಚಿತ್ಯ ಬರುತ್ತದೆಯೊ!

ಆಲೋಚನಾವಿವೇಕ ಮಾತ್ರ ಸಲಹಬಲ್ಲದು... ಕೋಪ ಕೆರಳಿದಾಗ ರಾಮನು ಪ್ರತಿಭಟಿಸಿ ನಿಲ್ಲುವನು; ಹಿಂಜರಿಯುವುದಿಲ್ಲ. ಕೋಪದಿಂದ ಕೆರಳಿದ ಅಂಥ ಸಂದರ್ಭವನ್ನು ಮೊದಲು ಸೂಚಿಸಿದ್ದು ಅವನು ಪರಶುರಾಮನನ್ನು ಸಂಧಿಸಿದಾಗ. ಆದರೆ ಅಷ್ಟು ಹೊತ್ತಿಗೆ ಶಸ್ತ್ರಾಸ್ತ್ರಗಳ ಶಿಕ್ಷಣ ಸಂಪೂರ್ಣವಾಗಿತ್ತೆಂದು ತಿಳಿಯುತ್ತದೆ. ಜನಕನ ಆಸ್ಥಾನದಲ್ಲಿ ರಾಮನು ಶಿವಧನುಸ್ಸನ್ನು ಮುರಿದಿದ್ದರೆ ಕ್ಷತ್ರಿಯರ ಅತಿನಿಷ್ಠುರ ಶತ್ರುವಾದ ಪರಶುರಾಮನ ಮೇಲೆ ಅವನ ವೈಷ್ಣವಾಸ್ತ್ರವನ್ನೇ ತಿರುಗಿಸಿ ಪ್ರಯೋಗಿಸುತ್ತೇನೆಂದು ಹೇಳಬೇಕಾಯಿತು. ಈ ಸಂದರ್ಭದ ತರುವಾಯ ರಾಮನು ಆಗ ಹೆಸರಾದ ಎಲ್ಲ ಆರ್ಯ ರಾಜರ ನಾಯಕನೂ ರಕ್ಷಕನೂ ಆಗಿ ಪ್ರತಿಷ್ಠಿತನಾದನೆನ್ನಬೇಕು. ಅವರೆಲ್ಲರಿಗೂ ಅವನನ್ನು ಕಂಡರೆ ಪ್ರೀತಿ ಉಂಟಾಯಿತು. ಅವನಿಗೆ ಗೌರವ ತೋರಿಸುವುದರಲ್ಲಿ ಋಷಿಗಳು ಸ್ಪರ್ಧೆಯನ್ನೇ ತೋರಿಸುತ್ತಾರೆ. ಅವರು ಅವನ ರಕ್ಷಣೆಗೆ ಆಶ್ರಮಸ್ಥಾನವಾಗಿದ್ದುಕೊಂಡು ಆಶ್ರಮಜೀವನದ ಎಲ್ಲ ಶತ್ರುಗಳಿಂದಲೂ – ಪಂಚವಟಿಯವರೆಗೂ – ರಕ್ಷಿಸಬೇಕೆಂದು ಕೇಳುವರಾದರು. ಅದು ಅವರ ಹಾರೈಕೆ. ಪ್ರತಿಯೊಬ್ಬರೂ ತಮ್ಮಲ್ಲಿಗೆ ಆತ ಖಂಡಿತವಾಗಿ ಬಂದೇ ಬರುತ್ತಾನೆಂದು ಹೆಚ್ಚು ಕಡಮೆ ನಿರೀಕ್ಷೆಯಿಂದಿರುತ್ತಾರೆ. ಅವನಿಗೆ ಬೇಕಾದ ನೆರವನ್ನೂ ಸಜ್ಜುಸಾಮಗ್ರಿಗಳನ್ನೂ ಒದಗಿಸುತ್ತಾರೆ. ಅವನನ್ನು ಕಂಡ ಈಗ ತಾವು ನೆಮ್ಮದಿಯಲ್ಲಿ ಶಾಂತಿಯಲ್ಲಿ ಬಾಳಬಹುದೆಂದು ವಿಶ್ವಾಸ ಉಳ್ಳವರಾಗುತ್ತಾರೆ.

ಅಯೋಧ್ಯೆಯ ಅರಮನೆಯಲ್ಲಿಯೇ ಅವನ ಪ್ರೇಮಲ ಸ್ವಭಾವವೂ ಕರ್ತವ್ಯಬುದ್ಧಿಯೂ ಅತಿಶಯವಾಗಿ ವ್ಯಕ್ತಗೊಳ್ಳುತ್ತವೆ. ತನ್ನ ತಾಯಲ್ಲಿ ಅವನಿಗೆ ಪ್ರೇಮವಿರುವುದು ಸಹಜ. ಕೈಕೆಯಲ್ಲಿ ಅವನಿಗೆ ಇದ್ದ ಪ್ರೀತಿ ಆಕೆಯಲ್ಲಿ ಭರತನಿಗೆ ಎಷ್ಟಿತ್ತೊ ಅದಕ್ಕೆ ಕಡಮೆಯಲ್ಲದ್ದು. ಕೌಸಲ್ಯೆಯಲ್ಲಿ ಅವನಿಗೆ ಎಷ್ಟು ಪ್ರೀತಿ, ಮಾನ್ಯತೆ, ವಿಶ್ವಾಸ ಇದ್ದಿತೊ ಅದೇ ವಿಶ್ವಾಸ ತಮ್ಮಲ್ಲಿಯೂ ಇದ್ದಿತೆಂದು ದಶರಥನ ಎಲ್ಲ ಹೆಣ್ಣುಗಳೂ ಹೇಳುತ್ತಾರೆ. ತಂದೆಗಂತೂ ಅವನ ಮೇಲಿನ ಮೋಹ ಅತೀವವಾದ್ದು. ತನ್ನ ಪ್ರಾಣದಷ್ಟೇ ಪ್ರಿಯವಾಗಿದ್ದ ಲಕ್ಷ್ಮಣನಲ್ಲಿ ರಾಮನಿಗಿದ್ದ ಪ್ರೀತಿ ಅತ್ಯಸಾಮಾನ್ಯವಾದ್ದು. ಇಬ್ಬರ ಜೀವಗಳು ಸುಮಾರು ಒಂದೇ ಎಂಬಂತಿದ್ದವು. 'ಬಹಿಶ್ಚರಾಃ ಪ್ರಾಣಾಃ' – ಅವನದೇ ಜೀವ; ಆದರೆ ಹೊರಗೆ ಬೇರೆಯಾಗಿ ಸಂಚರಿಸುತ್ತಿದೆ ಎಂದು ಕವಿ ಕರೆಯುತ್ತಾನೆ. ಲಕ್ಷ್ಮಣನಿಲ್ಲದೆ ತಾನು ಬದುಕಲಾರೆನೆಂದೇ ರಾಮನಿಗೆ. ಅವನ ಜೊತೆಯಲ್ಲಿದ್ದರೆ ತಾನು ಸುರಕ್ಷಿತವಾಗಿದ್ದೇನೆ, ಸುಖವಾಗಿದ್ದೇನೆ ಎಂದು ಕೊಳ್ಳುತ್ತಿದ್ದ. ಒಂದು ಒಟ್ಟು

ಸೈನ್ಯವೊ ಒಂದು ಇಡಿ ರಾಜ್ಯವೊ ಅವನ ಹಿಂದೆ ಇದ್ದರೆ ಹೇಗೊ ಹಾಗೆ.[೯] ಲಕ್ಷ್ಮಣನನ್ನು ಹಿಡಿತದಲ್ಲಿ ಹದ್ದಿನಲ್ಲಿ ಇಡಬಲ್ಲವನು ರಾಮನೊಬ್ಬನೇ. ತಂದೆ, ತಾಯಿ, ವಸಿಷ್ಠಋಷಿಗಳು–ಯಾರಿಗೂ ವಿರುದ್ಧವಾಗಿ ಅವನ ಮೇಲೆ ಅಧಿಕಾರವಿಲ್ಲ; ರಾಮನ ಮನಸ್ಸು, ಬುದ್ಧಿರ ಮಾತ್ರ ಅಧಿಕಾರಿ. ಸೀತೆಯ ಎಚ್ಚರಿಕೆಗಳನ್ನೂ ಬೇಡಿಕೆಗಳನ್ನೂ ಸಹಿಸುವಂತೆ ಮಾಡಿದ್ದು ಹಿನ್ನೆಲೆಯಲ್ಲಿದ್ದ ರಾಮನ ಪ್ರಭಾವ. ವಿಭೀಷಣನನ್ನು ತನ್ನ ಪಾಳೆಯದ ಸದಸ್ಯನಾಗಿ ಸೇರಿಸಿಕೊಳ್ಳುವ ಸಂಬಂಧದಲ್ಲಿ ಇತರ ಎಲ್ಲ ಮಿತ್ರವರ್ಗವನ್ನು ಮೀರಿ ನಿಂತುದು ರಾಮನ ವರ್ಚಸ್ಸು. ಕ್ಷಣಕಾಲ – ಅಷ್ಟು ಮಾತ್ರ – ಮನಸ್ಸಿನ ಬೇಸರವೊ ಕುಗ್ಗೊ ಉಂಟಾದಾಗ ಮಾತ್ರ ಸ್ವಾಸ್ಥ್ಯ ಕಳೆದುಕೊಂಡಂತೆ ಕಾಣುತ್ತಾನೆ. ಒಮ್ಮೊಮ್ಮೆ ಅಧೀರತೆಯ ಮತ್ತು ಗೋಳುಕರೆಯ ಭಾವಗಳು ಸಹಜವಾಗಿ ಬರುವುವು – ಎಷ್ಟೇ ಆದರೂ ಅವನೂ ಮನುಷ್ಯನಾದ್ದರಿಂದ. ಅಂಥ ಸಂದರ್ಭಗಳಲ್ಲಿ ಅವನ ಚೇತನ ತುಂಬಾ ಕೋಮಲ; ಕರುಣಾಳು. ಇನ್ನೊಬ್ಬನಿಗೆ ಕೇಡುಂಟು ಮಾಡಬಲ್ಲ ಅಥವಾ ತನ್ನ ಯೋಗ್ಯತೆಗೆ ಭಂಗ ತರುವಂತಹ ಯಾವ ಮಾತಾದರೂ ಎಚ್ಚರಿಗೆ ತಪ್ಪಿ ತನ್ನಿಂದ ಒಂದು ಹೊರಡರೆ ಆ ಕ್ಷಣದಲ್ಲಿ ತಿಳಿವು ಸುಳಿದು ಹಾಯುತ್ತಿತ್ತು. ಬೇಗ ಸಂಯಮವನ್ನು ತಂದುಕೊಳ್ಳುತ್ತಾನೆ. ಒಡನೆಯೇ ಮುನ್ನೆಚ್ಚರಿಕೆ ತೆಗೆದುಕೊಂಡು ತನ್ನ ನುಡಿ ಇನ್ನೊಬ್ಬನ ನಡತೆಯನ್ನು ತಪ್ಪಾಗಿ ನಡಸದಂತೆ ಮಾಡಲು ಯತ್ನಿಸುತ್ತಾನೆ. ಉದಾರವಲ್ಲದ ಒಂದು ಯೋಚನೆಯ ನೆಳಲು ಅವನಿಗೆ ಕೈಕಯಿಯ ವಕ್ರವಾದ ದುಷ್ಟಮಾರ್ಗವನ್ನು ನೆನಸಿಕೊಂಡಾಗ ಬರುವುದಾದರೂ ಕೂಡಲೆ ತನ್ನನ್ನು ಹೇಗೆ ತಿದ್ದಿಕೊಳ್ಳುತ್ತಾನೆ ಎಂಬ ಸಂದರ್ಭದಲ್ಲಿ ಇದನ್ನು ಕಾಣಬಹುದು. ತನ್ನ ಸವತಿಯರನ್ನು ನಾಶಮಾಡುವುದಕ್ಕೂ ಅವಳು ಯತ್ನಿಸಬಹುದು ಎನ್ನುವವರೆಗೂ ಅದು ಹೋಗುತ್ತದೆ. ಸೀತೆಯನ್ನು ಹುಡುಕಿ ತರುವ ಸಂದರ್ಭದಲ್ಲಿ ನೆರವಾಗುತ್ತೇನೆಂದು ಸುಗ್ರೀವನು ತಾನು ಕೊಟ್ಟ ಮಾತನ್ನೂ ಒಪ್ಪಿಕೊಂಡ

---

೯ ಲಕ್ಷ್ಮಣನಲ್ಲಿ ಕಂಡು ಬರುವ ದುರ್ಬಲತೆಯೆಲ್ಲ ರಾಮನಿಗಾಗಿ; ಅಣ್ಣನಲ್ಲಿದ್ದ ಪ್ರೀತಿಯೂ ಭಕ್ತಿಯೂ ಅದಕ್ಕೆ ಕಾರಣ. ಬೇಗ ಆ ದೌರ್ಬಲ್ಯಗಳು ತೊಲಗುವುವು. ಇತ್ತ, ರಾಮನೇ ರೊಚ್ಚಿಗೆದ್ದಾಗಲೊ ಅಥವಾ ಸ್ವಾಸ್ಥ್ಯ ತಪ್ಪಿದಂತೆ ನಡೆದುಕೊಂಡಾಗಲೊ ಅವನ ನಿಜಧಾತುಗುಣವನ್ನು ಅವನಿಗೆ ತಂದುಕೊಡಬಲ್ಲವನು ತಮ್ಮ ಲಕ್ಷ್ಮಣನೊಬ್ಬನೇ. 'ಪುರಾಭೂತ್ವಾ ಮೃದುರ್ದಾಂತಃ ಸರ್ವಭೂತ ಹಿತೇ ರತಃ । ನಕ್ರೋಧ ವಶಮಾಪನ್ನಃ ಪ್ರಕೃತಿಂ ಹಾತುಮರ್ಹಸಿ' (ನೀನು ಮೃದುವಾಗಿ ಉದಾರನಾಗಿ ಇರುತ್ತಿದ್ದವನು. ಎಲ್ಲ ಪ್ರಾಣಿಗಳಿಗೂ ಹಿತವಾದ್ದನ್ನೇ ಮಾಡುವುದರಲ್ಲಿ ತೊಡಗಿದವನು. ಕ್ರೋಧಕ್ಕೆ ಈಡಾಗಬಾರದು. ನಿನ್ನ ಸ್ವಭಾವಕ್ಕೆ ತಕ್ಕಂತೆ ವಡೆದುಕೊಳ್ಳಬೇಕು.)

ಕಾರ್ಯವನ್ನೂ ನಡಸದೆ ಮರೆತು ತಡೆದಾಗಲೂ, ವಿಶೇಷವಾಗಿ ದೊಡ್ಡ ಗುಂಪು ಕಟ್ಟಿಕೊಂಡು ಭರತನು ಬರುತ್ತಿದ್ದಾನೆ ಎಂದು ಲಕ್ಷ್ಮಣನ ಮನಸ್ಸಿನಲ್ಲಿ ಕಳವಳವೆದ್ದು ನಿಜವಾಗಿ ದುರುದ್ದೇಶದಿಂದಲೇ ಬರುತ್ತಿರಬೇಕೆಂದು ಯೋಚಿಸುತ್ತ ಅವನನ್ನು ನಾಶಮಾಡಲು ರಾಮನ ಅಪ್ಪಣೆ ಬೇಡಿದಾಗಲೂ ಇಂಥವೇ ಸನ್ನಿವೇಶ ಕಾಣಿಸಿಕೊಳ್ಳುತ್ತದೆ. ರಾಮನ ಮಾನವಹೃದಯ ಪರಿಜ್ಞಾನವನೂ ಧಾರ್ಮಿಕ ತಕ್ಕತನಗಳನ್ನೂ ಸ್ಥಾಪಿಸಲು ನೆನಪಿನಲ್ಲಿಟ್ಟುಕೊಳ್ಳಬೇಕಾದ ಪ್ರಸಂಗಗಳು ಇವು. ಸೀತೆಗೂ ಅವನು ಕರುಣಾಳುವೇ. ಆಕೆಯ ಶೀಲ, ಸ್ವಭಾವ ಅವನಿಗೆ ಗೊತ್ತು : 'ನ ವಿಹಾತುಂ ಮಯಾ ಶಕ್ಯಾ ಕೀರ್ತಿರಾತ್ಮವತಾ ಯಥಾ.' (ವೀರನಾದವನು ತನ್ನ ಮಾನ ಕೀರ್ತಿ ಉಳಿಯದಂತೆ ನಡೆದುಕೊಳ್ಳುವುದು ಹೇಗೆ ಅಶಕ್ಯವೊ ಹಾಗೆ ನೀನಿಲ್ಲದೆ ಇರಲಾರೆ). ಒಂದು ಸಲ 'ನೀನು ಶೈಲೂಷ, ಒಬ್ಬ ನರ್ತಕ; ಪುರುಷ ವೇಷದಲ್ಲಿರುವ ಹೆಣ್ಣು' (ಪುರುಷ ವಿಗ್ರಹಃ') ಎಂಬವರೆಗೂ ಸೀತೆ ಅವನನ್ನು ಕರೆಯಹೋಗುತ್ತಾಳೆ, – ತನ್ನೊಡನೆ ಅವಳನ್ನು ಕರೆದುಕೊಂಡು ಹೋಗುವುದಿಲ್ಲವೆಂದಾಗ. ಅವಳು ಎಷ್ಟು ನಿರಾಶಾಗ್ರಸ್ತಳಾಗುತ್ತಾಳೆ ಎಂಬುದು ಇದರಿಂದ ಅವನಿಗೆ ಅರ್ಥವಾಗುತ್ತದೆ.

ತನಗೇ ಕೋಪ ಬಂದಾಗ ಚಂಡಿಸುವಂತೆ ರಾಮನು ಮಾತಾಡಬಲ್ಲ. ಅತಿಗೆ ಹೋದಾಗ ಪ್ರಾಯೋಪವೇಶ ಮಾಡುತ್ತೇನೆನ್ನುತ್ತಾನೆ.[೧೦] ಮುಂದಿಳಿವಿಗಾಗಿ ಲಂಕೆಯನ್ನು ಶೋಧಿಸಲು ಸುಗ್ರೀವನು ಪ್ರಯತ್ನಿಸಿದಾಗ ರಾವಣನನ್ನು ಕಂಡಕೂಡಲೆ ಅವನ ಮೇಲೆ ಬಿದ್ದು ಅವನ ಕಿರೀಟವನ್ನು ಹಾರಿಸುತ್ತಾನೆ. ವಾನರಪಾಳೆಯಕ್ಕೆ ಅವನು ಹಿಂತಿರುಗಿದಾಗ ಇದು ಅವಿವೇಕವೆಂದೂ ಸೈನ್ಯದ ನಾಯಕನಿಗೆ ಇಂತಹ ಆಲೋಚನಾಶೂನ್ಯ ನಡತೆ ಒಪ್ಪದೆಂದೂ ಕುಕ್ಕಿ ನುಡೆಯುತ್ತಾನೆ. ಒಂದು ದಿನದ ಬಲವಾದ ಯುದ್ಧ ನಡೆದು ಸಂಜೆಯ ಹೊತ್ತಿಗೆ ರಾವಣನು ಆಯಾಸಗೊಂಡಂತೆಯೂ ಅವನ ರಥದ ಕುದುರೆಗಳು

---

೧೦ ರಾಮಾಯಣದಲ್ಲಿ ಪ್ರಾಯೋಪವೇಶದ ೩–೪ ಪ್ರಸಂಗಗಳು ಕಾಣಿಸಿ ಕಡೆಗೆ ವ್ಯರ್ಥವೆಂದು ಅವನ್ನು ಕೈ ಬಿಡುತ್ತಾರೆ, ಕ್ಷತ್ರಿಯ ನಡತೆಯಲ್ಲಿ ಇದು ತಪ್ಪು ನಡತೆ ಎಂಬಂತೆ. ಚಿತ್ರಕೂಟದಲ್ಲಿ ಭರತನಿಗೆ ಬೇಡವೆಂದು ಅವನು ಹೇಳಿದ್ದು ಒಂದು. ತಾನೇ ತನ್ನ ಜೀವನವನ್ನು ಬಿಡುತ್ತೇನೆಂದುಕೊಂಡ ಸಂದರ್ಭಗಳಲ್ಲಿ ತಕ್ಕ ನಡತೆಯಲ್ಲ, ಹೊಣೆಗಾರಿಕೆಯ ನಡತೆಯನ್ನ ಎಂಬ ಭಾವ ಆ ಸನ್ನಿವೇಶದಿಂದ ಅವನನ್ನು ತೇರಿಸುತ್ತದೆ. ತಾನು ಪ್ರಾಣ ಕಳೆದುಕೊಂಡರೆ ತಂದೆಗೂ ಕೈಕೆಗೂ ಕೊಟ್ಟ ಮಾತನ್ನು ನಡಸಲಾರದಾಗುತ್ತದೆ ಎನ್ನಿಸುತ್ತದೆ. ಸ್ವರ್ಗದಲ್ಲಿರುವ ತನ್ನ ತಂದೆಗೆ ವಾನರ ಸ್ನೇಹಿತರೂ ವಿಭೀಷಣನೂ ಅವನನ್ನು ಸಮಾಧಾನಕ್ಕೂ ಕ್ರಿಯಾಪ್ರವೃತ್ತಿಗೂ ಪುನಃ ತರಬೇಕಾಯಿತು. ಲಕ್ಷ್ಮಣನು ನಿಜವಾಗಿ ಸತ್ತಿಲ್ಲ ಎಂದು ಅವರು ತಿಳಿಸುತ್ತಾರೆ. ಸೀತೆ ಮತ್ತು ಹನುಮಂತನ ಒಂದೆರಡು ಪ್ರಸಂಗಗಳು ಪುನಃ ಅಂಥವೇ.

ನಿರ್ಬಲವಾಗಿರುವಂತೆಯೂ ಕಂಡಾಗ ಆ ದಿನ ಹಿಂದಕ್ಕೆ ಹೋಗಿ ವಿಶ್ರಮಿಸಿಕೊಂಡು ಹೊಸ ಹುರುಪಿನಿಂದ ಮಾರನೆಯ ದಿನ ಬಂದು ಯುದ್ಧ ಮಾಡಬಹುದೆಂದು ಹೇಳುವ ಔದಾರ್ಯ ದೊಡ್ಡ ಆಟಗಾರಿಕೆಯ ಲಕ್ಷಣ. ಇಂಥ ನಡತೆ ಅತ್ಯಸಾಧಾರಣವಾದ್ದು. ತನ್ನ ಅತಿದುಷ್ಟನದ ಶತ್ರುವಿನ ಧೈರ್ಯಸಾಹಸವನ್ನು ರಾಮನು ಮೆಚ್ಚಿಕೊಳ್ಳುತ್ತಾನೆ. ಅಣ್ಣನ ಮೃತಿ ಸಂಸ್ಕಾರಗಳನ್ನು ಮಾಡುವುದರಲ್ಲಿ ವೀರನಾದ ಸೋದರನಿಗೆ ಅಂತಹಕ್ರಿಯೆ ಕರ್ತವ್ಯವೆಂದೂ ವಿಭೀಷಣನಿಗೆ ತಿಳಿಯಹೇಳುತ್ತಾನೆ. ಅವನು ನೆರವೇರಿಸದಿದ್ದರೆ ತಾನು ನೆರವೇರಿಸುತ್ತೇನೆನ್ನುತ್ತಾನೆ.

ಒಂದೇ ಒಂದು ಸಂದರ್ಭದಲ್ಲಿ ಅವನ ನಡತೆ ವಿಚಿತ್ರವಾಗುತ್ತದೆ: ಅದನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳುವುದು ಕಷ್ಟ: ಸೀತೆಯ ಸಂಬಂಧದಲ್ಲಿ ಅವನ ನಡತೆ. ಶತ್ರುವನ್ನು ನಾಶಮಾಡಿ ತನ್ನ ಹೆಸರನ್ನೂ ಶೀಲವನ್ನೂ ಪುನಃ ಸ್ಥಾಪಿಸಬೇಕಾಗಿದ್ದ ಅವನ ಕಾರ್ಯವನ್ನು ಮುಗಿಸಿದ್ದಾನೆ. ತನಗೆ ವಿರುದ್ಧವಾಗಿ ದೈವ ಮಾಡಿದುದನ್ನು ತನ್ನ ಪೌರುಷದಿಂದ ದಮನ ಮಾಡಿದ್ದೇನೆಂದವನು ಹಿಂದೆ ಬಹುವಾಗಿ ದೈವದ ಅಥವಾ ವಿಧಿವಾದಿಯಾಗಿದ್ದ. ಅವಳು ಈಗ ಇಚ್ಛೆ ಬಂದುದನ್ನು ಮಾಡಲಿ, ಸ್ವತಂತ್ರಳು; ಎಲ್ಲಿಗೆ ಬೇಕಾದರೆ ಅಲ್ಲಿಗೆ ಹೋಗಲಿ; ಯಾರೊಡನೆಯಾದರೂ ಬಾಳಲಿ, ತನಗೆ ಅವಳ ಪ್ರಯೋಜನವಿಲ್ಲ ಎನ್ನುತ್ತಾನೆ. ಹಿಂದೆ ಅವಳಿಗಾಗಿ ಅತ್ತು ಗೋಳಾಡಿ ಅತೀವವಾಗಿ ಶೋಕ ಪಟ್ಟಿದ್ದ. ಅಂಥವನ ನಡತೆಯಲ್ಲಿ ಇದು ನಾವು ನಿರೀಕ್ಷಿಸದಿದ್ದುದು. ಅವಳ ಜೊತೆಯ ನೆನಪುಗಳನ್ನು ನೆನಪು ಮಾಡಿಕೊಳ್ಳುತ್ತಾನೆ. ದುಷ್ಟರಾಕ್ಷಸನೊಬ್ಬನ ಕೈಯಲ್ಲಿ ಸೆರೆಯಾಳಾಗಿ ಹೇಗಿದ್ದಾಳೆಂದು ವ್ಯಥೆ ಪಡುತ್ತಿದ್ದವನು. ಅವಳ ಪರವಾಗಿ ಅವನ ಭಾವನೆ ಎಷ್ಟು ತೀವ್ರವಾದುದು ! – ಎಂಬುದನ್ನು ಕೆಲವೇ ದಿನಗಳ ಹಿಂದೆ ಕಾವ್ಯದಲ್ಲಿ ಕಂಡಿರುತ್ತೇವೆ. ಕೇವಲ ವ್ಯಕ್ತಿಶವಾದ ಅಥವಾ ದಾಂಪತ್ಯಕ್ಕೆ ಸಂಬಂಧಿಸಿದ ಭಾವಕ್ಕಿಂತ ಅಧಿಕವಾದುದು ಯಾವುದೊ ಅವನನ್ನು ಆಗ ಅದು ಮುತ್ತಿದ್ದಿರಬೇಕು. ನ್ಯಾಯಶೀಲವಾಗಿಯೂ ಧರ್ಮದ ಮೇಲ್ಪಂಕ್ತಿಯಾಗಿಯೂ ತನ್ನನ್ನು ಸ್ಥಾಪಿಸಿಕೊಳ್ಳಬೇಕು. ಸೀತೆ ತನ್ನ ಪರಿಶುದ್ಧಿಯನ್ನೂ ನಿರಾಳತೆಯನ್ನೂ ಪ್ರಮಾಣೀಕರಿಸಿಕೊಳ್ಳಲು ಒಂದು ಅವಕಾಶ ಕೊಡಬೇಕೆಂದು ಬಯಸುತ್ತಾನೆ.[೧೧] ಅನೇಕ ಲೇಖಕರು ಅವನ ಶೀಲವನ್ನು ಆವರಿಸಿದ್ದ ಒಂದು

---

೧೧ ಮೂಲಭೂತವಾಗಿ ಗಂಡಿನಲ್ಲಿ ಅನಾದಿಕಾಲದಿಂದಲೂ ಇದ್ದಿರುವ ಪ್ರಾಕೃತಭಾವ ಇಲ್ಲಿ ಉಕ್ಕಿಬಂದಂತೆ ಕಾಣುತ್ತದೆ. ಲೋಕದ ಮತ್ತು ತನ್ನ–ಇಬ್ಬರ ದೃಷ್ಟಿಯಲ್ಲಿಯೂ ತನ್ನ ನಡತೆಯನ್ನೂ ಅವಳ ನಡತೆಯನ್ನೂ ಪ್ರಮಾಣೀಕರಿಸುವ ನಡತೆಯ ಒಂದು ಕಠಿಣ ವಿಧಾನವಾಗುತ್ತದೆ ಆತನ ನಡತೆ.

ಪ್ರಧಾನ ಲಕ್ಷಣದಿಂದ ಅವನನ್ನು 'ನಿಷ್ಠುರ' ಅಥವಾ 'ಕಠೋರಯಶಃ' ಎಂದು ಕರೆದಿದ್ದಾರೆ. ತನಗೂ ಧರ್ಮ ಕಲ್ಪನೆಗೂ ರಾಜನ ನಡವಳಿಕೆಯಲ್ಲಿ ಒಳ್ಳೆಯ ಹೆಸರಿಗೂ ನಡುವೆ ಏನಾದರೂ ಬಂದರೆ ('ತಸ್ಯನಾಮ ಮಹದ್‌ಯಶಃ') ಅವುಗಳ ಕಡೆಗೇ ಅವನ ಪಕ್ಷಪಾತವಿತ್ತು. ಆ ಆಕಾಂಕ್ಷೆ ಪರಮೋಚ್ಚವಾಗಿತ್ತು.[೧೨] ಬಹುತರ ಅಂತಹ ಆದರ್ಶಶೀಲತೆಯ ನಿದರ್ಶನವಾಗಿ ರಾಮನನ್ನು ಪ್ರಕಾಶಗೊಳಿಸಬೇಕೆಂಬುದೇ ವಾಲ್ಮೀಕಿಯ ಬಯಕೆಯಿದ್ದೀತು. ಅಂತಹ ಸಂದರ್ಭಗಳಲ್ಲಿ ಯಾವ ಕರುಣೆಯೂ ಇನ್ನಾವ ಸಂಗತಿಯೂ ಅವನನ್ನು ವಿಚಲಗೊಳಿಸುತ್ತಿರಲಿಲ್ಲ. ಕರ್ತವ್ಯದ ಕರೆ ಸ್ಪಷ್ಟವಾಗುತ್ತಿತ್ತು; ತೀರ್ಮಾನ ಸ್ಥಿರವಾಗುತ್ತಿತ್ತು; ಒಂದು ಉದ್ದಿಷ್ಟ ಕಾರ್ಯ ಸಾಧನೆಗಾಗಿ ನಿಶ್ಚಲ ನಿಶ್ಚಯವಾಗುತ್ತಿತ್ತು. ಸೀತೆಯ ಶುಚಿ ಅಗ್ನಿ ಪರೀಕ್ಷೆಯಲ್ಲಿ ಪ್ರಮಾಣಗೊಂಡಾಗ – ಆ ದಿವ್ಯದಿಂದ ಅವಳು ಕೆಡದೆ ಉತ್ತೀರ್ಣಳಾಗುತ್ತಾಳೆಂದು ಅವನಿಗೆ ತಿಳಿದಿತ್ತು – ಇದಾವುದೂ ನಡೆದಿರಲಿಲ್ಲವೆಂಬಂತೆ ತನ್ನ ಪ್ರೀತಿಗೆ ಅವಳನ್ನು ಪುನಃ ಸ್ವೀಕರಿಸಿದ. ಆ ಸಮಯದಲ್ಲಿ ಸೀತೆ ಆಂತರ್ಯದಲ್ಲಿ ಹೇಗೆ ಭಾವಿಸಿಕೊಂಡಳೊ–ಅದನ್ನು ಒಂದು ವಾಕ್ಯದಲ್ಲಾದರೂ ಕವಿ ಸಾಧಾರಣ ಮರ್ತ್ಯರಿಗೆ ತಿಳಿಸಿದ್ದರೆ ಮೇಲಾಗುತ್ತಿತ್ತೆನ್ನಿಸುತ್ತದೆ. ಅಂತಹ ಸಂದರ್ಭದಲ್ಲಿ ತನ್ನ ಕರ್ತವ್ಯ ಅದು ಎಂಬುದು ಆಕೆಗೆ ತಿಳಿದಿತ್ತೆಂಬಂತೆ ಅವಳು ಸಮಾಧಾನ ತಂದುಕೊಂಡಳಾಗಿದ್ದೀತು. ಆಕೆ ಅವನ ಸಹಧರ್ಮಚಾರಿಣಿಯಲ್ಲವೆ?

ಉತ್ತರ ಕಾಂಡದಲ್ಲಿ ತನ್ನನ್ನು ಕಾಡಿಗೆ ಕಳಿಸುತ್ತಾನೆಂಬ ರಾಮನ ತೀರ್ಮಾನ ಅವಳಿಗೆ ಅರ್ಥವಾಗುತ್ತದೆಂದು ಹೇಳಿದೆ. ಈ ಗುಣ ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತದೆ. ಆಶ್ಚರ್ಯಕರವಾದ ಒಂದು ಸಂಗತಿ ಎಂದರೆ ಆ ಗುಂಪಿನಲ್ಲಿದ್ದ ಯಾವೊಬ್ಬರೇ ಆಗಲಿ,–ವಾನರರ ನಾಯಕರು, ವಿಭೀಷಣ–ಸನ್ನಿವೇಶ ರೂಪಗೊಳ್ಳುತ್ತಿದ್ದ ಹಾಗೆ ಯಾವೊಬ್ಬರೇ ಆಗಲೀ,–ವಾನರರ ನಾಯಕರು, ವಿಭೀಷಣ–ಸನ್ನಿವೇಶ ರೂಪಗೊಳ್ಳುತ್ತಿದ್ದ ಹಾಗೆ ರಾಮನ ತೀರ್ಮಾನವನ್ನು ಕುರಿತು ಒಂದು ಮಾತನ್ನಾಗಲಿ ನುಡಿಯದಿದ್ದದ್ದು. ಸನ್ನಿವೇಶದ ತೀಕ್ಷ್ಣತೆ ಅವರಿಗೆ ಪೂರ್ತಿ ಬಾಯಿ ಕಟ್ಟಿತ್ತು ; ಅಥವಾ ರಾಮನ ವ್ಯಕ್ತಿತ್ವದ ಪ್ರಭಾವ ಅತಿಶಯವಾಗಿ ಘಟನೆಯನ್ನು ಒಪ್ಪಿಕೊಳ್ಳುವಂತೆ

---

೧೨ ದುಷ್ಯಂತನನ್ನು ನಡೆಸುತ್ತಿದ್ದ ರಾಜಧರ್ಮದ ತತ್ವವೂ ಇದೇ ಇದ್ದಂತೆ ಕಾಣುತ್ತದೆ. ಶಕುಂತಲೆಯ ಸ್ನೇಹಿತರಿಗೆ ಮೊದಲು, v ಮತ್ತು vi ಅಂಕಗಳಲ್ಲಿ ಆ ನಾಟಕದಲ್ಲಿ ನುಡಿಯುವ ಮಾತುಗಳು ಇಂಥವು. ಸ್ನೇಹಿತರಿಗೆ ಅವನು ಆಡಿದ್ದ ಮಾತಿನಲ್ಲಿಯೂ ಮೊದಲ ಸ್ಥಾನ ಧರೆಗೆ, – ತನ್ನ ರಾಜಧರ್ಮಕ್ಕೆ.

ಮಾಡಿತ್ತು. ಉತ್ತರ ಕಾಂಡದಲ್ಲಿ ವರ್ಣಿಸಿರುವ ಸಂದರ್ಭ ಲಂಕೆಯಲ್ಲಿ ನಡೆದಷ್ಟು ಪ್ರಭಾವಶಾಲಿಯಲ್ಲ; ಆದರೂ ಅದು ಸಾಧಿಸಿದ ಮುಕ್ತಾಯ ಹೆಚ್ಚು ನಿರ್ಣಾಯಕವಾಯಿತು. 'ಅಯೋಧ್ಯೆಗೆ ಆಕೆಯನ್ನು ಕರೆದು ತನ್ನಿ, ತಾನು ನಿರ್ದೋಷಿ, ಶುಚಿ ಎಂದು ಯಜ್ಞಶಾಲೆಯಲ್ಲಿ ಆಕೆ ಪ್ರಕಟವಾಗಿ ನುಡಿಯಲಿ' ಎಂದು ವಾಲ್ಮೀಕಿಗೆ ಹೇಳಿಸಿದ್ದು ಆ ಸಂದರ್ಭ.

ಮೊದಲಿಂದಲು ಅಷ್ಟೇ: ಎಷ್ಟೋ ಪ್ರೀತಿಯಿದ್ದಿತು ಆಕೆಯಲ್ಲಿ, ಆದರೂ ಆಕೆ ಇಲ್ಲದಿದ್ದರೂ ನಡೆಯುತ್ತದೆ ಎಂದು ಆತನು ಹೇಳುವ ಸಂದರ್ಭಗಳು ಹಲವು ಕಾಣುತ್ತವೆ: ಕೈಕೆಯ ಸಮಕ್ಷಮದಲ್ಲಿ ಆತನು ಮಾತನಾಡಿದಾಗ, ಋಷಿಗಳಿಗೆ ಸಹಾಯಮಾಡುತ್ತೇನೆಂಬ ತನ್ನ ತೀರ್ಮಾನವನ್ನು ಸೀತೆಗೆ ಹೇಳಿದಾಗ, ಕೈ ಬಿಟ್ಟು ಆಕೆ ಹೋಗಲಿ, ಲಕ್ಷ್ಮಣನ ಅಥವಾ ತನ್ನ ಜೀವಕ್ಕೆ ಕೇಡುಬರಲಿ ತಾನು ಲೆಕ್ಕಿಸುವುದಿಲ್ಲ ಎಂದಾಗ. ಲಕ್ಷ್ಮಣನ ಪರವಾಗಿ ರಾಮನ ಪಕ್ಷಪಾತವನ್ನೂ ಮನಸ್ಸನ್ನೂ ಸೀತೆ ತಿಳಿಸುವಾಗ

ಮೃದುರ್ ನಿತ್ಯಂ ಶುಚಿರ್ದಕ್ಷಃ ಪ್ರಿಯೋ ರಾಮಸ್ಯ ಲಕ್ಷ್ಮಣಃ

ನನಗಿಂತಲೂ ಹೆಚ್ಚಾಗಿ ಲಕ್ಷ್ಮಣನು ರಾಮನಿಗೆ ಹೆಚ್ಚು ಪ್ರಿಯ ಎನ್ನುತ್ತಾಳೆ. 'ಮತ್ತಃ ಪ್ರಿಯತರೋ ನಿತ್ಯಂ ಭ್ರಾತಾ ರಾಮಸ್ಯ'. ಆದರೂ 'ಮಾತೃವತ್ ಮಾಂ ಸಮಾಚರಂ' – ತನ್ನ ತಾಯಿಯಂತೆ ಲಕ್ಷ್ಮಣನು ನನ್ನಲ್ಲಿ ನಡೆದುಕೊಳ್ಳುತ್ತಾನೆ ಎಂದಳು. ಲಂಕೆಯ ಯುದ್ಧಭೂಮಿಯಲ್ಲಿ ಲಕ್ಷ್ಮಣನು ಸತ್ತಂತೆ ಬಿದ್ದಾಗ ರಾಮನು ಈ ಮಾತುಗಳನ್ನು ಹೇಳಿದ:

ಶಕ್ಯಾ ಸೀತಾಸಮಾ ನಾರೀ ಮರ್ತ್ಯ ಲೋಕೇ ವಿಚಿನ್ವತಾ
ನ ಲಕ್ಷ್ಮಣಸಮೋ ಭ್ರಾತಾ ಸಚಿವಃ ಸಾಂಪರಾಯಿಕಃ

(ಹುಡುಕಿ ಹೋದರೆ ಲೋಕದ ಮೇಲೆ ಸೀತೆಯಂತಹ ಹೆಂಡಿರನ್ನು ಪಡೆಯಬಹುದೇನೊ; ಲಕ್ಷ್ಮಣನಂತಹ ತಮ್ಮನು ಹೇಗೆ ದೊರಕಿಯಾನು?)

ಇಂಥ ಮಾತುಗಳನ್ನು ಶೀಲಪ್ರಕಾಶನದ ಒಂದು ನುಡಿಯೆನ್ನಬಹುದು ಅಥವಾ ಎಷ್ಟು ಶ್ರೇಷ್ಠಳಾದ ಹೆಣ್ಣಾದರೂ ಹೆಣ್ಣನ್ನು ಕುರಿತು ಆ ಕಾಲದ ಜನರಿಗೆ ಇದ್ದ ಸಾಮಾನ್ಯ ಅಭಿಪ್ರಾಯ ಇದು ಎನ್ನಬಹುದು.

ಕೊಟ್ಟ ಮಾತನ್ನು ನಡಸುವಲ್ಲಿ ತಾನು ಯಾವ ಕಾರ್ಪಣ್ಯವಾಗಲಿ ಸಂದೇಹ ಸಮಯದಲ್ಲಿ ತನ್ನ ಪರವಾಗಿ ಅರ್ಥಮಾಡುವುದಾಗಲಿ ಅವನ ಸ್ವಭಾವವಲ್ಲ. ಗುಹನ ಆತಿಥ್ಯವನ್ನು ಒಪ್ಪುವುದಿಲ್ಲ. ಅಯೋಧ್ಯೆಯ ಜನ ತನ್ನ ಏಕಾಂತವನ್ನು

ಕೆಡಿಸದಿರುವಂತೆ ಅಯೋಧ್ಯೆಯ ಗಡಿಯಿಂದ ಎಷ್ಟು ದೂರವಾದರೆ ಅಷ್ಟು ದೂರ ಸಾಗಬೇಕೆಂದು ನಿಶ್ಚಯಿಸಿದ. ಭರತನು ತಾನಾಗಿಯೇ ಸಿಂಹಾಸನವನ್ನು ಒಪ್ಪಿಸಿದಾಗಲೂ ಅದನ್ನು ಒಪ್ಪಿಕೊಳ್ಳಲಿಲ್ಲ; ಜಾಬಾಲಿ ಉಪಯೋಗಿಸಿದ ವಾದ ತಪ್ಪೆಂದು ಅವನನ್ನು ಅಡಗಿಸುತ್ತಾನೆ. ಸುಗ್ರೀವನಿಗೆ ಪಟ್ಟಾಭಿಷೇಕ ಮಾಡಲು ಕಿಷ್ಕಿಂಧೆಯೊಳಕ್ಕೆ ಹೋಗುವುದಿಲ್ಲ; ಮಳೆಗಾಲದ ಕ್ಲೇಶವನ್ನು ಸಹಿಸಿಕೊಂಡು ಊರ ಹೊರಗೇ ಇರುತ್ತಾನೆ. ಯುದ್ಧ ಮುಗಿದು ವಿಭೀಷಣನು ಅವನನ್ನು ಪ್ರಾರ್ಥಿಸಿಕೊಂಡಾಗ–ಲಂಕೆಯಲ್ಲಿ ತನ್ನ ಮನೆಗೆ ಬಂದು ತನ್ನ ಭಕ್ತಿ ಗೌರವಗಳನ್ನು ಕೈಕೊಳ್ಳುವಂತೆ ಸ್ವಲ್ಪ ಮಟ್ಟಿಗಾದರೂ ತನ್ನ ಆತಿಥ್ಯವನ್ನು ಸ್ವೀಕರಿಸಬೇಕೆಂದು ಬೇಡಿಕೊಂಡಾಗ–ಒಂದು ದಿನ ಕೂಡ ಲಂಕೆಯಲ್ಲಿ ತಡಮಾಡಿ ನಿಲ್ಲಲು ಒಪ್ಪುವುದಿಲ್ಲ. ಅಯೋಧ್ಯೆಗೆ ತನ್ನನ್ನು ಕೊಂಡು ಹೋಗಲು ತಕ್ಷಣ ವೇಗವಾದ ಯಾನಕ್ಕೆ ಏರ್ಪಡಿಸಬೇಕೆಂದು ಕೇಳುತ್ತಾನೆ. ಹದಿನಾಲ್ಕನೆಯ ವರ್ಷ ನಾಳೆ ಮುಗಿಯುತ್ತದೆನ್ನುವಾಗ ಭರದ್ವಾಜಾಶ್ರಮಕ್ಕೆ ಬಂದು ಅಲ್ಲಿ ಉಳಿದುಕೊಂಡು ರಾಜ್ಯಭಾರ ವಿಷಯದಲ್ಲಿ ಭರತನ ಮನಸ್ಸು ಹೇಗಿದೆ ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳಲು ಅವನು ಕೈಕೊಂಡ ಮಾರ್ಗ ಇದು: ರಾಜನಾಗಿ ಮುಂದುವರಿಯಲು ಭರತನಿಗೆ ಅತ್ಯಲ್ಪ ಆಸಕ್ತಿ ಇದೆಯೆಂದು ಕಂಡುಬಂದರೂ ತಾನು ಅಯೋಧ್ಯೆಯ ಒಳಗಾಗಲಿ, ನಂದಿ ಗ್ರಾಮದಲ್ಲಿಯಾಗಲಿ ಕಾಲಿಡುವುದಿಲ್ಲವೆಂದು ತೀರ್ಮಾನಿಸಿರುತ್ತಾನೆ. ತನಗೆ ಇಷ್ಟ ಬಂದ ಕಡೆ ಒಂದು ರಾಜ್ಯವನ್ನು ಸ್ಥಾಪಿಸಿಕೊಳ್ಳುವ, ಇಚ್ಛೆ ಬಂದಾಗ ಪುಣ್ಯಲೋಕವನ್ನು ಗಳಿಸಿಕೊಳ್ಳುವ ಶಕ್ತಿ ತನಗಿಲ್ಲವೆ? ಕೌಸಲ್ಯೆಯ ಅರಮನೆಯಲ್ಲಿ ಲಕ್ಷ್ಮಣನಿಗೆ ನುಡಿದದ್ದು ಆ ಮಾತು. ತನ್ನ ಪುಣ್ಯ ಸಂಪಾದಿಸಿದ ಸಮಸ್ತ ಫಲಗಳನ್ನೂ ಶರಭಂಗ ಋಷಿ ಅವನಿಗೆ ಧಾರೆ ಎರೆಯುತ್ತೇನೆಂದಾಗ ಆಡಿದ ಮಾತು ಅದೇ. ಧರ್ಮ ಮತ್ತು ರಾಜತ್ವಗಳ ಅತ್ಯುನ್ನತ ತತ್ವಕ್ಕೆ ಆದರ್ಶವಾಗಿ ಶೀಲಚಾರಿತ್ರಗಳ ನಡತೆಗೆ ಮಾದರಿ ಎಂದು ತೋರಿಸಲು ವಾಲ್ಮೀಕಿ ಬಯಸಿದುದು ಈತನನ್ನು.[೧೩]

ಮುಂಚಿನಿಂದ ಮತ್ತು ಗ್ರಂಥದ ಉದ್ದಕ್ಕೂ ರಾಮನು ಜಿತಕ್ರೋಧನೆಂದೂ ಉದಾರಚರಿತನೆಂದೂ ಕವಿ ವರ್ಣಿಸಿದ್ದಾನೆ. ವಿಭೀಷಣನನ್ನು ವಾನರ ಪಾಳೆಯದಲ್ಲಿ ಉಳಿಸಿಕೊಳ್ಳುತ್ತೇನೆಂದೂ ಅದು ಕ್ಷತ್ರಿಯ ಧರ್ಮವೆಂದೂ ಪಾಳೆಯದ ಜನರಿಗೆಲ್ಲ

---

೧೩ ಉನ್ನತ ಚಾರಿತ್ರದ ಮಹಾನುಭಾವನ (High-Souled man) ಚಿತ್ರವನ್ನು ಅರಿಸ್ಟಾಟಲ್ ಕೊಡುತ್ತಾನೆ. ಈ ಎರಡು ಆದರ್ಶಗಳನ್ನೂ ಹೋಲಿಸಬಹುದು.

ಹೇಳುವಂತೆ ಮಾಡಿದ್ದು ಈ ಸ್ವಭಾವದ ಲಕ್ಷಣ. ತನಗಂತೂ ಯಾತರ ಭೀತಿಯೂ ಇಲ್ಲ ಎಂಬುದು ಅವನ ಮೂಲ ಗುಣ. ಆ ತರುವಾಯವೇ ಅಲ್ಲವೆ, ಈ ಪಾಳೆಯಕ್ಕೆ ಬಂದ ರಾವಣನ ಗೂಢಚಾರನಿಗೆ ತನ್ನ ಸೈನ್ಯ ಎಂಥದೆಂಬುದರ ವಿವರಗಳನ್ನು ತಿಳಿದುಕೊಂಡು ಈ ಪಾಳೆಯದ ಸುದ್ದಿಯನ್ನು ತನ್ನ ರಾಜನಿಗೆ ತಿಳಿಸಬಹುದೆಂದು ಅವರಿಗೆ ಅವಕಾಶ ಕಲ್ಪಿಸಿದ್ದು? ರಾವಣನೇ ಬಂದು ಆಶ್ರಯ ಬೇಡಿದರೂ (!) ಒಪ್ಪಿಕೊಳ್ಳುತ್ತೇನೆನ್ನುವವನು ರಾಮ. ದುಷ್ಟನನ್ನು ಕೊಲ್ಲುತ್ತಾನೆ: ಅದು ಅವನ ಕರ್ತವ್ಯ ; ಆದರೆ ಸತ್ತಿರುವಾಗ ದ್ವೇಷ ಸಲ್ಲದೆನ್ನುತ್ತಾನೆ.... 'ಮರಣಾಂತಾಣಿ ವೈರಾಣಿ'.

ಸೀತೆಯ ಜೊತೆಯಲ್ಲಿ ಇರುವಷ್ಟು ಕಾಲವೂ ಎಷ್ಟು ಪ್ರೀತಿ ಆಕೆಯಲ್ಲಿ! ತನ್ನ ರಾಜತ್ವಕ್ಕೂ ಗೌರವಕ್ಕೂ ಅದು ಅಡ್ಡಿ ತಂದರೆ ಪ್ರೀತಿಗೆ ಮಿತಿಯಾಗುತ್ತದೆ..... ಶಕ್ಯವಾದರೆ ಅವನಿಗೆ ಸ್ವಲ್ಪ ವಿನೋದವೂ ಬೇಕು. ನೆರವು ದಾನಕ್ಕಾಗಿ ಬ್ರಾಹ್ಮಣ ತ್ರಿಜಟನು ಅವನ ಬಳಿಗೆ ಬಂದಾಗ ನಿನ್ನ ಕೈಯಲ್ಲಿರುವ ದಂಡವನ್ನು ಎಷ್ಟು ದೂರ ಎಸೆದರೆ ಅಷ್ಟು ದೂರದವರೆಗಿರುವ ನನ್ನ ಗೋಧನ ನಿನ್ನದು ಎಂದನು. ಆ ತರುವಾಯ ಅವನಿಗೇ ಸಿಗ್ಗಾಗುತ್ತದೆ: ಕಷ್ಟದಲ್ಲಿ ತನ್ನಲ್ಲಿಗೆ ಬಂದ ಬ್ರಹ್ಮಣನಿಗೆ ಹೀಗೆ ಮಾಡೆಂದು ಹೇಳಿದೆನಲ್ಲ ಎಂದು. ಶೂರ್ಪನಖಿ ತಮ್ಮ ಎದುರಿಗೆ ಬಂದು ನಿಂತು ತನ್ನನ್ನು ಸ್ವೀಕರಿಸೆಂದು ಕೇಳಿದಾಗ ತನಗೆ ಒಬ್ಬ ಹೆಂಡತಿ ಇದ್ದಾಳೆಂದೂ ಲಕ್ಷ್ಮಣನಿಗೆ ಹೆಣ್ಣಿಲ್ಲವೆಂದೂ ಅವನನ್ನು ವರಿಸಬೇಕೆಂದೂ ಅವಳನ್ನು ಲಕ್ಷ್ಮಣನಲ್ಲಿಗೆ ಕಳಿಸಿದುದು ಎಲ್ಲೊ ಕೆಲವು ನಿಮಿಷಗಳ ವಿನೋದ ಮಾತ್ರ. ಆತನ ಬದುಕಿನ ಮಹಾ ಲಕ್ಷಣ ವಶಿತ್ವ; ಚಾರಿತ್ರದ ಅಖಂಡತೆ; ಕರ್ತವ್ಯಬುದ್ಧಿ; ಉದಾರತೆ. ಆ ಶೀಲ ಗಡುಸಾಗಿರಬಲ್ಲದು; ನಿಜವಾಗಿ ಗಂಭೀರವಾದ್ದು.

**೩. ಲಕ್ಷ್ಮಣ**

ಎಳತನದಿಂದಲೂ ರಾಮನ ಜೊತೆಗೆ, ಹಿಂಬಾಲಿಸಿ ಬದುಕಿದ, ಕಾದಾಡಿದ, ಕಾರ್ಯಮಾಡಿದ, ಮೃತಿ ಹೊಂದಿದ ತಮ್ಮ ಲಕ್ಷ್ಮಣ. ನಿರಂತರವಾಗಿತ್ತು ಆ ಜೊತೆ. ಅಣ್ಣನ ಸುಖಸೌಕರ್ಯಕ್ಕಾಗಿಯೂ ನೆರವಿಗಾಗಿಯೂ ಬೇಕಾದುದನ್ನೆಲ್ಲ ಮಾಡಲು ಸಿದ್ಧವಾಗಿದ್ದ. ತಂದೆತಾಯಿಯರಿಗಿಂತ ರಾಮನು ಅವನಿಗೆ ಪ್ರಿಯ. ಇತರ ಇಬ್ಬರು ಸೋದರರಿಗೆ ಅವನಲ್ಲಿ ಯಾವ ಪ್ರೀತಿಯಿತ್ತೊ ಧಾರಾಳವಿತ್ತೊ– ತೋರ್ಪಡಿಸುವ ಸಂದರ್ಭಗಳಿಲ್ಲ. ಸೀತೆಯೊಡನೆ ರಾಮನಿಗೆ ಮದುವೆಯಾದ ದಿನವೇ ತಾನೂ ಮದುವೆಯಾದನೆಂದಿದೆ. ಹೆಂಡತಿಯ ಪರ ಯೋಚಿಸಿದನೆ,

ಚಿಂತಿಸಿದನೆ ಎಂಬ ಸಂದರ್ಭಗಳು ಇಲ್ಲ. ರಾಮನು ವಿಶ್ವಾಮಿತ್ರನೊಡನೆ ಹೋದಾಗ ಲಕ್ಷ್ಮಣ ಅವನ ಜೊತೆಗೇ ಹೋದ. ತಾಟಕಿಯ ನಾಶಕ್ರಿಯೆಯಲ್ಲಿ ನೆರವಾದ.[೧೪] ಯುವರಾಜನಾಗಿ ರಾಮ ಅಭಿಷಿಕ್ತನಾಗುತ್ತಾನೆ ಎಂದು ಕೇಳಿ ಅವನಿಗೆ ಸಂತೋಷವಾಯಿತು. ಈ ಸುಸಂಧಿ ಕೂಡಲೆ ಬದಲಾಯಿಸಿದಾಗ ಕೋಪ ಬಂತು. ಕೌಸಲ್ಯೆಯ ಮಂದಿರದಲ್ಲಿ ತಾಯಿಯ ಮನಸ್ಸಿಗೆ ತುಂಬಾ ಮೆಚ್ಚಿಕೆಯಾಗುವಂತಹ ಮಾತುಗಳನ್ನಾಡಿ ಅವಳ ವಿಶ್ವಾಸವನ್ನು ದೃಢಪಡಿಸಿದ. ಅಂತಹ ವರಗಳನ್ನು ಕೈಕೆ ಕೇಳಬಾರದಾಗಿತ್ತು. ದಶರಥ ಕೊಡಬಾರದಾಗಿತ್ತು ಎಂದ. ನಾಡಿಂದ ಹೊರಗೆ ರಾಮನು ಹೋಗಬೇಕಾದ್ದಕ್ಕೂ ರಾಜ್ಯದಲ್ಲಿ ಭರತನು ಪಟ್ಟಾಭಿಷಿಕ್ತನಾಗುವುದಕ್ಕೂ ರಾಮನು ಒಪ್ಪಕೂಡದೆಂದು ದನಿಯೆತ್ತಿ, ರಾಮನ ಉತ್ತರಾಧಿಕಾರಕ್ಕೆ ಅಡ್ಡ ಬಂದರೆ ಯಾರೆ ಆಗಲಿ, ಶಿಕ್ಷಿಸುತ್ತೇನೆಂದ. ಆ ದಿಸೆಯಲ್ಲಿ ತನ್ನ ಕಾರ್ಯಕ್ಕೆ ಅಡ್ಡ ಬಂದರೆ ದಶರಥನನ್ನೇ ಕೊಲ್ಲುತ್ತೇನೆ, ಅಯೋಧ್ಯೆಯನ್ನು ನಾಶ ಮಾಡುತ್ತೇನೆ ಎಂದ. ಒಂದು ಕ್ಷಣಮಟ್ಟಿಗೆ ಇಂಥ ಮಾತು, ನಡತೆ ರಾಮನಿಗೆ ತಟ್ಟಬಹುದೆಂದು ಕೌಸಲ್ಯೆಗೆ ಭರವಸೆ ಉಂಟಾಗುತ್ತದೆ. ಆದರೆ ರಾಮನಿಗೆ ಆಗ ನ್ಯೂನವಾಗಿದ್ದುದು ಧೈರ್ಯವಲ್ಲ, ಶಕ್ತಿಯಲ್ಲ. ಒಂದು ರಾಜ್ಯವನ್ನು ತನ್ನ ಕೈಯಲ್ಲಿ ಉಳಿಸಿಕೊಳ್ಳುವುದಕ್ಕಾಗಿ ಅವನಿಗೆ ಇನ್ನೊಬ್ಬರ ಸಹಾಯವೂ ಬೇಕಿರಲಿಲ್ಲ. ಇತರರು ನೋಡುತ್ತಿದ್ದ ಕಣ್ಣಿಂದ ಆ ಸನ್ನಿವೇಶಕ್ಕೆ ಬೆಲೆ ಕಟ್ಟುತ್ತಿರಲಿಲ್ಲ. ಕಟ್ಟಿದ್ದರೆ ಪೂರ್ತಿ ಬೇರೊಂದು ಬಗೆಯ ನೆಲಸಿನದಾಗಿರುತ್ತಿತ್ತು. ಕೈಕೆಗೆ ತಂದೆ ಮಾಡಿದ್ದ ವಾಗ್ದಾನವನ್ನು ಉಳಿಸಿಕೊಳ್ಳುವುದಕ್ಕೆ ದಶರಥನಿಗೆ ಸಹಾಯವಾಗಬೇಕೆಂಬುದು ಅದು. ಆದುದರಿಂದ ಅವನು ಲಕ್ಷ್ಮಣನನ್ನು ಕುರಿತು:

> ತದೇನಾಂ ವಿಸೃಜ ಅನಾರ್ಯಾಂ ಕ್ಷತ್ರಧರ್ಮಾಶ್ರಿತಾಂ ಮತಿಂ
> ಧರ್ಮಮಾಶ್ರಯ, ಮಾ ತೈಕ್ಷ್ಣ್ಯಂ; ಮದ್ಬುದ್ಧಿರನುಗಮ್ಯತಾಂ

(ಆದ್ದರಿಂದ ಅಯುಕ್ತವಾದ ಈ ಅನಾರ್ಯ ಮನೋಭಾವವನ್ನು ತ್ಯಜಿಸು; ಅದು ಕ್ಷಾತ್ರದಲ್ಲಿ ನಟ್ಟಿದೆ. ಧರ್ಮದ ಮಾರ್ಗವನ್ನು ಆಶ್ರಯಿಸು; ತೈಕ್ಷ್ಣ್ಯ ಬೇಡ. ನನ್ನ ಬುದ್ಧಿಯನ್ನು ನೀನು ಅನುಸರಿಸು)

---

೧೪ ಆ ಜೊತೆಗೆ ವಿಶ್ವಾಮಿತ್ರನು ಆಕ್ಷೇಪಿಸಲಿಲ್ಲ. ಮಂತ್ರಗಳು ಅವನಿಗೂ ಉಪದೇಶ ಮಾಡಿದುವೆ? – ಎಂಬುದು ಊಹೆಗೆ, ಕಲ್ಪನೆಗೆ ಬಿಟ್ಟದ್ದು. ರಾಮನಿಗೆ ವಿಶ್ವಾಮಿತ್ರನು ಉಪದೇಶ ಮಾಡಿದ ಶಸ್ತ್ರಾಸ್ತ್ರಗಳನ್ನು ಕುರಿತು ಹೇಳುವಾಗ ಕವಿ ಕ್ರಿಯಾಪದ–ನಾಮಪದಗಳ ಏಕವಚನರೂಪವನ್ನು ಬಳುತ್ತಾನೆ. ಆದರೆ ಅವನಿಗೆ ಕೊಟ್ಟದ್ದನ್ನು ಲಕ್ಷ್ಮಣನಿಗೂ ಕೊಟ್ಟಂತೆ, ಸ್ವೀಕರಿಸಿದಂತೆ ಭಾವಿಸಬಹುದಲ್ಲವೆ?

ಎನ್ನುತ್ತಾನೆ. ಈ ಸಲಹೆಯೂ ತತ್ವವೂ ಆ ಮಾತಿನ ಗುಣಾತಿಶಯವನ್ನು ಎಷ್ಟು ಎತ್ತಿ ಹೇಳುತ್ತದೆಯೊ ಅಷ್ಟೇ ಉನ್ನತವಾಗಿ ರಾಮನ ತೀರ್ಮಾನದ ಸ್ವರೂಪ ಲಕ್ಷಣವನ್ನೂ ತಿಳಿಸುತ್ತದೆ. ಲೌಕಿಕ ಸನ್ನಿವೇಶ ಒಂದರಲ್ಲಿ ಶಕ್ಯವಾಗುವ ಧರ್ಮದ ಸ್ವರೂಪವನ್ನು ವಿಶದಪಡಿಸಲು ಇಲ್ಲಿ ಬಳಸಿರುವ ಮೂರು ಮಾತುಗಳು ಅತ್ಯುದಾರ ಕಲ್ಪನೆಯವು.

ರಾಮನು ತನ್ನ ಹಕ್ಕುಗಳನ್ನು ಬಿಟ್ಟು ಕೊಡುವುದು ಲಕ್ಷ್ಮಣನಿಗೆ ಒಪ್ಪಿತವಾಗಲಿಲ್ಲ. ಅವನು ಪೌರುಷವಾದಿ. ಏನೇ ನಷ್ಟ ಕಷ್ಟ ಉಂಟಾಗಲಿ, ಎಂಥ ಸಂದರ್ಭದಲ್ಲಿಯೇ ಆಗಲಿ, ತಂದೆಗೆ ವಿಧೇಯನಾಗಿರಬೇಕು ಎಂಬ ತತ್ವಕ್ಕೆ ಅವನು ಒಲಿಯುತ್ತಿದ್ದವನಲ್ಲ. ಹಾಗೆಯೇ ಅನೇಕ ಪ್ರಧಾನ ಪಾತ್ರಗಳು ಸಾಮಾನ್ಯವಾಗಿ ಕಾಲ, ನಿಯತಿ, ದೈವ ಎಂದು ಬಳಸುವ ಮಾತುಗಳನ್ನು – ರಾಮನೇ ಒಪ್ಪಿದುದು ಅಚ್ಚರಿ ತರುವಂಥದು[೧೫] – ಒಪ್ಪುವುದಿಲ್ಲ. ಈ ಕ್ರಿಯಾವಿಕಾಸಕ್ಕೆ ಕೈಕೆಯಲ್ಲ ಹೊಣೆ, ದೈವ ಎಂದಿದ್ದ ರಾಮ. ಲಕ್ಷ್ಮಣ ಕ್ಷತ್ರಿಯನು ಯಾವುದು ಶೌರ್ಯ ಎಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕು; ಎಲ್ಲ ಸಂಗತಿಗಳಲ್ಲಿಯೂ ತನ್ನ ನಡವಳಿಕೆ ಸರಿಯೆ, ತಪ್ಪೆ ಎಂಬ ಭಾವವುಳ್ಳವನಾಗಬೇಕು ಎಂದ. ದುರ್ಬಲನಾಗಿ ಕುಳಿತು ಅಂಥ ಸಂದರ್ಭಗಳಲ್ಲಿ ವೇದಾಂತವನ್ನು ನುಡಿಬಾರದು ಎಂದ. ಆದರೆ ಅವನಿಗೆ ಗೊತ್ತಿತ್ತು: ರಾಮನ ಕಾರಣಗಳು ಇನ್ನೂ ಉಚ್ಚತರವಾದವು; ಅರ್ಥವೃತ್ತಿಯುಳ್ಳವು; ಹೆಚ್ಚು ಸಂಕಲ್ಪದಿಂದ ಅವನು ಯಾವುದನ್ನೂ ಯಾವಾಗಲೂ ಆಲೋಚಿಸುತ್ತಾನೆ ಎಂದು. ಆದ್ದರಿಂದಲೇ ರಾಮನ ನಿರ್ಣಯವನ್ನು ಒಪ್ಪಿಕೊಂಡ. ಆದರೆ ಅಯೋಧ್ಯೆಯಲ್ಲಿ ಉಳಿದುಕೊಂಡು ತಂದೆಗೂ ಇಬ್ಬರು ತಾಯಿಯರಿಗೂ ಸೇವೆ ಸಲ್ಲಿಸುತ್ತಿರಲು ನಿರಾಕರಿಸಿದ. ರಾಮನು ಇಲ್ಲದೆ ಕೈಕೆಯ ಬಲಪ್ರಭಾವ ಹೆಚ್ಚಾದಾಗ ತಾಯಿಯರನ್ನು ನೋಡಿಕೊಳ್ಳುವವರಾರು? ಭರತನು ರಾಜನಾಗಲಿ; ರಾಮನಿಗೆ ವಿರುದ್ಧವಾಗಿ ಸಂಚು ನಡಸಿದ್ದವಳು ದಶರಥನ ಮರಣವನ್ನೇ ಸಾಧಿಸಬಹುದು; ತಾಯಿಯರಿಗೂ ಕೇಡು ತಂದಾಳು ಎಂದ ರಾಮ. ತನ್ನ ಕಾರ್ಯಪ್ರಪಂಚ ಮತ್ತು ಸಾಕ್ಷಾತ್ ಅಗತ್ಯ ಎಂದಿಗೂ ರಾಮನ ಬಳಿಯಲ್ಲಿ ಎಂಬುದು ಲಕ್ಷ್ಮಣನ ವಿಶ್ವಾಸ. ತನ್ನ ಸೇವೆ, ರಕ್ಷಣೆ ಕೌಸಲ್ಯೆಗೆ ಅಗತ್ಯವಿಲ್ಲ; ಆಕೆ

---

೧೫ ಅಂದೇ ಏನು, ಇಂದೂ ಭಾರತೀಯರು ಸುಮಾರು ಅದೇ ನಂಬಿಕೆಯವರು. ಇದು ಎಷ್ಟು ಜಡತೆಗೆ ದುರ್ಬಲತೆಗೆ ಕಾರಣವಾಗಿದೆಯೊ ಸ್ಥಿತಿನಿಷ್ಠೆಗೆ ಸಾಧಕವಾಗಿ ಭರತನನ್ನು ಸ್ತಿಮಿತದಲ್ಲಿ ನಡಸಿದೆಯೊ ಪರಿಶೀಲಿಸಬೇಕು.

ಶ್ರೀಮಂತೆ; ಸಾವಿರ ಹಳ್ಳಿಗಳ ಆಸ್ತಿ ಅವಳಿಗಿದೆ. ಬಲಿಷ್ಠಳು, ವಿವೇಕಶಾಲಿ; ತನ್ನಂಥ ಹತ್ತು ಜನರನ್ನು ನೋಡಿಕೊಳ್ಳುವ ಶಕ್ತಿಯೂ ಇದೆ; ತನ್ನ ಮನಸ್ಸನ್ನು ನಡಸಬಲ್ಲಳು. ಆದ್ದರಿಂದ ಅಣ್ಣನಿಗೂ ಅತ್ತಿಗೆಗೂ ನೆರವಾಗಬೇಕೆಂದು ಅವರ ಜೊತೆಗಿರಬೇಕೆಂದು ರಾಮನೊಡನೆ ಹೋದ. 'ಗುಣೈಃ ದಾಸ್ಯಮುಪಾಗತಃ' ಅವನ ಗುಣಕ್ಕೆ ಇವನು ಗುಲಾಮನಾದನು.[೧೬]

ಅವನು ಕೈಂಕರ್ಯದ ಮೂರ್ತಿ; ಇಚ್ಛೆಯಾ; ಸಿದ್ಧ; ಭಕ್ತಿಯುಳ್ಳವನು. ಅಣ್ಣನ ಸಮಕ್ಷಮದಲ್ಲಿ ಯಾವ ಸ್ವಾತಂತ್ರ್ಯವನ್ನೂ ಬಳಸಲು ಇಷ್ಟವಿಲ್ಲದವನು. ಉದಾಹರಣೆಗೆ, ಒಮ್ಮೆ ಸ್ಥಳವನ್ನು ಆರಿಸಿ ಪಂಚವಟಿಯಲ್ಲಿ ಒಂದು ಆಶ್ರಮವನ್ನು ಕಟ್ಟೆಂದು ರಾಮನು ಹೇಳಿದಾಗ–

> ಪರವಾನ್ ಅಸ್ಮಿ ಕಾಕುತ್ಸ್ಥ ತ್ವಯಿ ವರ್ಷಶತಂ ಸ್ಥಿತೇ
> ಸ್ವಯಂ ತು ರುಚಿರೇ ದೇಶೇ ಕ್ರಿಯತಾಂ ಇತಿ ಮಾಂ ವದ
>
> (ನೂರು ವರ್ಷ ಬದುಕಿರಲಿ, ನಾನು ನಿನ್ನ ಮನಸ್ಸಿಗೆ ಅಧೀನನಾಗಿ ನಡೆಯುವವನು. ಸ್ಥಳ ಇಂಥದೆಂದು ನೀನು ಗೊತ್ತು ಮಾಡಿ ಏನು ಮಾಡಬೇಕೆಂಬುದನ್ನು ಹೇಳು.)

ಎನ್ನುತ್ತಾನೆ. ಸೇವೆಯಲ್ಲಿ ಇದು ಅವನ ಲಕ್ಷಣ. ೧೩–೧೪ ವರ್ಷಗಳ ಕಾಲ ಪೂರ್ತಿ ಶ್ರಮವನ್ನು ಲೆಕ್ಕಿಸಲಿಲ್ಲ, ಅವಧಾನವನ್ನು ಸಡಿಲ ಮಾಡಲಿಲ್ಲ. ಆ ದಂಪತಿಗಳಿಗೆ ಆಶ್ರಮಗಳನ್ನು ಕಟ್ಟಿದ; ಆಹಾರ ಒದಗಿಸಿದ; ಹಣ್ಣು ಹೂ ತಂದುಕೊಟ್ಟ; ಹಿಂಸ್ರ ಜಂತುಗಳನ್ನೂ ರಾಕ್ಷಸರನ್ನೂ ಕೊಂದ; ಅವರ ವಿಶ್ರಾಂತಿಯಲ್ಲಿ ಕಾವಲಿದ್ದ. ಒಂದು ಒಟ್ಟು ಸಿಬ್ಬಂದಿವರ್ಗದ ಕೆಲಸವನ್ನೆಲ್ಲ ಒಬ್ಬನೇ ಮಾಡಿ ನಿಂತ. ಒಬ್ಬರನ್ನು ಬಿಟ್ಟು ಇನ್ನೊಬ್ಬರು ಈ ಅಣ್ಣತಮ್ಮಂದಿರು ಬದುಕಲಾರದವರಾಗಿದ್ದರು. ಸೀತೆಗೆ ಗೊತ್ತಿತ್ತು: ರಾಮನ ಪ್ರೀತಿಯಲ್ಲಿ ಲಕ್ಷ್ಮಣನಿಗೆ ಮೊದಲ ಸ್ಥಾನ; ತನ್ನದು ಎರಡನೆಯದು ಎಂದು. ರಾಮನಿಗೂ ಗೊತ್ತಿತ್ತು: ಸರ್ವದಾ ಅವನನ್ನು ನಂಬಿರಬಹುದೆಂದು. ಅಷ್ಟೇ ಏನು, ಪ್ರತ್ಯೇಕವಾಗಿ ಅವನ ಅಭಿಪ್ರಾಯ ಕೇಳಬೇಕಾಗಿಯೇ ಇರಲಿಲ್ಲವೆಂದು. ಅಷ್ಟು ಕೇವಲವಾದದ್ದು ಅವನ ಮನಸ್ಸು, ಭಕ್ತಿ ರಾಮನಲ್ಲಿ.

---

೧೬ ಮುಂದಿನ ಕಾಲದಲ್ಲಿ ವಸಂತಸೇನೆ ಚಾರುದತ್ತನನ್ನು ಕುರಿತು ಇಂಥವೇ ಮಾತುಗಳನ್ನಾಡುತ್ತಾಳೆ. ಹೋಲಿಕೆ ಕ್ಷುದ್ರ ಎಂದುಕೊಳ್ಳಬಾರದು.

ಲಕ್ಷ್ಮಣ ಸೀತೆಯನ್ನು ತಾಯಂತೆ ಸೇವಿಸಸುತ್ತಾನೆ.[೧೭] ಕ್ರೂರವಾದ ಮಾತುಗಳನ್ನು ಆಕೆ ಆಡಿದಾಗ ತಾನು ಆಶ್ರಮದಿಂದ ಹೊರಟುಹೋದರೆ ಆಕೆಗೆ ಕೇಡು ಸಂಭವಿಸಬಹುದು ಎಂದು ಅವನು ಶಂಕಿಸಿದ್ದ. ಜಿಂಕೆ ನಿಜವಿರಲಾರದು; ಮಾರೀಚನು ಧರಿಸಿದ ವೇಷವಾಗಿರಬಲ್ಲದು, – (ಅದೇ ನಿಜ) – ರಾಮನಿಗೆ ಎಂದೂ ಪ್ರಾಣಾಪಾಯ ಬರಲಾರದು ಎಂದು ಅವನು ತಿಳಿದಿದ್ದುದರಿಂದ. ಆದರೆ ಆಕೆಯ ನುಡಿ, ಆಕ್ಷೇಪಣೆ ಅವನ ತಾಳ್ಮೆಯನ್ನೂ ಮೀರಿತು. ಅವಳು ಅಂದದ್ದು ತಾನೆ ಏನು? 'ನೈತತ್ ಚಿತ್ರಂ ಸಪತ್ನೇಷು ಪಾಪಂ ಲಕ್ಷ್ಮಣ ಯದ್ಭವೇತ್' – ಸವತಿಯರ ಮಕ್ಕಳಲ್ಲಿ ಇಂಥ ಪಾಪ ವಿಚಿತ್ರವೇನಲ್ಲ ಎಂದು. ರಾಮನಿಗೆ ಕೇಡುಂಟಾಗಿ ತಾನು ಆಕೆಯನ್ನು ಬಯಸಬಹುದು ಎಂದು. ಆ ಮಾತು ಕೇಳಿದಾಗ ವನದೇವತೆಗಳಿಗೂ ಇತರ ದೇವರುಗಳಿಗೂ ಆಕೆಯ ರಕ್ಷಣೆಯನ್ನು ವಹಿಸಿ ಆಶ್ರಮವನ್ನು ಬಿಟ್ಟು ಹೋಗುತ್ತಾನೆ. ಪರಿಣಾಮಗಳು ಏನೆಂಬುದು ನಮಗೆ ಗೊತ್ತಿದೆ. ರಾಮನಿಗೆ ಇದು ಅಪ್ರಿಯವಾಗಿ ತಮ್ಮನು ಅವಿಧೇಯುನಾದ್ದಕ್ಕಾಗಿ ತೆಗಳುತ್ತಾನೆ. ಈ ಎರಡನ್ನೂ ಲಕ್ಷ್ಮಣನು ನುಂಗಿಕೊಳ್ಳಬೇಕಾಯಿತು. ಅಂಥ ಸಂದರ್ಭದಲ್ಲಿ ಯಾರೂ ನೆಮ್ಮದಿಯಾಗಿರಲಾರರು. ಸೀತಾವಿರಹಿತನಾಗಿ ಒಂಟಿಯಾಗಿ ರಾಮನು ಬಾಧೆ ಪಡುತ್ತಿದ್ದಾಗ ಅಲ್ಲಿ ರಾಮನಿಗೆ ಇದ್ದುದು ಲಕ್ಷ್ಮಣನ ನೆರವು, ಸಮಾಧಾನ ಅಷ್ಟೇ. ಅದರಿಂದ ಸಂತೈಸಿಕೊಳ್ಳಬೇಕಾಯಿತು. ಸಹಜವಾಗಿ ಸ್ಥೈರ್ಯವನ್ನು ರಾಮನಿಗೆ ಕೊಡಬಲ್ಲವನು, ನೆನಪಿಗೆ ತರಬಲ್ಲವನು ಅವನೇ. ಧೈರ್ಯ, ಶಕ್ತಿ, ಹರ್ಷ, ಭರವಸೆಯ ಮಾತುಗಳನ್ನು ಆಡಬಲ್ಲವನೂ ಅವನೊಬ್ಬನೇ, ಇಂಥಲ್ಲಿ ಆಗಬೇಕಿದ್ದುದು ಲಕ್ಷ್ಮಣನ ಕ್ಷತ್ರದ ಮತ್ತು ಪೌರುಷದ ಮಾತುಗಳು. ಹನುಮಂತನೊಡನೆಯೂ ಸುಗ್ರೀವನೊಡನೆಯೂ ಮಾತಾಡಬೇಕಾದಾಗ, ಸ್ನೇಹಸಂಬಂಧ ಬೆಳೆಯಬೇಕಾದಾಗ ಲಕ್ಷ್ಮಣನದೇ ಕಾರ್ಯಭಾರ. ಲಂಕೆಯ ಯುದ್ಧರಂಗದಲ್ಲಿ ಲಕ್ಷ್ಮಣನ ಶೌರ್ಯ ಯಾವ ಇತರರಿಗೂ ಕಡಮೆ ಅಲ್ಲದ್ದು. ವಿಭೀಷಣನ ಮೇಲೆ, ರಾಮನ ಮೇಲೆ ಶಕ್ತ್ಯಾಯುಧಗಳ ಘಾತವನ್ನು ಅವನೇ ತಡೆದವನು. ನಿಕುಂಭಿಲಾ ಯಾಗ ಮಾಡಿ ಆ ರಕ್ಕಸನು ಅಜೇಯನಾಗುವುದನ್ನು ತಡೆದು ಆ ಯಾಗಕ್ಕೆ ಅಡ್ಡಿ ಮಾಡುವುದಕ್ಕೂ ಇಂದ್ರಜಿತುವನ್ನು ಕೊಲ್ಲುವುದಕ್ಕೂ

---

೧೭ ಅವನ ಭಾವನೆಯೂ ಹಾಗೆ. ತಾಯಿ ಸುಮಿತ್ರೆ ಹೇಳಿದ್ದದ್ದೂ ಅದನ್ನೇ. 'ರಾಮಂ ದಶರಥಂ ವಿದ್ಧಿ ಮಾ ವಿದ್ಧಿ ಜನಕಾತ್ಮಜಾಂ' ಎಂಬುದು ಆಕೆಯ ನಿರ್ದೇಶನ.

ಅವನೇ ಕಾರಣ. ಅಣ್ಣ ಅತ್ತಿಗೆ ಇಬ್ಬರ ಶೀಲಸ್ವಭಾವಗಳೂ ಅವನಿಗೆ ತಿಳಿದಿತ್ತು. ಆದುದರಿಂದ ಅಗ್ನಿಪರೀಕ್ಷೆಗೆ ಸೌದೆಯನ್ನು ಸೇರಿಸಿ ಚಿತೆಯನ್ನು ಕಲ್ಪಿಸಿದವನೂ ಅವನೇ. ಸೀತೆ ಅಪ್ಪಣೆ ಮಾಡಿದ್ದು ಹಾಗೆ. ಉತ್ತರಕಾಂಡದಲ್ಲಿ ಅಯೋಧ್ಯೆಯಿಂದ ಆಕೆಯನ್ನು ಒಯ್ದು ಅವಳ ಗತಿಗೆ ಅವಳನ್ನು ಬಿಟ್ಟುದಕ್ಕೆ ರಾಮನ ಅಪ್ಪಣೆಯಂತೆ ಸಾಧನವಾಗಬೇಕಾದವನೂ ಅವನೇ ಅವನಿಗೆ ರಾಮನು ಯುವರಾಜಪಟ್ಟವನ್ನು ನೀಡಿದಾಗ ಅವನು ನಿರಾಕರಿಸಿದ. ತನ್ನ ಅಣ್ಣನೊಡನೆ ಇದ್ದುಕೊಂಡು ಸೇವೆ ಸಲ್ಲಿಸಲು ಅವನೊಡನೆ ಇರುವುದೊಂದೇ ಅವನಿಗೆ ತೃಪ್ತಿ. ಕೈಂಕರ್ಯ ಲಕ್ಷ್ಮಿ ಎಂಬುದಕ್ಕೆ ಪರಮ ಪ್ರತಿನಿಧಿಯಾಗಿ ನಿಲ್ಲುವವನು ಅವನೊಬ್ಬನೇ.

ಅವನ ಹೃದಯ ಕೋಮಲವಾದುದು; ಋಜುವಾದುದು. ಬೇಗ ಕೋಪ ಬರುತ್ತಿತ್ತು. ಅಷ್ಟೇ ಬೇಗ ಅದರಿಂದ ಪಾರಾಗುತ್ತಿದ್ದ. ಸುಲಭಕೋಪಿ, ಸುಲಭಶಾಂತ– ಇವು ಮಾತುಗಳು. ಪುನಃ ಅಣ್ಣನ ಮಾತನ್ನು ಅವನು ಅವಗಣನೆ ಮಾಡಿದ; – ಕಡೆಯ ಮಜಲಲ್ಲಿ. ದುರ್ವಾಸನು[೧೮] ಬಂದು ರಾಮನ ಅಪ್ಪಣೆಗೆ ವಿರುದ್ಧವಾಗಿ ಅವನನ್ನು ಸಲಹಾಮಂದಿರದೊಳಕ್ಕೆ ಬಿಡಬೇಕೆಂದಾಗ ಲಕ್ಷ್ಮಣನಿಗೆ ಉಂಟಾದ ಉಭಯ ಸಂಕಟ ಕೇವಲ ವ್ಯಕ್ತಿಯಾದ ತನ್ನನ್ನು ಕುರಿತದ್ದು. ಈ ಪ್ರಸಂಗದಲ್ಲಿ 'ಏಕಸ್ಯ ಮರಣಂ ಮೇಽಸ್ತು ಮಾ ಭೂತ್ ಸರ್ವ ವಿನಾಶನಂ' ಎಂಬವು ಲಕ್ಷ್ಮಣನಾಡಿದ ಮಾತುಗಳು. ಇದು ಮಹಾವಾಕ್ಯವೇ ಆಗುತ್ತದೆ. ಇದು ಯೇಸು ಕ್ರಿಸ್ತನ ಮಾತುಗಳಿಗೆ ಅಥವಾ ಬುದ್ಧನು ಆಡಿದನೆಂದು ಕುಮಾರಿಲರ ಪ್ರಸಿದ್ಧವಾದ 'ಕಲಿಕಲುಷ ಕೃತಾನಿ ಯಾನಿ ಲೋಕೇ ಮಯಿ ನಿಪತಂತು ವಿಮುಚ್ಯತಾಂತು ಲೋಕಃ' ಎಂದರೆ, 'ಇಳೆಯ ಮೇಲೆ ಕಲಿಯಿಂದ ಯಾವ ಕೇಡು ಉಂಟಾದರೂ ಆ ಸಂಬಂಧದ ಶಿಕ್ಷೆ ನನ್ನ ಮೇಲೆ ಬೀಳಲಿ, ಲೋಕ ಮುಕ್ತವಾಗಲಿ' – ಎಂಬುದಕ್ಕೆ ಸಮನಾದ ಮಾತು. ಮರುನುಡಿಯದೆ ಹೇಳಿದುದಕ್ಕೆ ವಿಧೇಯನಾಗಿ ನಡೆದುಕೊಳ್ಳುವ ಕಾರ್ಯಸಿದ್ಧತೆ ಅವನದು. ತನ್ನ ಸುಖ ಸೌಕರ್ಯಗಳನ್ನಾಗಲಿ ಯಾವ ನಿಷ್ಠುರ ಪರಿಣಾಮಗಳಾಗಲಿ ಅಣ್ಣನ ಇಷ್ಟವನ್ನು ಈಡೇರಿಸಲು ಒದಗಬಹುದೆಂಬ ಆಲೋಚನೆ ಕೂಡ ಅವನಲ್ಲಿ ಉದಿಸಿ ನಿಲ್ಲುವುದಿಲ್ಲ. ರಾಮನೇ ಅವನಿಗೆ ತಾಯಿ, ತಂದೆ; ಕೋಟೆ, ರಕ್ಷಣೆ. ರಾಮನು ಹೇಳಿದಂತೆ ಪಂಚವಟಿಯಲ್ಲಿ ವಾಸಸ್ಥಾನವನ್ನು ತೃಪ್ತಿಕರವಾಗಿ ಲಕ್ಷ್ಮಣನು ಮಾಡಿ ಮುಗಿಸಿದಾಗ ರಾಮನು ಅವನನ್ನು ಅಪ್ಪಿಕೊಂಡು ತನ್ನ ಬಳಿ ಲಕ್ಷ್ಮಣನಿರುವಾಗ ತನ್ನನ್ನು ನೋಡಿಕೊಂಡು

---

೧೮ ಈ ಘಟನೆ ಎಷ್ಟು ನಿಜವೊ ಪ್ರಕ್ಷಿಪ್ತವೊ ಸಾಂಕೇತಿಕವೊ ಕಾಣೆ.

ತನಗೆ ಬೇಕಾದುದೆಲ್ಲವನ್ನೂ ಒದಗಿಸಬಲ್ಲ ತನ್ನ ತಂದೆ ಇನ್ನೂ ಇದ್ದಾನೆ ಎಂದೇ ರಾಮನು ಭಾವಿಸುತ್ತಾನೆ: 'ತ್ವಯಾ ಪುತ್ರೇಣ ಧರ್ಮಾತ್ಮಾನ ಸಂವೃತ್ತಃ ಪಿತಾ ಮಮ' ಎನ್ನುತ್ತಾನೆ. ಮಳೆಯಾಗಲಿ, ಬಿಸಿಲಾಗಲಿ, ಈ ಸೇವೆ ನಡೆಯುತ್ತದೆ. ಒಂದು ಒಟ್ಟು ಸಂಪ್ರದಾಯಕ್ಕೆ ಇವನೇ ನಿಜವಾಗಿ ರಾಮಾನುಜ; ರಾಮನ ಪರಮ ಸೋದರ. ರಾಮನಿಗೆ ಗೊತ್ತು ಅವನು ಸಾರಗ್ರಾಹಿ ಎಂದು. ಅವನ ಶೌರ್ಯ, ಪರಾಕ್ರಮ ಎಂಥವೆಂಬುದು ಹನುಮಂತನಿಗೆ ಗೊತ್ತು. ಸೀತೆಗೆ ಗೊತ್ತು : ಅವನ ಆತ್ಮ ಎಷ್ಟು ಪರಿಶುದ್ಧವೆಂದು: ಅವನ ಭಕ್ತಿ, ಧೈರ್ಯ ಎಂಥವೆಂದು.

### ೪. ಭರತ

ಲಕ್ಷ್ಮಣನ ಸೇವೆ, ಭಕ್ತಿ ಸಮರ್ಪಣದ್ದಾದರೆ ಸಮಸ್ತವನ್ನೂ ತ್ಯಾಗ ಮಾಡಿದ್ದು, ಇನ್ನೊಂದು ಬಗೆಯಲ್ಲಿ ಭರತನ ಗುಣ. ರಾಮನಿಗೆ ಭರತನೂ ತಕ್ಕ ತಮ್ಮ. ರಾಮನಲ್ಲಿ ಅವನಿಗಿರು ಗೌರವ ಪ್ರೀತಿಗಳಿಗೆ ಎಲ್ಲೆಯಿಲ್ಲ. ರಾಮನು ತಪ್ಪು ಮಾಡುತ್ತಾನೆಂದು ಅವನು ನಂಬಲಾರ. ತನಗಿಂತ ಹೆಚ್ಚಾಗಿ ಇತರರ ಹಿತವನ್ನು ಕುರಿತೇ ರಾಮನು ಮೊದಲು ಯೋಚಿಸುತ್ತಾನೆ ಎಂಬುದು ಒಂದೇ ಅಸಮಾಧಾನ; ಸರ್ವದಾ ಸ್ವಪ್ರಯೋಜನದಲ್ಲಿ ಅನಾಸಕ್ತನೆಂದು. ತಾನು ಯಾವುದನ್ನು ಮೇಲ್ತರದ ಉದ್ದೇಶ, ನೀತಿತತ್ವ ಎಂದು ಎಣಿಸುತ್ತಿದ್ದಾನೊ ಅದಕ್ಕಾಗಿ ಸ್ವಪ್ರಯೋಜನವನ್ನು ಬಲಿಕೊಡುತ್ತಾನೆ ಎಂಬುದು. 'ನತ್ವಾಂ ಪ್ರವ್ಯಥಯೇತ್ ದುಃಖಂ ಪ್ರೀತಿರ್ವಾ ನ ಪ್ರಹರ್ಷಯೇತ್' ಎಂಬುದರಿಂದ ಮುಂದುವರಿಯುವ ಕೆಲವು ಶ್ಲೋಕಗಳು– ಎಂದರೆ, 'ವ್ಯಥೆಯಲ್ಲಿ ನೀನು ಕುಗ್ಗುವುದಿಲ್ಲ, ಸುಖ ಬಂದಾಗ ಹಿಗ್ಗುವುದಿಲ್ಲ' ಎಂಬವು ನಡತೆಯ ಶಾಸನಗಳಂತಿರುತ್ತವೆ. ಇತರರಿಗೆ ಇಂತಹ ನಡತೆಯ ಉನ್ನತಿಗಳನ್ನು ಮುಟ್ಟುವುದಕ್ಕಾಗಿ ಶಿಕ್ಷಣ ಪಡೆದುಕೊಳ್ಳುವುದೂ ಶಿಸ್ತುಸಂಸ್ಕಾರಗಳನ್ನು ಪಡೆದುಕೊಳ್ಳುವುದೂ ಕಷ್ಟವೇ. ಎಷ್ಟೋ ವಿಷಯಗಳಲ್ಲಿ ಇತರರಿಗಿಂತ ರಾಮನಿಗೆ ಹೆಚ್ಚು ತಿಳಿವಳಿಕೆಯಿತ್ತು ಎಂದಾಗಲೂ ಅವರ ಸಲಹೆ ಕೇಳುತ್ತಾನೆ ಎನ್ನುತ್ತಾನೆ ಭರತ. ಅವನಿಗೆ ತನ್ನ ತಂದೆಯ ಮನಸ್ಸು ಚೆನ್ನಾಗಿ ಗೊತ್ತು; ಬಹುವಾಗಿ ತಂದೆಯ ಪ್ರೀತಿಯನ್ನು ಪಡೆದಿದ್ದ. ಆದರೆ ಆ ತಂದೆ ತನ್ನ ತಾಯಿಗೆ ಅತಿಯಾದ ಗಮನ, ಪಕ್ಷಪಾತ ತೋರಿಸುತ್ತಿದ್ದ. ದಶರಥನಿಗೆ ಅವನಲ್ಲಿ ಒಳ್ಳೆಯ ಅಭಿಪ್ರಯವಿತ್ತು. ಕೌಸಲ್ಯೆಗೂ ಅವನಲ್ಲಿ ಪ್ರೀತಿಯೇ. ಸ್ವಂತ ತಾಯಿ ತೋರಿಸುತ್ತಿದ್ದ ಪ್ರೀತಿಗೆ ಸಮವಾಗಿ ಕೌಸಲ್ಯೆಗೆ ಭರತ ತನ್ನ ಪ್ರೀತಿಯನ್ನು ತೋರಿಸುತ್ತಿದ್ದ. ಅಯೋಧ್ಯೆಗೆ ಅವನು ಹಿಂದಿರುಗಿದ ಮೇಲೆ ಕೌಸಲ್ಯೆಯನ್ನು ಅವನು ಮೊದಲು ನೋಡಿದಾಗ ಅವಳ

ಮೊದಲ ಪ್ರತಿಕ್ರಿಯೆ ಕಠಿನ, ಕಷ್ಟಕರ. ತಾನು ಊರಲ್ಲಿ ಇಲ್ಲದಿರುವಾಗ ತನ್ನ ತಾಯಿಯ ಮನಸ್ಸಿನ ಬಯಕೆಗಳಲ್ಲಿಯೂ ನಡೆದ ಘಟನೆಗಳಲ್ಲಿಯೂ ತನಗೆ ಯಾವ ಭಾಗವೂ ಇಲ್ಲವೆಂಬುದನ್ನು ಆಕೆ ನಂಬಬೇಕೆಂದು ಆಕೆಯನ್ನು ಬೇಡಿಕೊಂಡು ರಾಮನಲ್ಲಿ ತನಗಿದ್ದ ಪ್ರೇಮ ಇನ್ನಾರದಕ್ಕೂ ಎರಡನೆಯ ಮಟ್ಟದ್ದಲ್ಲವೆಂದ. ತಾನು ಸಿಂಹಾಸನವನ್ನು ಏರುವುದಿಲ್ಲವೆಂದ. ಉತ್ತರಕ್ರಿಯೆಗಳು ಮುಗಿದಕೂಡಲೆ ತಾನು ಮೊದಲು ಮಾಡಬೇಕೆಂದಿರುವ ಕೆಲಸ ತನ್ನ ಜೊತೆಯಲ್ಲಿ ಬರುವವರೆಲ್ಲರೊಡನೆ ರಾಮನು ಇದ್ದಲ್ಲಿಗೆ ಹೋಗುವುದು, ಊರಿಗೆ ಹಿಂದಿರುಗಬೇಕೆಂದು ಅವನನ್ನು ಬೇಡುವುದು ಎಂದ. ರಾಮನಲ್ಲಿ ಭರತನಿಗಿದ್ದ ಅಂತಃಕರಣ ಎಂಥದೆಂಬುದು ಕೌಸಲ್ಯೆಗೆ ಗೊತ್ತು. ರಾಜ್ಯವನ್ನು ಬಯಸುವುದರಲ್ಲಿ ತನ್ನ ತಾಯಿಗೆ ಇದ್ದ ಭಾವನೆಯೇ ಅವನದೂ ಆಗಿರಬಲ್ಲದೆಂಬ ಸಂಶಯದಿಂದ ಆಕೆ ಕಠಿನವಾಗಿ ನುಡಿದಿದ್ದಳು. ಹಾಗೆಯೇ ರಾಮನ ತಾಯಾದ ಆಕೆಗೆ ಈ ನಷ್ಟ ಎಷ್ಟು ದೊಡ್ಡದು ಎಂಬ ಅತಿರೇಕದಲ್ಲಿ ಅವಳು ಹೇಗೆ ನುಡಿದುದು. ಅಕಂಟಕವಾದ ರಾಜ್ಯ ಅವನಿಗೆ ಸಿಕ್ಕಿತ್ತು; ಸುಮಿತ್ರೆಯೊಡನೆ ರಾಮನಿರುವಲ್ಲಿಗೆ ಅಗ್ನಿಹೋತ್ರದೊಡನೆ ಹೋಗಿ ತಾನೂ ವಾಸಮಾಡುತ್ತೇನೆ ಎನ್ನುವವರೆಗೂ ಹೋದಳು. ವಂಶದ ಮುಖ್ಯ ಎಳೆಯನ್ನು ನಡಸುವವನಲ್ಲಿಯೇ ಇರಬೇಕಾದ್ದು ಅಗ್ನಿಹೋತ್ರದ ಸಂಕೇತ. ಭರತನ ವ್ಯಥೆಗೆ ಹೋಲುವಂಥದು ಬೇರೆ ಇನ್ನೇನೂ ಇರಲಿಲ್ಲ. ರಾಮನಿಗೆ ವಿರುದ್ಧವಾದ ಏನನ್ನು ಕಲ್ಪಿಸಿಕೊಳ್ಳಲೂ ಅವನಿಗೆ ಮನಸ್ಸಿರಲಿಲ್ಲ. ಅಂಥದು ತನ್ನದೆಂದು ಆಕೆ ಶಂಕಿಸಬಾರದು ಎಂದ. ಕೌಸಲ್ಯೆ ಇದನ್ನು ಅರ್ಥಮಾಡಿಕೊಳ್ಳಬಲ್ಲಳು. ಆಕೆ ಅವನನ್ನು ಹತ್ತಿರ ಸೆಳೆದುಕೊಂಡು ಸಮಾಧಾನದ ಮಾತುಗಳನ್ನಾಡಿದಳು. ಮಂತ್ರಿಗಳು, ಮುಖ್ಯ ಪುರೋಹಿತರು, ಋಷಿ ಭರದ್ವಾಜ, ಗುಹ ಇವರಲ್ಲಿ ಉಂಟಾಗಿದ್ದ ಶಂಕೆ ಸಂಶಯಗಳನ್ನು ನಿವಾರಿಸುವುದು ಅವನಿಗೆ ಒಡ್ಡಿದ ಪ್ರತಿಬಂಧಗಳು. ಇವನು ರಾಮನಿಗೆ ಯಾವ ಕೇಡನ್ನೂ ಬಯಸುವುದಿಲ್ಲ ಎಂಬ ನೆಚ್ಚಿಕೆ ಅವರೆಲ್ಲರಿಗೂ ಬೇಕಾಗಿತ್ತು. ಅವನ ಉದ್ದೇಶವನ್ನು ಲಕ್ಷ್ಮಣನು ಹೇಗೆ ತಪ್ಪಾಗಿ ಗ್ರಹಿಸಿದನೆಂಬುದನ್ನು ಈ ಮುಂಚೆ ತಿಳಿಸಿದೆ. ರಾಮನೊಬ್ಬನಿಗೇ ತನ್ನ ತಮ್ಮನ ಮನಸ್ಸು ಪೂರ್ತಿ ನಿಜವಾಗಿ ಅರ್ಥವಾಗಿದ್ದುದು. ಆದರೆ ಅವನಾಗಲಿ, ಹಿರಿಯರು ಇತರರಾಗಲಿ ಒಡ್ಡಿದ ಯಾವ ವಾದವೂ ತನ್ನ ನಿರ್ಣಯವನ್ನು ರಾಮನು ಮಾರ್ಪಡಿಸಲು ಶಕ್ತವಾಗಲಿಲ್ಲ. ಕೈಕಯಿಗೆ–ಆದ್ದರಿಂದ ದಶರಥನಿಗೆ– ಅವನು ಕೊಟ್ಟಿದ್ದ ಮಾತಿನ ಸಮಯಗಳು ತಾನು ಕಾಡಿನಲ್ಲಿರತಕ್ಕದ್ದು, ಭರತನು ಅಯೋಧ್ಯೆಯಲ್ಲಿರತಕ್ಕದ್ದು ಎಂಬವು; ಅವನ್ನು ನಡಸುವುದು ತನ್ನ ತೀರ್ಮಾನ

ಎಂದನು. ಒಂದು ಬಗೆಯಲ್ಲಿ ಮಾತ್ರ ಅಣ್ಣ ತಮ್ಮಂದಿರಿಗೆ ಇಷ್ಟಾರ್ಥ ನೆರವೇರಿತು. ರಾಜ್ಯದ ಹೊರಗೆ ರಾಮನಿರತಕ್ಕದ್ದು, ಭರತನು ಅಯೋಧ್ಯೆಯೆಯಲ್ಲಿ ಉಳಿಯತಕ್ಕದ್ದು ಎಂದಲ್ಲವೆ? ಅಯೋಧ್ಯೆಯಲ್ಲಿ ಇವನಿರುವುದು ರಾಮನ ಕಾರ್ಯ ಭಾರಿಯಾಗಿ; ವನವಾಸ ಮಾಡುತ್ತಿರುವ ರಾಮನು ತನಗೆ ಒಪ್ಪಿ ಕೊಡಬೇಕೆಂದು ಕೇಳಿದ ಒಂದು ಜೊತೆ ಪಾದುಕೆಗಳು ಅಯೋಧ್ಯೆಯಲ್ಲಿ ಅವನ ಪ್ರತಿನಿಧಿಯಾಗಿ ಸಂಕೇತಗಳಾಗಿ ಇರುತ್ತವೆ. ಭರತನು ಬರಿಯ ರಾಜಪ್ರತಿನಿಧಿ ಮಾತ್ರ. ತಾನು ಲೌಕಿಕವಾದ ಸಮಸ್ತ ಸುಖಸೌಕರ್ಯಗಳನ್ನೂ ತ್ಯಾಗ ಮಾಡಿ ರಾಮನು ಕಾಡಿನಲ್ಲಿ ಹೇಗೊ ಹಾಗೆ ಅಯೋಧ್ಯೆಯಲ್ಲಿ ತಾನಿರುತ್ತೇನೆಂದು ವ್ರತಹಿಡಿಯುತ್ತಾನೆ. ನಂದಿಗ್ರಾಮಕ್ಕೆ ರಾಜಧಾನಿಯನ್ನು ಸಾಗಿಸಿ ರಾಜ್ಯಭಾರ ಮಾಡುತ್ತಾನೆ. ಹದಿನಾಲ್ಕು ವರ್ಷಕಾಲ ಅಯೋಧ್ಯೆಯನ್ನು ಪ್ರವೇಶಮಾಡುವುದಿಲ್ಲ. ಭರತನ ನಿಃಸ್ವಾರ್ಥತೆಯನ್ನು ಎಲ್ಲರೂ ಬಹುವಾಗಿ ಮೆಚ್ಚುತ್ತಾರೆ. ಇದು ತನ್ನ ಅಣ್ಣನಲ್ಲಿ ತನಗಿರುವ ಭಕ್ತಿ ವಿಶ್ವಾಸಗಳನ್ನು ತೋರಿಸುವುದೆಂದು ಅಲ್ಲ; ತಾನೂ ತನ್ನ ಮನೆತನದವರೂ ಧರ್ಮವನ್ನು ಅರ್ಥಮಾಡಿಕೊಂಡ ಹಾಗೆ ನಡೆಯುವ ರೀತಿ. ಧರ್ಮದಲ್ಲಿ ತನ್ನ ವಿಶ್ವಾಸ ಒಂದು ಕ್ಷಣಕಾಲವೂ ಬಾಡದು, ಚಲಿಸದು. ತಾನು ಎಂದಿಗಾದರೂ ರಾಜ್ಯವನ್ನು ಬಯಸಿದೆನೆಂದು ತಿಳಿಸುವ ಒಂದು ಮಾತೂ ಕ್ರಿಯೆಯೂ ಭರತನಿಂದ ತಿಳಿದುಬಂದಿಲ್ಲ.

ಮೊದಲಿಂದಲೂ ಸ್ವಂತ ತಾಯಲ್ಲಿನ ಪ್ರೀತಿಗಿಂತ ದಶರಥನಿಗೂ ಕೌಸಲ್ಯೆಗೂ ಇರುವ ಭರತನ ಪ್ರೀತಿ ಅಧಿಕವಾದುದು. ತಾಯ ವಿಷಯದಲ್ಲಿ ಅವನ ಅಭಿಪ್ರಾಯ ಹಿರಿದಲ್ಲ. ಆದರೂ ದೂರದ ಕೇಕಯದಲ್ಲಿ, ತನ್ನ ತಾಯತವರು ರಾಜ್ಯದಲ್ಲಿ ಆಕೆಯನ್ನು ಕುರಿತು ಅವನಯದ ಮಾತುಗಳನ್ನು ಆಡುವ ಅಗತ್ಯ ಇರಲಿಲ್ಲವೇನೊ. ಅವನಿಗಿನ್ನೂ ಅಯೋಧ್ಯೆಯಲ್ಲಿ ನಡೆದಿದ್ದುದು ಏನು ಎಂಬುದು ಆಗ ಗೊತ್ತಿರಲಿಲ್ಲ. ತನ್ನ ಮನೆಯ ಇತರರನ್ನು ಕುರಿತು ಬಹು ಚೆನ್ನಾಗಿ ಮಾತನಾಡುತ್ತಾನೆ. 'ಆತ್ಮಕಾಮಾ ಸದಾ ಚಂಡೀ ಕ್ರೋಧನಾ ಪ್ರಾಜ್ಞಮಾನಿನೀ' – ಸ್ವಾರ್ಥಿ, ಯಾವಾಗಲೂ ಚಂಡಿ, ಕ್ರೋಧ ಬೆಳಸುವವಳು; ಎಲ್ಲರಿಗಿಂತ ತಾನು ಬುದ್ಧಿವಂತಳು ಎಂಬ ಅಹಂತೆಯವಳು ತಾಯಿ ಎಂಬುದು ಅವನ ಅಭಿಪ್ರಾಯ. ಅಯೋಧ್ಯೆಯಲ್ಲಿ ನಡೆದಿದ್ದ ಸಂಗತಿಗಳನ್ನು ಹಂತಹಂತವಾಗಿ ಕೇಳಿ ಇವೆಲ್ಲ ತನ್ನ ಪ್ರಯೋಜನಕ್ಕೂ ಹಿತಗಳಿಗೂ ಎಂದು ಅವಳು ತಿಳಿಸಿದಾಗ ಇನ್ನೂ ಕಠಿಣವಾದ ಮಾತುಗಳನ್ನಾಡುತ್ತಾನೆ. ರಾಕ್ಷಸಿ, ಕುಲಪಾಂಸನಿ; ಗಂಡನನ್ನು ಕೊಂದವಳು; ವಂಶದ ಮೇಲೆ, ಮಗನ ಮೇಲೆ, ತನ್ನ ಮೇಲೆ ದುಷ್ಕೀರ್ತಿ ತಂದವಳು; ತನ್ನನ್ನು ಪ್ರೀತಿಸಿದ ಮನುಷ್ಯನಲ್ಲಿ ಕ್ರೂರವಾಗಿ

ನಡೆದವಳು; ಯಾವ ಬಗೆಯ ಕೇಡಿಗೂ ಈಡಾಗಬಾರದವನೂ ರಾಜ್ಯದ ಅರಸನಾಗಿ ಸ್ವಾಧಿಕಾರದಿಂದ ರಾಜನಾಗಲು ತಕ್ಕವನೂ ಆದವನಿಗೆ ಕೆಡುಕುಂಟುಮಾಡಿದಳು ಎಂದನು. 'ನೀನು ಸತ್ತು ಹೋಗುವುದು ಮೇಲು' ಎನ್ನುವವರೆಗೂ ಹೊಗುತ್ತಾನೆ. ಆದರೆ ಕೈ ಎತ್ತುವುದಿಲ್ಲ. ಕಾರಣ, ತನ್ನ ಮೇಲೆ ರಾಮನಿಗೆ ಅಸಮಾಧಾನ ಉಂಟಾಗುತ್ತದೆ. ಎಂಬುದು. ಶತ್ರುಘ್ನನು ಮಂಥರೆಯನ್ನು ಈ ಎಲ್ಲ ದುಃಖಕ್ಕೂ ಕಾರಣ ಅವಳು ಎಂದು ಶಿಕ್ಷಿಸಲು ಕೈ ಎತ್ತಿದಾಗ ಅಂತಃಪುರದಲ್ಲಿದ್ದ ಎಲ್ಲ ಹೆಂಗಸರೂ ಸೇವಕರೂ ಸಹಾಯಕ್ಕಾಗಿ ಭರತನಿಗೆ ಮೊರೆಯಿಟ್ಟರು. ಹೆಂಗಸಿನ ಮೇಲೆ ಕೈ ಮಾಡಬಾರದೆಂದು ಭರತನು ಶತ್ರುಘ್ನನಿಗೆ ಹೇಳುತ್ತಾನೆ: 'ತ್ವಂ ಚ ಮಾಂಚ..... ನಾಭಿಭಾಷಿಷ್ಯತೇ ಧ್ರುವಂ' ಎಂದರೆ, ತನ್ನೊಡನೆಯಾಗಲಿ, ತಮ್ಮನೊಡನೆಯಾಗಲಿ, ರಾಮನು ಪುನಃ ಮಾತನಾಡುವುದಿಲ್ಲ, ಈ ಸಂಗತಿ ಅವನಿಗೆ ತಿಳಿದುಬಂದರೆ–ಎನ್ನುತ್ತಾನೆ. ಪ್ರತಿಯೊಂದು ಸಂದರ್ಭದಲ್ಲಿಯೂ ರಾಮನು ಸಾಕ್ಷಾತ್ ಎಲ್ಲೆಲ್ಲಿಯೂ ಇದ್ದನೆಂಬಂತೆ ಭರತನಿಗೆ ಭಾವನೆ. ಭರದ್ವಾಜರು ತನಗೆ ಭರತನು ತನ್ನ ತಾಯಿಯ ಪರಿಚಯ ಮಾಡಿಕೊಡಬೇಕೆಂದು ಕೇಳಿದಾಗ ಕೂಡ ಕೈಕೆಯನ್ನು ಕುರಿತ ಅವನ ಮಾತುಗಳು ಇಷ್ಟೇ ಕಠಿಣ. ತಾಯನ್ನು ಯಾವ ಬಗೆಯಲ್ಲಿಯೂ ಆಕ್ಷೇಪಿಸಬಾರದೆಂದು ರಾಮನು ಖಂಡಿತವಾಗಿ ಭರತನಿಗೆ ಹೇಳುತ್ತಾನೆ. 'ತನ್ನ ಮಗನ ಪರವಾಗಿ ಪ್ರಯೋಜನವನ್ನು ತಾಯಿ ಬೇಡುವುದು ಅಸಹಜವಲ್ಲ; ಅಲ್ಲದೆಯೊ ಅವಳಿಗೆ ಇತರ ಹಕ್ಕುಗಳೂ ಇದ್ದವು. ಆಕೆಗೆ ಕರುಣೆ ತೋರಿಸು. ನೀನು ಕೈಕೆಯನ್ನು ತಪ್ಪಾಗಿ ನುಡಿಯಬಾರದು, ನಡೆಯಬಾರದು ಎಂಬುದು ಸೀತೆಯ ನನ್ನ – ನಮ್ಮಿಬ್ಬರ – ಇಚ್ಛೆ.' ರಾಮನನ್ನು ಬೀಳ್ಕೊಂಡು ಅವರು ಹಿಂದಿರುಗುತ್ತಿರುವಾಗ ಇದನ್ನು ಪುನಃ ಒತ್ತಿ ಹೇಳುತ್ತಾನೆ. ಇತರ ತಾಯಿಯರಿಗೆ ತನ್ನ ಪ್ರಣಾಮಗಳನ್ನು ನಿವೇದಿಸಿದಂತೆಯೇ ಕೈಕೆಗೂ ನಿವೇದಿಸುತ್ತಾನೆ. ಹೃದಯಗಳು ತುಂಬಿ ಬಂದಿವೆ; ಕೊರಲುಗಳಲ್ಲಿ ಗದ್ಗದವಿದೆ; ಮಾತು ಹೊರಡವು;– ರಾಮನಿಗೆ ಕೂಡ – ಈ ಬೀಳ್ಕೊಡುಗೆಯ ಸಮಯದಲ್ಲಿ. ಎಲ್ಲರ ಕಣ್ಣುಗಳಲ್ಲಿಯೂ ನೀರು ತುಳುಕುತ್ತದೆ. ಒಂದು ಸಂಗತಿಯಂತೂ ಸರ್ವಥಾ ಸ್ಥಾಪಿತವಾಗುತ್ತದೆ: ಭರತನ ಸ್ವಚ್ಛವಾದ, ನಿಷ್ಕಪಟವಾದ ಹೃದಯ ಎಂಥದೆಂಬುದು. ತಾಯಿಯ ಸಂಚನ್ನೂ ಇಷ್ಟಾರ್ಥವನ್ನೂ ಕುರಿತ ಭರತನಿಗೆ ಸ್ವಲ್ಪವೂ ಸಹಾನುಭೂತಿ ಇಲ್ಲ ಎಂಬಂಶದಲ್ಲಿ ಲವಲೇಶ ಸಂಶಯ ಲಕ್ಷ್ಮಣನಿಗಾಗಲಿ ರಾಮನಿಗಾಗಲಿ ಉಳಿಯಲಿಲ್ಲ. ಹೀಗೆಯೇ ತರುವಾಯ ಒಂದು ಕಾಲದಲ್ಲಿ ಭರತನ ನೆನಪು ರಾಮನಿಗೆ ಬಂದಾಗ ಅವನ

ಪರವಾಗಿ ನೆನಪು ಹಾರ್ದವಾದುದು; 'ಎಲ್ಲ ತಮ್ಮಂದಿರೂ ಭರತನಂತಿರುವುದಿಲ್ಲ' ಎನ್ನುತ್ತಾನೆ–ಸುಗ್ರೀವನಿಗೆ, ಇಷ್ಟು ದೊಡ್ಡ ಸ್ವಾರ್ಥ ತ್ಯಾಗಕ್ಕಾಗಿ ಗುಹನು ತನ್ನ ಹರ್ಷವನ್ನು ವ್ಯಕ್ತಪಡಿಸುತ್ತಾನೆ. ರಾಜತ್ವಕ್ಕೆ ತನ್ನ ಹಕ್ಕು ಅಧಿಕಾರಗಳನ್ನು ಎರಡು ಸಲ ಅವನು ಬಿಟ್ಟುಕೊಡುತ್ತಿದ್ದಾನೆಂದು. ಸುಗ್ರೀವ ವಿಭೀಷಣರು ಸೋದರಿಕೆಯಲ್ಲಿ ಬೇರೆ ಮಾರ್ಗವನ್ನು ಹಿಡಿದವರಾದುದರಿಂದ ಭರತನ ನಡೆವಳಿಕೆ ಎಷ್ಟು ಉದಾರವಾದುದು, ಉನ್ನತವಾದುದು ಎಂಬುದನ್ನು ಕಂಡು ಭಾವಪರವಶರಾಗುತ್ತಾರೆ. ಭರತನು ರಾಮನಿಗೆ ರಾಜ್ಯವನ್ನು ತಿರುಗಿ ಒಪ್ಪಿಸುವಾಗ ಸಂಪತ್ತಿನಲ್ಲಿಯೂ ಶಕ್ತಿಕೀರ್ತಿಗಳಲ್ಲಿಯೂ ದಶಗುಣವಾಗಿ ಅಭಿವೃದ್ಧಿಪಡಿಸಿ ಅದನ್ನು ಒಪ್ಪಿಸುತ್ತಿದ್ದೇನೆ ಎಂದ. ರಾಜಧರ್ಮದ ಒಂದು ಆದರ್ಶಕ್ಕೂ ಸಹೋದರ ಭಕ್ತಿಗೂ ಹದಿನಾಲ್ಕು ವರ್ಷಕಾಲ ತನ್ನನ್ನು ಮೀಸಲು ಮಾಡಿಕೊಂಡಿದ್ದ. ರಾಮನು ಹಿಂದಿರುಗಿ ಬಂದನೆಂದು ಸುದ್ದಿಯನ್ನೊಯ್ದಾಗ ಎಷ್ಟು ಆನಂದದ ಚಿತ್ರ ಅವನದು! ತನ್ನ ಬದುಕು ಸಫಲವಾಯಿತೆಂದು ಮನಸ್ಸು! – ಭರತನ ಚಿತ್ರ ಆಗ ಅದು.

* * * *

ಲಕ್ಷ್ಮಣಭರತರ ನಡುವೆ ಇರುವ ವ್ಯತ್ಯಾಸಗಳನ್ನು ಹಲವೇಳೆ ವಿರಸದಲ್ಲಿ ವ್ಯಾಖ್ಯಾನ ಮಾಡುವುದುಂಟು. ತಾರತಮ್ಯ ವಿವೇಚನೆಗಳು ಬಹು ಮಟ್ಟಿಗೆ ಅನಾವಶ್ಯಕ. ಸೋದರತೆಯ ನಡೆವಳಿಕೆಯಲ್ಲಿ ಅವರು ಕಾಣಿಸುವ ಪ್ರಕಾರಗಳು ಎರಡು ಬೇರೆ ಬೇರೆ ಬಗೆಯವು. ಭರತನು ವಾದಮಾಡಬಲ್ಲವನಾಗಿದ್ದನು; ಲಕ್ಷ್ಮಣನಿಗೆ ಬರುತ್ತಿದ್ದ ಕೋಪದಷ್ಟೇ ಅವನದೂ ಕೋಪ. ವೃದ್ಧ ಪುರೋಹಿತ ವಸಿಷ್ಠ ತೆರೆದ ಸಭೆಯಲ್ಲಿ ಸಿಂಹಾಸನವನ್ನು ಸ್ವೀಕರಿಸೆಂದಾಗ ಕಟುವಾಗಿ ಆಕ್ಷೇಪಣೆ ಮಾಡಿದ. 'ವಿಲಲಾಪ ಸಭಾಮಧ್ಯೇ ಜಗರ್ಹೇಚ ಪುರೋಹಿತಂ' – ಸಭೆಯ ನಡುವೆ ಕಣ್ಣೀರು ಕರೆದನು. 'ಇಕ್ಷ್ವಾಕು ಕುಲದ[೧೯] ಸಂಪ್ರದಾಯಗಳಂತೆ ರಾಜ್ಯ ರಾಮನಿಗೆ ಸೇರಬೇಕಾದ್ದು; ನೀವು ಪ್ರಾಜ್ಞರು; ವೃದ್ಧರು. ಈ ರಾಜ್ಯವನ್ನು ಸ್ವೀಕರಿಸೆಂದು ನನ್ನನ್ನು ಹೇಗೆ ಒಪ್ಪಿಸಬಯಸುತ್ತಿದ್ದೀರಿ?' ಎಂದನು. 'ರಾಜ್ಯವನ್ನು ತೆಗೆದುಕೊಳ್ಳೆಂದು ನನ್ನನ್ನು ಕೇಳಬಹುದೆ? ನಾನೊಲ್ಲೆ. ಇಲ್ಲಿಂದ ಹೋಗಿ ಅದನ್ನು ಅವನು (ರಾಮ) ಸ್ವೀಕರಿಸಬೇಕೆಂದು ಬೇಡಿಕೊಳ್ಳುತ್ತೇನೆ'–[೨೦] ಎಂದನು. ಬೆಳಿಗ್ಗೆ

---

೧೯ ಸ್ವಂತವಾಗಿ ಈ ವಂಶದ ಕೀರ್ತಿಯು ವಿಷಯದಲ್ಲಿ ರಾಮನೇ ಅಭಿಮಾನವಿಟ್ಟುಕೊಂಡಿರುತ್ತಾನೆ. ತಮ್ಮ ಪ್ರಾಣಗಳನ್ನು ಒಪ್ಪಿಸಬೇಕೆಂದು ಸಗರನು ತನ್ನ ಮಕ್ಕಳಿಗೆ ಹೇಳಿದ್ದನಂತೆ.

೨೦ ರಾಮಾಯಣ ಪ್ರವಚನ – ವಿ.ಎಸ್. ಶ್ರೀನಿವಾಸಶಾಸ್ತ್ರೀ, ಪುಟ ೧೯೨

ಮಧ್ಯಾಹ್ನ ರಾತ್ರಿ ಚಿತ್ರಕೂಟದಲ್ಲಿ ರಾಮನನ್ನು ಒಪ್ಪಿಸುವುದಕ್ಕೆ ಎಷ್ಟೋ ಬಗೆಯ ವಾದಗಳನ್ನು ಬೆಳಸಿದ. ಒಂದು ಒಪ್ಪಿಸಲಾರದಾದರೆ ಇನ್ನೊಂದನ್ನು ಬಳಸಿದ; ಅಥವಾ ಒಪ್ಪಿಸಲು ಬೇರೆ ಮಾರ್ಗ ಬಳಸಿದ. ಧರ್ಮಶ್ರದ್ಧೆಯಲ್ಲಿ ಅವರಿಬ್ಬರ ನಡುವೆ ಬೆಳೆದ ಸ್ಪರ್ಧೆಗೆ ಅಯೋಧ್ಯೆಯ ಎಲ್ಲ ಮುಖ್ಯರೂ ಪ್ರಧಾನರೂ ತಾಯಿಯರೂ ಇದಕ್ಕೆ ಸಾಕ್ಷಿಗಳಾಗಿರುತ್ತಾರೆ. ಅವರೆಲ್ಲರನ್ನೂ ತನ್ನ ತೀರ್ಮಾನಕ್ಕೆ ಒಪ್ಪಿಸುವುದು ರಾಮನಿಗೆ ಶಕ್ಯವಾಗಿತ್ತು. ಅದೇ ಸರಿಯಾದ್ದು; ತಾನು ಕಾಡಿನಲ್ಲಿ ಹದಿನಾಲ್ಕು ವರ್ಷ ಇರಬೇಕೆಂದೂ ಆ ಕಾಲದಲ್ಲಿ ಅಯೋಧ್ಯೆಯಲ್ಲಿ ಭರತನು ರಾಜನಾಗಿರಬೇಕೆಂದೂ ದಶರಥನ ಶಾಸನ; ಅದನ್ನು ತಾನು ನಡಸುತ್ತೇನೆಂದು ರಾಮನು ಒಪ್ಪಿಕೊಂಡದ್ದು. ಭರತನಿಗೆ ಉಂಟಾದ ಅರ್ಧ ತೃಪ್ತಿ ರಾಮನು ತನ್ನ ಪಾದುಕೆಗಳನ್ನು ಕೊಡುವಷ್ಟು ಮಟ್ಟಿಗಾದರೂ ಒಪ್ಪಿಕೊಂಡನಲ್ಲ ಎಂಬುದು.

ಲಕ್ಷ್ಮಣನು ತನ್ನ ಅಣ್ಣನೊಂದಿಗೆ ಎಂದೂ ವಾದ ಮಾಡುತ್ತಿರಲಿಲ್ಲ, ಅವನ ಆಲೋಚನೆಯೂ ಇವನದೂ ಮೊದಲು ಬೇರೆಯಾಗಿದ್ದರೂ ಕೂಡ. ರಾಮನಿಗೆ ಸೇವೆ ಸಲ್ಲಿಸುತ್ತಿರುವ ಅವನು ಒಂದು ಮಗುವಿನಂತಿರುತ್ತಾನೆ. ಸ್ವಂತವಾಗಿ ತನ್ನ ಬಯಕೆಗಳಾವುದನ್ನೂ ನಡಸಲು ಇಷ್ಟಪಡುವುದಿಲ್ಲ. ನಿರಂತರವಾಗಿ ರಾಮನ ಬಳಿಯೇ ಇದ್ದು ಅಣ್ಣನಲ್ಲಿ ರೂಢಮೂಲವಾದ ಗೌರವ, ಪೂಜ್ಯಭಾವನೆ ಅವನಲ್ಲಿ ಬೆಳೆದಿರುತ್ತವೆ. ಅಣ್ಣನನ್ನು ಹೊಗಳುವುದರಲ್ಲಿ ಅವನಿಗೆ ಯಾವ ಮಿತಿಯೂ ಇಲ್ಲ. ಈ ಸೋದರರ ವಯಸ್ಸಿನ ಅಂತರ ಹೇಳಿಕೊಳ್ಳುವಷ್ಟು ಹೆಚ್ಚಿನದಲ್ಲ. ಬದುಕಿನ ರೀತಿಗಳು ಒಂದೇ; ಸುಖದುಃಖಗಳಲ್ಲಿ ಭಾಗಿಗಳಾಗಿರುತ್ತಾರೆ; ಅರಣ್ಯ ಜೀವನದಲ್ಲಿ ಇಬ್ಬರ ಹೊಣೆಗಾರಿಕೆಗಳೂ ಒಂದೇ ಬಗೆಯವು; ಯುದ್ಧರಂಗದಲ್ಲಿ ಕೆಳೆಗಳು ಕದನಗಳು ಒಂದೇ ಬಗೆಯವು. ಕೌಸಲ್ಯೆಯ ಅರಮನೆಯಲ್ಲಿ ರಾಮನನ್ನು ಕುರಿತು ಲಕ್ಷ್ಮಣನು ತನ್ನ ಅಭಿಪ್ರಾಯದ ಗುಣವಿಶೇಷವನ್ನು ನುಡಿದಿದ್ದನು: 'ದೇವಕಲ್ಪಂ[೨೧] ಋಜುಂ ದಾಂತಂ ರಿಪೂಣಾಮಪಿ ವತ್ಸಲಂ' (ದೇವಸಮಾನನು; ದೇವರಂಥವನು; ಋಜುಸ್ವಭಾವದವನು; ಸಂಯಮಿ; ಹಗೆಗಳಿಗೂ ವತ್ಸಲನು.) ರಾಮನು ಗುಣದಲ್ಲಿಯೂ ಯೋಗ್ಯತೆಯಲ್ಲಿಯೂ ಹಾಗೆ ಉತ್ತಮನು. ಅಂಥವನಾದರೆ ದೇವನಿಗೆ ಸಮನಲ್ಲವೆ? ದಿವ್ಯವೆಂಬುದು ಇನ್ನಾವುದಿರಬಹುದು? ನರರಾಗಲಿ ದೇವತೆಗಳಾಗಲಿ, ಯುದ್ಧರಂಗದಲ್ಲಿ ಅವರನ್ನು ನಿಗ್ರಹಿಸಬಲ್ಲನೆಂಬುದು

---

೨೧ ಈ ಸಂಗತಿಯನ್ನು ನೆನಪಿನಲ್ಲಿಡಬೇಕು : ಮಾತು 'ದೇವಕಲ್ಪಂ' ಎಂದು; 'ದೇವಂ' ಇಲ್ಲ. ಎಂದೇ ಆಗಲಿ, ದೇವ, ವಿಷ್ಣು ಅಥವಾ ಇಂದ್ರ ಇವರಿಗೆ ಸಮಾನವಾಚಕ ಮಾತ್ರ.

ಅವನ ನಂಬಿಕೆ. ಅವನ ಮನಸ್ಸಿನಲ್ಲಿದ್ದ ಈ ನಿಶ್ಚಲವೂ ಅವನ ಬಲ ಯೋಗ್ಯತಾ ಸಿದ್ಧಿಯೂ ಯೋಧನಾಗಿ ಪ್ರತಿಸಂದರ್ಭದಲ್ಲಿಯೂ ನಿರ್ಭೀತನಾಗಿ ಅವನನ್ನು ನಿಲ್ಲುವಂತೆ ಮಾಡುತ್ತಿದ್ದವು. ಸ್ವತಃ ಲಕ್ಷ್ಮಣವೇ ಮಹಾಯೋಧ. ಲಂಕೆಯ ರಣರಂಗದಲ್ಲಿ ಅದು ಪ್ರಮಾಣಗೊಳ್ಳುವುದಷ್ಟೇ ಅಲ್ಲ, ಹನುಮಂತನು ತನ್ನ ವಾನರ ಸ್ನೇಹಿತರಿಗೆ ಹೇಳಿದ–ಲಕ್ಷ್ಮಣನ ಬಾಣಗಳು ಇಂದ್ರನ ವಜ್ರ ಸಮಾನ; ಅಂಥವು ಅವನಲ್ಲಿ ಅನೇಕವಿವೆ ಎಂಬ – ಮಾತುಗಳು ಇದಕ್ಕೆ ಪುಷ್ಟಿಕೊಡುತ್ತವೆ.

ಲಕ್ಷ್ಮಣನಿಗೂ ಅವನ ಇತರ ಸೋದರರಿಗೂ ನಡೆದ ಯಾವ ಮಾತುಕತೆಗಳನ್ನೂ ರಾಮಾಯಣ ವರ್ಣಿಸುವುದಿಲ್ಲ. ಒಂದೇ ಸಲ ಜನಸ್ಥಾನದಿಂದ ಸೀತೆ ಲಕ್ಷ್ಮಣನಿಗೆ ಕಠಿಣ ನುಡಿಗಳನ್ನು ನುಡಿಯುವಾಗ ಬಿಟ್ಟು, ಒಂದು ಚಿತೆಯನ್ನು ಮಾಡು ಎಂಬ ಸನ್ನಿವೇಶದಲ್ಲಿ ಅವನಿಗೂ ಸೀತೆಗೂ ಇನ್ನಾವ ಮಾತೂ ಬರಲಿಲ್ಲ. ಉತ್ತರಕಾಂಡದಲ್ಲಿ ಅವಳನ್ನು ಕಾಡಿನಲ್ಲಿ ಒಂಟಿಯಾಗಿ ಬಿಟ್ಟುಹೋಗುವ ಮುಂಚೆ ಗರ್ಭಧಾರಣೆ ಮಾಡಿರುವ ತನ್ನ ಸ್ಥಿತಿಯನ್ನು ನೋಡು ಎಂಬ ಸಮಯದಲ್ಲಿ ಕೂಡ ಇತಿಹಾಸಕಾವ್ಯದಲ್ಲಿ ಬಹುಶಃ ಶೀಲದ ಇತರ ಯಾವ ನೆಲಸುಗಳನ್ನೂ ವಿವರಗಳನ್ನೂ ಕಾಣಿಸುವುದು ಅಪರೂಪ. ಆ ಬಗೆಗೆ ಏನನ್ನಾದರೂ ಕವಿ ಕೊಟ್ಟಿದ್ದಿದ್ದರೆ ನಾವು ಅವನಿಗೆ ಕೃತಜ್ಞರಾಗಿರಬಹುದಿತ್ತು. ಹದಿನಾಲ್ಕು ವರ್ಷಗಳ ತರುವಾಯ ಕಿರೀಟಧಾರಣೆಯಾಗುವ ಮುಂಚೆ ರಾಮನ ಗಡ್ಡ ಮೀಸೆಗಳನ್ನು ('ಶ್ಮಶ್ರುಕರ್ಮ') ಸಂಸ್ಕರಿಸುವ ಕಾರ್ಯದಲ್ಲಿ ಶತ್ರುಘ್ನನು ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದನು ಎಂಬುದು ನಿಜ. ಇನ್ನೊಮ್ಮೆ ಶತ್ರುಘ್ನನು ಕಾಣಿಸಿಕೊಂಡಿರುವುದು ಗಿಡ್ಡಾಗಿ, ದಪ್ಪ, ದಪ್ಪಗೆ, ಕೆಡುಕುಬುದ್ಧಿಯವಳಾಗಿ, ಕೈಕೆ ಕೊಟ್ಟಿದ್ದ ಒಡವೆ ವಸ್ತ್ರಗಳನ್ನು ಧರಿಸಿ ಆಡಂಬರದಿಂದ ಮಂಥರೆ ಓಡಿಯಾಡುತ್ತಿದ್ದಾಗ. ರಾಮಾಯಣ 'ಜಾತಿದಾಸೀ', 'ಯಥಾಜಾತಾ' ಎಂದು ಅವಳನ್ನು ವರ್ಣಿಸುತ್ತದೆ (ಹುಟ್ಟು ಗಲಾಮಳು, ಅವಳು ಎಲ್ಲಿ ಹುಟ್ಟಿದ್ದಳೊ ತಂದೆತಾಯಿಗಳಾರೊ ಯಾರೂ ಅರಿಯರು). ಕೇವಲವಾಗಿ, ಪೂರ್ತಿಯಾಗಿ ಅವಳ ಪ್ರಯೋಜನ ಕೈಕೆಯ ಶಕ್ತಿ ಮಾನಗಳನ್ನು ಉಳಿಸುವುದು. ಮೊದಲಿಂದ ಕೈಕೆಯನ್ನು ಸಾಕಿದವಳು. ಶತ್ರುಘ್ನನು ಅವಳಿಗೆ ಶಿಕ್ಷೆ ಕೊಟ್ಟಿದ್ದಾನೆ. ನೆಲಕ್ಕೆ ಹಾಕಿ ಅವಳ ದೇಹವನ್ನು ತೀಡಿದ್ದಾನೆ. ಈ ಸಂಗತಿ ಭರತನ ಗಮನಕ್ಕೆ ಬಂದಾಗ ಅವಳನ್ನು ಬಿಟ್ಟು ಬಿಡೆಂದು ಭರತನು ತಮ್ಮನಿಗೆ ಹೇಳುತ್ತಾನೆ. ರಾಣಿ ಕೌಸಲ್ಯೆಯಿಂದ ಬೀಳ್ಕೊಂಡಾಗ ಸ್ವಂತ ಬಡತಾಯಿ – 'ಸೃಷ್ಟಸ್ತ್ವಂ ವನವಾಸಾಯ' – ನೀನು ಹುಟ್ಟಿರುವುದೇ ವನವಾಸಕ್ಕೆ ಎಂದು ಲಕ್ಷ್ಮಣನಿಗೆ ಹೇಳುತ್ತಾಳೆ. ಅವನ ಜೀವದ

ಭಾಗವನ್ನು ಕುರಿತು ಅವಳು ವ್ಯಾಖ್ಯಾನ ಮಾಡುತ್ತಿರುವ ಹಾಗಿದೆ. ಸಾಧ್ವಿ ಸೀತೆಯ ವಿಷಯದಲ್ಲಿ ಇದು ಹೇಗೆ ವಿಧಿವಿಲಾಸವಾಗಿ ನೆರವೇರುತ್ತಿತ್ತೊ ಅದನ್ನು ಸೂಚಿಸುವಂತಿದೆ ಆ ಮಾತು. ರಾಮನಿಗೆ ಸೀತೆ ಹೇಳುತ್ತಾಳೆ: ದೈವಜ್ಞರು ಈ ಹಿಂದೆಯೇ ಹೇಳಿದ್ದಾರೆ: ತಾನು ಕಾಡಿನಲ್ಲಿ ವಾಸಮಾಡಬೇಕಾಗಿದೆ ಎಂದು.[೨೨] ಸಂತತವಾಗಿ ಅಣ್ಣ ರಾಮನಿಗೆ ಸೇವೆ ಸಲ್ಲಿಸಲು ಇರುವ ಪುಣ್ಯವನ್ನು ಕುರಿತು ಭರತನಿಗೆ ಅಸೂಯೆ. ಭರತನ ಮೇಲೆ ಸ್ವಂತ ಕಾರಣಗಳಿಂದಾಗಿ ಲಕ್ಷ್ಮಣನಿಗೆ ಅಸಮಾಧಾನವಿರುವಂತೆ ಕಾಣುವುದಿಲ್ಲ. ಭರತ ಲಕ್ಷ್ಮಣರ ಎರಡು ನಿಲವು ರೀತಿಗಳು ಕೈಂಕರ್ಯದಲ್ಲಿ ಬೇರೆ ಬೇರೆಯಾಗಿ ವಿವೇಚಿಸಬೇಕಾದವು. ಭಕ್ತಿ ಪ್ರೀತಿ ಎರಡೂ ಕಡೆ ಒಳ್ಳೆಯವು; ಮಹತ್ತಾದವೇ. ಶೀಲಸಾಧನೆಯಲ್ಲಾಗಲಿ ನಡತೆಯಲ್ಲಾಗಲಿ ಅವರು ಮಾದರಿಯಾಗಿದ್ದಾರೆ;– ತಮ್ಮ ತಮ್ಮ ಬಗೆಯಲ್ಲಿ. ಭಾರತೀಯ ಸಾಹಿತ್ಯದಲ್ಲಿ ಇದನ್ನು ಹೋಲುವಂತಹ ನಿದರ್ಶನ ಇನ್ನೊಂದಿಲ್ಲ. ರಾಮನಿಗೆ ಈ ಇಬ್ಬರ ನಿಃಸ್ವಾರ್ಥ ಪ್ರೀತಿಯಲ್ಲಿ ಕಾಣಿಸುವ 'ಬಂಧುಪ್ರೇಮ', ಸೋದರಿಕೆ, ಅವರಿಗೆ ಅವನಲ್ಲಿರುವ ವಿಶ್ವಾಸದ ಕೊಡುಗೆ ಹೇಗೊ ಇಂತಹ ಇಬ್ಬರು ಮಹಾನುಭಾವರಿಗೆ ರಾಮನು ಸ್ಫೂರ್ತಿ ಕೊಟ್ಟಿದ್ದನೆಂಬುದಕ್ಕೆ ದೊಡ್ಡ ಕಾಣಿಕೆ.

### ೫. ಸೀತೆ

ಸೀತೆಯ ಹೆಸರು, ಕತೆಗಳಿಂದ ರಾಮಾಯಣದ ಹಿರಿಮೆ ಹೆಚ್ಚಿದೆ. ಅದರ ಒಂದು ವರ್ಣನೆ 'ಸೀತಾಯಾಃ ಚರಿತಂ ಮಹತ್'. ಮೊದಲ ಕಾಲದಿಂದಲೂ ಆಕೆಯ ಪರವಾಗಿ ಪ್ರೀತಿಯನ್ನೂ ಗೌರವವನ್ನೂ ನಮ್ಮ ಜನಕ್ಕೆ ಉಂಟು ಮಾಡಿರುವುದು ಆಕೆಯ ವ್ಯಕ್ತಿತ್ವ ಮತ್ತು ಶೀಲ: ಅವುಗಳ ಗರಿಮೆ. ದುರ್ಬಲಳಾದ, ಗಂಡನಿಗೇ ಅಂಟಿಕೊಂಡಿರುವ ನಾಯಕಿ ಅಲ್ಲ ಅವಳು; ಅವಳನ್ನು ಲಕ್ಷ್ಯ ಮಾಡಬೇಕಾದ್ದಿಲ್ಲವೆಂದು ಎಂದಿಗೂ ಎಣಿಸುವ ಹಾಗಿರಲಿಲ್ಲ. ಆಕೆಯ ಅಭಿಮಾನ, ಗಾಂಭೀರ್ಯ ಉನ್ನತವಾದವು. ಅವಳ ಶೀಲದಲ್ಲಿ ಒಂದು ಸವಿಯಿತ್ತು; ಪ್ರೇಮಲ ಸ್ವಭಾವದವಳಾಗಿದ್ದರೂ ಅಗತ್ಯ ಬಿದ್ದಾಗ ತನ್ನ ಮನಸ್ಸಿನಲ್ಲಿ ಇದ್ದುದನ್ನು ನುಡಿಯುವವಳೇ. ಅಂತಹ ಹೆಂಡತಿಯೊಡನೆ ಯಾವ ಗಂಡನೂ ತುಂಬಾ ಎಚ್ಚರಿಕೆಯಿಂದ, ಮರ್ಯಾದೆಯಿಂದ ನಡೆದುಕೊಳ್ಳಬೇಕು. ರಾಮನ ಬದುಕಿನಲ್ಲಿ

೨೨ ಉತ್ತರ ಕಾಲದಲ್ಲಿ ಈ ಅದೃಷ್ಟ ಹೆಚ್ಚು ಕನಿಕರ ತರುವಂಥದು : ಅವಳನ್ನು ವಿಧಿ ಅಟ್ಟಿ ಹೋಗುವಂತೆ.

ಇಂಥ ಹೆಂಡತಿ ಇದ್ದುದು ಒಂದು ಪುಣ್ಯಾಂಶವೇ ಎನ್ನಬೇಕು. ಅವನ ಸಮಸ್ತ ಭಾಗ್ಯೋದಯದಲ್ಲಿಯೂ ಆಕೆ ಅವನೊಡನೆ ಇರುತ್ತಾಳೆ: ಆ ಗಂಡನ ಕಡೆಯಿಂದ ಒಂದು ದೃಷ್ಟಿಯಲ್ಲಿ ಇದಕ್ಕೆ ಸಮನಾದ ದೊಡ್ಡತನ ಬರಲಿಲ್ಲವೇನೊ. ಏಕೆಂದರೆ, ಅವನಿಗೆ ತನ್ನ ರಾಜತ್ವದ ಹೊಣೆಗಾರಿಕೆ ಮೊದಲೆಣಿಕೆ. ಸರಿಯೇ. ಅವನ ನಡತೆ ಅವಳಿಗೆ ಅರ್ಥವಾಗುತ್ತದೆ; ಆದುದರಿಂದಲೇ ನಿಷ್ಠಳಾಗಿ ನಿಲ್ಲುತ್ತಾಳೆ. ಪುನಃ ತನ್ನ ಶುಚಿಗೆ ಪ್ರಮಾಣವಾಗಿ ಪ್ರತಿಜ್ಞೆ ಮಾಡೆಂದು ಹೇಳಿದಾಗ ಮಾತ್ರ ತನ್ನ ತಾಯ ಮಡಿಲನ್ನು ಹೋಗಿ ಸೇರಿಕೊಳ್ಳಬಯಸುತ್ತಾಳೆ.

ಅವಳ ಬದುಕು ವಾಸ್ತವ ಆದರ್ಶಗಳ ಒಂದು ಅಸಾಮಾನ್ಯ ಮಿಶ್ರಣ. ಒಂದು ಯಾಗಕ್ಕೋಸ್ಕರವಾಗಿ ನೆಲವನ್ನು ಉಳುತ್ತಿರುವಾಗ ಜನಕ ಮಹಾರಾಜನಿಗೆ ಹೊಲದ ನೇಗಿಲ ಸಾಲಲ್ಲಿ ಸಿಕ್ಕಿದಳಂತೆ (ಸೀತಾ = ಉತ್ತ ನೇಗಿಲ ಸಾಲು). ರಾಜನು ಅವಳನ್ನು ಅರಮನೆಗೆ ತಂದು ಮಗಳಂತೆ ಸಾಕಿ ದೊಡ್ಡವಳಾಗಿ ಮಾಡುತ್ತಾನೆ. ಚೆಲುವೆಯೂ ಸೌಮ್ಯ ಸ್ವಭಾವದವಳೂ ಆದ ಅವಳು ಜನಕನ ಪ್ರೀತಿಗೆ ಪಾತ್ರಳಾದಳು. ವಯಸ್ಸಿಗೆ ಬಂದಾಗ ಅವಳಿಗೆ ತಕ್ಕ ವರನನ್ನು ಕಂಡು ಹಿಡಿಯುವುದರಲ್ಲಿ ಚಿಂತೆಯಾಗಿತ್ತು.[೨೩] ಯೋಗ್ಯನಾದ ವರನನ್ನು ಕಂಡು ಹಿಡಿದು ಪರೀಕ್ಷೆ ಮಾಡುವಂತೆ ಜನಕನು ಒಂದು ನಿರ್ಬಂಧವನ್ನು ಹಾಕಿದ. ಅವನಲ್ಲಿದ್ದ ಶಿವಧನುಸ್ಸನ್ನು ಅವರೆಗೂ ಇನ್ನಾರಿಗೂ ಬಗ್ಗಿಸಿ ಹೆದೆ ಕಟ್ಟಲು ಶಕ್ಯವಾಗಿರಲಿಲ್ಲ. ಹಾಗೆ ಮಾಡತಕ್ಕವನು ಸೀತೆಗೆ ತಕ್ಕ ವರನಾಗುತ್ತಾನೆ ಎಂದು ಘೋಷಿಸಿದ್ದ. ವಿಶ್ವಾಮಿತ್ರನು ತನ್ನ ಯಾಗವನ್ನು ಪೂರ್ತಿಮಾಡಿ ಜನಕನ ಸಭೆಗೆ ಯಾಗವನ್ನು ನೋಡಲು ಹೋಗುತ್ತಿರುವಾಗ ಋಷಿ ಈ ಅಣ್ಣ ತಮ್ಮಂದಿರನ್ನು ಅವನ ಆಸ್ಥಾನಕ್ಕೆ ಕರೆದುಕೊಂಡು ಹೋಗಿ ಆ ಬಿಲ್ಲನ್ನು ತೋರಿಸಲು ಕೇಳಿ, ಧನುಸ್ಸನ್ನು ಬಾಗಿಸಿ ಅದನ್ನು ಸುಲಭವಾಗಿ ಮರಿಯಲು ರಾಮನು ಶಕ್ತವಾದ. ಸೀತೆಗೆ ರಾಮನು ತಕ್ಕ ವರನೆಂದು ನಿರ್ಣಯವಾಯಿತು. ಎರಡೂ ಕಡೆಯ ತಾಯಿತಂದೆಯರು ಸೇರಿ ವಿವಾಹ ಮಹೋತ್ಸವವನ್ನು ನೆರವೇರಿಸಿದರು. ಅಗ್ನಿಸಮಕ್ಷಮದಲ್ಲಿ ಜನಕನು ಆಕೆಯನ್ನು ಒಪ್ಪಿಸುವಾಗ –

ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ
ಪತಿವ್ರತಾ ಮಹಾಭಾಗಾ ಛಾಯೇವ ಅನುಗತಾ ಸದಾ

---

೨೩. ಆಗ ಅವಳ ವಯಸ್ಸು ಎಷ್ಟಿದ್ದಿರಬಹುದು? – ರಾಮಾಯಣದಲ್ಲಿ ಆ ಬಗೆಗೆ ಬಂದಿರುವ ಮಾತುಗಳು ಒಂದಕ್ಕೊಂದು ಹೊಂದುವುದಿಲ್ಲ.

(ಇವಳು ಸೀತೆ, ನನ್ನ ಮಗಳು; ನಿನ್ನ ಕಾರ್ಯಗಳಲ್ಲೆಲ್ಲ ಒಡನಾಡಿಯಾಗಿರುತ್ತಾಳೆ; ಈ ಸಜ್ಜನಳನ್ನು ಸ್ವೀಕರಿಸು; ಅವಳ ಕೈ ಹಿಡಿ; ನಿನಗೆ ನಿಷ್ಠಳಾಗಿ ಭಕ್ತಳಾಗಿ ಹೆಂಡತಿಯಾಗುತ್ತಾಳೆ. ಮಹಾಭಾಗೆಯಾಗಿರುತ್ತಾಳೆ. ಸದಾ ನೆಳಲಂತೆ ನಿನ್ನನ್ನು ಅನುಸರಿಸುತ್ತಾಳೆ.)

ಎನ್ನುತ್ತಾನೆ. 'ಸಹಧರ್ಮಚರೀ', 'ಛಾಯೇವ ಅನುಗತಾ ಸದಾ' ಎಂಬವು ಬಹು ಅರ್ಥಪೂರ್ಣ ಮಾತುಗಳು. ಆದರೂ 'ಛಾಯೇವ' ಎಂಬುದನ್ನು ಹೀನಾರ್ಥದಲ್ಲಿ ತೆಗೆದುಕೊಳ್ಳಬಾರದು; – ಎಂದಿಗೂ ಅಗಲದೆ ನಿಲ್ಲುತ್ತಾಳೆ ಎಂಬ ಪೂರ್ಣಾರ್ಥದಲ್ಲಿ ಮಾತ್ರ ತೆಗೆದುಕೊಳ್ಳಬೇಕು. ಸಹಧರ್ಮ ಚಾರಿಣಿಯಾಗಿ ತಾನಿರಬೇಕೆಂದು ಕೇಳಿ ನಿಲ್ಲುತ್ತಾಳೆ; ಬಿಸಿಲಿರಲಿ, ಗುಡುಗು ನಡುಗಿರಲಿ, ಅವನನ್ನು ಅನುಸರಿಸುತ್ತಾಳೆ. ಕಡೆಯ ವನವಾಸಕ್ಕಾಗಿ ಆಕೆಯನ್ನು ಅನ್ಯಾಯವೆನಿಸುವ ರೀತಿಯಲ್ಲಿ ಕಳಿಸಿಬಿಟ್ಟಾಗಲೂ ಅವಳಾಡಿದ ಮಾತುಗಳು ಇವು :

"ಮನಸ್ಸಿನಲ್ಲಾಗಲಿ ಶರೀರದಲ್ಲಿಯಾಗಲಿ, ನಾನು ನಿನಗೆ ತಪ್ಪಾಗಿ ನಡೆದುಕೊಂಡುದಿಲ್ಲ; ನಿನ್ನ ಹೃದಯಕ್ಕೆ ಗೊತ್ತಿದೆ – ನಾನು ನಿನಗೆ ಅಗತ್ಯವೆಂದು. ನನ್ನ ಶೀಲದಲ್ಲಿ ಒಂದು ಕರೆಯಿಲ್ಲ. ಆದರೂ ನಿನ್ನ ಪ್ರಜೆಗಳು ನನ್ನ ಶುದ್ಧಿಯಲ್ಲಿ ಸಂಶಯಪಟ್ಟಿದ್ದಾರಾದ್ದರಿಂದ ನೀನು ನನ್ನನ್ನು ಹೊರಗೆ ಹಾಕುತ್ತಿದ್ದೀಯೆ. ಆಗಲಿ: ನಿನ್ನ ಮಾನವೂ ನಿನ್ನ ಪ್ರಜೆಗಳ ಮೇಲಿನ ಪ್ರೀತಿ ಪ್ರೇಮವೂ ನಿನಗೆ ಕರ್ತವ್ಯಗಳು. ಅವರ ಎಣಿಕೆಯಲ್ಲಿ ನಿನ್ನ ಸಚ್ಚಾರಿತ್ರವನ್ನು ಉಳಿಸಿಕೊಳ್ಳಲು ನೀನು ನನ್ನನ್ನು ತ್ಯಾಗ ಮಾಡಬೇಕಾಗಿದ್ದರೆ ತ್ಯಾಗಕ್ಕೆ ನಾನು ತೃಪ್ತಿಪಡುತ್ತೇನೆ. ನಿನ್ನ ಪ್ರಜೆಗಳಿಗೆ ನೀನು ಸೇವೆ ಸಲ್ಲಿಸಬೇಕೆಂದಿರುವಂತೆ ನಾನು ನಿನ್ನ ಪರವಾಗಿ ಸೇವೆ ಸಲ್ಲಿಸುತ್ತೇನೆ; ಅದಕ್ಕೆ ಕಡಮೆಯಾಗಲ್ಲ; ಅಧಿಕವಾಗಿಯೇ."

ಅಯೋಧ್ಯೆಯಲ್ಲಿ ರಾಮನೊಡನೆ ಸುಖಸಂತೋಷದ ದಿನಗಳನ್ನು ಕಳೆದೆನೆಂದು ಸೀತೆ ಅನಸೂಯೆಗೆ ಹೇಳುತ್ತಾಳೆ. ತನ್ನನ್ನು ಅಯೋಧ್ಯೆಯಲ್ಲಿ ಬಿಟ್ಟು ಒಂಟಿಯಾಗಿ ಕಾಡಿಗೆ ಹೋಗುವುದು ಅವನಿಗೆ ಅಶಕ್ಯಮಾಡಿದೆ ಎಂದಳು. ಅಲ್ಲಿನ ಅಪಾಯಗಳು ಅಸೌಕರ್ಯಗಳು ತನ್ನನ್ನು ಬೆದರಿಸುವುದಿಲ್ಲವೆಂದು ಹೇಳಿದೆನೆಂದಳು. ಅವರಿಗೆ ಕಾಡು ಶಕ್ಯವಾದರೆ ತನಗೂ ಶಕ್ಯವೇ; ತಾನು ಅವನೊಡನೆ ಇದ್ದರೆ ಅದು ಅರಣ್ಯವಾದರೇನು? ಅಯೋಧ್ಯೆಯಲ್ಲಿ ಬದುಕಿದಷ್ಟೇ ತನ್ನ ಬದುಕು ನೆಮ್ಮದಿಯಾಗುತ್ತದೆಂದೆ – ಎಂದಳು. ತನ್ನನ್ನು ಜೊತೆಗೆ ಕರೆದೊಯ್ಯಲು ವಾದಗಳನ್ನೆತ್ತಿದಾಗ ಅವಳಿಗೆ ನಿರಾಸೆ ಉಂಟಾಗಿ ಅವಳನ್ನು ಹಿಂದೆ ಬಿಟ್ಟುಹೋಗಲು ತಾನಾಡಿದ ಮಾತುಗಳು ದುಸ್ಸಹವಾದುವೆಂದಳು. ಅವನಾಡಿದ ಒಂದು ಮಾತನ್ನು ತಿರಿಚಿ 'ಸ್ವಯಂ ತು ಭಾರ್ಯಾಂ ಕೌಮಾರೀಂ ಚಿರಂ ಅಧ್ಯುಷಿತಾಂ ಸತೀಂ । ಶೈಲೂಷ್ಯೈವ ಮಾಂ ರಾಮ ಪರೇಭ್ಯೋ ದಾತುಮಿಚ್ಛಸಿ' – ನಾನು ಚಿಕ್ಕವಯಸ್ಸಿನ ಹೆಂಡತಿ; ಸ್ವಲ್ಪ ಕಾಲ ನಿನ್ನೊಡನೆ

ಬಾಳಿದ್ದೇನೆ. ಒಬ್ಬ ನರ್ತಕನಂತೆಯೊ ನಟನಂತೆಯೊ ನನ್ನನ್ನು ಇನ್ನೊಬ್ಬನಿಗೆ ಕೊಟ್ಟು ಹೋಗುತ್ತೀಯ ?– ಎಂದಿದ್ದಳು; ಅಥವಾ, ನನ್ನನ್ನು ರಕ್ಷಿಸುವುದಕ್ಕೆ ಸಾಕಾಗುವಷ್ಟು ಪೌರುಷ ನಿನ್ನಲ್ಲಿ ಇಲ್ಲವೆ? ನನ್ನತಂದೆ 'ಸ್ತ್ರಿಯಾಂ ಪುರುಷ ವಿಗ್ರಹಂ' ಅಳಿಯನನ್ನು ತಂದನೆ? ಎಂದಳು. ಆ ಮಾತುಗಳು ಟೀಕೆಗೆ ಆಡಿದುವಲ್ಲ: 'ಪ್ರಣಯಾಚ್ಚ ಅಭಿಮಾನಾಚ್ಚ ಪರಿಚಿಕ್ಷೇಪ ರಾಘವಂ' – ಅವನಲ್ಲಿದ್ದ ಪ್ರೀತಿಯೂ ಗೌರವವೂ ಅವಳ ಬಾಯಿಂದ ಅಂಥ ಮಾತನ್ನಾಡಿಸಿದ್ದುವು. ರಾಮನಿಗೆ ಅರ್ಥವಾಗುತ್ತದೆ ಆಕೆಯ ಭಾವ ಎಷ್ಟು ಆಳವಾದುದು, ಪ್ರಾಮಾಣಿಕವಾದುದು ಎಂದು. 'ವಿಸಂಜ್ಞಾಂ ಇವ ದುಃಖಿತಾಂ' ಆಗಿದ್ದಳು. ದುಃಖದಿಂದ ಅವಳಿಗೆ ಪ್ರಜ್ಞೆ ಹೋದಂತಿತ್ತು. ಅವಳನ್ನು ಅಪ್ಪಿಕೊಂಡು – 'ನ ದೇವಿ ತವ ದುಃಖೇನ ಸ್ವರ್ಗಮಪಿ ಅಭಿರೋಚಯೇ' – ನಿನಗೆ ದುಃಖ ಕಾರಣವಾದರೆ ನನಗೆ ಸ್ವರ್ಗ ಕೂಡ ರುಚಿಸುವುದಿಲ್ಲ; ನಿನ್ನನ್ನು ನೋಡಿ ಕೊಳ್ಳಲು ಶಕ್ತನಾಗಿದ್ದೇನೆ; ಕಾಡಲ್ಲಿ ರಕ್ಷಿಸುತ್ತೇನೆ: 'ಯತ್ ಸೃಷ್ಟಾಸಿ ಮಯಾ ಸಾರ್ಥಂ ವನವಾಸಾಯ ಮೈಥಿಲಿ .....ನ ವಿಹಾತುಂ ಮಯಾ ಶಕ್ಯಾ ಕೀರ್ತಿಃ ಆತ್ಮವತಾ ಯಥಾ.' ಜೊತೆಯಲ್ಲಿ ಕರೆದುಕೊಂಡು ಹೋಗದಿದ್ದರೆ ತನ್ನ ಪ್ರಾಣ ಕಳೆದುಕೊಳ್ಳುತ್ತೇನೆಂದಳು: 'ಭಕ್ತಾಂ, ಪತಿವ್ರತಾಂ, ದೀನಾಂ, ಮಾಂ ಸಮಾಂ ಸುಖ ದುಃಖಯೋಃ ನೇತುಮರ್ಹಸಿ ಕಾಕುತ್ಸ್ಥ... ಯದಿ ಮಾಂ ದುಃಖಿತಾಂ ಏವಂ ವನಂ ನೇತುಂ ನ ಚೇಚ್ಛಸಿ । ವಿಷಂ ಅಗ್ನಿಂ ಜಲಂ ವಾಹಂ ಆಸ್ಥಾಸ್ಯೇ ಮೃತ್ಯುಕಾರಣಾತ್.' ಅಂಥ ಒಬ್ಬಳ ಬೇಡಿಕೆಯನ್ನು ನಿರಾಕರಿಸು ಹಾಗಿರಲಿಲ್ಲ. ರಾಮಲಕ್ಷ್ಮಣರಿಗೆ ಅವಳು ಚಿಂತೆಯ, ತೊಂದರೆಯ ಕಾರಣದಲ್ಲಿ ಹೊರೆಯಾಗುತ್ತಾಳೆ ಎಂದು ಹೇಳುವುದು ಅಗತ್ಯವಿರಲಿಲ್ಲ. ಇಲ್ಲಿ ಕವಿ ಉಪಯೋಗಿಸುವ ಒಂದು ವಾಕ್ಯಖಂಡ 'ಬ್ರಹ್ಮಚಾರಿಣಿ' ಎಂಬುದು ತುಂಬ ಜಾಣತನದಿಂದ ಕವಿ ಆರಿಸಿದ್ದು. ವನವಾಸ ಕಾಲದ ಇತರ ಪರಿಣಾಮಗಳಿಗೆ ವಿರುದ್ಧವಾಗಿ ಇದು ವಿಮಾ ಕಾರ್ಯವಾಗುತ್ತದೆ[೨೪] ಕೂಡ. ಕಾವ್ಯಕರ್ತೃ ಸ್ಪಷ್ಟವಾಗಿ ಬಳಸಿದ ಒಂದು ತಂತ್ರ ಇದು. ಆ ಮೇಲಿನ ಎಲ್ಲ ಟೀಕೆಗಳಿಂದಲೂ ಅವನನ್ನು ಪಾರುಮಾಡುತ್ತದೆ. ಇಲ್ಲವಾಗಿದ್ದರೆ ಸಣ್ಣ ವಯಸ್ಸಿನ ಚಟುವಟಿಕೆಯುಳ್ಳ ಇಬ್ಬರು ಸುಂದರ ಅವರಣದಲ್ಲಿದ್ದುಕೊಂಡು ಆಪ್ತವಾಗಿ ಜೀವನ ನಡಸುತ್ತಿದ್ದವರು ೧೨–೧೩ ವರ್ಷಗಳ ಕಾಲ ಘನವಂತರಾಗಲಿಲ್ಲ ಎಂಬ ಆಪಾದನೆ ಹೊರಿಸಬೇಕಾಗುತ್ತದೆ. ಅಣ್ಣ ತಮ್ಮಂದಿರು ಆಕೆಯನ್ನು ಎಚ್ಚರದಿಂದ

---

೨೪ ಶ್ರೀ ಮಾಸ್ತಿಯವರು ಇದನ್ನು ನನಗೆ ನೆನಪುಕೊಟ್ಟರು.

ನೋಡಿಕೊಳ್ಳಬಲ್ಲವರಾಗಿದ್ದರು. ಮೂವರೂ ಸೇರಿ ಒಂದು ಅಖಂಡ ಜೀವಖಂಡದಂತಿದ್ದರು. ವನವಾಸಕ್ಕೆ ಹೊರಟು ಅಯೋಧ್ಯೆಯೊಡನೆ ಎಲ್ಲ ಸಂಬಂಧಗಳೂ ಕಡಿದು ಹೋದಾಗ ಲಕ್ಷ್ಮಣನು ಮುಂದೆ ನಡೆದು ದಾರಿ ಬಿಡಿಸುತ್ತಾನೆ; ಅವರ ವಿಶ್ರಾಂತಿಗೆ ಎಡೆ ಮಾಡಿಕೊಡುತ್ತಾನೆ. ಅಂಥದನ್ನು ಕಂಡು ಎಷ್ಟು ವ್ಯಥೆ ಅವನಿಗೆ ಇದ್ದರೂ. ಅಯ್ಯೋಧ್ಯೆಯ ಗುಡಿಯನ್ನು ಬಿಟ್ಟು ಮೊದಲ ರಾತ್ರಿ ಹೊರಗಿರಬೇಕಾದಾಗ ಸುಮಂತ್ರನಿಲ್ಲದೆ ಅವರವರೇ ಮೂವರು. ಸೀತೆಯನ್ನು ನೋಡಿಕೊಳ್ಳುವ ಕಾರ್ಯಭಾರ ಸೋದರರ ಮೇಲೆ ಪೂರ್ತಿ ಬೀಳುತ್ತದೆ. ಲಕ್ಷ್ಮಣನನ್ನು ಕುರಿತು ದುಃಖದ ಈ ಮಾತುಗಳನ್ನು ಹೇಳುತ್ತಾನೆ ರಾಮ: 'ಕೃತಕಾಮಾತು ಕೈಕೇಯೀ ತುಷ್ಟಾ ಭವಿತುಮರ್ಹತಿ.' ಆಕೆ ವಿಧಿಸಿದ ಸಮಯ ತಪ್ಪು : ವೃದ್ಧ ರಾಜನಿಗೂ ತಾಯಿಯರಿಗೂ ಅಪಾಯ ತರುವಂಥದು; ತನ್ನ ತಂದೆಯಲ್ಲಿ ವಿವೇಕವನ್ನೂ ಆಲೋಚನಾ ಶೂನ್ಯತೆಯನ್ನೂ ಹೇಗೆ ತರಬಲ್ಲದು ಎಂಬ ಮಾನವದೌರ್ಬಲ್ಯವನ್ನು ಮನಸ್ಸಿಗೆ ತಂದುಕೊಳ್ಳುತ್ತಾನೆ. ಸಮಸ್ತ ಪ್ರಪಂಚವನ್ನೂ ತಾನು ಗೆಲ್ಲಬಲ್ಲೆ; ತನ್ನ ಬಾಣ ತನ್ನನ್ನು ಎಲ್ಲ ವಿರೋಧಗಳಿಂದಲೂ ದಾಟಿಸಬಲ್ಲದು ಎಂಬುದನ್ನು ಅವನು ಅರಿತಿದ್ದ. ಅವನನ್ನು ತಡೆಯುತ್ತಿದ್ದ ಜೀವನ ತತ್ತ್ವ 'ನನು ವೀರ್ಯಂ ಅಕಾರಣಂ' ಎಂಬುದು. ಸಾಕಷ್ಟು ಕಾರಣವಿಲ್ಲದೆ ಬಲಪ್ರಕಾಶ ಮಾಡಬಾರದು ಎಂಬ ಈ ಮಾತು ವೀರವಿಶ್ವಾಸ. ಸತ್ಕಾರಣ ಇದ್ದಾಗಲೂ ಬಲಪ್ರಕಾಶನ ಕಡೆಯ ನಿರ್ಣಯವಾಗಬೇಕು – ಎಂಬಂಥದು ಇದು. ಒಂದು ಇಂಗುದಿ ಮರದ ಕೆಳಗೆ ದರ್ಭೆ, ಎಲೆಗಳಿಂದ ಲಕ್ಷ್ಮಣನು ಮಾಡಿದ ಹಾಸಿಗೆಯ ಮೇಲೆ ಆ ರಾತ್ರಿ ಮಲಗಿ ರಾಮ ಸೀತೆ ನಿದ್ರೆ ಹೋಗುತ್ತಾರೆ. ಈವರೆಗೆ ನಡೆದಿರುವ ಸಂಗತಿಗಳಲ್ಲಿ ಇದು ಅತ್ಯಂತ ಖಾಸಗಿಯ ಸಮಯ. ಮುಂದಿನ ಉಳಿದ ಕಾಲದಲ್ಲೆಲ್ಲ ಭಾಗ್ಯ ಏನು ತರುವುದೊ ಅದಕ್ಕೂ ಕಾಡಿನ ಬದುಕಿಗೂ ಸಂಚಾರದಂತೆ ಎಲ್ಲಕ್ಕೂ ಹೊಂದಿಕೊಂಡುದು.

ಒಟ್ಟಿಗೆ ಈ ಕಾಲವೆಲ್ಲ ತನಗೆ ಯಾವ ಸೌಕರ್ಯಗಳ ನಷ್ಟವನ್ನು ಕುರಿತೂ ಸೀತೆಯ ಬಾಯಿಂದ ಒಂದು ಮಾತು ಕೇಳಿಬರುವುದಿಲ್ಲ; ಒಮ್ಮೆ ಕೂಡ. ನದಿಗಳನ್ನು ದಾಟುತ್ತಾರೆ; ವಿಧಾನ ಹೇಗೆ? ದೋಣಿಗಳಲ್ಲಿ ಸೀತೆಯುನ್ನು ಹೇಗೆ ಪ್ರವೇಶಗೊಳಿಸಬೇಕು? ಹೊರಗೆ ಇಳಿಸುವುದು ಹೇಗೆ?– ಎಂಬ ಬಗೆಗೆ ಏರ್ಪಾಡು ಮಾಡಿಕೊಳ್ಳುತ್ತಾರೆ. ವಿಶ್ರಾಂತಿ ನೆಲೆಗಳನ್ನು ಹೇಗೆ ಕಟ್ಟಿಕೊಳ್ಳಬೇಕು ಎಂಬ ಸಂಗತಿಗಳು ಸಮಯ ಬಿದ್ದಂತೆ ಗೊತ್ತಾಗುತ್ತವೆ. ತುಂಬಾ ಹರ್ಷದಿಂದ ಸೀತೆ ಹೋಗುತ್ತ, ಸ್ಥಳಗಳ, ಹಕ್ಕಿಗಳ, ಮರ ಹೂಗಳ ಹೆಸರು ಕೇಳುತ್ತಾಳೆ.

ಸುಖವಾಗಿ ಜೊತೆ ಹಕ್ಕಿಗಳಂತೆ ಜೀವನ ನಡಸುತ್ತಾರೆ. ಅವಳ ಮನಸ್ಸಿಗೆ ಬಂದ ಯಾವುದನ್ನೂ ಗಂಡಮೈದುನರು ಅವಳಿಗೆ ತಂದುಕೊಡುತ್ತಾರೆ. ಅರಣ್ಯಜೀವನಕ್ಕೂ ಪ್ರದೇಶಕ್ಕೂ ಹುಟ್ಟಿ ಬಂದವರಂತೆ ನಡೆದುಕೊಳ್ಳುತ್ತಾರೆ. ಅನೇಕ ಬಗೆಯ ಜಿಂಕೆಗಳನ್ನೂ – ಪೃಷತ, ಕೃಷ್ಣಸಾರಂಗ – ಕಾಡು ಕೋಣ, ಗೋಧ, ವಾರ್ಧ್ರೀಣಸ ಎಂಬ ಹಕ್ಕಿಗಳನ್ನೂ ತಂದು ರುಚಿರುಚಿಯಾದ ಅಡಿಗೆಗಳನ್ನು ಮಾಡಿಕೊಂಡು ಜೊತೆಗೆ ಊಟ ಮಾಡುತ್ತಾರೆ. ಆಗ ಈಗ ರಾಮನು ಸೀತೆಗೆ ತುಂಬ ಪ್ರೀತಿಯಿಂದ ಈ ಮಾಂಸ ಚೆನ್ನಾಗಿದೆ, ರುಚಿನೋಡು: ತಿನ್ನಲು ತುಂಬಾ ಚೆನ್ನಾಗಿದೆ ; ಇದು ಸವಿಯಾಗಿದೆ : ಚೆನ್ನಾಗಿ ಬೇಯಿಸಿ ಮಾಡಿದೆ : 'ಇದು ಮೇಧ್ಯಂ, ಇದಂ ಸ್ವಾದು; ನಿಷ್ಟಪ್ತಂ ಇದಂ ಅಗ್ನಿನಾ' ಎನ್ನುತ್ತಾನೆ. ಇವರಿಗೆ ಬಡಿಸುತ್ತಾ ನೋಡುತ್ತಾ ಮಾತಿಲ್ಲದೆ ಲಕ್ಷ್ಮಣನು ವೀಕ್ಷಿಸುತ್ತಿರುತ್ತಾನೆ. ಕಾಡಿನಲ್ಲಿ ನಡುವೆ ಅವಳು, ಮುಂದೆ ಹಿಂದೆ ತಮ್ಮ ಅಣ್ಣಂದಿರು ಸಂಚರಿಸುತ್ತಾರೆ. ದಾರಿಯಲ್ಲಿ ತೊಂದರೆ ಉಂಟು ಮಾಡುವ ರಾಕ್ಷಸರನ್ನು ಕೊಲ್ಲುತ್ತಾರೆ.

ವಿರಾಧನ ಭಂಗ ಪ್ರಸಂಗ ಕುತೂಹಲಕರವಾದ್ದು. ಮೊದಲು ಸೀತೆಯನ್ನು ಹಿಡಿದುಕೊಂಡು ಅಣ್ಣ ತಮ್ಮಂದಿರನ್ನು ಕೊಂದು ಅವಳನ್ನು ತನ್ನ ಹೆಂಡತಿಯಾಗಿ ಮಾಡಿಕೊಳ್ಳುತ್ತೇನೆನ್ನುತ್ತಾನೆ. ಸೋದರರಿಬ್ಬರೂ ಅವನಿಗೆ ಎದುರಾದಾಗ ಅವರನ್ನು ತೋಳಲ್ಲಿ ಹಿಡಿದುಕೊಂಡು ಸೀತೆಯನ್ನು ಕೆಳಗೆ ಬೀಸಾಡಿ ಮುಂದೆ ಓಡಿಹೋಗುತ್ತಾನೆ. ಕ್ಷಣಕಾಲ ರಾಮನ ಮನಸ್ಸಿಗೆ ಇದು ಪ್ರಿಯವೇ ಆಗುತ್ತದೆ. ಒಂದು ವಿನೋದ ಎಂಬಂತೆ. ತಾವು ನಡೆಯಬೇಕಾಗಿರುವ ರಸ್ತೆಯಲ್ಲಿ ಇವನ ಮೇಲೆ ಸವಾರಿ ಮಾಡಿ ಹೋಗಬಹುದೆನ್ನಿಸುತ್ತದೆ. ತನ್ನನ್ನು ಹಿಂದೆ ಬಿಟ್ಟುಹೋದರೆಂದು ಕಂಡು ಸೀತೆ ಅವರ ಹಿಂದೆ ಓಡುತ್ತಾಳೆ. ವಿರಾಧನನ್ನು ಕೂಗಿ ಕರೆದು ರಾಕ್ಷಸನ ಗಮನವನ್ನು ತನ್ನ ಕಡೆಗೆ ಸೆಳೆದು, ತನ್ನ ಗತಿಯೇನು ಎಂದು ರಾಮಲಕ್ಷ್ಮಣರಿಗೆ ಹೇಳುತ್ತಾಳೆ : ನನ್ನನ್ನು ಆಹಾರವಾಗಿ ಬಳಸಿ ಆ ಸೋದರರನ್ನು ಬಿಡುಗಡೆ ಮಾಡು ಎನ್ನುತ್ತಾಳೆ : ಈ ಸೋದರರಿಗೆ ಇವರ ಗುಂಪಿನಲ್ಲಿ ತನೊಬ್ಬ ಸದಸ್ಯಳು ಎಂಬುದಕ್ಕೆ ಸಮನಾಗಿ ಎಚ್ಚರಿಕೆ ಕೊಡುವ ಸಂಗತಿ ಇದು. ಆಗ ವಿರಾಧನನ್ನು ಬೇಗ ಕೊಂದು ಮುಗಿಸಿ ರಾಮಲಕ್ಷ್ಮಣರು ಸೀತೆಯ ಜೊತೆಗೂಡುತ್ತಾರೆ.

ತಾನು ನುಡಿಯಬೇಕೆಂದೂ ತನ್ನ ಅಭಿಪ್ರಾಯವನ್ನು ದೃಢವಾಗಿ ವ್ಯಕ್ತಪಡಿಸಬೇಕೆಂದೂ ಆಕೆಗೆ ಕಂಡಾಗ ಸೀತೆ ಬಾಯಿ ಮುಚ್ಚಿಕೊಂಡು ಕುಳಿತಿರುವವಳಲ್ಲ. ಸುತೀಕ್ಷ್ಣರ ಆಶ್ರಯದ ದಾರಿಯಲ್ಲಿ ಅವರ ಬಳಿಗೆ ಗುಂಪಾಗಿ

ಬಂದ ವ್ರತಿಗಳಿಗೆ ರಾಮನು ನೆರವು ಕೊಡುತ್ತೇನೆ ಎಂದು ಹೇಳಿದ್ದ. ಅವಳು ಆ ಸಂಬಂಧದಲ್ಲಿ ಆಮೇಲೆ ಆಡಿದ ಮಾತು ಇದಕ್ಕೆ ಉದಾಹರಣೆ.

ಜನಸ್ಥಾನದಲ್ಲಿ ಮಾಯಾಮೃಗದ ಚಲನವಲನಗಳನ್ನು ನೋಡಿ ಸಹಜವಾಗಿ ಆಕರ್ಷಣೆಗೊಳ್ಳುತ್ತಾಳೆ. ಸಾಯಲಿ, ಬದುಕಲಿ ಅದು ತನಗೆ ಬೇಕೆನ್ನುತ್ತಾಳೆ. ಬದುಕಿ ಸಿಕ್ಕಿದರೆ ವನವಾಸ ಕಾಲದಲ್ಲಿ ಅದರೊಡನೆ ಆಡಬಹುದು; ತರುವಾಯ ವೃದ್ಧ ತಾಯಿಯರಿಗೆ ಅಯೋಧ್ಯೆಯಲ್ಲಿ ತಮ್ಮ ಮನೆಯಲ್ಲಿ ಹರ್ಷತರುತ್ತದೆ ಎಂದು ಹೇಳಿದಳು. ಸತ್ತರೊ: ಅದರ ಚರ್ಮ ಅಮೂಲ್ಯವಾದ ನೆನಪಾಗಿ ಉಳಿಯುತ್ತದೆ ಎಂದಳು. ಒಂದು ಕ್ಷಣ ಮಾತ್ರ ರಾಮನಿಗೆ ಕೂಡ ಈ ಭಾವನೆ ಮನಸ್ಸಿಗೆ ಬರುತ್ತದೆ. ಲಕ್ಷ್ಮಣನು ಎಷ್ಟು ಮುನ್ನೆಚ್ಚರಿಕೆ ಕೊಟ್ಟರೂ ಹಿಡಿಸಲಿಲ್ಲ. ಅದನ್ನು ಅಟ್ಟಿ ರಾಮನು ಹಿಂದೆ ಹೋಗುತ್ತಾನೆ. ಜಿಂಕೆ ಯಾರು ಏನಾಯಿತು, ಅದರ ಪರಿಣಾಮ ಏನಾದವು ಎಂಬವು ಒಂದು ವಿಧಿವ್ಯಾಪಾರ. ರಾಮನ ಧ್ವನಿಯಲ್ಲಿ ಲಕ್ಷ್ಮಣನನ್ನು ಕಪಟದಿಂದ ಮಾರೀಚ ಕೂಗಿದ. ಇದು ಆಕೆಯನ್ನು ಪೂರ್ತಿಯಾಗಿ ಮರುಳು ಮಾಡಿತು. ಲಕ್ಷ್ಮಣನು ಆಶ್ರಮದಲ್ಲೇ ಉಳಿದು ನಿಂತು ಗಂಡನ ಸಹಾಯಕ್ಕೆ ಹೋಗದೆ ಆಕೆಯನ್ನು ರಕ್ಷಿಸುವುದು ಲಕ್ಷ್ಮಣನಿಗೆ ಅಶಕ್ಯವಾಗುವಂತೆ ಮಾಡುತ್ತಾಳೆ.[೨೫] ಆಕೆಯ ಕಾತರ ಯಾವ ವಾದವನ್ನೂ ಯುಕ್ತಿಯನ್ನೂ ಕೇಳದಂತೆ ಮಾಡಿತು.

ಲಕ್ಷ್ಮಣನು ಆಶ್ರಮವನ್ನು ಬಿಟ್ಟುಹೋದ ಕೂಡಲೆ ಸಂನ್ಯಾಸಿಯ ವೇಷದಲ್ಲಿ ರಾವಣನು ಬರುತ್ತಾನೆ. ಕ್ಷುದ್ರವಾದ ಅವನ ಮಾತು, ಅವನಲ್ಲಿ ಕಂಡು ಬಂದ ಯಾವುದೊ ಸಣ್ಣತನ ಅವಳಿಗೆ ಅವನನ್ನು ತಾಳಿಕೊಳ್ಳುವುದು ಪೂರ್ತಿ ಕಷ್ಟಮಾಡುತ್ತದೆ. ಸಂನ್ಯಾಸಿಗೆ ತಕ್ಕ ಮರ್ಯಾದೆಗಳನ್ನೆಲ್ಲ ತೋರಿಸಿದಳು. ಇನ್ನು ಸ್ವಲ್ಪ ಹೊತ್ತು ಕಾದರೆ ಬೇಗ ರಾಮನೊ ಲಕ್ಷ್ಮಣನೊ ಬೇಕಾದಷ್ಟು ಕಾಡಿನ ಆಹಾರ ಸಾಮಗ್ರಿಗಳನ್ನು ('ವನ್ಯಾನಿ ವಿಪುಲಾನಿ') ಹಿಂದಿರುಗಿ ಬರುವಾಗ ತರುತ್ತಾರೆ ಎಂದಳು. ಅವನ ಉದ್ದೇಶವನ್ನು ಕುರಿತು ಅಷ್ಟು ಹೊತ್ತೂ ಆಕೆಗೆ ಕಳವಳವೇ ಉಂಟಾಗಿತ್ತು. ಬೇಗ ಅವನು ತಿಳಿಸುತ್ತಾನೆ: ರಾವಣನಿಗೆ ಹೆಚ್ಚು ಕಾಲ ನಷ್ಟಮಾಡುವ ಅವಕಾಶ ಇರಲಿಲ್ಲ. ತಾನು ಇಂಥವಳು; ಕಾಡಿನಲ್ಲಿ ತಾನೇಕೆ ಇದ್ದಾಳೆ ಎಂಬುದನ್ನು ತಿಳಿಸುತ್ತಿದ್ದ ಹಾಗೆಯೇ ಆಕೆಯ ಆಕೃತಿ ಅವನನ್ನು

---

25 Chastise him with the valour of her tongue ಎನ್ನಬಹುದು.

ಮುಗ್ಧಗೊಳಿಸಿದೆ; ಆಕೆಯನ್ನು ತನ್ನ ಹೆಂಡತಿಯಾಗಿ ಮಾಡಿಕೊಳ್ಳಲು ಬಂದಿದ್ದೇನೆ–ಎಂದ. ಹೆಣ್ಣುಗಳನ್ನು ರಾಕ್ಷಸರು ಹೀಗೆ ತೆಗೆದುಕೊಂಡು ಹೋಗುವುದು ವಾಡಿಕೆ: ಆಕೆ ತನ್ನ ಎಲ್ಲ ಸಂಪತ್ತು ಗೌರವಗಳಿಗೂ ಯಜಮಾನಿಯಾಗುತ್ತಾಳೆಂದೂ ತನ್ನ ಶಕ್ತಿ ಎಷ್ಟು ಹಿರಿದು ಎಂದೂ ವರ್ಣಿಸುತ್ತಾನೆ. 'ನನ್ನ ಕೈ ಹಿಡಿ; ಹೆಂಗಸಿನ ಆದೇಶದಿಂದ ವನವಾಸ ಮಾಡುತ್ತ ಕಾಡಿನಲ್ಲಿ ಸುತ್ತುತ್ತಿರುವ ಹೀನ ಮನುಷ್ಯನೊಬ್ಬನಿಗೆ ಏಕೆ ಅಂಟಿಕೊಂಡಿರಬೇಕು?' ಎಂದ. ಸೀತೆಯ ಸತ್ವಾವೇಶ ಇಲ್ಲಿ ಉನ್ನತಿಯಲ್ಲಿ ಕಾಣುತ್ತದೆ. ರಾಮನನ್ನೂ ಅವನ ದುರ್ಜಯ ವೀರವನ್ನೂ ವರ್ಣಿಸುತ್ತ ಸ್ಫೂರ್ತಿಯಿಂದ ಮಾತನಾಡಿದಳು. ಅವನಿಗೂ ರಾವಣನಿಗೂ ವೈದೃಶ್ಯ ಕಾಣಿಸಿದುದು ಎದುರಾಗಿಯೊ ಶಕ್ತಿಗೆ ಇದಿರಾಗಿಯೊ ಏನು ತಾಳಿಕೆಯಾದಾನು?–ಎಂದು ರಾವಣನಿಗೆ ಹೇಳುತ್ತಾಳೆ: ರಾಮಲಕ್ಷ್ಮಣರು ಶುಚಿಶೀಲರು ದೃಢವ್ರತರು ಎಂದು.[೨೬] ಯಾವ ದೇವತೆಯೇ ಆಗಲಿ, ಭೂಮಿಯ ಮೇಲಿನ ಯಾವ ಬಲವೇ ಆಗಲಿ, ಅವರಿಗೆ ಎದುರು ನಿಲ್ಲಲಾರರು. ಎಂಥಹೇಡಿ ರಾವಣ! ತಾನು ಒಂಟಿಯಾಗಿದ್ದಾಗ ಬಂದ. ಸೋದರರು ಇಬ್ಬರೂ ಹೊರಗೆ ಹೋಗಿದ್ದಾರೆ. ಅವರಲ್ಲಿ ಯಾರು ಅಲ್ಲಿದ್ದರೂ ಅವನು ಜೀವದೊಡನೆ ಹಿಂದಕ್ಕೆ ಹೋಗುವ ಅವಕಾಶ ಸಂಭವ ಇರುತ್ತಿರಲಿಲ್ಲ–ಎಂದಳು. ರಾವಣನು ತನ್ನ ದಶಶಿರಸ್ಸಿನ ರೂಪನ್ನು ತಾಳಿ ತನ್ನ ತೋಳಿಂದ ಅವಳನ್ನು ಹಿಡಿದು ಬಲಾತ್ಕಾರದಿಂದ ಲಂಕೆಗೆ ಎತ್ತಿಕೊಂಡು ಹೋದನು.

ಶೂರ್ಪನಖಿ ಮೊದಲು ಅಣ್ಣ ರಾಮನಿಗೆ, ಆ ಬಳಿಕ ಲಕ್ಷ್ಮಣನಿಗೆ ತನ್ನನ್ನು ಸ್ವೀಕರಿಸ ಹೇಳುವಾಗ ಸೀತೆ ವಿನೋದದಿಂದ ನೋಡುತ್ತಿರುತ್ತಾಳೆ. ಅವಳನ್ನು ಕೊಂದು ರಾಕ್ಷಸಿ ತನ್ನ ದಾರಿಯನ್ನು ಸುಗಮ ಮಾಡಿಕೊಳ್ಳುತ್ತೇನೆಂದಾಗ ರಾಮನು ಅವಳಿಗೆ ಶಿಕ್ಷೆ ಕೊಟ್ಟು ಹೊರಗೆ ಓಡಿಸು ಎಂದು ಹೇಳಬೇಕಾಗುತ್ತದೆ. 'ಸೀತೆ ವಿಕೃತಸ್ವರೂಪಳು, ನನ್ನ ಆಕರ್ಷಣೆಗಳನ್ನೂ ಬಲವನ್ನೂ ಅವಳ ಎದುರು ಒಡ್ಡಿನೋಡಿ. ಭೂಮಿಯಲ್ಲಿ ನೀವು ಕನಸು ಕಾಣದಿರುವ ಸುಖಸಂತೋಷಗಳನ್ನು ನಿಮಗೆ ಒದಗಿಸುತ್ತೇನೆ' ಎಂದಿದ್ದಳು; ಆದರೆ ಸೀತೆಯ ಚೆಲುವು ಅವಳ ಮನಸ್ಸಿಗೆ ಅತ್ಯಧಿಕವಾಗಿ ತೋರಿತ್ತು. ಖರನಿಗೆ, ಆಮೇಲೆ ರಾವಣನಿಗೆ ಅದನ್ನು ವರ್ಣಿಸುತ್ತಾಳೆ.

---

೨೬ ಇನ್ನೊಂದು ಸಂದರ್ಭ; 'ವೃದ್ಧಸೇವಿ, ಲಕ್ಷ್ಮೀವಾನ್, ಶಕ್ತೋ ನ ಬಹುಭಾಷಿತಃ' (ವೃದ್ಧಸೇವೆಯಲ್ಲಿ ತೊಡಗಿರುವವನು; ಸಂಪನ್ನ; ಶಕ್ತ; ಹೆಚ್ಚು ಮಾತಾಡುವವನಲ್ಲ.) ಎಂಬುದು ಲಕ್ಷ್ಮಣನನ್ನು ಕುರಿತು ಅವಳ ಪ್ರಶಂಸೆ.)

ಏಕಾಂಗಿಯಾಗಿ ರಾಮನು ಹದಿನಾಲ್ಕು ಸಾವಿರ ಪಡೆಯೊಡನೆ ಬಂದ ಖರನನ್ನು ನಾಶಮಾಡಿದಾಗಲೇ ಮೊದಲ ಬಾರಿಗೆ ಸೀತೆ ತನ್ನ ಗಂಡನ ಗುಣಾತಿಶಯವನ್ನೂ ಶಕ್ತಿ ಎಷ್ಟು ದೂರ ಹೋಗಬಲ್ಲದೆಂಬುದನ್ನೂ ಕಂಡದ್ದು.

ಶೋಕಿಸುತ್ತಿದ್ದ ಅವಳನ್ನು ವಿಮಾನದಲ್ಲಿ ರಾವಣನು ಎತ್ತಿಕೊಂಡು ಹೋಗುತ್ತಿರುವಾಗ ಅವನ ಸ್ವಸ್ತೋತ್ರಪಾಠವೆಷ್ಟು; ಸಮ್ಮೋಹಗಳೆಷ್ಟು! ತನ್ನ ಸಂಪತ್ತನ್ನೂ ವೈಭವವನ್ನೂ ಕೊಚ್ಚಿ ನುಡಿದುದೆಷ್ಟು! ತನ್ನ ರಾಣಿಯರಲ್ಲೆಲ್ಲ, ಹೆಣ್ಣುಗಳಿಗೆಲ್ಲ ಅವಳನ್ನು ಅಧಿಷ್ಠಾತ್ರಿಯಾಗಿ ಮಾಡುತ್ತೇನೆಂದ. ಅವಳ ಮನಸ್ಸನ್ನು ಈ ಯಾವುದೂ ತಿರುಗಿಸಲಿಲ್ಲ. ಅವನ್ನು ಕಿವಿಗೆ ಹಾಕಿಕೊಳ್ಳನೂ ಇಲ್ಲ. ಅವನನ್ನು ಕಂಡರೆ ಅವಳಿಗೆ ತಿರಸ್ಕಾರವಿದೆಯೆಂದು ಅವನ ಆಶೋತ್ತರಗಳಿಗೆ ಪ್ರತಿಯಾಗಿ ರಾಮನ ಹಿರಿಮೆಯನ್ನೂ ಲಕ್ಷ್ಮಣನ ಶಕ್ತಿಯನ್ನೂ ವ್ಯಕ್ತಪಡಿಸಿದಳು. ಅಷ್ಟೇ ಅಲ್ಲ, ಆಮೇಲೆ ಅವನೊಡನೆ ನುಡಿಯುವಾಗ ಒಂದು ಹುಲ್ಲು ಕಡ್ಡಿಯನ್ನು ಹಿಡಿದುಕೊಂಡು ಅವನ ಬೆಲೆ ಇಷ್ಟೇ ಎಂದು ತಿಳಿಸುವಂತೆ, ಅಂಥವನೊಡನೆ ನೇರವಾಗಿ ಮಾತಾಡುವುದು ತನ್ನ ಮರ್ಯಾದೆಗೆ ಕೀಳಾದುದೆನ್ನುವಂತೆ ತಿಳಿಸುತ್ತಾಳೆ. ಇಂಥ ಒಲವರಕೆಗಳು ಕೆಸಕ್ಕೆ ಬಾರದಾದಾಗ, ಆಕೆಯ ಆಕರ್ಷಣೆ ಅವನನ್ನು ಇನ್ನಷ್ಟು ಸೆರೆಹಿಡಿದು ಅವನ ಹೃದಯಕ್ಕೆ ತಟ್ಟದಾಗ, 'ಅಶೋಕವನಕ್ಕೆ ಕೊಂಡೊಯು ಅವಳನ್ನು ಸೆರೆ ಇಡಿ; ದುರ್ಮುಖರೂ ಭೀಕರರೂ ಆದ ರಾಕ್ಷಸಿಯರನ್ನು ಸುತ್ತ ಕಾವಲಿಡಿ; ಬೆದರಿಕೆಗಳಿಂದಲೂ ನಯವಾದ ಒಲಿಸುವ ಮಾತುಗಳಿಂದಲೂ ಒಲಿಸಿ; ರಾಮನನ್ನು ಮರೆತು ತನ್ನನ್ನು ಅವಳು ಪ್ರೀತಿಸುವಂತೆ ಮಾಡಿ' ಎಂದು ಅಪ್ಪಣೆ ಮಾಡಿದನು. ಆದರೆ, ಏನೇ ಆಗಲಿ, ತನ್ನ ಪ್ರೀತಿಗೆ ಈಡಾದ ಅವಳ ಜೀವಹತ್ಯೆಗೆ ಎಷ್ಟು ಮಟ್ಟಿಗೂ ಮನಸ್ಸು ತಟ್ಟಲಿಲ್ಲ. ತನಗೆ ಒಪ್ಪಿ ಗೆಳೆತನದಲ್ಲಿ ತನ್ನಲ್ಲಿ ಅವಳಲ್ಲಿ ಪ್ರೀತಿ ಉಂಟಾಗಬೇಕೆಂದೂ ಮನಸ್ಸನ್ನು ಬದಲಾಯಿಸಲು ಒಂದು ವರ್ಷಾವಧಿ ಅವಕಾಶ ಕೊಡುತ್ತೇನೆಂದೂ ತಿಳಿಸಿದ. ದೈವವೇ ಇಷ್ಟು ಕಾಲಾವಕಾಶವನ್ನು ಒದಗಿಸಿತು. ಸಮಯವಾಯಿತು. ಖಾಸಗಿಯಾದ ಮತ್ತು ಇತರ ಕಾರಣಗಳಿಲ್ಲದಿದ್ದರೆ ಬಲಾತ್ಕಾರದಿಂದ ಅತ್ಯಾಚಾರ ನಡಸುತ್ತಿದ್ದನಾದೀತು.

ಈ ಅವಕಾಶ ಯಾವುದಾದರೂ ದಾರಿಯನ್ನು ಹುಡುಕಿ ಸೀತೆಯನ್ನು ಉಳಿಸಿ ಬಿಡಿಸಿಕೊಳ್ಳುವುದಕ್ಕೆ ನೆರವಾಗುತ್ತದೆ. ಅದಕ್ಕಾಗಿ ಕಾರ್ಯಕ್ರಮಗಳನ್ನು ಏರ್ಪಡಿಸಲು ಶಕ್ಯವಾಯಿತು. ಸೀತೆಗೆ ಕೊಟ್ಟಿದ್ದ ಒಂದು ವರ್ಷದಲ್ಲಿ ಹನುಮಂತನು ಅವಳನ್ನು ನೋಡಲು ಹೋದಾಗ ಅವಧಿಯ ಹತ್ತು ತಿಂಗಳು ಮುಗಿದಿದ್ದವು. ಮೊದಲು ಕಪಿ ಕಾಣಿಸಿದುದು ಒಂದು ದುಶ್ಯಕುನವೆಂದೇ ಆಕೆ

ಸಂಶಯಪಟ್ಟಿದ್ದಳು. ರಾವಣನೇ ತನ್ನ ಬಳಿ ಬರಲು ಈ ಛದ್ಮೋಪಾಯವನ್ನು ಬಳಸಿದ್ದಾನೆಂದುಕೊಂಡಳು. ಅನೇಕ ಸಲ ತನ್ನ ಪ್ರಾಣ ತೆಗೆದುಕೊಳ್ಳಬೇಕೆಂದು ಆಲೋಚಿಸಿ ತಡೆದುಕೊಂಡಳು. ನಿಜವಾಗಿ ರಾಮನ ಕಡೆಯಿಂದಲೇ ಹನುಮಂತನು ಬಂದಿದ್ದಾನೆಂದು ಅಂಗುಳಿ ಪ್ರದಾನದಿಂದ ಅವಳಿಗೆ ಗೊತ್ತಾದ ಮೇಲೆ ಅವನಲ್ಲಿ ನಂಬಿಕೆ ಹುಟ್ಟಿತು. ತುಂಬಾ ತೆರೆದ ಹೃದಯದಿಂದ ಮಾತನಾಡಿದಳು. ತನ್ನ ಸ್ಥಿತಿಯನ್ನು ಸೋದರರಿಗೆ ತಿಳಿಸಿ ಕಾರ್ಯ ಕಲಾಪಗಳನ್ನು ಶೀಘ್ರಗೊಳಿಸಬೇಕೆಂದು ಹೇಳಿದಳು. ಇಲ್ಲಿಂದ ಬಿಡುಗಡೆಯಾಗಿ ಸಕಾಲದಲ್ಲಿ ಪಾರಾಗದಿದ್ದರೆ ಪ್ರಾಣ ಬಿಡುತ್ತೇನೆಂದಳು. ಹನುಮಂತನು ಪ್ರಬಲವಾದ ಒಂದು ಆಕೃತಿಯನ್ನು ಧರಿಸಿ ತೋರಿಸಿದಾಗ ಅವನೇನು ಸಣ್ಣ ಕಪಿಯಲ್ಲವೆಂದು ಗಟ್ಟಿ ಮಾಡಿಕೊಂಡಳು. ಆ ಸೂಚನೆ ಬಂದಾಗ ತಾನು ಅವನ ಹೆಗಲ ಮೇಲೆ ಕುಳಿತು ತಪ್ಪಿಸಿಕೊಂಡು ಹೋಗಲು ಅವಳು ಒಪ್ಪಲಿಲ್ಲ. ಆಕೆ ಕೊಟ್ಟ ಕಾರಣಗಳು ಕುತೂಹಲಕರವಾದವು. ಅವಳೊಡನೆ ಅವನು ಹಾರಿಹೋದುವುದು ಪತ್ತೆಯಾಗಬಹುದು; ಹಗೆಗಳು ಅವರನ್ನು ನೆಲಕ್ಕೆ ಬೀಳಿಸಬಹುದು; ಕಡಲ ಮೇಲೆ ಹಾರಿಹೋಗುವಾಗ ಮಹಾಸಾಗರದಲ್ಲಿ ಬಿದ್ದು ತಾನು ಮುಳುಗಿ ಹೋಗಬಹುದು! ಇವಕ್ಕಿಂತ ಗುರುತರವಾದ ಕಾರಣ: ತನ್ನ ರಕ್ಷಣೆಗಾಗಿ ಕೂಡ ಪರಪುರುಷನ ದೇಹದ ಮೇಲೆ ಮನಸಾ ಇಷ್ಟಪಡುವುದಿಲ್ಲ ಎಂದಳು. ಪತಿವ್ರತೆಗೆ ಅದು ತಪ್ಪು. ಇನ್ನೊಂದು ಕಾರಣ ಇದು: ರಾಮನು ಕ್ಷತ್ರಿಯ; ಲಂಕೆಯ ಮೇಲೆ ದಾಳಿ ಮಾಡಿ ರಾವಣನಿಗೆ ಶಿಕ್ಷೆ ಮಾಡಬೇಕು. ಅದು ಮಾತ್ರ ಅವನಿಗೆ ಯೋಗ್ಯ ಕಾರ್ಯ; ಲೋಕದಲ್ಲಿ ಅವನ ಕೀರ್ತಿ ಹೆಚ್ಚುತ್ತದೆ. ಅಂಥ ಮಾನ ಪ್ರಶಂಸೆಯನ್ನು ಅವನಿಗೆ ಇಲ್ಲದಂತೆ ಮಾಡಬಾರದು. ಆಗ ಮಾತ್ರ ಬೆಳ್ಳುರಿಗಿಂತ ಹೊಳಪಾಗಿ ಆ ಕೀರ್ತಿ ಉರಿದೀತು ಎಂದಳು. ರಾಮನು ಅಂಗುಳಿ ಒಡವೆಯನ್ನು ಅವನ ನೆನಪಿಗಾಗಿ ಕಳಿಸಿದುದು ಆಕೆಗೆ ಧೈರ್ಯ ತಂದಿತ್ತು. ತಾನು ಅವನನ್ನೇ ಕಂಡಂತೆ ಹರ್ಷಪಟ್ಟಳು. ತನ್ನ ಚೂಡಾಮಣಿಯನ್ನು ರಾಮನಿಗೆ ಪ್ರತಿಯಾಗಿ ಕೊಂಡುಹೋಗಿ ಕೊಡು; 'ಅದು ನನ್ನ ಭಕ್ತಿ ವಿಶ್ವಾಸಗಳ ಸಂಕೇತ' ಎಂದಳು. ಹಾಗೆಯೇ ಹನುಮಂತನು ಆಕೆಯನ್ನು ಕಂಡಿದ್ದನೆಂಬುದಕ್ಕೆ ಅದು ಸ್ಥಾಪಕವಾಗುತ್ತದೆ. ಚೂಡಾಮಣಿಯ ದರ್ಶನ ರಾಮನನ್ನು ಬಹುಸಂತೋಷಗೊಳಿಸಿತು; ಇಬ್ಬರಲ್ಲಿಯೂ ಭರವಸೆಗಳನ್ನು ತುಂಬಿತು; ನಿರ್ಧರಗಳನ್ನು ಬಲಪಡಿಸಿತು; ಬಿಡುಗಡೆಯ ವಿಧಾನವನ್ನು ತ್ವರೆಗೊಳಿಸಿತು ಎಂಬುದನ್ನು ನಾವು ಕಾವ್ಯದಲ್ಲಿ ಅರಿಯುತ್ತೇವೆ.

ತ್ರಿಜಟೆಯೆಂಬ ಹೆಸರಿನ ವಿಭೀಷಣನ ಹತ್ತಿರದ ಸಂಬಂಧಿ ಕರುಣಾಶಾಲಿ

ಒಬ್ಬ ರಾಕ್ಷಸಯುವತಿ ಬೇಗ ಸೀತೆಯ ಸೆರೆ ಮುಗಿದುಹೋಗುತ್ತದೆಂಬ ಕನಸು ತನಗಾಯಿತೆಂದು ತಿಳಿಸಿ ಅವಳ ಮನಸ್ಸಿಗೆ ಹರ್ಷ ತಂದಳು. ರಾಮನು ಬೇಗ ಬರುತ್ತಾನೆ; ರಾವಣನನ್ನು ಲಂಕೆಯನ್ನೂ ನಾಶಮಾಡಿ ಆಕೆಯನ್ನು ಹಿಂದಕ್ಕೆ ಕರೆದುಕೊಂಡು ಹೋಗುತ್ತಾನೆ ಎಂದಳು. (ಹನುಮಂತನು ಕಾಣಿಸಿಕೊಳ್ಳುವ ಸ್ವಲ್ಪ ಮುಂಚೆ ಮಾತ್ರ ಇದು ನಡೆದಿತ್ತು.) ಸೀತೆಯ ಮೇಲೆ ಕಾವಲಿದ್ದ ರಾಕ್ಷಸಿಯರಿಗೆ ರಾಮನು ಬೇಗ ಬರುತ್ತಾನೆ; ಸೀತೆಯನ್ನು ಬಿಡುಗಡೆ ಮಾಡುತ್ತಾನೆ ಎಂದು ತಿಳಿಸಿ ಅವರಿಗೆ ಎಚ್ಚರಿಕೆ ಕೊಟ್ಟಳು. ಅವರು ಹಿಂಸಕರಲ್ಲ ಎಂದು ಸೀತೆ ಅವರ ಪರವಾಗಿ ಹಿತನುಡಿದರೆ ಗೆದ್ದ ರಾಮನ ಕೈಯಲ್ಲಿ ಅವರಿಗೆ ಹೆಚ್ಚು ಅನುಕೂಲವಾದ ಪ್ರಯೋಜನ ದೊರಕುವುದು ಎಂದಳು. ಹಾಗೆ ಮಾಡದಾದರೆ ಕಠಿಣ ಶಿಕ್ಷೆ ಉಂಟಾಗುತ್ತದೆಂದಳೂ. ಈ ಮಾತು ಅವರ ಮೇಲೆ ಯಾವ ಬಗೆಯ ಪರಿಣಾಮಗಳನ್ನೇ ಉಂಟುಮಾಡಲಿ, ಸೀತೆಯ ಸ್ವಭಾವದ ಒಂದು ಲಕ್ಷಣವನ್ನು ಮುಂದಿನ ಮಾತು ತೆರೆದು ತೋರಿಸುತ್ತದೆ. ಈ ಕನಸು ನಿಜವಾಗುವುದೇ ಆದರೆ ಅವರು ಬೇಡುವುದಕ್ಕಿಂತ ಹೆಚ್ಚಾಗಿ ಅವರಿಗೆ ಏನೂ ಕೆಡುಕಾಗದಂತೆ ತಾನು ನೋಡಿಕೊಳ್ಳುತ್ತೇನೆ ಎಂದಳು. ಅವಳ ಸ್ವಭಾವದಲ್ಲಿ ಈ ಔದಾರ್ಯವಿತ್ತು. ಅಂಥ ಕ್ರೂರವಾದ ಹೆಣ್ಣುಗಳಿಂದ ಕೂಡ ತನಗೆ ಉಂಟಾದ ಕಷ್ಟಗಳನ್ನು ನೆನಪಿಗೆ ತಂದುಕೊಳ್ಳಲು ಅವಳು ಬಯಸುತ್ತಿರಲಿಲ್ಲ.

* * * *

ಮುಂದಿನದು ಹೆಚ್ಚು ಗಂಭೀರವಾದ ಸನ್ನಿವೇಶ. ರಾವಣನ ಮೇಲೆ ವಿಜಯ ದೊರಕಿತು. ಸೀತೆಯ ಬಳಿಗೆ ಹನುಮಂತನು ಹೋಗಿ ಈ ಸುದ್ದಿಯನ್ನು ತಿಳಿಸಿ ಮುಂದೆ ಅವಳು ಏನು ಮಾಡಬೇಕೆಂದಿರುವಳೆಂದು ಕೇಳಿ ಬಾ ಎಂದ. ಸುದ್ದಿ ಸಹಜವಾಗಿ ಸೀತೆಗೆ ಸಂತೋಷವುಂಟುಮಾಡಿತು. ತನ್ನ ಪತಿಯನ್ನು ಕಾಣಲು ಇಷ್ಟಪಡುತ್ತೇನೆಂದು ಉತ್ತರಕೊಟ್ಟಳು. ಆಕೆಗೆ ಸ್ನಾನ ಮಾಡಿಸಿ ತಕ್ಕ ಹಾಗೆ ಉಡುಗೆ ತೊಡಿಸಿ ಆಕೆಯನ್ನು ಕರೆತರಬೇಕೆಂದು ವಿಭೀಷಣನಿಗೆ ನಿರ್ದೇಶಿಸುತ್ತಾನೆ. ಅವಳಿಗೇನೊ ತಾನಿರುವಂತೆಯೇ ರಾಮನ ಬಳಿಗೆ ಹೋಗಬೇಕೆಂದು ಇಷ್ಟ, – ಇಷ್ಟು ದಿವಸ ಸೆರೆಯಲ್ಲಿ ತಾನು ಹೇಗೆ ಕಾಲ ಕಳೆದಿದ್ದೇನೆ ಎಂಬುದನ್ನು ರಾಮನು ನೋಡಲಿ ಎಂದಿತ್ತು. ಆ ಅವಕಾಶ ಆಕೆಗೆ ಇಲ್ಲವಾಯಿತು.[27] ರಾಮನ ಆಜ್ಞೆ, ಅನೇಕ ಜನ ಗೆಳತಿಯರೊಡನೆಯೂ ಕುಳಿತಂತೆ ಆಕೆಯನ್ನು ರಾಮನ ಬಳಿಗೆ ರಾವಣನ ಅಧಿಕಾರಿಗಳು ಬಲಾತ್ಕಾರವಾಗಿ ದಾರಿಯನ್ನು ಬಿಡಿಸಿಕೊಂಡು ಒಯ್ದರು. ಆಕೆಯನ್ನು ನೋಡುವುದಕ್ಕೆ ಗದ್ದಲವಾಗಿತ್ತು.

ಸಹಜವಾಗಿ ಇದರ ಕಾರಣ ರಾಮನಿಗೆ ಅರ್ಥವಾಯಿತು. ದಾರಿಯನ್ನು ಬಿಡಿಸಿಕೊಂಡು ಹೋಗುತ್ತಿದ್ದರೂ ಸೀತೆಯ ದರ್ಶನಕ್ಕೆ ನೋಟಕರು ಅಡ್ಡಿ ಮಾಡುತ್ತಿದ್ದರು. ಆಕೆಯನ್ನು ಕಾಣಲು ಯಾವ ಅಡ್ಡಿಯನ್ನೂ ಮಾಡಕೂಡದೆಂದು ರಾಮನು ಹೇಳಿದ. 'ಒಳ್ಳೆಯ ಹೆಂಗಸಿಗೆ ಮನೆಯೆ, ಬಟ್ಟೆಯೆ? ಸುತ್ತಲ ಗೋಡೆಗಳೆ? ಅರಮನೆ, ಮುಖಪರದೆಗಳೆ? ಯಾವುವೂ – ಎಂದರೆ, ಯಾವ ಬಗೆಯ ಆವರಣವೂ – ಮರೆಯಲ್ಲ; ಅವು ರಕ್ಷಣೆಯಾಗವು' ಎಂದನು. 'ವ್ಯಸನದಲ್ಲಿ (ದುಃಖ), ಕೃಚ್ಛ್ರದಲ್ಲಿ, ತಪಸ್ಸಿನಲ್ಲಿ, ಯುದ್ಧದಲ್ಲಿ, ಸ್ವಯಂವರದಲ್ಲಿ, ಯಜ್ಞ ಯಾಗಾದಿಗಳಲ್ಲಿ, ವಿವಾಹದಲ್ಲಿ ಎಲ್ಲರೂ ಆಕೆಯನ್ನು ಧಾರಾಳವಾಗಿ ನೋಡಬಹುದು. ಈಗ ಆಕೆ ಯುದ್ಧರಂಗದ ಮೇಲಿದ್ದಾಳೆ; ಕಷ್ಟ ಸ್ಥಿತಿಯಲ್ಲಿದ್ದಾಳೆ; ಆಕೆಯನ್ನು ನೋಡುವುದು ತಪ್ಪಲ್ಲ. ಮೇಲಾಗಿ, ನೇರ ನನ್ನ ಬಳಿ ಇದ್ದಾಳೆ. 'ಸಾಕ್ಷಾತ್', 'ಮತ್ಸಮೀಪೇ,' ನಾನು ನೋಡುತ್ತಿರುವಂತೆ ಯಾವ ನಾಚಿಕೆಯೂ ಸಂಕೋಚವೂ ಇರಬಾರದು' ಎಂದ. ಅವನ ಮನಸ್ಸಿನಲ್ಲಿ ಏನಿತ್ತೆಂಬುದನ್ನು ಯಾರೂ ಅರಿಯರು. ಆದರೆ ಅವನ ದೃಷ್ಟಿಯನ್ನೂ ನಡವಳಿಕೆಯನ್ನೂ ಎಲ್ಲರೂ ಗಮನಿಸುತ್ತಾರೆ. ಹೆಂಡತಿಯಲ್ಲಿ ತನಗೆ ಇಷ್ಟವಿಲ್ಲವೆಂಬಂತೆ ತನಗೆ ಅಸಮಾಧಾನವಾಗಿರುವಂತೆ ರೂಪಗೊಳ್ಳುತ್ತಿರುವ ಗಂಭೀರ ಸನ್ನಿವೇಶವನ್ನು ಕುರಿತು ಯಾವ ಧೈರ್ಯ ಮಾಡುವುದಕ್ಕಾಗಲಿ ಯಾವ ಭಾವವನ್ನು ವ್ಯಕ್ತಪಡಿಸುವುದಕ್ಕಾಗಲಿ ಯಾರೂ ಶಕ್ತರಾಗಲಿಲ್ಲ.

ವಿಭೀಷಣನು ಸೀತೆಯನ್ನು ಅವನೆದುರಿಗೆ ಕೊಂಡೊಯ್ದ. ತನ್ನ ದೇಹದಲ್ಲಿ ತಾನೇ ಪ್ರವೇಶಿಸುತ್ತಿದ್ದಾಳೊ ಎಂಬಂತೆ – 'ಪ್ರವಶಂತೀವ ಗಾತ್ರಾಣಿ' – ವಾಲ್ಮೀಕಿಗೆ ಈ ಮಾತನ್ನು ಬಳಸುವುದು ತುಂಬಾ ಪ್ರಿಯ – ಅವನ ಹಿಂದೆ ಹೋಗಿ ತನ್ನ ಮೇಲುಹೊದಿಕೆಯಿಂದ ತನ್ನ ಮುಖವನ್ನು ಮುಚ್ಚಿಕೊಂಡು, ಅಷ್ಟು ದೊಡ್ಡ ಗುಂಪಿನ ನಡುವೆ ಸಿಗ್ಗುಪಡುತ್ತಿರುವಂತೆ ಅಳತೊಡಗಿದಳು. 'ಆರ್ಯಪುತ್ರ' ಎಂಬ ಒಂದೇ ಒಂದು ಮಾತನ್ನಾಡಿ ಮುಂದೇನನ್ನೂ ನುಡಿಯಲಾರದಾದಳು. ಕಟ್ಟಕಡೆಗೆ ತನ್ನ ಗಂಡನ ಮುಖವನ್ನು ನೋಡಲು ಆಯಿತೆಂದು ಅವಳ ಹೃದಯದಲ್ಲಿ ಸಂತೋಷವಾಗಿತ್ತು. ಅವಳ ಹೃದಯ ತುಂಬಿ ಒಮ್ಮೆಗೇ ಆ ಸಮಯದ ವಿಸ್ಮಯ

---

೨೭ 'ಅಸ್ನಾತಾ ದ್ರಷ್ಟುಮಿಚ್ಛಾಮಿ ಭರ್ತಾರಂ ರಾಕ್ಷಸಾಧಿಪ' – ಎಂದಿದ್ದಳು. ರಾಮನು ವಿಭೀಷಣನಿಗೆ ಹೇಳಿದ್ದುದು ಹೀಗೆ: 'ದಿವ್ಯಾಂಗರಾಗಾಂ ವೈದೇಹೀಂ ದಿವ್ಯಾಭರಣ ಭೂಷಿತಾಂ, ಇಹ ಸೀತಾಂ ಶಿರಃ ಸ್ನಾತಾಮುಪಸ್ಥಾಪಯ ಮಾಚಿರಂ' ಎಂದಿರಲಾಗಿ ಅದಕ್ಕೆ ಅವಕಾಶವಿರಲಿಲ್ಲ.

ಹರ್ಷ ಸ್ನೇಹ ಹೊಮ್ಮಿ ಬಂದಿತ್ತು. ಆಕೆಯ ಕಿವಿಗೆ ಈಗ ಬಿದ್ದುದು ದಾರಣವಾದ ಅಗ್ನಿಪಾತ! ರಾಮನು ಅವಳ ಕಡೆಯಿಂದ ತನ್ನ ಮುಖವನ್ನು ಬೇರತ್ತ ತಿರುಗಿಸಿ ಕಠಿಣವಾದ ಆಕೃತಿ ತಳೆದಿದ್ದ : 'ಸೀತೆ, ಕ್ರೂರನಾದ ರಾಕ್ಷಸನನ್ನು ಕೊಂದು ನನ್ನ ಎದೆಯಲ್ಲಿನ ಕೋಪ ಹೋಯಿತು. ಹಾಗೆಯೇ ನನ್ನ ಒಳಗೆ ಉಂಟಾಗಿದ್ದ ಹೀನಾಯ ಭಾವವೂ ತೊಲಗಿತು. ಇಂದು ನನ್ನ ಪೌರುಷವೂ ಶ್ರಮವೂ ಸಫಲವಾದವು. ನನ್ನ ಪ್ರತಿಜ್ಞೆ ನೆರವೇರಿದೆ. ರಾಕ್ಷಸನು ನಿನ್ನನ್ನು ಎತ್ತಿಕೊಂಡು ಹೋದಾಗ ದೈವಸಂಪಾದಿತವಾದ ದೋಷ ಬಂದು ನನ್ನ ಮೇಲೆ ಎರಗಿತು. ನನ್ನ ತೇಜಸ್ಸಿನ ಫಲವಾಗಿ, ಪೌರುಷದಿಂದ ಅವನನ್ನು ಗೆದ್ದಾಗ ಅಪಮಾನ ಅಳಿಸಿಹೋಯಿತು'[೨೮] ಎಂದನು. 'ಮೃಗೀವ ಉತ್ಫುಲ್ಲನಯನಾ ಬಭೂವಾಶ್ರು ಪರಿಪ್ಲುತಾ' – ಹೆಣ್ಣು ಜಿಂಕೆಯ ಹಾಗೆ ಕಣ್ಣು ತೆರೆದಿದ್ದಳು; ಕಣ್ಣು ತುಂಬಾ ನೀರು. ಸೀತೆಯನ್ನು ಕಂಡಾಗ ಅವನಲ್ಲಿ ಕ್ರೋಧಾವೇಶ ಹುಟ್ಟಿದಂತಾಗುತ್ತದೆ ; ಹುಬ್ಬು ಗಂಟಿಕ್ಕಿದವು ; ಕಣ್ಣು ಬೇರೆಡೆ ನೋಡಿದವು. ವಾನರರ, ರಾಕ್ಷಸರ ನಡುವೆ ಸೀತೆ ನಿಂತಿದ್ದಾಗ ಕ್ರೂರವಾದ ಈ ಮಾತುಗಳನ್ನು ಹೇಳಿದ: 'ನಿನಗೋಸ್ಕರ ನಾನು ಈ ಯಾವುದನ್ನೂ ಮಾಡಿಲ್ಲ. ಕಣ್ಣು ಬೇನೆಯಿರುವವನಿಗೆ ದೀಪ ಹೇಗೆ ತೊಂದರೆ ಪಡಿಸುವದೊ ಹಾಗೆ ನಿನ್ನನ್ನು ಕಂಡು ನನಗಾಗಿದೆ. ಆದುದರಿಂದ–

ತದ್ಗಚ್ಛಹ್ಯಭ್ಯನುಜ್ಞಾತಾ ಯಥೇಷ್ಟಂ ಜನಕಾತ್ಮಜೇ
ಏತಾ ದಶ ದಿಶೋ ಭದ್ರೇ ಕಾರ್ಯಮಸ್ತಿ ನಮೇ ತ್ವಯಾ

'ಹತ್ತು ದಿಕ್ಕುಗಳೂ ನಿನಗೆ ತೆರೆದಿವೆ ; ನಿನ್ನ ಇಷ್ಟ ಬಂದ ಕಡೆ ಹೋಗು; ನನ್ನ ಅಪ್ಪಣೆಯಿದೆ, ನನಗೆ ನಿನ್ನ ಅಗತ್ಯವಿಲ್ಲ' ಎಂದನು. 'ಸತ್ಕುಲದಲ್ಲಿ ಹುಟ್ಟಿ ಅಭಿಮಾನಶಾಲಿಯಾಗಿರುವವನು ಇನ್ನೊಬ್ಬನ ಮನೆಯಲ್ಲಿ ವಾಸ ಮಾಡಿದ ಹೆಂಗಸನ್ನು ಹೇಗೆ ಹಿಂದಕ್ಕೆ ತೆಗೆದುಕೊಳ್ಳುತ್ತಾನೆ?'

---

೨೮ ದೈವಕ್ಕೂ ಮಾನುಷಕ್ಕೂ ನಡುವೆ ಇರುವ ವಿರೋಧವನ್ನು ರಾಮನು ಇಲ್ಲಿ ವ್ಯಕ್ತ ಪಡಿಸುತ್ತಾನೆ. ಮಾನುಷ, ಪೌರುಷ ಎಂಬ ಮಾತುಗಳನ್ನು ಹಿಂದೆ ಲಕ್ಷ್ಮಣನು ಅವನಿಗೆ ವಿರುದ್ಧವಾಗಿ ಬಳಸಿದ್ದ. ಇಲ್ಲಿನ 'ದೈವ ಸಂಪಾದಿತೋ ದೋಷೋ ಮಾನುಷೇಣ ಮಯಾಜಿತಃ' ಎಂಬ ಮಾತಿಗೆ ರಾಮಚಾರಿತ್ರದಲ್ಲಿ ಬೆಲೆಕೊಟ್ಟು ಕಥೆಯನ್ನು ವೀಕ್ಷಿಸಬೇಕು. ಮುಂದೆ ಬ್ರಹ್ಮನೇ ಅವನನ್ನು ಸ್ತೋತ್ರ ಮಾಡುವಾಗ, 'ನಾನು ಮನುಷ್ಯ; ರಾಮ ನನ್ನ ಹೆಸರು; ದಶರಥನ ಮಗ. ಅಷ್ಟು ಮಾತ್ರ ನನಗೆ ಗೊತ್ತು' ಎನ್ನುತ್ತಾನೆ.

ರಾವಣಾಂದ ಪರಿಭ್ರಷ್ಟಾಂ ದೃಷ್ಟಾಂ ದುಷ್ಟೇನ ಚಕ್ಷುಷಾ

'ರಾವಣನ ತೊಡೆಯಿಂದ ಜಾರಿ ಬಿದ್ದವಳು; ದುಷ್ಟನ ಕಣ್ಣುಗಳು ನಿನ್ನನ್ನು ನೋಡಿವೆ' ಎಂದನು. 'ನಿನಗೆ ಬೇಕಾದ್ದನ್ನು ಮಾಡು, ಇಲ್ಲಿಂದ ಬೇಕಾದ್ದಲ್ಲಿಗೆ ಹೋಗು'–

ನಾಸ್ತಿ ಮೇ ತ್ವಯ್ಯಭಿಷ್ವಂಗೋ ಯಥೇಷ್ಟಂ ಗಮ್ಯತಾಮಿತಃ

ಎಂದ. ಅಲ್ಲಿಗೇ ನಿಲ್ಲುವುದಿಲ್ಲ.

'ನೀನು ಯಾರ ಜೊತೆಯಲ್ಲಾದರೂ ಹೋಗಿರು. ಇಷ್ಟ ಬಂದ ಹಾಗೆ ಲಕ್ಷ್ಮಣನೊ ಭರತನೊ ಸುಗ್ರೀವನೊ ವಿಭೀಷಣನೊ– ಯಾರ ಜೊತೆಯಲ್ಲಾದರೂ ಸಂಸಾರ ಮಾಡಿಕೊಂಡಿರು: ಅವರು ಯಾರ ಜೊತೆಯಲ್ಲಾದರೂ ಬದುಕು' ಎಂದ. ಈ ಮಾತುಗಳನ್ನಾಡುವಾಗ ರಾಮನು ನಿಜವಾಗಿ ಸುಖ ಪಟ್ಟಿರಲಿಲ್ಲ.

ಕೋಪದಿಂದ ರಾಘವನು ಆಡಿದ ಈ ಮಾತುಗಳ ಕಾಠಿಣ್ಯ ಈ ಸ್ಥಿತಿಯಲ್ಲಿದ್ದ ಬಡಹೆಂಗಸಿಗೆ ಧಕ್ಕೆ ಬಡಿದಂತಾಗುತ್ತದೆ. ಅಂಥವನ್ನು ಗಂಡಸರು ಆಡಿದುದನ್ನು ಆಕೆ ಆ ಮುಂಚೆ ಕೇಳಿದುದಿಲ್ಲ. ಈಗ ಸ್ವಂತ ಗಂಡನು ತನಗೆ ಬರ್ಬರವಾದ ಈ ಮಾತುಗಳನ್ನು ಆಡಿದ. ಅವನ್ನು ಕೇಳಿ ಆಕೆಗೆ ನಾಚಿಕೆಯಾಯಿತು. ಅವು ಅವಳ ಮುಖದ ಮೇಲೆ ಬಿದ್ದ ಪೆಟ್ಟು. ನಿಧಾನವಾಗಿ ಮಾತುಗಳು ಒಡೆದೊಡೆದು ಹೀಗೆಂದಳು.

ಕಿಂ ಮಾಂ ಅಸದೃಶಂ ವಾಕ್ಯಂ ಈದೃಶಂ ಶ್ರೋತ್ರ ದಾರುಣಂ
ರೂಕ್ಷಂ ಶ್ರಾವಯಸೇ, ವೀರ, ಪ್ರಾಕೃತಂ ಪ್ರಾಕೃತಾಮಿವ

'ಓ ವೀರ, ಈಗ ನಾನು ಕೇಳುತ್ತಿರುವ ಮಾತುಗಳು ಎಂಥವು; ನಿನ್ನ ಯೋಗ್ಯತೆಗಾಗಲಿ ನನ್ನದಕ್ಕಾಗಲಿ ತಕ್ಕುವಲ್ಲ. ಕೇಳಲು ಕಿವಿಗೆ ಕಷ್ಟ; ಒರಟು ಗ್ರಾಮ್ಯನೊಬ್ಬನು ಇನ್ನೊಬ್ಬ ಗ್ರಾಮ್ಯನಿಗೆ ಆಡುವಂಥವು. ನೀನು ಯೋಚಿಸಿರುವಂತಹವಳಲ್ಲ ನಾನು. ನನ್ನ ಶೀಲಸ್ಥಾಪಕವಾಗಿ ನಿನಗೆ ಇನ್ನಾವ ಶಪಥಗಳು ಅಗತ್ಯವಿರುವುದಿಲ್ಲವೆಂದುಕೊಂಡಿದ್ದೇನೆ. ಯಾವಳೊ ಒಬ್ಬ ಹೆಂಗಸಿನ ನಡವಳಿಕೆಯನ್ನು ನೋಡಿ ಸ್ತ್ರೀಜಾತಿಯನ್ನೇ ಶಂಕಿಸುತ್ತಿದ್ದೀ– ಅದು ಎಷ್ಟು ಸೂಕ್ತ! ನನ್ನ ಮೇಲೆ ನನಗೆ ವಶ ತಪ್ಪಿರುವಾಗ ನನ್ನ ದೇಹವನ್ನು ಇನ್ನೊಬ್ಬನು ಮುಟ್ಟಿರಬಹುದು. ನನಗೆ ಏನು ಮಾಡುವ ಸ್ವಾತಂತ್ರ್ಯವೂ ಆಗ ಇರಲಿಲ್ಲ. ದೋಷ ನನ್ನದಲ್ಲ; ದೈವದ್ದು. ನನ್ನ ಮನಸ್ಸು ಎಂದಿಗೂ ನನ್ನ ವಶದಲ್ಲಿದೆ: ನನ್ನ ಹೃದಯ ಸರ್ವದಾ ನಿನ್ನಲ್ಲಿಯೇ ನಿಷ್ಠೆಯಿಂದ ಇರತಕ್ಕದ್ದು. 'ಪರಾಧೀನೇಷು

ಗಾತ್ರೇಷು ಕಿಂಕರಿಷ್ಯಾಮಿ ಅನೀಶ್ವರಾ?' ನನ್ನ ದೇಹದ ಮೇಲೆ ಅಧಿಕಾವಿಲ್ಲದಿರುವವಳು ನಾನೇನು ಮಾಡಬಲ್ಲೆ? ಜೊತೆಯಲ್ಲಿ ಬಹುಕಾಲ ಬೆಳೆದಿದ್ದೇವೆ. ಸಂಬಂಧಗಳೇರ್ಪಟ್ಟಿವೆ. ಇಂದು ನೀನು ನನ್ನನ್ನು ಸ್ವೀಕರಿಸದಿದ್ದರೆ ನನ್ನ ಕೆಲಸ ಮುಗಿಯಿತು. ಹನುಮಂತನನ್ನು ನೀನು ನನ್ನಲ್ಲಿಗೆ ಕಳಿಸಬೇಕಾದ್ದಿರಲಿಲ್ಲ. ಸಾಯಲು ನನ್ನನ್ನು ಲಂಕೆಯಲ್ಲೇ ಬಿಡಬೇಕಿತ್ತು. ಆಗ ಏಕೆ ನನ್ನನ್ನು ತ್ಯಾಗ ಮಾಡಲಿಲ್ಲ? ನಾನು ಅಲ್ಲಿ ಹೇಗೆ ಬಾಳಿದ್ದೆನೆಂಬುದನ್ನು ಹನುಮಂತನು ನೋಡಿದ್ದಾನೆ. ನೀನು ನನ್ನಲ್ಲಿ ಸಂದೇಹಪಟ್ಟರೆ ನನ್ನ ಜೀವಕ್ಕೆ ಬೆಲೆಯಿಲ್ಲ. ಕೋಪದ ಉದ್ರೇಕದಲ್ಲಿ ನೀನಿದ್ದೀ. ನನ್ನ ತಂದೆ ದೊಡ್ಡವರು; ನನ್ನ ಬದುಕಿಗೂ ಶೀಲಕ್ಕೂ ನೀನು ತಕ್ಕಂತೆ ಬೆಲೆಗಟ್ಟಿಲ್ಲ. ಹುಡುಗಿಯಾಗಿದ್ದಾಗ ನನ್ನ ಕೈ ಹಿಡಿದ ನಿನಗೆ ನಾನು ಯಾವ ವಿಶ್ವಾಸದ ಪ್ರಮಾಣವನ್ನು ಕೊಟ್ಟಿಲ್ಲ? ನನ್ನ ಭಕ್ತಿಯನ್ನೂ ಶೀಲವನ್ನೂ ಕಣ್ಣಿಗೆ ಕಾಣದಂತೆ ಹಿಂದಕ್ಕೆ ಹಾಕಿದ್ದೀ' ಎಂದಳು.

ಇನ್ನೇನು ಮಾಡುವುದಕ್ಕೂ ಸೀತೆಗೆ ಉಳಿಯಲಿಲ್ಲ. ಮಹಾತ್ಮಳಾದ ಹೆಂಗಸೊಬ್ಬಳು ನೋವಿನ ಉಮ್ಮಳದಲ್ಲಿ ಆಡಿದ ಮಾತುಗಳಿವು. ಕಣ್ಣೀರು ಕರೆಯುತ್ತ ಗದ್ಗದ ಸ್ವರದಲ್ಲಿ ಆಕೆ ಹೇಳಿದಳು–

ಚಿತಾಂ ಮೇ ಕುರು ಸೌಮಿತ್ರೇ ವ್ಯಸನಸ್ಯಾಸ್ಯ ಭೇಷಜಂ
ಮಿಥ್ಯೋಪಘಾತೋಪಹತಾ ನಾಹಂ ಜೀವಿತುಮುತ್ಸಹೇ.

(ಸೌಮಿತ್ರಿ, ನನಗೊಂದು ಚಿತೆಯನ್ನು ಸಿದ್ಧಪಡಿಸು; ವ್ಯಸನಕ್ಕೆ ಅದೇ ಚಿಕಿತ್ಸೆ. ಕೆಟ್ಟ ಆರೋಪಣೆ ಹೊತ್ತು ಇನ್ನು ಬದುಕಲು ನನಗೆ ಉತ್ಸಾಹವಿಲ್ಲ.)

ಲಕ್ಷ್ಮಣನ ವ್ಯಥೆಯನ್ನು ಹೇಳತೀರದು. ಈವರೆಗೂ ಈ ಗಂಡ ಸೀತೆಗೆ ಸಾರ್ವಜನಿಕವಾಗಿ ಅಪಮಾನವನ್ನು ತ್ಯಾಗವನ್ನು ವಿಧಿಸಿದ್ದು ಈಗ ಅವಳಲ್ಲಿ ಪ್ರೀತಿ ಕಳೆದುಕೊಂಡಿದ್ದಾನೆ. ಮರ್ಯಾದಸ್ಥಳಾದ ಹೆಂಗಸು ಬರಬಹುದಾದ ಏಕೈಕ ತೀರ್ಮಾನಕ್ಕೆ ಬಂದಿದ್ದಾಳೆ. ಅಗ್ನಿಪ್ರವೇಶ ಮಾಡುತ್ತೇನೆಂಬುದು ಅವಳ ಮಾತು. ಲಕ್ಷ್ಮಣನು ತನ್ನ ಅಣ್ಣನ ಮುಖವನ್ನು ನೋಡಿದ; ಅದರಲ್ಲಿ ಯಾವ ಮಾರ್ಪಾಡೂ ಕಾಣಲಿಲ್ಲ. ಸೌದೆ ಒಟ್ಟಿ ಬೆಂಕಿ ಮಾಡಿದ. ಸೀತೆ ಮುಖತಗ್ಗಿಸಿ ರಾಮನ ಸುತ್ತಲೂ ನಿಧಾನವಾಗಿ ಹೋಗಿ ಉರಿಯುತ್ತಿರುವ ಅಗ್ನಿಯ ಸುತ್ತ ಬಂದಳು. ಅಂಜಲಿಬದ್ಧಳಾಗಿ ದೇವತೆಗಳಿಗೂ ಬ್ರಾಹ್ಮಣರಿಗೂ ಕೈಮುಗಿದು ಬೆಂಕಿಯ ಬಳಿಯಲ್ಲಿ ಈ ಮಾತುಗಳನ್ನಾಡುವವಳು–

ಯಥಾ ಮೇ ಹೃದಯಂ ನಿತ್ಯಂ ನಾಪಸರ್ಪತಿ ರಾಘವಾತ್
ತಥಾ ಲೋಕಸ್ಯ ಸಾಕ್ಷೀ ಮಾಂ ಸರ್ವತಃ ಪಾತು ಪಾವಕಃ – ಇತ್ಯಾದಿ.

(ನನ್ನ ಹೃದಯ ಎಂದೆಂದಿಗೂ ರಾಘವನನ್ನೇ ಭಜಿಸಿದ್ದರೆ, ಓ ಪಾವಕ, ಲೋಕದ ಮೇಲೆ ನಡೆಯುವ ಎಲ್ಲ ಜಂತುವನ್ನೂ ಕಾಣುವ ದೇವ, ನನ್ನನ್ನು ರಕ್ಷಿಸು, – ಇತ್ಯಾದಿ).

ಉರಿಯುತ್ತಿರುವ ಬೆಂಕಿಯನ್ನು ಹೊಕ್ಕಳು. ತನ್ನ ಶುಚಿಹೃದಯವೊಂದನ್ನು ಬಿಟ್ಟರೆ ತಾನು ಒಂಟಿ. ಸುತ್ತಲೂ ನಿಂತಿದ್ದ ಜನ ದಿಕ್ಕೆಟ್ಟವರಾದರು. ಅಗ್ನಿಗೆ ಮಾಡಿದ ಈ ಪ್ರಾರ್ಥನೆಯೂ ಮನವಿಯೂ ಅಗ್ನಿಯ ರಕ್ಷಣೆಯನ್ನು ಬೇಡಿದ್ದುವು. ಅಗ್ನಿದೇವನು ಆಕೆಯ ಶರೀರವನ್ನು ಸುಡಲಿಲ್ಲ. ಯಾವ ಕೆಡುಕೂ ಆಗದಂತೆ ಆಕೆ ಹೊರಗೆ ಬರಲು ನೆರವಾದ. ಬದಲು, ಆ ಜನಸಂದಣಿಯ ಮುಂದೆ ರಾಮನಿಗೆ ಅವನು ಆಕೆಯನ್ನು ಬಹುಮಾನವಾಗಿ ಕೊಟ್ಟನು; ಆಕೆಯ ಪಾತಿವ್ರತ್ಯಕ್ಕೂ ಶುಚಿಗೂ ತಾನು ಪ್ರಮಾಣವೆಂಬಂತೆ.

ಭಾರ ಇಳಿದು ರಾಮನ ಮನಸ್ಸಿಗೆ ನೆಮ್ಮದಿಯಾಯಿತು. ಯಾವ ಸಮಯದಲ್ಲೇ ಆಗಲಿ, ತನಗೆ ಸೀತೆಯ ಚಾರಿತ್ರ್ಯವನ್ನು ಕುರಿತಾಗಲಿ ಆಕೆಯ ಶೀಲವನ್ನು ಕುರಿತಾಗಲಿ ಸಂದೇಹ, ಅನಿಶ್ಚಯ ಇರಲಿಲ್ಲ. ಅವಳನ್ನು ಒಲಿಸುವುದರಲ್ಲಿ ರಾಕ್ಷಸನಿಗೆ ಕಿಂಚಿತ್ತು ಗೆಲವೂ ದೊರೆಯುವುದಿಲ್ಲವೆಂದು ಗೊತ್ತಿತ್ತು. ಯಾವುದೇ ಮೋಹಗಳನ್ನೂ ಆಕರ್ಷಣೆಗಳನ್ನೂ ಹೂಡಲಿ, ಎಷ್ಟು ಮಟ್ಟಿಗೆ ಅವಳನ್ನು ಬಯಸಲಿ, ಅದು ಶಕ್ಯವಿಲ್ಲವೆಂಬುದೂ ಅವನಿಗೆ ಗೊತ್ತಿತ್ತು. ಆಕೆಯ ಶುಚಿಶೀಲವನ್ನೂ ಉದಾತ್ತತೆಯನ್ನೂ ಕುರಿತು ಎಲ್ಲರೂ ಮಾತನಾಡುತ್ತಿದ್ದಾಗ, ಅಗ್ನಿದೇವನೇ ಅದಕ್ಕೆ ಸಾಕ್ಷಿ ಹೊತ್ತಿರುವಾಗ ರಾಮನಿಗೆ ಸಂತೋಷವಾಗುತ್ತದೆ; ಅವನ ಕಣ್ಣು ತುಂಬುತ್ತದೆ. ಮೂರು ಲೋಕಗಳಲ್ಲಿಯೂ ಶುದ್ಧಳು, ಸಚ್ಚರಿತ್ರಳು 'ವಿಶುದ್ಧಾ ತ್ರಿಷುಲೋಕೇಷು.' ಸೀತೆಯಲ್ಲಿ ಇನ್ನಾವ ಪಾಪದ ಸೋಂಕೂ ಉಳಿಯದು. ಈ ಪ್ರಮಾಣವೂ ಚಾರಿತ್ರ್ಯಸಿದ್ಧಿಯೂ ಆಗದಿದ್ದಿದ್ದರೆ ಪ್ರಪಂಚ ನನ್ನನ್ನು ಆಕ್ಷೇಪಿಸುತ್ತಿತ್ತು. ಬಹುಕಾಲ ರಾವಣನ ಅಂತಃಪುರಗತೆಯಾಗಿದ್ದ ಹೆಂಡತಿಯನ್ನು ದಶರಥನ ಮಗನಾದ ರಾಮನು ಹಿಂದಕ್ಕೆ ತೆಗೆದುಕೊಂಡನೆಂಬಂಶದಲ್ಲಿ ಸತ್ಯದ ಇಂಥ ಸಾರ್ವಜನಿಕ ಪ್ರಮಾಣವೊಂದು ಲೋಕಕ್ಕೆ ಬೇಕಿತ್ತು. 'ಪ್ರತ್ಯಯಾರ್ಥಂ ತು ಲೋಕಾನಾಂ ತ್ರಯಾಣಾಂ ಸತ್ಯಸಂಶ್ರಯಃ' ಮೂರು ಲೋಕಕ್ಕೆಲ್ಲ ಸತ್ಯದ ಸಂಪೂರ್ಣ ಪ್ರಮಾಣ ದೊರೆಯುತ್ತದೆ. 'ರಕ್ಷಿತಾಂ ಸ್ವೇನ ತೇಜಸಾ' – 'ಸ್ವಂತ ತೇಜಸ್ಸಿಂದ ರಕ್ಷಣೆ ಪಡೆದವಳಾದ ಸೀತೆಗೆ ಬೇರೆ ಯಾವ ರಕ್ಷಣೆ ಬೇಕು? ದುಷ್ಟ ರಾವಣನು ಅವಳ ಮನಸ್ಸಿನ ಮೇಲೆ ಎಂದಿಗೂ

ತನ್ನ ಪ್ರಭಾವ ಬೀರಲಾಗುತ್ತಿರಲಿಲ್ಲ. ಕಡಲು ಹೇಗೆ ತನ್ನ ತೀರವನ್ನು ದಾಟಿಬರುವುದು ಶಕ್ಯವಿಲ್ಲವೊ ಹಾಗೆ ಅನು ಅವಳನ್ನು ಅತಿಕ್ರಮಿಸಲಾರ. ಭಾಸ್ಕರನಿಗೆ ಪ್ರಭೆ ಹೇಗೊ ನನಗೆ ಸೀತೆ ಹಾಗೆ. ನನ್ನ ಕೀರ್ತಿಯ ಪರಮಾಕೃತಿ ಅವಳು. ಅವಳನ್ನು ಸ್ವೀಕರಿಸುತ್ತೇನೆ' – ಎಂದನು.

ಉತ್ತರಕಾಂಡದಲ್ಲಿನ ಸನ್ನಿವೇಶಕ್ಕೂ ಇದಕ್ಕೂ ಹೋಲಿಸಿದರೆ ಇತಿಹಾಸದ ಕಾವ್ಯವೊಂದರ ಬಿಗಿಗೂ ಅದರ ಉನ್ನತಿಗೂ ವ್ಯತ್ಯಾಸ ಕಾಣಿಸಿದಂತಾಗುತ್ತದೆ. ಎರಡನೆಯ ಸಂದರ್ಭದಲ್ಲಿ ಸೀತೆಯ ಮನಸ್ಸಿಗೆ ಆಯಾಸವಾಗಿದೆ; ಬದುಕಿನ ಎಲ್ಲ ಉತ್ಸಾಹವನ್ನೂ ಆಕೆ ಕಳೆದುಕೊಂಡಿದ್ದಾಳೆ. ಲವಕುಶರು ರಾಮಾಯಣ ಕಥೆಯ ವೈಭವವನ್ನು ರಾಮನೆದುರಿಗೆ ಹಾಡಿದ್ದಾರೆ. ಸೀತೆಯಲ್ಲಿ ತನಗೆ ಹುಟ್ಟಿದ ಮಕ್ಕಳು ಅವರು ಎಂಬ ನಿಜ ಪ್ರಕಾಶಗೊಂಡಿದೆ. ಸೀತೆಯನ್ನು ಯಜ್ಞಶಾಲೆಯಲ್ಲಿ ತೆರೆದ ಸಭೆಯ ಮುಂದೆ ಕರೆತರಬೇಕೆಂದು ರಾಮನು ಹೇಳಿದ್ದಾನೆ. ಅಲ್ಲಿ ನೆರೆದಿರುವ ಎಲ್ಲರ ಸಮಕ್ಷಮದಲ್ಲಿ ತನ್ನ ನಿರ್ದೋಷವನ್ನೂ ಶುಚಿಯನ್ನೂ ಪ್ರಕಟಿಸಿದರೆ ತಾನು ಆಕೆಯನ್ನು ಸ್ವೀಕರಿಸುತ್ತಾನಂತೆ. ಇದು ಪುನಃಶೋಧನೆ. ತನ್ನ ಚಾರಿತ್ರಕ್ಕೆ ಸಾಕ್ಷಿಪ್ರಮಾಣವಾಗಿ ಮರಳಿ ತಿಳಿಸಬೇಕೆಂದು ಈಗ ಅವಳನ್ನು ಕೇಳುತ್ತಿದ್ದಾನೆ. ಗಂಡನ ಮಾತು ಅಪ್ಪಣೆ: ಆಗಬಹುದು. 'ತಥಾಕರಿಷ್ಯತೇ ಸೀತಾ ದೈವತಂ ಹಿ ಪತಿ ಸ್ತ್ರಿಯಾಃ' ಸೀತೆ ಹಾಗೆ ಮಾಡುತ್ತಾಳೆ. ನೇರ ವಾಲ್ಮೀಕಿಯ ಹಿಂದೆ ಸೀತೆ ಬಂದಳು. 'ಅವಗಚ್ಛತ್ ಅವಾಙ್ಮುಖೀ' – ಮುಖತಗ್ಗಿಸಿ ಹಿಂಬಾಲಿಸಿದಳಂತೆ. ಇಲ್ಲಿ ರಾಮನು ಅವಳಿಗೆ ಸ್ಪಷ್ಟವಾದ ಅನುಜ್ಞೆಮಾಡುತ್ತಿದ್ದಾನೆ. ಜನಸಾಮಾನ್ಯರನ್ನು ತೃಪ್ತಿಪಡಿಸುವುದಕ್ಕೋಸ್ಕರ ನಿನ್ನ ನಿರ್ದೋಷವನ್ನು ಪ್ರಕಟಪಡಿಸು ಎಂದಿದ್ದಾನೆ. ಕಾಷಾಯವಾಸಿನಿ ಸೀತೆ ಲೋಕದ ಮತ್ತು ಸ್ವರ್ಗದ ಎಲ್ಲರನ್ನೂ ಕುರಿತು ನಿಂತಿದ್ದಾಳೆ. ಅಂಗೈಗಳನ್ನು ಅಗಲವಾಗಿ ತೆಗೆದು ದೇವತೆಗಳ ಕಡೆ ತಿರುಗಿ ತನ್ನನ್ನು ಶುದ್ಧಿಮಾಡುವ ಮಾತುಗಳನ್ನಾಡುತ್ತಾಳೆ. ಬೇರೆ ಏನನ್ನೂ ನುಡಿಯುವುದಿಲ್ಲ; ಮುಖ ಮೇಲೆತ್ತುವುದಿಲ್ಲ; ಭೂ ಜೀವನದ ವ್ಯಥೆ ಆಕೆಯನ್ನು ಆವರಿಸಿ ತನ್ನ ತೀರ್ಮಾನಕ್ಕೆ ಬಂದಿದ್ದಾಳೆ. ಈ ಪ್ರಾರ್ಥನೆ ಅವಳ ಜೀವದ ಆಳದಿಂದ ಬರುತ್ತದೆ: ಇಲ್ಲಿರುವ ಮೂರು ಪದ್ಯಗಳು ತನ್ನ ತಾಯಿ ಭೂದೇವಿಗೆ: ತಾನು ಹೃದಯ ಶುದ್ಧಿಯುಳ್ಳವಳಾಗಿದ್ದರೆ ತೆರೆದು ತನ್ನನ್ನು ಸ್ವೀಕರಿಸಬೇಕು ಎಂದು ಕೇಳಿಕೊಂಡ ಮೊರೆ. ಹೃದಯದಲ್ಲಾಗಲಿ, ಪ್ರೀತಿಯಲ್ಲಾಗಲಿ ಇನ್ನಾರನ್ನೂ ತಾನು ಕಂಡವಳಲ್ಲ; ಮನಸ್ಸು, ಮಾತು, ಕ್ರಿಯೆಗಳಲ್ಲಿ ಎಂದೆಂದಿಗೂ ರಾಮನನ್ನೇ ಆರಾಧಿಸಿ ತನ್ನ ಮನಸ್ಸಿನ ಪರಿಧಿಯ ಅತಿ ದೂರ ಮಿತಿಗಳಲ್ಲಿ ಕೂಡ ತನ್ನಲ್ಲಿ ಎಂದಾಗಲಿ

ಇನ್ನಾರಿಗೂ ಎಡೆ ದೊರೆತಿಲ್ಲ ಎನ್ನುತ್ತಾಳೆ. ಭೂತಾಯನ್ನು ಸೀತೆ ಕರೆಯುತ್ತಿದ್ದ ಹಾಗೆಯೇ ಭೂಮಿ ಬಾಯಿ ತೆರೆದು ಹೊರಗೆ ಬಂದು ಅವಳನ್ನು ತನ್ನ ತೋಳುಗಳಲ್ಲಿ ಅಪ್ಪಿಕೊಂಡು ಭೂಮಿಯೊಳಕ್ಕೆ–ತವರಿಗೆ–ಕರೆದು ಹೋಗುತ್ತಾಳೆ. ತಾಯಿ ಮಗಳು ದುಃಖಕ್ಕೆ, ಕ್ಷಮೆಗೆ, ತಾಳ್ಮೆಗೆ ಸಂಕೇತಗಳು. ಅಲ್ಲಿಂದ ಮುಂದೆ ಮಾನವರೆಲ್ಲರ ಕಣ್ಣಿಂದ ಆಕೆಯ ರೂಪ ಮರೆಯಾಗುತ್ತದೆ. ಈ ದೃಶ್ಯ ವ್ಯಥೆಕರವಾಗಿದ್ದರೂ ಹೃದಯಸ್ಪೃಕ್ಕಾಗಿದ್ದರೂ ಅಲ್ಲಿನ ರಸ, ರುಚಿ ಬೇರೆ. ಹಿಂದಿನ ಸೀತಾ ಪ್ರಾರ್ಥನೆಯ ತೀವ್ರತೆಯಾಗಲಿ ರಾಗಭರವಾಗಲಿ ನಮ್ಮ ಮನಸ್ಸಿನ ಮೇಲೆ ಒತ್ತಾಯ ಹಾಕುವ ಶಕ್ತಿಯಾಗಲಿ ಕ್ರಿಯಾ ಚೈತನ್ಯವಾಗಲಿ ಇದಕ್ಕಿಲ್ಲವೆನಿಸುತ್ತದೆ. ಅನಾವಶ್ಯಕವಾಗಿ ಸೀತೆಯನ್ನು ದುಃಖಕ್ಕೆ ಈಡು ಮಾಡಲಾಗಿದೆ. ಬದುಕಿನಲ್ಲಿ ಮುಂದುವರಿಯುವುದಕ್ಕಿಂತ ಸಾವು ಲೇಸೆಂದು ಕೊಂಡಿದ್ದಾಳೆ. ಉತ್ತರ ಕಾಂಡದ ಈ ಸಂಗತಿ ನಮ್ಮ ಕಲ್ಪನೆಯಲ್ಲಿ ದೊಡ್ಡ ಘಟನೆಯಾಗಿ ಉಳಿಯುವುದಿಲ್ಲ. ಸನ್ನಿವೇಶ ಮಹಿಮೆಯಲ್ಲಾಗಲಿ ತೀಕ್ಷ್ಣತೆಯಲ್ಲಾಗಲಿ ಹಿಂದಿನ ಉನ್ನತಿಗೆ ನಿಲ್ಲುವುದಿಲ್ಲ. ಈ ಎರಡೂ ಬೇರೆ ಬೇರೆ ಮುಡಿಗಳು, ಉನ್ನತಿಗಳು. ಅಲ್ಲಿ ಸೀತೆ ತನಗೆ ರಾಮನಲ್ಲಿ ಎಷ್ಟು ವಿಶ್ವಾಸವಿದೆ ಎಂದು ಸ್ಥಾಪಿಸಬೇಕಿತ್ತು. ಒಂದು ವರ್ಷಕಾಲ ಕಷ್ಟದಲ್ಲಿ ಬೇನೆಯಲ್ಲಿ ಅವನಿಗೆ ತವಕಪಟ್ಟದ್ದ ಹೃದಯವನ್ನು ವ್ಯಕ್ತಪಡಿಸುಬೇಕಿತ್ತು. ಅದುಮಿ ಹಿಂದೆ ಉಳಿಸಿಕೊಂಡಿದ್ದ ಭಾವ ಸ್ಫೋಟಿಸಲು ಅವಕಾಶ ಕೊಡದೆ ಕಠಿಣವಾದ ಆ ಮಾತುಗಳನ್ನಾಡಿ ರಾಮನ ತುಟಿಗಳು ಏನನ್ನು ಮರೆಮಾಡಿದ್ದವು ಎಂಬುದು ಅವಳಿಗೆ ಅರ್ಥವಾಗಬಲ್ಲದ್ದು. ಇಬ್ಬರಿಗೂ ಒಂದು ಸಾರ್ವಜನಿಕ ಕ್ರಿಯಾ ವಿಶೇಷ ಅಗತ್ಯವಾಗಿ ತೋರಿತ್ತು. ಅಗ್ನಿದಿವ್ಯದಂತಹ ಏರ್ಪಾಡಿಂದ ಭಯ ಪಡಬೇಕಾದ್ದೇನೂ ಇಲ್ಲವೆಂದು ಶುಚಿಗಳೂ ಶುದ್ಧಚರಿತ್ರರೂ ಆದ ಅವರಿಬ್ಬರಿಗೂ ಗೊತ್ತಿತ್ತು. ಅವಳೇ ಈ ಅಗ್ನಿಪರೀಕ್ಷೆಯನ್ನು ಆಯ್ದು ಕೊಂಡಳು; ಲೋಕಕ್ಕೆ, ಅವನಿಗೆ ತನ್ನ ಪ್ರೀತಿ ಭಕ್ತಿಗಳನ್ನು ಸ್ಥಾಪಿಸಿಕೊಡುವುದಕ್ಕಾಗಿ. ಬದುಕಿನ ಮೇಲೆ ಪ್ರೀತಿ ಅವಳಲ್ಲಿ ಇನ್ನೂ ಆಗ ಉಳಿದಿತ್ತು. ರಾಮನ ಶೀಲದಲ್ಲಿನ ಉಕ್ಕು ಕಠಿಣವಾದರೂ ತನ್ನ ಉನ್ನತಿಯಲ್ಲಿ ಅದು ಕಾಣುತ್ತದೆ. ಅವನ ಇಚ್ಛಾಶಕ್ತಿ ಅಸ್ವಾರ್ಥತೆ ಮಾನವಲೋಕದ ವ್ಯಕ್ತಿಯೊಬ್ಬನಿಂದ ಬೇಡ ಬಯಸುವ ಅತಿ ಹೆಚ್ಚಿನ ಬೆಲೆಯನ್ನು ತೆರಲು ಅವನು ಸಿದ್ಧನಾಗುತ್ತಾನೆ. ಆ ಕಾಲದ ಶ್ರೇಷ್ಠ ಜನ ಯಾವುದನ್ನು ಧರ್ಮವೆಂದು ಒಪ್ಪಿಕೊಳ್ಳುತ್ತಿದ್ದರೊ ತನ್ನ ಚಾರಿತ್ರದ ಯಾವ ತೇಜಃಪ್ರಕಾಶ ಲೋಕಕ್ಕೆ ವ್ಯಕ್ತವಾಗುವಂತೆ ಕಾಣಿಸಿಕೊಳ್ಳನು ಬಯಸಿತೊ ಅದನ್ನು ಬಿಡಿಸಿ ಕಾಣಿಸಬೇಕಿತ್ತು. ಉತ್ತರ ಕಾಂಡದ ಕಥೆಯಲ್ಲಿ ಸೀತೆಗೆ ಸ್ಪಷ್ಟವಾಗಿ ಕಾಣುತ್ತದೆ.

ಇಲ್ಲಿ ರಾಮನ ಅಪ್ಪಣೆ ಕೇವಲ ಖಾಸಗಿಯಾದ್ದು ಎಂದು. ಪುನಃ ಪುನಃ ಎಲ್ಲತರಹದ ಜನರಿಗೂ ತನ್ನ ಚಾರಿತ್ರದ ಶುದ್ಧಿಯನ್ನು ಕುರಿತು ಪ್ರಮಾಣ ಕೊಡಬೇಕೆಂಬ ಸಂಗತಿ ಅವಳಿಗೆ ಆಯಾಸ ತಂದಿದೆ. ಇಂಥ ಭಾವ ಹುಟ್ಟಿದರೆ ಅದಕ್ಕೆ ಕೊನೆ, ಮುಗಿತಾಯ ಎಂಬುದೆಲ್ಲಿ? ಅವಳ ಕಾಲವೂ ಸಮೀಪಿಸಿ ಬಂದಿತ್ತು. ರಾಮಾಯಣ ದೃಶ್ಯಗಳ ಕಡೆಕಡೆಯ ಭೂಮಿಕೆಗಳು ಮುಗಿದು ಮರೆಯಾಗುವ ಕಾಲ ಅಷ್ಟುಹೊತ್ತಿಗೆ ಬಂದಿತ್ತು ಕೂಡ.

### ೬. ಹನುಮಂತ

ಮುಂದೆ ನಾವು ಎಣಿಕೆಗೆ ತೆಗೆದುಕೊಳ್ಳಬಹುದಾದ ಮುಖ್ಯ ವ್ಯಕ್ತಿ ಹನುಮಂತ. ಕಿಷ್ಕಿಂಧಾಕಾಂಡದಿಂದ ಹಿಡಿದು, ಸೀತೆಯ ನೆಲೆಯನ್ನು ಕಂಡು ಹಿಡಿದು ಅವಳನ್ನು ಬಿಡುಗಡೆ ಮಾಡುವುದಕ್ಕಾಗಿ ಋಷ್ಯಮೂಕದಲ್ಲಿದ್ದ ಸುಗ್ರೀವನ ಸಹಾಯವನ್ನು ಪಡೆದು ಜಯಶೀಲರಾಗಿ ಎಂದು ರಾಮ ಲಕ್ಷ್ಮಣರಿಗೆ ಕಬಂಧನಿಂದ ನಿರ್ದೇಶನ ದೊರೆತಿತ್ತು. ಅವನೊಡನೆ ಸಂಧಾನ ನಡಸುವುದಕ್ಕಾಗಿ ಸ್ನೇಹಕಾಂಕ್ಷೆಯಿಂದ ರಾಮ ಸುಗ್ರೀವರ ಭೇಟಿಗಾಗಿ ಲಕ್ಷ್ಮಣನು ಹೊರಡುವುದರಲ್ಲಿದ್ದನು.[೨೯] ಇಷ್ಟರೊಳಗೆ ಸುಗ್ರೀವನೂ ಅವನ ಕಡೆಯವರೂ ಈ ಸೋದರರ ಸುಳಿವನ್ನು ಕಂಡಿದ್ದರು. ಅವರು ಯಾರೆಂದು ತಿಳಿಯಬೇಕೆಂದೂ ಇಲ್ಲಿಗೆ ಬಂದುದರ ಉದ್ದೇಶವೇನೆಂದೂ ತನ್ನ ಸ್ಥಾನವನ್ನೂ ಅದೃಷ್ಟವನ್ನೂ ಮುರಳಿ ಗಳಿಸಿಕೊಳ್ಳಲು ಸುಗ್ರೀವನು ಅವರ ಗೆಳೆತನವನ್ನು ಬಯಸುತ್ತಾನೆಂದುದಕ್ಕೆ ಹನುಮಂತನನ್ನು ಕಳಿಸುತ್ತಾನೆ. ಅವರನ್ನು ಕಂಡು ತಾನು ಬಂದ ಕಾರ್ಯವೆಂಥದೆಂಬುದನ್ನೂ ಅವರನ್ನು ಏಕೆ ಭೇಟಿ ಮಾಡುತ್ತಿದ್ದಾನೆಂದೂ ಈತನು ತಿಳಿಸಿದ. ವಿಷಯವನ್ನು ಹನುಮಂತನು ರಾಮನಿಗೆ ತಿಳಿಸಿದ ರೀತಿ ರಾಮನಿಗೆ ತುಂಬ ಮೆಚ್ಚಿಕೆಯಾಗುತ್ತದೆ. ವಾಲಿ ಸುಗ್ರೀವನಿಗೆ ಉಂಟುಮಾಡಿದ ದುರ್ದೆಸೆಯನ್ನು ಕೇಳಿ ಉತ್ತರದೇಶದ ಭಾಷೆಯಾದ ಸಂಸ್ಕೃತವನ್ನು– 'ವಾಚಂ ಕಲ್ಯಾಣೀಂ' – ಬಳಸಿ ಹನುಮಂತನು ಹೇಗೆ ನುಡಿಯುತ್ತಿದ್ದನೆಂಬುದನ್ನು ಕೇಳಿ ರಾಮನಿಗೆ ಅಭಿಮಾನವುಂಟಾಗಿತ್ತು.[೩೦] ಇದು

---

೨೯ ಇಲ್ಲಿ ನೆರವನ್ನೂ ಆಶ್ರಯವನ್ನೂ ಬೇಡುತ್ತಿರುವವನು ರಾಮ; ಬಳಸಿರುವ ಮಾತುಗಳು – 'ಸುಗ್ರಿವಂ ನಾಥಂ ಇಚ್ಛತಿ.'

೩೦ ಇಂಗ್ಲಿಷರಿದ್ದಾಗ ನಮ್ಮವರು ಚೆನ್ನಾಗಿ ಮಾತನಾಡಿದರೆ ಅಂಥವರನ್ನು ಇಂಗ್ಲಿಷರು ತುಂಬಾ ಮೆಚ್ಚಿಕೊಳ್ಳುತ್ತಿದ್ದರು. ಇಂದು ಹಿಂದಿಯನ್ನು ಚೆನ್ನಾಗಿ ಮಾತನಾಡುವ ದಕ್ಷಿಣದವರೆಂದರೆ ಹಿಂದಿಯವರಿಗೂ ಹಾಗೇ ಆದೀತು.

ನಿಜವಾದ ಪ್ರಶಂಸಿಯೇ. ಹನುಮಂತನ ಮರ್ಯಾದೆ ಕುಶಲತೆಗಳನ್ನು ಕುರಿತು ಸರಸವಾಗಿ ರಾಮನು ವ್ಯಾಖ್ಯಾನ ಮಾಡುತ್ತಾನೆ. ಯಾವ ಅರಸನ ಕಾರ್ಯಭಾರಿ, ದೂತ ಆಗಿ ಇಂಥ ಮನುಷ್ಯನು ಮಾತನಾಡುತ್ತಾನೊ ಅವನು ಹೇಗೆ ಸೋತಾನು? ಒಳ್ಳೆಯ ವಾಗ್ಮಿಯಲ್ಲಿ ಇರಬೇಕಾದ ಲಕ್ಷಣಗಳು ಯಾವುವು ಎಂಬುದನ್ನು ವಾಲ್ಮೀಕಿ ಎತ್ತಿ ಹೇಳಬೇಕೆಂದಿದ್ದಾನೊ ಅದು ಈ ಪ್ರಸಂಗದಲ್ಲಿ ವಿಶದಗೊಳ್ಳುತ್ತದೆ. ಎಷ್ಟು ಮರ್ಯಾದೆ! ಎಷ್ಟು ಕುಶಲತೆ! – ಎನ್ನುತ್ತಾನೆ. ರಾಮನ ಮನಸ್ಸು ಜಿತವಾಗುತ್ತದೆ. ನಾವು ಯಾರನ್ನು ಹುಡುಕಿಕೊಂಡು ಹೋಗಬೇಕೆಂದಿದ್ದೆವೊ ಅವನೇ ನಮ್ಮನ್ನು ಅರಸಿಬಂದಿದ್ದಾನೆ. ಅವನೊಡನೆ ಮಾತಾಡು, ಸೌಮಿತ್ರಿ; ಅವರ ಆಶ್ರಯವನ್ನು ಬಯಸಿ ಹೋಗಬೇಕೆಂದಿದ್ದೆವು – ಎನ್ನುತ್ತಾನೆ. ಸುಗ್ರೀವನು ತಾನು ತಮ್ಮಲ್ಲಿ ಗೆಳೆತನ ಬೇಡುತ್ತಾನೆ ಎಂದಿದ್ದಾನೆ ಹನುಮಂತ. ಮೊದಲಿಂದ ಹಿಡಿದು ಅಣ್ಣತಮ್ಮಂದಿರು ಹನುಮಂತನಲ್ಲಿಯೂ ಆತನು ಇವರಲ್ಲಿಯೂ ಪರಸ್ಪರ ರೂಪ ಗುಣ ಶೀಲಗಳಲ್ಲಿ ಒಪ್ಪಿಕೆಯುಳ್ಳವರಾಗುತ್ತಾರೆ. ಅವರ ಆಕೃತಿ ಲಕ್ಷಣಗಳೂ ಆತ್ಮವಿಶ್ವಾಸವೂ ಅವರು ಸಮರ್ಥರೆಂದೂ ಕೈಕೊಂಡ ಕೆಲಸವನ್ನು ನೆರವೇರಿಸಬಲ್ಲರೆಂದೂ ಅವನಿಗೆ ನಂಬಿಕೆ ತರುತ್ತವೆ.

ರಾಮ, ಸುಗ್ರೀವ ಒಬ್ಬರಿಗೊಬ್ಬರು ಸ್ನೇಹವನ್ನು ವಾಗ್ದಾನ ಮಾಡುತ್ತಾರೆ. ನೆರವಿನ ನಿರ್ಣಯವಾಗುತ್ತದೆ. ವಾಲಿಯನ್ನು ಕೊಂದು ರಾಮನು ಸುಗ್ರೀವನನ್ನು ಸಿಂಹಾಸನಸ್ಥನನ್ನಾಗಿ ಮಾಡುತ್ತಾನೆ. ಸುಗ್ರೀವನ ಕಡೆಯ ಮಾತು ಇನ್ನೂ ನೆರವೇರಲಿದೆ. ತಡವಾಗಿರಲು ಕಾರಣ ಸುಗ್ರೀವನ ಲಂಪಟತೆ. ಅವನನ್ನು ಭೋಗ ಲಾಲಸತೆಯಿಂದ ತಿರುಗಿಸಿ ಅವನ ಹೊಣೆಗಾರಿಕೆಯನ್ನು ಹನುಮಂತನು ತಿಳಿಸುತ್ತಾನೆ. ಇಬ್ಬರ ನಡುವೆಯ ಸ್ನೇಹವನ್ನು ಹದಕ್ಕೆ ತರುತ್ತಾನೆ. ಹನುಮಂತನಿಗೆ ಆಜ್ಞೆಯಾಯಿತು–ವಾನರ ಸೈನ್ಯವನ್ನು ಕೂಡಿಸುವ ಹೊಣೆಯೂ ಸೈನ್ಯ ವ್ಯವಸ್ಥೆಯೂ ಅವನದೆಂದು. ಜೊತೆಗೆ ಅಂಗದನ್ನೂ ಪ್ರಮುಖ ಹಿರಿಯನ್ನೂ ಹನುಮಂತನೊಡನೆ ಸುಗ್ರೀವನು ದಕ್ಷಿಣಕ್ಕೆ ಹೋಗ ಕಳಿಸಿದಾಗ ಈ ತಂಡದವರ ಆಯ್ಕೆ ತನ್ನ ಕಾರ್ಯ ನೆರವೇರಿಕೆಗೆ ಎಲ್ಲಕ್ಕಿಂತ ಹೆಚ್ಚು ಸಾಧಕವಾದೀತೆಂದು ರಾಮನಿಗೆ ತೋರಿತು. ಹನುಮಂತನನ್ನು ನೇಮಿಸಿದಾಗ ಸುಗ್ರೀವನ ಅಂತರ್ಯದಲ್ಲಿ ಈ ಕೃತಿಯನ್ನು ನೆರವೇರಿಸುವುದಕ್ಕೆ ಹನುಮಂತನೇ ತಕ್ಕವನು, ಸಾಧಿಸಿ ಬರುತ್ತಾನೆ ಎಂದಿತ್ತು. ವಾನರ ಸೈನ್ಯ ಬಳಲಿ ಆಯಾಸಗೊಂಡು ಬಾಯಾರಿದ್ದಾಗ ಸ್ವಯಂಪ್ರಭೆಯ ಗುಹೆಯೊಳಗೆ ವಾನರ ಸೈನ್ಯವನ್ನು ನಡಸಿಕೊಂಡು ಹೋದವನು ಅವನೇ. ತಾವು ಅಲ್ಲಿಗೆ ಯಾವ ಕಾರ್ಯಕ್ಕಾಗಿ ಬಂದಿದ್ದೇವೆಂದೂ ತಮ್ಮ ತಕ್ಷಣದ

ಅಗತ್ಯವೇನೆಂದೂ ಆಕೆಗೆ ವಿವರಿಸಿದವನು ಅವನೇ. ಆಕೆ ಅವರನ್ನು ಗುಹೆಯಿಂದ ಹೊರಗೆ ಕರೆದುತಂದು ಕಡಲ ತಡಿಯಲ್ಲಿ ಬಿಟ್ಟಾಗ ತಮ್ಮ ಕಾರ್ಯದ ನೆರವೇರಿಕೆಗೆ ತುಂಬ ಹತ್ತಿರ ಸಾರಿದಂತಾಯಿತು. ಸೀತೆಯನ್ನು ಪತ್ತೆ ಮಾಡಲು ಇವರು ಇನ್ನು ಮಾಡಬೇಕಾಗಿದ್ದ ಕಾರ್ಯ ಕಡಲನ್ನು ದಾಟಿಹೋಗುವುದು ಮಾತ್ರ. ಅಂಗದನಿಗೆ ಈ ಸಂಗತಿ ಉತ್ಸಾಹವುಂಟು ಮಾಡುತ್ತದೆ.

ಇದಕ್ಕೆ ಸ್ವಲ್ಪ ಮುಂಚೆ ತಾನೇ ಅಂಗದನೂ ವಾನರದಳದವರೂ ಕಾರ್ಯ ವಿಮುಖರಾಗಿ ಧಾರಣೆ ಮಾಡುತ್ತಿದ್ದುದನ್ನು ಮುರಿಯಬೇಕಾದದ್ದೂ ಹನುಮಂತನ ಕೆಲಸವೇ ಆಯಿತು. ಅಷ್ಟು ಹೊತ್ತಿಗೆ ಸುಗ್ರೀವನು ಇವರಿಗೆ ವಿಧಿಸಿದ್ದ ಕಾಲದ ಮಿತಿ ಮೀರಿತ್ತು. ತಾವು ಸೋತೆವೆಂದು ಸುಗ್ರೀವನಿಗೆ ತಿಳಿಸಿ ರಾಜನಿಂದ ಶಿಕ್ಷೆ ಅನುಭವಿಸಲು ಅವರು ಇಷ್ಟವಿಲ್ಲವಾಗಿದ್ದರು. ವಾನರ ಸೈನ್ಯದಲ್ಲಿ ಉಂಟಾದ ಬಂಡಾಯದ ಬುದ್ಧಿಯನ್ನು ಹೋಗಲಾಡಿಸಿ ಅವರನ್ನು ಪುನಃ ಸುಗ್ರೀವನ ಕಡೆ ತಿರುಗಿಸಲು ಹನುಮಂತನು ಮಹಾ ಪ್ರಯತ್ನ ಮಾಡಬೇಕಾಯಿತು. ಅವರಿಗೆ ಅವನು ನುಡಿಯುವ ಮಾತುಗಳು ದಂಗೆ ಕೋರರನ್ನು ಮುರಿಯುವ ದೊಡ್ಡ ವಿಧಾನವೇ ಆಗುತ್ತದೆ. ಪಕ್ಷದಲ್ಲಿ ಒಡಕನ್ನುಂಟು ಮಾಡಿದರೆ ಇದರ ಪರಿಣಾಮಗಳು ಏನಾಗುತ್ತವೆ ಎಂಬುದನ್ನು ಅವರಿಗೆ ತಿಳಿಯಹೇಳಿದ. ನಾಯಕನಾಗಿ ಇಂಥ ನಡತೆ ತಪ್ಪಾಗುವುದೆಂದೂ ರಾಜಕಾರ್ಯಕ್ಕೆ ಪೂರ್ತಿಯಾಗಿ ವಿರೋಧಗೊಳ್ಳುವುದು ತಕ್ಕುದಲ್ಲವೆಂದೂ ಹೇಳಿದ. ಆಡಿದ ಮಾತುಗಳು ಕಠಿನ; ಆದರೆ ಖಚಿತ, ಸ್ಪಷ್ಟ, ಅಸಂದಿಗ್ಧ. ಉಳಿದವರು ಏನೇ ಮಾಡಲಿ, ತಾವು ನಾಲುವರು ಹಿರಿಯರು ಇಂತಹ ನಡತೆಗೂ ಕಾರ್ಯ ವಿಮುಖತೆಯ ತೀರ್ಮಾನಗಳಿಗೂ ಒಪ್ಪುವುದಿಲ್ಲವೆಂದ. ಕಡೆಗೆ ಹಾಕುವ ಬೆದರಿಕೆ ಇದು: ಲಕ್ಷ್ಮಣನ ಬಾಣಗಳು ಕ್ರೂರ : ಎಲ್ಲಿದ್ದರಲ್ಲಿಗೆ ಅವರನ್ನು ಹುಡುಕಿಕೊಂಡು ಹೋಗಿ ಅವರನ್ನು ನಾಶಮಾಡುವುವೆಂದೂ ಸ್ವಯಂಪ್ರಭೆಯ ಗುಹೆಯೊಣಕ್ಕೆ ಹೋಗಿ ಪುನಃ ಆ ಕಣಿವೆಯ ರಾಜ್ಯದಲ್ಲಿ ತಲೆಮರಸಿಕೊಳ್ಳಬೇಕೆಂದರೂ ಅವು ಅವರನ್ನು ಹುಡುಕಿ ಕೊಲ್ಲುವುವೆಂದೂ ತಿಳಿಸಿದ.

ಆಗ ಅನಿರೀಕ್ಷಿತವಾಗಿ ಅವರಿಗೆ ಸಂಪಾತಿಯ ನೆರವು ದೊರೆಯಿತು. ಸೀತೆ ಈಗ ವಾಸ್ತವವಾಗಿ ಎಲ್ಲಿದ್ದಾಳೆ ಎಂಬುದನ್ನು ಅವನು ತಾನು ಕಾಣುತ್ತಿರುವಂತೆ ತಿಳಿಸಿದ. ರಾವಣನ ಉಪವನಗಳಲ್ಲಿ ಸೀತೆ ದೀನಳಾಗಿ ಸೆರೆಯಾಳಾಗಿ ಇರುವುದನ್ನು ತೀಕ್ಷ್ಣವಾದ ತನ್ನ ಕಣ್ಣುಗಳು ಕಾಣುತ್ತಿವೆ ಎಂದನು. ಮುಂದಿನ ಕೆಲಸವೇನೆಂಬುದನ್ನು ಅದು ರಚಿಸಿಕೊಟ್ಟಿತು. ಈಗ ನೇರವಾಗಿ ಎದ್ದ ಪ್ರಶ್ನೆ: ಸಮುದ್ರವನ್ನು ದಾಟಿ

ಲಂಕೆಗೆ ಹೋಗಿ ಬರುವ ಕಪಿ ಯಾರು ಎಂಬುದರ ನಿರ್ಣಯ. ಯಾರಿಗೂ ಅದು ಭೀಕರ ಕಾರ್ಯವೇ. ಇತರರಿಗೆ ಅದು ಸಾಧ್ಯವಾಗದ್ದು. ಯುವರಾಜನೂ ನಾಯಕನೂ ಆದ ಅಂಗದನು ಅಪಾಯಕ್ಕೀಡಾಗುವುದಕ್ಕೆ ಹಿರಿಯ ಕಪಿಗಳು ಒಪ್ಪಲಿಲ್ಲ. 'ಯೌವನದ ಶಕ್ತಿ ಸಾಮರ್ಥ್ಯ ತನಗಿದ್ದಿದ್ದರೆ ತಾನು ಮಾಡಬಹುದಿತ್ತು; ಆಗ ಲೋಕಕ್ಕೆ ತಿಳಿದಿದ್ದ ಪ್ರದೇಶವನ್ನೆಲ್ಲ ಇಪ್ಪತ್ತೊಂದು ಬಾರಿ ಸುತ್ತಿ ದಾಟಿದ್ದೆ. ಈಗ ಬಲ ಕುಗ್ಗಿದೆ. ತಾನು ವಿಷ್ಣು ತ್ರಿವಿಕ್ರಮಾವತಾರವನ್ನು ತಾಳುವುದಕ್ಕೆ ಮುಂಚೆಯೆ ಎಲ್ಲವನ್ನೂ ಕಂಡವನು. ಈ ಲಂಘನವನ್ನು ಮಾಡಬಲ್ಲವನೂ ಅಗತ್ಯವಾದ ಉಳಿದೆಲ್ಲವನ್ನೂ ಮಾಡಬಲ್ಲವನೂ ನಮ್ಮಲ್ಲಿ ಒಬ್ಬನಿದ್ದಾನೆ. ಹೊರಚ್ಚಾಗಿ ಏನನ್ನೂ ಮಾತನಾಡದೆ ವೀರ ಹನುಮಂತನು ಇಲ್ಲಿ ಕುಳಿತಿದ್ದಾನೆ. ಅವನು ಮನಸ್ಸು ಮಾಡಿದರೆ ಈ ಕಾರ್ಯವನ್ನು ನಿರ್ವಹಿಸಬಲ್ಲನು' ಎಂದನು. 'ಅವನ ತಂದೆ ವಾಯುದೇವನ ಬಲ, ಗರುಡನಷ್ಟು ವೇಗ ಅವನಿಗಿವೆ. ಯಾವ ಕಾರ್ಯವನ್ನೂ ನೆರವೇರಿಸಬಲ್ಲವನು. ತಾಯಿ ಅಂಜನಾದೇವಿಯ ಹೊಟ್ಟೆಯಲ್ಲಿ ವಾಯುದೇವನಿಗೆ ಹುಟ್ಟಿದವನು ಇವನು. ಬ್ರಹ್ಮಇಂದ್ರರು ಇವನನ್ನು ಆಶೀರ್ವದಿಸಿ ಒಬ್ಬನು ಅಜೇಯತ್ವವನ್ನೂ ಇನ್ನೊಬ್ಬನು ಸ್ವೇಚ್ಛಾ ಮರಣವನ್ನೂ ವರವಾಗಿ ಕೊಟ್ಟಿದ್ದಾರೆ' ಎಂದು ಹನುಮಂತನ ಜೀವನಚರಿತ್ರೆಯನ್ನು ವಿವರಿಸುವವನು ಜಾಂಬವಾನನು.[೩೧] 'ತನ್ನ ಶಕ್ತಿಯ ನೆನಪು ತಂದು ಕೊಟ್ಟು ಅವನನ್ನು ಪ್ರೋತ್ಸಾಹಿಸಿದರೆ ಶಕ್ತಿಯನ್ನು ಪ್ರಯೋಗಿಸುತ್ತಾನೆ; ವಾಲಿಯ ಆಕ್ರಮಣಕ್ಕೆ ಮತ್ತು ಪ್ರವೇಶಕ್ಕೆ ಹೊರಗಾದ ಪ್ರದೇಶ ಮತಂಗಾಶ್ರಮ ಎಂಬುದನ್ನು ನೆನೆದು ಒಡೆಯನೂ ಸ್ನೇಹಿತನೂ ಆದ ಸುಗ್ರೀವನಿಗೆ ಅಲ್ಲಿ ಆಸರೆ ದೊರೆಯುವಂತೆ ಮಾಡಿದವನು ಹನುಮಂತನೇ' ಎಂದನು.

ಹನುಮಂತನಿಗೆ ಅರಿವಿದೆ; – ತಾನು ಈ ಸನ್ನಿವೇಶದಲ್ಲಿ ಕೃತಾರ್ಥನಾಗಬಲ್ಲೆನೆಂದು. ಕಾರ್ಯವನ್ನು ಕೈಕೊಂಡು, ತನ್ನ ಪೂರ್ಣಾಕೃತಿಯನ್ನು ತಾಳುತ್ತಾನೆ. ಶಕ್ತಿ ಕ್ರಿಯಾಚೈತನ್ಯಗಳ ವಿಸ್ತರಣದ ಈ ವೈಭವನ್ನು ಕಂಡು ವಾನರ ಸೈನ್ಯಕ್ಕೆಲ್ಲ ಅದ್ಭುತವೆನಿಸುತ್ತದೆ. ಮಹೇಂದ್ರ ಪರ್ವತದ ಶಿಖರಗಳನ್ನು ಹತ್ತಿ ಲಂಕೆಗೆ ಹಾರುತ್ತಾನೆ. ಸುಂದರವಾದ ಅವನ ನೆರಳು ಕೆಲವು ಸ್ಥಳಗಳಲ್ಲಿ ನೀರಿನ ಮೇಲೆ ಹತ್ತು ಯೋಜನ ಅಗಲ, ಮೂವತ್ತು ಯೋಜನೆ ಉದ್ದವಾಗಿ ಕಾಣಿಸುತ್ತಿತ್ತಂತೆ. 'ದಶ ಯೋಜನ ವಿಸ್ತೀರ್ಣಾ ತ್ರಿಂಶದ್ಯೋಜನಂ ಆಯತಾ। ಛಾಯಾ ವಾನರ

---

೩೧ ಯಾವುದೋ ಒಂದು ಶಾಪವೇ ಇರಬೇಕು,ಉತ್ತರ ಕಾಂಡದಲ್ಲಿ ಅದರ ವಿವರಣೆ ಬರುತ್ತದೆ–ಹನುಮಂತನಿಗೆ ಆಗಾಗ ಮರೆವು ಬರುತ್ತಿತ್ತಂತೆ. ಸ್ವಲ್ಪ ಪ್ರಶಂಸಾಪ್ರಿಯ.

ಸಿಂಹಸ್ಯ ಜಲೇ ಚಾರುತರಾ ಭವತ್' ಎಂದು ಕವಿ ವರ್ಣಿಸುತ್ತಾನೆ. ಅಲ್ಲಿಂದ ಸಣ್ಣ ಗಾತ್ರಕ್ಕೆ ಆಕೃತಿಯನ್ನು ಮಾರ್ಪಡಿಸಿಕೊಂಡು ಲಂಕೆಯ ಸುತ್ತಲೂ ತಿರುಗಿ ರಾವಣನ ಅಂತಃಪುರದ ವಿಲಾಸ ಗೃಹದಲ್ಲಿ, ನರ್ತನಶಾಲೆಯಲ್ಲಿ, ಅರಮನೆಯಲ್ಲಿ ಸುತ್ತಾಡಿ ಕೊನೆಗೆ ಸೀತೆಯನ್ನು ಅಶೋಕವನದಲ್ಲಿ ಕಾಣುತ್ತಾನೆ. ಸುತ್ತಲೂ ರಾಕ್ಷಸಿಯರ ಕಾವಲು ಏರ್ಪಟ್ಟಿರುತ್ತದೆ. ಈ ಭಾಗ ದೊಡ್ಡದಾದ ಒಂದು ಕವಿತಾ ಸಂದರ್ಭ. ಗದ್ದಲ ಮಾಡದೆ ವಿನಯದಿಂದ ಕುಶಲತೆಯಿಂದ ತಾನು ರಾಮದೂತನಾಗಿ ಬಂದಿದ್ದೇನೆಂದು ಸೀತೆಗೆ ತನ್ನ ಪರಿಚಯವನ್ನು ಮಾಡಿಕೊಟ್ಟು ಗಂಡನು ಕಳಿಸಿದ್ದ ನೆನಪಿನ ಆಭರಣವನ್ನು ಆಕೆಗೆ ಕೊಡುತ್ತಾನೆ. ಬೇಗ ನೆರವನ್ನು ನೀಡಿ ಆಕೆಗೆ ಬಿಡುಗಡೆ ಮಾಡುವ ನಂಬಿಕೆಯನ್ನೂ ಧೈರ್ಯವನ್ನೂ ಕೊಟ್ಟು ಕಾರ್ಯದಲ್ಲಿ ತನಗಾದ ಜಯವನ್ನು ಹಿಂದಕ್ಕೆ ಹೋಗಿ ಇದಕ್ಕಾಗಿ ಕಾದಿದ್ದ ವಾನರ ಸ್ನೇಹಿತರಿಗೆ ತಿಳಿಸುತ್ತಾನೆ. ಸಮುದ್ರವನ್ನು ದಾಟಿ ಸೀತೆಯನ್ನು ಕಂಡು ತನ್ನ ಕಾರ್ಯವನ್ನು ನೆರವೇರಿಸಿಕೊಂಡು ಹಿಂತಿರುಗಿದ ಹನುಮಂತನ ಸಾಹಸ ಯಾರಿಗೂ ಉಸಿರುಕಟ್ಟಿ ಕೇಳುವ ಸಾಹಸ ಕಾರ್ಯವೇ. ಈ ಸಂಗತಿ ಸುಂದರಕಾಂಡವೆಂದು ಹೆಸರು ಕೊಟ್ಟಿರುವ ಐದನೆಯ ಕಾಂಡಕ್ಕೆ ನಿಜವಾದ ಚೆಲುವನ್ನು ತಂದುಕೊಡುತ್ತದೆ. ಇದನ್ನೆಲ್ಲ ಸಾಧಿಸಿ ನೆರವೇರಿಸುವವನು ಹನುಮಂತ; ವಾನರರಲ್ಲಿ ಅತಿಸಮರ್ಥ; ಶಕ್ತಿವಂತ. ಅವನ ಸಾಧನೆ ಹೃತ್‌ಶಕ್ತಿ ಮೇಧಾಶಕ್ತಿಗಳ ಯಾವ ಸಂಪನ್ನತೆ ಅವನಲ್ಲಿ ವಿಶ್ವಾಸವನ್ನು ಸ್ಥಾಪಿಸುತ್ತದೆಯೊ ಆ ಸಂಗತಿಯನ್ನು ಈ ಕಾಂಡ ವಿವರಿಸುತ್ತದೆ. ರಾಮನಿಗೂ ಹನುಮಂತನಿಗೂ ಹೆಚ್ಚು ಸ್ಥಿರವಾದ ಒಂದು ಸ್ನೇಹದ ನಯದ ಬಾಂಧವ್ಯ ಕಟ್ಟಿನಿಲ್ಲುತ್ತದೆ. ಪರಸ್ಪರವಾಗಿ ಅವರು ನಚ್ಚಿನವರಾಗುತ್ತಾರೆ.

ಸೇತುವೆ ಕಟ್ಟಿ ವಾನರಸೈನ್ಯ ಲಂಕೆಗೆ ಲಗ್ಗೆಹಾಕಿ ರಾಕ್ಷಸ ಸೈನ್ಯದೊಡನೆ ಯುದ್ಧ ನಡೆದಾಗ ಅನೇಕ ಪ್ರಖ್ಯಾತ ರಾಕ್ಷಸನಾಯಕರನ್ನು ಕೊಂದವನು ಹನುಮಂತ. ರಾವಣ ಕುಂಭಕರ್ಣರನ್ನೇ ನೇರವಾಗಿ ಅವನು ಬಡಿದ ಸಂದರ್ಭಗಳುಂಟು. ಆದರೆ, ಕೈಯಿಂದಲೂ ಮುಷ್ಟಿಯಿಂದಲೂ ಅವನು ಪೆಟ್ಟು ಕೊಡುವುದರಲ್ಲಿ ರಾವಣನ ಶಕ್ತಿ ಹೆಚ್ಚು ಬಲವಾದ್ದೆಂದು ತಿಳಿದುಬರುತ್ತದೆ. ಎಂದರೆ, ಎಷ್ಟು ಪ್ರಬಲವೈರಿಯೊಡನೆ ರಾಮನು ಹೋರಾಡಬೇಕಿತ್ತೆಂಬುದೂ ನಮಗೆ ಸ್ಪಷ್ಟವಾಗುತ್ತದೆ. ಇಂದ್ರಜಿತು, ರಾವಣ ಇವರು ಬಳಸುವ ಶಕ್ತ್ಯಾಯುಧಗಳ ಪರಿಣಾಮದಿಂದ ಲಕ್ಷ್ಮಣನನ್ನೂ ವಾನರಸೈನ್ಯವನ್ನೂ ಎರಡು ಬಾರಿ ರಕ್ಷಿಸಿದವನು ಹನುಮಂತ. ನೆಲಕ್ಕೆ ಬಿದ್ದಿದ್ದ ವಾನರ ಸೈನ್ಯದಲ್ಲಿ ಜಾಂಬವಂತನು ಒಮ್ಮೆ

ಉಳಿದವರನ್ನು ಕೂಗಿ ಕರೆದು 'ಹನುಮಂತನು ಇನ್ನೂ ಬದುಕಿದ್ದಾನೆಯೆ? ಹತ್ತಿರ ಎಲ್ಲಿಯಾದರೂ ಇದ್ದಾನೆಯೆ?' – ಎಂದು ಕೇಳುತ್ತಾನೆ. 'ಅವನಿಗಿಂತ ಮಹಿಮಾವಂತರಾದ ಇತರರಿರುವಾಗ ಹನುಮಂತನನ್ನು ಏಕೆ ನೆನಸಿಕೊಳ್ಳುತ್ತಿದ್ದೀಯೆ?' ಎಂದು ಕೇಳಲು ಜಾಂಬವಂತನು 'ಹನುಮಂತನು ಬದುಕಿದ್ದರೆ ಲಂಕೆಯಲ್ಲಿರುವ ನಮ್ಮವರೆಲ್ಲರನ್ನೂ ಬದುಕಿಸುತ್ತಾನೆ' ಎಂಬ ಉತ್ತರ ಬರುತ್ತದೆ. ಹನುಮಂತನ್ನು ಎಚ್ಚರಗೊಳಿಸಿ ಅವನನ್ನು ಕ್ರಿಯಾಮುಖನಾಗಿ ಮಾಡುವುದಕ್ಕೆ ಈ ಹೊಗಳಿಕೆ ಬೇಕಿತ್ತು. ಕ್ಷಣದಲ್ಲಿ ಸಂಜೀವನ ಪರ್ವತಕ್ಕೆ ಹಾರಿಹೊಗಿ ಅಲ್ಲಿಂದ ಮೂಲಿಕೆಗಳನ್ನು ಔಷಧಿಗಳನ್ನೂ ತರಿಸಿ ಲಕ್ಷ್ಮಣನನ್ನೂ ಸೈನ್ಯವನ್ನೂ ಉಜ್ಜೀವನಗೊಳಿಸುತ್ತಾನೆ. ಅಲ್ಲಿ ಪುನಃ ಮೂಲಿಕೆಯ ಹೆಸರು ಹನುಮಂತನಿಗೆ ಮರೆತುಹೋಗಿರುತ್ತದೆ. ಅವನ ದೇಹಶಕ್ತಿ ಅದ್ಭುತವಾದುದರಿಂದ ಬೆಟ್ಟದ ಆ ಮುಡಿಯನ್ನೆಲ್ಲ ಹೆಗಲ ಮೇಲೆ ಹೊತ್ತು ಲಂಕೆಗೆ ತಂದು ತನಗೆ ಬೇಕಾದ ಮೂಲಿಕೆಗಳನ್ನು ಸುಷೇಣನು ಆರಿಸಿಕೊಳ್ಳು ನೆರವಾದ.

ರಾವಣನ ಭೋಗಶಾಲೆಯಲ್ಲಿ ವರ್ಣಿತವಾಗಿರುವ ಪಾನಭೂಮಿ ನೃತ್ಯಾಂಗಣಗಳ ರೋಮಾಂಚಕಾರಿ ದೃಶ್ಯದ ವಿಲಾಸದ ಸ್ವರೂಪವನ್ನೂ ಸೌಂದರ್ಯವನ್ನೂ ನೋಡಿ ಹನುಮಂತನಿಗೆ ವಿಶೇಷ ವೈಭವ ಕಂಡಿತ್ತು. ಆದರೊ ಆಗ ಅವನ ಮನಸ್ಸಿನಲ್ಲಿ ಇದ್ದುದು ಒಂದೇ ಯೋಚನೆ : ಸೀತೆಯದು. 'ರಾವಣಾಂತಃಪುರಂ ಸರ್ವಂ ದೃಶ್ಯತೇ ನ ಚ ಜಾನಕೀ.' ಆ ಒಂದು ಸಂಗತಿ ಅವನನ್ನು ಪೀಡಿಸಿ ಕಳವಳಗೊಳಿಸುತ್ತಿತ್ತು. ಅಲ್ಲಿ ಸೀತೆ ಇಲ್ಲದಿರುವುದು ಅವನ ಒಳಗೆ ಬೇಗೆ, ಬೇನೆ ಉಂಟು ಮಾಡಿದ್ದರೂ ಒಳಮನಸ್ಸಿಗೆ ನೆಮ್ಮದಿಯನ್ನೇನೊ ತಂದಿರಬೇಕು.

ಒಂದು ಕ್ಷಣ ಅವನಿಗೆ ವ್ಯಥೆ ತಟ್ಟಿ ವಿಷಾದ ಹುಟ್ಟಿತು. ಇದು ಅವನ ಶೀಲಕ್ಕೆ ಪೋಷಕವಾದ ಸಂದರ್ಭ. ಜಾನಕಿಯನ್ನು ಅಲ್ಲೆಲ್ಲೂ ಕಾಣದಿರುವಾಗ 'ಜಗಾಮ ಮಹತೀಂ ಚಿಂತಾಂ ಧರ್ಮಸಾಧ್ವಸ ಶಂಕಿತಃ' – ಅವನ ಮನಸ್ಸಿಗೆ ಕಳವಳವುಂಟಾಯಿತು. ತಾನು ಮಾಡಿದ್ದು ನೀತಿಯುತವೆ? – ಎಂಬುದು ಅವನಲ್ಲಿ ಹುಟ್ಟಿದ ಸಂದೇಹ. ಒಂದು ಖಾಸಗಿ ಅಂತಃಪುರದಲ್ಲಿ ಅಷ್ಟು ಮಂದಿ ಹೆಣ್ಣು ಮಕ್ಕಳು ನಿದ್ರಿಸುತ್ತಿರುವಾಗ ಅಲ್ಲಿ ಅವನಿಗೆ ಪ್ರವೇಶದ ಅಧಿಕಾರವಿಲ್ಲದಿರುವಾಗ ಯಾವುದನ್ನು ತಾನು ನೋಡಬಾರದೊ ಅಂಥುದನ್ನು ತಾನು ನೋಡಿದಾಗ ಅಲ್ಲಿ ಹೋಗಿ ಇದನು ಕಣ್ಣಿಗೆ ಬೀಳಿಸಿಕೊಂಡುದು ಧರ್ಮವೆ ಎನ್ನಿಸುತ್ತದೆ. ಅವನಲ್ಲಿ ಒಳಗೇ ನಾಚಿಕೆಯೂ ಅಪರಾಧಭಾವವೂ ಉಂಟಾದವು. ಇದು ನಿಜವಾಗಿ

ಅವನ ಅಂತಸ್ಸಾಕ್ಷಿಯ ವ್ಯಾಪಾರ. ನಿದ್ರಿಸುತ್ತಿದ್ದವರು ಪರನ ಹೆಣ್ಣುಗಳು. ಅಂಥವರನ್ನು ನೋಡಬಹುದೆ? ಧರ್ಮ ಲೋಪ ಉಂಟು ಮಾಡಿದ ಹಾಗಾಗಲಿಲ್ಲವೆ? ಎಂದುಕೊಂಡ. ಒಡನೆಯೇ ಒಂದು ಸಮಾಧಾನ ಅವನಿಗೆ ಹೊಳೆದು ತನ್ನದು ಅಪರಾಧವಲ್ಲವೆಂಬ ಭಾವ ಬೇಗ ಅವನಿಗೆ ಬಂದಿತು. ಅವನು ಸೀತೆಯನ್ನು ಹುಡುಕಬೇಕಿತ್ತು. ಅವಳು ರಾವಣನ ಅರಮನೆಯಲ್ಲಿದ್ದಳೆಂದು ಪ್ರಕಟಿತವಾಗಿತ್ತು. ಒಂದು ಹೆಣ್ಣನ್ನು ಹೆಣ್ಣುಗಳ ನಡುವೆ ಹುಡುಕಬೇಕೇ ಹೊರತು ಜಿಂಕೆಗಳ ನಡುವೆ ಅಲ್ಲ. ಈ ಹೆಂಗಸರಾರೂ ಅವಳಲ್ಲ. ಒಂದು ಸಂಗತಿಯಂತೂ ಅವನ ಮನಸ್ಸಿನಲ್ಲಿ ನಿಶ್ಚಯವಾಯಿತು: ಅವರನ್ನು ನೋಡುವ ಅವನ ಕಣ್ಣುಗಳು ಅಭಿಲಾಷೆಯಿಂದಾಗಲಿ ದುರ್ಬುದ್ಧಿಯಿಂದಾಗಲಿ ಕೂಡಿರಲಿಲ್ಲ. ಕಾಮಕಲುಷಿತವಾದ ಮನಸ್ಸಿದ್ದರೆ ಮಾತ್ರ ಅಪರಾಧ ಹುಟ್ಟುತ್ತದೆ. ಖಂಡಿತವಾಗಿ ಅವನಿಗೆ ಗೊತ್ತು : ಒಮ್ಮೆಯೂ ತನ್ನಲ್ಲಿ ಅಂಥ ಭಾವ ಪ್ರಚೋದಿತವಾಗಿ ತನ್ನ ಕಾರ್ಯದಿಂದ ಬೇರೆಗೆ ತಿರುಗಿಸಲಿಲ್ಲ. ಆದುದರಿಂದ ಯಾವ ಅಪರಾಧ ಭಾವದಿಂದಲು ಅವನು ಬಿಡುಗಡಿಗೊಂಡವನೇ. ತನ್ನ ನಡತೆ ಅಯುಕ್ತವಾದ್ದೆಂದು ತನ್ನ ಮೇಲೆ ಆಪಾದನೆ ಹೊರಿಸಿಕೊಳ್ಳುವುದು ಅಗತ್ಯವಲ್ಲವೆಂದು ತೀರ್ಮಾನಿಸಿದ. ಇಲ್ಲ : ಆ ಹೆಂಗಸರನ್ನು ಕಾಮದೃಷ್ಟಿಯಿಂದ ತಾನು ನೋಡಿಲ್ಲ. ಬೇರೇನನ್ನೊ ಮನಸ್ಸಿನಲ್ಲಿಟ್ಟುಕೊಂಡು ಅಲ್ಲಿನದೆಲ್ಲವನ್ನೂ ನೋಡಿದ್ದ. ಅವನ ಮನಸ್ಸಿನಲ್ಲಿ ಅತಿ ಸಣ್ಣ ವಿಕ್ರಿಯೆಯೂ ಉಂಟಾಗಿರಲಿಲ್ಲ! ಧರ್ಮವಿವೇಚನೆಯ ಈ ಮುಖ್ಯತತ್ವ ಅವನ ನೆರವಿಗೂ ಇಲ್ಲಿನ ತೀರ್ಮಾನಕ್ಕೂ ಒದಗುತ್ತದೆ. ಅವನ ಮನಸ್ಸು ಅವನ ವಶದಲ್ಲಿದೆ. ಅದು ಸುವ್ಯವಸ್ಥ. 'ಸೀತೆಯನ್ನು ಇನ್ನೆಲ್ಲಿ ಹುಡುಕಲಿ? ನನ್ನ ಮನಸ್ಸು ಶುದ್ಧವಾಗಿದೆ' ಎಂಬ ಸಂಗತಿ ತಿಳಿಯಾಯಿತು. ಸೀತೆ ರಾವಣನ ಅರಮನೆಯಲ್ಲಿಲ್ಲ ಎಂಬ ಈ ನಿರ್ಣಯವಾದ ಮೇಲೆ ಅಲ್ಲಿಂದ ಹೊರಗೆ ಬಂದು ಅವಳು ಇನ್ನೆಲ್ಲಿರಬಹುದು ಎಂಬುದನ್ನು ಗೊತ್ತು ಹಚ್ಚಲು ತೊಡಗುತ್ತಾನೆ.

ನಡತೆಯ ವಿಚಾರದಲ್ಲಿ ಹನುಮಂತನ ಮನಸ್ಸು ಅತಿಸೂಕ್ಷ್ಮಾಂಶಗಳಿಗೂ ಬೆಲೆ ಕೊಡುವಂಥದು ಎಂಬುದನ್ನು ಈ ಸಂದರ್ಭ ಕಾಣಿಸುತ್ತದೆ : ರಾಮ ಲಕ್ಷ್ಮಣರನ್ನು ಅವನು ಕಂಡ ಮೊದಲ ಕ್ಷಣದಿಂದಲೂ ಅಯೋಧ್ಯೆಯಲ್ಲಿ ಸೀತೆಯಿಂದ ಬಹುಮಾನಿತನಾಗುವವರೆಗೂ ಅವನ ವಿಶ್ವಾಸ ಪ್ರಾಮಾಣಿಕತೆಗಳನ್ನು ಪರೀಕ್ಷಿಸಿ ಅವನ ಮನಸ್ಸು ಸರಿಯೆ, ತಪ್ಪೆ ಎಂದು ನಿರ್ಣಯಿಸುವ ಸಂದರ್ಭಗಳು ಒದಗುತ್ತವೆ. ಆ ಎಲ್ಲ ಸಮಯಗಳಲ್ಲಿಯೂ ತನ್ನ ಕಾರ್ಯದಲ್ಲಿ ತಾನು ಸೋತೆ ಎಂಬ ಭಾವದಲ್ಲಿ ತನ್ನ ಪ್ರಾಣವನ್ನು ತೆಗೆದುಕೊಳ್ಳಬೇಕು ಎಂಬ ನಿರಾಶೆಯ

ಸ್ಥಿತಿಯಲ್ಲಿಯೂ ಇದು ಕಾಣುತ್ತದೆ. ಸ್ವಯಂಪ್ರಭೆಯ ಗುಹೆಯ ಹೊರಗೆ ಅಂಗದನಿಂದ ಪ್ರಚೋದಿತರಾದ ಇತರ ವಾನರರನ್ನು ದಾರಿಗೆ ತರಬೇಕಾದಾಗ ಅವನೆಷ್ಟು ಆಲೋಚನಾಪರ, ವಿವೇಕಶಾಲಿ ಎಂಬುದು ಗೊತ್ತಾಗುತ್ತದೆ. ರಾಮನ ಬಳಿಗೆ ಸೀತೆಯನ್ನು ಕೊಂಡೊಯ್ಯಲು ಅಪ್ಪಣೆಯಾದರೆ ಮಾಡುತ್ತೇನೆಂದು ಅವನು ಪ್ರಾರ್ಥಿಸಿದಾಗ ಅವನು ಕೊಡುವ ಹೋಲಿಕೆ 'ಪ್ರಾಪಯಿಷ್ಯಾಮಿ ಶಕ್ರಾಯ ಹವ್ಯಂ ಹುತ ಇವ ಅನಲಃ' – ಇಂದ್ರನಿಗೆ ಹವಿಸ್ಸನ್ನು ಅಗ್ನಿ ಹೇಗೆ ಒಯ್ಯುತ್ತಾನೊ ಹಾಗೆ ಒಯ್ಯುತ್ತೇನೆ ಎನ್ನುತ್ತಾನೆ. ಯಾವುದನ್ನೂ ಅವಸರಿಸುವುದಿಲ್ಲ. ಒಂದು ತೀರ್ಮಾನ ಅವನ ಮನಸ್ಸಿಗೆ ಪೂರ್ತಿ ಬಾರದಾಗಲೂ ಎದುರು ಪಕ್ಷದ ಕಡೆಗೆ ಒಂದು ಸಂಗತಿಯನ್ನು ಅನುಕೂಲವಾಗಿ ನುಡಿಯಬಹುದೆಂಬ ಅವಕಾಶವಿರುವಾಗ ಪೂರ್ತಿಯಾಗಿ ತನ್ನ ಅಭಿಮತವನ್ನು ತಿಳಿಸಿ ಒತ್ತುತ್ತಿರಲಿಲ್ಲ. ವಿಭೀಷಣನನ್ನು ಈ ಪಾಳೆಯಕ್ಕೆ ರಾಮನು ಒಪ್ಪಿ ಕರೆದುಕೊಂಡಾಗ ಈ ಸಂಗತಿ ಸ್ಥಿರಪಡುತ್ತದೆ. ಯಾರ ವ್ಯಕ್ತಿತ್ವ, ಯಾವ ಸನ್ನಿವೇಶ, ಸಂದರ್ಭ ಎಂಬುದರ ಅರಿವು ಅವನಿಗೆ ಚೆನ್ನಾಗಿತ್ತು. ರಾಮಾಯಣದಲ್ಲಿ ಉತ್ತಮರಾದವರ ಎತ್ತರಕ್ಕೆ ಸಮನಾದ ಸ್ಥಾನವನ್ನು ಯುಕ್ತರೀತಿಯಲ್ಲಿ ಪಡೆಯಲು ತಕ್ಕಂತೆ ಅವನ ಪ್ರತಿಕ್ರಿಯೆಗಳು ಹೊಂದಿಕೊಳ್ಳುತ್ತವೆ. ಅವನನ್ನು ಎಲ್ಲರೂ ನಂಬುತ್ತಾರೆ; ಗೌರವಿಸುತ್ತಾರೆ; ಪ್ರೀತಿಸುತ್ತಾರೆ.

ಇಂದ್ರಜಿತು ಮಾಯಾಜಾಲದಿಂದ ಸೀತೆಯ ತಲೆಯನ್ನು ತಂದು ಸಮಸ್ತ ವಾನರಸೈನ್ಯದ ಎದುರಿಗೆ ಅದನ್ನು ಕತ್ತರಿಸಿ ಹಾಕಿದಾಗ ಲಂಕೆಗೆ ಹಾರಿಬಂದ ಸಮಸ್ತ ಉದ್ದೇಶವೂ ಕಾರ್ಯವೂ ವ್ಯರ್ಥಗೊಂಡ ಹಾಗೆ ಆಗುತ್ತದೆ. ಅವನನ್ನು ತಡೆಯಲು ಹನುಮಂತನು ಯತ್ನಿಸಿ ವಿಫಲನಾಗುತ್ತಾನೆ. ಆ ಕಾರ್ಯ ನಡೆದಾಗ ಎಲ್ಲರಿಗಿಂತ ಅತಿದೀನನಾದವನು ಅವನು. ಸುದ್ದಿಯನ್ನು ರಾಮನಿಗೆ ಒಯ್ಯುವುದು ಯಾರ ಮನಸ್ಸಿಗೂ ಸುಖವಿರಲಿಲ್ಲ. ಯುದ್ಧದಲ್ಲಿ ರಾಮನಿಗೇ ಆಸಕ್ತಿ ಹೋಗಿಬಿಡುತ್ತದೆ. ವಿಭೀಷಣನು ಅವನಿಗೆ ತಿಳಿಸಬೇಕಾಯಿತು: ಸೀತೆಗೆ ನಿಜವಾಗಿ ಯಾವ ಕೇಡೂ ಉಂಟಾಗಿಲ್ಲ; ಇದೆಲ್ಲ ಇಂದ್ರಜಿತುವಿನ ಮಾಯೋಪಾಯ, ತಂತ್ರ ಎಂದು.

ಹಿಂದೆ ಗಂಡನ ಸುದ್ದಿಯನ್ನು ಸೀತೆಗೆ ಕೊಂಡೊಯ್ದವನು ಹನುಮಂತನೇ. ಅವನಲ್ಲಿ ಆಕೆಗಿದ್ದ ಪ್ರೀತಿಗೆ ಪಾರವಿರಲಿಲ್ಲ. ಬೇಗ ಗಂಡನು ಬಂದು ತನ್ನನ್ನು ಬಿಡುಗಡೆ ಮಾಡುತ್ತಾನೆಂಬ ಸಂಗತಿಯನ್ನು ತಿಳಿಸಿದವನು ಅವನೇ. ಯುದ್ಧದಲ್ಲಿ ಜಯಗಳಿಸಿದ ಮೇಲೆ ಹಗೆಗಳಾದ ರಾಕ್ಷಸರೆಲ್ಲ ಕೊಂದು ಬಿದ್ದಿದ್ದಾರೆ; ರಾಮ ಜಯಗಳಿಸಿದ್ದಾನೆ ಎಂಬ ಸಂಗತಿಯನ್ನು ಆಕೆಗೆ ತಿಳಿಸಿ ಆಕೆಯ ಸಂತೋಷ

ಮಿತಿಮೀರುವಂತೆ ಮಾಡುವವನೂ ಅವನೇ. ಗಂಡಸರಾಗಲಿ ಹೆಂಗಸರಾಗಲಿ ತಾಳ್ಮೆಗೊಂಡು ಭರವಸೆ ಉಳ್ಳವರಾಗಿದ್ದರೆ ಅತ್ಯುತ್ಕಟ ದೌರ್ಭಾಗ್ಯ ತಿರುಗಿ ಮೇಲ್ಪಡಬಹುದು. ಈ ಕಾಯುವಿಕೆಗೆ ನೂರುವರ್ಷ ಕಾಲ ನಿಡಿದೇನಲ್ಲ. ಆಶಾಬಂಧ ಸಾವಿಂದಲೇ ತನ್ನ ಪೋಷಣೆಯನ್ನು ಹೀರುವುದೆಂಬ ಕಾರ್ಲೈಲ್ ವಾಕ್ಯ ಒಂದಿದೆ. 'ಏತಿ ಜೀವಂತಮಾನಂದೋ ನರಂ ವರ್ಷ ಶತಾದಪಿ' ಎನ್ನಿಸುತ್ತಾನೆ ಕವಿ.

ಲಂಕೆಯ ಕಾರ್ಯಗಳೆಲ್ಲ ಗೊತ್ತುಪಟ್ಟು ಸುರಚಿತವಾದ ಮೇಲೆ ಈ ಜನರೆಲ್ಲ ಪುಷ್ಪಕವನ್ನೇರಿ ಅಯೋಧ್ಯೆಯ ಕಡೆಗೆ ತ್ವರೆಯಿಂದ ಭರದ್ವಾಜಾಶ್ರಮಕ್ಕೆ ಬಂದು ಸೇರುತ್ತಾರೆ. ಹನುಮಂತನನ್ನು ಕರೆದು ನಂದಿಗ್ರಾಮಕ್ಕೆ ಹೋಗಿ ಭರತನು ತನ್ನನ್ನು ನಿಜವಾಗಿ ನಿರೀಕ್ಷಿಸುತ್ತಿದ್ದಾನೆಯೆ, ಇಲ್ಲವೆ ತಿಳಿದುಬಾರೆಂದು ಹೇಳಿಕಳಿಸುತ್ತಾನೆ. ನೋಟ, ವರ್ಣ ವಿಕಾರ, ಮಾತು, ನಡತೆ ತಿಳಿದುಬಾರೆಂದು ಹೇಳಿಕಳಿಸುತ್ತಾನೆ. ನೋಟ, ವರ್ಣ ವಿಕಾರ,ಮಾತು, ನಡತೆ ಏತರಲ್ಲಿಯಾದರೂ ಭರತನು ಅಯೋಧ್ಯೆಯಲ್ಲಿ ರಾಜನಾಗಿ ಮುಂದುವರಿಯಲು ಇಷ್ಟವುಳ್ಳವನೆಂಬುದಕ್ಕೆ ಚಿಹ್ನೆ ದೊರೆತರೆ ಬಂದು ತಿಳಿಸು; ತಾನು ಸ್ಥಿತಿಭಂಗ ಮಾಡೆನೆನ್ನುತ್ತಾನೆ. ಎಂದರೆ ತಾನೇ ರಾಜನಾಗಿರಲು ಭರತನಿಗೆ ಇಷ್ಟವಿರುವ ಹಾಗಿದ್ದರೆ ಪರಿಸ್ಥಿತಿಯ ನಿಜವಾದ ಸುದ್ದಿಯನ್ನು ಹನುಮಂತನು ತರಬೇಕೆಂದು ಕೇಳುತ್ತಾನೆ: 'ರಾಜ್ಯಾರ್ಥೀ ಚೇತ್ ಸ್ವಯಂ ಭವೇತ್' ಎಂಬುದು ಮಾತು. ರಾಮನು ಹಿಂದಿರುಗುತ್ತಿದ್ದಾನೆ ಎಂಬ ಸುದ್ದಿ ಮುಟ್ಟಿದ ಕೂಡಲೆ ಭರತನ ಇಂಗಿತವನ್ನು ಪರೀಕ್ಷಿಸಿ ತಿಳಿದುಕೊಳ್ಳಬೇಕೆಂದು ರಾಮನಿಗೆ ಮನಸ್ಸು. ಹೀಗೆ ಹಿಂದೆ ಸಂತಸದ ಸುದ್ದಿಯನ್ನು ರಾಮಸೀತೆಯರಿಬ್ಬರಿಗೂ ಹೇಗೆ ಕೊಂಡು ಹೋಗಿದ್ದನೊ ಹಾಗೆಯೇ ವಿಜಯಿಯಾದ ರಾಮನು ಹಿಂದಿರುಗುತ್ತಿದ್ದಾನೆ ಎಂಬ ಸಂತೋಷದ ಸುದ್ದಿಯನ್ನು ಭರತನಿಗೆ ಕೊಂಡುಹೋಗುವವನೂ ಹನುಮಂತನೇ. ಭರತನನ್ನು ಕಂಡು ಸುದ್ದಿ ತಿಳಿಸಿದ ಕೂಡಲೆ ಭರತನಿಗೆ ಎಷ್ಟು ಸಂತೋಷ ಎಂಬುದನ್ನು ನೋಡಿ ಇವನು ಪರವಶನಾದನು. ತನಗೆ ದೊರೆತ ಸ್ವಾಗತದಲ್ಲಿ ಅಸಾಧಾರಣ ಪ್ರೀತಿಯನ್ನೂ ಅಂತಃಕರಣವೂ ಕಂಡು ಬಂದಾಗ ಅವನಿಗೆ ಗೊತ್ತಾಯಿತು : ಅಣ್ಣನ ಪರವಾದ ದುಃಖ ಭರತನನ್ನು ಹೇಗೆ ತಿಂದುಹಾಕಿತ್ತು – 'ಭರ್ತೃವ್ಯಸನಕರ್ಷಿತಂ ಪಪಾತು ಸಹಸಾ ಹೃಷ್ಟೋ' ಎಂಬುದರಲ್ಲಿ ಕಾಣುತ್ತದೆ. ಸಂತೋಷದಿಂದ ಅವನು ನೆಲದ ಮೇಲೆ ಬಿದ್ದನಂತೆ. ಇವನನ್ನು ಹೇಗೆ ಸನ್ಮಾನಿಸುವುದು ಎಂಬುದನ್ನು ಭರತನು ಅರಿಯದೆ ಹೋದನಂತೆ! 'ಒಂದು ಲಕ್ಷ ಹಸುಗಳನ್ನು, ನೂರು ಹಳ್ಳಿಗಳನ್ನು ಕೊಡುತ್ತೇನೆ. ಒಳ್ಳೆಯ ಕುಲದಲ್ಲಿ ಹುಟ್ಟಿ ಅಲಂಕೃತರಾದ ಹದಿನಾರು ಮಂದಿ

ಕನ್ಯೆಯರನ್ನು (ಹನುಮಂತನಿಗೆ!) ಕೊಡುತ್ತೇನೆ' – ಎಂದನಂತೆ, ಪ್ರಿಯವಾದ ಈ ಸುದ್ದಿಯನ್ನು ತನಗೆ ತಂದುಕೊಟ್ಟುದಕ್ಕೆ. ಭರತನ ಮಾತಿನ ಸಂಪನ್ನತೆಯೂ ಅವನಲ್ಲಿ ಕಂಡ ಸಂತೋಷವೂ ಹನುಮಂತನನ್ನು ಮುಗ್ಧಗೊಳಿಸಿ, ಈ ಒಂದೇ ಸಲ ರಾಮನ ಅಪ್ಪಣೆ ನೆರವೇರಿಸದಂತೆ ತಡೆಯುತ್ತದೆ. ಇದು ಸೋಜಿಗದ ಸಂಗತಿ! ರಾಮನ ಅಪ್ಪಣೆಗೆ ಹನುಮಂತನು ಕಾಣಿಸಿದ ಅವಿಧೇಯತೆ ತವರೂರಿಗೆ ಅಣ್ಣನನ್ನು ಸ್ವಾಗತಿಸಲು ಭರತನನ್ನೇ ಕೊಂಡುತರುವುದಾಗಿತ್ತಾದ್ದರಿಂದ, ಹಾಗೆ ಮಾಡಿರಬೇಕು.

ರಾಮ ಸೀತೆ ಸಿಂಹಾಸನದ ಮೇಲೆ ಕುಳಿತಿದ್ದಾರೆ. ಸೀತೆಯ ಕೈಗೆ ರಾಮನು ಮಹಾರ್ಘವಾದ ಒಂದು ಮುತ್ತಿನ ಹಾರವನ್ನು ಕೊಟ್ಟು –

ಪ್ರದೇಹಿ ಸುಭಗೇ ಹಾರಂ ಯಸ್ಯ ತುಷ್ಟಾಸಿ ಭಾಮಿನಿ
ತೇಜೊ ಧೃತಿರ್ಯಶೋ ದಾಕ್ಷ್ಯಂ
ಸಾಮರ್ಥ್ಯಂ ವಿನಯೋ ನಯಃ
ಪೌರುಷಂ ವಿಕ್ರಮೋ ಬುದ್ಧಿಃ

– ಇತ್ಯಾದಿ ಗುಣಗಳನ್ನು ಉಳ್ಳವರೆಂದು ಯಾರು ನಿನಗೆ ಮೆಚ್ಚಿಕೆಯಾಗುತ್ತಾರೊ ಅವರಿಗೆ ಕೊಡು ಎನ್ನುತ್ತಾನೆ. 'ಯಸ್ಮಿನ್ ಏತಾನಿ ನಿತ್ಯದಾ ದದೌ ಸಾ ವಾಯು ಪುತ್ರಾಯ ತಂ ಹಾರಂ ಅಸಿತೇ ಕ್ಷಣೌ.' ಚೆಲುವಾದ ಕಣ್ಣುಳ್ಳ ಸೀತಾದೇವಿ ಆ ಹಾರವನ್ನು ವಾಯುಪುತ್ರನಿಗೆ ಕೊಟ್ಟಳು ಎಂದು ವರ್ಣಿತವಾಗಿದೆ.

ಇವು ಹನುಮಂತನ ಯಥಾರ್ಥ ಗುಣಗಳು. ಆ ಗುಂಪಿನಲ್ಲಿ ಇನ್ನಾರೂ ಇಂಥ ಗೌರವಕ್ಕೆ ಅಸೂಯೆ ಪಡುವ ಹಾಗಿರಲಿಲ್ಲ. ನರಶ್ರೇಷ್ಠರನ್ನು ವರ್ಣನೆ ಮಾಡೆಂದು ವಾಲ್ಮೀಕಿ ನಾರದನನ್ನು ಕೇಳಿದಾಗ ಅವನು ವರ್ಣಿಸಿದ ಗುಣಗಳಿಗೆ ಇವು ಎಷ್ಟು ವಿಭವಪೂರ್ವಕವಾಗಿ ಹೋಲುತ್ತಿದ್ದವೆಂಬುದನ್ನು ಇಲ್ಲಿ ಅರಿಯಬಹುದು.

ಇಷ್ಟಾದರೂ ಹನುಮಂತನು ಸಾರತಃ ವಿನಯಶಾಲಿ. ಅವನ ಶಕ್ತಿ ಸಾಮರ್ಥ್ಯ ಎಂಥವೆಂಬುದನ್ನು ಸೀತೆಗೆ ತೋರ್ಪಡಿಸುವಾಗ ತನ್ನ ಆಕೃತಿಯನ್ನು ದೀರ್ಘವೂ ವಿಸ್ತಾರವೂ ಮಾಡಿ ಆಕೆಗೆ ಪ್ರಕಾಶಪಡಿಸಿದ್ದ. ಸುಗ್ರೀವ ಸೈನ್ಯದ ಬಲವನ್ನು ವರ್ಣಿಸೆಂದು ಕೇಳಲು –

ಮದ್ವಿಶಿಷ್ಟಾಶ್ಚ ತುಲ್ಯಾಸ್ವ ಸಂತಿ ತತ್ರ ವನೌಕಸಃ
ಮತ್ತಃ ಪ್ರತ್ಯವರಃ ಕಶ್ಚಿನ್ ನಾಸ್ತಿ ಸುಗ್ರೀವ ಸನ್ನಿಧೌ

– ಎನ್ನುತ್ತಾನೆ. ವಾನರ ಸೈನ್ಯದ ಎದುರಿಗೆ ತಾನೇ ಶಕ್ತಿಯಲ್ಲಿ ಬೆಳೆದಾಗ ಅವನು

ಕಾಣಿಸಿದ್ದು ಸ್ವಪ್ರಂಶಸೆಗಾಗಿ ಅಲ್ಲ. ವಾನರರನ್ನು ಆಕೆಯ ವಿಶ್ವಾಸದಲ್ಲಿ ಸ್ಥಾಪಿಸುವುದಕ್ಕೂ ಶ್ರದ್ಧೆಯನ್ನೂ ಭರವಸೆಯನ್ನೂ ಅವಳಲ್ಲಿ ಪುನಶ್ಚೇತನಗೊಳಿಸುವುದಕ್ಕೂ ಅವನ ಕಾರ್ಯ ಎಷ್ಟು ಮಹತ್ವವಾದ್ದು ಎಂಬುದಕ್ಕೆ ಅದು ತಕ್ಕ ಮಹತ್ತಿನದೂ ಆಗಿತ್ತು.

ರಾಮಕಥೆಯೂ ರಾಮಾಯಣದ ಕೀರ್ತಿಯೂ ಉಳಿಯುವವರೆಗೂ ಭೂಮಿಯ ಮೇಲೆ ಇರತಕ್ಕದ್ದೆಂದು ಹನುಮಂತನಿಗೆ ದೊರಕಿದ ವರದಿಂದ ಅವನು ಭಾರತದ ಚಿರಂಜೀವಿಗಳಲ್ಲಿ ಒಬ್ಬನು.

**೭. ರಾವಣ**

ರಾಮಾಯಣ ಕಥೆಯ ಪ್ರತಿಪಕ್ಷದಲ್ಲಿ ಎಲ್ಲಕ್ಕಿಂತ ದೊಡ್ಡ ಘಟಕ ರಾವಣ. ರಾಮ ದಶರಥ ಇಬ್ಬರಿಗಿಂತಲೂ ಅವನು ಹೆಚ್ಚು ವಯಸ್ಸಿನವನೆಂಬಂತೆ ಕಾಣುತ್ತದೆ. ಉತ್ತರ ಕಾಂಡದ ಕಥೆಗಳಲ್ಲಿನ ಒಂದು ಪ್ರಸಂಗ ನಮಗೆ ಪುರಾವೆಯಾಗುವುದಾದರೆ ದಶರಥನ ವಂಶದ ಹಿಂದಿನ ಕಾಲದ ಅನರಣ್ಯ 'ಮುಂದೆ ಬರುವ ಕಾಲಗಳಲ್ಲಿ ನನ್ನ ವಂಶಿಕರಲ್ಲಿ ಒಬ್ಬ ನಿನ್ನನ್ನು ಕೊಲ್ಲುತ್ತಾನೆ'ಂದು ರಾವಣನಿಗೆ ಹೇಳಿದನೆಂದಿದೆ. ಪುರಾಣ ಅಥವಾ ಅವತಾರ ಕತೆಗಳಿಗೆ ಸಂಬಂಧಿಸಿದಂತೆ ರಾಮಜನನವೇ ರಾವಣನಾಶದ ಅಗತ್ಯಕ್ಕಾಗಿ ಎಂದು ಪ್ರತಿಪಾದಿತವಲ್ಲವೇ. ರಾವಣನಿಗೆ ಬ್ರಹ್ಮನು ಹಿಂದೆ ವರವನ್ನು ಕೊಟ್ಟಿದ್ದನಂತೆ: ಬೇರೆ ವರ್ಗದ ಜೀವಿಗಳು ಅವನನ್ನು ಕೊಲ್ಲಲಾರವೆಂದು. ಮನುಷ್ಯನು ಅದರಲ್ಲಿ ಸೇರಿರಲಿಲ್ಲ. ಈ ಕಾರಣದಿಂದಲೇ ವಿಷ್ಣು ಮನುಷ್ಯನಾಗಿ ದಶರಥನ ಮಗ ರಾಮನಾಗಿ ಹುಟ್ಟಿಬಂದ. ಈ ಮಹಾಕಾರಣ ನೇರವಾಗಿ ಪರೋಕ್ಷವಾಗಿ ಕತೆಯ ಉದ್ದಕ್ಕೂ ಕ್ರಿಯಾಕಾರಿಯಾಗುತ್ತದೆ. ಸತತವಾಗಿ ರಾಮನನ್ನು ಹೊರಕ್ಕೆ ತೆಗೆದುಕೊಂಡು ಹೋಗತಕ್ಕ ಕಾರ್ಯ ರಾಕ್ಷಸಬಾಧೆ. ಒಮ್ಮೆ ವಿಶ್ವಾಮಿತ್ರನಿಂದ, ತರುವಾಯದ ಕಾಲಗಳಲ್ಲಿ ದಂಡಕಾರಣ್ಯದಲ್ಲಿ ಅವನು ಸಂಚರಿಸುತ್ತಿರುವಾಗ ಆಶ್ರಮಗಳಲ್ಲಿನ ಋಷಿಗಳು ಇತರ ಗುಂಪಿನ ವ್ರತಿಗಳು ಅವನ ನೆರವನ್ನು ಬೇಡುವಾಗ, ಈ ಕಾರ್ಯ ಜನಸ್ಥಾನದವರೆಗೂ ಅವನನ್ನು ನಡಸಿಕೊಂಡು ಹೋಗುತ್ತದೆ. ಕೆಲವು ಲೇಖಕರು ಇದನ್ನೇ ಮಹಾಕಾರಣವಾಗಿ ಮಾಡುವುದಕ್ಕೋಸ್ಕರ ಮಂಥರೆಯ ಕಾರ್ಯವನ್ನು ಉನ್ನತಿಯ, ಆಧ್ಯಾತ್ಮಿಕತೆಯ, ಸಾಂಕೇತಿಗಳ ಮಟ್ಟಕ್ಕೂ ಎತ್ತುತ್ತಾರೆ. ಅದು ಹೇಗಾದರೂ ಇರಲಿ, ತನ್ನ ತಾಯಿಯ ಕಠಿನತೆಯನ್ನೂ ಕೆಡುಕನ್ನೂ ಭರದ್ವಾಜರಿಗೆ ವರ್ಣಿಸುವಾಗ, 'ತಾಯ ವಿಷಯದಲ್ಲಿ ಅಷ್ಟು ನಿಷ್ಕರುಣಿಯಾಗಬೇಡ; ರಾಮನ ಈ ವನವಾಸ ಕಾರಣದಿಂದ ಲೋಕಕ್ಕೆಲ್ಲ

ಮಹತ್ತಾದ ಹಿತ ಸಾಧಿತವಾಗುತ್ತದೆ'[೩೨] ಎನ್ನುತ್ತಾರೆ ಅವರು. ಹೀಗೆ ಕತೆಯನ್ನು ನೋಡುವುದು ದೂರದರ್ಶಕವನ್ನು ತಪ್ಪು ಕೊನೆಯಿಂದ ನೋಡಿದಂತಾಗಬಲ್ಲದ್ದು. ಸಾಹಿತ್ಯದಲ್ಲಿ ಪ್ರೀತಿ ಉಳ್ಳ ಜನರಿಗೆ ಪ್ರೀತಿ ಉಂಟು ಮಾಡುವ ಸಂಗತಿ ಆರು ಕಾಂಡಗಳ ಅತ್ಯಂತ ಮಾನವವಾದ ಕತೆ. ವಾಲ್ಮೀಕಿ ಅದನ್ನು ರೂಪಿಸಿದ್ದು ಹಾಗೇ. ಕತೆಯ ಯಾವ ಸ್ತರದಲ್ಲಿಯೂ ಘಟ್ಟದಲ್ಲಿಯೂ ರಾಮನಿಗೆ ತಾನು ದೇವರೆಂಬ ನಂಬಿಕೆ ಇರಲಿಲ್ಲ. ಲಕ್ಷ್ಮಣನಿಗಾಗಲಿ ಸೀತೆಗಾಗಲಿ ಆ ಭಾವನೆ ಇಲ್ಲ. ತಾನು ದಶರಥನ ಮಗ, ಕ್ಷತ್ರಿಯ; ಅದಕ್ಕಿಂತ ಹೆಚ್ಚಾಗಿ ಏನೂ ಅಲ್ಲ ಎಂದು ಅವನು ತಿಳಿದಿದ್ದಾನೆ; ಹೇಳುತ್ತಾನೆ. ರಾಮನ ಶಕ್ತಿ ಮತ್ತು ವೀರಗಳನ್ನು ಹೋಲಿಸುವಾಗ ಉಪಯೋಗವಾಗುವ ಮಾತುಗಳು ಸಾದೃಶ್ಯಗಳು ಮಾತ್ರ : ವಿಷ್ಣೋರಿವ; ದೇವಕಲ್ಪಃ; ವಾಸವೋಪಮಂ; ವರುಣೋಪಮಂ ಎಂಬುಂಥವೇ ಹೊರತು ಏವ ಅಲ್ಲ. ಸಮವೆನ್ನುವುದೂ ಇಲ್ಲ.'ನರಂ' ಎಂಬ ಮಾತು ಕವಿಗೂ ಮುಖ್ಯ. ಆರ್ಯದೇವಗಣಗಳಲ್ಲಿ ಮುಂಚಿನ ಕಾಲದ ದೇವತೆಗಳಿಗೆ ಹೋಲಿಕೆ ಕೊಡುವ ಪ್ರಕರಣಗಳಲ್ಲೆಲ್ಲ ಇಂದ್ರ, ತ್ರಿವಿಕ್ರಮ, ವರುಣರನ್ನು ಸಂಬಂಧಿಸುತ್ತಾರೆ. ಬ್ರಹ್ಮನನ್ನು ಕುರಿತ ಕಥಾಭಾಗಗಳು ಬೇರೆ ರೇಖೆಯನ್ನು ಬೆಳಸುವುವು. ಈ ಒಟ್ಟು ಕಸರೆಯನ್ನು ನಿರ್ಮಾಣ ಮಾಡಿದ್ದವನು ಅವನು. ಯಾರ ಕೈಯಿಂದಲೂ ರಾವಣನಿಗೆ ಮರಣವಿಲ್ಲ; ಅವನು ನಾಶವಾಗುವುದಿಲ್ಲ ಎಂಬುದು ಅವನ ವರ. ವರಶಾಪಗಳ ಕಾರ್ಯಕಾರಣ ಸಂಬಂಧ ಕತೆಯ ಸ್ಥಿತಿಗತಿ ಸಾಧಕವಾದ ಮುಖ್ಯ ತಂತ್ರವಾಗುತ್ತದೆ – ಕತೆಯ ಉದ್ದಕ್ಕೂ. ಯಾವೆಲ್ಲ ರಾಕ್ಷಸರ ಮೇಲೆ ರಾಮನು ಯುದ್ಧಮಾಡಿ ಅವರನ್ನು ಕೊಲ್ಲಬೇಕಾಗುತ್ತದೆಯೊ ಅವರೆಲ್ಲ ಒಂದು ರೀತಿ ರಾವಣನ ಸಂಬಂಧಿಗಳೇ. ತಾಟಕಿ, ಮಾರೀಚ, ಸುಬಾಹು, ಖರ ಅಂಥವರು; ಶೂರ್ಪನಖಿ ರಾವಣನ ತಂಗಿ. ರಾವಣ–ಕುಂಭಕರ್ಣರು ಅವತಾರ ಕತೆಯ ಒಂದು ಅಂಗ. ವಿಷ್ಣುವಿನ ಅನುಗ್ರಹ ಪುನಃ ಬರಬೇಕಾದರೆ ಶತ್ರುಗಳ ಹಾಗೆ ಮೂರು ಜನ್ಮವೆತ್ತಿ ಬರಬೇಕಾಗಿತ್ತು. ರಾವಣ–ಕುಂಭಕರ್ಣರು ಜಯವಿಜಯರ ಅವತಾರ. ರಾವಣನಿಗೆ ಹೋಲಿಸಿದರೆ

---

೩೨ ಇತರ ಕೆಲವು ಲೇಖಕರು ರಾವಣನ ಉನ್ನತಿಯನ್ನು ಎತ್ತಿ ಕಾಣಿಸುತ್ತಾರೆ. ಅವನಿಗೆ ರಾಮನು ವಿಷ್ಣುವಿನ ಅವತಾರ ಎಂದು ಗೊತ್ತು. ತನ್ನ ಮೇಲೆ ಸನಕಾದಿ ದೇವಋಷಿಗಳು ಹಾಕಿದ್ದ ಶಾಪದಿಂದ ಬಿಡುಗಡೆ ಮಾಡಿಕೊಳ್ಳುವುದಕ್ಕಾಗಿ ದ್ವೇಷದ ದಾರಿಯಲ್ಲಿ ರಾವಣನು ಕಾರ್ಯ ಮಾಡುತ್ತಾನೆ; ರಾಮನ ಹೆಂಡತಿಯನ್ನು ಅಪಹರಿಸುವುದರ ಮೂಲಕ ಅವಳ ಗಂಡನಿಗೆ ಅತ್ಯಂತ ದೊಡ್ಡ ಅಪರಾಧ ಮಾಡಿದಂತಾಗುತ್ತದೆ. ಅದಕ್ಕಾಗಿ ತಾನು ಪ್ರಾಣ ತೆರುತ್ತೇನೆ; ಅದು ನಿಜವಾಗಿ ತನಗೆ ಶಿಕ್ಷೆ. ಹೀಗೆ ಸತ್ತು ತಾನು ವಿಷ್ಣುಪಾದವನ್ನು ಪುನಃ ಸೇರಿಕೊಳ್ಳುವುದಾಗುತ್ತದೆ ಎಂದು! – (ಜಯವಿಜಯರ ಕತೆ) – ಅವರ ಪ್ರತಿಪಾದನೆ.

ಆಹಾರ ನಿದ್ರೆಗಳಲ್ಲಿ ತತ್ಪರನಾಗಿ ಹೋಗಿದ್ದ ಕುಂಭಕರ್ಣ ದುಷ್ಟನಲ್ಲವೇನೋ!

ಅದು ಬೇರೊಂದು ಕತೆ. ಆಗಿನ ಸಮಸ್ತ ಭರತಖಂಡವೂ ರಾವಣನಿಗೆ ಭಯಪಡುತ್ತಿತ್ತು. ಅವನನ್ನು ಕೊಲ್ಲುವ ಸಾಹಸವೂ ಕಾರ್ಯವೂ ರಾಮನ ಕಾರ್ಯಗಳಲ್ಲಿ ಒಂದಾಯಿತು. ಆದರೆ ಪಂಚವಟಿಗೆ ಬರುವವರೆಗೂ ಸ್ಫುಟವಾಗಿ ಅದು ಅವನಿಗೆ ತಿಳಿದಿರಲಿಲ್ಲ. ಸೀತೆಯನ್ನು ಅವನು ಎತ್ತಿಕೊಂಡು ಹೋದಂತಹ ಪಾಶವೀ ಸಂಘಟನೆಯೂ ಅವಳನ್ನು ಹಿಂದಕ್ಕೆ ಸಾಧಿಸುವ ಅಗತ್ಯವೂ ಸಾಕಾಗುತ್ತಿತ್ತು. ರಾಮಾಯಣದ ಕತೆ ಅದನ್ನು ಒಳಗೊಳ್ಳುವುದಕ್ಕೆ. ಉತ್ತರ ಕಾಂಡ ವಿಶೇಷವಾಗಿ ರಾವಣನ ದೌಷ್ಟ್ಯವನ್ನೆಲ್ಲ ವರ್ಣಿಸುತ್ತದೆ. ತನ್ನ ಅಣ್ಣ ಕುಬೇರನನ್ನು ದಾಳಿಮಾಡಿ ಅವನ ಪುಷ್ಪಕವನ್ನು ಅಪಹರಿಸಿದ್ದನು; ಒತ್ತಾಯ ಹಾಕಿ ಮಂಡೋದರಿಯನ್ನು ಮದುವೆ ಮಾಡಿಕೊಂಡು ಇಂದ್ರಜಿತುವಿನ ತಂದೆಯಾದನು. ಕುಂಭಕರ್ಣ ಅವನಿಗೆ ಯುದ್ಧಭೀಕರನಾದ ದುರ್ಘಟನಾದ ಸೋದರ. ಚಕ್ರವರ್ತಿ ಒಬ್ಬ ಕಟ್ಟಿಕೊಳ್ಳಬಯಸುವ ರಾಜಧಾನಿಯನ್ನು ಎಷ್ಟು ಸಂಪನ್ನವಾಗಿ, ಸುಂದರವಾಗಿ ಮಾಡಬಹುದೊ ಲಂಕೆಯನ್ನು ಅಷ್ಟು ಸಂಪನ್ನವಾಗಿ ಮಾಡಿಕೊಂಡಿದ್ದನು. ಬೆಟ್ಟಗಳ ಮುಡಿಗಳಲ್ಲಿ ತನ್ನ ಅರಮನೆಗಳನ್ನು ಕಟ್ಟಿದ್ದನು. ಅವುಗಳ ಸುತ್ತ ದುರ್ಗಮ ದುರ್ಗಗಳಿದ್ದವು. ಅವುಗಳ ಸುತ್ತ ಇದ್ದ ದಕ್ಷಿಣ ಸಮುದ್ರ ಲಂಕೆಗೆ ಅದನ್ನು ದಾಟಿಬರಲು ಕಷ್ಟವಾಗಿಸುವ ಅಗಳು.[೩೩] ತಪಸ್ಸಿನ ಮೂಲಕ ಅನೇಕ ಸಿದ್ಧಿಗಳನ್ನು ರಾವಣನು ಪಡೆದುಕೊಂಡದ್ದಲ್ಲದೆ ಆ ಮೂಲಕ ಕಾಮರೂಪಿಯಾಗಿದ್ದನು. ಯಾವ ಕ್ಷಣದಲ್ಲಿಯೂ ಭೂತಗಳನ್ನೂ ಅತಿ ಪ್ರಾಕೃತಿಕ ಶಕ್ತಿಗಳನ್ನು ಆವಾಹನೆ ಮಾಡಿ ತಾನು ಪ್ರಾರ್ಥಿಸಿದುದನ್ನೆಲ್ಲ ತನಗೆ ದೊರಕುವಂತೆ ಮಾಡಿಕೊಳ್ಳಬಲ್ಲವನಾಗಿದ್ದ. ಬಯಸಿದುದನ್ನೆಲ್ಲ ರಾಕ್ಷಸ ಪ್ರಕಾರದಲ್ಲಿ ಬಲಾತ್ಕಾರದಿಂದ ಕೈವಶ ಮಾಡಿಕೊಳ್ಳುತ್ತಿದ್ದನಾಗಿ ಅವನ ಕಣ್ಣು ಯಾವ ಚೆಲುವೆಯ ಮೇಲೆ ಬಿದ್ದರೂ ಅವಳನ್ನು ಅಪಹರಿಸಿಕೊಂಡು ತರುತ್ತಿದ್ದನು.

ತನ್ನ ಸುತ್ತಲಿದ್ದವರೆಲ್ಲರನ್ನೂ ಮೆಚ್ಚಿಸಿದ್ದನೆನ್ನಿಸುತ್ತದೆ. ಅವನ ಅಭಿಪ್ರಾಯಗಳನ್ನೂ ಮಾರ್ಗಗಳನ್ನೂ ಒಪ್ಪದಿದ್ದವರಿಗೂ ಮೆಚ್ಚಿಕೆ ಇತ್ತು. ಆದರೆ ಎಲ್ಲರು ಬದುಕಿದ್ದುದೂ ಅವನ ಭಯದಲ್ಲಿ. ಅವನ ಸೈನ್ಯ ಸುವ್ಯವಸ್ಥವಾದ್ದು; ಉತ್ತಮ ರೀತಿಯಲ್ಲಿ ಸಜ್ಜಿತವಾಗಿತ್ತು. ಒಂದೇ ಒಂದು ಸಂದರ್ಭದಲ್ಲಿ ಅವನಿಗಿಂತ

---

೩೩ ಈ ದ್ವೀಪ ಆಧುನಿಕ ಸಿಂಹಳವೆ? – ಎಂಬುದು ಬಹುಕಾಲದಿಂದ ವಾದಕ್ಕೆ ಎಡೆಕೊಟ್ಟಿದೆ.

ಹೆಚ್ಚು ಪ್ರಬಲವಾದ ಶಕ್ತಿಯನ್ನು ಅವನು ಕಂಡದ್ದು – ಇದಕ್ಕೆ ಪ್ರಮಾಣವೂ ಉತ್ತರ ಕಾಂಡದಿಂದಲೇ–ವಾಲಿಯ ಪ್ರಸಂಗದಲ್ಲಿ.ಅವನನ್ನು ಅಡಗಿಸಿ ತನ್ನ ವಶಮಾಡಿಕೊಳ್ಳಬೇಕೆಂದು, ಅವನು ಪ್ರಾರ್ಥನೆಮಾಡುತ್ತಿರುವಾಗ ಯತ್ನಿಸಿದನು. ದುರಾಲೋಚನೆಯಿಂದ ತನ್ನ ಹಿಂದೆ ರಾವಣನು ನಿಂತಿರುವುದು ವಾಲಿಗೆ ತಿಳಿದುಬಂದಿತು. ತನ್ನ ಮೇಲೆ ಅವನು ಬಾಗಿದಾಗ ತನ್ನ ಕಂಕುಳಲ್ಲಿ ಅವನನ್ನು ಇರುಕಿಕೊಂಡು ನಿಶ್ಚೇತನನನ್ನಾಗಿ ನಿಸ್ಸಹಾಯನನ್ನಾಗಿ ಮಾಡಿ ನಾಲ್ಕೂ[೩೪] ಕಡಲುಗಳ ಮೇಲೆ ಅವನನ್ನು ಎತ್ತಿಕೊಂಡು ಹೋಗಿ ಕಡೆಗೆ ಕಿಷ್ಕಿಂಧೆಯಲ್ಲಿ ವಾಲಿ ಬೀಳುಬಿಟ್ಟನಂತೆ. ರಾವಣನಿಗೆ ತಿಳಿದುಬಂದಿತು–ತನಗಿಂತ ವಾಲಿ ಎಷ್ಟು ಹೆಚ್ಚು ಶಕ್ತ ಎಂದು. ಆದ್ದರಿಂದ ತಾನು ವಾಲಿಗೆ ಸ್ನೇಹಿತನಾಗಿರುತ್ತೇನೆಂದು ಶಪಥಮಾಡಿ ಅವನು ಬೇಕೆಂದಾಗ ಸೇವೆ ಸಲ್ಲಿಸುವೆನೆಂದು ಮಾತುಕೊಟ್ಟಿದ್ದ.

ಈ ಸಂಗತಿ ನಿಜವಾಗಿದ್ದರೆ ಜಾಂಬವಂತ ಸುಗ್ರೀವ ಮೊದಲಾದವರು ಅವನನ್ನು ಕಂಡಿರಬೇಕು ; ಅವನ ವಿಷಯವನ್ನು ತಿಳಿದಿದ್ದಿರಬೇಕು. ವಿವರವಾಗಿ ಏನನ್ನೂ ತಿಳಿಸುವ ಮುಂಚೆ ಜಟಾಯು ಸತ್ತನು. ಸಂಪಾತಿ ಒಬ್ಬನಿಗೆ ಅವನ ವಿಷಯ ಚೆನ್ನಾಗಿ ತಿಳಿದಿರುವಂತೆ ಕಾಣುತ್ತದೆ. ಅವರೆಲ್ಲ ರಾವಣನು ದುಷ್ಟನೆಂದೂ ಸ್ವೇಚ್ಛಾಚಾರಿಯೆಂದೂ ಆಶ್ರಮ ಜೀವನಕ್ಕೂ ಉತ್ತರದ ಆರ್ಯರ ಕರ್ಮಪ್ರಪಂಚವಾದ ಯಜ್ಞಯಾಗಗಳ ಏರ್ಪಾಡಿಗೆ ಶತ್ರುವೆಂದೂ ಮಾತ್ರ ತಿಳಿದಿದ್ದರು. ಅಪರಾಧಗಳನ್ನು ಅವನ ಮೇಲೆ ಹೇರಿ ಅವನನ್ನು ಎದುರಿಸಿ ನಾಶಮಾಡುವ ಕಾರ್ಯ ರಾಮನ ಪಾಲಿಗೆ ಬಂದಿತು. ಅವನನ್ನು ಎದುರಿಸುವ ವಿಷಯದಲ್ಲಿಯಾಗಲಿ ಯಾರನ್ನೇ ಎದುರಿಸಲಾಗಲಿ ರಾಮನಿಗೆ ಲವಲೇಶವೂ ಎಂದೂ ಭೀತಿ ಕಾಣಿಸುವುದಿಲ್ಲ. ರಾಮನೊಡನೆ ಯುದ್ಧ ಸಂಭವಿಸುವವರೆಗೂ ರಾಮರಾವಣರಲ್ಲಿ ಯಾರೊಬ್ಬರೂ ಅಂತಹ ಯೋಧರನ್ನು ಎದುರುಗೊಂಡಿರಲಿಲ್ಲ. ಬಲದಲ್ಲಿ, ಶಕ್ತಿಸಾಹಸಗಳಲ್ಲಿ ಆ ಕಾಲದ ವ್ಯಕ್ತಿಗಳಲ್ಲಿ ತಾರತಮ್ಯದ ಪಟ್ಟಿಮಾಡಹೋದರೆ ರಾಮನೊಬ್ಬನಿಗೆ ಮಾತ್ರ ರಾವಣ ಎರಡನೆಯ ಕೈ. ಏಕೆಂದರೆ, ಒಂದು ಪ್ರಸಂಗದಲ್ಲಿ ಹನುಮಂತನನ್ನೂ ಬಡಿದು ಅಪ್ಪಳಿಸಿದ್ದನು. ರಾಮನ ಸ್ವಾಸ್ಥ್ಯವೊ ಸಂಪೂರ್ಣವಾದ್ದು. ಅಂಥದೇ ಅವನ ಶಸ್ತ್ರಾಸ್ತ್ರ ಕೌಶಲ ಕೂಡ.

---

೩೪ ನಮಗೆ ತಿಳಿದಂತಿವೆ ಇಂದು ಮೂರು; ಭಾರತಕ್ಕೆ ನಾಲ್ಕನೆಯ ಕಡಲಾವುದೊ? ಹಿಂದೆ ಹಿಮಾಲಯ ಸಮುದ್ರದ ತಳಗಿತ್ತು ಎಂಬಂಶವೊ ವಾಯವ್ಯದಲ್ಲಿ ಆಚೆಗಿದ್ದ ಒಂದು ಸರೋವರವೊ ಕಡಲೊ ಆಗಿರಬೇಕು ಎನ್ನುವರು ಕೆಲವರು.

ಯುದ್ಧರಂಗದಲ್ಲಿ ಯಾವ ಶ್ರಮ – ಆಯಾಸಗಳಿಲ್ಲದೆ ತನ್ನನ್ನು ಸುಧಾರಿಸಿಕೊಳ್ಳಬಲ್ಲವನಾಗಿದ್ದನು. ಆಯುಧಗಳು ಕೆಟ್ಟು ರಾವಣನು ಆಯಾಸಗೊಂಡಿರುವುದನ್ನು ರಾಮನು ಕಂಡು ಆ ದಿನ ಹೋಗಿ ವಿಶ್ರಾಂತಿ ಪಡೆದುಕೊಂಡು ಮಾರನೆಯ ದಿನ ಹೊಸ ಶಕ್ತಿಯಿಂದ ಕದನಕ್ಕೆ ತಕ್ಕವನಾಗಿ ಬರಬೇಕೆಂದು ಹೇಳಿ ಕಳಿಸಿದ. ಇಂಥ ಅನುಭವ ರಾವಣನ ಜೀವನದಲ್ಲೆಲ್ಲ ಬಂದುದು ಅದೇ ಮೊದಲು. ಈ ಸಂಗತಿ ಹಿಂದೆಂದೂ ಅವನು ಅನುಭವಿಸದಿದ್ದಂತಹ ಜೀವಭಯವನ್ನು ಅವನಲ್ಲಿ ಉತ್ಪಾದಿಸಿತು. ಈಗ ಅವನಿಗೆ ತನ್ನ ಪೂರ್ವಚರಿತ್ರೆ ಸುಮಾರೆಲ್ಲವೂ ನೆನಪಿಗೆ ಬರುತ್ತದೆ. ರಾಮನನ್ನು ಎದುರಿಸಿ ಯುದ್ಧ ಮಾಡಬೇಕಾಗಿ ಬಂದ ಈಗ ತನ್ನ ಮೇಲೆ ಎರಗಿದ್ದ ಶಾಪಗಳೆಲ್ಲ ಒಮ್ಮೊನೆಯಾದಂತೆ ಕಂಡಿತು. ಖರನ ಸಮಸ್ತ ಸೈವ್ಯವೂ ನಾಶಗೊಂಡು ತೆರೆದ ತುಂಬು ಸಭೆಯಲ್ಲಿ ಲಂಕೆಯಲ್ಲಿ ತನ್ನ ಅಣ್ಣನನ್ನು ಶೂರ್ಪನಖಿ ಜರೆದಾಗ ಇಂಥ ಶಕ್ತಿ ಅವನ ಲಕ್ಷ್ಯಕ್ಕೆ ಬರಲಿಲ್ಲ. ಅಂತಹ ಮುಖಭಂಗ ಮಾಡಿ ತನ್ನನ್ನು ಮೂದಲಿಸಿದಾಗ[೩೫] ಸಹಜವಾಗಿ ಅವನು ಕಾರ್ಯವನ್ನು ಕೈಕೊಳ್ಳಬೇಕಾಗುತ್ತದೆ. ರಾವಣನ ಅತಿ ದುರ್ಲಕ್ಷಣ ಅವನ ಸ್ತ್ರೀಲಂಪಟತೆ. ಸೀತೆಯ ರೂಪದ ಆಕರ್ಷಣೆಯನ್ನು ತನ್ನ ತಂಗಿ ವರ್ಣಿಸಿದಾಗ ಅವನ ಕಾಮ ಜ್ವಾಲೆಯಂತಾಯಿತು. ಒಂದು ಯೋಜನೆಯನ್ನು ಆಲೋಚಿಸಿ ಅದಕ್ಕೆ ಒಪ್ಪದ ಮಾರೀಚನ ಸಹಕಾರವನ್ನು ಪೀಡಿಸಿ ಪಡೆದು ನೆರವೇರಿಸಿಕೊಳ್ಳಬೇಕೆಂದು ಆಲೋಚಿಸಿದ.

ಸ್ತ್ರೀ ಸಂಬಂಧದಲ್ಲಿ ರಾವಣನು ರಚಿಸಿದ ಅನೇಕ ದುಷ್ಪ್ರಸಂಗಗಳಿದ್ದುವು. ಹಿಂದಿನ ಕಾಲದಲ್ಲಿ ಆ ಸಂಬಂಧದಲ್ಲಿ ಅವನ ಮೇಲೆ ಎರಗಿದ ಶಾಪಗಳ ಸ್ಮೃತಿಗಳೆಲ್ಲ ಈಗ ಗುಂಪುಗೂಡಿ ಅವನ ಮನಸ್ಸಿಗೆ ಬಂದುವು. ತನಗಿಂತ ಮೇಲ್ಪಟ್ಟ ಸಾಹಸಿಯೊಬ್ಬನನ್ನು ಅವನು ಮುಖಾಮುಖಿಯಾಗಿ ಎದುರುಗೊಳ್ಳನಿಂತಾಗ ಒಟ್ಟು ರಾಕ್ಷಸ ಸೈನ್ಯವೆಲ್ಲ ನಾಶವಾಗಿತ್ತು. ಬ್ರಹ್ಮನು ತನಗೆ ಕೊಟ್ಟ ವರ ಈಗ ಸ್ಪಷ್ಟವಾಗಿ ರಾಮನೊಡನೆಯ ಯುದ್ಧದಲ್ಲಿ ಅವನ ಮೇಲೆ ಕವಿಯಿತೆಂದೂ ಇನ್ನೊಂದು ಶಾಪ ವಾನರರನ್ನು ತನ್ನ ಮೇಲೆ ತಂದಿತೆಂದೂ ಅವನು ಮನಸ್ಸಿಗೆ

---

೩೫ ಅವಳು ಮಾಡಿದ ಆಕ್ಷೇಪಣೆಯಲ್ಲಿ ರಾಜ್ಯ ತತ್ವದ ಕೆಲವು ಒಳ್ಳೆಯ ಅಂಶಗಳಿವೆ. ಇಂದಿಗೂ ಅವು ಅರ್ಥವತ್ತಾಗಿ ಕಾಣುತ್ತವೆ. ಉದಾ : ರಾಜನು ಅತಿಚಾರಿಯೂ ಸೈನ್ಯಕದಕೆ ಸಂಬಳ ಸಾರಿಗೆ ಕೊಡುವುದರಲ್ಲಿ ಬಿಗಿಹಿಡಿತದವನಾಗಿಯೂ ದುರಹಂಕಾರಿಯೂ ನಿರ್ಧನನಾಗಿಯೂ ಕಪಟಿಯಾಗಿಯೂ ಇದ್ದರೆ ಅವನ ಅಗತ್ಯಕ್ಕೆ ಪ್ರಜೆಗಳು ಒದಗಿ ನೆರವಾಗುವುದಿಲ್ಲ, ಇತ್ಯಾದಿ. ನಮ್ಮ ನಾಡಿನ ಇತಿಹಾಸದಲ್ಲಿ ಇಂಥ ಪರಿಸ್ಥಿತಿಗೆ ಯಾವಾಗ ಕೊರತೆ ಇತ್ತು?

ತಂದುಕೊಂಡ. ವೇದವತಿಯೇ ಈಗ ಹೆಚ್ಚು ಕಡಮೆ ಸೀತೆಯಾಗಿ ಹುಟ್ಟಿದ್ದಾಳೆಂದೂ ಇಷ್ಟವಿಲ್ಲದ ಹೆಣ್ಣನ್ನು[೩೬] ಅವನು ಎಂದಿಗಾದರೂ ಮುಟ್ಟಿದರೆ ತಾನು ನಾಶವಾಗುವನೆಂಬ ಅವಳ ಶಾಪವನ್ನೂ ನೆನಪಿಗೆ ತಂದಿತು. ಹಿಂದೆ ಅನರಣ್ಯನು ಕಣಿ ನುಡಿದಿದ್ದಂತೆ ಇಕ್ಷ್ವಾಕು ವಂಶದಲ್ಲಿ ಹುಟ್ಟಿದವನೇ ತನ್ನ ಸಾವಿಗೆ ಕಾರಣವಾಗುತ್ತಾನೆಂಬುದೂ ನೆನಪಿಗೆ ಬಂದಿತು. ಆದರೆ ಕಡೆಯ ಕ್ಷಣದವರೆಗೂ ಸೀತೆಯ ಪರವಾದ ಅವನ ಅಭಿಲಾಷೆಯನ್ನು ಬಿಟ್ಟುಕೊಡಲು ಅವನ ಮನಸ್ಸು ಒಪ್ಪಲಿಲ್ಲ. ಅವಳ ಚೆಲವೂ ತನಗೆ ಅವಳು ಬೇಕೆಂಬ ಬಯಕೆಯೂ ಅವಳ ಪರ ಹಸಿವನ್ನು ಹೆಚ್ಚಿಸುವಂತೆ ಪ್ರತಿಯೊಂದು ನೋಟದಿಂದ ಬೆಳೆಯಿತು. ವಾನರರ ಪಾಳೆಯದ ಸುತ್ತಲೂ ಸೀತೆಯನ್ನು ಕರೆದುಕೊಂಡು ಹೋಗಿ ರಾಮಲಕ್ಷ್ಮಣರು ಸತ್ತಿರುವಂತೆ ಅವಳಿಗೆ ಕಾಣಿಸಬೇಕೆಂದು ಅಪ್ಪಣೆ ಮಾಡಿದ. ವಿಭೀಷಣನ ಕಡೆಯವಳಾದ ಸುರಮೆ 'ಸೋದರರರು ಪ್ರಜ್ಞೆ ಕಳೆದು ಕೊಂಡಿದ್ದಾರಷ್ಟೆ, ಸತ್ತಿಲ್ಲ' ಎಂದು ಸೀತೆಗೆ ತಿಳಿಸಿ ಸಮಾಧಾನಗೊಳಿಸಿದಳು.

ಯುದ್ಧದ ಕಡೆಯ ಘಟ್ಟದಲ್ಲಿ ಒಮ್ಮೆ ಹೋಗಿ ತನ್ನ ಈ ದುರ್ದೆಸೆಗೆಲ್ಲ ಕಾರಣಳಾದ ಅವಳನ್ನು ರಾವಣನು ಕೊಲ್ಲಹೋಗುತ್ತಾನೆ. ವಿವೇಕಶಾಲಿಯಾದ ಸ್ನೇಹಿತನೊಬ್ಬನು ಅವನಿಗೆ ತಿಳಿಯ ಹೇಳಿ ನಿನ್ನಂತಹ ತಿಳಿವಳಿಕಸ್ಥನೂ ನಿಜವಾದ ವೀರಯೋಧನೂ ಹೆಂಗಸನ್ನು ಕೊಲ್ಲುವ ಆಲೋಚನೆ ಮಾಡುವುದು ತಕ್ಕುದಲ್ಲ, ಅಯೋಗ್ಯವಾಗುತ್ತದೆ ಎಂದ. ನಿಜವಾಗಿ ತನ್ನ ಮಗನ, ಸೋದರರ ಸಾವಿಗೆ ಸೀತೆ ಕಾರಣಳೆ, ತಾನೇ ಅಲ್ಲವೆ? – ಎಂಬುದರ ಸತ್ಯತೆ ರಾವಣನಿಗೆ ಆಗ ಅರ್ಥವಾಯಿತು. ಅವನು ಮಹಾವೀರ. ಕಡೆಯವರೆಗೂ ಉತ್ತಮ ಪೌರುಷದಿಂದ ರಾಮನೊಡನೆ ಕಾದಿದ. ರಾವಣನ ಕೈಗಳು ದುರ್ಬಲವಾಗಿವೆಯೆಂದೂ ರಥದ ಕುದುರೆಗಳು ಆಯಾಸಗೊಂಡಿವೆಯೆಂದೂ ಸಾರಥಿ ಕಂಡಾಗ ಶತ್ರುವಿನ ಸಮ್ಮುಖದಿಂದ ಆತನನ್ನೂ ರಥವನ್ನೂ ಬೇರೆ ಕಡೆಗೆ ಒಯ್ದು ನಿಲ್ಲಿಸಿದ. ರಾವಣನನ್ನು ಇದು ಕೋಪಗೊಳಿಸಿತು. ತನ್ನನ್ನು ಹೇಡಿಯಾಗಿ ಕಾಣುವಂತೆ ಈ ಕಾರ್ಯ ಮಾಡುತ್ತದೆ; ಆದುದರಿಂದ ನನಗೆ ದ್ರೋಹ ಮಾಡುತ್ತಿದ್ದೀಯೆ ಎಂದು ತನ್ನ ಸಾರಥಿಯ ಮೇಲೆ ರೊಚ್ಚಿಗೆದ್ದನು.

ಕೂಡಲೆ ಸಾರಥಿ ಅವನಿಗೆ ಹೇಳಿದ: ಸಾರಥಿಯ ಹೊಣೆಗಾರಿಕೆ ಒಂದುಂಟು. ಒಡೆಯನು ದುಃಸ್ಥಿತಿಯಲ್ಲಿ ದುರ್ಬಲಗೊಳ್ಳುತ್ತಿರುವ

೩೬ ಭಾಗ್ಯವಶಾತ್ ಸೀತೆಯನ್ನು ಈ ಸಂಗತಿ ಕಾಪಾಡಿತು.

ಸನ್ನಿವೇಶದಲ್ಲಿರುವಂತೆ ತನಗೆ ಕಂಡಾಗ ರಂಗದಿಂದ ಅವನನ್ನು ಒಯ್ಯುವುದು ಪ್ರಭು ಸೇವೆಯೆಂದು. ಒಡೆಯನಿಗೆ ಸ್ವಲ್ಪ ವಿಶ್ರಾಂತಿಕೊಟ್ಟು ದಣಿವುಗೊಂಡ ಕುದುರೆಗಳಿಗೆ ಸ್ವಲ್ಪ ಶ್ರಮ ಪರಿಹರಿಸುವುದು ಇಬ್ಬರ ಶಕ್ತಿಯ ಪುನರ್‌ನವೀಕರಣಕ್ಕೆ ಮಾರ್ಗ ಎಂದು ತಿಳಿಸಿದ.

ಆಗ ರಾವಣನಿಗೆ ನಿಜ ತಿಳಿದು ಈ ಸೇವಕನ ಕಾರ್ಯ ಒಪ್ಪಿಕೆಯಾಗಿ ಅವನಿಗೆ ತ್ನ ಹಸ್ತಾಭರಣವನ್ನು ಬಹುಮಾನವಾಗಿ ಕೊಟ್ಟ. ರಾಕ್ಷಸ ಸೈನ್ಯವನ್ನು ನಡಸುವುದಕ್ಕೆ ತಾನು ಗೊತ್ತು ಮಾಡಿದ ರಾಜ್ಯದ ವೀರರನ್ನು ಹುರಿದುಂಬಿಸಿ ವಿಶ್ವಾಸ ಕಾಣಿಸಿ ಅವರಿಗೆ ಉತ್ತೇಜನ ಕೊಡುವುದರಲ್ಲಿ ರಾವಣನು ಯಾವಾಗಲೂ ಸಿದ್ಧನೇ. ಅವರನ್ನು ಹೊಗಳುವನು; ಮುಖಸ್ತುತಿ ಮಾಡುವನು; ಬಹುಮಾನ ಕೊಡುವನು. ತನ್ನ ಮೆಚ್ಚಿಕೆಯನ್ನು ತೋರಿಸಲು ತಾನೇ ಅವರ ಬೆನ್ನುತಟ್ಟುತ್ತಿದ್ದನು. ಅಷ್ಟು ದೊಡ್ಡ ವೀರನಿಂದ ದೊರೆತ ಈ ಮರ್ಯಾದೆ ಅವರಿಗೆ ಅತಿಶಯವಾಗುತ್ತಿತ್ತು. ದೇವತೆಗಳ ಮೇಲೆ ಜಯ ಪಡೆದಿದ್ದ ರಾವಣನು ಎಂಥವನು! ಆದುದರಿಂದ ಕಳಕ್ಕೆ ಸಂತೋಷದಿಂದ ಹೋಗಿ ಪ್ರಶಸ್ತಿಗೊಳ್ಳುವಂತೆ ಅದು ಅವರನ್ನು ಉತ್ತೇಜನಗೊಳಿಸುತ್ತಿತ್ತು. ಬ್ರಹ್ಮಾಸ್ತ್ರಕ್ಕೆ ಕಡಮೆಯ ಅಸ್ತ್ರವಾವುದೂ ಅವನನ್ನು ಬೀಳಿಸಲಾರದು ಎನ್ನಿಸಿದಾಗ, ವೀರನಂತೆ ಯುದ್ಧಮಾಡುವ ಅವನನ್ನು ಕುರಿತು ತುಂಬಾ ಹೆಚ್ಚಿನ ಪ್ರಶಂಸೆಯನ್ನು ರಾಮನೇ ಮಾಡುತ್ತಾನೆ.

ರಾವಣನು ಸತ್ತುಬಿದ್ದಾಗ ಲಂಕೆ ಬಹು ಶೋಕಪಟ್ಟಿತು. ಅವನ ವ್ಯಕ್ತಿತ್ವ ಅದ್ಭುತವಾದ್ದು. ಹನುಮಂತನು ಮೊದಲು ಲಂಕೆಗೆ ಹೋಗಿ ಅವನನ್ನು ಕಂಡಾಗ ಅವನ ಆಕೃತಿ ಮಹತ್ವಗಳಿಂದ ಹೇಗೆ ಚಕಿತನಾಗಿದ್ದನೊ ಹಾಗೆಯೇ ರಾಮನೂ ಅವನ ರೂಪ ಆಕೃತಿಗಳಿಂದ ಚಕಿತನಾಗಿದ್ದನು. ಅವನ ಗುಣಗಳೂ ಯೋಗ್ಯತೆಯೂ ಅತಿಶಯವಾಗಿದ್ದುದರಿಂದ ತನ್ನ ಜನವರ್ಗಕ್ಕೆಲ್ಲ ಪ್ರಿಯವಾಗಿದ್ದನು. ತನಗೆ ಒಲಿದು ತನ್ನ ಇಷ್ಟಗಳನ್ನು ನಡಸಿಕೊಟ್ಟವರಿಗೆ ದೊಡ್ಡ ದಾನಿಯಾಗಿದ್ದನು. ತನಗೆ ವಿರುದ್ಧವಾಗಿ ನಡೆದುಕೊಂಡವರಿಗೆ ಭೀಕರನಾಗಿಯೂ ಕ್ಷಮಾರಹಿತನಾಗಿಯೂ ಇದ್ದನು.

ಅನೇಕ ಮಂದಿ ಚೆಲುವೆಯರು ಅವನ ವಶದಲ್ಲಿದ್ದರು: ಅಪಹರಿಸಿ ತಂದವರು; ಗೆದ್ದು ತಂದವರು; ಒಲಿದು ಬಂದವರು; ಸಮ್ಮಾನವಾಗಿ ಬಂದವರಿ; ಸ್ನೇಹಿತರಾಗಿ ಬಂದವರು – ಅವರೆಲ್ಲ. ಅವನ ಮುಖ್ಯರಾಣಿ ಮಂಡೋದರಿ; ಸೌಂದರ್ಯದಲ್ಲಿ ಸೀತೆಗೆ ಮಾತ್ರ ಎರಡನೆಯವಳು; ಗೌರವಸ್ಥಳೂ ಪ್ರೀತಿಪರಳೂ ಆದ ಮಡದಿ. ಇಷ್ಟ ಕಂಡ ಹೆಂಗಸನ್ನು ಹೊಡೆದುಕೊಂಡು ಬರುವುದು ರಾಕ್ಷಸರ ಮಾರ್ಗ ಎಂದು ರಾವಣನು ಹೇಳುತ್ತಿದ್ದನು. ಆದರೆ ತಂದವರನ್ನು ಚೆನ್ನಾಗಿ

ನೋಡಿಕೊಳ್ಳುತ್ತಿದ್ದನು. ಅವನ ಭೋಗ ವಿಲಾಸಗಳು, ಶೃಂಗಾರ ಕ್ರೀಡೆ ಅಭೂತಪೂರ್ವವಾದವು; ಅತ್ಯಸಾಧಾರಣವಾದವು. ಅಂಥವರ ಒಂದು ಚಿತ್ರವನ್ನು ತನ್ನ ವಿಲಾಸಗೃಹದಲ್ಲಿ ಮಲಗಿ ಬಿದ್ದಿದ್ದ ಸ್ತ್ರೀಯರ ಚಿತ್ರಗಳಲ್ಲಿ ಹನುಮಂತನು ಕಂಡನೆಂದು ಕವಿ ಕಾಣಿಸುತ್ತಾನೆ. ಇಂಥವನ್ನು ಪ್ರತಿದಿನವೂ ರಾವಣನ ವಿಲಾಸಗೃಹದಲ್ಲಿ ಕಾಣಬಹುದಿತ್ತು. ಅಲ್ಲಿನವರಿಗೂ ಇವು ಪ್ರಿಯವೇ ಎನ್ನಿಸುತ್ತದೆ. ಅವನ ದೌರ್ಬಲ್ಯಗಳನ್ನೂ ದುರ್ನಡತೆಗಳನ್ನೂ ಅವರೂ ಬಲ್ಲವರೇ. ಆದರೆ ಅಂತಹ ಪ್ರಣಯಿಯ ಸಾವಿಗಾಗಿ ಅವರು ಪಟ್ಟ ದುಃಖ ನಿಜವಾದುದು. ಅವನ ಮೃತಶರೀರದ ಸುತ್ತಹೊಮ್ಮಿದ ನೋಟಗಳು ಇದಕ್ಕೆ ನಿದರ್ಶನ. ಮಂಡೋದರಿಯ ವಿಲಾಪವಂತೂ ಅತಿಶಯವಾದ್ದು. ಶುಚಿಯೂ ಪತಿವ್ರತೆಯೂ ಇಷ್ಟಪಡದ ಹೆಂಗಸೂ ಆಗಿದ್ದ ಸೀತೆಗಾಗಿ ರಾವಣನು ವಿಧಿಗ್ರಸ್ತನಾಗಿ ಮೋಹಗೊಂಡಾಗ ತನ್ನ ಗಂಡನನ್ನು ತಿರುಗಿಸಲು ಕಷ್ಟಪಟ್ಟ ಸಾಧ್ವಿ ಮಂಡೋದರಿ. ಆಕೆಯ ವಿಲಾಪ ಮಹಾಮಹಿಳೆಯ ಪ್ರೇಮ ಪ್ರಕಾಶನ. ತನ್ನ ರಾಜ್ಯದಲ್ಲಿಯೂ ಅರಮನೆಯಲ್ಲಿಯೂ ತನ್ನ ಪರವಾಗಿ ಶಕ್ತಿಸಾಮರ್ಥ್ಯಗಳ ಮತ್ತು ಭಕ್ತಿಯ ವಿಸ್ತಾರವಾದ ಪ್ರಪಂಚವೊಂದನ್ನು ರಾವಣನು ಹೇಗೆ ಕಟ್ಟಿಕೊಂಡಿದ್ದನೆಂಬುದನ್ನು ಕೃತಿ ತಿಳಿಯಪಡಿಸುತ್ತದೆ. ದೇವತೆಗಳೂ ಮನುಷ್ಯರೂ ಅವನಿಗೆ ಹೆದರಿ ಬದುಕುತ್ತಾರೆ. ಅವನ ಬೆದರಿಕೆಗಳಿಂದಲೂ ದಾಳಿಗಳಿಂದಲೂ ಅವರು ಬಿಡುಗಡೆ ಹೊಂದುವ ವಿಷಯದಲ್ಲಿ ಲೋಕಕ್ಕೆ ಆ ಮುಂಚೆ ನಿರಾಶೆ ಉಂಟಾಗಿತ್ತು. ಅವನು ಸತ್ತು ಬಿದ್ದಾಗ ಲೋಕ ಹೆಚ್ಚು ಧಾರಾಳವಾಗಿ ಉಸಿರಾಡಬಲ್ಲದ್ದಾಯಿತು. ಇಷ್ಟುಹೊತ್ತಿಗೆ ರಾಮನ ವನವಾಸಕ್ಕೆ ಗೊತ್ತಾಗಿದ್ದ ಕಾಲಾವಧಿ ಕೂಡ ಮುಗಿದು ಬಂದಿತ್ತು. ರಾವಣನ ಸೋಲಿಂದಲೂ ಮರಣದಿಂದಲೂ ರಾಮಾಯಣದ ಮುಖ್ಯ ಕ್ರಿಯಾಂಶ ಕೊನೆಗೊಂಡಿತು. ಸೀತೆಯ ಬಿಡುಗಡೆಗೆ ಅಗತ್ಯವಾಗಿದ್ದ ಈ ಕಾರ್ಯ, ಪ್ರಾಮುಖ್ಯತೆಯಲ್ಲಿ ಎರಡನೆ ಮಹತಿಯ ಸಾಧನೆಗೂ–ಎಂದರೆ ಋಷಿಕಾರ್ಯ ದೇವಕಾರ್ಯಗಳಿಗೂ – ಸಾಧಕವಾದ ಕಾರ್ಯ ಮುಗಿದಂತಾಗಿತ್ತು.

**೮. ಇತರ ಪಾತ್ರಗಳು**

(ಅ) ಮಾರೀಚ : ರಾಮಾಯಣದ ಘಟನೆಗಳ ಬೆಳವಣಿಗೆಯಲ್ಲಿ ಮಾರೀಚ ಎರಡು ಮುಖ್ಯ ಪ್ರಸಂಗಗಳಲ್ಲಿ ಭಾಗವಹಿಸುತ್ತಾನೆ. ಮೊದಲ ಸಲ ತಾಟಕಿ ಸುಬಾಹುಗಳ ಜೊತೆಗೆ ವಿಶ್ವಾಮಿತ್ರನ ಯಾಗಕ್ಕೆ ಅಡ್ಡಿಯನ್ನು ತಂದಾಗ. ಅದರ ರಕ್ಷಣೆಗೆ ರಾಮನು ಒಂದು ಅಸ್ತ್ರವನ್ನು ಪ್ರಯೋಗಿಸಿ ಅವನನ್ನು – 'ಸಂಪೂರ್ಣಂ

ಯೋಜನಶ್ಯತಃ ಕ್ಷಿಪ್ತಃ ಸಾಗರ ಸಂಪ್ಲವೇ' – ಸಮುದ್ರದಲ್ಲಿ ಬೀಸಿಕೊಂಡು ಹೋಗಿ ಬೀಳುವಂತೆ ತಳ್ಳಿಹಾಕಿದನು. ತರುವಾಯದ ಕಾಲಗಳಲ್ಲಿ ಅವನು ಅನೇಕ ಆಕೃತಿಗಳನ್ನು ತಾಳಿ ದಂಡಕಾರಣ್ಯದಲ್ಲಿದ್ದ ಆಶ್ರಮಗಳಿಗೆ ತೊಂದರೆ ಉಂಟುಮಾಡುತ್ತಿದ್ದ. ಅತ್ತಿಗೆಯ ಹೃದಯವನ್ನೂ ಅಣ್ಣನನ್ನೂ ಆಕರ್ಷಿಸಿದ ಸ್ವರ್ಣಮೃಗ ಮಾರೀಚನದೇ ಒಂದು ಮಾಯಾರೂಪವೆಂದು ಕುಶಲಮತಿ ಲಕ್ಷ್ಮಣನಿಗೆ ಶಂಕೆ. ನಿಜವಾಗಿ ಜಿಂಕೆಗಳಾಗಿ ಹುಟ್ಟಿದ್ದ ಪ್ರಾಣಿಗಳು ಅದರ ಬಳಿಗೆ ಬಂದು ಅದನ್ನು ಮೂಸಿ ನೋಡಿ ಬೆದರಿ ಓಡಿ ಹೋದವು. ಮಾಯಾಜಿಂಕೆಗೊ ಇವನ್ನು ತಿಂದು ಬಿಡುವ ಆಸೆ. ಆದರೆ ಆಗ ಮಾರೀಚನು ನಿರ್ವಹಿಸುತ್ತಿದ್ದ ಪಾತ್ರಕ್ಕೆ ಭಂಗಬರುತ್ತಿದ್ದಿತಾಗಿ ಹಾಗೆ ಮಾಡಲು ಶಕ್ಯವಾಗಲಿಲ್ಲ. ಆ ರೂಪವನ್ನು ಧರಿಸಲು ಒಪ್ಪುವ ಮುಂಚೆ ರಾಮ ಲಕ್ಷ್ಮಣರಿಗೆ ವಿರುದ್ಧವಾಗಿ ನಿಲ್ಲುವ ವಿಷಯದಲ್ಲಿ ತಾನು ಹಿಂದೆ ಕಲಿತಿದ್ದ ಪಾಠವನ್ನು ಸ್ಮರಿಸಿಕೊಂಡ. ರಾವಣನಿಗೆ ಕಾರ್ಯ ತಕ್ಕುದಲ್ಲವೆಂದು ಅವನಿಗೆ ವಿವೇಕ ಹೇಳುವಾಗ ರಾಮನ ಚಾರಿತ್ರವನ್ನು ಕುರಿತ ಇನ್ನೂ ಕೆಲವು ಅಂಶಗಳು ತಿಳಿಯಬರುತ್ತದೆ. ತಂದೆಗಾಗಿ ರಾಜ್ಯತ್ಯಾಗಮಾಡಿದ ಮನುಷ್ಯನೆಂದು ರಾಮನನ್ನು ಕೀಳ್ಗಣಿಸಬಾರದೆಂದು ಎಷ್ಟೊ ಬಗೆಯ ತಿಳಿವಳಿಕೆ ಕೊಟ್ಟನು. ಇನ್ನಷ್ಟು ಗಂಭೀರವಾಗಿ, ಪಥ್ಯಕರವಾದ –

> ಸುಲಭಾಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ
> ಅಪ್ರಿಯಸ್ಯ ಸ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ

'ರಾಜ, ಯಾವಾಗಲೂ ಪ್ರಿಯವಾಗಿ ನುಡಿಯುವ ಜನ ಸುಲಭವಾಗಿ ಸಿಕ್ಕುತ್ತಾರೆ. ಆದರೆ ಅಪ್ರಿಯವಾದರೂ ಪಥ್ಯವಾದ ಮಾತುಗಳನ್ನು ನುಡಿಯುವ ಮತ್ತು ಕೇಳುವ ಜನ ದುರ್ಲಭರು' – ಎಂದು ನುಡಿದು ಎಚ್ಚರಿಕೆಯನ್ನೂ ಹಿತವಾದವನ್ನೂ ರಾವಣನಿಗೆ ತಿಳಿಸಿದ್ದ. ಈ ಮಾತುಗಳು ಎಲ್ಲ ಕಾಲಕ್ಕೂ ಎಲ್ಲ ಸ್ಥಾನಗಳಲ್ಲಿಯೂ ಸತ್ಯ. ಇದನ್ನು ಪ್ರತಿಯೊಂದು ಯುಗದಲ್ಲಿಯೂ ಸಂದರ್ಭದಲ್ಲಿಯೂ ಪುನಃ ಪುನಃ ಹೇಳಿದರೂ ಸಲ್ಲುತ್ತದೆ; ಎಷ್ಟು ಅಪರೂಪ, ಇಂಥ ಮಾತು, ಎಷ್ಟು ನಿರ್ದಿಷ್ಟ; ಸ್ಫುಟ! 'ನೀನು ಈ ಸಾಹಸವನ್ನು ಕೈ ಕೊಂಡರೆ ಲೋಕದಲ್ಲಿ ಯಾವ ರಾಕ್ಷಸರೂ ಬದುಕುವ ಹಾಗಿಲ್ಲ. ರಾಮನಿಗೆ ಕೋಪ ಬಂದರೆ ರಾಕ್ಷಸಕುಲವನ್ನೂ ಪೂರ್ತಿ ನಾಶಮಾಡಿಬಿಡುತ್ತಾನೆ. ನಿನ್ನ ಸ್ವಂತ ಜೀವಕ್ಕೆ ಅಪಾಯ ಕಾರಣವಾಗುತ್ತಿದ್ದೀಯೆ–ಎಂದರೆ, ನಿನ್ನನ್ನೂ ನಿನ್ನ ಕುಲವನ್ನೂ ರಾಜ್ಯವನ್ನೂ ನಾಶಮಾಡುವ ಕಾರ್ಯವನ್ನು ಕುರಿತು ಯೋಚಿಸುತ್ತಿದ್ದೀಯೆ' ಎಂದ. ಧೀರವಾದ ಈ ತೆರೆದ ಸಲಹೆಯೂ ಎಚ್ಚರಿಕೆಯೂ ಯಾವ ಕಾಲದಲ್ಲಿಯೂ

ರಾವಣನಿಗೆ ಯಾರಾದರೂ ನಿರ್ಭೀತವಾಗಿ ನುಡಿಯಬಹುದಾಗಿದ್ದ ಮಾತು. ಆದರೆ ರಾವಣನು ಇಂಥವಕ್ಕೆ ಲಕ್ಷ್ಯ ಕೊಡುವವನಲ್ಲ. ತಾನು ಹೇಳಿದುದನ್ನು ನಡಸದಿದ್ದರೆ ರಾವಣನು ತನ್ನನ್ನು ಕೊಲ್ಲುತ್ತಾನೆಂದು ಮಾರೀಚನು ಅರಿತನು. ರಾಮನ ಬಾಣಗಳಿಂದ ತನ್ನ ಮೃತಿ ಉಂಟಾಗುವುದು ಹೆಚ್ಚು ಯುಕ್ತವಾಗುವುದೆಂದು ಅವನು ಎಣಿಸಿದನು. ಅವನ ಭಾವನೆ ತನ್ನ ಸಂಬಂಧದಲ್ಲಿಯೂ ಕೊನೆಯಲ್ಲಿ ರಾವಣನ ಮತ್ತು ಅವನ ಜೊತೆ ಸೇರಿಕೊಂಡು ಅವನಿಗಾಗಿ ಕಾದಿದ ಎಲ್ಲ ದುಷ್ಟರ ಸಾವಿನಲ್ಲಿಯೂ ಫಲಿಸಿತ್ತು. ತಪಸ್ಸಿನಲ್ಲಿ ಮಾರೀಚನಿಗೆ ಬಲ ಸಿದ್ಧಿಯಾಗಿತ್ತು. ಮೊದಲು ಅದನ್ನು ಕೆಟ್ಟ ಉದ್ದೇಶಗಳಿಗೆ ಬಳಸಿದ. ಕಡೆಕಡೆಗೆ ತನ್ನ ಮನಸ್ಸನ್ನು ಶುಚಿಗೊಳಿಸಲು ಯಾವ ಮೌಲ್ಯಗಳು ಯೋಗ್ಯವಾದುವು ಎಂಬುದನ್ನು ಅರಿತು ಸಾಧಿಸಲು ತೊಡಗಿದ್ದ.

(ಆ) ವಾಲಿಸುಗ್ರೀವರು : ಬಹುಕಾಲ ವಾಲಿಸುಗ್ರೀವರು ಒಳ್ಳೆಯ ಸಹೋದರರಾಗಿ ಬಾಳಿದರು. ಇಬ್ಬರೂ ಶಕ್ತರಾದರೂ ವಾಲಿ ಹೆಚ್ಚು ಬಲಿಷ್ಠ. ಮಾಯಾವಿ ವಾಲಿಯ ಮೇಲೆ ಬಂದು ಬಿದ್ದಾಗ ವಾಲಿ ಅವನನ್ನು ಅಟ್ಟಿ ಹೋಗಬೇಕಾಯಿತು. ಅವನು ಒಂದು ಗುಹೆಯ ಮೂಲಕ ತಪ್ಪಿಸಿಕೊಂಡು ಹೋಗಬಯಸಿದ. ಸುಗ್ರೀವನು ಅದರ ಪ್ರವೇಶ ಸ್ಥಾನದಲ್ಲಿ ಕಾದಿದ್ದು ಅಣ್ಣನು ಬರುವವರೆಗೂ ಕಾದಿರಬೇಕೆಂದಾಗಿತ್ತು. ಬಹುಕಾಲ ಕಾದ. ಅದರ ಬಾಯಿಂದ ಬಹು ದೊಡ್ಡ ಪ್ರಮಾಣದಲ್ಲಿ ರಕ್ತ ಹರಿದು ಬಂದಾಗ ತನ್ನ ಅಣ್ಣ ತೀರಿಕೊಂಡಿರಬೇಕೆಂದು ಸುಗ್ರೀವನು ಎಣಿಸಿದ. ಏನು ಮಾಡಬೇಕೆಂಬುದು ಅವನಿಗೆ ತೋರಲಿಲ್ಲ. ವಾಲಿಯೇ ನಿಜವಾಗಿ ಸತ್ತಿರಬೇಕೆಂದು ಅವನು ತನ್ನ ಮನಸ್ಸಿಗೆ ತಂದುಕೊಂಡಿದ್ದನೊ ತನ್ನ ಅಣ್ಣನು ಸತ್ತಿದ್ದನೆಂದು ನಿಜವಾಗಿಯೇ ನಂಬಿದನೊ–ತಿಳಿಯದು. ಗುಹೆಯ ಬಾಯನ್ನು ಒಂದು ದೊಡ್ಡ ಕಲ್ಲು ಬಂಡೆಯಿಂದ ಮುಚ್ಚಿ ಕಿಷ್ಕಿಂಧೆಗೆ ಬಂದು ರಾಜನಾದ. ಸ್ವಲ್ಪ ಕಾಲದ ತರುವಾಯ ವಾಲಿ ಹಿಂದಿರುಗಿದ. ಹೀಗೆ ಮಾಡಿದ ಸುಗ್ರೀವನು ತನಗೆ ದ್ರೋಹ ಮಾಡಿದ್ದಾನೆಂದು ವಾಲಿಗೆ ಕೋಪವುಂಟಾಯಿತು. ರಾಜ್ಯದಿಂದ ತಮ್ಮನನ್ನು ಓಡಿಸಿ ಛಲವನ್ನು ಸಾಧಿಸಿದ. ತಮ್ಮನಿಗೆ ಹೆಂಡತಿ ರುಮೆಯ ಸಂಗವಿಲ್ಲದಂತೆ ಮಾಡಿ ಅವಳನ್ನು ತನಗೇ ಮಾಡಿಕೊಂಡ. ಸ್ಥಳದಿಂದ ಸ್ಥಳಕ್ಕೆ ಅವನನ್ನು ಅಟ್ಟಿಕೊಂಡು ಹೋಗಿ ಅವನಿಗೆ ನೆಲೆಯಿಲ್ಲದಂತೆ ಮಾಡಿದ. ಮತಂಗ ಋಷಿಯ ಆಶ್ರಮಕ್ಕೆ ಕಾಲಿಟ್ಟರೆ ವಾಲಿ ನಾಶವಾಗುತ್ತಾನೆಂದು ತಿಳಿದಿದ್ದುದರಿಂದ ಅದು ವಾಲಿಯ ಮಿತಿ ಎಂಬ ಸಂಗತಿ ಹನುಮಂತನ ನೆನಪಿಗೆ ಅಕಸ್ಮಾತ್ ಹೊಳೆದು ಅಲ್ಲಿ ನೆಲೆಗೊಂಡು

ಪ್ರಾಣರಕ್ಷಣೆ ಮಾಡಿಕೊಳ್ಳಬೇಕಾಯಿತು. ಆ ಕಾಲದ ಅತಿ ಶೂರರಾದ ವೀರರೂ ಆ ನಂಬಿಕೆ ಉಳ್ಳವರಾದುದರಿಂದ ಋಷಿಯ ಪ್ರತಿರೋಧವನ್ನು ಕಟ್ಟಿಕೊಂಡರೆ ತನ್ನ ಪ್ರಾಣಕ್ಕೆ ಅಡ್ಡ ಖಂಡಿತವೆಂದು ವಾಲಿ ತಿಳಿದಿದ್ದುದು ಸುಗ್ರೀವನಿಗೆ ರಕ್ಷಣೆಯಾಯಿತು.

ಸೋದರರಲ್ಲಿ ವಾಲಿ ಹೆಚ್ಚು ಬಲಿಷ್ಠನಾದ್ದರಿಂದ ಅವನಿಂದ ಸುಗ್ರೀವನಿಗೆ ಜೀವಭಯವಿತ್ತು. ಅಣ್ಣನು ತುಂಬ ಸಮರ್ಥ; ಜನಪ್ರಿಯನಾದ ನಾಯಕ. ಅವನ ಪರವಾಗಿ ರುಮೆಗೆ ಹೇಗೆನ್ನಿಸಿತ್ತೋ; ಅವನಲ್ಲಿ ತಾರೆಗಿದ್ದ ಭಕ್ತಿದೊಡ್ಡದು. ವಾಲಿ ಬದುಕಿದ್ದಾಗ ಅವಳಿಗೆ ಆತ ಒಡೆಯನೂ ಗಂಡನೂ ಆಗಿದ್ದ.ಅವನು ಮೃತಿಹೊಂದಿದ ಮೇಲೆ ಸುಗ್ರೀವನಿಗೆ ಅವಳೂ ಹೆಂಡತಿಯಾದಳು.ಸುಗ್ರೀವನು ವಾಲಿಯ ತಮ್ಮ; ಆಕೆಗೆ ದೇವರ. ಇಬ್ಬರು ಸೋದರರಿಗೂ ಅವಳ ಕೌಶಲ, ಜೀವನ ವಿವೇಕ, ಮಾನವ ಸ್ವಭಾವದ ತಿಳಿವಳಿಕೆ, ರಾಜನೀತಿಜ್ಞತೆಗಳ ಕಾರಣದಿಂದಾಗಿ ತಾರೆಯಲ್ಲಿ ತುಂಬಾ ಗೌರವವಿತ್ತು. ಅಂಗದನನ್ನು ಬಹು ಕೋಮಲವಾಗಿ ಬೆಳಸಿದ್ದರು. ವಾಲಿ ಆ ಮಗನನ್ನು ಸುಗ್ರೀವನಿಗೆ ಒಪ್ಪಿಸಿದ. ತಾರೆಗೆ ಬಹು ಪ್ರೀತಿಯ ಮಗ ಅಂಗದ. ಶೌರ್ಯದಲ್ಲಿಯೂ ಶಕ್ತಿಯಲ್ಲಿಯೂ ಅಂಗದನು ತನ್ನ ತಂದೆಯಂತಿದ್ದ. ತನ್ನ ಚಿಕ್ಕಪ್ಪನಿಗೆ ತನ್ನಲ್ಲಿ ಪ್ರೀತಿ ಇರಲಿಲ್ಲವೆಂದು ಅಂಗದನು ಭಾವಿಸಿದ್ದಂತೆ ಕಾಣುತ್ತದೆ. ಸೋದರಿಕೆಗೆ ವಿರುದ್ಧವಾದ ನಡತೆಯವನು, ಅಣ್ಣ ಸತ್ತನೆಂದು ತಿಳಿಸಿ ಅವನು ಇಲ್ಲದಿರುವಾಗ ಅವನ ರಾಜ್ಯವನ್ನಾಳಿದವನು, ರಾಜ್ಯಕ್ಕೂ ಅಣ್ಣನ ಹೆಂಡತಿಗೂ ತನ್ನನ್ನು ಒಡೆಯನನ್ನಾಗಿ ಮಾಡಿಕೊಂಡು ರಾಜ್ಯವನ್ನು ನಿಷ್ಠುರವಾಗಿ ಆಳಿದವನು. ಅಂಥವನಿಗೆ ಕಾರುಣ್ಯವಿದ್ದೀತು ಹೇಗೆ? ಅಣ್ಣನ ಮಗನಿಗೆ ಕೇಡುಂಟು ಮಾಡಲು ಸಮಯವನ್ನು ಸಾಧಿಸಿಕೊಳ್ಳಲು ಹಿಂಜರಿಯುವವನಲ್ಲ ಎಂದು ಕೊಂಡಿದ್ದ. ಸೀತೆಯನ್ನು ಹುಡುಕಿಕೊಂಡು ಹೋದ ವಾನರ ಪಾಳೆಯದಲ್ಲಿ ನಾಲ್ಕೈದು ಮಂದಿಯನ್ನು ಬಿಟ್ಟು ಉಳಿದ ಎಲ್ಲ ನಾಯಕರೂ ಬಂಡೆದ್ದು ಹೊರಗಾದುದು ಈ ಪರಿಸ್ಥಿತಿಯ ಮೇಲೆ ಬೆಳಕು ಹಾಯಿಸುವ ಪ್ರಸಂಗ. ಅವರ ಭಕ್ತಿಯೂ ತೀರ್ಮಾನವೂ ಸ್ಫುಟವಾಗಿ ಅಂಗದನ ಕಡೆಗಿದ್ದವು. ರಾಜಕೀಯದಲ್ಲಿ ನುರಿತವನೂ ಒಂದು ಸೇನೆಯ ನಾಯಕನೂ ಮಂತ್ರಿಯೂ ಉಪಯೋಗಿಸಬಹುದಾದ ಪ್ರತಿಯೊಂದು ತಂತ್ರವನ್ನೂ ಹನುಂತನು ಅವರ ಮೇಲೆ ಪ್ರಯೋಗಿಸಬೇಕಾಯಿತು. ಅವರನ್ನು ಸುಗ್ರೀವನ ಕಡೆಗೆ ಉಳಿಸುವುದಕ್ಕೆ ಸಾಮಭೇದಗಳೆರಡನ್ನೂ ಉಪಯೋಗಿಸಿದನು. ಅಂಗದನನ್ನು ಕುರಿತು ಕೂಡ 'ನಿನ್ನ 'ಪಿತೃವ್ಯ'ನ–ಚಿಕ್ಕಪ್ಪನ, ಶೀಲ ಸ್ವಭಾವಗಳನ್ನು ನೀನು ಅಪಾರ್ಥ ಮಾಡಿ

ಕೊಂಡಿದ್ದೀಯೆ; ಅವನು ನಿಜವಾಗಿ ಕ್ರೂರಿಯಲ್ಲ. ಅಣ್ಣನಲ್ಲಿ ಸುಗ್ರೀವನಿಗೆ ಪ್ರೀತಿಯಿತ್ತು. ಅಣ್ಣನ ಮಗನಾದ ನಿನ್ನ ಮೇಲೆ ನಿಜವಾಗಿ ಪ್ರೀತಿಯುಂಟು. ತಾರಾದೇವಿಯ ಸಲಹೆಗೂ ಇಷ್ಟಗಳಿಗೂ ಅವನು ನಿರಂತರವಾಗಿ ಬೆಲೆ ಕೊಡುತ್ತಾನೆ; ಆದುದರಿಂದ ಸುಗ್ರೀವನ ವಿಷಯದಲ್ಲಿ ಯಾವ ಸಂಶಯಕ್ಕೂ ಕಾರಣ ಅಥವಾ ಅಗತ್ಯ ಇರಬೇಕಿಲ್ಲ' ಎಂದು ತಿಳಿಸಿ ಕಾರ್ಯವನ್ನು ಸಾಧಿಸಲು ತೆರೆದಿದ್ದ ಸಮಸ್ತ ಮಾರ್ಗಗಳನ್ನೂ ಬಳಸಿದ.

ಒಂದು ಸಂಗತಿ ನಮಗೂ ಕುತೂಹಲಕಾರಿಯೆನ್ನಿಸುತ್ತದೆ. ಹಿಂದೆ ಕಬಂಧನು ಮಾಡಿದ ವರ್ಣನೆಯಲ್ಲಿ ಸುಗ್ರೀವನಿಗೆ ಸಮಸ್ತ ಪ್ರಪಂಚದ ಭೂಪರಿಜ್ಞಾನ ಉಂಟೆಂದು ತಿಳಿದುಬಂದಿತ್ತು. ರಾವಣನು ರಾಜನಾಗಿದ್ದ ಲಂಕೆ ಯಾವ ದಿಕ್ಕಿನಲ್ಲಿತ್ತು ಎಂಬುದು ಅವನಿಗೆ ತಿಳಿದಿದ್ದಿರಬೇಕು. ಹನುಮಂತ, ಜಾಂಬವಾನ್, ತಾರ, ಮೈಂದ ಇಂಥ ದಕ್ಷರನ್ನೂ ಹಿರಿಯರನ್ನೂ ಸೇರಿಸಿ ಅಂಗದನನ್ನು ನಾಯಕನನ್ನಾಗಿ ಮಾಡಿ ದಕ್ಷಿಣಕ್ಕೆ ಹೋಗುವ ಗುಂಪನ್ನು ಏರ್ಪಡಿಸಿ ಹೀಗೆ ಹೀಗೆ ಮಾಡಬೇಕೆಂದು ಹನುಮಂತನಿಗೆ ನಿರೂಪಿಸಿದಾಗ ರಾಮನಿಗೂ ಗೊತ್ತಾಯಿತು – ಈ ಗುಂಪು ತನ್ನ ಕಾರ್ಯದಲ್ಲಿ ಜಯಗಳಿಸುವ ಅತ್ಯಂತ ಶಕ್ಯತೆ ಉಳ್ಳದ್ದು ಎಂದು. ಎಂದರೆ, ಸುಗ್ರೀವನಿಗೆ ಕಾರ್ಯಜ್ಞಾನ ಚೆನ್ನಾಗಿತ್ತೆಂಬುದು ಅರ್ಥವಾಗುತ್ತದೆ. ಆದರೂ ಲಂಕೆಯ[೩೭] ವಾಸ್ತವ ಸನ್ನಿವೇಶ ಹೀಗೇ ಎಂಬ ವಿಷಯದಲ್ಲಿ ತನಗೆ ತಿಳಿವಳಿಕೆ ಇಲ್ಲವೆಂಬಂತೆ ರಾಮ ಲಕ್ಷ್ಮಣರ ಎದುರಿಗೆ ತೋರಿಸಿಕೊಳ್ಳುತ್ತಿದ್ದನು. ಸುಗ್ರೀವನಿಗೆ ಬದಲಾಗಿ ವಾಲಿಯ ಸಹಾಯವನ್ನೇ ಪಡೆಯಬೇಕೆಂದು ರಾಮನಿಗೆ ನಿರ್ದೇಶನ ಬಂದಿದ್ದರೆ ವಾಲಿ ಸೀತೆಯನ್ನು ತಂದುಕೊಡಬೇಕೆಂದು ರಾವಣನಿಗೆ ಹೇಳಿ ಇವನಿಗೆ ಸಹಾಯ ಮಾಡಬಹುದಿತ್ತು. ವಾಲಿಯೇ ಹಾಗೆಂದು ಹೇಳುತ್ತಾನೆ. ಆದರೆ ಅವನ ಮನಸ್ಸು ಹಾಗಿರುತ್ತಿದ್ದಿತೊ? ಸೀತೆಯನ್ನು ಸುರಕ್ಷಿತವಾಗಿ ತಂದುಕೊಡಲು ಅವನ ಸಹಾಯ ದೊರೆತಿದ್ದರೂ ವಾಲಿಯ ಕೈಯಲ್ಲಿ ಸೀತೆ ಹೆಚ್ಚು ಸುರಕ್ಷಿತಳಾಗಿರುತ್ತಿದ್ದಳೆ? ಇತ್ತ ವಾಲಿ ತಮ್ಮನ ಹೆಂಡತಿಯನ್ನು ಬಲಾತ್ಕಾರದಿಂದ ತನ್ನ ವಶ ಮಾಡಿಕೊಂಡಿದ್ದುದರಿಂ ತನ್ನಂಥ ಪರಿಸ್ಥಿತಿಯಲ್ಲಿದ್ದ ರಾಮನ ಪರವಾಗಿ ಹೆಚ್ಚು ಸಹಾನುಭೂತಿ ಉಳ್ಳವನಾಗಿರುತ್ತಾನೆಂದೂ ತನ್ನ ಪರವಾಗಿ ಸಮವಾದ

---

೩೭ ಈಚೆಗೆ ಡಾ. ಮಂಕಾಡ್ ಮತ್ತು ಇತರರು ಹೇಳುವಂತೆ ಲಂಕೆ ಎಂಬುದು ಯಾವುದೊ ಕಣಿವೆಯ ಪ್ರಪಂಚದಲ್ಲಿ ಮರೆಯಾಗಿ ಜನಕ್ಕೆ ಹೆಚ್ಚಾಗಿ ತಿಳಿಯದ ಒಂದು ಪ್ರದೇಶವೊ ಏನೊ?

ಅಂತಃಕರಣದಿಂದ ದುಡಿಯುವನೆಂದೂ ನಿರೀಕ್ಷೆಯಿತ್ತು. ಸುತ್ತ ಸಮುದ್ರವಿದ್ದ ದ್ವೀಪ ಒಂದರಲ್ಲಿ ರಾವಣನು ದುರ್ಘಟನಾಗಿ ವಾಸಿಸುತ್ತಿದ್ದನೆಂದ ಮೇಲೆ ಒಟ್ಟು ಒಂದು ಸೈನ್ಯವೇ ಅದರ ಮೇಲೆ ಆಕ್ರಮಣಕ್ಕೆ ಹೋಗುವ ಅಗತ್ಯವಿತ್ತು. ದೇವತೆಗಳೂ ಋಷಿಗಳೂ ಈ ವಿಧಾನಕ್ಕೆ ಬೆಂಬಲಿಗರಾಗಿದ್ದರು. ಏಕೊ ಏನೊ ಕಬಂಧನು ಲಂಕೆಯ ವಿಷಯದಲ್ಲಿ ರಾಮನಿಗೆ ವಿವರಗಳನ್ನು ತಿಳಿಸಿರಲಿಲ್ಲ. ಹೀಗೆ ಸುಗ್ರೀವನೊಡನೆ ಮಾಡಿದ ಸ್ನೇಹಸಂಬಂಧ ರಾಮನಿಗೆ ಸಹಜವೂ ಆಯಿತು. ಆದ್ದರಿಂದ ರಾಮನಿಗೆ ನೆರವು ಬರಬೇಕೆಂದರೆ ವಾಲಿಯ ನಾಶವೊಂದೇ ಮಾರ್ಗವಾಯಿತು. ಅದು ಶೀಘ್ರವಾಗಿಯೂ ನಡೆಯಬೇಕಿತ್ತು. ತಡ ಶಕ್ಯವಿರಲಿಲ್ಲ. ಹೀಗಾದುದರಿಂದಲೇ 'ಅದ್ಯ' – ಆ ದಿನವೇ ವಾಲಿಯನ್ನು ಕೊಲ್ಲುತ್ತೇನೆಂದು ರಾಮನು ವಾಗ್ದಾನ ಮಾಡಿದ್ದು.

ಎಷ್ಟೋ ಶತಮಾನಗಳಿಂದ ಚರ್ಚೆಗೆ ಬಿದ್ದಿರುವ ವಿಷಯ ವಾಲಿಯನ್ನು ರಾಮನು ಕೊಂದ ವಿಧಾನವನ್ನು ಕುರಿತುದು. ಅಣ್ಣ ತಮ್ಮಂದಿರು ಪರಸ್ಪರ ಕಾದಾಟದಲ್ಲಿ ತೊಡಗಿದ್ದಾಗ ಒಂದು ಮರದ ಮರೆಯಿಂದ ರಾಮನು ಗುರಿಯಿಟ್ಟು ವಾಲಿಯನ್ನು ಕೊಂದನೆಂಬುದು ಅದು. ತೆರೆದ ಯುದ್ಧದಲ್ಲಿ ರಾಮನು ವಾಲಿಯನ್ನು ಕೊಲ್ಲಬಲ್ಲವನಾಗಿದ್ದ. ಸಾಧಾರಣ ಸನ್ನಿವೇಶ ವಾಗಿದ್ದಿದ್ದರೆ ರಾಮನು ಇಲ್ಲಿ ಮಾಡಿದ ಹಾಗೆ ಎಂದಿಗೂ ಮಾಡುತ್ತಿರಲಿಲ್ಲ.

ಆದರೆ ದೊಡ್ಡ ಸೈನ್ಯದ ನಾಯಕನಾಗಿ ವಾಲಿ ತನ್ನ ರಾಜಧಾನಿಯಾದ ಕಿಷ್ಕಿಂಧೆಯಲ್ಲಿದ್ದ. ಸ್ವಂತವಾದ ಯಾವ ವಿರೋಧ ಕಾರಣವೂ ಇಲ್ಲದೆ ರಾಮನು ಅವನ ಮೇಲೆ ಯುದ್ಧ ಮಾಡಬೇಕಾಗುತ್ತಿತ್ತು. ರಾವಣನಿಗಿಂತ ವಾಲಿ ಹೆಚ್ಚು ಶಕ್ತನೆಂಬುದನ್ನು ತಿಳಿದಿದ್ದ ರಾಮನಿಗೆ ಇದು ಹೆಚ್ಚು ಕಾಲ ಹಿಡಿಯುವಂಥದು ಕೂಡ. ತ್ವರೆಯ ಅಗತ್ಯವಿತ್ತು ಎಂದೆ. ಒಡನೆಯೇ ಅವನನ್ನು ಕೊಲ್ಲುತ್ತೇನೆಂದು ಸುಗ್ರೀವನಿಗೆ ರಾಮನು ಮಾತುಕೊಟ್ಟಿದ್ದನು. ಹಿಂದೆ ಆಶ್ರಮವಾಸಿಗಳಿಗೆ ಬೇಗ ರಾಕ್ಷಸರನ್ನು ನಾಶ ಮಾಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದದ್ದೂ ಹೀಗೆಯೇ. ವಾಲಿಯೇ ಮುಂದಿನ ಕಾಲದಲ್ಲಿ ರಾಮವಿರೋಧವಾಗಿ ಎದ್ದ ವಾದಗಳನ್ನೆಲ್ಲ ಸ್ವಂತವಾಗಿ ಮಾಡಿದ್ದ. ನಿಜವಾದ ಕ್ಷತ್ರಿಯ ರಾಮ; ಮಹಾಕ್ಷತ್ರಿಯನಿಗೆ ತಕ್ಕುದಲ್ಲದ ಕಾರ್ಯವನ್ನು ಅಂಥ ರಾಜಕುಮಾರನು ಎಂದಿಗೂ ಮಾಡುವವನಲ್ಲ ಎಂಬ ಕೀರ್ತಿ; ಹಾಗೆ ಮಾಡುವುದು ಅಧರ್ಮವಾಗುತ್ತದೆಂದು ಬಲ್ಲವನು ರಾಮ ಎಂದು ವಾಲಿಗೆ ನಂಬಿಕೆ. ಸುಗ್ರೀವನಿಗೆ ನೆರವಾಗುವೆನೆಂದು ರಾಮನು ಮಾತು ಕೊಟ್ಟಿದ್ದಾನೆ ಎಂಬಂತೆ ತಾರೆ ನುಡಿದಾಗ ತಾರೆಗೆ ಈ ಸಂಗತಿಯನ್ನು ಅವನು

ಹಾಗೆ ಹೇಳಿದ್ದನು. ಹೇಡಿಯ ಹಾಗೆ ಮರೆಯಿಂದ ತನ್ನನ್ನು ಕೊಂದದ್ದು ಏಕೆ ಎಂದು ವಾಲಿ ರಾಮನನ್ನು ಕೇಳುತ್ತಾನೆ. ಸ್ವಂತವಾದ ಯಾವ ಪ್ರಯೋಜನ ಇದರಿಂದ ರಾಮನಿಗೆ ಸಾಧಿತವಾದೀತು? – ಎಂದ. ಗೋಧದ ಮಾಂಸವಾದರೂ ಭೋಜ್ಯ; ಕಪಿಯ ಮಾಂಸ ತಿನ್ನಲು ಕೂಡ ತಕ್ಕುದಲ್ಲ. ತನ್ನನ್ನು ಕೇಳಿದ್ದರೆ ಸೀತೆಯನ್ನು ತಾನು ತಂದು ಕೊಡುತ್ತಿದ್ದೆ ಎಂದಿದ್ದ. ಇದಕ್ಕೆಲ್ಲ ರಾಮನು ಪೂರ್ತಿಯಾಗಿ ಉತ್ತರಕೊಟ್ಟ. ತನ್ನ ಸುಖಕ್ಕೋಸ್ಕರ ತಮ್ಮನ ಹೆಂಡತಿಯನ್ನು ತನಗೆ ಮಾಡಿಕೊಂಡಿದ್ದ ಅಧರ್ಮಿ ವಾಲಿ ಎಂಬುದು ಮುಖ್ಯ ಕಾರಣ. ತಮ್ಮನ ಹೆಂಡತಿ ಸ್ವಂತ ಮಗಳಂತೆ ಎಂದ. ಅಯೋಧ್ಯೆಯಲ್ಲಿ ರಾಜನಾಗಿರುವ ಭರತನ ಕಾರ್ಯಭಾರಿ ತಾನು; ಈ ಒಟ್ಟು ನಾಡೆಲ್ಲ ಅವನದು.[೩೮] ಆ ಭಾಗ ಮೂಲ ರಾಮಾಯಣಕ್ಕೆ ಸೇರಿದ್ದುದಾದರೆ. ಕೆಡುಕು ಮಾಡುವವರನ್ನು ಶಿಕ್ಷಿಸುವುದು ಕ್ಷತ್ರಿಯ ಧರ್ಮ. ಬೇಟೆಗಾರನಾದವನು ಒಂದು ಕಾಡು ಮೃಗದ ಅನುಕೂಲವೇನು ಎಂದು ಕೇಳಿ ಅದನ್ನು ಎಚ್ಚರಿಸಿ ಅದರ ಎದುರಿಗೆ ನಿಂತು ಕೊಲ್ಲಬೇಕಾಗಿಲ್ಲವಲ್ಲ ಎಂದ. ಒಂದು ಶಾಖಾಮೃಗವನ್ನು ನಾಶ ಮಾಡಲು ಯಾವ ವಿಧಾನವನ್ನಾದರೂ ತಾನು ಬಳಸಬಹುದು, ಅಂಥದೊಂದನ್ನು ಬಳಸಿದ್ದೇನೆ ಎಂದ. ಸುಗ್ರೀವನನ್ನು ದೇಶಭ್ರಷ್ಟನಾಗಿ ಮಾಡಿದುದೂ ಅವನ ಮನೆವಿಯನ್ನು ಕಿತ್ತುಕೊಂಡುದೂ ತಪ್ಪು ತನ್ನ ಅಣ್ಣನ ಭಯದಲ್ಲಿ ಇಷ್ಟು ಕಾಲವೂ ಅವನು ನೂಕಿ ಕಳೆಯಬೇಕಾಗಿ ಬಂದುದು ಕ್ರೂರವಾದುದು. ಚಲ, ಭಯಗಳಲ್ಲಿ ಬದುಕಬೇಕಾದ ಬಾಳು ತುಂಬಾ ಸಂಕಟಕರವಾದುದು. ಶಕ್ಯವಾದುದು. ಚಲ, ಭಯಗಳಲ್ಲಿ ಬದುಕಬೇಕಾದ ಬಾಳು ತುಂಬಾ ಸಂಕಟಕರವಾದುದು. ಶಕ್ಯವಾದಷ್ಟು ಶೀಘ್ರವಾಗಿ ಅದನ್ನು ಹೋಗಲಾಡಿಸಲು ಅವನ ನಾಶವನ್ನು ತಾನು ಕೈಕೊಂಡೆ ಎನ್ನುತ್ತಾನೆ. ಸುಗ್ರೀವನು ಬೇಡಿದ ಆಶ್ರಯವನ್ನು ಅವನಿಗೆ ಕೊಟ್ಟೆ. ಕೇಡಿಗೆ ಈಡಾದವನನ್ನು ರಕ್ಷಿಸುವುದು ಕ್ಷತ್ರಿಯನ ಪಾಲಿಗೆ ಬಂದ ಧರ್ಮ, – ಎಂದ. ಇವೆಲ್ಲ ಶ್ರೀಮಂತಿಕೆಯ ಮಾತುಗಳು. ಈ ವಾದಗಳಲ್ಲಿ ಯಾವುದೂ ಈ ಕಾಲದ ಮನಸ್ಸುಗಳನ್ನು ಸಮಾಧಾನಗೊಳಿಸಲಾರವು. ಆದರೆ ಈ ಸಂಗತಿ ಹೀಗೆ ನಡೆಯಿತು : ಅದು ವಾಸ್ತವ ಘಟನೆ. ವಾಲಿಯೇ ಕಡೆಗೆ ಈ ಪರಿಣಾಮ ಕ್ರಿಯೆಗೆ ಒಪ್ಪಿಕೊಂಡ ಹಾಗೆ ಕಾಣುತ್ತದೆ. ಅವನ ಮನಸ್ಸಿಗೂ ಈ ತೀರ್ಮಾನ ಸರಿಯೆಂದು ತೋರಿತೊ ಅಥವಾ ಸುಗ್ರೀವನಿಗೆ ಅವನು ಮಾಡಿದ ಅಪರಾಧ ಅತಿಯೆಂದು ತಾನು ಹೇಗಿದ್ದರೂ

---

೩೮ ಆಳುತ್ತಿದ್ದವರು ಯಾರು? ರಾಮನ ಪಾದುಕೆ. ಭರತ ರಾಜಪ್ರತಿನಿಧಿ.

ಈಗ ಸಾಯಲಿದ್ದೇನೆ, ರಾಜ್ಯವನ್ನೂ ತಾರೆ ಅಂಗದರನ್ನೂ ಕ್ರೋಧವಿಲ್ಲದ ಮನಸ್ಸಿನಿಂದ ಸುಗ್ರೀವನ ಕೈಗೆ ಒಪ್ಪಿಸುವುದು ವಿವೇಕ ಎಂದು ಕಂಡಿತೊ – ಯಾವುದೂ ಆಗಿರಬಹುದು. ಕಡೆಯ ಬಾರಿಗೆ ತಮ್ಮೊಡನೆ ಕಾದಲು ಬರುವ ಮುಂಚೆ ಸುಗ್ರೀವನ ಪರವಾಗಿ ತಾರೆ ಹಿತವಾಕ್ಯವನ್ನು ನುಡಿದಿದ್ದಳು. ಅವಳು ಹೇಳಿದ್ದುದು ಬಹುಶಃ ಯುಕ್ತವೂ ತಥ್ಯವೂ ಆಗಿ ಕಂಡಿದ್ದಿರಬೇಕು. ಎಲ್ಲಕ್ಕಿಂತ ಮೇಲಾಗಿ ರಾಮನ ಬಾಣ ಅವನನ್ನು ಬೀಳಿಸಿದುದಕ್ಕಿಂತ ಹೆಚ್ಚಾಗಿ ರಾಮನ ವ್ಯಕ್ತಿತ್ವವೂ ಮೂರ್ತಿತ್ವವೂ ಅವನನ್ನು ಪ್ರಭಾವಗೊಳಿಸಿರಬೇಕು. ಇತ್ತ ಅವನ ಕೊಲೆ ಬೇಗ ಆಗಬೇಕಿತ್ತು. ರಾಮನು ಸುಗ್ರೀವನಿಗೆ ಮಾತು ಕೊಟ್ಟಿದ್ದ. ಇದು ಒಂದು ಹಸಿಯ ಘಟನೆ.

ಇಲ್ಲವೇ, ಹೀಗೆ ನೋಡಬಹುದು: ವಾಲಿಯ ಪಕ್ಷ ಋಜುವಾಗಿದ್ದಿದ್ದರೆ ಹನುಮಂತ ಜಾಂಬವಂತ ಮುಂತಾದವರು ಅವನೊಡನೆಯೇ ಉಳಿಯುತ್ತಿದ್ದರು. ಸುಗ್ರೀವನು ತಪ್ಪಿತಸ್ಥನಾಗಿದ್ದರೆ ಸುಗ್ರೀವನ ಜೊತೆಗೆ ನಿಂತು ಸ್ನೇಹಿತರಾಗಿ ನಡೆಯುತ್ತಿರಲಿಲ್ಲ. ಅವರಲ್ಲಿ ಒಬ್ಬೊಬ್ಬನಿಗೂ ಒಂದೊಂದು ಸೈನ್ಯದಷ್ಟು ಬಲ ಇತ್ತು – ಒಬ್ಬನ ಶಕ್ತಿ, ಚೈತನ್ಯ ಪರಿಮಿತಿಯಿಲ್ಲದ್ದು. ಇನ್ನೊಬ್ಬನ ಜೀವನ ವಿವೇಕವೂ ಲೋಕಾನುಭವವೂ ಪುರಾತನ ಕಾಲಗಳಿಂದ ಬಂದದ್ದು.[೩೯] ಅತಿ ಪ್ರಾಕೃತ ಶಕ್ತಿ ಸಾಮರ್ಥ್ಯಗಳ ಸಾಧಕವಾದ ತನ್ನ ಕಂಠಹಾರವನ್ನು ತಾನು ತೀರಿಕೊಳ್ಳುವ ಮುಂಚೆ ವಾಲಿ ಸುಗ್ರೀವನಿಗೆ ಕೊಡುತ್ತಾನೆ. ಅದನ್ನು ಧರಿಸಿದರೆ ಸುಗ್ರೀವನು ಸರ್ವದಾ ಶಕ್ತನಾಗಿಯೂ ಬಲಿಷ್ಠನಾಗಿಯೂ ಇರುತ್ತಾನೆಂದು ತಿಳಿಸಿದ. ಹೀಗಾಗಿ ವಾಲಿ ತನ್ನ ಗತಿಗೆ ಪೂರ್ತಿಯಾಗಿ ಹೊಂದಿ ಮೃತಿಗೊಂಡನೆನ್ನಬಹುದು. ಯಾವ ಸನ್ನಿವೇಶವನ್ನು ಅವನು ಒಪ್ಪಿಕೊಂಡನೊ ಅದಕ್ಕೆ ನಾವೂ ಒಪ್ಪಿಕೆ ಕೊಡಬಹುದೆನ್ನಿಸುತ್ತದೆ. ವ್ಯವಹಾರ ಅಲ್ಲಿಗೆ ಮುಗಿಯಿತು.

(ಇ) ವಿಭೀಷಣ – ಕುಂಭಕರ್ಣ : ಇಬ್ಬರೂ ರಾವಣನ ಬೇರೆ ಬೇರೆ ಸ್ವಭಾವದ ತಮ್ಮಂದಿರು. ಇಬ್ಬರಿಗೂ ಅವನಲ್ಲಿ ಪ್ರೀತಿಯಿತ್ತು; ಆದರವಿತ್ತು. ರಾವಣನ ಶಕ್ತಿಯೆಷ್ಟು, ಸಾಧನೆಗಳು ಎಂಥವು ಎಂಬುದನ್ನು ಅವರು ಅರಿತಿದ್ದರು. ಬಲಾತ್ಕಾರದಿಂದಲೂ ಅವಳ ಇಚ್ಛೆಗೆ ವಿರುದ್ಧವಾಗಿಯೂ ಸೀತೆಯನ್ನು ರಾವಣನು ಲಂಕೆಗೆ ತಂದು ತಪ್ಪು ಮಾಡಿದನೆಂದು ಇಬ್ಬರೂ ತಿಳಿದವರು. ಇಬ್ಬರೂ ಒಳ್ಳೆಯ ಯೋಧರು. ಕುಂಭಕರ್ಣನೇನೊ ಹೆಚ್ಚು ಭಯಂಕರನೂ ನಾಶಕ ಚೈತನ್ಯದಲ್ಲಿ

೩೯. ಪ್ರವರಸೇನನ ಸೇತುಬಂಧದಲ್ಲಿ ಇದರ ಬಹು ಚೆಲುವಾದ ವರ್ಣನೆಯಿದೆಯಂತೆ.

ಅಧಿಕನೂ ಆಗಿದ್ದನು. ರಾಕ್ಷಸ ಗುಣ ಅವನಲ್ಲಿ ಸಹಜವಾಗಿ ಹೆಚ್ಚಾಗಿದ್ದಿತು. ರಕ್ತವನ್ನು ಕುಡಿಯುವಂತೆಯೂ ತಾನು ಕೊಂದಿದ್ದವರನ್ನು ತಿನ್ನುತ್ತಿದ್ದಂತೆಯೂ ಅವನ ವರ್ಣನೆ ಬರುತ್ತದೆ.

ಅಣ್ಣನು ತಮ್ಮನ ಸಲಹೆಯನ್ನು ಕೇಳಬೇಕಿದ್ದಿತೆಂದು ಧೈರ್ಯವಾಗಿ ಅಣ್ಣನಿಗೆ ಅವನು ಹೇಳಿದ್ದ. ಒಂದು ಸಲವಲ್ಲ, ಎರಡು ಸಲ. ರಾವಣನು ಕಿವಿಗೊಡಲಿಲ್ಲ; ಯಾರ ಉಪದೇಶವನ್ನೂ ಪಥ್ಯವಾಗಿ ಅವನು ಎಣಿಸಿದವನಲ್ಲ. ಕುಂಭಕರ್ಣನೇನೊ ಲಂದೆಯಲ್ಲೇ ಉಳಿದಿರಲು ಒಪ್ಪಿಕೊಂಡನು.[೪೦] ಅಗತ್ಯಬಿದ್ದರೆ ಅಣ್ಣನ ಪರವಾಗಿ ಯುದ್ಧ ಮಾಡುವಂತೆ ಹಾಗೆ ಮಾಡಿದನು. ವಿಭೀಷಣನಿಗೆ ಅಣ್ಣನ ತಪ್ಪು ಸರ್ವಥಾ ಒಪ್ಪಿಕೆಯಾಗಲಿಲ್ಲ. ಒಡ್ಡಿದ ಸಭೆಯಲ್ಲಿ ಸೀತೆಯನ್ನು ರಾಮನಿಗೆ ಒಪ್ಪಿಸಿಕೊಡಬೇಕೆಂದು ಅಣ್ಣನಿಗೆ ಸಲಹೆಕೊಟ್ಟನು. ರಾಮನ ಎದುರಿಗೆ ರಾವಣನಿಗೆ ಜಯ ಅಸಾಧ್ಯವೆಂದನು. ಆ ಮಾತು ಅಲ್ಲಿನ ಯಾರಿಗೂ ಮೆಚ್ಚಾಗುವಂಥದಲ್ಲ. ಅಣ್ಣನ ಮಗ ಇಂದ್ರಜಿತು ಅವನ ಮೇಲೆ ಕೆಟ್ಟ ಮಾತುಗಳನ್ನು ಬಳಸಿದ. ವಿಭೀಷಣನು ಅವನನ್ನು ಮರ್ಯಾದೆ ಕಲಿತುಕೊ ಎಂದ. ಸಲಹೆಗಾಗಿ ಸೇರುವಂತಹ ವಿವೇಕಶಾಲಿ ಹಿರಿಯರ ಸಭೆಗಳಲ್ಲಿ ಹೊಣೆಯರಿಯದ ಅಪಕ್ವ ಹುಡುಗರಿಗೆ ಪ್ರವೇಶ ದೊರಕಕೂಡದಾಗಿತ್ತು ಎಂದ. ಸಲಹೆಗಾಗಿ ಸೇರುವಂತಹ ವಿವೇಕಶಾಲಿ ಹಿರಿಯರ ಸಭೆಗಳಲ್ಲಿ ಹೊಣೆಯರಿಯದ ಅಪಕ್ವ ಹುಡುಗರಿಗೆ ಪ್ರವೇಶ ದೊರಕಕೂಡದಾಗಿತ್ತು ಎಂದ. ಆ ದಿನ ರಾವಣನಿಗೂ ಕೋಪ ಬಂದಿತ್ತು. ಅಣ್ಣನ ಶಕ್ತಿ ಸ್ಥಾನಗಳ ವಿಷಯದಲ್ಲಿ ಅಸೂಯೆಯುಳ್ಳ ಜ್ಞಾತಿ, ತನ್ನ ಹಿತಚಿಂತಕನಲ್ಲದವನು ಎಂದು ಮುಂತಾಗಿ ತಿರಸ್ಕಾರದಲ್ಲಿ ನುಡಿದನು. ಲಂಕೆಯಿಂದ ತೊಲಗಿಹೋಗು ಎಂದನು. ವಿಭೀಷಣನು ಹೋದ. ಒಂದು ಹೆಜ್ಜೆಮೀರಿದ.[೪೧] ನಾಲ್ವರು ಸ್ನೇಹಿತರೊಡನೆ ರಾಮನ ಪಾಳೆಯಕ್ಕೆ ಹೋಗಿ ಅವನ ಆಶ್ರಯ ಬೇಡಿದ. ಅವನ ಮೇಲೆ ಕವಿದಿರುವ ಗುರುತರ ಆಕ್ಷೇಪಣೆ ರಾಜವಿರೋಧಿಯಾದನೆಂದು.[೪೨] ಆದರೆ ದುಷ್ಟನಿಗೆ

---

೪೦ ದೇಶಭಕ್ತಿ, ರಾಜಭಕ್ತಿ ಸಂಬಂಧಗಳಲ್ಲಿ ಭೀಷ್ಮ, ವಿಭೀಷಣ, ಬ್ರೂಟಸ್, ಕೊರಿಯೊಲೇನಸ್ ಇವರನ್ನು ವಿಷಯವಾಗಿಟ್ಟುಕೊಂಡು ಒಂದು ದೊಡ್ಡ ತಾರತಮ್ಯ ವಿವೇಚನೆಯ್ನು ಮಾಡಬಹುದೆನ್ನಿಸುತ್ತದೆ.

೪೧ ಇವೊತ್ತಿನ ರಾಷ್ಟ್ರ ಒಂದರಲ್ಲಿ ಅಂಥವನಿಗೆ ಯಾವ ಗತಿ ಸಂಭವಿಸಬಹುದಾಗಿದ್ದಿತು? – ಎಂಬುದನ್ನು ಅವರವರ ಕಲ್ಪನೆಗೆ ಬಿಟ್ಟಿದೆ.

೪೨ 'ಮೇಘನಾದ ವಧ' ಕಾವ್ಯದಲ್ಲಿ ಬಂಗಾಳದ ಕವಿ ಮೈಕಲ್ ಮಧುಸೂದನ ದತ್ ಅವರು ಈ ಆಪಾದನೆಯನ್ನು ವಿಭೀಷಣನ ಮೇಲೆ ಮಾಡುತ್ತಾರೆ.

ವಿರುದ್ಧವಾಗಿ ನ್ಯಾಯದ ಪಕ್ಷವನ್ನು ವಹಿಸಿದ. ದುಷ್ಟನು ಸೋದರನಾಗಿದ್ದರೇನು? ಗಂಡ ಮನೆಯಲ್ಲಿ ಇಲ್ಲದ ವೇಳೆಯಲ್ಲಿ ಒಬ್ಬ ಸಜ್ಜನನ ಹೆಂಡತಿಯನ್ನು ಎತ್ತಿಕೊಂಡು ಹೋಗಿ ಅಪರಾಧವನ್ನು ಮಾಡಿದ್ದುದರಿಂದ ಶಿಕ್ಷಾರ್ಹ. ಅಂಥವನು ರಾಜನಾಗಿದ್ದುಕೊಂಡು ತನ್ನ ಜನವರ್ಗಕ್ಕೂ ನಾಡಿಗೂ ನಾಶವನ್ನುಂಟುಮಾಡುವವನು. ಹೀಗೆ ಒಂದು ಕಡೆ ನ್ಯಾಯದ ಕಡೆಗೆ ಇನ್ನೊಂದು ಶಿಕ್ಷಾರ್ಹನಾದ ದುಷ್ಟನಿಗೆ ವಿರುದ್ಧವಾಗಿತ್ತು–ಅವನ ನಡತೆ. ಶಿಕ್ಷಾ ಕಾರ್ಯದಲ್ಲಿ ಸೇರಿಕೊಳ್ಳುವುದು ನೀತಿವಂತನಾದ ಮನುಷ್ಯನ ಪಾಲಿಗೆ ಬರುತ್ತದೆ. ಅವನು ರಾಜ್ಯಕಾಮುಕನೆಂಬುದು ಮೊದಲಿಂದಲೂ ರಾಮಾಯಣ ಪಾಠಕರು ಸ್ವಲ್ಪ ಹೆಚ್ಚು ಕಡಮೆ ಕಾಣುವ ಸಂಗತಿ.[೪೩]

ವಿಭೀಷಣನನ್ನು ಒಪ್ಪಿಕೊಂಡಾಗ ತಾನೇನು ಮಾಡುತ್ತಿದ್ದೇನೆಂಬುದನ್ನು ರಾಮನು ಅರಿತಿದ್ದನು. ವಾನರ ಪಾಳೆಯದಲ್ಲಿ ಅವನನ್ನು ಒಪ್ಪಿಕೊಳ್ಳುವುದು ಯಾರಿಗೂ ಇಷ್ಟವಿರಲಿಲ್ಲ. ವಿಭೀಷಣನ ಸಲಹೆಯಿಂದಾಗಿ ಲಂಕೆಯ ಸಭಾ ಮಂಡಲದಲ್ಲಿ ರಾವಣನು ತನಗೆ ವಿಧಿಸಿದ್ದ ಮರಣದಂಡನೆಯನ್ನು ತಪ್ಪಿಸಿಕೊಳ್ಳಲಾಯಿತೆಂಬುದನ್ನು ಹನುಮಂತನು ಅರಿತಿದ್ದನು. ದೂತನನ್ನೊ ಕಾರ್ಯಭಾರಿಯನ್ನೊ ವಧೆಗೆ ಈಡುಮಾಡುವುದು ಸರಿಯಲ್ಲವೆಂದು ವಿಭೀಷಣನು ವಾದಿಸಿದ್ದನು. ಆ ಭಾಗ ಮೂಲ ರಾಮಾಯಣಕ್ಕೆ ಸೇರಿದ್ದುದಾದರೆ – ಅವನ ವಿಷಯದಲ್ಲಿ ಇತರರ ವರದಿಗಳು – ಶೂರ್ಪನಖಿಯದು ಕೂಡ–ಅವನು ಪ್ರಾಮಾಣಿಕನೆಂದು, ನೀತಿವಂತನೆಂದು ಇದ್ದವು. ಆದರೆ ತಮ್ಮ ಪಾಳೆಯದಲ್ಲಿ ಅವನನ್ನು ಸೇರಿಸಿಕೊಳ್ಳಬೇಕು ಎಂಬಂಶದಲ್ಲಿ ಹನುಮಂತನ ಮನಸ್ಸಿನಲ್ಲಿಯೂ ಶಂಕೆಗಳಿಲ್ಲದಿರಲಿಲ್ಲ. ರಾಮನೇನೊ ಅವನನ್ನು ಸ್ವೀಕರಿಸಿದನು. ವಿಭೀಷಣನನ್ನು ಅಣ್ಣ ತಪ್ಪಾಗಿ ಹೊರಗೆ ಹಾಕಿದ್ದಾನೆ. ವಿಶ್ವಾಸಪೂರ್ವಕವಾಗಿಯೂ ಸಾತ್ವಿಕನಾಗಿಯೂ ಅವನು ನುಡಿದ ಹಿತವಾದಕ್ಕೆ ಕಿವಿಗೊಡಲಿಲ್ಲ. ನನ್ನ ಆಶ್ರಯ ಬೇಡಲು ಇವನು ಬಂದಿದ್ದಾನೆ–ಎಂದು ರಾಮನು ಹೇಳುತ್ತಾನೆ. ರಾವಣನೇ ಆಶ್ರಯಬೇಡಿ ತನ್ನಲ್ಲಿಗೆ ಬಂದರೆ–ಸಂಭವವೆ, ಶಕ್ಯವೆ? – ಅವನನ್ನು

---

೪೩ ಯುದ್ಧರಂಗದಲ್ಲಿ ಅದೃಷ್ಟದ ತಿರುವು ಹೇಗಾದೀತೊ ಎಂಬ ಸಂದೇಹ ಸಮಯದಲ್ಲಿ ತನಗೆ ರಾಜ್ಯವಿಲ್ಲ; ಉಳಿಸಿಕೊಳ್ಳುವ ಎಲ್ಲವೂ ರಾವಣನಿಗೆ ಉಳಿಯುತ್ತದೆ ಎಂದು ವಿಭೀಷಣನಿಗೆ ಚಿಂತೆ ಬರುತ್ತದೆ.

ಸ್ವೀಕರಿಸುತ್ತೇನೆಂದ ರಾಮನ ವಾಕ್ಯ ಧರ್ಮದ ಒಂದು ಮಹೋಕ್ತಿ.[೪೪]

ವಿಭೀಷಣನು ರಾಮನ ಪಕ್ಷದಲ್ಲಿ ತುಂಬಾ ಪ್ರಾಮಾಣಿಕವಾದ ಭಕ್ತಿ ತೋರಿಸಿದನು. ಅವನ ಜಯಕ್ಕೆ ಬೇಕಾದ ಎಲ್ಲ ನೆರವನ್ನೂ ಕೊಟ್ಟನು. ಅವನಿಗೆ ರಾಕ್ಷಸ ವೀರರೆಲ್ಲರ ಬಲ ದೌರ್ಬಲ್ಯಗಳೂ ತಿಳಿದಿದ್ದವು. ಅವರ ಮಾರ್ಗಗಳಾವುವು, ಕಪಟಗಳಾವುವು, ಎಂಬುದೂ ತಿಳಿದಿತ್ತು. ಹಾಗಿದ್ದುದರಿಂದಲೇ ಇಂದ್ರಜಿತು ಪ್ರಯೋಗಿಸಿದ ಶಕ್ತ್ಯಾಯುಧದಿಂದ ಲಕ್ಷ್ಮಣನು ಸತ್ತಿಲ್ಲ, ಆ ಅಸ್ತ್ರ ಕೊಲ್ಲುವುದಿಲ್ಲ ಎಂದು ರಾಮನಿಗೆ ಸೂಚಿಸಲು ಅವನು ಶಕ್ತನಾದದ್ದು. ತಕ್ಕ ಚಿಕಿತ್ಸೆ ಮಾಡಲಾದರೆ ಲಕ್ಷ್ಮಣನು ಚೇತರಿಸಿಕೊಳ್ಳಬಲ್ಲ ಎಂದಿದ್ದ. ಆಗಲೂ ಮತ್ತು ರಾವಣನ ಶಕ್ತಿ ಪ್ರಯೋಗದಿಂದ ಸೈನ್ಯದ ಮೇಲೆಲ್ಲ ಇದೇ ಪರಿಣಾಮ ಉಂಟಾದಾಗಲೂ ಇಂಥುದೇ ಚಿಕಿತ್ಸಾ ಮಾರ್ಗವನ್ನು ತಿಳಿಸಿದ. ಆಗ ಈ ವೀರನನ್ನೂ ವಾನರ ಸೈನ್ಯದ ನಾಯಕರಲ್ಲಿ ಪುನಃ ಪ್ರಾಣಸಂಚಾರವಾಗುವಂತೆ ಮಾಡುವುದಕ್ಕಾಗಿ ಸಮುದ್ರವನ್ನು ದಾಟಿ ಹೋಗಿ ಕೆಲವು ಮೂಲಿಕೆಗಳನ್ನು ತರಲು ಸುಷೇಣನು ಹನುಮಂತನನ್ನು ಕಳಿಸಿದ. ಒಂದು ಮಾಯಾ ಸೀತೆಯನ್ನು ನಿರ್ಮಾಣ ಮಾಡಿ ಒಟ್ಟು ಸೈನ್ಯದ ಎದುರಿಗೆಲ್ಲ ಇಂದ್ರಜಿತು ಆ ಮೂರ್ತಿಯನ್ನು ಕೊಂದಾಗ ರಾಮನೂ ಕುಗ್ಗಿ ಹೋದ. ರಾವಣನು ಎಂದಿಗೂ ಸೀತೆಯನ್ನು ಕೊಲ್ಲುವುದಿಲ್ಲ. ಅವನು ಪೂರ್ತಿಯಾಗಿ ಅವಳ ಮೋಹದಲ್ಲಿ ಮುಳುಗಿಹೋಗಿದ್ದಾನೆ ಎಂದು ರಾಮನಿಗೆ ತಿಳಿಸಿದ. ಪತಿವ್ರತೆಯಾಗಿ, ತನ್ನನ್ನು ಇಚ್ಛೆ ಪಡದ ಹೆಂಗಸಿನ ಮೇಲೆ ಅತ್ಯಾಚಾರ ಮಾಡಿದರೆ ರಾವಣನ ಮೇಲಿದ್ದ ಶಾಪಗಳು ಅವನನ್ನು ನಾಶ ಮಾಡುವುವೆಂದು ತಿಳಿಸಿದ. ಲಕ್ಷ್ಮಣನ ಮೇಲೆ ಶಕ್ತ್ಯಾಯುಧವನ್ನು ಪ್ರಯೋಗಮಾಡಿದಾಗ ತಾನು ಅವನನ್ನು ಕಾಪಾಡಿದ್ದಕ್ಕೆ ತನ್ನನ್ನು ಘಾತಿಸಬೇಕೆಂದು ರಾವಣನನ್ನು ಕೆರಳಿಸಿದ. ಶತ್ರು ಸೈನ್ಯವನ್ನು ಯುವಕನಾದ ಇಂದ್ರಜಿತು ಪೂರ್ತಿಯಾಗಿ ನಾಶಮಾಡಲು ಮಹಾಯುಧವನ್ನು ಸಂಪಾದಿಸುವುದಕ್ಕಾಗಿ ಕೈಕೊಂಡ ನಿಕುಂಭಿಳಾಯಾಗ ಪೂರ್ತಿಯಾಗದಂತೆ ಅವನನ್ನು ತಡೆಯಲು ಲಕ್ಷ್ಮಣನನ್ನು ತ್ವರೆಗೊಳಿಸಿದ. ಈ ಸಲಹೆಯಿದಲೇ ಇಂದ್ರಜಿತುವನ್ನು ನಾಶಮಾಡಿ ಮುಗಿಸುವುದು ಲಕ್ಷ್ಮಣನಿಗೆ ಶಕ್ಯವಾದ್ದು. ರಾವಣನಿಗೆ ಇಂದ್ರಜಿತುವಿನ ನಷ್ಟ ಅತಿದೊಡ್ಡ ಘಾತ. ನಿಸ್ಸಂದೇಹವಾಗಿ ರಾಮನೇ ರಾವಣನನ್ನು ತೀರಿಸಬೇಕಿತ್ತು. ಸುಗ್ರೀವನಾಗಲಿ ಹನುಮಂತನಾಗಲಿ

---

೪೪ ಅವನು ಸೀತೆಯನ್ನು ಹಿಂದಿರುಗಿಸದೆ ಬಂದಿದ್ದರೆ? ಹಾಗೆ ಬಂದಿದ್ದರೂ ಸೀತೆಯನ್ನು ತಂದು ಒಪ್ಪಿಸಿದ್ದರೂ ಸೀತೆಯ ಪರವಾದ ರಾಮನ ನಡತೆ ಬೇರೆ ಬಗೆಯದಾಗುತ್ತಿತ್ತೆ?

ಲಕ್ಷ್ಮಣನೇ ಆಗಲಿ ಆ ಕಾರ್ಯಕ್ಕೆ ಸಮರ್ಥರಾಗುತ್ತಿರಲಿಲ್ಲ. ಈ ಕಾರ್ಯವನ್ನು ಸಾಧಿಸಲು ರಾಮನಿಗೂ ಪೂರ್ತಿ ಎರಡು ದಿನಗಳು ಹಿಡಿದವು. ತನಗೆ ತಿಳಿದಿದ್ದ ಎಲ್ಲ ಬಾಣಗಳನ್ನೂ ಅಸ್ತ್ರಗಳನ್ನೂ ಪ್ರಯೋಗಿಸಬೇಕಾಯಿತು.[೪೫]

ವಿಭೀಷಣ ಕುಂಭಕರ್ಣರು ಯುದ್ಧರಂಗದಲ್ಲಿ ಒಂದು ಹೃದಯ ಸಂವಾದಿಯಾದ ಸಂದರ್ಭದಲ್ಲಿ ಪರಸ್ಪರ ಎದುರುಗೊಂಡರು. ಕುಂಭಕರ್ಣನನ್ನು ಎದುರಿಸಲು ರಾಮನು ಸಿದ್ಧನಾಗುತ್ತಿದ್ದುದನ್ನು ವಿಭೀಷಣನು ಕಂಡು ಸನ್ನಿವೇಶದ ಗಂಭೀರತೆಯನ್ನು ಅರಿತನು. ತಾನೇ ಗದೆ ಹಿಡಿದು ಅಣ್ಣನಿಗೆ ಎದುರಾಗಿ ಹೊರಟನು. ತನ್ನನ್ನು ಎದುರಿಸಿ ಕಾದಾಡಲು ತಮ್ಮನು ಬರುತ್ತಿದ್ದುದನ್ನು ಕಂಡು ಕುಂಭಕರ್ಣನ ಅಂತಃಕರಣ ಕೋಮಲವಾಯಿತು. ಅವನಿಗೆ ಮನವರಿಕೆಯಾಗಿತ್ತು: ರಾವಣನ ನಡತೆಯ ಪರಿಣಾಮವಾಗಿ ಲಂಕೆಯೂ ರಾಕ್ಷಸ ಸೈನ್ಯವೂ ಸಂಪೂರ್ಣವಾಗಿ ನಾಶವಾಗುವುವೆಂದು. ಮುಂದಿನ ಕೆಲವು ಶ್ಲೋಕಗಳ ಸಾಲುಗಳು ಹೆಚ್ಚು ಮೃದುವಾದುವು, ಹೆಚ್ಚು ಅಚ್ಚರಿ ತರುವುವು; ಅಷ್ಟೇ ಅನಿರೀಕ್ಷಿತ. ತಮ್ಮನಿಗೆ ಕುಂಭಕರ್ಣನು ಈ ಮಾತುಗಳನ್ನು ಹೇಳಿದ : 'ಕುಲವನ್ನು ಮುಂದುವರಿಸಲು ನೀನು ಬದುಕಿರಬೇಕು.' ಹೀಗೆನ್ನುವಾಗ ಅವನ ಮನಸ್ಸಿಗೆ ಯಾವ ಸುಖವುಂಟಾಯಿತೊ – ಇದನ್ನು ಯಾರು ಹೇಳಬಲ್ಲರು? ಏಕೆಂದರೆ, ಮುಂದೆ ಅವನಾಡುವ ಮಾತುಗಳು ಶತ್ರುಗಳ ಎದುರಿಗೆ ನಡೆಯಬೇಕಾದ ತನ್ನ ಕಾರ್ಯವನ್ನು ತಿಳಿಸುತ್ತವೆ. 'ಸ್ವಭಾವತಃ ನಾನು ಉಗ್ರ; ಯುದ್ಧ ಕಳದಲ್ಲಿ ನನ್ನ ಕಡೆ ಇರುವವರು ಯಾರು, ಬೇರೆಯವರು ಯಾರು ಎಂದು ನಾನು ನೋಡುವುದಿಲ್ಲ. ನನ್ನ ದಾರಿಯನ್ನು ಬಿಟ್ಟು ಹೋಗು. ನಿನ್ನನ್ನು ಸಂರಕ್ಷಿಸಿಕೊ.'

> ನ ವೇದ್ಮಿ ಸಂಯುಗೇ ಶಕ್ತಃ ಸ್ವಾನ್‌ಪರಾನ್ ವಾ ನಿಶಾಚರ
> ರಕ್ಷಣೀಯೋऽಸಿ ಮೇ ವತ್ಸ ಸತ್ಯಮೇತದ್ ಬ್ರವೀಮಿ ತೇ

ಇಲ್ಲಿ ಬಳಸಿರುವ 'ವತ್ಸ' ಎಂಬ ಮಾತು ಪ್ರೀತಿಯಿಂದ ಆಡಿದಂತಿದೆ. ತಾನು ರಾಮನ ಪಕ್ಷಕ್ಕೆ ಬಂದುದಕ್ಕೆ ಕಾರಣವನ್ನು ವಿಭೀಷಣನು ಹೇಳುತ್ತಾನೆ.

---

೪೫ ಇಂದ್ರ–ಗರುಡರು ಅವನ ನೆರವಿಗೆ ಬಂದರೊ, ಇಲ್ಲವೊ; ಮಾತಲಿ ಸೂಚನೆಗಳನ್ನು ಕೊಟ್ಟನೊ, ಇಲ್ಲವೊ; ಅವನು ಪದಾತಿ ಎಂದೇ ಇದೆ–ಆದಿತ್ಯ ಹೃದಯದ ಬೋಧೆ ಆಯಿತೊ ಇಲ್ಲವೊ–ಇವೆಲ್ಲ ಅಧಿಕೃತವಾಗಿ ವಿಶ್ವಾಸಯೋಗ್ಯವಲ್ಲ. ರಾಮನಿಗೆ ಅಸ್ತ್ರಗಳೆಲ್ಲ ಗೊತ್ತಿದ್ದವು. ತಾನರಿತಿದ್ದ ಅತ್ಯಂತ ಪ್ರಬಲವಾದ ಅಸ್ತ್ರ ಬ್ರಹ್ಮಾಸ್ತ್ರವನ್ನು ಬಳಸಿದಲ್ಲದೆ ರಾವಣನು ಹತನಾಗುತ್ತಿರಲಿಲ್ಲ. ಅದರ ಪ್ರಯೋಗ ಉಳಿದ ಎಲ್ಲವನ್ನೂ ಮೀರಿದ ಕಡೆಯ ಪ್ರಯೋಗಮಾರ್ಗ.

ರಾಕ್ಷಸ ಕುಲವನ್ನು ಕಾಪಾಡುವುದು ತನ್ನ ಉದ್ದೇಶವಾಗಿತ್ತು ಎನ್ನುವನು. ಹೀಗೆ ಹೇಳಿ ದೂರಕ್ಕೆ ಸರಿಯುತ್ತಾನೆ :

ಏವಂ ಉಕ್ತ್ವಾಽಶ್ರುಪೂರ್ಣಾಕ್ಷೋ ಗದಾಪಾಣಿಃ ವಿಭೀಷಣಃ
ಏಕಾಂತಂ ಆಶ್ರಿತೋಭೂತ್ವಾ ಚಿಂತಯಾಮಾಸ ಸಂಸ್ಥಿತಃ

ಕುಂಭಕರ್ಣನು ಆಡಿದ ಮಾತುಗಳನ್ನು ಕೇಳಿದ ವಿಭೀಷಣನ ಕಣ್ಣಲ್ಲಿ ನೀರು ತುಂಬಿತು. ಏಕಾಂತವನ್ನು ಹುಡುಕಿ ಗದೆಗೆ ಊರಿಕೊಂಡು ಚಿಂತಿಸುತ್ತ ಅಲ್ಲಿ ಕುಳಿತನಂತೆ! ಈ ಚಿತ್ರ ಎಂದಿಗೂ ಮರೆಯಲಾಗುವುದಿಲ್ಲ. ಸೋದರರ ನಡುವೆಯ ಈ ಸಂಧಿಯೂ ಈ ಪ್ರಸಂಗದ ಗುಣಾತಿಶಯವೂ ಲಂಕೆಯಲ್ಲಿ ನಡೆದ ಯುದ್ಧ ಚರಿತ್ರೆಯಲ್ಲಿ ತುಂಬಾ ಸ್ಮರಣೀಯವಾದುದು.[೪೬]

ರಾವಣನುಕೆಳಗೆ ಬಿದ್ದು ತೀರಿಕೊಂಡಾಗ ದೊಡ್ಡ ಪ್ರಲಾಪ ಉಂಟಾಯಿತು. ಸುತ್ತಲೂ ಕುಳಿತ ಅವನ ಸ್ತ್ರೀವರ್ಗ ಎಷ್ಟು ಶೋಕಾಕ್ರಾಂತರಾದರೊ ಅಷ್ಟೇ ಶೋಕ ವಿಭೀಷಣನಲ್ಲಿಯೂ ಹುಟ್ಟಿತು. ರಾವಣನು ಎಷ್ಟು ದೊಡ್ಡ ಸ್ವಾಮಿಯಾಗಿದ್ದನೆಂಬುದನ್ನೂ ತಮ್ಮ ನಷ್ಟವೆಂಥುದೆಂಬುದನ್ನೂ ಕೀರ್ತಿಸುತ್ತ ಹೆಣ್ಣುಗಳು ಕುಳಿತರು. ಮಂಡೋದರಿಯ ವಿಲಾಪ ಅತಿಶಯವಾದ್ದು. ಮಂಡೋದರಿಗೆ ಅವನ ಬಲ ದೌರ್ಬಲ್ಯ ಎರಡೂ ಗೊತ್ತಿದ್ದವು. ಸೀತೆಯನ್ನು ಲಂಕೆಗೆ ತಂದದ್ದು ದೊಡ್ಡ ತಪ್ಪೆಂದು ಆಕೆ ಹೇಳಿದ್ದಳು. ಈಗ ರಾವಣನು ತನಗೆ ಎಷ್ಟು ಪ್ರಿಯ, ತಮ್ಮ ಬದುಕು ಅದೃಷ್ಟ ಅವನು ಸತ್ತು ಬಿದ್ದಿರುವ ಈಗ ಎಷ್ಟು ವ್ಯರ್ಥವಾದವು, ತಾವೆಲ್ಲ ಅವನ ವಿಯೋಗದಲ್ಲಿ ಎಷ್ಟು ನಿರ್ಗತಿಕರಾದೆವು – ಎಂದು ದುಃಖವನ್ನು ತೋಡಿಕೊಳ್ಳುತ್ತಾಳೆ. ಆಕೆಯ ಶೋಕ ಹೃದಯವಿದ್ರಾವಕವಾದ್ದು. ಒಟ್ಟು ಒಂದು ಸರ್ಗದ ತುಂಬ ಅದರ ರಚನೆ ಹರಡುತ್ತದೆ. ವಿಭೀಷಣನಿಗೂ ಗೊತ್ತು. ತಮ್ಮಣ್ಣ ಬಹು ದೊಡ್ಡವನೆಂದು. ತನ್ನ ಮೃತಿಯನ್ನು ತನ್ನ ಮೇಲೆ ಹೇಗೆ ತಂದುಕೊಂಡಿದ್ದನೆಂಬುದು ಅವನಿಗೆ ವ್ಯಥೆ ಉಂಟುಮಾಡಿತ್ತು. ಇದು ಎಷ್ಟು ನೈಜವಾದುದಾಗಿದ್ದರೂ ಕೊನೆಯಲ್ಲಿ ಅವನ ಮನಸ್ಸಿನಲ್ಲಿ ನಿಶ್ಚಯವಿರಲಿಲ್ಲ; ಯೋಗ್ಯನಾದ ಒಬ್ಬ ಪ್ರಭುವಿಗೆ ತೋರಿಸಬೇಕಾದ ಕರ್ತವ್ಯದಲ್ಲಿ ಅವನ ಉತ್ತರಕ್ರಿಯೆಯನ್ನು ತಾನು ನೆರವೇರಿಸುವುದು ಯೋಗ್ಯ ಎಂಬಂಶದಲ್ಲಿ. ರಾಮನಿಗೂ ಗೊತ್ತು–ಅವನು ಎಷ್ಟು ದೊಡ್ಡ ವೀರಯೋಧನೆಂದು. 'ಮರಣಾಂತಾಣಿ ವೈರಾಣಿ.' ಮೃತಿ ಹೊಂದಿದ ಮೇಲೆ ಶತ್ರುವಿನಲ್ಲಿ ವೈರ

೪೬ ಒಮ್ಮೆ ರಾಳ್ಳಪಲ್ಲಿಯವರು ನನಗೆ ಇದನ್ನು ತುಂಬಾ ಹೃದ್ಯವಾಗಿ ಓದಿದರು.

ತಕ್ಕುದಲ್ಲ ಎಂದನು. ನಿಜವಾಗಿ ಉತ್ತಮ ಸಂಸ್ಕಾರವುಳ್ಳ ಶೀಲವಂತನಾದ ಮನುಷ್ಯನ ಕೃಪಾಳುತೆಯ ಲಕ್ಷಣ ಅದು. ರಾಮನ ಮನಸ್ಸಿನಲ್ಲಿದ್ದ ಮೌನ್ಯಕಲ್ಪನೆ ಎಷ್ಟು ಹಿರಿದು ಎಂಬುದನ್ನು ಈ ಮಾತು ಕಾಣಿಸುತ್ತದೆ. ರಾಮಾಯಣದ ನಾಯಕನು ಪ್ರತಿನಿಧಿಸುವ ನಾಯಕತ್ವದ ಒಂದೆರಡು ಮುಖ್ಯ ಲಕ್ಷಣಗಳನ್ನು ರಾಮನ ಈ ನಿಲವು ಎತ್ತಿ ಕಾಣಿಸುತ್ತದೆ.

ಇತರರು ರಾಮನ ವ್ಯಕ್ತಿತ್ವದಿಂದಲೂ ಹಿರಿಮೆಯಿಂದಲೂ ಹೇಗೆ ಪ್ರಭಾವಗೊಳ್ಳುತ್ತಾರೊ ಹಾಗೆಯೇ ವಿಭೀಷಣನೂ ಪ್ರಭಾವಗೊಂಡಿದ್ದಾನೆ. ಅವನು ಲಂಕೆಯ ರಾಜನಾದಾಗಲೂ ರಾಮನು ಸೀತೆಯ ವಿಷಯದಲ್ಲಿ ಕಠಿಣವಾದ ತೀರ್ಮಾನ ಮಾಡಿ 'ರಾವಣಾಂಕ ಪರಿಭ್ರಷ್ಟಾಂ' ಎಂದು ಹೇಳಿದಾಗಲೂ ಪ್ರತಿಯಾಗಿ ಒಂದು ಮಾತನ್ನೂ ಆಡದೆ ಮೌನವಾಗಿರುತ್ತಾನೆ. ಲಂಕೆಯಲ್ಲಿ ಎಷ್ಟು ಪತಿವ್ರತೆಯಾಗಿ ಶುಚಿಯಾಗಿ ಇದ್ದಳೆಂಬುದನ್ನೂ ರಾವಣನು ಹೇಗೆ ಅವಳ ಮೇಲೆ ಯಾವ ಅತ್ಯಾಚಾರವನ್ನೂ ಮಾಡಲಿಲ್ಲ–ಮಾಡಲಾರದವನಾಗಿದ್ದ ಎಂಬುದನ್ನೂ ಅವನು ಬಲ್ಲ. ಅದರ ಸತ್ಯವನ್ನು ಪ್ರಮಾಣೀಕರಿಸಬಲ್ಲವನಾಗಿದ್ದ. ಆದರೂ ಅವನ ನಾಲಿಗೆ ಬಿಗಿದಿತ್ತು. ತನ್ನ ಕೃತಜ್ಞತೆಯನ್ನು ಅರ್ಪಿಸಲು ತನ್ನಿಂದ ಸಣ್ಣದಾದ ಯಾವ ಸೂಚಿಕೆಯ ಪದಾರ್ಥವನ್ನಾದರೂ ಸ್ವೀಕರಿಸಬೇಕು, ಒಂದು ರಾತ್ರಿಯಾದರೂ ತನ್ನ ಆತಿಥ್ಯವನ್ನು ಸ್ವೀಕರಿಸಬೇಕು ಎಂದು ಪ್ರಯತ್ನಿಸಿದನು. ರಾಮನು ಯಾವುದನ್ನೂ ಒಲ್ಲೆನೆಂದ. ಸುಗ್ರೀವನ ಸೈನ್ಯದ ಎಲ್ಲ ನಾಯಕರಿಗೆ, ಸೈನ್ಯದವರಿಗೆ ಅನ್ನಪಾನವನ್ನು ಸ್ನಾನವನ್ನು ಒದಗಿಸಲು ಹೇಳಿದ. 'ನನಗಾಗಿ ಭರತನು ಕಾಯುತ್ತಿದ್ದಾನೆ. ಸ್ನಾನಕ್ಕೆ, ವಸ್ತ್ರಕ್ಕೆ ನಾನು ತಡೆದು ನಿಲ್ಲುವ ಹಾಗಿಲ್ಲ; ತ್ವರೆಗೊಂಡು ಹೋಗುಬೇಕು. ಅಯೋಧ್ಯೆ ಇಲ್ಲಿಂದ ಬಹು ದೂರವಿದೆ. ಅಲ್ಲಿಗೆ ಸೇರಲು ಕಷ್ಟವಿದೆ. ಭರತನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ತ್ವರೆಗೊಳ್ಳಬೇಕು' – ಎಂದ. ಪ್ರಯಾಣಕ್ಕೆ ಪುಷ್ಪಕ ವಿಮಾನವಿದೆ ಎಂದು ವಿಭೀಷಣನು ತಿಳಿಸಿ ಅದನ್ನು ಸಿದ್ಧಪಡಿಸಿದ. ವಿಭೀಷಣ, ಸುಗ್ರೀವ, ಹನುಮಂತ ಎಲ್ಲರೊಡನೆ ಬೇಗ ಅಯೋಧ್ಯೆಗೆ ಹೋಗಿ ಸೇರಿದರು. ರಾಮನು ಕಾಡಿನಲ್ಲಿ ಹೇಗೆ ಜೀವಿಸುತ್ತಿದ್ದನೊ ರಾಜಧಾನಿಯಲ್ಲಿ ಹಾಗೆ ಉಳಿದು ಅಣ್ಣನಿಲ್ಲದಿರುವಾಗ ರಾಜ್ಯವನ್ನು ಭರತನು ಹೇಗೆ ನೋಡಿಕೊಳ್ಳುತ್ತಿದ್ದನೆಂಬುದನ್ನು 'ಬ್ರಹ್ಮ ಋಷಿ ಸಮತೇಜಂ' ಎಂಬ ಮಾತು ತಿಳಿಸುತ್ತದೆ. ರಾಮನ ಪಾದುಕೆಗಳ ಅಂಕೆಯಲ್ಲಿ, ಹೆಸರಲ್ಲಿ ರಾಜ್ಯವನ್ನಾಳುತ್ತ ಇದ್ದ ಅವನನ್ನು ಕಂಡರು ನಿಜವಾದ ಹಿರಿಮೆ ಯಾವುದು, ಏನನ್ನು ಮಾಡಬಲ್ಲದು ಎಂಬುದನ್ನು ಎಲ್ಲರೂ ಕಂಡು. 'ಭರತಂ ದೃಷ್ಟ್ವಾ ತಂ ಭ್ರಾತೃವತ್ಸಲಂ । ಮುಮುಚುಃ

ವಾನರಾ ಬಾಷ್ಪಃ ರಾಕ್ಷಸಶ್ಚ ವಿಭೀಷಣಃ' ಸೋದರಿಕೆಯ ಪ್ರೀತಿಯನ್ನೂ ಭರತನ ಭಕ್ತಿ ವಿಶ್ವಾಸಗಳನ್ನೂ ಕಂಡು ಅವರು ಕಣ್ಣೀರು ಸುರಿಸಿದರಂತೆ : ತಮ್ಮ ಬದುಕುಗಳಲ್ಲಿ ಅಂಥ ದೃಶ್ಯಗಳನ್ನು ಕಾಣಲಾರದವರಲ್ಲವೆ ಅವರು !

(ಈ) ವಿಶ್ವಾಮಿತ್ರ : ವಿಶ್ವಾಮಿತ್ರನ ಕತೆ ರಾಮಾಯಣದ ಮೊದಲ ಭಾಗದ ಕತೆಯಲ್ಲಿ ನೆಯ್ದುಕೊಂಡು ಬಂದಿದೆ. ರಾಮನ ವಿದ್ಯಾ ಶಿಕ್ಷಣಕ್ಕೂ ಅವನ ಯೋಗ್ಯತಾ ಸಿದ್ಧಿಗೂ ಭಾಗಶಃ ಆತನು ಕಾರಣವಾಗಿರುವುದಲ್ಲದೆ ಸ್ವಂತವಾಗಿ ಆತನ ವ್ಯಕ್ತಿಪ್ರಭಾವ ಎಷ್ಟು ಮುಖ್ಯವಾಗಿದೆ ಎಂಬುದನ್ನು ಕಾಣಿಸುವ ಸಂದರ್ಭ ಅದು. ಭಾರತ ಸಂಸ್ಕೃತಿಯ ಚರಿತ್ರೆಯಲ್ಲಿ ಅವನದು ದೊಡ್ಡ ಹೆಸರು. ಸ್ವಂತ ಆಯ್ಕೆಯಿಂದಲೂ ಪ್ರಯತ್ನದಿಂದಲೂ ಪ್ರಯತ್ನ ಪೂರ್ವಕವಾಗಿ ಪಟ್ಟಭದ್ರ ಅಧಿಕಾರವನ್ನು ಮೂದಲಿಸಿ ಎದುರಿಸಿ ನಿಂತು ತನ್ನ ವ್ಯಕ್ತಿತ್ವವನ್ನು ಸ್ಥಾಪಿಸಿಕೊಂಡವನು. ಅವನು ಕ್ಷತ್ರಿಯ. ಶಸ್ತ್ರಾಸ್ತ್ರಗಳಲ್ಲಿ ಶಕ್ತಿ ಕೌಶಲಗಳನ್ನು ಪಡೆದಿದ್ದವನು. ಇತರ ರಾಜರ ಮೇಲೆ ಅಧಿರಾಜತ್ವವನ್ನು ಪಡೆದು ವಸಿಷ್ಠನಿಗೆ ವಿರೋಧ ಮಾಡಿದವನು.[೪೭] ವಸಿಷ್ಠರು ಬ್ರಾಹ್ಮಣ ವರ್ಗದ ನಾಯಕರು. ವಸಿಷ್ಠನಿಗೆ ಸೇರಿದ ಒಂದು ಗೋವನ್ನು ಕುರಿತ ಸಂಗತಿ ಅವರ ನಡುವೆ ಕೋಟಲೆಗೆ ಒದಗಿದ ಸಂದರ್ಭ. ವಿಶ್ವಾಮಿತ್ರನು ರಕ್ತಪಾತ ಮಾಡಿ ವಸಿಷ್ಠನ ಬ್ರಹ್ಮದಂಡ ತನ್ನೆಲ್ಲ ಶಕ್ತಿಗಿಂತಲೂ ಹೆಚ್ಚು ಬಲಿಷ್ಠವಾದುದೆಂದು ಅರಿತು ತಾನೂ ಬ್ರಹ್ಮರ್ಷಿಯಾಗಲು ನಿಶ್ಚಯಿಸುತ್ತಾನೆ. ತಪಸ್ಸಿನ ಕಾಲದಲ್ಲಿ ಎಷ್ಟೊ ಮಂದಿ ದೊಡ್ಡ ದೊಡ್ಡ ಋಷಿಗಳಿಗೆ ಸಂಭವಿಸಿದಂತೆ ಮೇನಕೆ ಮುಂತಾದ ಅಪ್ಸರೆಯರ ಮೋಹಕ್ಕೆ ಇವನೂ ಈಡಾಗಿ ಸ್ವಲ್ಪ ಕಾಲ ಸೋಲುತ್ತಾನೆ. ಸುಖ ಸಂತೃಪ್ತಿ ತಕ್ಕಷ್ಟು ಅನುಭವಿಸಿದಾಗ ತನ್ನ ತಪ್ಪು ತಿಳಿದು ಬಂದುವು. ಆಮೇಲೆ ಹೆಚ್ಚು ಎಚ್ಚರಗೊಂಡು ಅನಂತರ ಬಂದ ರಂಭೆಯ ಜಾಲಗಳನ್ನು ನಿವಾರಿಸಿಕೊಳ್ಳುತ್ತಾನೆ. ಕಡೆಯ ಘಟ್ಟವೊಂದರಲ್ಲಿ ಕರುಣೆಯನ್ನೂ ಕ್ಷಮೆಯನ್ನೂ ಸಂಯಮವನ್ನೂ ಸಾಧಿಸಿ ಪ್ರಕಾಶಪಡಿಸಿದಾಗ ತಪಸ್ಸು ಫಲಿಸಿ ಅವನನ್ನು ಬ್ರಹ್ಮರ್ಷಿ ಎಂದು ಸ್ವೀಕರಿಸಲಾಗುತ್ತದೆ. ಮನತಟ್ಟುವ ಅಂತಹ ವ್ಯಕ್ತಿತ್ವವುಳ್ಳ ದುರ್ದಮ್ಯ ವ್ಯಕ್ತಿತ್ವ ಭಾರತದಲ್ಲಿ ಪ್ರತಿನಿಧಿಗೊಳ್ಳುವ ಇನ್ನೊಂದು ದೃಷ್ಟಾಂತವಿಲ್ಲ. ಬಹುತರ ಬ್ರಾಹ್ಮಣ ವರ್ಗಕ್ಕೂ ಕ್ಷತ್ರಿಯ ವರ್ಗಕ್ಕೂ ಶಕ್ತಿ ಪ್ರಭಾವಗಳಿಗೋಸ್ಕರ ಆ ಕಾಲದಲ್ಲಿ

---

೪೭. ವೇದಕಾಲದ ಈ ಇಬ್ಬರೂ ಈ ಇತಿಹಾಸ ಕಾವ್ಯದ ಕಾಲದ ವ್ಯಕ್ತಿಗಳೆ? – ಹೇಳಲಾಗುವುದಿಲ್ಲ. ಪುರಾಣ ಇತಿಹಾಸ ಕತೆಗಳು ಒಂದಕ್ಕೊಂದು ಕಲಸಿಕೊಳ್ಳುತ್ತವೆ. ಅವನ್ನು ಬಿಡಿಸಿ ಬೇರ್ಪಡಿಸುವುದು ಸುಲಭವಲ್ಲ. ಮಾಡುವವರು ಯಾರು?

ಸ್ಪರ್ಧೆಗಳಿದ್ದಿರಬೇಕು.[೪೮] ಕೇಳಿದುದನ್ನು ಕೊಡುತ್ತೇನೆಂದು ಮೊದಲು ವಾಗ್ದಾನ ಮಾಡಿ ಮಾತಿಗೆ ತಪ್ಪಿದ ದಶರಥನನ್ನು ಕಂಡು ವಿಶ್ವಾಮಿತ್ರನಿಗೆ ಕೋಪ ಬರುತ್ತದೆ. ರಘುವಂಶದಲ್ಲಿ ಹುಟ್ಟಿದ ರಾಜನಿಗೆ ದಶರಥನ ಈ ನಡತೆ ಅಯುಕ್ತವಾದುದೆಂದು ನುಡಿಯುತ್ತಾನೆ. ನೀನೂ ನಿನ್ನ ಜನರೂ ಸುಖವಾಗಿರಿ ಎಂದು ಹರಸಿ ಹೊರಟು ಹೋಗುವುದರಲ್ಲಿರುತ್ತಾನೆ. ೮–೧೦ ಪದ್ಯಗಳಲ್ಲಿ ವಿಶ್ವಾಮಿತ್ರನಲ್ಲಿದ್ದ ಅಸ್ತ್ರಜ್ಞಾನವೂ ಅವನ ಸಾಧನೆಗಳ ಅತಿಶಯವೂ ಪ್ರತಿಪಾದಿತವಾಗುತ್ತವೆ. ಹೊಸ ಅಸ್ತ್ರಗಳನ್ನು ನಿರ್ಮಾಣ ಮಾಡುವ ಶಕ್ತಿ ಅವುಗಳಲ್ಲಿ ಒಂದು. ಹಿಂದೆ, ಸಾಂಪ್ರತದಲ್ಲಿ ಮುಂದಿನ ಕಾಲದಲ್ಲಿ ಆಗುವ ಅವನ ತಿಳಿವಿಗೆ ಮೀರಿದ ಯಾವುದೂ ಇರಲಿಲ್ಲ. 'ರಾಮನು ಜಯ ಪಡೆದು ಬರುತ್ತಾನಲ್ಲದೆ ಪ್ರಖ್ಯಾತನಾಗಿ ಹಿಂದಿರುಗುತ್ತಾನೆ. ರಾಕ್ಷಸನನ್ನು ಸ್ವಂತವಾಗಿ ವಿಶ್ವಾಮಿತ್ರನೇ ನಾಶಮಾಡಬಲ್ಲ. ಆದರೆ ಅದಕ್ಕಾಗಿ ತನ್ನ ತಪಸ್ಸನ್ನು ಬಳಸಲು ಇಷ್ಟಪಡುವುದಿಲ್ಲ. ನಿನ್ನ ಮಗನ ಹಿರಿಮೆಯನ್ನೂ ಕ್ಷೇಮಾಭ್ಯುದಯವನ್ನೂ ವೃದ್ಧಿಗೊಳಿಸುವುದಕ್ಕಾಗಿಯೇ ಅವನು ನಿನ್ನಲ್ಲಿಗೆ ಬಂದಿರುವುದು' ಎಂದು ದಶರಥನಿಗೆ ವಸಿಷ್ಠನು ತಿಳಿಸಬೇಕಾಯಿತು. ಆ ಮುಂಚೆ ವಿಶ್ವಾಮಿತ್ರನು ನುಡಿದುದನ್ನು ಮಾತ್ರ ವಸಿಷ್ಠನ ನುಡಿ ಸ್ಥಿರೀಕರಿಸುತ್ತದೆ. 'ನನ್ನ ಯಜ್ಞಕ್ಕೆ ತೊಂದರೆ ಅಡಸಿದಾಗ ನಾನೂ ಕೋಪಗೊಂಡೆ. ಆದರೆ ಯಾರೇ ಆಗಲಿ, ಅದನ್ನು ಕೆಡಿಸಲು ಬಂದರೆ ತಮ್ಮ ತಪಸ್ಸನ್ನೂ ಸಂಯಮವನ್ನೂ ಪೋಲು ಮಾಡಿಕೊಳ್ಳಬಾರದು' ಎಂದ.

ರಾಮಲಕ್ಷ್ಮಣರು ವಿಶ್ವಾಮಿತ್ರನೊಡನೆ ಹೋದರೆಂದು ನಾವು ಬಲ್ಲೆವು. ಅವರೊಡನೆ ಇದ್ದ ಕಾಲದಲ್ಲೆಲ್ಲ ದಾರಿಯಲಿ, ಆಶ್ರಮದಲ್ಲಿ ಋಷಿ ಅವರಿಗೆ ಶಾಂತಿಯ ಮತ್ತು ಯುದ್ಧದ ಕಲೆಗಳನ್ನು ಕುರಿತು ಶಿಕ್ಷಣ ಕೊಟ್ಟನು. ಸಂಯಮದ ವಿಧಾನಗಳನ್ನು ತಿಳಿಸಿದನು. ಬಗೆಬಗೆಯ ನಿರ್ದೇಶಗಳನ್ನು ಅನೇಕ ಮಂತ್ರಗ್ರಾಮಗಳನ್ನು ಬೋಧೆ ಮಾಡಿದನು. ರಾಮನಷ್ಟು ವಶಿಯಾಗಿ ಇನ್ನೊಬ್ಬರು ಇರುವುದಿಲ್ಲವೆಂಬಂತೆ ಅನುಗ್ರಹಿಸಿದನು. ರಾಮನಿಗೆ ಯಾವ ಶ್ರಮವೂ ಜ್ವರವೂ ರೂಪವಿಪರ್ಯಾಸವೂ ಇರದಂತೆ, ಉಂಟಾಗದಂತೆ ಮಾಡಿದ. ನಿದ್ರೆ, ಪ್ರಮುತ್ತತೆ

---

೪೮ ವಸಿಷ್ಠ–ವಿಶ್ವಾಮಿತ್ರರು ರಾಜ ನಿರ್ಮಾಣಕಾರರು. ವೇದಗಳ ಕಾಲದಲ್ಲಿ ಹುಟ್ಟಿಕೊಂಡ ತತ್ವಜ್ಞಾನದ ಕಾಂಡಗಳಲ್ಲಿ ವಸಿಷ್ಠನ ಹೆಸರಿಗಿಂತ ವಿಶ್ವಾಮಿತ್ರನ ಹೆಸರು ಹೆಚ್ಚು ಪ್ರಧಾನವಾಗಿದ್ದ ಹಾಗೆ ಕಾಣುತ್ತದೆ. ಬ್ರಾಹ್ಮಣನನ್ನು ಬ್ರಾಹ್ಮಣನನ್ನಾಗಿ ಮಾಡುವ ಗಾಯತ್ರಿ ಮಂತ್ರದ ಋಷಿ ವಿಶ್ವಾಮಿತ್ರ. ಕಾಲಕ್ರಮದಲ್ಲಿ ಪುರೋಹಿತ ವರ್ಗದಲ್ಲಿ ನಾಯಕನಾದ ವಸಿಷ್ಠನು ಹೆಚ್ಚು ಹಿರಿಮೆಯನ್ನು ಪಡೆಯುತ್ತಾನೆ. ಧನುರ್ವಿದ್ಯೆಯ ನಿರ್ಮಾಣಕಾರನೆಂದು ವಿಶ್ವಾಮಿತ್ರನಿಗೆ ಖ್ಯಾತಿಯಿದೆ.

ಉಂಟಾಗಿ ಎಚ್ಚರಿಗೆ ತಪ್ಪದಂತೆ ಮಾಡಿ ರಾಕ್ಷಸರಿಗೆ ಪ್ರಯೋಜನವಾಗದಂತೆ ಮಾಡಿದ. ಬಾಹುವೀರ್ಯ, ಸೌಭಾಗ್ಯ, ದಾಕ್ಷಿಣ್ಯ, ಜ್ಞಾನ, ಬುದ್ಧಿ ನಿಶ್ಚಯ ಈ ಗುಣಗಳಲ್ಲಿ ಅವನಿಗೆ ಸಮವಾದವರು ಇಲ್ಲದಂತೆಯೂ ವಾದದಲ್ಲಿ ಇವನಿಗೆ ಪ್ರತಿಯಾಗಿ ಉತ್ತರಕೊಡುವವರಾರೂ ಇಲ್ಲದಂತೆಯೂ ಶಕ್ತಿವರ್ಧಕವಾದ 'ಸರ್ವಜ್ಞಾನಸ್ಯ ಮಾತರಂ' – ಇಂದರೆ ಎಲ್ಲ ಜ್ಞಾನಕ್ಕೂ ತಾಯಂತಿರುವ – ಬಲ ಅತಿಬಲ ಎಂಬ ಶಕ್ತಿಗಳನ್ನು ದಾನಮಾಡಿದನು. ಅವನ್ನು ಪುನಶ್ಚರಣೆ ಮಾಡಿದರೆ ಹಸಿವು ನೀರಡಿಕೆ ನಿವಾರಣೆಯಾಗುತ್ತವೆ –ಇತ್ಯಾದಿ ಎಂದುದಲ್ಲದೆ, ಸಮಸ್ತ ಅಸ್ತ್ರಗಳ ಸಂಧಾನ ಪ್ರತಿ ಸಂಧಾನಗಳ ರಹಸ್ಯವನ್ನೂ ತಿಳಿಸಿದ. ಉಪದೇಶವಾದಂತೆ ರಾಮನು ಮಂತ್ರೋಚ್ಚಾರಣೆ ಮಾಡಿದಾಗ ಅವುಗಳ ಅಧಿಷ್ಠಾತ್ರಿ ಶಕ್ತಿಗಳು ಅವನ ಎದುರಿಗೆ ಬಂದು ನಿಂತು ತಮಗೆ ಅಪ್ಪಣೆ ಏನೆಂದು ಕೇಳುತ್ತವೆ. ಆಹ್ವಾನಿಸಿದಾಗ ಬರತಕ್ಕದ್ದೆಂದು ಮಾತ್ರ ಅವನು ಈಗ ಹೇಳುತ್ತಾನೆ. ತಾನು ಬಯಸಿದಾಗ ಅವು ನೆರವಿಗೆ ಬರುತ್ತವೆಂಬುದಕ್ಕೆ ಇದು ಪ್ರಮಾಣವಾಗುತ್ತದೆ. ಎರಡನೆಯ ನಿರ್ದೇಶ: ಕ್ಷತ್ರಿಯ ಧರ್ಮಕ್ಕೆ ಸಂಬಂಧಿಸಿದ ಕ್ರಿಯಾ ವ್ಯಾಪಾರ. ಋಷಿ ತಾಟಕಿಯನ್ನು ಕೊಲ್ಲುವಂತೆ ರಾಮನಿಗೆ ಹೇಳುತ್ತಾನೆ. ಅವಳು ಹೆಂಗಸು, ಸ್ತ್ರೀವಧೆ ತಕ್ಕುದಲ್ಲ ಎಂಬ ಅಂಶದಲ್ಲಿ ಯಾವ ಸಂಕೋಚವೂ ಇರಬೇಕಿಲ್ಲ ಎನ್ನುತ್ತಾನೆ. ಜನತೆಯ ಕ್ಷೇಮಸಾಧನೆಗಾಗಿ ಕಾರ್ಯಮಾಡಬೇಕಾದಾಗ ಯಾವೆಲ್ಲ ಸಂಗತಿಗಳನ್ನು ತೂಗಿ ನೋಡಬೇಕೆಂಬ ಸಂಬಂಧದಲ್ಲಿ ಸ್ಥಾಪಕವಾಗುವಂತೆ ಈ ವಿಷಯವನ್ನು ವಿವರಿಸುತ್ತಾನೆ. ರಾಜಕುವಾರನು ಸಾರ್ವಜನಿಕ ಪ್ರಯೋಜನವನ್ನು ಸಾಧಿಸುವುದಕ್ಕಾಗಿ ಯಾವ ಕರ್ತವ್ಯಗಳಿಂದಲೂ ಹಿಂಜರಿಯಬೇಕಾದ್ದಿಲ್ಲ; ತಪ್ಪಿಸಿಕೊಳ್ಳಬೇಕಿಲ್ಲ. ಹೆಂಗಸನ್ನು ಕೊಲ್ಲುವುದು ಪಾಪವೆಂದುಕೊಳ್ಳಬೇಕಾಗಿಲ್ಲ. ಮೂಲಭೂತವಾದ ಪರ್ಯಾಲೋಚನೆ ಇಲ್ಲಿದೆ. ಆದರ್ಶ ಕ್ಷತ್ರಿಯನು ನರವ್ಯಕ್ತಿಯಾಗಿ, ರಾಜಕುಮಾರನಾಗಿ, ರಾಜನಾಗಿ – ಎಂಥವನಾಗಬೇಕು ಎಂಬ ಚಿತ್ರವನ್ನು ಕವಿ ಇಲ್ಲಿ ಚಿತ್ರಿಸುತ್ತಾನೆ. ಸಾಮಾನ್ಯ ಮಾನವನ ದೌರ್ಬಲ್ಯಗಳನ್ನೂ ನ್ಯೂನತೆಗಳನ್ನೂ ಸಹಜವಾಗಿ ತುಳಿದು ನಿಂತು ಅವನು ಧರ್ಮಸಾಧನೆ ಮಾಡತಕ್ಕದ್ದು. ಅದರಿಂದ ತನಗೇನು ಕಷ್ಟನಷ್ಟ ಸಂಭವಿಸಿದರೂ ಇತರರ ಬೇಡಿಕೆಗಳನ್ನು ನೆರವೇರಿಸಬೇಕಾಗಿರುವಾಗ, ಇಂಥ ಕಾರ್ಯದ ಪರಿಣಾಮಗಳಿಂದ ತಪ್ಪಿಸಿ ಕೊಳ್ಳಲು ಶಕ್ಯವಾಗಿದ್ದರೂ, ಆ ಪ್ರಯೋಜನವನ್ನು ದುಡಿಸಿಕೊಳ್ಳುವುದಿಲ್ಲ. ಸ್ವಂತ ಜೀವವನ್ನು ಬಿಟ್ಟಾನು; ಎಲ್ಲರನ್ನೂ ಕೊಂದಾನು; ರಾಮನು 'ಅಪವಾದ ಭಯ ಭೀತಃ' ಎಂದರೆ, ಅವನಿಗಿರುವ ಭಯ ಅಪವಾದ. ಹೀಗಿರುವುದರಿಂದ

'ಕಿಂ ಪುನಃ ಜನಕಾತ್ಮಜಾಂ' – ಜಾನಕಿಗಾಗಿ ಅಪವಾದಕ್ಕೆ ಸಿಕ್ಕಿಯಾನೆ? ಉತ್ತರ ಕಾಂಡದಲ್ಲಿ ತನ್ನ ತೀರ್ಮಾನಕ್ಕೆ ವಿರೋಧವಾಗಿ ಸೋದರರು ಯಾವ ಒಂದು ಮಾತನ್ನೂ ಆಡತಕ್ಕದ್ದಲ್ಲ ಎಂದು ಅಪ್ಪಣೆ ಮಾಡುತ್ತಾನೆ. ಇಂಥ ಮನುಷ್ಯನ ಜೊತೆಯಲ್ಲಿ ಬಾಳುವುದು ಕಷ್ಟವೇ. ಆದರೆ ಅವನು ರಚಿತವಾಗಿರುವುದು ಹಾಗೆ. ಹಾಗಿದ್ದರೆ ಮಾತ್ರ ಯಾವ ಕಾರ್ಯವನ್ನಾದರೂ ಅವನು ಮಾಡಬಲ್ಲ. ತಾನೇ ಸಾಯಲು ಸಿದ್ಧನಿರುವಾಗ ಸೀತೆಯನ್ನು ತ್ಯಾಗಮಾಡಲಾರನೆ?

> ಸಂಶ್ರುತ್ಯ ಚ ನ ಶಕ್ಷ್ಯಾಮಿ ಜೀವಮಾನಃ ಪ್ರತಿಶ್ರವಮ್
> ಮುನೀನಾಮನ್ಯಥಾ ಕರ್ತುಂ ಸತ್ಯಮಿಷ್ಟಂ ಹಿ ಮೇ ಸದಾ
> ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸಲಕ್ಷ್ಮಣಾಮ್
> ನತು ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ
> ತದವಶ್ಯಂ ಮಯಾಕಾರ್ಯಮೃಷೀಣಾಂ ಪರಿಪಾಲನಮ್
> ಅನುಕ್ತೇನಾಪಿ ವೈದೇಹಿ ಪ್ರತಿಜ್ಞಾಯ ತು ಕಿಂ ಪುನಃ

–ಎಂದಿದ್ದ. ತಮ್ಮಂದಿರ ಮೇಲೆ ಆಣೆ[೪೯]ಯಿಟ್ಟು ತನ್ನ ತೀರ್ಮಾನಕ್ಕೆ ಯಾವ ವಾದವನ್ನೂ ಮಾಡಕೂಡದೆಂದ.

ಕಡೆಯ ಸಂದರ್ಭ ಒದಗಿಬಂದುದು ರಾಮನ ಪ್ರಸ್ಥಾನಸಮಯಕ್ಕೆ ಸ್ವಲ್ಪ ಮುಂಚೆ. ಇದು ಕೃತಿಯ ಸಂಕೇತದಂತಿದೆ. ಕಾಲನೊಡನೆ ಅವನು ಮಾತನಾಡುತ್ತಿದ್ದಾನೆ. ಒಳಗೆ ಮಾತಿನಲ್ಲಿ ತೊಡಗಿರುವಾಗ ಯಾರೂ ತಮ್ಮ ಏಕಾಂತ ಭಂಗಮಾಡಬಾರದೆಂದೂ ಯಾರು ಬಾಗಿಲಿಗೆ ಬಂದರೂ ಒಳಕ್ಕೆ ಬಿಡಬಾರದೆಂದೂ ಕಾಲನು ಸಲಹೆಮಾಡಿದಂತೆ ಲಕ್ಷ್ಮಣನಿಗೆ ಅಪ್ಪಣೆ ನೀಡುತ್ತಾನೆ.ಈ ನಿರ್ದೇಶವನ್ನು ಮೀರಿ ತಪ್ಪು ಮಾಡಿದವರು ಪ್ರಾಣದಂಡ ತೆರಬೇಕಾಗುತ್ತದೆ. ಬಾಗಿಲಲ್ಲಿ ನಿಂತು ಇದನ್ನು ಪರಿಪಾಲಿಸುವಂತೆ ಲಕ್ಷ್ಮಣನಿಗೆ ಹೇಳಿರುತ್ತಾನೆ. ಕಡೆಯ ಕ್ಷಣದಲ್ಲಿ ಬಾಗಿಲ ಬಳಿಗೆ ದುರ್ವಾಸನು ಬರುತ್ತಾನೆ. ಈತ ಯಾವಾಗಲೂ ಕಷ್ಟಕರ ಪ್ರಸಂಗವನ್ನು ತಂದೊಡ್ಡುವವನೇ; ನಿವಾರಿಸಲಾಗದವನು. ಆ ನಿಮಿಷದಲ್ಲಿ ತಾನು ರಾಮನನ್ನು ನೋಡಬೇಕಾಗಿದೆಯೆಂದು ಒತ್ತಾಯಮಾಡುತ್ತಾನೆ. ತನ್ನನ್ನು ಬಿಡದಿದ್ದರೆ ಶಾಪಕೊಡುವುದಾಗಿ ಹೇಳುತ್ತಾನೆ. ತನ್ನೊಬ್ಬನಿಗೇ ಅಲ್ಲ, ಅಯೋಧ್ಯೆಗೂ ಎಲ್ಲಕ್ಕೂ ಇದು ಉತ್ಕಟ ಪರಿಸ್ಥಿತಿ. ಒಟ್ಟು ಎಲ್ಲವೂ ನಾಶವಾಗುವುದಕ್ಕಿಂತ ತನ್ನೊಬ್ಬನ

---

೪೯ ಈ ಆಣೆಗಳು ಕೆಲವೇಳೆ ಭುಜದ ಮೇಲೆ ಅಥವಾ ಪಾದದ ಮೇಲೆ(!) ಇಟ್ಟುಕೊಂಡವು.

ಜೀವಕ್ಕೆ ಹಾನಿ ಬಂದರೆ ಬರಲಿ ಎಂದು ಲಕ್ಷ್ಮಣನು ಧಾರಾಳವಹಿಸಿ ತನ್ನನ್ನು ಅಪಾಯಕ್ಕೆ ಈಡು ಮಾಡಿಕೊಳ್ಳುತ್ತಾನೆ. 'ಏಕಸ್ಯ ಮರಣಂ ಮೇಽಸ್ತು ಮಾ ಭೂತ್ ಸರ್ವ ವಿನಾಶನಂ' 'ಸಾವು ಬರುವುದಾದರೆ ನಾನೊಬ್ಬನು ಸಾಯುತ್ತೇನೆ; ಸರ್ವವೂ ನಾಶವಾಗದಿರಲಿ' ಎಂಬುದು ಲಕ್ಷ್ಮಣನ ತೀರ್ಮಾನ. ಇಲ್ಲಿ ಒಂದು ಶೀಲದ, ಒಂದು ಸಂಸ್ಕೃತಿ ಪಕ್ಷಪಾತದ ಪರಮಾಭಿವ್ಯಕ್ತಿ ಕಾಣುತ್ತದೆ. ಲಕ್ಷ್ಮಣನ ಆತ್ಮ ಎಷ್ಟು ಉನ್ನತ ಕಲ್ಪನೆಯದೆಂದು ಇದು ತೋರಿಸುತ್ತದೆ. ರಾಮ ಲಕ್ಷ್ಮಣರು ನಡವಳಿಕೆಯ ಮೇಲ್ಪಂಕ್ತಿಗಳೆಂದು ವಿಶದ ಪಡುತ್ತದೆ. ಹಾಗೇ ಒಬ್ಬ ಮಹಾಕ್ಷತ್ರಿಯನ ಗುಣಗಣನೆ ಯಾವುದೆಂಬುದನ್ನು ರಾಮಾಯಣ ಪ್ರಶಂಸಿಸುತ್ತದೆಯೊ ಅದಕ್ಕೆ ಇನ್ನೊಬ್ಬ ಪ್ರತಿನಿಧಿ ಭರತನಾಗುತ್ತಾನೆ.

* * * *

## ಅಧ್ಯಾಯ ೫

# ಕೆಲವು ವಿಶೇಷ ಪ್ರಸಂಗಗಳು

ರಾಮಾಯಣದ ಕೆಲವು ಉಪಪ್ರಸಂಗಗಳನ್ನು ಮುಂದೆ ಪರಿಶೀಲಿಸಬಹುದು.

### ೧ ಅಹಲ್ಯೆ

ಅಹಲ್ಯೆಯ ಕತೆಯು ಒಂದು ಪಾಠ ರಾಮಾಯಣದಲ್ಲಿದೆ. ವೇದಕಾಲಗಳಿಂದಲೂ ಇಂದ್ರನನ್ನು ಅಹಲ್ಯೆಯ ಪ್ರಿಯ (‘ಜಾರಾ’) ಎಂದು ವರ್ಣಿಸಿದ್ದಾರೆ. ಅಹಲ್ಯಾ ಎಂಬ ಮಾತೇ ಅನೇಕ ವಿಧವಾಗಿ ವ್ಯಾಖ್ಯಾನಗೊಂಡಿದೆ. ‘ಸೀತೆ’ ನೇಗಿಲ ಸಾಲಾದರೆ ‘ಅಹಲ್ಯೆ’ ನೇಗಿಲಾಡದ, ಉಳಲಾಗದಿರುವ, ಇನ್ನೂ ಉಳದ ಭೂಮಿ. ರಾಮನು ಆಕೆಯನ್ನು ಉದ್ಧಾರ ಮಾಡಿದ ಪ್ರಸಂಗವನ್ನು ಕೆಲವರು ವ್ಯಾಖ್ಯಾನಕಾರರು ಉಳಮೆಗೆ ಬಾರದಿರುವ ಭೂಮಿಯನ್ನು ಬೇಸಾಯಕ್ಕೆ ತಂದವನು ಹಲಧರ ಎಂದೂ ಪ್ರತಿಪಾದಿಸಿದ್ದಾರೆ. ರಾಮಾಯಣದಲ್ಲಿ ಆಕೆ ಗೌತಮ ಋಷಿಯ ಹೆಂಡತಿ. ಅವನ ತಪಸ್ಸು ದೇವತೆಗಳಿಗೆ ಕಳವಳವನ್ನು ತಂದಿದೆ. ಅಹಲ್ಯೆ ಗೌತಮರು ತುಂಬಾ ಪ್ರೀತಿಯ ದಂಪತಿಗಳಾಗಿದ್ದಿರಬೇಕು. ಇಲ್ಲಿ ವರ್ಣಿಸಿರುವ ಕಥಾ ಪ್ರಸಂಗಕ್ಕೆ ಬಹು ಮುಂಚೆಯೇ ಒಬ್ಬ ಮಗನು ಹುಟ್ಟಿದ್ದ. ಈಗ ಆತನು ಜನಕನ ಆಸ್ಥಾನದಲ್ಲಿ ಮುಖ್ಯ ಪುರೋಹಿತನಾಗಿರುವ ಶತಾನಂದ. ವಿಶ್ವಾಮಿತ್ರನ ಯಾಗ ಮುಗಿದ ಮೇಲೆ ಋಷಿ ರಾಮಲಕ್ಷ್ಮಣರನ್ನು ಮಿಥಿಲೆಗೆ ಕರೆದೊಯ್ಯುತ್ತಾನೆ. ಜನಕನ ರಾಜಧಾನಿಯಲ್ಲಿ ಮಹಾಯಾಗವೊಂದು ನೆರವೇರುತ್ತಿದೆಯೆಂದೂ ಅಲ್ಲಿಗೆ ತಾವು ಹೋಗುತ್ತಿದ್ದೇವೆಂದೂ ಬ್ರಾಹ್ಮಣರು ಹೇಳುತ್ತಾರೆ. ಊರಿನ ಎಲ್ಲೆ ಕಟ್ಟಿಗೆ ಸುಮಾರು ಬರುವ ಹೊತ್ತಿಗೆ ದೂರದಲ್ಲಿ ಜನಕನ ಪಟ್ಟಣ ತುಂಬ ಚೆಲುವಾಗಿ ಕಾಣುತ್ತದೆ. ಎಲ್ಲೆ ಕಟ್ಟಿನ ಪ್ರದೇಶದಲ್ಲಿ ಒಂದು ಹಾಳುತೋಟ ಕಾಣುತ್ತದೆ – ಪುರಾತನವಾದುದೆಂಬಂತೆ; ಮನುಷ್ಯವ್ಯಕ್ತಿಗಳಾರೂ ಅಲ್ಲಿ ಈಗ ವಾಸಿಸುತ್ತಿಲ್ಲವೆಂಬಂತೆ. ನೋಟಕ್ಕೆ ಚೆಲು. ಇದು ಯಾರ ಆಶ್ರಮ ಎಂದು ರಾಮನು ವಿಶ್ವಾಮಿತ್ರನನ್ನು ಕೇಳುತ್ತಾನೆ. ಎಷ್ಟು ವ್ಯಸ್ತ; ಎಷ್ಟು ಪಾಳಾಗಿ ಕಾಣುತ್ತದೆ ಎನ್ನುತ್ತಾನೆ. ಉತ್ತರವಾಗಿ ಹೆಂಡತಿಯ

ಮೇಲೆ ಕೋಪಗೊಂಡು ಅದನ್ನು ಬಿಟ್ಟು ಹೋದವನೊಬ್ಬನದು ಈ ಆಶ್ರಮವೆಂದು ವಿಶ್ವಾಮಿತ್ರನು ತಿಳಿಸುತ್ತಾನೆ. ಆಶ್ರಮ ಮುನಿ ಗೌತಮನದು. ಹೆಂಡತಿ ಅಹಲ್ಯೆಯೊಡನೆ ಮುನಿ ಉಗ್ರ ತಪಶ್ಚರ್ಯೆಯನ್ನು ನಡಸುತ್ತಿದ್ದಾಗ ಒಂದು ದಿನ ಬೆಳಿಗ್ಗೆ ಋಷಿ ಇಲ್ಲದ ಅವಕಾಶವನ್ನು ಬಳಸಿಕೊಂಡು ಇಂದ್ರನು ಗೌತಮವೇಷವನ್ನು ಧರಿಸಿ ಹೋಗಿ ಅಹಲ್ಯೆಯನ್ನು ಮಾತನಾಡಿಸಿ ಅವಳ ಸಂಗವನ್ನು ಪಡೆಯಲು ತನಗೆ ಅತೀವ ಅಭಿಲಾಷೆಯಿದೆಯೆಂದು ತಿಳಿಸಿದನು. ಅಹಲ್ಯೆಗೆ ಸ್ಪಷ್ಟವಾಗಿ ವೇಷ ತಿಳಿದು ಬಂದಿತು. ಆದರೆ ಇಂದ್ರನೊಡನೆಯ ಸಂಬಂಧದ ಅವಕಾಶಕ್ಕಾಗಿ ಮನಸ್ಸಿನಲ್ಲಿ ಆಸೆ ಉಕ್ಕಿತು. 'ಮತಿಂ ಚಕಾರ ದುರ್ಮೇಧಾ ದೇವರಾಜ ಕುತೂಹಲಾತ್' ಎಂಬ ವಾಕ್ಯವಿದೆ. ಎಂದರೆ, ಅವಳ ಶೀಲಚ್ಯುತಿ, ಅವಳ ಇಚ್ಛಾಪೂರ್ತಿಯಿಂದಲೆ ಆದದ್ದು. ಇಬ್ಬರೂ ತೃಪ್ತಿಗೊಂಡರು. ಕಾಮತೃಪ್ತಿಯಾಯಿತು. ತೃಪ್ತನಾಗಿರುವ ಇಂದ್ರನು ಆ ಬಳಿಕ ಬೇಗ ಅಲ್ಲಿಂದ ಹೊರಟು ಹೋಗಬೇಕೆಂದೂ ತನಗಾಗಲಿ ಅವನಿಗಾಗಲಿ ಗೌರವಭಂಗ ಆಗದಿರಲೆಂದೂ ಕೇಳಿಕೊಂಡು 'ಕೃತಾರ್ಥೋಽಸಿ ಸುರಶ್ರೇಷ್ಠ ಗಚ್ಛಶೀಘ್ರ ಇತಃ ಪ್ರಭೋ; ಆತ್ಮಾನಂ ಮಾಂ ಚ ದೇವೇಶ ಸರ್ವದಾ ರಕ್ಷ ಮಾನದಾ' ಎನ್ನುತ್ತಾಳೆ. ಅವಳ ಮಾನ ಕಳೆಯಲು ಕಾರಣವಾಗಿದ್ದ ಅವನೇ ಅವಳ ಮಾನವನ್ನು ರಕ್ಷಿಸಬೇಕಾದವನೆಂಬಂತೆ ಅವನನ್ನು ಬೇಡಿಕೊಳ್ಳುತ್ತಾಳೆ! ಬಹುಶಃ 'ಓ ಮಾನ್ಯನೇ' ಎಂದು ಸಂಬೋಧಿಸುವ ಒಂದು ಪ್ರಕಾರ ಇದು ಎನ್ನಿಸುತ್ತದೆ.

ಆದರೆ, ಸಂದರ್ಭ ಹೀಗೆ ಬೆಳೆಯುತ್ತದೆ. ಇಂದ್ರನು ಆಶ್ರಮದಿಂದ ಹೊರಕ್ಕೆ ಹೋಗುತ್ತಿದ್ದ ಹಾಗೆಯೇ ಯಾವ ಗೌತಮನ ಕಣ್ಣಿಗೆ ಬೀಳಬಾರದೆಂದು ಯತ್ನಿಸಿ ಇಂದ್ರನು ಭಯಪಟ್ಟಿದ್ದನೊ ಆತನು ಅವನ ಎದುರಿಗೇ ಬಂದು ನಿಂತನು. ಋಷಿಗೆ ಸ್ನಾನವಾಗಿತ್ತು; ಮುಖದಲ್ಲಿ ತೇಜಸ್ಸಿತ್ತು. ತನ್ನ ಕುಟೀರದ ಕಡೆ ಬರುತ್ತಿದ್ದ. ಕೈಯಲ್ಲಿ ದರ್ಭೆ, ಸಮಿತ್ತು ಇತ್ತು. ಈ ಪೂಜಾ ಸಾಮಗ್ರಿಗಳನ್ನು ಅವನು ಕೈಯಲ್ಲಿ ಹಿಡಿದಿದ್ದ. ಇಂದ್ರನು ಭಯವಿಹ್ವಲನಾದ. ನಡುಕ ಆರಂಭವಾಯಿತು. ಮುಖ ಬಣ್ಣಗೆಟ್ಟಿತು. ಸಹಸ್ರಾಕ್ಷನು ತನ್ನ ವೇಷದಲ್ಲಿರುವುದನ್ನು ಋಷಿ ಕಂಡು ತನ್ನ ಆಶ್ರಮದೊಳಗೆ ನಡೆದಿರಬಲ್ಲ ಅತ್ಯಾಚಾರವನ್ನು ಸುಲಭವಾಗಿ ಅನುಮಾನಿಸಬಲ್ಲವನಾಗಿದ್ದನು. ಋಷಿಗೆ ಕೋಪವುಂಟಾಗುತ್ತದೆ. 'ವಿಫಲೋಭವ[೧]'

೧ ಕನಿಕರ ತರುವ ದುಃಸ್ಥಿತಿಯಲ್ಲಿ ಇಂದ್ರನು ತನ್ನ ರಾಜಧಾನಿಗೆ ಹಿಂದಿರುಗಿ ದೇವಋಷಿಗಳಿಗೆ ತನ್ನ ಕತೆಯನ್ನು ಹೇಳುತ್ತಾನೆ. ಮಂತ್ರತಂತ್ರದಿಂದ ಅವನಿಗೆ ಮೇಷವೃಷಣವನ್ನು ತಂದು ಋಷಿಗಳು ಚಿಕಿತ್ಸೆಮಾಡುತ್ತಾರೆ. Plastic Surgery ಎಂಬಂತಿದೆ ಆ ಕಾರ್ಯ.

'ನಿನ್ನ ಪುರುಷತ್ವ ವ್ಯರ್ಥವಾಗಲಿ' ಎಂದು ಅವನಿಗೆ ಶಾಪವಿತ್ತನು. ತನ್ನ ಗುಡಿಸಿಲೊಳಕ್ಕೆ ಹೋಗಿ ಗೌತಮನು ಅಹಲ್ಯೆಗೂ ಶಾಪ ಕೊಡುತ್ತಾನೆ :

ಇಹ ವರ್ಷ ಸಹಸ್ರಾಣಿ ಬಹೂನಿ ತ್ವಂ ನಿವತ್ಸ್ಯಸಿ
ವಾಯುಭಕ್ಷಾ, ನಿರಾಹಾರಾ, ತಪ್ಯಂತೀ ಭಸ್ಮ ಶಾಯಿನೀ
ಅದೃಶ್ಯಾ ಸರ್ವಭೂತಾನಾಂ ಆಶ್ರಮೇS ಸ್ಮಿನ್ ನಿವತ್ಸ್ಯಸಿ

'ಸಾವಿರ ವರ್ಷಗಳ ಕಾಲ ಯಾರ ಗುರುತಿಗೂ ಸಿಕ್ಕದೆ ಯಾರಿಗೂ ಕಾಣದೆ ನೀನಿಲ್ಲಿರು; ಆಹಾರವಿಲ್ಲದೆ ಉಪವಾಸ ಪಶ್ಚಾತ್ತಾಪತಪ್ತಳಾಗಿ ಭಸ್ಮವೇ ಹಾಸಿಗೆಯಾಗಿ ಪ್ರಾಣಿಯೊಂದರ ಕಣ್ಣಿಗೂ ಬೀಳದೆ' ಎಂಬುದು ಶಾಪ. ಕಲ್ಲಾಗು ಎಂದಲ್ಲ. ಶಾಪದ ಸಮಯ ದಶರಥನ ಮಗ ರಾಮನು ಇಲ್ಲಿಗೆ ಬರುವವರೆಗೂ. (ಇದೆಲ್ಲ ನಿಯತಿಯಂತೆ ಇದೆ!) ಯಾವ ಲೋಭಮೋಹಗಳನ್ನೂ ತಾಳದೆ ಆತನಿಗೆ ಆತಿಥ್ಯವನ್ನು ನೀಡಿದರೆ ನೀನು ಪುನಃ ಶುದ್ಧಳಾಗುತ್ತೀಯೆ; ಪುನಃ ನನ್ನ ಸ್ವೀಕಾರಕ್ಕೆ ಯೋಗ್ಯಳಾಗುತ್ತೀಯೆ – ಎಂದವನೇ ಆಶ್ರಮವನ್ನು ಬಿಟ್ಟು ತಪಸ್ಸಿಗಾಗಿ ಹೊರಟುಹೋದನು – ಎಂದ.

ಆಶ್ರಮದ ಕತೆಯನ್ನು ವಿಶ್ವಾಮಿತ್ರನು ಹೇಳಿದುದು ಹೀಗೆ. ಅವಳ ಶಾಪವಿಮೋಚನೆಯ ಕಾಲ ಈಗ ಉಂಟಾಗಿದೆ; ಆಶ್ರಮದೊಳಕ್ಕೆ ಹೋಗೋಣ; ಅಹಲ್ಯೆ ಶುದ್ಧಳಾಗಿದ್ದಾಳೆ; ಬಹುಕಾಲ ತಪಸ್ಸು ಮಾಡಿ ದೇಹವನ್ನು ದಂಡಿಸಿ ತೇಜಸ್ಸನ್ನು ಪಡೆದು ಶುಚಿಯಾಗಿದ್ದಾಳೆ; ತಾರಯ್ಯೈನಾಂ ಮಹಾಭಾಗಾಂ ಅಹಲ್ಯಾಂ ದೇವರೂಪಿಣೀಂ – 'ಈಕೆಗೆ ಈಗ ದಿವ್ಯರೂಪ ಬಂದಿದೆ; ಈ ಮಹಾತ್ಮಳನ್ನು ಉದ್ಧಾರಮಾಡು' ಎಂದನು. ಸಜ್ಜನೆಯಾಗಿರುವ ಆ ಮಹಿಳೆಯನ್ನು ಅವರು ಕಂಡರು. ತಪಸ್ಸಿಂದ ಶುದ್ಧಳಾಗಿರುವ ಅವಳ ಮೂರ್ತಿತ್ವ ಕಾಣಿಸಿತು. ಇಷ್ಟು ಕಾಲವೂ ಚಂದ್ರನಿಗೆ ಹಿಮವೂ ಅಗ್ನಿಗೆ ಹೊಗೆಯೊ ಸೂರ್ಯನಿಗೆ ಮೋಡವೂ ಕವಿದಂತಿದ್ದಳು ಆಕೆ. ಆ ದೇಹದ ಕಾಂತಿಯೂ ಪ್ರಭೆಯೂ ಹೊರಗಿನ ಪ್ರಪಂಚಕ್ಕೆ ಕಾಣಿಸುವುದು ಕಷ್ಟವಾಗಿತ್ತು. ಅವುಗಳ ಬಗೆ ಪೂರ್ಣಚಂದ್ರನ ಹಾಗೆ ಅಥವಾ ಬೆಂಕಿಯ ಉರಿಯ ಹೊಳಪಿನಂತೆ ಅಥವಾ ಸೂರ್ಯನಂತೆ; ಈಗ ನಕ್ಷತ್ರದಂತೆ ಆಕೆ ಕಾಂತಿಗೊಂಡು ಕಾಣಿಸುತ್ತಿದ್ದಳು. ಈವರೆಗೂ ಇತರರ ಕಣ್ಣಿಗೆ ಅವಳು ಕಾಣಿಸದಾಗಿದ್ದಳು. ಯಾರ ಕಣ್ಣಿಗೂ ಬೀಳದಂತೆ ಅವಳಿರಬೇಕಿತ್ತು : 'ಯಾವದ್ ರಾಮಸ್ಯ ದರ್ಶನಂ' (ರಾಮನ ದರ್ಶನವಾಗುವವರೆಗೆ) ನಡೆದಿತ್ತು ಶಾಪ. ರಾಮನು ಆ ಸ್ಥಳಕ್ಕೆ ಹೋಗಿ ಅವಳ ಪಾದವನ್ನು ಮುಟ್ಟಿ ಆಕೆಗೆ ನಮಸ್ಕರಿಸಿದನು. ಲಕ್ಷ್ಮಣನೂ ಹಾಗೆಯೇ ಹಾಗೆಯೇ ಮಾಡಿದನು :

ರಾಘವೌ ಗು ತಥಸ್ತಸ್ಯಾಃ ಪಾದೌ ಜಗೃಹತುಸ್ತದಾ
ಸ್ಮರಂತೀ ಗೌತಮವಚಃ ಪ್ರತಿಜಗ್ರಾಹ ಸಾ ಚ ತೌ
ಪಾದ್ಯಂ ಅರ್ಘ್ಯಂ ತಥಾತಿಥ್ಯಂ ಚಕಾರ ಸುಸಮಾಹಿತಾ....
ತಪೋಬಲ ವಿಶುದ್ಧಾಂಗೀಂ ಗೌತಮಸ್ಯ ವಶಾನುಗಾಂ
ಗೌತಮೋऽಪಿ ಮಹಾತೇಜಾ ಅಹಲ್ಯಾ ಸಹಿತಃ ಸುಖೀ

ಗೌತಮನ ಮಾತುಗಳು ಆಕೆಯ ನೆನಪಿಗೆ ಬಂದವು. ಅಹಲ್ಯೆಯು ಅವರಿಗೆ ಅರ್ಘ್ಯಪಾದ್ಯಗಳನ್ನು ಕೊಟ್ಟು ಮನಸ್ಸಿನ ನೆಮ್ಮದಿಯಿಂದ ಅವರಿಗೆ ಆತಿಥ್ಯವನ್ನು ಕೊಟ್ಟಳು. ರಾಮನು ಅದನ್ನು ಸ್ವೀಕರಿಸುತ್ತಾನೆ. ಈ ಘಟನೆಗೆ ದೇವಲೋಕವೇ ಸಂತೋಷಪಡುತ್ತದೆ. ಇದು ಆಶ್ರಮಕ್ಕೆ ಪುನಃ ಗೌತಮನು ಬರುವಂತೆ ಮಾಡುತ್ತದೆ. ಋಷಿ, ಋಷಿಪತ್ನಿ ಮನಸ್ಸಿನಲ್ಲಿ ಸಂತೋಷಪಡುತ್ತಾರೆ. ತಪಸ್ಸಿನ ಮೂಲಕ ಅಹಲ್ಯೆ ಪರಿಶುದ್ಧಳಾದುದರಿಂದ ಅವರು ಪುನಃ ಆಮೇಲೆ ಒಂದಾಗುತ್ತಾರೆ. ಇಬ್ಬರೂ ಕೂಡಿ ಆತಿಥ್ಯವನ್ನು ಅರ್ಪಿಸುತ್ತಾರೆ. ವಿಶ್ವಾಮಿತ್ರನೂ ರಾಮಲಕ್ಷ್ಮಣರೂ ಮಿಥಿಲೆಯ ಕಡೆಗೆ ನಡೆದುಹೋಗುತ್ತಾರೆ.

ಇಲ್ಲಿ ವರ್ಣಿಸಿರುವಂತೆ ಕಥಾವರ್ಣನೆ ಮುಂದೆ ಬೆಳೆದ ಕತೆಯ ಯಾವ ಪಾಠಾಂತರಕ್ಕೂ ಮಾನವದೃಷ್ಟಿಯಿಂದಲಾಗಲಿ ಗುಣದಲ್ಲಿಯಾಗಲಿ ಕಡಮೆಯ ಚೆಲುವಿನದಲ್ಲ. ಮುಂದಿನ ಕತೆಗಳಲ್ಲಿ ಅಹಲ್ಯೆಯನ್ನು ಕಲ್ಲಾಗಿ ಮಾರ್ಪಡಿಸುತ್ತಾರೆ; ರಾಮನ ಪಾದ ಅದನ್ನು ತಾಕುವವರೆಗೂ. ಇನ್ನೂ ಮುಂದಿನವರು 'ಒದೆಯುವವರೆಗೂ' ಎನ್ನುತ್ತಾರೆ. ಆಕೆ ಶಾಪಗ್ರಸ್ತಳಾಗಿಯೇ ಇದ್ದಳು ; ತರುವಾಯ ಅಹಲ್ಯೆ ಮನುಷ್ಯಳಾಗಿ ಪುನಃ ರೂಪಾಂತರಗೊಂಡಳು ಎಂಬಂತಿದೆ. ಆಶ್ರಮದ ಕತೆಯನ್ನು ಕೇಳಲು ರಾಮನ ಕುತೂಹಲ ಮತ್ತು ಪ್ರಶ್ನೆ ; ವಿಶ್ವಾಮಿತ್ರನ ಪ್ರತಿಪಾದನೆ; ತಪ್ಪು ಮಾಡಿದ ಅಹಲ್ಯೆಯ ಕತೆಯನ್ನು ಕೇಳಿದ ಒಡನೆಯೇ ಸಹಾನುಭೂತಿ ಉಂಟುಮಾಡುವಂತಿವೆ. ಎಷ್ಟೋ ದೀರ್ಘಕಾಲ ಏಕಾಂಗಿಯಾಗಿ ಗಂಡನಿಂದ ವಿಮುಕ್ತಳಾಗಿ ಯಾರ ಕಣ್ಣಿಗೂ ಬೀಳದೆ ಲೋಕವೆಲ್ಲ ಉಪೇಕ್ಷೆಗೊಂಡು ಶಾಪಗೊಂಡಿದ್ದವಳು ತಪ್ಪಿಗೆ ಅತಿಯಾದ ಬೆಲೆಯನ್ನು ತೆತ್ತಾಗಿದೆ. ಸ್ವಂತ ಬದುಕಿನಲ್ಲಿ ವಿಶ್ವಾಮಿತ್ರನೂ ತಪ್ಪುಮಾಡಿದವನೇ: ಆದುದರಿಂದ ಮನುಷ್ಯ ದೇಹ ಎಷ್ಟು ದುರ್ಬಲವಾದುದು ಎಂದು ಅರಿತವನಾದುದರಿಂದ ರಾಮನಿಗೆ 'ತಾರಯೈನಾಂ' ಎಂದುದಲ್ಲದೆ 'ಮಹಾಭಾಗಾಂ' ಎಂದು ಕೂಡ ಹೇಳಿದ....

ಈ ಸಂತೋಷಕರ ಪರಿಣಾಮ ಪ್ರಸಂಗಕ್ಕೆ ಸಂಬಂಧಿಸಿದ ಮುಂದಿನ ಒಂದು ಸಣ್ಣ ಸಂಗತಿ ಇನ್ನಷ್ಟು ಭಾವ ತುಂಬುವ ಸಂದರ್ಭ. ಜನಕನ

ಯಾಗಶಾಲೆಯಲ್ಲಿ ಅಹಲ್ಯಾಗೌತಮರ ಮಗನಾದ ಶತಾನಂದನು ಕೇಳುವ ಪ್ರಶ್ನೆ ಅದು. ಈ ಸುದ್ದಿಯನ್ನು ಕೇಳಿ ಅವನಿಗೆ ಬಹಳ ಸಂತೋಷವಾಗುತ್ತದೆ. ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ತನ್ನ ತಂದೆಯ ಆಶ್ರಮದೊಳಕ್ಕೆ ಕರೆದುಕೊಂಡು ಹೋಗಿದ್ದನೆ? ತಪಸ್ಸಿನ ಕಾಲ ಮುಗಿಯುವಂತೆ ರಾಮನು ನನ್ನ ತಾಯಿಯನ್ನು ಕಂಡನೆ? ಅವರಿಗೆ ಅನ್ನಪಾನಗಳನ್ನೂ ಸತ್ಕಾರವನ್ನೂ ತಾಯಿ ಸಲ್ಲಿಸಿದಳೆ? ಆಕೆಯು ಕೆಟ್ಟ ಸಂದರ್ಭದ ಕತೆಯನ್ನೂ ಇಂದ್ರನ ದುಷ್ಕರ್ಮವನ್ನೂ ರಾಮನು ಕೇಳಿದನೆ? ನನ್ನ ತಂದೆ ನನ್ನ ತಾಯಿಯನ್ನು ಪುನಃ ಸ್ವೀಕರಿಸಿದನೆ? ಆತನು ಆಕೆಯನ್ನು ಕ್ಷಮಿಸಿದನೆ? ಸಮಾಧಾನದಿಂದ ಆಕೆಯನ್ನು ಪುನಃ ಒಪ್ಪಿಕೊಂಡನೆ? – ಎಂಬವು ಶತಾನಂದನ ಪ್ರಶ್ನೆಗಳು. ಇವರು ಕೊಟ್ಟ ಸುದ್ದಿಯಿಂದ ಶತಾನಂದನಿಗೆ ನಿಜವಾಗಿ ಸಂತೋಷವಾಯಿತು. ಅಹಲ್ಯೆ ಕತೆಯ ಈ ಪಾಠಕ್ಕೆ ನಮ್ಮ ಮನಸ್ಸು ಕೃತಜ್ಞವಾಗಿದೆ.

## ೨. ಭಾರದ್ವಾಜಾತಿಥ್ಯ

ಗುಹನನ್ನು ಕಂಡಾದ ಮೇಲೆ ಭರತನೂ ಅವನ ಸೈನ್ಯದವರೂ ಭರದ್ವಾಜಾಶ್ರಮವನ್ನು ಮುಟ್ಟುತ್ತಾರೆ. ತನ್ನ ಹಿಂದೆ ಬಂದಿದ್ದವರನ್ನು ಆಶ್ರಮದಿಂದ ಸ್ವಲ್ಪ ದೂರದಲ್ಲಿ ಉಳಿಸಿ ರಾಜವೇಷ ವಿಶೇಷವನ್ನೂ ಶಸ್ತ್ರಗಳನ್ನೂ ಕಳಚಿ ಪುರೋಹಿತನನ್ನು ಮುಂದಿಟ್ಟುಕೊಂಡು ಎರಡು ವಸ್ತ್ರಗಳಲ್ಲಿ ಕಾಲ್ನಡಿಗೆಯಲ್ಲಿ ಆಶ್ರಮವನ್ನು ಭರತನು ಪ್ರವೇಶಿಸುತ್ತಾನೆ. ದಶರಥನು ಸಾವೊಂದನ್ನು ಬಿಟ್ಟು ಉಳಿದೆಲ್ಲ ಸಂಗತಿಗಳನ್ನೂ ಕುರಿತು ಭರತನೊಡನೆ ಋಷಿ ಮಾತನಾಡುತ್ತಾನೆ. ಪ್ರತಿಯಾಗಿ ಆಶ್ರಮದಲ್ಲಿರುವ ಎಲ್ಲರ ಯೋಗಕ್ಷೇಮವನ್ನೂ ಇವರು ವಿಚಾರಿಸುತ್ತಾರೆ. ಭರದ್ವಾಜನಿಗೆ ರಾಮನಲ್ಲಿ ವಿಶೇಷ ಪ್ರೀತಿ, ವಿಶ್ವಾಸ. ರಾಜ್ಯವನ್ನು ಆಳಿಕೊಂಡಿರಬೇಕಾದ ಕಾಲದಲ್ಲಿ ಭರತನ ಈ ಪ್ರಯಾಣದ ಉದ್ದೇಶವೇನು ಎಂದು ಮುಚ್ಚುಮರೆಯಿಲ್ಲದೆ ಆತನು ಕೇಳುತ್ತಾನೆ. ನನಗೇನೊ ಶಂಕೆ ಉಂಟಾಗಿದೆ. ತಾಯಿ ತಂದೆಯರು ದೇಶದಿಂದ ಹೊರಗಟ್ಟಿದಾಗ ಹೆಂಡತಿಯೊಡನೆಯೂ ರಾಮನು ಕಾಡಿಗೆ ಹೋಗಿದ್ದಾನೆ. ಅವನಿಗೆ ಯಾವ ಕೇಡನ್ನೂ ನೀನು ಬಯಸೆ ಎಂದು ಕೊಂಡಿದ್ದಾನೆ ಎಂದನು. ಭರತನಿಗೆ ಈ ಪ್ರಶ್ನೆ ನೋವುಂಟುಮಾಡುತ್ತದೆ. ಅವನ ಕಣ್ಣಿಂದ ನೀರು ಸುರಿದು, ವ್ಯಸನದಲ್ಲಿ, 'ಸಾವನ್ನು ಅನುಭವಿಸುತ್ತಿರುವಂತೆ ನನಗಾಗುತ್ತಿದೆ. ನನ್ನ ತಾಯಿ ಮಾಡಿದ್ದು ನನ್ನ ಮನಸ್ಸಿಗೆ ಬರುವುದಿಲ್ಲ. ರಾಮನು ಎಲ್ಲಿರುವನೆಂದು ತಿಳಿಯಲು ಇಲ್ಲಿಗೆ ಬಂದಿದ್ದೇನೆ. ಅವನು ಅಯೋಧ್ಯೆಗೆ ಹಿಂದಿರುಗಬೇಕೆಂದು ಅವನನ್ನು ಬೇಡಿಕೊಳ್ಳಬೇಕೆಂದು. ಈಗ ಅವನೆಲ್ಲಿದ್ದಾನೆ?'

ಎಂದೂ ಕೇಳಿದನು. ಪುರೋಹಿತರೂ ಋತ್ವಿಕರೂ ಈ ಮಾತುಗಳನ್ನು ಬಲಪಡಿಸುತ್ತಾರೆ. ಭರದ್ವಾಜನಿಗೆ ಇದರಿಂದ ಬಹಳ ಸಂತೋಷ. ಈ ಮಾತುಗಳನ್ನು 'ರಘುವಂಶದಲ್ಲಿ ಹುಟ್ಟಿದ ಒಬ್ಬನಿಗೆ ಈ ನಡತೆ ತುಂಬಾ ಯುಕ್ತವಾದುದು. ಗುರುಗಳಲ್ಲಿ ಮರ್ಯಾದೆ ಸಂಯಮ, ಸಜ್ಜನಿಕೆಯ ನಡತೆ ನಿನ್ನ ವಂಶದವರಿಗೆ ಸಹಜ. ನಿನ್ನ ಸೈನ್ಯವನ್ನು ಆಶ್ರಮದ ಹೊರಗೆ ಉಳಿಸುವ ಅಗತ್ಯವಿಲ್ಲ. ನಮಗೆ ಅದರಿಂದ ತೊಂದರೆಯಾಗಬಹುದು, ಈ ಪ್ರದೇಶ ಕೆಡಬಹುದು ಎಂದು ನಿನಗೆ ಭೀತಿಯೇನು ? ಅವರೆಲ್ಲರನ್ನೂ ಒಳಕ್ಕೆ ಬರಮಾಡು. ಈ ರಾತ್ರಿ ನೀವೆಲ್ಲ ನನ್ನ ಅತಿಥಿಗಳು. ಆಶ್ರಮದಲ್ಲಿ ಇಂದು ನಿಮಗೆಲ್ಲ ಆತಿಥ್ಯ ಸಲ್ಲಿಸುತ್ತೇನೆ' ಎಂದನು. ಭರತನು ಹಾಗೆ ಮಾಡುತ್ತಾನೆ.

ಇದಾದ ಮೇಲೆ ಅಗ್ನಿಶಾಲೆಗೆ ತೆರಳಿದ ಭರದ್ವಾಜನು ತನ್ನ ತಪೋಬಲದಿಂದ ದಿವ್ಯಶಕ್ತಿಗಳನ್ನು ಆವಾಹನೆ ಮಾಡಿ ಆತಿಥ್ಯವನ್ನು ಒದಗಿಸುವಂತೆ ಮಾಡುತ್ತಾನೆ. ಈ ಘಟನೆ ಇಂಥ ಘಟನೆಗಳಿಗೆಲ್ಲ ಪರಮ ಮಾತೃಕೆಯಂತಿದೆ. ಇದರ ಪ್ರಮಾಣ, ವರ್ಣರಂಜನೆ ದಿವ್ಯಮಾದರಿಯದು. ವಿಶ್ವಕರ್ಮನು ಬಂದು ಪಾಳೆಯವನ್ನು ರಚಿಸುತ್ತಾನೆ ; ವಾಸಸ್ಥಾನಗಳನ್ನು ಮಾಡುತ್ತಾನೆ. ಮೂವರು ದಿಕ್ಪಾಲಕರೂ ನದಿಯ ಎಲ್ಲ ದೇವತೆಗಳೂ ಬಂದು ಖರ್ಜೂರದ ಪಾನಗಳನ್ನೂ ಇತರ ಸುರೆಗಳನ್ನೂ ಒದಗಿಸುತ್ತಾರೆ. ಇನ್ನು ಕೆಲವು ತಣ್ಣನೆಯ ಜಲವಿಶೇಷಗಳನ್ನೂ ಕಬ್ಬಿನ ರಸಗಳನ್ನೂ ಒದಗಿಸುತ್ತಾರೆ. ಹಾಹಾ, ಹೂಹೂ ಎಂಬ ಸಂಗೀತಗಾರರೊಡನೆ ವಿಶ್ವಾಸು, ಗಂಧರ್ವರು ಬರುತ್ತಾರೆ. ನೃತ್ಯಕ್ಕೂ ಗೀತಕ್ಕೂ ಎಲ್ಲ ವಾದ್ಯ ವಿಶೇಷಗಳೊಡನೆಯೂ ತುಂಬುರರೊಡನೆಯೂ ಬ್ರಹ್ಮ ಇಂದ್ರರ ಸಭಾಸ್ಥಾನಗಳಿಂದ ಅಪ್ಸರೆಯರು ಚೆಲುವೆಯರು ಬರುತ್ತಾರೆ. ಉಪವನದ ಮತ್ತು ತೋಟದ ಸಂಪತ್ತೆಲ್ಲ ಎದರೆ, ಕುಬೇರನ ಚಿತ್ರರಥ ಅಲ್ಲಿ ಸ್ಥಾಪಿತವಾಗುತ್ತದೆ. ಉಡುಗೆಗಳೂ ಆಭರಣಗಳೂ ಮೆರೆಯುತ್ತವೆ. ಸಮಸ್ತ ವಸ್ತ್ರಾಭರಣಗಳೂ ದೇವಲೋಕದ ಚೆಲುವೆಯರೂ ಇಳಿದು ಬಂದಿರುತ್ತಾರೆ. ಕೆಲವರು ಪುಷ್ಕಳವಾಗಿ ತಿಂಡಿತೀರ್ಥಗಳನ್ನು ತರುತ್ತಾರೆ. ಹೂ, ಮಾಲಿಕೆ, ಪಾನ, ಭೋಜ್ಯಗಳು ವಿಪುಲವಾಗಿ ಬೇರೆ ಬೇರೆಯಾಗಿ ಬರುತ್ತವೆ. ಆಶ್ರಮದಲ್ಲಿ ಒಂದು ಸ್ವರ್ಗವೇ ನಿರ್ಮಾಣವಾಗುತ್ತದೆ.

ರಾಜ ಭರತನಿಗಾಗಿ ಉದ್ದೇಶಪಟ್ಟು ಸುರಚಿತವಾದ ಸುಸಜ್ಜಿತವಾದ ಡೇರೆಯೊಳಕ್ಕೆ ಭರತನನ್ನು ಕೊಂಡೊಯ್ದು ಸಂಪನ್ನವೂ ವೈಭವಯುತವೂ ಆದ ಒಂದು ಸ್ವರ್ಣಸಿಂಹಾಸನಕ್ಕೆ ಕರೆದುಕೊಂಡು ಹೋಗಿ ಅವನನ್ನು ಕುಳ್ಳಿರಲು ಹೇಳುತ್ತಾರೆ. ಭರತನಾದರೊ ಸಿಂಹಾಸನದ ಸುತ್ತ ಮೂರು ಸಲ ಸುತ್ತಿ ಹೋಗಿ

ರಾಮನ ಪ್ರವೇಶವನ್ನು ಅಲ್ಲಿಗೆ ಆಮಂತ್ರಿಸಿ, ಕೈಗೆ ಒಂದು ಚಾಮರವನ್ನೆತ್ತಿಕೊಂಡು ಅದನ್ನು ಬೀಸುತ್ತ, ಆವಾಹಿತಮೂರ್ತಿಗೆ ಸೇವೆ ಸಲ್ಲಿಸಿ ಮಂತ್ರಿಗಳಿಗಾಗಿ ಏರ್ಪಡಿಸಿದ್ದ ಪೀಠವೊಂದರಲ್ಲಿ ತಾನು ಕುಳಿತುಕೊಳ್ಳುತ್ತಾನೆ. ಹಾಲಿನ ಹಳ್ಳಗಳು ಹರಿಯುತ್ತವೆ. ಸುಖಭೋಗಗಳಿಗಾಗಿ ಇತರ ಏರ್ಪಾಡುಗಳು ಆಗಿರುತ್ತವೆ. ಕುಬೇರನು ಕಳಿಸಿರಲು ಚಿನ್ನ, ಕೆಂಪು, ಮುತ್ತು ಹವಳಗಳಿಂದ ಅಲಂಕೃತರಾದ ಚೆಲುವೆಯರು ಬಂದು ನಿಲ್ಲುತ್ತಾರೆ. ಅಪ್ಪಿಕೊಂಡ ಜನವನ್ನು ಉನ್ಮಾದಗೊಳಿಸುವ ಚೆಲುವು ಅವರದು. ಸ್ವರ್ಗದ ನರ್ತಕರು ನೃತ್ಯಗಳನ್ನು ಆರಂಭಿಸುತ್ತಾರೆ. ಈ ಪ್ರಯೋಗ ಕ್ಷೇತ್ರದಲ್ಲಿ ತೋಟದ ಮರಗಳೇ ಮನುಷ್ಯರ ಆಕೃತಿ ತಾಳಿ ಕೈಗಳನ್ನು ಕಟ್ಟಿಕೊಂಡು ಕುಣಿಯುತ್ತವೆ ; ಹಾಡುತ್ತವೆ. ಭರತನ ಸಿಬ್ಬಂದಿಯವರನ್ನು ಎಲ್ಲ ಬಗೆಯ ವಿನೋದ ವಿಲಾಸಗಳಿಂದಲೂ ರಂಜಿಸುತ್ತಾರೆ. ಸಾವಿರಾರು ಮಂದಿ ಸುಂದರಿಯರು ಕಾಣಿಸಿಕೊಂಡು ತಿಂಡಿ ತೀರ್ಥಗಳನ್ನು ಕಂಠಪೂರ್ತಿ ಸ್ವೀಕರಿಸುವಂತೆ ಎಲ್ಲರಿಗೂ ಉಪಚಾರ ಹೇಳುತ್ತಾರೆ. ಒಬ್ಬೊಬ್ಬ ಸೈನಿಕನಿಗೆ ಏಳೆಂಟು ಮಂದಿ ಹೆಂಗಸರು ಬಂದು ಅಭ್ಯಂಜನಗಳನ್ನು ನೀಡುತ್ತಾರೆ. ಮೃದುವಾಗಿ ಅವರ ಮೈಗಳನ್ನು ನೀವುತ್ತಾರೆ. ಸ್ನಾನವಾದ ಮೇಲೆ ಬಳಸಲು ಉಡುಪುಗಳನ್ನು ಪಾನಗಳನ್ನು ಒಡನೆಯೆ ಕೊಡುತ್ತಾರೆ. ಕುದುರೆ, ಆನೆ, ಒಂಟೆ ಎಲ್ಲವನ್ನೂ ತಕ್ಕ ಹಾಗೆ ನೋಡಿಕೊಳ್ಳುತ್ತಾರೆ. ಸೈನ್ಯಕ್ಕೆ ಪರಿಷ್ಕಾರವಾಗಿ ಊಟ ಮಾಡಿಸುತ್ತಾರೆ. ಲಾಯದ ಆಳಿಗೆ ಆಗ ತನ್ನ ಕುದುರೆಯ ಗುರುತು ಸಿಕ್ಕದು ; ಆನೆಯನ್ನು ನೋಡಿಕೊಳ್ಳುವವನಿಗೆ ತನ್ನ ಆನೆಯ ಗುರುತು ಮರೆತುಹೋಗುತ್ತದೆ ! ಈ ಸುಖಭೋಗಗಳಿಂದ ಅವರಿಗೆ ಸಂತೋಷ, ತೃಪ್ತಿ ಬರುತ್ತವೆ. ಈ ಮಹೋತ್ಸವದಲ್ಲಿ ಅವರಾಡುವ ಮಾತುಗಳೊ :

> ನೈವಾಯೋಧ್ಯಾಂ ಗಮಿಷ್ಯಾಮೋ ನ ಗಮಿಷ್ಯಾಮ ದಂಡಕಾನ್
> ಕುಶಲಂ ಭರತಸ್ಯಾಸ್ತು ರಾಮಾಯಸ್ತು ತಥಾ ಸುಖಂ

–ಎಂದರೆ, 'ನಾವು ಅಯೋಧ್ಯೆಗೆ ಹೋಗುವುದಿಲ್ಲ, ದಂಡಕಕ್ಕೆ ಹೋಗುವುದಿಲ್ಲ. ಭರತನು ಸುಖವಾಗಿರಲಿ ; ರಾಮನೂ ಸುಖವಾಗಿರಲಿ' ಎಂದರು. ಕಾಲ್ದಳದವರೂ ವೀರರೂ ಆನೆ ಕುದುರೆಗಳನ್ನು ನೋಡಿಕೊಳ್ಳುವ ಸೇವಕರೂ ತಮ್ಮ ಮೇಲೆ ಯಾವ ಸ್ವಾಮಿಯೂ ಇಲ್ಲವೆಂಬಂತೆ ಮಾತಾಡತೊಡಗುತ್ತಾರೆ. 'ಸ್ವರ್ಗೋಽಯಂ' – ಇದು ಸ್ವರ್ಗ – ಎನ್ನುತ್ತಾರೆ. ನೃತ್ಯ ಗೀತ ಔತಣಗಳನ್ನು ಕವಿ ವರ್ಣಿಸುವಾಗ ಬಗೆಬಗೆಯ ಭಕ್ಷ್ಯಭೋಜ್ಯಗಳು ; ವಿಧ ವಿಧ ಮಾಂಸ, ಪಾನ, ಹಣ್ಣರಸ ; ಪಾತ್ರೆಗಳ ತುಂಬ ಅಕ್ಕಿಯ ಬಿಳಿ ಅನ್ನ – ಇವು ವಿವರಣೆಗೊಳ್ಳುತ್ತವೆ. ಊಟ

ಉಪಚಾರ, ವಿನೋದ, ಸಂತೋಷ, ಸ್ನಾನ, ನೃತ್ಯ, ವಸ್ತ್ರ ಆಭರಣ, ಕೈಗನ್ನಡಿಗಳು, ಕೇಶಮುಂಡನ, ಅನುಲೇಪನ, ಹಾಸಿಗೆ ಜಮಖಾನ, ಸುಗಂಧದ್ರವ್ಯ ಬೇಕಾದ್ದೆಲ್ಲವೂ ವಾಸ್ತವವಾದ ಒಂದು ಸಮೃದ್ಧಿಗೂ ಭೋಗಕ್ಕೂ ಏರ್ಪಡಿಸಿದ ಒಂದು ವಸ್ತು ಚಿತ್ರದಂತಿರುತ್ತದೆ. ಭೋಜನವಾದ ಮೇಲೆ ಶುಂಠಿಯ ಕಷಾಯಗಳನ್ನು ಕೊಡುತ್ತಾರೆ. ಇದು ಒಂದು ಔತಣದ ಮತ್ತು ಆತಿಥ್ಯದ ಸಂಭ್ರಮ. ಅಯೋಧ್ಯೆಯ ರಾಜನಿಗೆ ಒಬ್ಬ ಋಷಿ ಕೊಡಬಲ್ಲ ಸಮಾರಾಧನೆಯ ಚಿತ್ರ. ಮಾರನೆಯ ದಿನ ಬೆಳಗಾಗಲು ಔತಣದ ಅನುಭವ ಕನಸಿನದಲ್ಲ ; ಧರಿಸಿದ ಹೂಗಳು, ಸುಗಂಧ ಲೇಪನ, ಬೆಳಗಾದ ಬಳಿಕವೂ ಅವರ ಮೈಮೇಲೆ ಉಳಿದಿರುತ್ತವೆ. ಒದಗಿಸಿದವರು ಮಾತ್ರ ಹೊರಟುಹೋಗಿರುತ್ತಾರೆ. ಒಟ್ಟು ಸೈನ್ಯಕ್ಕೆ ಋಷಿ ನಿರ್ಮಾಣ ಮಾಡಿ ಒದಗಿಸಿದ ವೈಭವದ, ಆತಿಥ್ಯದ ಒಂದು ಚಿತ್ರ ಇದು.....

### ೩. ರಾಮ – ಭರತ

ಭರತನ ಸೈನ್ಯ ಚಿತ್ರಕೂಟಕ್ಕೆ ಬರುವ ಸ್ವಲ್ಪ ಮುಂಚೆ ತೆರೆದ ಪ್ರದೇಶದಲ್ಲಿ ಹೊಳೆಯ ಪಕ್ಕದಲ್ಲಿ ಸೀತೆ ರಾಮ ಕುಳಿತು ಊಟ ಮಾಡುತ್ತಿರುತ್ತಾರೆ. ಬಡಿಸಿದ್ದ ಎಲೆಯ ಮೇಲೆ ಸುಪಕ್ವವಾದ ಮಾಂಸ ಭೋಜನವಿತ್ತು. ಅದನ್ನು ರುಚಿ ನೋಡು ಎಂದು ರಾಮನು ಆಕೆಗೆ ಒಲಿಸುತ್ತಿದ್ದಾನೆ. ಆಗ ದೂರದಲ್ಲಿ ಒಂದು ಕಡೆಯಿಂದ ಜನಗಳ ದೊಡ್ಡ ಗುಂಪೊಂದು ತಮ್ಮತ್ತ ಬರುತ್ತಿರುವಂತೆಯೂ ಚಲಿಸುತ್ತಿರುವಂಥ ಒಂದು ಪ್ರಾಣಿಗಳ ತಂಡ ಬರುತ್ತಿರುವಂತೆಯೂ ಗದ್ದಲ ಕೇಳಿ ಬರುತ್ತದೆ ; ಎತ್ತರಕ್ಕೆ ದೂಳು ಕಾಣಿಸುತ್ತದೆ. 'ಇದೇತಕ್ಕಿರಬಹುದು ? ನೋಡು' ಎಂದು ರಾಮನು ಲಕ್ಷ್ಮಣವನ್ನು ಕರೆದು ಹೇಳಿದ. ಎತ್ತರವಾದ ಸಾಲವೃಕ್ಷವೊಂದರ ಮೇಲೇರಿ ಲಕ್ಷ್ಮಣನು ಸುತ್ತಲೂ ನೋಡಿದ. ಒಂದು ಸೈನ್ಯವನ್ನು ಕಂಡು 'ಮರೆಗೆ ರಕ್ಷಣೆಗಾಗಿ ಹೋಗು, ರಾಮ ; ಆಯುಧಪಾಣಿಯಾಗು' ಎಂದು ಅವನು ರಾಮನಿಗೆ ತಿಳಿಸುತ್ತಾನೆ. ಅವನಿಗೆ ಕೋಪ ಬಂದಿದೆ; ತಮ್ಮಿಬ್ಬರನ್ನೂ ಕೊಲ್ಲುವ ಉದ್ದೇಶದಿಂದ ಭರತನು ಬರುತ್ತಿದ್ದಾನೆ ಎನ್ನಿಸಿದೆ. ತಮ್ಮ ವಂಶದ ಲಾಂಛನವಾದ ಕೋವಿದಾರ ಧ್ವಜ ಅವನ ಕಣ್ಣಿಗೆ ಬಿದ್ದಿದೆ. 'ಯಾರಿಗಾಗಿ ನಿನ್ನ ರಾಜ್ಯಧಿಕಾರ ಅಪಹಾರವಾಯಿತೊ ಈ ಕಷ್ಟಗಳನ್ನು ಸೀತೆ ಅನುಭವಿಸಬೇಕಾಗಿ ಬಂದಿತೊ – ಆ ಭರತನು ವಧೆಗೆ ಯೋಗ್ಯನು. ಅವನನ್ನು ಕೊಲ್ಲುವುದು ತಪ್ಪಾಗದು. ಅವನ ಸುತ್ತ ಇರುವ ಜನರೆಲ್ಲರನ್ನೂ ಕೊಲ್ಲುತ್ತೇನೆ ; ಕೈಕೆಯನ್ನು ಕೊಲ್ಲುತ್ತೇನೆ. ಕೇಡು ನಾಶವಾಗಲಿ' ಎನ್ನುತ್ತಾನೆ.

ಲಕ್ಷ್ಮಣನ ಕೋಪಕ್ಕೆ ಕಾರಣವೇನೆಂಬುದು ರಾಮನಿಗೆ ಗೊತ್ತಾಗುತ್ತದೆ. ಸೌಮ್ಯವಾಗಿ, ಆದರೆ ದೃಢವಾಗಿ ಲಕ್ಷ್ಮಣನ ಕ್ರೋಧಮೂರ್ಛಿತ ಮನಸ್ಸನ್ನು ಅರಿತು ಅವನ ಕೋಪ[೨]ವನ್ನು ಇಳಿಸಲು ಮೃದುವಾಗಿ ರಾಮನು ನುಡಿಯುತ್ತಾನೆ: "ಬಿಲ್ಲುಬಾಣಗಳಿಗಾಗಲಿ, ಕತ್ತಿಗುರಾಣಿಗಳಿಗಾಗಲಿ ಅಗತ್ಯವಿಲ್ಲವೆಂದು ನನಗೆ ಕಾಣುತ್ತಿದೆ, ಲಕ್ಷ್ಮಣ. ಪ್ರಾಜ್ಞನಾದ ಭರತನೇ ಈಗ ನಮ್ಮಲ್ಲಿಗೆ ಬರುತ್ತಿದ್ದಾನೆ. ಏಕೆ ಬರುತ್ತಿದ್ದಾನೆಂಬುದೂ ನನಗೆ ಗೊತ್ತಾಗುತ್ತಿದೆ. ನಾವು ಅಲ್ಲಿ ಇಲ್ಲದಿರುವುದನ್ನು ಕಂಡು ನಡೆದಿರುವುದನ್ನೆಲ್ಲ ಅವನು ನಿಜವಾಗಿ ಅರಿತುಕೊಂಡಿದ್ದಾನೆ. ಕೆಡುಕು ಅವನ ಮನಸ್ಸಿಗೆ ಬಂದಿರಲಾರದು. ಅವನ ತಾಯಿಗೆ ನಾನು ಕೊಟ್ಟಿದ್ದ ಮಾತನ್ನು ನಡಸಿಕೊಡುವುದಕ್ಕಾಗಿ ನಾನಿಲ್ಲಿ ಬಂದಿರುವಾಗ ಅವನನ್ನು ಕೊಲ್ಲಲೆ? ಅಪಕೀರ್ತಿಯನ್ನು ತರುವ ರಾಜ್ಯವನ್ನು ಪಡೆದು ನಾನು ಮಾಡುವುದಾದರೂ ಏನು?

ಬಂಧುಗಳನ್ನು ಸ್ನೇಹಿತರನ್ನು ಕೊಲ್ಲುವುದರ ಮೂಲಕ ಬರುವ ಯಾವ ಸಂಪತ್ತೂ ನನಗೆ ಬೇಡ. ಅಂಥದು ವಿಷ. ನನಗೆ ಬೇಕಾಗಿರುವುದು ಮೊದಲು ಧರ್ಮ ; ಆ ಬಳಿಕ ಅರ್ಥ, ಕಾಮ. ನನ್ನ ಆಯುಧದ ಮೇಲೆ ಆಣೆಯಿಟ್ಟು ಹೇಳುತ್ತಾನೆ – ನನ್ನ ಸೋದರರೊಡನೆ ಸುಖವಾಗಿ ಬಾಳುವುದಕ್ಕೂ ಅವರೊಡನೆ ಬಾಳಿ ಸಂತೋಷಪಡುವುದಕ್ಕೂ ಮಾತ್ರ ನಾನು ರಾಜ್ಯಕ್ಕೆ ಇಷ್ಟಪಟ್ಟೇನು. ಅಧರ್ಮದ ಮೂಲಕ ಬರುವ ಇಂದ್ರಪದವಿಯನ್ನೇ ನಾನು ಒಲ್ಲೆ. ನೀನು, ಭರತ, ಶತ್ರುಘ್ನ ಇವರನ್ನು ಬಿಟ್ಟು ನಾನು ಪಡುವ ಸಂತೋಷ ಬೆಂಕಿ ಉರಿದ ಮೇಲೆ ಉಳಿಯುವ ಬೂದಿಗೆ ಸಮಾನ. ಭರತನಿಗೆ ಸೋದರಪ್ರೀತಿ ಉಂಟು. ನನ್ನ ಪ್ರಾಣಕ್ಕಿಂತ ಪ್ರಿಯನಾದವನು ಅವನು. ಜಟೆ, ನಾರುಬಟ್ಟೆ ಉಟ್ಟು ನಾನು ಜಾನಕಿಯೊಡನೆಯೂ ನಿನ್ನೊಡನೆಯೂ ಬಂದು ಬಿಟ್ಟಿರುವುದನ್ನು ಅವನು ಕೇಳಿ ತಾಯ ಮೇಲೆ ಕೋಪಿಸಿಕೊಂಡಿದ್ದಾನೆ. ಅಪ್ರಿಯವಾದ ಮಾತುಗಳನ್ನು ಆಡಿ ತಂದೆಗೆ ಸಮಾಧಾನವನ್ನೂ ಉಪಚಾರವನ್ನೂ ಹೇಳಿದ್ದಾನೆ. ಕೆಳೆತನದಿಂದ ಕೂಡಿದ ಪ್ರೀತಿಯಲ್ಲಿ ನನಗೆ ರಾಜ್ಯವನ್ನು ಒಪ್ಪಿಸಿಕೊಡುವುದಕ್ಕಾಗಿ ಇಲ್ಲಿಗೆ ಬರುತ್ತಿದ್ದಾನೆ.

---

೨ ಪೂರ್ವಗ್ರಹಕ್ಕೂ ತಿಳಿ ತಿಳಿವಿಗೂ ಇರುವ ವ್ಯತ್ಯಾಸ ಇಲ್ಲಿ ಕಾಣುತ್ತದೆ. ಮನಸ್ಸಿನ ವಿಶದತೆ, ತಿಳಿ, ಸನ್ನಿವೇಶವನ್ನು ಅರ್ಥಮಾಡಿಕೊಳ್ಳುವ ವಿವೇಕ ಈ ಪ್ರಸಂಗದಲ್ಲಿ ಕಾಣುವುದಕ್ಕಿಂತ ಮೇಲಾಗಿ ಬೇರೆ ಕಡೆ ಕಾಣಿಸದು. ಮನಸ್ಸಿನ ಹದದಲ್ಲಿಯೂ ಪ್ರತಿಕ್ರಿಯೆಗಳಲ್ಲಿಯೂ ಈ ಇಬ್ಬರು ಸಜ್ಜನರ ನಡುವೆ ಎಷ್ಟು ವ್ಯತ್ಯಾಸ !

ಯಾವ ಕೇಡು ನಮಗೆ ಸಂಭವಿಸುವುದೂ ಅವನಿಗೆ ಇಷ್ಟವಿರಲಾರದು. ನಿನ್ನನ್ನು ಒಂದು ಪ್ರಶ್ನೆ ಕೇಳಲೆ, ಲಕ್ಷ್ಮಣ ? ಹಿಂದೆ ಎಂದಾದರೂ ಅವನು ನಿನಗೆ ಕೆಟ್ಟುದನ್ನು ಮಾಡಿದ್ದಾನೆಯೆ – ಈಗ ನೀನು ಅವನಲ್ಲಿ ಇಂತಹ ತಪ್ಪು ಸಂಶಯ ಪಡುವುದಕ್ಕೆ ? ಭರತನನ್ನು ಕುರಿತು ಬಿರುಮಾತನ್ನು ನುಡಿವುದೂ ನಿನಗೆ ತಕ್ಕುದಲ್ಲ; ಅದು ನನಗಾಡಿದಂತೆಯೇ ಆಗುತ್ತದೆ. ಮಕ್ಕಳು ತಂದೆಯನ್ನೂ ಸೋದರರು ಸೋದರರನ್ನೂ ಕೊಲ್ಲುವುದರಿಂದ ಏನು ಒಳ್ಳೆಯದಾದೀತು ? ಸೋದರರು ನಮ್ಮ ಸ್ವಂತಜೀವದಂತೆಯೇ ಅಲ್ಲವೆ ? ರಾಜ್ಯ ಕಾಮನೆಯಿಂದ ಇಂತಹ ಮಾತುಗಳನ್ನು ನೀನು ಆಡುತ್ತಿರುವೆಯಾದರೆ ಭರತನು ನನ್ನನ್ನು ಕಂಡ ಕೂಡಲೆ ರಾಜ್ಯವನ್ನು ನಿನಗೆ ಕೊಡೆಂದು ಅವನಿಗೆ ಹೇಳುತ್ತೇನೆ. ನೇರವಾಗಿ ಅವನು 'ಬಾಢಂ, ಇತ್ಯೇವವಕ್ಷ್ಯತೆ' ಎಂದು ಒಪ್ಪಿಕೊಳ್ಳುತ್ತಾನೆ" ಎಂದನು. ಈ ಪೆಟ್ಟು ಅವನ ಮೇಲೆ ಬಲವಾಗಿ ಬಿದ್ದು ಲಕ್ಷ್ಮಣನು ಕಂಗಾಲಾಗುತ್ತಾನೆ. ರಾಮನಲ್ಲಿ ತನಗಿರುವ ಉತ್ಕಟ ಭಕ್ತಿಯ ಭರದಲ್ಲಿ ಇಂತಹ ಕೋಪದ ಮಾತುಗಳನ್ನು ಆಡಿದ್ದನೇ ಹೊರತು ತನಗೆ ಯಾವ ಪ್ರಯೋಜನವೂ ಆಗಲೆಂದು ಬಯಸಿ ಅಲ್ಲ. ಅವನಿಗೆ ತುಂಬ ನಾಚಿಕೆ. 'ಸ್ವಾನಿ ಗಾತ್ರಾಣಿ ಪ್ರವಿವೇಶೇವ' ಎಂಬಂತಾಯಿತಂತೆ. ತಮ್ಮನ ಕೋಪವನ್ನು ರಾಮನು ಇಳಿಸಿದ್ದು ಹೀಗೆ. ರಾಮನ ಆಜ್ಞೆಗಳನ್ನೆಲ್ಲ ನೆರವೇರಿಸಲು ಅವನು ಸಿದ್ಧನಾಗಿದ್ದ.

ತನ್ನ ಸೈನ್ಯವನ್ನೂ ಸಿಬ್ಬಂದಿಯನ್ನೂ ಹಿಂದೆ ಸಾವಕಾಶವಾಗಿ ಬರಲು ಹೇಳಿ ಅಣ್ಣನನ್ನು ನೋಡುವ ತವಕದಿಂದ ಭರತನು ಧಾವಿಸಿ ಬಂದ. ಪುನಃ ಪುನಃ ಅವನು ಹೇಳಿದುದೊಂದೇ, ರಾಮನನ್ನು ಕಾಣುವವರೆಗೆ ತನಗೆ ಶಾಂತಿಯಿಲ್ಲ ಎಂದು. ಅವನು ಕಣ್ಣಿಗೆ ಕಂಡ ಕೂಡಲೆ ನೇರ ಆತುರಿಸಿ ಹೋದುದೊಂದೇ ಅವನು ಮಾಡಬಲ್ಲದು. ಆಡಲು ಒಂದು ಮಾತೂ ಬರಲಿಲ್ಲ. ಸ್ವಲ್ಪ ಕಾಲವಾದ ಮೇಲೆ ದಶರಥನು ತೀರಿಕೊಂಡನೆಂದು ಸುದ್ದಿಕೊಡುತ್ತಾನೆ. ಈ ಸೋದರರಿಗೆ ಬಹು ವ್ಯಸನವುಂಟಾಗುತ್ತದೆ. ಸ್ನಾನಮಾಡಿ ತಮ್ಮ ತಂದೆಯ ಆತ್ಮತೃಪ್ತಿಗಾಗಿ ತಾವು ಬಳಸುವ ಆಹಾರವನ್ನು ಅರ್ಪಿಸುತ್ತಾರೆ. ಲಕ್ಷ್ಮಣನಿಗೂ ಸೀತೆಗೂ ಸುದ್ದಿಯನ್ನು ರಾಮನು ತಿಳಿಸಿದ ರೀತಿ ತುಂಬಾ ಕರುಣಾಜನಕವಾದುದು. 'ಸೀತೇ ಮೃತಸ್ತೇಶ್ವಶುರಃ ; ಪಿತ್ರಾಹೀನೋಽಸಿ ಲಕ್ಷಣ' – 'ಸೀತೆ, ನಿನ್ನ ಮಾವ ಮೃತಿಹೊಂದಿದ್ದಾರೆ ; ನೀನು ಪಿತೃಹೀನ, ಲಕ್ಷ್ಮಣ' ಎಂಬವು ಮಾತು. ತಾಯಿಯರು ಆಮೇಲೆ ಕಾಣಿಸಿಕೊಳ್ಳಲು ಅವರೆಲ್ಲರಿಗೂ ಇವರು ಅಭಿವಾದನೆಗಳನ್ನು ಮಾಡುತ್ತಾರೆ. ಇವರನ್ನು ಈ ಸ್ಥಿತಿಯಲ್ಲಿ ನೋಡಿದ ಯಾರು ತಾನೆ

ಸುಖವಾಗಿದ್ದಾರು? ಎಲ್ಲ ಸಂಗತಿಗಳನ್ನೂ ಕುರಿತು ಇವರು ಕೇಳುತ್ತಾರೆ. ಕೈಕೆ ಮಾಡಿದುದಕ್ಕೆ ಆಕೆಯಲ್ಲಿ ಕಠಿಣವಾಗಿ ನಡೆದುಕೊಳ್ಳಬಾರದೆಂದು ರಾಮನು ಭರತನಿಗೆ ಹೇಳಿ ತಂದೆ ತಾಯಿಯರನ್ನು ಗೌರವದಿಂದ ಕಂಡು ಅವರಲ್ಲಿ ವಿಧೇಯರಾಗಿ ನಡೆದುಕೊಳ್ಳಬೇಕು ಎನ್ನುತ್ತಾನೆ. ತನಗೆ ತೋರಿದ ಎಲ್ಲ ಮಾರ್ಗಗಳನ್ನೂ ಬಳಸಿ ಹಿಂದಿರುಗೆಂದು ರಾಮನನ್ನು ಭರತನು ಬೇಡುತ್ತಾನೆ. ತಾನು ರಾಜನಾಗಲು ಅವನಿಗೆ ಸ್ವಲ್ಪವೂ ಇಷ್ಟವಿಲ್ಲ , ಎಂದೇ ಆಗಲಿ, ಅಂಥ ಅಭಿಲಾಷೆ ತನಗಿರುವುದನ್ನು ತಾನು ವ್ಯಕ್ತಪಡಿಸಿಲ್ಲ ; ತಾಯ ಮನಸ್ಸನ್ನು ರೂಪಿಸುವಲ್ಲಿ ತನ್ನ ಭಾಗವಿಲ್ಲ . ತನ್ನ ಕಿರೀಟಧಾರಣೆಗಾಗಲಿ ರಾಮನ ವನವಾಸಕ್ಕಾಗಲಿ ತಂದೆಯನ್ನು ತನ್ನ ತಾಯಿ ಪ್ರಾರ್ಥಿಸುವುದರಲ್ಲಿ ತನ್ನ ಪಾಲು ಸುತರಾಂ ಇಲ್ಲ . ಮನೆತನದ ಸಂಪ್ರದಾಯಗಳು ತನಗೆ ತಿಳಿದಿವೆ. ಸಿಂಹಾಸನಕ್ಕೆ ಅಧಿಕಾರ ತರುವ ಸೂಕ್ತಧರ್ಮವನ್ನು ತಾನು ಬಲ್ಲ . ತಮ್ಮಂದಿರಿಗೆ ಹಿರಿಯನಲ್ಲಿ ಇರುವ ಕರ್ತವ್ಯವನ್ನು ಅರಿತಿದ್ದೇನೆ. ತಂದೆಯನ್ನು ಹಾಗೆ ಮಾಡೆಂದು ತಾಯಿ ಬಲಾತ್ಕಾರ ಮಾಡಿದ್ದು ತಪ್ಪು . ಆದುದರಿಂದ 'ನಿನ್ನ ತೀರ್ಮಾನವನ್ನು ಬದಲಿಸು, ರಾಜ್ಯಕ್ಕೆ ಹಿಂದಿರುಗು' ಎಂದು ರಾಮನನ್ನು ಬೇಡಿಕೊಳ್ಳುತ್ತಾನೆ. 'ಕೈಕೆಯ ಮನಸ್ಸೂ ಬದಲಾಗಿದೆ ; ನಮ್ಮೊಡನೆ ಆಕೆ ಬಂದಿದ್ದಾಳೆ. ರಾಮನು ಹಿಂದಕ್ಕೆ ಬಂದು ರಾಜನಾಗಬೇಕೆಂದು ಪ್ರಾರ್ಥಿಸುವುದರಲ್ಲಿ ಅವಳ ಪ್ರಾರ್ಥನೆಯೂ ಸೇರಿದೆ', – ಎನ್ನುತ್ತಾನೆ (ಅಯೋಧ್ಯಾಕಾಂಡ ಮುಗಿದ ಮೇಲೆ ರಾಣಿಯರು ಯಾವ ಮಾತುಗಳಾಡಿದ್ದನ್ನೂ ಕವಿ ತಿಳಿಸಿಲ್ಲ .) ರಾಜ್ಯಕ್ಕೆ ಶಕ್ತನಾದ ಆಳರಸು ಬೇಕು. ರಾಮನಾಗುವಂತೆ, ಆಗಬಲ್ಲಂತೆ ತಾನು ಸರ್ವಥಾ ಆಗಲಾರೆ. ಜನನಾಯಕರು ಎಲ್ಲ ಭರತನ ಹಿಂದೆ ಬಂದಿದ್ದಾರೆ. ಅವನ ತೀರ್ಮಾನವನ್ನು ಪುನಃ ಪರಿಶೀಲಿಸುವಂತೆ ಒಟ್ಟೈಸಿ ಕೇಳಿಕೊಳ್ಳುತ್ತಾರೆ. ಮಂತ್ರಿಗಳು, ಪುರೋಹಿತರು, ಜನತೆ – ಎಲ್ಲ ಹೀಗೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದಾರೆ. ಇಂಥದು ನಡೆಯುತ್ತಿರುವಾಗ ತಾನು ಅಯೋಧ್ಯೆಯಲ್ಲಿರದೆ ಹೊರಗೆಲ್ಲೊ ಇದ್ದುದಕ್ಕಾಗಿ ಭರತನಿಗೆ ವಿಶೇಷ ವ್ಯಥೆ ಉಂಟಾಗಿದೆ. ಈಗ ನಡೆದಿರುವುದನ್ನು ತಿರುವು ಮಾಡಿ ವ್ರತಿಯ ಹಾಗೆ ದಂಡಕದಲ್ಲಿ ಹದಿನಾಲ್ಕು ವರ್ಷ ತಾನಿರಲು ಸಿದ್ಧನಿದ್ದೇನೆ ಎನ್ನುತ್ತಾನೆ. ನನ್ನ ಪ್ರಾರ್ಥನೆಗಿಂತ ಹೆಚ್ಚಾಗಿ ತಾಯ ಮಾತಿಗೆ ಮೇಲ್ಮೆ ಕೊಡಬಾರದೆನ್ನುತ್ತಾರೆ. ರಾಮನು ಹಿಂತಿರುವುದು ಸರ್ವಥಾ ಯುಕ್ತವಾಗುತ್ತದೆಂದು ಎಲ್ಲರೂ ಕೇಳಿಕೊಳ್ಳುತ್ತಾರೆ. ರಾಮನೊ: ತಂದೆ ಕೈಕೆಗೆ ಕೊಟ್ಟ ಮಾತನ್ನು ನೆರವೇರಿಸುವುದಕ್ಕಾಗಿ ತಾನು ಕೈಕೊಂಡ ವನವಾಸವನ್ನು ನಿಶ್ಚಯಿಸುವ ಮುಂಚೆ, ಸಮಯಗಳನ್ನು

ನೆರವೇರಿಸಲು ಪರಿಶೀಲಿಸಿದಾಗ ಈ ಎಲ್ಲ ವಾದಗಳನ್ನೂ ರಾಮನು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿ ನಿರ್ಣಯಕ್ಕೆ ಬಂದಿದ್ದ. "ತಾಯಿತಂದೆಯರ ವಾಕ್ಯ ಪರಮಪ್ರಧಾನವಾದ್ದು : ಅವರು ಒಟ್ಟಿಗೆ ಸೇರಿ ಮಾಡಿದ ಅಪ್ಪಣೆಗೆ ತಕ್ಕಂತೆ ನಾನು ನಡೆಯಬೇಕು. ಕೈಕೆ ಕೇಳಿದುದನ್ನು ನನ್ನ ತಂದೆ ನಡಸಿಕೊಡುವುದು ಅಗತ್ಯ. ಅವಳು ಕೇಳುವ ಎರಡು ಪ್ರಾರ್ಥನೆಗಳನ್ನು ನಡಸಿಕೊಡುವುದು ಬಹುಕಾಲ ತಡೆದಿತ್ತು ; ಈಗ ಪಾಲಿಸಬೇಕಾಗಿ ಬಂತು. ಇಷ್ಟೇ ಅಲ್ಲದೆ, ಕೈಕೆಯ ವಿವಾಹದ ಮುಂಚೆ ಆಕೆಯ ತಂದೆಗೆ ಅವಳ ಮಗನನ್ನು ರಾಜನನ್ನಾಗಿ ಮಾಡುತ್ತೇನೆಂದು ದಶರಥನು ಮಾತು ಕೊಟ್ಟಿದ್ದ.[೩] ಕೈಕೆ ಮಾಡಿದ್ದರಲ್ಲಿ ತಪ್ಪೇನು? ಅವಳ ಪ್ರಾರ್ಥನೆಯನ್ನು ನಡಸಿಕೊಡದಿದ್ದರೆ ದರಥನು ತಪ್ಪು ಮಾಡುತ್ತಿದ್ದನು. ನಿನ್ನ ಉನ್ನತವಾದ ಮಾತುಗಳು, ಓ ಭರತ, ನಿನ್ನ ಯೋಗ್ಯತೆಗೆ ತಕ್ಕವು. ತನ್ನ ಮಗನಿಗೆ ರಾಜ್ಯವಾಗಬೇಕೆಂದು ತಾಯಿ ಕೇಳುವುದು ತಪ್ಪಾಗದು. ಅವಳಿಗೆ ಕಠಿಣವಾದ ಮಾತು ಬಳಸುವುದನ್ನು ನೀನು ನಿಲ್ಲಿಸಬೇಕು. ನಮ್ಮ ತಂದೆ ತಾನು ಕೊಟ್ಟ ಮಾತನ್ನು ನಡೆಸಿಕೊಡುವ ಕಾರ್ಯದಲ್ಲಿ ನಾವಿಬ್ಬರೂ ಕರ್ತವ್ಯನಿಷ್ಠರಾಗಬೇಕು. ನಾನು ಮಾಡಿದ ವಾಗ್ದಾನವನ್ನು ನಾನು ನಡಸದಿದ್ದರೆ ತಂದೆಯ ಸತ್ಯಕ್ಕೆ ನೆರೆಯದಾಗುತ್ತೇನೆ. ಅವನು ಸತ್ಯಚ್ಯುತನಾಗುತ್ತಾನೆ. ಸ್ವರ್ಗದಲ್ಲಿಯೂ ಅವನ ಸ್ಥಾನಕ್ಕೆ ಲೋಪ ಬರುತ್ತದೆ. ನನ್ನ ಭಾಗದ ಕಾರ್ಯವನ್ನು ನೀನು, ನಿನ್ನದನ್ನು ನಾನು ಕೈಗೊಳ್ಳಬಾರದು. ಕರ್ತವ್ಯಗಳು ಸ್ಪಷ್ಟವಾಗಿವೆ : ನೀನು ಅಯೋಧ್ಯೆಯಲ್ಲಿ ರಾಜನಾಗಿರತಕ್ಕದ್ದು ; ನಾನು ಕಾಡಿನಲ್ಲಿರಬೇಕು. ಇತರರು ಈ ಪ್ರಸಂಗಕ್ಕಾಗಲಿ ಈ ಸಮಯಗಳಿಗಾಗಲಿ ಸೇರಿದವರಲ್ಲ. ಈ ಮುಂಚೆಯೇ ಜನವರ್ಗದವರು ಹೇಳಿದ ಮಾತುಗಳನ್ನೆಲ್ಲಾ ಕೇಳಿದ್ದೇನೆ. ತಂದೆ ದಶರಥನು ನನಗೆ ಜೀವ ಕೊಟ್ಟ. 'ಅಜ್ಞಾತಂ ಯನ್ಮಯಾ ತಸ್ಯ ನತನ್ಮಿಥ್ಯಾ ಭವಿಷ್ಯತಿ'. ಅವನು ನನಗೆ ಅಪ್ಪಣೆ ಮಾಡಿದ್ದಾನೆ ; ನಾನು ಮಾಡಿದ ವಾಗ್ದಾನವನ್ನು ಸುಳ್ಳು ಮಾಡಿದ ಹಾಗಾಗುತ್ತದೆ." ಕಡೆಯ ಮಾತನ್ನು ವಸಿಷ್ಠನ ಒಂದು ವಾದಕ್ಕೆ ಉತ್ತರವಾಗಿ ರಾಮನು ಹೇಳುತ್ತಾನೆ. ಸನ್ನಿವೇಶ ಬದಲಾಗುವುದನ್ನಾಗಲಿ ರಾಮನನ್ನು ಭರತನು ಒಪ್ಪಿಸಲಾಗಲಿ ಶಕ್ಯವಾಗದಿರಲು ಭರತನು ತಾನು ಪ್ರಾಯೋಪವೇಶ ಮಾಡುತ್ತೇನೆನ್ನುತ್ತಾನೆ. ರಾಮನ ಮಾತು, ವಾಕ್ಯ ಇನ್ನೂ ದೃಢವಾಗುತ್ತವೆ. ಕ್ಷತ್ರಿಯನಿಗೆ ಪ್ರಾಯೋಪವೇಶ ಯುಕ್ತವಲ್ಲ

---

೩ ಯೌವರಾಜ್ಯಭಿಷೇಕಕ್ಕೆ ಸಿದ್ಧತೆ ನಡೆಯುವಾಗ ಇದನ್ನು ಯಾರೂ ಏಕೆ ತಿಳಿಸಲಿಲ್ಲವೋ? ರಾಮನಿಗೆ ಇದು ತಿಳಿದಿದ್ದರೆ ಅವನು ತನ್ನ ತಂದೆಗೆ ಏಕೆ ನೆನಪು ಕೊಡಲಿಲ್ಲವೋ ?

ಎನ್ನುತ್ತಾನೆ. 'ನಾನು ಕಾಡಿನಲ್ಲಿ ಹದಿನಾಲ್ಕು ವರ್ಷಕಾಲ ವಾಸಮಾಡುತ್ತೇನೆ. ಆ ಕಾಲ ಕಳೆದ ಮೇಲೆ ಹಿಂದಿರುಗಿ ಬಂದು ನಿನ್ನಂತಹ ಧರ್ಮಶೀಲ ಸೋದರನೊಡನೆ ರಾಜ್ಯವಾಳುತ್ತೇನೆ' – ಎನ್ನುತ್ತಾನೆ.

ಕೈಕೊಂಡುದನ್ನು ಸಾಧಿಸುವುದರಲ್ಲಿ ರಾಮನು ಎಷ್ಟು ದೃಢ ಮನಸ್ಸಿನವನು, ಧರ್ಮಿಷ್ಠನು ಎಂಬುದು ಗೊತ್ತಾಗುತ್ತದೆ. ಇವರ ಸಂವಾದವನ್ನು ಕೇಳಿದವರಿಗೆ ಇಬ್ಬರೂ ಸೋದರರ ನಡುವೆ ನಡೆದ ಧರ್ಮಸ್ಪರ್ಧೆ ಅರ್ಥವಾಗಿ ಸಂತೋಷವುಂಟುಮಾಡುತ್ತದೆ. ತಂದೆಯನ್ನು ಅನೃಣನನ್ನಾಗಿ ಮಾಡುವುದು ಮೂಲಭೂತವಾದ ಸಂಗತಿ ಎಂಬುದು ಇನ್ನಷ್ಟು ವಿಶದಗೊಳ್ಳುತ್ತದೆ. ಈ ಕಾರ್ಯದಿಂದ ವಿಮುಖನಾಗುವುದು ನನಗಿಷ್ಟವಿಲ್ಲ ; ಎಲ್ಲಕ್ಕೂ ಮೇಲಾಗಿ ತಾಯಿಗೆ ಕಠಿಣ ನುಡಿಯಬೇಡ ಎಂದ. ಆಗ ವಸಿಷ್ಠರ ಸೂಚನೆಯಂತೆ ರಾಮನನ್ನು ಪ್ರಾರ್ಥಿಸಿ ಜೊತೆ ಪಾದುಕೆಗಳನ್ನು ಅಯೋಧ್ಯೆಗೆ ತೆಗೆದುಕೊಂಡು ಹೋಗಬೇಕೆಂದೂ ಅದಕ್ಕೆ ಪಟ್ಟಾಭಿಷೇಕ ಮಾಡಬೇಕೆಂದೂ ಭರತನು ಸೂಚಿಸುತ್ತಾನೆ. ಈ ಮಾರ್ಗ ಪರಿಸ್ಥಿತಿಯಿಂದ ದಾಟಿಸಬಲ್ಲ ಒಂದು ದಾರಿಯಾಯಿತು. ರಾಮನು ಅದಕ್ಕೆ ಒಪ್ಪುತ್ತಾನೆ. ಪಾದುಕೆಗಳ ಮೇಲೆ ರಾಮ ನಿಲ್ಲುವಂತೆ ಮಾಡಿ, ಆ ಪಾದುಕೆಗಳನ್ನು ತೆಗೆದುಕೊಂಡು ಭರತನು ಅದರ ಮೇಲೆ ಬೆಲೆಯುಳ್ಳ ವಸ್ತ್ರ ಹೊದಿಸಿ ತಲೆಯ ಮೇಲೆ ಅದನ್ನು ಹೊತ್ತು ರಾಮನಿಗೆ ಪ್ರದಕ್ಷಿಣೆ ಮಾಡಿ ಆನೆಯ ಮೇಲೆ ಅದನ್ನಿಡುತ್ತಾರೆ. ಎಲ್ಲರ ಕಣ್ಣುಗಳೂ ತೇವವಾಗುತ್ತವೆ. ಯಾರ ಬಾಯಿಂದಲೂ ಮಾತಿಲ್ಲ. ತಾಯಿಯರಿಗೆ ರಾಮನು ಮರ್ಯಾದೆಯಿಂದ ಅಭಿವಾದಿಸುತ್ತಾನೆ. ಹಿರಿಯರಿಗೂ ಗುಂಪಾಗಿ ಸೇರಿದ್ದ ಅಲ್ಲಿನ ಎಲ್ಲರಿಗೂ ಗೌರವವನ್ನು ಸೂಚಿಸಿ ಆದ ಮೇಲೆ ಅವರಿಂದ ಬೀಳ್ಕೊಂಡು ಮನೆಯೊಳಕ್ಕೆ ಹಿಂದಿರುಗುತ್ತಾನೆ.

ಒಂದು ಬಗೆಯಲ್ಲಿ ಭರತನಿಗೆ ಸಂತೋಷವಾಯಿತು, ಇಷ್ಟು ಮಟ್ಟಿಗಾದರೂ ತನ್ನ ಕಾರ್ಯ ಕೈಗೂಡಿತೆಂದು. ರಥದೊಳಕ್ಕೆ ಕುಳಿತು ರಾಜಧಾನಿಗೆ ಹೊರಡುತ್ತಾನೆ. ಅಯೋಧ್ಯೆ ಎಷ್ಟು ಶೂನ್ಯವಾಗಿ ಕಾಣುತ್ತದೆಂಬುದು ಕಾಣಿಸಿ ವ್ಯಥೆಯಾಗುತ್ತದೆ : ತನ್ನ ಆಕೃತಿಯನ್ನು ಕಳೆದುಕೊಂಡಂತೆ, ಸಂತೋಷಹೀನವಾದಂತೆ, ಜೀವಲೋಕದ ಸ್ವನವನ್ನು – ಪ್ರತಿಹತಸ್ವನಾ – ಕಳೆದುಕೊಂಡು ತಬ್ಬಲಿಯಾದಂತೆ ಇತ್ತಂತೆ. ತಾಯಿಯರನ್ನು ಅಯೋಧ್ಯೆಯಲ್ಲಿ ಸ್ಥಾಪಿಸಿ ಹತ್ತಿರದ ನಂದಿಗ್ರಾಮದಲ್ಲಿ ಆಡಳಿತದ ಸ್ಥಾನವನ್ನು ಏರ್ಪಡಿಸಿಕೊಳ್ಳಲು ನಿಶ್ಚಯಿಸುತ್ತಾನೆ. ಸಿಂಹಾಸನದ ಮೇಲೆ ಪಾದುಕೆಗಳನ್ನಿಟ್ಟು ಅವಕ್ಕೆ ಕಿರೀಟ ಧಾರಣೆ ಮಾಡಿ, ಅವುಗಳ ಮೇಲೆ ಛತ್ರಿ ಹಿಡಿಯಿರಿ ಎಂಬುದು ಅವನು ಮಾಡಿದ ಘೋಷಣೆ. ಹದಿನಾಲ್ಕು ವರ್ಷಗಳು

ಮುಗಿದ ಮೇಲೆ ರಾಮನು ಹಿಂದಿರುಗಿ ಮಕುಟಧಾರಣೆ ಮಾಡಿಸಿಕೊಂಡರೆ ಮಾತ್ರ ಅವನ ಮನಸ್ಸಿಗೆ ಸಂತೋಷ. ತಾನೂ ನಾರು ಬಟ್ಟೆಯುಟ್ಟು, ರಾಮನು ಕಾಡಿನಲ್ಲಿ ಹೇಗಿದ್ದಾನೊ ಹಾಗೆ ಪಟ್ಟಣದಲ್ಲಿ ವ್ರತಿಯಾಗಿ ಜೀವನ ನಡಸುತ್ತಾನೆ. ರಾಮನ ಹೆಸರಲ್ಲಿ ತಾನು ನಾಡನ್ನು ಆಳುತ್ತಾನೆ. ಚಿತ್ರಕೂಟಕ್ಕೆ ಹೋಗುವ ದಾರಿಯಲ್ಲಿ ಶತ್ರುಘ್ನನಿಗೆ ಏನು ನುಡಿದಿದ್ದನೊ ಅದನ್ನು ಈ ಪರಿಣಾಮ ಮುಂದುವರಿಸಿ ನಿರ್ದಿಷ್ಟವಾದ ಒಂದು ರೂಪ ಪಡೆದಂತಾಗುತ್ತದೆ. ರಾಮನು ಅಯೋಧ್ಯೆಗೆ ಹಿಂತಿರುಗುವುದನ್ನು ಕಾಣುವವರೆಗೂ ತನಗೆ ಶಾಂತಿಯಿಲ್ಲ, ಸಂತೋಷವಿಲ್ಲ. ಅವನಿಗೆ ಪ್ರತ್ಯಾಮ್ನಾಯವಾಗಿ ಪಾದುಕೆಯನ್ನು ತಂದಂತೆ ಮಾತ್ರ ಆಗಿದೆ. ವನವಾಸ ಕಾಲದಲ್ಲಿ ರಾಮನ ಒಪ್ಪಿಕೆಯಂತೆ ರಾಜ್ಯದ ಆಳ್ವಿಕೆ ಎಂದು ಈ ಏರ್ಪಾಡು ಮಾಡಿದೆ.

ಕಡೆಗೆ ಸಫಲತೆಯ ಕಾಲ ಬಂದಿತು. ರಾಮನು ಅರಣ್ಯವಾಸದ ಕಾಲವನ್ನು ಮುಗಿಸಿದ್ದಾನೆ. ತುಂಬ ಸಂತೋಷದಿಂದ ಭರತನು ತನ್ನನ್ನು ಸ್ವಾಗತಿಸುತ್ತಾನೆಂಬ ನಂಬಿಕೆ ಇದೆ. ಭರತನು ಸತ್ಯವಿಕ್ರಮನೆಂಬುದು ಇಲ್ಲಿ ವರ್ಣಿತ. ಸ್ವಾಗತಕ್ಕೆ ಅಯೋಧ್ಯೆಯನ್ನು ಸಿಂಗರಿಸಬೇಕೆಂದು ಆಜ್ಞೆ ಹೊರಟಿದೆ. ತನ್ನ ಪಟ್ಟಣಕ್ಕೆ ರಾಮನು ಹಿಂದಿರುಗುವುದನ್ನು ಕಾಣಲು ಜನರೆಲ್ಲ ನಂದಿಗ್ರಾಮಕ್ಕೆ ಬರುತ್ತಾರೆ. ಸ್ವಾಗತ ಸಮಾರಂಭ ದೊಡ್ಡ ಸಂತೋಷದ್ದು ; ಮಾನವರು ಸಾಧಿಸಬಲ್ಲ ಒಂದು ಆದರದ, ಭಕ್ತಿಯ, ಮಹೋತ್ಸವದ ದೃಶ್ಯ. ಹಿಂದೆ ಒಂದು ಸಂದರ್ಭದಲ್ಲಿ ರಾಮನು ಹೇಳಿದ್ದುದು ಹೀಗೆ : ಭೂಮಂಡಲದಲ್ಲಿ ಭರತನಂತಹ ಸೋದರರನನ್ನು ಎಲ್ಲಿ ಕಾಣಬಹುದು ಎಂದು. ಭರತನು ಸುಗ್ರೀವನನ್ನು ಅಪ್ಪಿಕೊಂಡು ಹಿಂದೆ ಸೋದರರು ನಾವು ನಾಲ್ವರಿದ್ದೆವು ; ನಿನ್ನೊಡನೆ ಈ ಐವರಾಗಿದ್ದೇವೆ ಎಂದನು. ಆ ಮೇಲೆ ತನ್ನ ಕೈಯಲ್ಲಿ ಪಾದುಕೆಗಳನ್ನೆತ್ತಿ ತಂದು ರಾಮನ ಕಾಲಿಗೆ ಅವನ್ನು ತೊಡಿಸಿ ಅಣ್ಣನಿಗೆ ರಾಜ್ಯವನ್ನು, ಕೋಶವನ್ನು, ಪಟ್ಟಣವನ್ನು, ಸೈನ್ಯವನ್ನು – ನಿತ್ಯ ತೇಜಸ್ಸಿನ ಪ್ರಭಾವದಿಂದ ಹತ್ತು ಮಡಿ ಅಭಿವೃದ್ಧಿ ಮಾಡಿ ಹಿಂದಿರುಗಿಸಲು ತನಗೆ ಸಂತೋಷವಾಗಿದೆ ಎಂದು ಹೇಳಿ ಒಪ್ಪಿಸುತ್ತಾನೆ. ಈ ಮಾತನ್ನು ಕೇಳಿ ವಾನರರೂ ವಿಭೀಷಣನೂ ಕಣ್ಣೀರು ಕರೆಯುತ್ತಾರೆ. ಅವರು ರಾಜ್ಯಕಾಮರು. ಇಂಥ ದೃಶ್ಯ ಅವರ ಅಂತಃಕರಣಗಳನ್ನು ತಟ್ಟಿ ಮನಸ್ಸನ್ನು ಕರಗಿಸಿ ಸಂದರ್ಭದ ಅತಿಶಯವನ್ನು ಕಾಣಿಸುತ್ತದೆ.

### ೪. ಒಂದು ಸಂವಾದ

ಅರಣ್ಯಕಾಂಡದ ಮೊದಮೊದಲ ಭಾಗದಲ್ಲಿಯೇ (ಸರ್ಗ ೬–೧೦)

ರಾಮನಿಗೂ ಸೀತೆಗೂ ನಡೆದ ಒಂದು ಸಂವಾದದ ವರ್ಣನೆಯಿದೆ. ಸುತೀಕ್ಷ್ಣರ ಆಶ್ರಮಕ್ಕೆ ಬರುವ ದಾರಿಯಲ್ಲಿ ಋಷಿಗಳಿಗೆ ಸಹಾಯಮಾಡುತ್ತೇನೆಂದು ರಾಮನು ವಾಗ್ದಾನ ಮಾಡಿದ್ದಾನೆ. ರಾಮಲಕ್ಷ್ಮಣರು ಸುತೀಕ್ಷ್ಣರ ಆಶ್ರಮದಿಂದ ಹೊರಕ್ಕೆ ಹೊರಟವರು ಬಿಲ್ಲುಬಾಣ ಖಡ್ಗಗಳಿಂದ ಸಜ್ಜಿತರಾದರು. ಬಹು ಮುಖ್ಯವಾದ ಒಂದು ಪ್ರಶ್ನೆಯನ್ನು ಸೀತೆ ಆಗ ಎತ್ತುತ್ತಾಳೆ. ಅದಕ್ಕೆ ರಾಮನು ಕೊಟ್ಟ ಉತ್ತರ ಮುಂದಿನ ಕಾಲಗಳಲ್ಲಿ ನಡೆಯಲಿದ್ದ ಎಲ್ಲ ಪ್ರಸಂಗಗಳಿಗೂ ಅದೃಷ್ಟವನ್ನು ರೂಪಿಸುವ ಒಂದು ಕಾರಣವಾಗುತ್ತದಲ್ಲದೆ ಋಷಿಗಳಿಗಾಗಿ ರಾಮನು ಕೈ ಕೊಂಡಿದ್ದ ಕಾರ್ಯಪ್ರಪಂಚದಲ್ಲಿ ವಿಶೇಷವಾಗಿ ತತ್ಪರನಾಗುವಂತೆ ಮಾಡುತ್ತದೆ. ಸೀತೆ ಎಷ್ಟು ವಿಚಾರಶೀಲಳು, ಸೂಕ್ಷ್ಮ ಮನಸ್ಸುಳ್ಳವಳು ಎಂಬ ವಿಷಯದಲ್ಲಿ ಇದು ಬೆಳಕು ಹಾಯಿಸುತ್ತದಲ್ಲದೆ ರಾಮನು ತನ್ನ ತೀರ್ಮಾನಗಳನ್ನು ಎಷ್ಟು ಬೇಗ ಮಾಡುತ್ತಿದ್ದ, ಕೈಕೊಂಡ ಕಾರ್ಯಗಳನ್ನು ನೆರವೇರಿಸುವುದರಲ್ಲಿ ಎಷ್ಟು ನಿಶ್ಚಲನಾಗಿರುತ್ತಿದ್ದ, ಅವನ ಇಚ್ಛೆ ಕಾರ್ಯಸಾಧನೆಯಲ್ಲಿ ಹೇಗೆ ದೃಢವಾಗಿರುತ್ತಿತ್ತು ಎಂಬುದನ್ನೂ ಸಂಸಾರದಲ್ಲಿ ಹೆಣ್ಣಿನ ಸ್ಥಾನವನ್ನೂ ತೋರಿಸುತ್ತವೆ.

ರಾಕ್ಷಸರು ಉಂಟುಮಾಡುತ್ತಿದ್ದ ಕೇಡುಗಳಿಂದ ತಮ್ಮನ್ನು ರಕ್ಷಿಸಿ ಅವರ ಭೀತಿ ತಪ್ಪಿಸಬೇಕೆಂದು ವ್ರತಿಗಳು ರಾಮನನ್ನು ಕೇಳಿದ್ದರು. 'ನೀನು ಕ್ಷತ್ರಿಯ; ಆದುದರಿಂದ ಅದು ನಿನ್ನ ಧರ್ಮ' ಎಂದಿರುತ್ತಾರೆ. 'ನೀನು ಇಕ್ಷ್ವಾಕು ವಂಶದ ಪ್ರಭುವೆಂಬುದು ಮಾತ್ರವಲ್ಲದೆ ಈ ಪೃಥ್ವಿಗೇ ಒಡೆಯ'ನೆನ್ನುತ್ತಾರೆ. 'ಈ ನೆರವನ್ನು ಕೊಡುವುದು ನಿನ್ನ ಕರ್ತವ್ಯ' ಎನ್ನುತ್ತಾರೆ. 'ನಿನ್ನಂಥವನನ್ನು ನಾಥನಾಗುಳ್ಳ ನಾವು ತಬ್ಬಲಿಗಳಂತಾಗಿದ್ದೇನೆ' – ಎಂದು ರಾಕ್ಷಸರು ತಿಂದುಹಾಕಿದ್ದ ಋಷಿಗಳ ಅವಶೇಷಗಳನ್ನು ತೋರಿಸುತ್ತಾರೆ. 'ಪಂಪಾನದಿ, ಅನುಮಂದಾಕಿನಿ ದಂಡೆಯ ಉದ್ದಕ್ಕೂ ಚಿತ್ರಕೂಟದವರೆಗೂ ನಮ್ಮನ್ನು ಬೆದರಿಸುತ್ತ ಕಾದಾಟಗಳನ್ನೊಡ್ಡುತ್ತಿದ್ದಾರೆ. ನಿನ್ನ ಆಶ್ರಮವನ್ನು ಬೇಡುತ್ತಿದ್ದೇವೆ :

> ಪರಾ ತ್ವತ್ತೋ ಗತಿರ್ವೀರ ಪೃಥಿವ್ಯಾಂ ನೋಪಪದ್ಯತೇ
> ಪರಿಪಾಲಯ ನಃ ರಾಮ ವಧ್ಯಮಾನಾ ನಿಶಾಚರೈಃ

ನಿನ್ನನ್ನು ಬಿಟ್ಟು ಈ ಪ್ರಪಂಚದಲ್ಲಿ ನಮಗೆ ಇನ್ನಾವ ಸಹಾಯವೂ ಇಲ್ಲ. ರಾಕ್ಷಸರ ಕೈಯಿಂದ ನಮ್ಮ ಕೊಲೆಯಾಗುತ್ತಿದೆ. ನಮ್ಮನ್ನು ಕಾಪಾಡು' ಎಂದವರಿಗೆ–

> ನೈವಂ ಅರ್ಹಥ ಮಾಂ ವಕ್ತುಂ ಆಜ್ಞಾಪ್ಯೋಽಹಂ ತಪಸ್ವಿನಾಂ
> ಭವತಾಂ ಅರ್ಥಸಿದ್ಧ್ಯರ್ಥಂ ಆಗತೋಽಹಂ ಯದೃಚ್ಛಯಾ
> ತಸ್ಯಮೇ ಅಯಂ ವನೇ ವಾಸೋ ಭವಿಷ್ಯತಿ ಮಹಾಫಲಃ

'ನನಗೆ ನೀವು ಬೇಡಿಕೊಳ್ಳಬೇಕಾಗಿಲ್ಲ ; ತಪಸ್ವಿಗಳು ನೀವು ನನಗೆ ಆಜ್ಞೆಮಾಡಬಹುದು. ಕೇವಲವಾಗಿ ಒದಗಿದ ಯಾವುದೊ ಕಾರಣದಿಂದ ಕಾಡಿಗೆ ಬಂದೆ ; ನನ್ನ ವನವಾಸ ನಿಮ್ಮ ಕಾರ್ಯವನ್ನು ನೆರವೇರಿಸಿಕೊಡುವುದಾದರೆ ಮಹಾಫಲ ಸಾಧಿಸದಂತಾಗುತ್ತದೆ' – ಎಂದು ರಾಮನು ಅವರಿಗೆ ಉತ್ತರ ಕೊಟ್ಟಿದ್ದಾನೆ. ರಾಕ್ಷಸರ ವಿನಾಶಕಾರ್ಯದಲ್ಲಿ ರಾಮನು ಹೇಗೆ ಸೇರಿಹೋಗುತ್ತಾನೆ ಎಂಬ ಅಂಶ ಈ ಬಗೆಯ ಯೋಚನೆಯಿಂದ ವಿಶದವಾಗುತ್ತದೆ.

ತಾವು ಮೂವರು ಮಾತ್ರವೇ ಜೊತೆಯಲ್ಲಿದ್ದಾಗ ಸೀತೆ ತನ್ನ ಸಂಭಾಷಣೆಯನ್ನು ಆರಂಭಿಸುತ್ತಾಳೆ. 'ಹೃದ್ಯಯಾ ಸ್ನಿಗ್ಧಯಾ ವಾಚಾ ಭರ್ತಾರಂ ಇದಂ ಅಬ್ರವೀತ್' ಎಂಬುದು ವಿಷಯದ ಪ್ರವೇಶ. ಮಹಾತ್ಮರಲ್ಲಿಯೂ ವಿಧಿಯಿಂದ ಮೂರು ವ್ಯಸನಗಳು ಪ್ರಾಪ್ತವಾಗುತ್ತವೆ. 'ಮಿಥ್ಯಾವಾಕ್ಯಂ' – ಎಂದರೆ ನಿಜವಲ್ಲದುದನ್ನು ಆಡುವುದು ; ಪರದಾರಾಭಿಗಮನ ; 'ವಿನಾವೈರಂಚ ರೌದ್ರತಾ' – ವೈರವಿಲ್ಲದೆ ಕೋಪಮಾಡಿಕೊಳ್ಳುವುದು. ತನ್ನ ಹೃದಯದ ಪ್ರೀತಿಯಲ್ಲಿ ಸ್ನೇಹದಿಂದ ಈ ಮಾತುಗಳನ್ನು ಗಂಡನಲ್ಲಿ ಅರಿಕೆಮಾಡಿಕೊಳ್ಳುತ್ತಿದ್ದಳು. 'ಋಷಿಗಳಲ್ಲಿ ನಿನಗಿರುವ ಆದರದಿಂದ ನೀನು ಕೆಡುಕನ್ನುಂಟು ಮಾಡುತ್ತಿದ್ದೀ. ರಾಕ್ಷಸರನ್ನು ಕೊಂದು ದಂಡಕಾರಣ್ಯದ ವಾಸಿಗಳಿಗೆ ನಿರ್ಭಯ ಮಾಡಿಕೊಡುತ್ತೇನೆಂದು ಮಾತು ಕೊಟ್ಟಿದ್ದೀಯಲ್ಲವೆ? ಮೊದಲಿನ ಎರಡು ವ್ಯಸನಗಳಿಗೆ ನೀನು ಈಡಾದವನಲ್ಲ; ನೀನು ನಿನ್ನ ಇಂದ್ರಿಯಗಳನ್ನು ನಿನ್ನ ವಶದಲ್ಲಿಟ್ಟುಕೊಂಡಿದ್ದೀಯೆ– 'ವಶ್ಯೇಂದ್ರಿಯಂ'– ನಾನು ಬಲ್ಲೆ. ನೀನು ಸತ್ಯವಂತನೆಂಬುದು ನೀನು ಕಾಡಿಗೆ ಬಂದುದರಿಂದಲೇ ಸ್ಥಾಪಿತವಾಗುತ್ತದೆ. ಋಷಿಗಳಿಗೆ ಕೊಟ್ಟ ಮಾತನ್ನು ನೆರವೇರಿಸಲು ಈಗ ಕಾರ್ಯ ಪ್ರವೃತ್ತನಾಗುತ್ತಿದ್ದೀ. ನನ್ನ ಮನಸ್ಸಿಗೆ ಚಿಂತೆ ಉಂಟಾಗಿದೆ. ನಿನ್ನ ನಿಃಶ್ರೇಯಸವನ್ನು ಕುರಿತು ನಾನು ಆಲೋಚಿಸುತ್ತಿದ್ದೇನೆ. 'ನಹಿ ಮೇ ರೋಚತೇ ವೀರಾ ಗಮನಂ ದಂಡಕಾನ್ ಪ್ರತಿ' – ದಂಡಕವನ್ನು ಹಿಡಿದು ನೀನು ಹೋಗುವುದು ನನ್ನ ಮನಸ್ಸಿಗೆ ಸರಿತೋರುತ್ತಿಲ್ಲ. ಕ್ಷತ್ರಿಯ ಆಯುಧಗಳಿಂದ ಸಜ್ಜುಗೊಂಡು ಹೋಗುತ್ತಿರುವಾಗ ರಾಕ್ಷಸರ ಮೇಲೆ ಅವನ್ನು ಬಳಸುವುದಕ್ಕೆ ಸುಲಭವಾಗಿ ಮನಸ್ಸುಳ್ಳವನಾಗುತ್ತಾನೆ. ಕ್ಷತ್ರಿಯನಿಗೆ ಬಿಲ್ಲು ಬಾಣ ಬೆಂಕಿಯ ಬಳಿ ಸೌದೆ ಇದ್ದಂತೆ ; ಒಂದನ್ನು ಇನ್ನೊಂದು ಉತ್ತೇಜಿಸುತ್ತದೆ.[೪] ಶಸ್ತ್ರಗಳ ಫಲ ಇದು.' ಆಗ

೪ ಎಂದವಳೇ ಒಂದು ಕತೆ ಹೇಳುತ್ತಾಳೆ : ಋಷಿ ಒಬ್ಬನನ್ನು ಕುರಿತದ್ದು ಅದು. ಅವನನ್ನು ಪರೀಕ್ಷೆ ಮಾಡಬೇಕೆಂದು ಇಂದ್ರನು ಅವನಿಗೆ ಹೊಳಪಾದ ಒಂದು ಖಡ್ಗವನ್ನು ತಂದುಕೊಟ್ಟು ಬೇಗ ಹಿಂದಕ್ಕೆ ಬಂದು ತೆಗೆದುಕೊಂಡು ಹೋಗುತ್ತೇನೆ ; ನಿಮ್ಮಲ್ಲಿಟ್ಟುಕೊಂಡಿರಿ ಎಂದನಂತೆ.

ಆಕೆ ಒಂದು ವಾಕ್ಯ ಹೇಳುತ್ತಾಳೆ : 'ಸ್ನೇಹಾಚ್ಚ ಬಹುಮಾನಾಚ್ಚ ಸ್ಮಾರಯೇತ್ವಾಂ ನ ಶಿಕ್ಷಯೇ' – ನಿನ್ನಲ್ಲಿರುವ ಸ್ನೇಹದಿಂದಲೂ ಗೌರವದಿಂದಲೂ ನಿನ್ನ ನೆನಪಿಗೆ ಇದನ್ನು ತರುತ್ತಿದ್ದೇನೆ ; ಉಪದೇಶ ಮಾಡಬೇಕೆಂದಲ್ಲ – ಎಂಬ ಮಾತು ಅದು. ಮುಂದಿನ ಕಾಲಗಳಲ್ಲಿ 'ಸ್ಮಾರಯೇತ್ವಾಂ ನ ಶಿಕ್ಷಯೇ' ಎಂಬ ವಾಕ್ಯ ದೊಡ್ಡ ಸೂಕ್ತಿಯಾಗಿ ಪರಿಣಮಿಸುತ್ತದೆ. ಎಷ್ಟು ಮರ್ಯಾದೆಯ ಮಾತು !

ಎಂದರೆ, ಈ ಸನ್ನಿವೇಶ ಸ್ನೇಹ, ಆದರ, ಗೌರವಗಳದು ; ಬೋಧನೆಯದಲ್ಲ. ಅವನಿಗೆ ನೆನಪು ಕೊಡಬೇಕಾದ ಅಗತ್ಯ ತೋರಿ ತಾನು ಆ ಮಾತನ್ನಾಡಿದ್ದಳು. 'ವೈರವಿಲ್ಲದೆ ಈಗ ಕೈಕೊಳ್ಳುವ ಕರ್ತವ್ಯವಿಲ್ಲ ; ನಿನ್ನ ಉಡುಪು ವ್ರತಗಳಿಗೂ, ಕೊಲ್ಲುವುದಕ್ಕೂ ಹೊಂದಿಕೆಯಾಗದು. ಹಾಗೆಯೇ 'ದೇಶ ಧರ್ಮಸ್ತು ಪೂಜ್ಯತಾಂ' – ಈ ದೇಶದ ಧರ್ಮಗಳಿಗೆ ಗೌರವ ತೋರಿಸಬೇಕಲ್ಲವೆ ? ಇದು ಕಾರ್ಯಕ್ಕೆ ಪರಿಮಿತಿಯನ್ನು ಒಟ್ಟುವ ಸಂಗತಿ. ಅಯೋಧ್ಯೆಗೆ ನಾವು ಹಿಂತಿರುಗಿದ ಮೇಲೆ ರಾಜ್ಯ ಸೂತ್ರಗಳನ್ನು ಪುನಃ ನೀನು ಹಿಡಿದಾಗ ಇಂತಹ ಜವಾಬ್ದಾರಿಗಳನ್ನು ಕೈಕೊಳ್ಳಬಹುದು' – ಎಂದವಳೇ ಅವನ ಮನಸ್ಸು ತಟ್ಟುವಂತೆ 'ನಿತ್ಯಂ ಶುಚಿಮತಿಃ, ಸೌಮ್ಯ, ಚರಧರ್ಮಂ ತಪೋವನೇ'– 'ತಪೋವನದಲ್ಲಿ ಧಾರ್ಮಿಕವಾದ ಬದುಕನ್ನು ಬಾಳು ; ಆದರೆ ನಿನ್ನ ಇಷ್ಟದಂತೆ ನಿರ್ಣಯ ಮಾಡು ; ನೀನು ಸ್ವತಂತ್ರ' ಎನ್ನುತ್ತಾಳೆ.

ಇವೊತ್ತಿಗೂ ಹೊಂದತಕ್ಕ ಮೂರು ಪ್ರಶ್ನೆಗಳಾದರೂ ಇಲ್ಲಿವೆ : ರಾಷ್ಟ್ರೀಯವಾಗಿ ಒದಗುವ ಸಂಬಂಧಗಳಲ್ಲಿ ಅರ್ಥವಾಗುವಂತಿವೆ. ಕಾರ್ಯ ನೆರವೇರಿಸುವಾಗ ಇದರಲ್ಲಿ ತೊಡಗುವುದರಿಂದ ಉಂಟಾಗುವ ಫಲಪರಿಣಾಮಗಳು ಯಾವ ವಿಧಿನಿಯಮಗಳಿಗೆಂಬಂತೆ ಒಳಪಟ್ಟು ಕಾರ್ಯ ನಡೆಯಬೇಕೆಂಬುದರ ಸ್ವರೂಪವನ್ನು ಕಣ್ಣಿಗೆ ಕಾಣಿಸುತ್ತದೆ. ಅಂಥ ಸಂಗತಿಗಳನ್ನು ಪರ್ಯಾಲೋಚಿಸುವುದು ಯುಕ್ತ. ಈ ಪ್ರಶ್ನೆಗಳನ್ನು ಸೀತೆ ಎತ್ತಿದುದು ಸರಿ. ಜೊತೆಗೆ ಅವಳು ತುಂಬಾ ವಿನಯದಿಂದಲೂ ಪ್ರೀತಿಯಿಂದಲೂ ಮರ್ಯಾದೆಯಿಂದಲೂ ಹೇಳುತ್ತಾಳೆ. ಆಕೆಯ ವಾದಗಳು ತೂಕವುಳ್ಳವು : 'ಯಾರಿಗೊ ಮಾತು ಕೊಟ್ಟಿದೆ : ಅದು ಹಿಂಸಾಪ್ರಕರಣ ; ಅದರ ಫಲವಾಗಿ

---

ನ್ಯಾಸರಕ್ಷಣ ತತ್ಪರನಾದ ಆ ಋಷಿ ಈ ನ್ಯಾಸವನ್ನು ಕಾಪಾಡುವ ಉದ್ದೇಶದಿಂದ ತನ್ನ ತಪಸ್ಸಿಗಿಂತ ಹೆಚ್ಚಾಗಿ ಖಡ್ಗದಲ್ಲಿಯೇ ಹೆಚ್ಚು ಗಮನವುಳ್ಳವನಾದನಂತೆ. ಕಡೆಗೆ ಸ್ವಭಾವಕ್ಕೆ ಹಿಂಸಾಬುದ್ಧಿ ಬಂದು ಅವನು ಕ್ರೂರನಾಗಿ ನರಕದಲ್ಲಿ ಬಿದ್ದನಂತೆ.

ಸಾವು ಸಂಭವಿಸುತ್ತದೆ. ವ್ಯಕ್ತಿ ಶಸ್ತ್ರಸಜ್ಜಿತನಾಗುತ್ತಾನೆ. ಶಿಕ್ಷಾರ್ಹವಾದ ಯಾವ ಖಾಸಾ ಕೋಪಕಾರಣವೂ ಇಲ್ಲ. ಇದು ಬೇರೊಬ್ಬರ[೫] ದೇಶ ; ಎಂದರೆ, ಇತರ ಕಾನೂನುಗಳು ಮತ್ತು ಸಂಪ್ರದಾಯಗಳು ಇಲ್ಲಿ ಸಲುವಳಿಯಲ್ಲಿರಬಹುದು : ಆ ಇತರರು ನಿನಗೆ ಯಾವ ಕೇಡನ್ನೂ ಮಾಡಿಲ್ಲ. ಅವರಿಗೆ ತಿಳಿವಳಿಕೆ ಕೊಡದೆ ಮಾಡಿದ್ದು.'

ರಾಮನ ಉತ್ತರ ಅವನ ಶೀಲಕ್ಕೆ ಅನುಗುಣವಾದ್ದು ; ಕಡೆಯ ತೀರ್ಮಾನದ್ದು. ಇಂಥ ಮಾತುಗಳನ್ನಾಡಿದುದಕ್ಕೆ ಆಕೆಯನ್ನು ವಂದಿಸುತ್ತಾನೆ. ಸತ್ಕುಲದಲ್ಲಿ ಹುಟ್ಟಿ ಧರ್ಮವನ್ನು ಬಲ್ಲ ನಿನಗೆ ಅವು ತಕ್ಕವು. ನಾನು ತಿಳಿಸಬೇಕೆಂಬ ಸಂಗತಿ ಇದು:

ಕ್ಷತ್ರಿಯೈರ್ಧಾರ್ಯತೇ ಚಾಪೋ ನಾರ್ತಶಬ್ದೋಭವೇದಿತಿ
ನಲಭಂತೆ ಸುಖಂ ಭೀತಾ ರಾಕ್ಷಸೈಃ ಕ್ರೂರಕರ್ಮಭಿ

ಕ್ಷತ್ರಿಯನು ಬಿಲ್ಲು ಹಿಡಿದಿರುವುದು 'ನನಗೆ ನೆರವು, ದಿಕ್ಕು ಇಲ್ಲ' ಎಂಬ ಶಬ್ದ ಯಾರ ಬಾಯಿಂದಲೂ ಬಾರದಿರಲಿ ಎಂದು. ಕ್ರೂರಕರ್ಮಿಗಳಾದ ರಾಕ್ಷಸರ ಭಯದಲ್ಲಿ ಬದುಕಬೇಕಾಗಿರುವವರಿಗೆ ಯಾವ ಸುಖವೂ ದೊರೆಯದು.[೬] ಸಜ್ಜನರೂ ಪ್ರಾಮಾಣಿಕರೂ ಆದ ಜನ ನನ್ನಲ್ಲಿಗೆ ಬಂದು ಆಶ್ರಯ ಬೇಡುತ್ತಿದ್ದಾರೆ. ಅವರು ಮುನಿಗಳು, 'ಸಂಶ್ರಿತವ್ರತಾಃ' – ಇತರರಿಗೆ ಕೇಡು ಮಾಡದೆ ತಮ್ಮ ಧರ್ಮದಲ್ಲಿ ನಿರತರಾಗಿರುವವರು ಅವರು. ಕಂದ, ಮೂಲ ಹಣ್ಣು ತಿಂದು ಬದುಕಿರುವವರು:

ರಕ್ಷನಸ್ತ್ವಂ ಸಹಭ್ರಾತ್ರಾ ತ್ವಂ ನಾಥಹಿ ವಯಂ ವನೇ
ಮಯಾಚ ಏತದ್ವಚ ಶ್ರುತ್ವಾ ಕಾರ್ತ್ಸ್ನೇನ ಪರಿಪಾಲನಂ
ಸಂಶ್ರುತ್ಯ ಚ ನ ಶಕ್ಷ್ಯಾಮಿ ಜೀವಮಾನಃ ಪ್ರತಿಶ್ರವಂ
ಮುನೀನಾಂ ಅನ್ಯಥಾ ಕರ್ತುಂ ಸತ್ಯಮಿಷ್ಟಂ ಹಿ ಮೇ ಸದಾ

---

೫ ದಂಡಕಾರಣ್ಯ ಅಯೋಧ್ಯೆಯ ರಾಜರಿಗೆ ಸೇರಿದ್ದು ಎಂಬುದು ತಥ್ಯವಾಗದಿದ್ದರೆ ಮುಂದೆ ರಾಮನು ಅವರಿಗೆ ಸೇರಿದ್ದೇ ಎಂದು ಹೇಳುವ ವಾಕ್ಯವಿದೆ, – ಕಿಷ್ಕಿಂಧಾ ಕಾಂಡದಲ್ಲಿ.

೬ ಯುರೋಪಿನ ರಾಷ್ಟ್ರಗಳು ಏಶಿಯಾಖಂಡದಲ್ಲಿಯೂ ಆಫ್ರಿಕಾದಲ್ಲಿಯೂ ಈ ರೀತಿಯ ಹೊಣೆಗಾರಿಕೆಯನ್ನು ತಾವು ಹೊತ್ತಿದ್ದೇವೆನ್ನುತ್ತಿದ್ದರು. ಭಟಮಾನ್ಯಪದ್ಧತಿ ನಡೆಯುತ್ತಿದ್ದ ಕಾಲದಲ್ಲಿ ಇಂಥ ರಕ್ಷಣಾ ಕಾರ್ಯಗನ್ನು ಮಾಡುತ್ತಿದ್ದ ಪಟ್ಟಭದ್ರ ವೀರರೂ ಯೋಧರೂ ಹೀಗೆ ಮಾಡುತ್ತಿದ್ದರು – ಎಂಬುದನ್ನು ಇಲ್ಲಿ ಹೋಲಿಸಬಹುದು.

'ಭೀತಿಯಂದ ಅವರು ಬಿಡುಗಡೆಗೊಂಡಿರಬೇಕು. ಬದುಕಿನ ಪ್ರತಿಕ್ಷಣವೂ ಅವರ ತಲೆಯ ಮೇಲೆ ಭೀತಿ ಕವಿದಿದೆ.[೭] ಈ ಜನ ತಮ್ಮ ವ್ರತಗಳಲ್ಲಿ ತೊಡಗಿರುವಾಗ ರಾಕ್ಷಸರು ಬಂದು ಅವರ ಮೇಲೆ ಬಿದ್ದು ಅವರನ್ನು ಕೊಂದು ತಿನ್ನುತ್ತಾರೆ. ಹಿಂಸಾಕೃತ್ಯಗಳಿಗೆ ಈಡಾಗಿ, ತಮ್ಮನ ಜೊತೆಯಲ್ಲಿ ಇಲ್ಲಿರುವ ನನ್ನಲ್ಲಿಗೆ ಬಂದು ನೆರವು ನೀಡಬೇಕೆಂದು ನನ್ನನ್ನು ಕೇಳಿದ್ದಾರೆ. ಅಂಥವರು ನನಗೆ ಮನವಿ ಮಾಡಿಕೊಳ್ಳುವುದು ನನಗೆ ಸಿಗ್ಗು ತರುತ್ತಿದೆ. ತಮ್ಮ ತಪಸ್ಸಿನಿಂದ ರಾಕ್ಷಸರನ್ನು ಕೊಲ್ಲುವ ಶಕ್ತಿ ಇದೆ – ಅವರಿಗೆ ; ಆದರೆ ನಾಶಕ್ರಿಯೆಗೆ ತಪಸ್ಸನ್ನು ಬಳಸಲು ಅವರಿಗೆ ಇಷ್ಟವಿಲ್ಲ. ಅವರನ್ನು ರಕ್ಷಿಸುವ ಕಾರ್ಯ ಹೀಗೆ ನನ್ನ ಮೇಲೆ ಬೀಳುತ್ತಿದೆ. ನನ್ನ ಪ್ರಾಣದ ಪಣವಿಟ್ಟು ನೆರವು ಕೊಡುತ್ತೇನೆಂದು ವಾಗ್ದಾನ ಮಾಡಿದ್ದೇನೆ. ಕೊಟ್ಟ ಮಾತನ್ನು ನೆರವೇರಿಸುತ್ತೇನೆ' – ಎಂದನು.

ಅವನ ಶೀಲಜನ್ಯವಾದ ಇನ್ನೊಂದು ವಾಣಿ ಇಲ್ಲಿದೆ : ಬೇರಾರೂ ನನ್ನನ್ನು ಕೇಳದಿದ್ದರೂ ಇಂಥ ಕಾರ್ಯ ನನಗೆ ಪ್ರಿಯವೇ. ಈಗ ಮಾತು ಕೊಟ್ಟು ಬಂಧಿತನಾಗಿದ್ದೇನೆ. ಯಾವ ಬೆಲೆಯನ್ನು ನಾನು, ನೀನು, ಲಕ್ಷ್ಮಣ ಅಥವಾ ನನ್ನ ಸ್ವಂತಜೀವ ತೆರಬೇಕಾದರೂ ಅದನ್ನು ತೆರುತ್ತೇನೆ. ಬೇರೆಯವರು ನನ್ನನ್ನು ಕೇಳಬೇಕಿಲ್ಲ. ಬ್ರಾಹ್ಮಣರಿಗೆ, ಅದರಲ್ಲಿಯೂ ವ್ರತಿಗಳಿಗೆ ನಾನು ಮಾತು ಕೊಟ್ಟಿರುವ ಈಗ ಹೇಗೆ ಮಾಡದೆ ಬಿಡಲಿ? – 'ಅನುಕ್ತೇನಾಪಿ, ವೈದೇಹಿ ; ಪ್ರತಿಜ್ಞಾಯಾ ತು ಕಿಂ ಪುನಃ?' ನಮ್ಮ ಕಾಲದ ಮತ್ತು ಅಂತಾರಾಷ್ಟ್ರೀಯ ಸಂಬಂಧ ಕ್ರಿಯೆಗಳಲ್ಲಿ (ಉದಾ. ಅಮೆರಿಕದ ಸಂಯುಕ್ತ ಸಂಸ್ಥಾಗಳಲ್ಲಿ ಮತ್ತು ಸೋವಿಯಟ್ ರಷ್ಯಾ ಇವನ್ನು ಪರಿಶೀಲಿಸಬಹುದು) ಅಂಥ ವಾಣಿಯ ಮತ್ತು ನಡವಳಿಕೆಯ ಕಾರ್ಯಮುಖತೆಯನ್ನು ಇಂಥ ವಾಣಿಯ ಬೆಳಕಿನಲ್ಲಿ ಬೆಲೆಗಟ್ಟಬೇಕು. ಇದು ಕಾರ್ಯನಿರ್ವಹಣೆಯ ತೀರ್ಮಾನ. ಆ ತೀರ್ಮಾನಕ್ಕೆ ಅವನು ಬಂದಿದ್ದಾನೆ – ಎಂಬ ತನ್ನ ಉದ್ದೇಶವನ್ನು ಘೋಷಿಸುತ್ತದೆ. ಅವನ ನಡವಳಿಕೆ ಹೇಗೆ ಯುಕ್ತ, ಅಗತ್ಯ ಎಂಬುದನ್ನು ತಿಳಿಸುತ್ತದೆ. ಇಲ್ಲಿರಬಹುದಾದ ನೈತಿಕ ಮೌಲ್ಯ, ಕರ್ತವ್ಯ ಇದರಿಂದ ಹರಿದು ಬರುತ್ತದೆ. ಪ್ರೀತಿಪಾತ್ರಳಾದ ಆಲೋಚನಪರಳಾದ ಹೆಂಡತಿ ಆಡಿದ ಮಾತುಗಳನ್ನು ತಾಳ್ಮೆಯಿಂದ ಕೇಳಿಯೇನೊ ಕೇಳಿದ್ದಾನೆ. ಅವಳ ಸ್ನೇಹವನ್ನೂ ಮೆಚ್ಚಿಕೊಂಡಿದ್ದಾನೆ. ಯಾವ ಸೌಹಾರ್ದದಿಂದ ಅವಳು ನುಡಿದಿದ್ದಾಳೆ

---

೭ ಅಟ್ಲಾಂಟಿಕ್ ಘೋಷಣೆಯಲ್ಲಿ ಭೀತಿಯಿಂದ ಬಿಡುಗಡೆ – Freedom from fear – ಎಂಬ ಒಂದು ಘೋಷಣೆ ಸೇರಿದೆ.

ಎಂಬುದು ಅವನಿಗೆ ಅರ್ಥವಾಗಿದ. ಆಕೆ ಆಡಿದ ಈ ಮಾತುಗಳನ್ನು ಕೇಳಿ ಅವನಿಗೆ ವಾಸ್ತವವಾಗಿ ಸಂತೋಷಾಗಿದೆ ; ಅವು ಅವಳ ಯೋಗ್ಯತೆಗೆ ತಕ್ಕವು ಎನ್ನಿಸಿದೆ.

ಅಲ್ಲಿ ಉಕ್ತವಾಗಿರುವ ರಾಜಕೀಯ ಮತ್ತು ಖಾಸಗಿ ನಡವಳಿಕೆಯ ತತ್ವಗಳನ್ನು ಈ ಉಪಪ್ರಸಂಗ ಹೇಗೆ ತಿಳಿಸುತ್ತದೆಯೊ ರಾಮಸೀತೆಯರ ನಡುವೆ ಬೆಳೆದಿದ್ದ ಸಂಬಂಧ ಎಷ್ಟು ಪ್ರೇಮಾದರಗಳದು ಎಂಬುದನ್ನು ತಿಳಿಸುವುದಕ್ಕೂ ಹಾಗೆಯೇ ಸ್ಮರಣೀಯವಾಗಿದೆ. ಹಾಗೆಯೇ, ಮೌನವಾಗಿ ಎಲ್ಲವನ್ನೂ ನೋಡುತ್ತ ಆಡಿದುದೆಲ್ಲವನ್ನೂ ಕಿವಿಗೆ ಹಾಕಿಕೊಳ್ಳುತ್ತ ಸದ್ದಿಲ್ಲದೆ ರಾಮನು ಏನೇನನ್ನು ತೀರ್ಮಾನಿಸುತ್ತಾನೆಯೊ ಅವುಗಳಲ್ಲೆಲ್ಲ ಭಾಗವಹಿಸುತ್ತ ಬೀಸಿದ ಎಲ್ಲ ಬಿರುಗಾಳಿಗೂ ಒದಗಿ ಎಲ್ಲ ಶಾಂತಿ ಸಂತೋಷಗಳಿಗೂ ಪಾಲುದಾರನಾಗಿ ಲಕ್ಷ್ಮಣನಿದ್ದಾನೆ. ಇದು ಒಟ್ಟಿಗೆ ನಡೆದ ಬದುಕು. ಎರಡು ಕಡೆಯವರೂ ನುಡಿದ ವಾದಗಳು ಎಷ್ಟು, ಹೇಗೆ ಉಚಿತ, ಒಪ್ಪುತ್ತವೆ ಎಂಬುದನ್ನು ಕುರಿತೂ ಆ ಸನ್ನಿವೇಶದ ಅವಸರಗಳಲ್ಲಿಯೂ ಅಭಿಪ್ರಾಯಗಳಲ್ಲಿಯೂ ನಿರ್ಣಯ ಬೇರೆ ಬೇರೆ ಆಗಬಲ್ಲವು. ಈ ತೀರ್ಮಾನದ ಪರಿಣಾಮ ರಾಮನ ಮೇಲೆ ಯಾವ ರೀತಿ ಕವಿಯುತ್ತದೆ ಎಂಬುದು ಮುಂದೆ ರೂಪಗೊಂಡಾಗ ನಾವು ರಾಮಾಯಣದಲ್ಲಿ ಅರಿಯುತ್ತೇವೆ. ಆದರೇನು? ತೀರ್ಮಾನ ತೀರ್ಮಾನವೇ : ರಾಮನಿಗೆ. ಸ್ವಂತದ, ಲಕ್ಷ್ಮಣನನ್ನು ಕುರಿತ, ಅಥವಾ ಸೀತೆಯನ್ನು ಕುರಿತ ಯಾವ ಪರಿಗಣನೆಯೂ ಅಡ್ಡನಿಲ್ಲದು ಅದರಲ್ಲಿ. ರಾಮನ ಮಾತಿನಲ್ಲಿ ಇರುವ ಒಂದು ಲಕ್ಷಣ ಇದು : ನಡತೆಯನ್ನು ಕುರಿತು ಅವನು ಮಾಡುವ ಘೋಷಣೆಗಳಲ್ಲಿ, ಸರಿಯೆಂದು ತನಗೆ ತೋರಿದುದನ್ನು ನುಡಿಯುವಲ್ಲಿ ಸೀತೆ ಲೆಕ್ಕಕ್ಕೆ ಬರುವುದಿಲ್ಲ ಎಂಬುದು ವ್ಯಥೆ ತರುವ ಸಂಗತಿ. ಅವಳು ತೆರಬೇಕಾಗಿ ಬಂದ ಮೇಲೆ ಅತ್ಯಧಿಕವಾದ್ದು.

## ೫. ಶಬರಿ

ಶಬರಿಯ ಪ್ರಸಂಗ ಮುಂದಿನ ಕಾಲಗಳಲ್ಲಿ ಮೂಲದ ನೆಲಸಿಗಿಂತ ಹೆಚ್ಚನ ಅರ್ಥವಂತಿಕೆ ಬೆಳಸಿದೆ ; ಅದರ ಸುತ್ತ ಬೆಳೆಯಬಹುದಾದ್ದಕ್ಕಿಂತ ಹೆಚ್ಚಿನ ಭಾವಪ್ರಕಾಶನಕ್ಕೆ ಎಡೆಕೊಟ್ಟಿದೆ. ರಾಮಾಯಣದಲ್ಲಿ ನಡೆದ ಸಂಗತಿ ಕಬಂಧನು ಸೋದರರಿಗೆ ಕೊಟ್ಟ ನಿರ್ದೇಶನದ ಫಲವಾಗಿ ಬಂದದ್ದು. ಪಂಪಾ ಸರೋವರದ ಪಕ್ಕದ ಬೆಟ್ಟಗಳ ಇರುಕುಗಳಲ್ಲಿ ನಾಲ್ವರು ಸ್ನೇಹಿತರೊಡನೆ ಇರುವ ಸುಗ್ರೀವನ ಸ್ನೇಹ ಬೆಳಸಬೇಕೆದು ಕಬಂಧನು ರಾಮನಿಗೆ ಹೇಳಿರುತ್ತಾನೆ. ಸುಗ್ರೀವನು ಆಗಾಗ

ಹೊರಗೆ ಬಂದು ಋಷ್ಯಮೂಕ ಪರ್ವತಗಳಲ್ಲಿ ಕುಳಿತುಕೊಳ್ಳುತ್ತಾನೆ ಎಂದು ತಿಳಿಸಿದ್ದ ; ಅವನ ನಾನಾ ಗುಣಗಳನ್ನು ಎತ್ತಿ ಹೇಳಿ ಮೆಚ್ಚಿಕೆಯ ನುಡಿ ನುಡಿದಿರುತ್ತಾನೆ. ಪಕ್ಕದಲ್ಲಿರುವ ಪಂಪಾಸರಸ್ಸು, ಅದರ ಭೂಸನ್ನಿವೇಶ ಎಷ್ಟು ಚೆನ್ನಾಗಿದೆ, ಚಿತ್ರಶೃಂಗಾರಗಳಿಂದ ಕೂಡಿದೆ – ಎಂದು ಹೇಳುವುದರ ಜೊತೆಗೆ ಆ ಸ್ಥಳದಲ್ಲಿ ಯಾವ ಗದ್ದಲವೂ ಇಲ್ಲ ; ಅದರ ಶಾಂತಿಭಂಗಮಾಡುವ ಯಾವ ಸಂದರ್ಭವೂ ಇಲ್ಲ ; ಮನುಷ್ಯರು ಉಂಟುಮಾಡಬಹುದಾದ ಯಾವ ತೊಂದರೆ ಕಷ್ಟಗಳನ್ನೂ ಅರಿಯದೆ ಅಲ್ಲಿ ಹಕ್ಕಿಗಳು ಹಾರಾಡುತ್ತವೆ ಎಂಬುದನ್ನು ಕಬಂಧನು ತಿಳಿಸುತ್ತಾನೆ. ಜನರ ಕೈಯಿಂದ ತಾವು ಸಾಯುತ್ತೇವೆ ಎಂಬುದನ್ನು ಆ ಪಕ್ಷಿಗಳು ಅರಿಯವು ; ಅಲ್ಲಿ ಇರುವ ಹಕ್ಕಿ, ಮೀನು ಬಹು ರಚಿಕರವಾದ ತಿನಿಸಾಗುತ್ತವೆ:

> ಘೃತಪಿಂಡೋಪಮಾನ್ ಸ್ಥೂಲನ್ ತಾನ್ ದ್ವಿಜಾನ್ ಭಕ್ಷ್ಯಯಿಷ್ಯಥಃ
> ರೋಹಿತಾನ್ ವಕ್ರತುಂಡಾಲಶ್ಚ ನಡಮೀನಾಂಶ್ಚ......

(ತುಪ್ಪದ ಮುದ್ದೆಯಂತೆ ಪುಷ್ಟವಾಗಿ ಬೆಳೆದ ಆ ಹಕ್ಕಿಗಳು ನಿಮಗೆ ಒಳ್ಳೆಯ ಭಕ್ಷ್ಯಗಳನ್ನು ಒದಗಿಸುತ್ತವೆ ; ನಾಲಗೆಗೆ ರುಚಿ ಕೊಡುತ್ತವೆ ; ಈ ಹಕ್ಕಿ, ಮೀನು ರೋಹಿತ, ವಕ್ರತುಂಡ, ನಡಮೀನು, ಜಾತಿಯವು.) ಯಾವ ಬಗೆಯಲ್ಲಿ ಅವನು ಆಡಬಹುದು ಎಂಬುದನ್ನೂ ವಿವರಿಸುತ್ತಾನೆ. ಅಲ್ಲಿ ಶಬರಿ ಎಂಬ ಹೆಸರಿನ ಒಬ್ಬ ಪರಿಚಾರಿಣಿ, ಶ್ರಮಣಿ ಇದ್ದಾಳೆ. ಅವಳನ್ನು ನೋಡಿ ಹೋಗಿ ; ಆಕೆಗೆ ತುಂಬ ವಯಸ್ಸಾಗಿದೆ ('ಚಿರಂಜೀವಿನೀ'). ತಾನು ಸ್ವರ್ಗಸ್ಥಳಾಗುವ ಮುಂಚೆ ನಿಮ್ಮನ್ನು ಕಾಣುವ ಆಸೆಯಲ್ಲಿದ್ದಾಳೆ. ಅದೇ ಸುಖ್ಯಾತ ಮತಂಗಾಶ್ರಮ.[೮] ಆಶ್ರಮ ಅತಿಶಯ ಚೆಲುವುಳ್ಳದ್ದು. ಮತಂಗ ಋಷಿ ಬದುಕಿದ್ದಾಗ ಈ ಶಬರಿ ಆತನಿಗೆ ಸೇವೆ ಸಲ್ಲಿಸುತ್ತಿದ್ದಳು ಎಂದಿರುತ್ತಾನೆ.

ಸೋದರರು ನಡೆದುಹೋಗಿ ಪಂಪಾಸರಸ್ಸಿನ ಎಡದಡದಲ್ಲಿದ್ದ ಶಬರಿಯ ಆಶ್ರಮವನ್ನು ಕಂಡು ಅಲ್ಲಿಗೆ ಹೋಗುತ್ತಾರೆ. ಅವರನ್ನು ಕಂಡಕೂಡಲೆ ಆಕೆ ಅವರಿಗೆ ಕೈಮುಗಿದು ಪಾದ ಮುಟ್ಟುತ್ತಾಳೆ. ಅರ್ಘ್ಯ, ಪಾದ್ಯ, ಆತಿಥ್ಯ ಕೊಡುತ್ತಾಳೆ. ಅವರು ಅವಳ ವ್ರತಾದಿಗಳು ಹೇಗೆ ನಡೆಯುತ್ತಿವೆ ಎಂಬುದನ್ನು ವಿಚಾರಿಸುತ್ತಾರೆ.

---

೮ ಸುಗ್ರೀವನಿಗೆ ರಕ್ಷಣೆ ಕೊಟ್ಟಿರುವ ಆಶ್ರಮ ಅದೇ ಆದ್ದರಿಂದ ಸುಗ್ರೀವನಿಗೂ ರಾಮ ಲಕ್ಷ್ಮಣರಿಗೂ ನಡುವೆ ಬೆಳೆಯಬಹುದಾದ ಸ್ನೇಹಕ್ಕೆ ಇದು ಹರಕೆಯಾಯಿತು.

ಮುಂಚೆಯಿಂದ ತನ್ನ ಅತಿಥಿಗಳಾಗಿ ಬರಲಿರುವರೆಂದಿದ್ದು ಇವರ ನಿರೀಕ್ಷೆಯಲ್ಲಿ ತಾನಿದ್ದಳೆಂದು ಹೇಳಿ ಹೊಸತಾಗಿ ಆರಿಸಿ ಕೂಡಿಸಿದ ವನಫಲಗಳನ್ನು ('ವನ್ಯಾನಿ') ಅವರಿಗೆ ಅರ್ಪಿಸುತ್ತಾಳೆ. ಹಿಂದೆ ಗುರು ಮತಂಗ ಋಷಿ ಆಕೆಗೆ ಹೇಳಿದ್ದನಂತೆ: 'ಈ ಪ್ರದೇಶಕ್ಕೆ ರಾಮನು ಬರುತ್ತಾನೆ. ಅವನು ಇಲ್ಲಿಗೆ ಬಂದಾಗ ಅವನಿಗೆ ಆತಿಥ್ಯ ನೀಡು' ಎಂದು. ಅದನ್ನು ಮಾಡಿದಾಗ ತನ್ನ ಲೋಕಯಾತ್ರೆ ಮುಗಿಸುವ ಸಮಯವಾಗುತ್ತದೆ ಎಂದೂ ತಿಳಿಸಿದ್ದನಂತೆ. ಕಾಯಬೇಕಾದ ಕಾಲ ತುಂಬಾ ನಿಡಿದಾಗಿದ್ದರೂ ಕಾದಿದ್ದಳು. ಅವರು ಚಿತ್ರಕೂಟಕ್ಕೆ ಬಂದ ಕಾಲದಿಂದ – ಎಂದರೆ ೧೦–೧೨ ವರ್ಷಗಳಿಗೆ ಹಿಂದೆ – ಈ ಪ್ರದೇಶಕ್ಕೆ ರಾಮನು ಸಂಚಾರ ಮಾಡಿ ಬರುತ್ತಾನೆ ಎಂಬ ಸಂಗತಿಯನ್ನು ಅವಳು ಕೇಳಿದ್ದಳು : ವಿಚಿತ್ರ ಸಂಗತಿ ಇದು : ಇಷ್ಟು ತೆಂಕಲಿಗೆ ಅವನು ಬರುತ್ತಾನೆಂದು ಜನ ನಿರೀಕ್ಷೆಯಲ್ಲಿದ್ದರು. ಈ ಸೋದರರನ್ನು ಸ್ಥಳದಿಂದ ಸ್ಥಳಕ್ಕೆ ಹೀಗೆ ಕಳಿಸುತ್ತಿದ್ದರು.[೯] ರಾಮಲಕ್ಷ್ಮಣರು ಆಕೆಯನ್ನು ಕೇಳಿ ವಿಸ್ಮಯಕರವಾದ ಮತಂಗಾಶ್ರಮವನ್ನೆಲ್ಲ ತೋರಿಸೆನ್ನುತ್ತಾರೆ ; ಅದರ ವರ್ಣನೆ ಸುಂದರವಾಗಿದೆ. ಕೊಳದಲ್ಲಿ ಅವರು ಸ್ನಾನಮಾಡಿ ದಶರಥನಿಗೆ ತರ್ಪಣ ಕೊಡುತ್ತಾರೆ. ಆಗ ಆಕೆ ತನ್ನ ನಿರ್ಯಾಣಕ್ಕೆ ಅಪ್ಪಣೆ ಕೊಡಬೇಕೆಂಬ ತನ್ನ ಅಭಿಲಾಷೆಯನ್ನು ಅವರಿಗೆ ತಿಳಿಸುತ್ತಾಳೆ. ಅವರು ಒಪ್ಪಿಗೆ ಕೊಡುತ್ತಾರೆ. ಆ ಬಳಿಕೆ ಆಕೆ ತನ್ನನ್ನು ಅಗ್ನಿಗೆ ಸಮರ್ಪಿಸಿಕೊಳ್ಳುತ್ತಾಳೆ.

ಶಬರಿಯ ಕತೆಯ ಸಂಬಂಧದಲ್ಲಿ ವಾಲ್ಮೀಕಿಯಲ್ಲಿರುವುದು ಇಷ್ಟೇ : ಇದು ಸಾಕೆನಿಸುತ್ತದೆ. ಸಾಕೆಂಬುದು ಸಾಕಷ್ಟಲ್ಲವೆ ! – ಎನ್ನುವುದು ಸೂಕ್ತಿಯೂ ಆಗುತ್ತದೆ. ಸುಗ್ರೀವನ ವಾಸಸ್ಥಳವನ್ನು ಕಂಡುಹಿಡಿಯುವುದಕ್ಕೆ ಈಗ ಕಾಲ ಒದಗಿತು. ಹಾಗೆ ಮಾಡಲು ರಾಮನು ಲಕ್ಷ್ಮಣನಿಗೆ ಹೇಳುತ್ತಾನೆ. ಈ ನಡುವೆ ಸುಗ್ರೀವನೇ ತನ್ನ ಕಡೆಯಿಂದ ಇವರ ಸಂಪರ್ಕಕ್ಕೆ ಯತ್ನಿಸುತ್ತಿರುವುದು ಕಂಡುಬರುತ್ತದೆ.

---

೯ ಇದು ದಕ್ಷಿಣದಲ್ಲಿ ದಂಡಕಾರಣ್ಯದ ಕಡೆಯ ಮಿತಿಯವರೆಗೂ ರಾಮಲಕ್ಷ್ಮಣರು ಮಾಡಬೇಕಾಗಿದ್ದ ಪ್ರಯಾಣದ ರೇಖನವೇ ? ಆ ಮಿತಿ ಗೋದಾವರಿಗೊ ಕೃಷ್ಣ ವರೆಗೊ ? ಅಥವಾ ರಾವಣನಾಶದ ಉದ್ದೇಶದಿಂದ ದಿವ್ಯ ಶಕ್ತಿಗಳಿಂದ ಋಷಿಗಳಿಂದ ನಿರ್ದೇಶಿತವಾದ ಕ್ರಿಯಾಪ್ರಪಂಚವೊ ? ಈ ಸಂಗತಿಯಂತೂ ರಾಮ ಸೀತೆಯರಿಗೆ ತಿಳಿಯದೆಂಬಂತೆ ನಡೆದ ಸಂಗತಿ. ಯಾವುದೊ ವಿಧಿ ನಿಯಂತ್ರಣದಿಂದ ನಡೆದಂತೆ ಸುಮಾರು ಕಾಣುತ್ತದೆ. ಹಾಗೆಯೇ ರಾಮಾಯಣ ಕಥೆಯನ್ನು ಮುಂದಿನ ಮಜಲಿಗೆ ಕೊಂಡೊಯ್ಯುತ್ತದೆ – ಸುಗ್ರಿವನು ಅದನ್ನು ಮುಂದುವರಿಸಲು ಎಂಬಂತೆ.

## ೬. ಲಂಕೆಯಲ್ಲಿ ಹನುಮಂತ

ಹನುಮಂತ ಲಂಕೆಯನ್ನು ಪ್ರವೇಶಿಸಿದಾಗ ಅವನನ್ನು ಗುರುತಿಸಲಾಗದಷ್ಟು ಸಣ್ಣ ಗಾತ್ರದಲ್ಲಿ ಹೋಗಿದ್ದ. ಸೀತೆಗಾಗಿ ಹುಡುಕಿಕೊಂಡು ಎಲ್ಲೆಲ್ಲಿಯೂ ಸುತ್ತಾಡಿ, ಸಹಜವಾಗಿ ರಾವಣನ ಅರಮನೆಯೊಳಕ್ಕೆ ಹೋಗುತ್ತಾನೆ.[೧೦] ಆ ಸ್ಥಳದ ಸಂಪತ್ತು ವೈಭವವೂ ಅವನ ಮನಸ್ಸಿಗೆ ಕಟ್ಟಿ ಅದು ದೇವಲೋಕದಂತಿದೆ ಎಂದೂ ಎಣಿಸುತ್ತದೆ. ಅವನ ಮನಸ್ಸಿನಲ್ಲಿ ಹುಟ್ಟಿದ ಭಾವ ಅದು. ತಾಯಂತೆ ಅದು ಹನುಮಂತನನ್ನು ತೃಪ್ತಿ ಪಡಿಸುತ್ತದೆ. ಸುಮಾರು ನಡು ರಾತ್ರಿಯ ಸಮಯ. ದೊಡ್ಡ ಹಜಾರದಲ್ಲಿ ಸಾವಿರಾರು ಮಂದಿ ಚೆಲುವೆಯರು ನಯವಾದ ತೆಳು ಬಟ್ಟೆಗಳನ್ನೂ ಆಭರಣಗಳನ್ನೂ ಧರಿಸಿ ಮಲಗಿದ್ದರು. ಸ್ವಲ್ಪ ಮುಂಚೆ ಭೋಗ ಸಮಾರಂಭಗಳಲ್ಲಿ ತೊಡಗಿದ್ದು "ಪಾನನಿದ್ರಾವಶಂ ಗತಂ" – ಪಾನಮತ್ತರಾಗಿ ನಿದ್ರೆ ಮಾಡಿದ್ದರು. ಸಂಪೂರ್ಣವಾಗಿ ತಮ್ಮನ್ನು ಮರೆತು ಅವರು ಬಿದ್ದಿದ್ದ ದೃಶ್ಯ ಅದು. ಸಿಕ್ಕಸಿಕ್ಕಿದ ಹಾಗೆ ಚದರಿ ಮಲಗಿದ್ದರು. ಕೆಲವರು ಧರಿಸಿದ್ದ ಮುತ್ತಿನ ಸರಗಳು ಅವರ ಕೊರಳಿಂದ ಜಾರಿ ಬಿದ್ದಿದ್ದವು. ಕೆಲವರು ಅವನ್ನು ಮೈಸುತ್ತಾ ಕಟ್ಟಿಕೊಂಡಿದ್ದರು. ಹೂ, ತುರುಬು, ಒಡವೆಗಳು ಸಡಿಲವಾಗಿ ಜೋಲಾಡುತ್ತಿದ್ದವು. ಹಣೆಯ ಮೇಲಿನ ಕುಂಕುಮ ಚಂದ್ರಗಳ ತಿಲಕ ಓರೆಯಾಗಿತ್ತು. ಕೆಲವರ ಕಾಲದಿಂಗೆಗಳು ಅವರ ಒಡಲುಗಳಿಂದ ದೂರ ಬಿದ್ದಿದ್ದವು. ಚಿನ್ನದ ಮತ್ತು ರತ್ನಖಚಿತವಾದ ಡಾಬುಗಳು ಸಡಿಲವಾಗಿ ಬಿದ್ದಿದ್ದವು. ಶ್ರಮವನ್ನೂ, ಆಯಾಸವನ್ನೂ ಕಳೆದು ಕೊಳ್ಳಲು ಹೆಣ್ಣು ಕುದುರೆಗಳು ಮೈಚಾಚಿ ಬಿದ್ದಿರುವಂತೆ ಕಾಣುತ್ತಿತ್ತು ; ನಿರ್ಲಕ್ಷ್ಯವಾಗಿ, ಪೂರ್ತಿ ಅಸ್ತವ್ಯಸ್ತವಾಗಿ ಒಡಲುಗಳನ್ನು ಚಾಚಿದಂತಿತ್ತು. ಕೆಲವರು ಉಟ್ಟ ಬಟ್ಟೆ ಎಷ್ಟು ತೆಳುವೆಂದರೆ ನಿಧಾನವಾಗಿ ಅವರು ಮೆಲ್ಲುಸಿರು ಬಿಡುತ್ತಿದ್ದಾಗಲೂ ಅಲುಗಾಡುತ್ತಿತ್ತು ; ಅವುಗಳ ಸೆರಗಿನ ಅಂಚುಗಳು ಆಗ ಸಣ್ಣ ಸಣ್ಣ ಬಾವುಟಗಳಂತೆ ಎದ್ದು ಕಾಣುತ್ತಿದ್ದವು. ಕೆಲವರು ತಮ್ಮ ನಿದ್ರೆಯಲ್ಲಿಯೇ ರಾವಣನನ್ನು ಕುರಿತು ಮುದ್ದುಮಾತುಗಳನ್ನು ಆಡುತ್ತಿರುವಂತಿತ್ತು. ಇನ್ನೂ ಕೆಲವರು ರಾವಣನದೆಂದು ತಪ್ಪು ತಿಳಿದು ತಮ್ಮ ಪಕ್ಕದಲ್ಲಿ ಮಲಗಿದ್ದ ಇತರ ಹೆಣ್ಣು ಮುಖಗಳಿಗೇ ನಿದ್ರೆಯಲ್ಲಿ ಮುತ್ತುಕೊಡುತ್ತಿದ್ದರು. ರಾವಣನೇ

---

೧೦ ಲಂಕೆಯಲ್ಲಿ–ರಾವಣನ ಉಪವನದಲ್ಲಿ ವ್ಯಸ್ತಳಾಗಿ, ಖಿನ್ನಮನಸ್ಕಳಾಗಿ, ಸೀತೆ ಕುಳಿತಿದ್ದಾಳೆ; ನನಗೆ ಕಾಣಿಸುತ್ತಿದೆ ಎಂದು ಸಂಪಾತಿ ಹೇಳಿದ್ದನಲ್ಲವೇ ? ಇಂಥ ಪ್ರಶ್ನೆಗಳನ್ನು ಎತ್ತ ಬಾರದೆನು. ವೀರನಾಯಕನೊಬ್ಬನು ಕ್ರಿಯಾರ್ಥಿಯಾಗಿದ್ದಾನೆ.

ಮುದ್ದಿಸುತ್ತಿದ್ದಾನೆಂದೂ ಈ ಹೆಣ್ಣುಗಳು ಸಂತೋಷ ಅನುಭವಿಸುತ್ತಿದ್ದರು. ಒಬ್ಬರು ತೋಳ ಮೇಲೂ ಇನ್ನೊಬ್ಬರೂ ಮೈಮೇಲೂ ಹೆಗಲಮೇಲೂ ಈಡಾಡಿ ಇದ್ದುದನ್ನು ನೋಡಿದರೆ ಸಾಲುಸಾಲಾಗಿ ಕಟ್ಟಿದ ಹೂಮಾಲೆಗಳಂತೆ ಕಾಣುತ್ತಿದ್ದರು.

ಮುಂದಿನ ಹಜಾರಕ್ಕೆ ಹನುಮಂತನು ಹೋದಾಗ ಸುಖಸಂಪನ್ನವಾದ ಒಂದು ಮಂಚದಲ್ಲಿ ರಾವಣನು ನಿದ್ದೆ ಮಾಡುತ್ತಿದ್ದನು. ಮೋಡದಂತೆ ಮೈ ಕಪ್ಪು; ಹೊಳಪಾದ ಕುಂಡಲಾಭರಣ. 'ಲೋಹಿತಾಕ್ಷಂ'– ಕೆಂಪು ಕಣ್ಣು (ಮಲಗಿ ನಿದ್ರಿಸುವಾಗ?). ಉದ್ದವಾದ ಬಲಿಷ್ಠವಾದ ಅವನ ತೋಳು ಚಾಚಿದ್ದವು ; ಅಮೂಲ್ಯ ವಸ್ತ್ರಾಭರಣಗಳನ್ನು ಧರಿಸಿದ್ದನು. ಸೂರ್ಯಾಸ್ತದ ಕಿರಣ ರಾಜಿ ರಂಜಿಸಿರಲು ಎಂಬಂತೆ, ಮಿಂಚು ಹಾಯುತ್ತಿದ್ದ ದೊಡ್ಡ ಕಾರ್ಮೋಡದಂತೆ ಕಾಣುತ್ತಿದ್ದ. ತನ್ನನ್ನು ತಿವಿದ ಇಂದ್ರನ ಆನೆಯ ದಂತ ಮಾಡಿದ್ದ ಗಾಯದ ಕಲೆಗಳಿದ್ದವು. ಭುಜದ ಮೇಲೆ ಇಂದ್ರನ ವಜ್ರಾಯುಧ ಆಡಿ ಮಾಡಿದ ಗುರುತುಗಳಿದ್ದವು. ರಕ್ತಚಂದನ ಮೈಗೆಲ್ಲ ಬಳಿದಿತ್ತು. ಎಷ್ಟೊ ಬಗೆಯ ಸುಗಂಧ ದ್ರವ್ಯಗಳು, ಅನುಲೇಪನಗಳು ಒಡಲನ್ನು ಸುಗಂಧಗೊಳಿಸಿದ್ದವು. ರಾವಣನನ್ನು ಕುರಿತ ಒಂದು ಚಿತ್ರ ಹೀಗಿದೆ –

ಮಾಷರಾಶಿ ಪ್ರತೀಕಾಶಂ ನಿಃಶ್ವಸಂತಂ ಭುಜಂಗವತ್
ಗಾಂಗೇಮಹತಿ ತೋಯಾಂತೇ ಪ್ರಸುಪ್ತಮಿವ ಕುಂಜರಂ

ಉದ್ದಿನ ರಾಸಿಯಂತಿರುವಂತೆ; ನಾಗರ ಹಾಗೆ ಬುಸುಗಟ್ಟುವಂತೆ ಉಸಿರು ಬಿಡುತ್ತಿದ್ದನಂತೆ; ಗಂಗೆಯ ಮಹಾಜಲದೊಳಗೆ ನಿದ್ರಿಸುತ್ತಿರುವ ಆನೆಯಂತೆ ಕಾಣಿಸುತ್ತಿದ್ದನಂತೆ. ಅವನ ಹೆಜ್ಜೆಯ ಸ್ವಲ್ಪ ಕೆಳಗೆ ಇನ್ನಷ್ಟು ಆಪ್ತರಾದ ಹೆಣ್ಣುಗಳ ಒಡಲು ಹರಡಿ ಬಿದ್ದಿದ್ದವು. ಒಬ್ಬಳ ತೋಳಲ್ಲಿ ಒಂದು ವೀಣೆ; ತನ್ನ ಮಗುವನ್ನೆತ್ತಿಕೊಂಡಿರುವಂತೆ. ಇನ್ನೊಬ್ಬಳು ತನ್ನ ಮೃದಂಗವನ್ನು ತೋಳಲ್ಲಿ ಅವಚಿಕೊಂಡಿದ್ದಳು; ಇನ್ನೊಬ್ಬಳು ಇನ್ನೊಂದು ಚರ್ಮವಾದ್ಯವನ್ನು ಅಪ್ಪಿಕೊಂಡಿದ್ದಳು.ಇವರು ಅವನಿಗೆ ನಿದ್ರೆ ಬರುವುದಕ್ಕಾಗಿ ಹಾಡಿ ಅವನನ್ನು ಒಲಿಸಿದ್ದವರು. ಇನ್ನೊಬ್ಬಳು ತನ್ನ ಮೊಲೆಗಳನ್ನೇ ಬಿಗಿಯಾಗಿ ತಬ್ಬಿಕೊಂಡಿದ್ದಳು. ಹತ್ತಿರದಲ್ಲಿ ಇನ್ನೊಂದು ಮಂಚದ ಸುಖಾಸನದಲ್ಲಿ ಉಳಿದವರೆಲ್ಲರಿಗಿಂತಲೂ ಮೇಲಾದ ಸುಂದರಿ ಮಲಗಿದ್ದಳು. ಅತಿಶಯವಾಗಿ, ವಿಶಿಷ್ಠವಾಗಿ, ಒಬ್ಬಳೇ ಅವಳು ಮಂಡೋದರಿ. ಹನುಮಂತನಿಗೆ ತಾನು ಕಟ್ಟಕಡೆಗೆ ಸೀತೆಯನ್ನೇ ಕಂಡೆನಿಸಿತು; ಅನುಪಮ ಸಂತೋಷ ಉಂಟಾಯಿತು. ಒಂದು ಕ್ಷಣ. ಕಂಡವನೇ ಕುಣಿದಾಡಿದ, ವಾದಗ್ರಸ್ತವಾದ ಒಂದು ಪದ್ಯ ಸರ್ಗಾಂತದಲ್ಲಿ ಇದನ್ನು ವರ್ಣಿಸಿದೆ:

ಆಸ್ಫೋಟಯಾಮಾಸ ಚುಚುಂಬ ಪುಚ್ಛಂ
ನನಂದ ಚಿಕ್ರೀಡ ಜಗೌ ಜಗಾಮ
ಸ್ತಂಭಾನರೋಹನ್ ನಿಪಪಾತ ಭೂಮ
ನಿದರ್ಶಯನ್ ಸ್ವಾರ್ ಪ್ರಕೃತಿಂ ಕಪೀನಾಂ

(ನೆಲದ ಮೇಲೆ ತನ್ನ ಬಾಲವನ್ನು ಬಡಿದನು, ಅದನ್ನು ಪುನಃ ಪುನಃ ಮುದ್ದಿಟ್ಟುಕೊಂಡನು, ಎತ್ತರವಾದ ಹಜಾರದ ಕಂಬಗಳ ಮೇಲೆ ಹತ್ತಿದ ; ಇಳಿದ ; ಹುಟ್ಟು ಕಪಿಯ ಪ್ರಕೃತಿಯನ್ನು ಕಾಣಿಸಿದ.)

ಅಲ್ಲ ; ಇವಳು ಸೀತೆಯಲ್ಲ : ಹೇಗೇ ಆಗಲಿ ನಿಷ್ಫಲವಾಗಿ ಹುಡುಕಾಡುತ್ತಿದ್ದಾಗ ಇಷ್ಟು ಸೌಂದರ್ಯವನ್ನು ದೃಷ್ಟಿಸಿದಾಗ ಒಂದು ಕ್ಷಣ ಮಾತ್ರ ಸೀತೆಯನ್ನು ತಾನು ಕಂಡೆನೆಂದು ಭ್ರಮಿಸಿದುದು, ಅಚ್ಚರಿಯೇನಲ್ಲ. ಕ್ಷಣ ಮಾತ್ರ ರಾಮನ ಹೆಣ್ಣಾಗಿ ಸೀತೆ ಎಂದಿಗೂ ಆಗಳೆಂದು ತೀರ್ಮಾನಿಸಿ ಅಲ್ಲಿಂದ ಮುಂದಕ್ಕೆ ನಡೆದ.

ಸ್ವಲ್ಪ ಮುಂದೆ ಹೋಗಲು ಎಲ್ಲಾ ಬಗೆಯ ಪಾನಗಳಿದ್ದುವು ; ಬಗೆ ಬಗೆ ಭೋಜಗಳು : ಅನೇಕ ಮಾಂಸದ್ರವ್ಯಗಳು, ವಿಶೇಷವಾಗಿ ಅಟ್ಟವು. ಸಾಮೂಹಿಕ ನರ್ತನಕ್ಕೆ, ಗಾಯನಕ್ಕೆ, ವಿಲಾಸಗಳಿಗೆ ಬಂದಿದ್ದ ಎಲ್ಲರೂ ಅವನ್ನು ಬಳಸಿದಂತಿತ್ತು. ಜಿಂಕೆ, ಎಮ್ಮೆ, ಕಾಟಿ, ನವಿಲು, ಬಗೆಬಗೆಯ ಪಕ್ಷಿಗಳು, ಹಂದಿಯ ಮಾಂಸ, ವಾರ್ಧ್ರೀಣಸ – ಇತ್ಯಾದಿಗಳ ಆಮಿಷಗಳಿದ್ದವು. ಕೆಲವನ್ನು ಅರೆ ಅರಕಲಾಗಿ ತಿಂದು ಬಿಟ್ಟಿದ್ದರು ; ಕೆಲವನ್ನು ಮುಟ್ಟಿದಂತೆ ಕಾಣಲಿಲ್ಲ. ಲೇಹ್ಯಗಳು ಕೆಲವು. ಅನೇಕ ಬಗೆಯ ಉಪ್ಪಿನಕಾಯಿ. ಮಾಡಿದ್ದ, ಬಡಿಸಿದ್ದ, ಪಾತ್ರೆಗಳ ಗಾತ್ರ, ಆಕಾರ ನಾನಾಬಗೆಯಲ್ಲಿ : ಚಿನ್ನ, ಬೆಳ್ಳಿಗಳಿಂದ ಮಾಡಿದವು ಅದು. ಬಾಣಾಸಿಗರು, ಭಕ್ಷ್ಯ ಭೋಜ್ಯಗಳನ್ನು ರುಚಿಕರವಾಗಿ ಹೊಸತಾಗಿ ಪರಿಮಳಯುತವಾಗಿ ಮಾಡಿದ್ದರು, ಕಾರದ ಪದಾರ್ಥಗಳು ಎಷ್ಟೋ : ನಾಲಗೆಯ ರುಚಿಯನ್ನು ಹೆಚ್ಚಿಸುವಂಥವು, ಇನ್ನೆಷ್ಟೋ ವಿಧ ವಿಧದವು. ಅಲ್ಲಿ ಸೇರಿದ್ದ ಸ್ತ್ರೀಯರು, ನಡೆದಿದ್ದ ಗಾನ, ನೃತ್ಯ, ಉತ್ಸವ ಸಮಾರಂಭ, ನಿರ್ಲಕ್ಷ್ಯ ವಿಲಾಸ – ಈ ಎಲ್ಲದರಲ್ಲಿಯೂ ತೃಪ್ತಿ, ಪ್ರೀತಿ, ಸಂತೋಷ ಕಾಣುತ್ತಿತ್ತು, ಬೇರೆ ಬೇರೆ ಬಣ್ಣಗಳ ಬಣಗಳ, ವರ್ಗಗಳ ನಾನಾ ಪ್ರಕಾರದ ಸ್ತ್ರೀಯರು ಸಂತೋಷಗೊಂಡಿದ್ದಂತೆ ಕಾಣುತ್ತಿತ್ತು. ರಾವಣನನ್ನು ಅವನ ಈ ವಿಲಾಸೋತ್ಸವಗಳನ್ನು ಒಪ್ಪದಿದ್ದ ಒಂದು ಹೆಣ್ಣು ಅಲ್ಲಿದ್ದ ಹಾಗಿರಲಿಲ್ಲ. ಋಷಿ ಒಬ್ಬನು ಇದನ್ನು ವರ್ಣಿಸುತ್ತಿದ್ದಾನೆ ; ಬ್ರಹ್ಮಚಾರಿಯೊಬ್ಬನು ಇವೆಲ್ಲವನ್ನೂ ನೋಡುತ್ತಿದ್ದಾನೆ ! ಭರದ್ವಾಜಾಶ್ರಮದಲ್ಲಿ ಸ್ತ್ರೀಯರು ಕಾಣಿಸುತ್ತಾರೆ ; ಆದರೆ

ಅವರೆಲ್ಲ ದೇವಲೋಕದ ನಾರಿಯರು. ಋಷಿ ಅವರನ್ನು ಆಹ್ವಾನಿಸಿದ್ದ. ಅಯೋಧ್ಯೆಯ ಸೈನ್ಯವನ್ನು ಅಲ್ಲಿನ ಪ್ರಧಾನರನ್ನು ಸುಖಪಡಿಸಬೇಕೆಂಬುದು ಋಷಿಯ ಆದೇಶ. ಅಲ್ಲಿಯ ಸಂಗತಿಗಳೆಲ್ಲ ಆದರ್ಶ ಚಿತ್ರಣ, ಇಲ್ಲಿನವರೋ : ರಾವಣನ ಖಾಸಗಿ ಅಂತಃಪುರದ ಮಹಿಳಾ ಮಂಡಳಿ. ಎಷ್ಟೋ ತಂಡಗಳವರು! ಎಲ್ಲರೂ ಅವನನ್ನು ಪ್ರಭುವೆಂದು ಒಪ್ಪಿದ್ದರು. ತನ್ನ ಕೇಂದ್ರ ಅರಮನೆಯಲ್ಲಿ ರಾಕ್ಷಸ ಚಕ್ರವರ್ತಿ ಏರ್ಪಡಿಸಿದ್ದ ಸುಖ ಸಂತರ್ಪಣೆ.

ಸೀತೆಯನ್ನು ಅಲ್ಲಿ ಕಾಣದಿರಲು ಹನುಮಂತನಿಗೆ ತಾನು ಮಾಡಿದ್ದನ್ನು ಕುರಿತು ಒಂದು ವಿಷಾದ ಭಾವ ಉಂಟಾಯಿತು : ಇನ್ನೊಬ್ಬನಿಗೆ ಸೇರಿದ, ಬೇರೆ ಬೇರೆ, ಸಡಿಲಉಡೆ, ನಿರ್ಲಕ್ಷ್ಯ ಸ್ಥಿತಿಯಲ್ಲಿರುವ ಅಷ್ಟು ಜನ ಹೆಂಗಸರನ್ನು ಆ ಸ್ಥಿತಿಯಲ್ಲಿ ನೋಡಿದೇನಲ್ಲಾ – ಎಂದು. ಹೀಗೆ ಸುತ್ತಾಡಿದ ಮೇಲೆಯೂ ಕಡೆಗೂ ಸೀತೆ ಅಲ್ಲಿ ಕಾಣದಾದಾಗ ಅವಳು ಎಲ್ಲಿದ್ದಾಳೋ ಎಂಬುದನ್ನು ಹುಡುಕುವುದು ಅವನ ಮುಂದಿನ ಕೆಲಸವಾಯಿತು. ಪ್ರತಿಯೊಂದು ಮಜಲಲ್ಲಿಯೂ 'ಇವೆಲ್ಲಾ ಸುತ್ತಾಡಿದ್ದೇನೆ ; ಜಾನಕಿ ಕಾಣುತ್ತಿಲ್ಲ' – 'ದೃಶ್ಯತೇ ನ ಚ ಜಾನಕೀ ; ನೈವಪಶ್ಯತಿ ಜಾನಕೀ, ನ ತು ಪಶ್ಯಾಮಿ ಜಾನಕೀಂ' ಎಂಬವೇ ಮಾತುಗಳು....

## ೭. ಮಧುವನ

ಆಶ್ರಮದಲ್ಲಿನ ಒಂದು ಸಮಾರಾಧನೆ, ರಾವಣಾಂತಃಪುರದ ಸಂತೋಷ ವಿಲಾಸಗಳು ಈವರೆಗೆ ವರ್ಣಿಸಿರುವ ಎರಡು. ಸೀತೆಯ ಸುದ್ದಿ ತರುವ ಕಾರ್ಯದಲ್ಲಿ ಜಯಗಳಿಸಿದ ಕಪಿಗಳು ಹೇಗೆ ಸಂತೋಷಪಟ್ಟುವೆಂಬುದನ್ನು ಕವಿ ಹೇಗೆ ವರ್ಣಿಸಿದ್ದಾನೆ ಎಂದು ಈಗ ನೋಡಬಹುದು. ಅವು ಕಿಷ್ಕಿಂಧೆಗೆ ಹಿಂದಿರುಗಿ ಬರುತ್ತಿವೆ. ಸುಗ್ರೀವನ ಖಾಸಾ ಉಪವನದ ಹತ್ತಿರ ವಾನರರು ಬರುತ್ತಿದ್ದಾರೆ. ಆ ಉಪವನದಲ್ಲಿ ತುಂಬಾ ಹಣ್ಣುಬಿಟ್ಟ ಮರಗಳು, ಜೇನುಗೂಡು, ಇದ್ದವು. ದಧಿಮುಖನೆಂಬ ಸುಗ್ರೀವನ ಚಿಕ್ಕಪ್ಪನೊಬ್ಬನು ಇದರ ಮೇಲೆ ಸರ್ಪಕಾವಲಿದ್ದನು. ಸುಗ್ರೀವನಿಗೆ ಈ ಉಪವನದಲ್ಲಿ ಅತೀವ ಪ್ರೀತಿ. ಇನ್ನೊಬ್ಬರ ಕಣ್ಣು ಬೀಳದಂತೆ ಅದರ ಮೇಲೆ ಕಾವಲಿಟ್ಟಿದ್ದ. ವಾನರರಿಗೆ ತೀವ್ರ ಅಭಿಲಾಷೆ ಉಂಟಾಯಿತು : – ಹೊಚ್ಚ ಹೊಸದಾಗಿ ಜೇನುಗೂಡುಗಳಿಂದ ಮಧುಪಾನ ಮಾಡಲು ಅಂಗದನ ಅಪ್ಪಣೆಯನ್ನು ಬೇಡಿದರು. ಪಾಳೆಯದಲ್ಲಿದ್ದ ಹಿರಿಯರನ್ನು ಅಂಗದ ಕೇಳಿದ. ಯಾವುದನ್ನೂ ಲಕ್ಷಿಸದೆ ನಿರ್ಭಯವಾಗಿ ಎಷ್ಟು ಮಧುಪಾನ ಬೇಕೆದರೆ ಅಷ್ಟನ್ನು ಮಾಡಿರೆಂದು ಹನುಮಂತನು ಹೇಳಿದನು. 'ಪರಿಣಾಮದ

ಹೊಣೆ ನನ್ನ ಮೇಲಿರಲಿ ; ಯಾರು ನಿಮಗೆ ಅಡ್ಡಿ ಮಾಡುತ್ತಾರೊ, ನಾನು ನೋಡಿಕೊಳ್ಳುತ್ತೇನೆ ; ನಿಮಗೆ ರಕ್ಷಣೆ ಉಂಟು ; ಯಾವ ವಿರೋಧಿಗಳು ತಡೆಯುತ್ತಾರೊ ನೋಡೋಣ' – 'ಅಹಂ ಅವಾರಯಿಷ್ಯಾಮಿ ಯುಷ್ಮಾಕಂ ಪರಿಪಂಥಿನಃ' ಎಂದನಂತೆ. ಯುದ್ಧ ಮುಗಿದ ಮೇಲೆ ಸರ್ವಾವಕಾಶ ದೊರೆತ ಜಯಶಾಲಿಗಳಿಗೆ ದೊರೆವ ಅವಕಾಶ ಅದು. ಅಂಗದನ ಪ್ರತಿಕ್ರಿಯೆ ಅವನ ವಿಶಿಷ್ಟ ಸ್ವಭಾವವನ್ನು ಕಾಣಿಸುತ್ತದೆ. ತಮಗೆ ಒಪ್ಪಿಸಿದ ಕಾರ್ಯಸಾಧನೆಯಲ್ಲಿತಾವು ಗಳಿಸಿದ್ದ ಜಯವನ್ನು ಕುರಿತ ವಿಜೃಂಭಣೆ ಈ ಅಪರಾಧವನ್ನು ಮಟ್ಟು ಮಾಡುತ್ತದೆ, ಕ್ಷಮ್ಯ ಮಾಡುತ್ತದೆ ಎಂಬುದರ ಜೊತೆಗೆ, ಜಯವನ್ನು ಸಾಧಿಸಿದ ವೀರನೇ – ಸ್ಥಿರಚಿತ್ತನೂ ಕಠಿಣ ನಿಷ್ಠೆ ಉಳ್ಳವನೂ ಸುಗ್ರೀವನ ಪರಮ ಸ್ನೇಹಿತನೂ ಆದ ಹನುಮಂತನೇ – ಅವರಿಗೆ ಅನುಮತಿ ಕೊಟ್ಟಾಗ, ಎಂಥ ಅಸಂಗತವಾದ ಕಾರ್ಯಗಳನ್ನೂ ಮಾಡಲು ಅನುಜ್ಞೆ ದೊರೆತಂತೆ ಆಯಿತು.[೧೧] ವಾನರರ ವಿನೋದಗಳು, ವಿಹಾರಗಳು ಹಲವು ತರ ಮಾಡಿದರು. ಏನೇನನ್ನು ? ಹೇಗೆ ವಿನೋದ ಪಟ್ಟರು ವಾನರ ಪ್ರಕೃತಿ ಎಷ್ಟು ಬಗೆಯ ಕ್ರೀಡೆಗಳಲ್ಲಿ ತೊಡಗಿತು ? – ಎಂಬುದರ ವಿವರಣೆ ಇಲ್ಲಿದೆ ಮದವೇರದ ಅಥವಾ ಅತೃಪ್ತವಾಗಿ ಉಳಿದ ಒಂದು ಕಪಿಯೂ ಇರಲಿಲ್ಲ. ಕಾವಲ ಯಜಮಾನನು ಇದಕ್ಕೆ ಸಹಜವಾಗಿ ಆಕ್ಷೇಪಣೆ ಮಾಡಿ ಈ ಕಾರ್ಯಗಳಿಗೆ ಅಡ್ಡಿ ಮಾಡಲು ಯತ್ನಿಸಿದನು. ಅವನನ್ನು ಕಪಿಗಳು ಎಳೆದಾಡಿದರು ; ಗುದ್ದಿದರು ; ಮೈಯೆಲ್ಲಾ ಪರಚಿದರು ; ಬಡಿದರು; ಒದ್ದರು. ಕಪಿಗಳ ಉತ್ಸವವೋ ಉತ್ಸವ ! ಹೊರಗಿಂದ ಬಂದು ಈ ಹಣ್ಣಿನ ತೋಟವನ್ನು ದಾಳಿ ಮಾಡಿದ್ದ ಕಪಿಗಳು ಕಾವಲುಗಾರರನ್ನು ಓಡಿಸಿದರು. ಇಷ್ಟ ಬಂದ ಹಣ್ಣುಗಳನ್ನು ತಿಂದರು ; ಬೇಕಾದಷ್ಟು ಜೇನು ಕುಡಿದರು ; ತನಗೆ ಬೇಡವಾದ ಹೆಚ್ಚಿನದನ್ನು ನೆಲದ ಹುಲ್ಲ ಮೇಲೆ ಚೆಲ್ಲಿದರು. ಕೆಲವು ಕಪಿಗಳು ಹಲಗೆ ಹಲಗೆ ಜೇನು ಹುಟ್ಟಿಯನ್ನು ತೆಗೆದುಕೊಂಡು ಒಂದನ್ನೊಂದು ಹೊಡೆದಾಡಿದವು. ಕೆಲವು ಮರದ ಕೊಂಬೆಗಳಿಗೆ ಹಾರಿ ಜೋಲಾಡಿದವು, ಇನ್ನೂ ಕೆಲವು ಮರಗಳಿಂದ ಎಲೆಗಳನ್ನು ಕಿತ್ತು ನೆಲದ ಮೇಲೆ ಹರಡಿ ಪರ್ಣಶಯನ ಮಾಡಿ ನಿದ್ರಿಸಿದುವು. ಮದೋನ್ಮತ್ತವಾಗಿ ಒಂದನ್ನೊಂದು ಎಡವಿ ಕೆಳಗೆ ಬಿದ್ದವು.

---

೧೧. ಸುಗ್ರೀವನ ಪ್ರೀತಿ ವಿಶ್ವಾಸಗಳ ಸ್ಥಾನವಾದ ಆ ಉಪವನಭಂಗವನ್ನು ಮಾಡುವುದರಲ್ಲಿ ಕೆಲವರಿಗೋ ಅನೇಕರಿಗೋ ಒಳಸಂತೋಷವೂ ಇದ್ದಿರಬಹುದು ಕೂಡ. ಅಂಗದನಿಗಂತೂ ಇರಬಲ್ಲದು.

ಕೆಲವು ಸಿಂಹಗಳಂತೆ ಘರ್ಜಿಸಿದವು. ವಿಚಿತ್ರವಿಚಿತ್ರ ಶಬ್ದಗಳನ್ನು ಮಾಡತೊಡಗಿದವು: ಕೂಗುಗಳಿಟ್ಟವು. ಇಷ್ಟ ಬಂದ ಕಡೆ ಮಲಗಿ ನಿದ್ರೆ ಮಾಡುತ್ತಾ ವನದಲೆಲ್ಲಾ ಬಿದ್ದವು. ಒಂದನ್ನೊಂದು ಕೀಟಲೆ ಮಾಡಿ ನಕ್ಕವು. ಕೆಲವು ಅತ್ತವು. ಇತರವು ಇನ್ನೇನನ್ನೋ ಮಾಡಿದವು. ಬೇರೆ ಬೇರೆ ಬಗೆಯಲ್ಲಿ ಕಿರಿಚಿದವು. ಕೆಲವುಗಳ ನಡತೆ ಕಂಡು ಇತರ ಕಪಿಗಳಿಗೆ ಅಪಾರ್ಥ ಕಲ್ಪನೆಯಾದಂತೆ ಕಂಡಿತು. ಕಾವಲುಗಾರನು ಅವನ್ನು ತಡೆದಾಗ ತಮ್ಮ ಮೊಣಕಾಲುಗಳನ್ನು ಅಗಲಿಸಿ ತಮ್ಮ ಪೃಷ್ಠಭಾಗವನ್ನ ತೋರಿಸಿದುವು, ಇದನ್ನು ವರ್ಣಿಸುವ ಕವಿಗೆ ಯಾವ ಮುಚ್ಚುಮರೆಯೂ ಇದ್ದಂತೆ ಇಲ್ಲಿ ಕಾಣುವುದಿಲ್ಲ. ಕಪಿಗಳನ್ನು ವರ್ಣಿಸುತ್ತಿದ್ದಾನೆ; ಒಂದು ಕ್ಷಣಕಾಲ ಹಗುರವಾಗಿ ಬಿಚ್ಚು ಮನಸ್ಸಿನಲ್ಲಿದ್ದಾನೆ. 'ಜಾನುಭಿಸ್ತು ಪ್ರಕೃಷ್ಟಾಶ್ಚ ದೇವ ಮಾರ್ಗಂ ಚ ದರ್ಶಿತಃ'! ದೇವ ಮಾರ್ಗದರ್ಶನವನ್ನು ನಾಲ್ಕಾರು ಬಾರಿ ಕವಿ ಹೇಳುತ್ತಾನೆ. ಧದಿಮುಖನಿಗೆ ಕೋಪ ಉಂಟಾಯಿತು. ಕಾವಲು ಮಾರ್ಗದವರಿಗೂ, ಕಪಿಗಳಿಗೂ ಕ್ರಮವಾಗಿ ಕಾದಾಟವೇ ನಡೆಯುತ್ತದೆ. ರಕ್ತ ಸುರಿಯುತ್ತದೆ ; ಪೆಟ್ಟುಗಳು ಬೀಳುತ್ತವೆ. ಆಳುವ ರಾಜನಿಗೆ ಧದಿಮುಖನು ಚಿಕ್ಕಪ್ಪನೆಂಬ ಲಕ್ಷ್ಯವಿಲ್ಲದೆ ಅಂಗದನು ಬಡಿದು ಅವನನ್ನು ಕೆಳಕ್ಕೆ ಬೀಳಿಸುತ್ತಾನೆ. ಅವನ ತೋಳು, ಹೆಗಲು, ಎದೆಗಳಿಗೆ ಪೆಟ್ಟು ಬೀಳುತ್ತದೆ. ಅವನು ಕುಪಿತನಾದ. ಎಡಬಲ ಎರಡೂ ಕಡೆ ಇದ್ದವರನ್ನು ಬಡಿದ. ಆದರೆ ಬಂಡಾಯವೆದ್ದ ವಾನರರ ಒಟ್ಟು ದಂಡಿನ ಮೇಲೆ ನಿಲ್ಲಲಾರದಾಗ. ಆದರೂ ಕಷ್ಟದಿಂದ ಪಾರಾಗಿ ಸುಗ್ರೀವನಿಗೆ ದೂರು ಕೊಂಡೊಯ್ಯುವುದಾಗಿ ಬೆದರಿಕೆ ಹಾಕಿದ. ಅಂಗದನೇ ಈ ಎಲ್ಲಾ ಅವಿವೇಕಕ್ಕೂ ಕಾರಣ ಎಂದರೆ ಕೋಪಿಸಿಕೊಂಡ ರಾಜನು ಈ ಕಪಿಗಳನ್ನೆಲ್ಲಾ ನಾಶಮಾಡುತ್ತೇನೆಂದು ಕೊಂಡ.

ಹೀಗೆ ಯೋಚಿಸಿ ರಾಮಲಕ್ಷ್ಮಣರೊಡನೆ ಕುಳಿತಿದ್ದ ಸುಗ್ರೀವನ ಬಳಿಗೆ ಹೋದ. ತನ್ನ ದೂರುಗಳನ್ನು ಯಥಾಕ್ರಮವಾಗಿ ಹೊತ್ತು ತಿಳಿಸಿದ. ಇದನ್ನೆಲ್ಲಾ ಸುಗ್ರೀವನು ಕೇಳಿಯಾಯಿತು. ಅಂಗದ, ಹನುಮಂತರ ಕೈಕೆಳಗಿನ ಕಪಿಗಳು ತೋಟವನ್ನು ಹೇಗೆ ಹಾಳುಕೆಡವಿದ್ದಾರೆಂಬುದನ್ನು ಧದಿಮುಖನು ವಿವರಿಸಿದ. ಎಲ್ಲಕ್ಕಿಂತಾ ಕೆಟ್ಟ ಹೀನಾಯವನ್ನು – ದೇವದ್ವಾರ ಪ್ರದರ್ಶನವನ್ನು – ವರ್ಣಿಸಿದ. ರಾಮಲಕ್ಷ್ಮಣರಿಗೆ ಏನು ನಡೆಯುತ್ತಿತ್ತು ಎಂಬುದರ ಅರಿವು ಒಡನೆಯೇ ಆಗಲಿಲ್ಲ, ಕಪಿ ಭಾಷೆಯಲ್ಲವೇ! ಸಂಗತಿಯೇನೆಂದು ಅವರು ಸುಗ್ರೀವನನ್ನು ಕೇಳಿದರು. ಎಲ್ಲರಿಗೂ ಅಚ್ಚರಿ ತಂದ ಸಂಗತಿ ಇದು : ಕೋಪಿಸಿಕೊಳ್ಳುವ ಬದಲು ಸುಗ್ರೀವನು ಹರ್ಷಗೊಂಡ ! ಧದಿಮುಖನು ಹೇಳುತ್ತಿರುವ ವರದಿಯ ವಿವರ ; ದಕ್ಷಿಣಕ್ಕೆ

ಹೋಗಿದ್ದ ವಾನರರು ತನ್ನ ಕಾವಲು ತೋಟವನ್ನು ದಾಳಿ ಮಾಡಿದ್ದಾರೆ ; ಬಂಡಾಯವೆಬ್ಬಿಸಿದ್ದಾರೆ, ಅಲ್ಲಿ ದೊಡ್ಡ ಸಂತೋಷಕೂಟವನ್ನು ನಡೆಸಿದ್ದಾರೆ – ಎಂದಾಗ ಅವರು ಜಯಗಳಿಸಿಯೇ ಬಂದಿರಬೇಕು ; ಇಲ್ಲವಾಗಿದ್ದರೆ ಇಂಥಹ ಬರ್ಬರತನ ಅಪರಾಧಕ್ಕೆ ಈಡಾಗುತ್ತಿರಲಿಲ್ಲ. ಅವರಿಗೆ ವಹಿಸಿದ್ದ ಕಾರ್ಯ ನೆರವೇರಿರಬೇಕು ಅವರು ಸೀತಾದೇವಿಯನ್ನು ಕಂಡಿದ್ದಾರೆ : ಈ ಬಗೆಗೆ ಸಂದೇಹವಿಲ್ಲ. ಹನುಮಂತನೇ ಆ ಕಾರ್ಯವನ್ನು ನೆರವೇರಿಸಿದ್ದಾನೆಂದು ನನ್ನ ಖಂಡಿತಾ ನಂಬಿಕೆ – ಎಂದ. ಇದು ಎಲ್ಲರಿಗೂ ಸಂತೋಷದ ಸುದ್ದಿಯೇ. ಸುಗ್ರೀವನು ಧದಿಮುಖನನ್ನು 'ಇದೆಲ್ಲಾ ಕೇಳಿ ನನಗೆ ತುಂಬಾ ಸಂತೋಷವಾಗಿದೆ, ಅವರನ್ನು ಕಾಣಬೇಕೆಂದು ನಾವು ಆತುರರಾಗಿದ್ದೇವೆ. ಎಷ್ಟು ಶೀಘ್ರವಾಗಿ ಆದರೆ ಅಷ್ಟು ಶೀಘ್ರವಾಗಿ ಅವರನ್ನು ಇಲ್ಲಿಗೆ ಕಳಿಸು' ಎಂದು ಅಪ್ಪಣೆ ಆಯಿತು. ಇದರ ಫಲವಾಗಿ ವಾನರರ ಆಮೋದ ಸಮಾರಂಭಗಳು ಕೊನೆಗೊಂಡವು. ಈಗ ನಡೆದುದು ಸಾಧಾರಣ ಘಟನೆಯಾದರೂ ಕವಿ ತುಂಬಾ ಸಹಜವಾಗಿ ಇದನ್ನು ಚಿತ್ರಸುತ್ತಾನೆ. ಎಲ್ಲವೂ ಕಣ್ಣಿಗೆ ಕಾಣಿಸುವಂತೆ ರಕ್ತಿ ಉತ್ಸಾಹಗಳಿಂದ ವರ್ಣಿಸುತ್ತಾನೆ. ಇಂದ್ರ ಜಾಲದ ಮನೆಯಂತಿದ್ದ ತನ್ನ ಗುಹೆಯಲ್ಲಿ ಸ್ವಯಂಪ್ರಭೆ ವಾನರರಿಗೆ ಆತಿಥ್ಯ ಕೊಟ್ಟದ್ದನ್ನು ಎಷ್ಟು ಸ್ಥಿರ ಗಂಭೀರದಿಂದ, ಮರ್ಯಾದೆಯಿಂದ ವರ್ಣಿಸಿ, ಶೀಲದ ನಿಯಮ, ವ್ಯಾಪಾರಗಳನ್ನು ಹೇಗೆ ವರ್ಣಿಸಿದ್ದನೋ ಅದೇ ಮನಸ್ಸು ಈ ಸಂಭ್ರಮವನ್ನೂ ವರ್ಣಿಸುತ್ತದೆ. ಅಲ್ಲಿ ಕಂಡದ್ದು ಗಂಭೀರ, ಹಿತಮಿತ ಮರ್ಯಾದೆಗಳಿಂದ ಕೂಡಿದ್ದು ; ಇಲ್ಲಿಯದು ತದ್ ವಿಪರೀತ....

ತಥೋರ್ಧ್ವವಾಸಿನೋ ಶಾಂತಾಸ್ತಥಾರ್ದ್ರಪಟವಾಸಸಃ
ಸಜಪಾಶ್ಚ ತಪೋನಿತ್ಯಾಸ್ತಥಾ ಪಂಚತಪೋಽನ್ವಿತಾಃ

## ೮. ಆಶ್ರಮಗಳು

ರಾಮಾಯಣದ ಮೊದಲ ಐದು ಕಾಂಡಗಳಲ್ಲಿ ಆ ಕಾಲದಲ್ಲಿನ ಆಶ್ರಮ ಜೀವನ ಎಂಥದೆಂಬುದರ ಚಿತ್ರ ದೊರೆಯುತ್ತದೆ. ವಿಶ್ವಾಮಿತ್ರನ ಆಶ್ರಮದಲ್ಲಿ ಆರು ದಿನಗಳ ಕಾಲ ನಡೆದ ಯಾಗದಿಂದ ಹಿಡಿದು, ಕಿಷ್ಕಿಂಧಾ ಕಾಂಡದಲ್ಲಿ ಮತಂಗಾಶ್ರಮದ ದರ್ಶದವರೆಗೂ ಅಂಥಲ್ಲಿನ ಜೀವನ ಚೈತ್ರ ಸುಮಾರು ಒಂದೇ ತೆರದ್ದು. ವಿಶ್ವಾಮಿತ್ರನ ದರ್ಶನದವರೆಗೂ ಯಜ್ಞಕಾರ್ಯವನ್ನು ರಕ್ಷಿಸಲು ರಾಮನನ್ನು ಋಷಿ ಒಯ್ದಿದ್ದ. ಮತಂಗಾಶ್ರಮದಲ್ಲಿ ವೃದ್ಧ ಮತಂಗ ಋಷಿ ಯಾವ ಬಗೆಯ ಜೀವನವನ್ನು ನಡಸುತ್ತಿದ್ದನೆಂಬ ವರ್ಣನೆ ಶಬರಿ ಈ ಸೋದರರಿಗೆ

ಕೊಡುವವರೆಗೂ ಆಶ್ರಮ ಜೀವನದ ಚಿತ್ರಗಳು ಸಿಕ್ಕುತ್ತವೆ. ಪ್ರಧಾನ ಋಷಿ ಒಬ್ಬ; ಅವನ ಸುತ್ತ ನಾನಾ ಬಗೆಯ ವ್ರತ ನಿಯಮ, ಅಧ್ಯಯನ ಧ್ಯಾನಗಳಲ್ಲಿ ತೊಡಗಿರುವ ಇನ್ನೆಷ್ಟೋ ಮಂದಿ ಇರುತ್ತಾರೆ ; ತಮ್ಮ ನಿಷ್ಠೆ ನಿಯಮಗಳನ್ನು ಪಾಲಿಸುತ್ತಾರೆ. ತಮ್ಮಷ್ಟಕ್ಕೆ ತಮ್ಮನ್ನು ಬಿಡಬೇಕೆಂಬ ಮನೋಧರ್ಮ ಅವರದು.ಅಂಥ ತಮ್ಮ ಆಚಾರ ವ್ಯಾಪಾರಗಳಲ್ಲಿ ಅಡ್ಡಿ ಆತಂಕವಿರಬಾರದೆಂಬುದು ಅವರ ಅಭಿಲಾಷೆ. ರಾಕ್ಷಸರು ಆ ಆಚರಣೆಗಳನ್ನು ಭಂಗ ಮಾಡುತ್ತಿದ್ದರು ; ಹಿಂಸಾಕೃತ್ಯಗಳಿಂದ ತಮ್ಮ ಮೇಲೆ ಕೈಯಿಡುತ್ತಿದ್ದರು ; ಆಶ್ರಮವಾಸಿಗಳೊಡನೆ ಕಾದಾಡುತ್ತಿದ್ದರು ; ಯಜ್ಞಕುಂಡಗಳ ಬೆಂಕಿಯನ್ನು ಆರಿಸುವುದು, ರಕ್ತ ಕೊಳೆತಮಾಂಸ ಹಾಕುವುದು, ಅಲ್ಲಿನ ಬದುಕನ್ನು ಕೊಳೆಮಾಡುವುದು ಮುಂತಾಗಿ ಕೆಡಿಸುತ್ತಿದ್ದುದರಿಂದಲೇ ಅವರು ಕ್ಷತ್ರಿಯ ರಕ್ಷಣೆಯನ್ನು ಬೇಡಿದುದು. ಅಂತಹ ಹಿಂಸಕರನ್ನು ನಾಶಮಾಡಬೇಕಾಗಿದೆ. ಅಷ್ಟು ಸಣ್ಣ ಕಾರ್ಯಸಾಧನೆಗಾಗಿ ವ್ರತಿಗಳು ತಾವು ಸಾಧಿಸಿದ್ದ ತಪಃಶಕ್ತಿಯನ್ನು ಪೋಲು ಮಾಡಬಾರದು. ಸೌಮ್ಯರಾಗಿ ಶಾಂತರಾಗಿ ಅಹಿಂಸಾವೃತ್ತಿ ಉಳ್ಳವರಾಗಿ ಇದ್ದವರು ಅವರು.

ಆಶ್ರಮದ ಬದುಕು ಸಮರಸವಾದ್ದು, ಧ್ಯಾನನಿಷ್ಠವಾದ್ದು. ಅಲ್ಲಿನ ಗಿಡಗಳನ್ನು ಅವರು ನೋಡಿಕೊಳ್ಳುತ್ತಿದ್ದರು. ಗುಡಿಸಿಲುಗಳನ್ನು ಚೆನ್ನಾಗಿ ಕಟ್ಟಿಕೊಂಡಿರುತ್ತಿದ್ದರು. ಸ್ನಾನ ಪೂಜಾಕಾರ್ಯಗಳು ಗೊತ್ತಾದ ಕಾಲದಲ್ಲಿ ನಡೆಯುತ್ತಿದ್ದುವು. ಅವರ ಆಹಾರ ಹಣ್ಣು ಕಂದಮೂಲಗಳು. ಪಕ್ಷಿಗಳೂ ಭಯವಿಲ್ಲದೆ ಅಲ್ಲಿ ಹಾರಾಡುತ್ತಿದ್ದವು. ಮನುಷ್ಯರ ಭಯವಿಲ್ಲದೆ ಕಾಡು ಪ್ರಾಣಿಗಳು ಸಂಚರಿಸುತ್ತಿದ್ದವು. ಭರದ್ವಾಜ, ಅತ್ರಿ, ಸುತೀಕ್ಷ್ಣ, ಅಗಸ್ತ್ಯ, ಮತಂಗ ಮುಂತಾದವರ ಆಶ್ರಮಗಳು ವಿಶಿಷ್ಟವಾದವು.

ಭರದ್ವಾಜ, ಅಗಸ್ತ್ಯ ಪ್ರಬಲವಾದ ಋಷಿಗಳು. ಅದ್ಯಾತ್ಮಿಕ ಆಚರಣೆಯಲ್ಲಿ ಆಶ್ರಯ ಕೊಡಲು ಶಕ್ತರಾಗಿದ್ದರಲ್ಲದೆ ಯಾವ ಸಂಖ್ಯೆಯ, ಸ್ತರದ, ಗಾತ್ರದ ಅತಿಥಿಗಳಿಗೂ ಆತಿಥ್ಯಗಳನ್ನು ಲೌಕಿಕವಾಗೆಂಬಂತೆ ನೀಡಲು ಶಕ್ತರಾಗಿದ್ದರು. ರಾಜನಾಗಿದ್ದ ಭರತನನ್ನೇ ಭರದ್ವಾಜನು ಧಾರಾಳವಾಗಿ ಪ್ರಶ್ನೆ ಮಾಡುತ್ತಾನೆ – ಸೇನೆಯನ್ನು ಕಟ್ಟಿಕೊಂಡು ಅವನು ಏತಕ್ಕೆ ಇತ್ತ ಬರುತ್ತಿದ್ದಾನೆ, ಉದ್ದೇಶವೇನು?– ಎಂದು ಕೇಳಿದನಲ್ಲದೆ ಚರಿತ್ರಾರ್ಹವಾದ ಕಾರ್ಯವನ್ನು ಮಾಡಿದ ತನ್ನ ತಾಯ ಪರಿಚಯವನ್ನು ಮಾಡಿಕೊಡೆಂದು ಭರತನನ್ನು ಕೇಳುತ್ತಾನೆ. ಅಯೋಧ್ಯೆಯವರಿಗೆ ಋಷಿ ಕೊಟ್ಟ ಔತಣಕೂಟ, ವಿನೋದ ವಿಲಾಸ ಎಷ್ಟು ಸಮೃದ್ಧವಾಗಿ ಊಡಬಲ್ಲದು, ಸಂತೋಷವನ್ನು ಒದಗಿಸಬಲ್ಲದು ಎಂಬುದನ್ನು ಕಾಣಿಸುತ್ತದೆ. ಆ ಆಶ್ರಮವಿದ್ದುದ್ದು ಅಯೋಧ್ಯೆಗೆ ಹತ್ತಿರದಲ್ಲೇ ವಾಸ್ತವವಾಗಿ ಅದು ಪ್ರಯಾಗ, ಸುತ್ತಮುತ್ತಲ ರಾಜ್ಯಗಳು

ಆಶ್ರಮಕ್ಕೆ ಗೌರವ ಸಲ್ಲಿಸುತ್ತಿದ್ದವು. ಭರತ – ರಾಮ ಇಬ್ಬರೂ ಋಷಿಯಲ್ಲಿ ವಿಶ್ವಾಸವಿಟ್ಟಿದ್ದವರು. ಎಂಥಶಕ್ತಿ ಪ್ರಭಾವಗಳು ಆತನಿಗಿತ್ತೆಂಬುದರ ಚಿತ್ರ ಇಲ್ಲಿ ದೊರೆಯುತ್ತದೆ... ಸುತ್ತೀಕ್ಷ್ಣರ ಆಶ್ರಮದಲ್ಲಿ ಹೆಚ್ಚು ಉಪಶಾಂತಿಯಿದೆ ; ಹೆಚ್ಚು ಲೋಕ ಸಾಮಾನ್ಯತೆ ಇದೆ. ತನ್ನ ಆಶ್ರಮದಲ್ಲಿ ತಪಸ್ಸನ್ನು ನೋಡಿಕೊಳ್ಳುತ್ತಿರುವವನು ಶರಭಂಗ, ಆದರೆ ಶರಭಂಗನ ಆಶ್ರಮದಲ್ಲಿ ಸುತೀಕ್ಷ್ಣರ ಆಶ್ರಮಕ್ಕೆ ಹೋಗುವ ದಾರಿಯಲ್ಲಿ ಕಾಣುವ ತಪಸ್ವಿಗಳದು ಒಂದು ದೊಡ್ಡ ಗುಂಪು. ರಾಮನನ್ನು ಕಂಡು ಅವನಿಗೆ ತಮ್ಮ ಪರಿಸ್ಥಿತಿಯನ್ನು ವರ್ಣಿಸಿ ಯಾವ ಬಗೆಯ ರಕ್ಷಣೆ ತಮಗೆ ಆಗಬೇಕಾಗಿದೆಯೆಂಬುದನ್ನು ನಿವೇದಿಸಿ ಕೊಳ್ಳುವರು. ದಂಡಕಾರಣ್ಯದಲ್ಲಿ ಅವನು ಉಳಿದಿರಬೇಕಾದ ಕಾಲವನ್ನೆಲ್ಲ ಅವರು ಬೇಡುವ ಕಾರ್ಯಕ್ಕೆ ವಿನಿಯೋಗ ಮಾಡಬೇಕಾಯಿತು. ಅಲ್ಲಿರುವ ಈ ವ್ರತಿಗಳ ಪಟ್ಟಿ ವ್ರತಗಳ ಸ್ವರೂಪವನ್ನು ತಿಳಿಸುತ್ತದೆ.

ವೈಖಾನಸಾ ವಾಲಖಿಲ್ಯಾಃ ಸಂಪ್ರಕ್ಷಾಲಾ ಮರೀಚಿಸಾಃ
ಅಶ್ವಕುಟ್ಟಾಶ್ಚ ಬಹವಃ ಪತ್ರಾ ಹಾರಾಶ್ಚ ತಾಪಸಾಃ
ದಂತೋಲೂ ಖಲಿನಶ್ಚೈವ ತಥೈವೋನ್ಮಜ್ಜಕಾಃ ಪರೇ
ಗಾತ್ರಶಯ್ಯಾ ಅಶಯ್ಯಾಶ್ಚ ತಥೈವಾನವ ಕಾಶಿಕಾಃ
ಮುನಯಃ ಸಲಿಲಾಹಾರಾ ವಾಯಭಕ್ಷಾಸ್ತಥಾಪರೇ
ಆಕಾಶ ನಿಲಯಾಶ್ಚೈವ ತಥಾಸ್ಥಿಲಶಾಯಿನಃ

ಇವರೆಲ್ಲ 'ಸರ್ವೇ ಬ್ರಾಹ್ಮ್ಯ ಶ್ರಿಯಾ ಜುಷ್ಟಾ', ದೃಢಯೋಗ ಉಳ್ಳವರು ; ಸಮಾಹಿತರು. ಅವರೆಲ್ಲರಿಗೂ ಬ್ರಹ್ಮತೇಜಸ್ಸಿತ್ತು. ಕಡು ನಿಷ್ಠೆಯಿಂದ ತಮ್ಮ ವ್ರತಗಳಲ್ಲಿ ತೊಡಗಿದ್ದವರು. ವ್ರತನೇಮ ಉಪವಾಸಗಳ ಈ ಚಿತ್ರ ಅದರ ವಿವಿಧತೆಯ ದೃಷ್ಟಿಯಿಂದ ಮಾತ್ರವಲ್ಲದೆ ಅವರ ಆಧ್ಯಾತ್ಮಿಕ ಯತ್ನಗಳ ನಿಷ್ಠೆಗೂ ಪ್ರಾಮಾಣಿಕತೆಗೂ ಸಾಕ್ಷಿಯಾಗುತ್ತದೆ. ಅಂಥವರನ್ನು ಕಂಡಾಗ ಬಲಿಷ್ಠನಾದ ಯಾವನಾದರೂ ಅವರ ನೆರವಿಗೂ ರಕ್ಷಣೆಗೂ ಭರವಸೆ ಕೊಡಬೇಕೆಂಬ ಮನಸ್ಸುಳ್ಳವನಾಗುತ್ತಾನೆ. ಒಟ್ಟಿಗೆ ಗುಂಪಾಗಿ ಅವರೆಲ್ಲರೂ ಅವನಲ್ಲಿಗೆ ಬಂದು ಮನವಿ ಮಾಡಿಕೊಂಡಾಗ 'ಪರಾತ್ವತ್ತಾ ಗತಿರ್ವೀರಾ ಪೃಥಿವ್ಯಾಂ ನೋಪಪದ್ಯತೇ' ಎಂಬ ಮಾತು ಬರುತ್ತದೆ. ಅವರಿಗಿರುವ ಏಕಮಾತ್ರ ಸಹಾಯ ಅವನು ; ಆ ಕಾರ್ಯವನ್ನು ಮಾಡುವುದಕ್ಕೆ ಅವನೊಬ್ಬನೇ ಶಕ್ತ ಎಂಬುದು ಮಾತು. ಅವರು ಬೇಡುವ ರಕ್ಷಣೆಯನ್ನು ಅವರಿಗೆ ಒದಗಿಸುವೆನೆಂದು ರಾಮನು ಕೊಟ್ಟ ಮಾತನ್ನು ನಾವು ಸುಲಭವಾಗಿ

ಅರ್ಥಮಾಡಿಕೊಳ್ಳಬಹುದು. ಅಂಥ ಕಾರ್ಯಗಳನ್ನು ಮಾಡುವುದು – ಕೇಳಿಸಿಕೊಳ್ಳದೆ ಮಾಡುವುದು – ಕ್ಷತ್ರಿಯನ ಕಾರ್ಯ ಎಂಬುದು ಆ ಕಾಲದ ನಂಬಿಕೆ. ಜನ ಬಂದು ನಿರ್ದಿಷ್ಟವಾಗಿ ನೆರವು ಬೇಡಿದಾಗ ಮಾಡಲಾರೆನೆಂದು ಹೇಳುವುದಕ್ಕಿಲ್ಲ. ಇಂಥವರ ಪ್ರಯೋಜನಕ್ಕಾಗಿ ಇಂಥ ಸನ್ನಿವೇಶದಲ್ಲಿ ಹಾಗೆ ಹೇಳುವುದು ರಾಮನ ಸ್ವಭಾವಕ್ಕೆ ಬಂದುದೂ ಅಲ್ಲ.

ಅಗಸ್ತ್ಯನಿರುವುದು ಹೆಚ್ಚು ತೆಂಕಲಲ್ಲಿ. ಅವನು ತುಂಬಾ ಪ್ರಬಲನಾದ ಋಷಿ. ಅವನ ಆಶ್ರಮ ಬಹು ದೊಡ್ಡದಾಗಿರಬೇಕು. ಅವನು ರಾಮನನ್ನು ನಿರೀಕ್ಷಿಸುತ್ತಿದ್ದಾನೆ. ಇಷ್ಟು ಕಾಲವಾದರೂ ಅವನು ತಡಮಾಡಿರುವುದೇಕೆ ಎಂಬುದು ಅವನಿಗೆ ಅರ್ಥವಾಗಲೊಲ್ಲದು. ಅವನು ರಾಮನಿಗೆ ಕೊಟ್ಟದ್ದು ಒಂದು ಖಡ್ಗ.[೧೨] ರಾಕ್ಷಸರ ನಾಶಕ್ಕೆ ಬೇಕಾದ ವಿಶೇಷ ಪ್ರಭಾವ ಅದಕ್ಕಿತ್ತು. ಅದು ಯಾರ ಮೇಲೆ ಪ್ರಯೋಗವಾಗಬೇಕಿದೆ ಎಂಬುದೂ ಬಹುಶಃ ಅವನಿಗೆ ಗೊತ್ತು. ಗೋದಾವರಿಯ ದಡದ ಜನಸ್ಥಾನದಲ್ಲಿ ಆಶ್ರಮವನ್ನು ಮಾಡಿಕೊಳ್ಳಬೇಕೆಂದು ನಿರ್ದೇಶಿಸುವವನು ಅಗಸ್ತ್ಯನೇ. ಮುಂದಿನ ಸಾಹಸಗಳು ಅಥವಾ ರಾಮಾಯಣ ಕತೆಯ ಮುಂದಿನ ಘಟನೆಗಳಿಗೆ ಇದು ಒಂದು ಮಜಲನ್ನೇ ನಿರ್ಮಿಸಿತೆನ್ನಬೇಕು. ಮೊದಲ ದಿನಗಳಿಂದ ಹಿಡಿದು ಮುಂದಕ್ಕೆ ಈ ಒಟ್ಟು ಕಾರ್ಯ ಪ್ರಪಂಚವನ್ನು ತೊಡಗಿಸಿ ನಡೆಸಿದವರು ಋಷಿಗಳು ಎಂಬಂತೆ ಕಾಣುತ್ತದೆ. ಅರಮನೆಯ ಹೊರಗೆ ಹೊರಟಾಗಿನಿಂದ ನಾಡಿನ ಒಂದು ಭಾಗದಿಂದ ಇನ್ನೊಂದು ಕಡೆ ಒಯ್ಯುತ್ತ ದಕ್ಷಿಣದ ಕಡೆಗೆ ಮುಂದೆ ತಿರುಗಿಸಿದವರು ಅವರು. ದಕ್ಷಿಣದ ಈ ಪ್ರಾಂತದಲ್ಲಿಯೇ ಖರನ ಕೈಕೆಳಗಿನ ರಾಕ್ಷಸರು ಪಾಳೆಯವನ್ನೂ ಕ್ರಿಯಾಮಂಡಲವನ್ನೂ ರಚಿಸಿಕೊಂಡಿದ್ದದ್ದು. ಶೂರ್ಪನಖಿ ಅಲ್ಲೆ ತಿರುಗಾಡುತ್ತಿದ್ದದ್ದು. ಯಾವುದೊ ಆಧ್ಯಾತ್ಮಿಕ ಅಭ್ಯಾಸದಲ್ಲಿ ಮಾರೀಚನು ತೊಡಗಿದ್ದುದು ಕೂಡ ಅಲ್ಲಿಯೇ.

ಚಿತ್ರಕೂಟಕ್ಕೆ ಅವರು ಮುಟ್ಟಿದ ಕೂಡಲೆ ರಾಮಲಕ್ಷ್ಮಣ ಸೀತೆ ದಂಡಕಾರಣ್ಯದಲ್ಲಿ ಸಂಚರಿಸುತ್ತಿದ್ದಾರೆ ಎಂಬ ಸುದ್ದಿ ಹರಡಿತು. ದೂರದಲ್ಲಿ ಋಷಿ ಮತಂಗನ ಕಿವಿಗೆ ಅದು ಬಿದ್ದಿದೆ. ಪಂಪಾಸರೋವರದ ತೀರದಲ್ಲಿದ್ದ ತನ್ನ ಆಶ್ರಮವನ್ನು ನೋಡಲು ರಾಮನು ಬಂದಾನೆಂದು ಆ ಋಷಿ ನಿರೀಕ್ಷೆಯಲ್ಲಿದ್ದನು. ಅವನು ಅಲ್ಲಿ ಬಂದು ಸೇರಿದಾಗ ಅವನಿಗೆ ತಕ್ಕ ಸತ್ಕಾರ ಒದಗಿಸಬೇಕೆಂದು ತನ್ನ ಶಿಷ್ಯೆಯೂ ಪರಿಚಾರಕಳೂ ಆದ ಶಬರಿಗೆ ಹೇಳಿ

---

೧೨ ಖಡ್ಗವನ್ನು ರಾಮನು ಬಳಸುವ ಸಂದರ್ಭಗಳು ಬಂದ ಹಾಗಿಲ್ಲ.

ಹೋಗಿದ್ದನು. ಹಾಗೆ ಮಾಡಿದ ಮೇಲೆಯೇ ಅವಳು ಸ್ವರ್ಗಸ್ಥಳಾಗಲು ಯೋಚನೆ ಮಾಡುವ ಸಮಯ ಬಂದೀತು ಎಂದು ಹೇಳಿದ್ದ. ಎಂದರೆ ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಇವರು ಸಾರುವಂತೆ ಕ್ರಿಯಾವ್ಯಾಪಾರ ನಡೆದಿರುತ್ತದೆ. ಶರಭಂಗಾಶ್ರಮಕ್ಕೆ ಇಂದ್ರ ಬಂದಿರುತ್ತಾನೆ. ರಾಮನನ್ನು ಕಂಡವನೇ ಆತನನ್ನು ಅಲ್ಲಿ ಇದಿರ್ಗೊಳ್ಳಲು ಇನ್ನೂ ಸಮಯವಲ್ಲ ; ತಾನು ಅವನನ್ನು ನೋಡುವ ಮುಂಚೆ ರಾಮನು ಮಾಡಬೇಕಾಗಿರುವ ಕಾರ್ಯ ಬಹಳವಾಗಿದೆ ಎನ್ನುತ್ತಾನೆ. ಶಾಪಗ್ರಸ್ತನಾಗಿರುವ ವಿರಾಧನಿಗೂ ಕಬಂಧನಿಗೂ ಸುದ್ದಿ ಬಂದಿತ್ತು – ತಮ್ಮ ಉದ್ಧಾರ ರಾಮನಿಂದ ಆಗುವುದೆಂದು. ಆ ಇಬ್ಬರೂ ತಮ್ಮ ರೀತಿಯಲ್ಲಿ ಅವನನ್ನು ಇನ್ನಷ್ಟು ತೆಂಕಲಿಗೆ ಕಳಿಸುತ್ತಾರೆ. ಭರವಸೆಯನ್ನೂ ನೆರವಿಗೆ ವಾಗ್ದಾನವನ್ನೂ ಮಾಡಿ ಸಹಾಯವಾಗುತ್ತಾರೆ. ಕುತೂಹಲವಾದ ಒಂದು ಸಂಗತಿ ಇದು : ಮದುವೆಗೆ ಮುಂಚೆ ರಾಮನು ವಿಶ್ವಾಮಿತ್ರನೊಡನೆ ಗೌತಮಾಶ್ರಮಕ್ಕೆ ಬರುವ ಬಹುಮುಂಚೆಯೇ ರಾಮನು ಬರುವುದನ್ನು ತನ್ನ ಆಶ್ರಮದಲ್ಲಿ ಗೌತಮನು ನಿರೀಕ್ಷಿಸುತ್ತಿದ್ದಂತೆ ಕಾಣುತ್ತದೆ. ಅಹಲ್ಯೆಯ ಶಾಪ ವಿಮೋಚನೆಯ ಕಾಲದ ಮಿತಿ (ಎಷ್ಟು ಕಾಲದಲ್ಲಾದ್ದು ಅದು ?) ಬಹು ಹಿಂದೆ ಗೊತ್ತುಪಟ್ಟಿದ್ದಿರಬೇಕು. ರಾಮನು ಆಶ್ರಮಕ್ಕೆ ಬಂದು ಅಹಲ್ಯೆ ಆತಿಥ್ಯ ನೀಡುವಾಗ ಅಹಲ್ಯೆ ಹೊರಗೆ ಬಂದು ಸ್ವೀಕೃತವಾಗುವಂತಾಯಿತು. ಆ ಕಾಲ ಒದಗುವುದೆಂದೂ ತಾನು ಅವಳನ್ನು ಸ್ವೀಕರಿಸಲು ಸಮಯವೆಂದೂ ಋಷಿ ಹೇಳಿದ್ದ. ಹೀಗೆಂದಾಗ ವಿಶ್ವಾಮಿತ್ರನ ಕಾರ್ಯವೇ ಪುನರಾಲೋಚಿತವಾದದ್ದಿರಬೇಕು – ಎಂದಾಯಿತು. ವಸಿಷ್ಠನು ರಾಮಲಕ್ಷ್ಮಣರನ್ನು ವಿಶ್ವಾಮಿತ್ರನೊಡನೆ ಕಳಿಸಿಕೊಡುವುದು ಒಳ್ಳೆಯದು ಎಂದು ಹೇಳಿ ದಶರಥನ ಮನಸ್ಸನ್ನು ತಿರುಗಿಸಿದ್ದು ಇದಕ್ಕೊಂದು ಅಂಗವಾಯಿತು. ಭೂಲೋಕದಲ್ಲಿ ಕಾರ್ಯ ಮಾಡಬೇಕಾಗಿರುವ ಈ ಮುಖ್ಯ ಪಾತ್ರಗಳಿಗೆ (ರಾಮಲಕ್ಷ್ಮಣರಿಗೆ) ತಿಳಿಯದಂತೆಯೇ ಈ ಹುಡುಗರ ಹಿತ ಮತ್ತು ಕೀರ್ತಿ ಬೆಳೆಯತಕ್ಕದ್ದೆಂಬ ಸಂಗತಿಯ ಜೊತೆಗೆ ಹೆಚ್ಚು ವ್ಯಾಪ್ತವಾದ ಇನ್ನಾವುದೊ ಮಹಾಕಾರ್ಯ ರಚಿತವಾಗುತ್ತಿತ್ತು ಎಂಬಂತಾಗುತ್ತದೆ. ತನ್ನ ಮಕ್ಕಳು ಸುರಕ್ಷಿತವಾಗಿರುತ್ತಾರೆ ಎಂಬಂಶದಲ್ಲಿ ರಶರಥನಿಗೆ ಯಾವ ಭಯವೂ ಇರಬೇಕಾಗಿಲ್ಲ ; ಅವರು ಗುಪ್ತಿಗೆ ವಿಶ್ವಾಮಿತ್ರನಿರುವಾಗ, – ಅಮೃತಕ್ಕೆ ಅಗ್ನಿಯ ರಕ್ಷಣೆಯಿದ್ದಂತೆಯೇ ಸರಿ ಎಂದು ವಸಿಷ್ಠನ ಸಲಹೆಗೆ ಬಲ ಬಂದಿತು.

ರಾಮನು ಹುಟ್ಟುವ ಮುಂಚಿತವಾಗಿ ಕೂಡ ದಶರಥನ ಕಣ್ಣಿಗೆ ಬೀಳದ ಅವನ ಯಾಗ ಪೂರೈಕೆಯ ಸಮಯದಲ್ಲಿ ದೇವತೆಗಳು ಸೇರುತ್ತಾರೆ. ರಾವಣನ

ನಾಶಕ್ಕೆ ಸಂಚು ಮಾಡಿರುತ್ತಾರೆ. ಆ ರಾಕ್ಷಸನ ನಾಶಕ್ಕೆ ಅಗತ್ಯವಾಗಲು ಇರುವ ಒಂದೇ ರೂಪವನ್ನು ತಮಗಾಗಿ ಧರಿಸಬೇಕೆಂದು ವಿಷ್ಣುವನ್ನು ಪ್ರಾರ್ಥಿಸುತ್ತಾರೆ. ಬ್ರಹ್ಮನು ರಾವಣನಿಗೆ ಕೊಟ್ಟ ವರದಲ್ಲಿ ನರರು ವಾನರರು ಸೇರಿರಲಿಲ್ಲ, ವಿಷ್ಣು ದಶರಥನ ರಾಣಿಯರ ಗರ್ಭದಲ್ಲಿ ಸ್ಥಾನ ಪಡೆದರೆ ದೇವತೆಗಳಲ್ಲಿ ಅನೇಕರು ವಾನರನಾಯಕರ ಉತ್ಪತ್ತಿಗೆ ಕಾರಣರಾಗುತ್ತಾರೆ. ಬಹುಭಾಗ (ಏಕೆ, ಒಟ್ಟು ಇದೆಲ್ಲ) ಹೀಗೆ ನಿಯಮಿತವಾಗಿ ಮೊದಲೇ ಏರ್ಪಾಡುಗೊಂಡಂತಿದೆ. ಋಷಿಗಳು ಮನುಷ್ಯವರ್ಗದಲ್ಲಿ ಮುಖ್ಯರು. ನಡೆಯುವ ಎಲ್ಲದರ ಅಂತರ್ದರ್ಶನ ಅವರಿಗೆ ಇತ್ತು. ಯಾವ ಯಾವುದು ಹೇಗೆ ನಡೆಯಬೇಕು, ಹೇಗೆ ನಡೆಯುತ್ತದೆ ಎಂದು ತಿಳಿದವರಿಗೆ ಮಾನವರ ಈ ಒಟ್ಟು ಕತೆ ಈ ದೃಷ್ಟಿಯಿಂದ ಕೇವಲ ಒಂದು ಬೊಂಬೆಯಾಟವಾಗುತ್ತದೆ. ಈ ಕ್ರಿಯಾ ಕಾಂಡದ ಅಂಗಗಳಾಗುತ್ತಾರೆ ಋಷಿಗಳು. ಮಾನವತೆಯ ಅಭಿವ್ಯಕ್ತಿಯೂ ಧ್ವನಿಗಳೂ ಆಗ ಎರಡನೆಯ ಮಟ್ಟದ್ದಾಗುತ್ತವೆ, ಗೌಣವಾಗುತ್ತವೆ. ಅನೇಕ ಮಂದಿ ಗಂಡಸರಿಗೆ ಹೆಂಗಸರಿಗೆ ಉಂಟಾಗುವ ದುಃಖಗಳು, ಅವರು ಅನುಭವಿಸಬೇಕಾದ ಹಿಂಸೆ ಯಾತನೆ, ಆಸೆ ಭರವಸೆ ಉದ್ವೇಗ, ಕಡೆಗೆ ರಾಮಾಯಣವನ್ನು ಅಷ್ಟು ಮಾನವವಾಗಿ ಲೋಕಪ್ರಿಯವಾಗಿ ಮಾಡಿರುವ ವ್ಯಸನ, ವೇದನೆ ಆಗ ಇನ್ನಾವುದೊ ಉದ್ದೇಶದ ನೆರವೇರಿಕೆಗಾಗಿ ಬಳಕೆಯಾಗುವ ಸಾಧನಗಳಾಗುತ್ತವೆ. ಅವುಗಳಿಂದ ಏನಾಗಬೇಕಿದೆ ? ಕಾರ್ಯ ಮಾಡುತ್ತಿರುವುದು ದೈವಕೃತ. ಅಲ್ಲಿ ಮನುಷ್ಯಪರವಾದ ಒಳಿತನ್ನೂ ಲೋಕಕ್ಷೇಮವನ್ನೂ ಕುರಿತ ನುಡಿ ಇದ್ದರೂ – ಇಲ್ಲಿ ನಡೆಯುವ ಪ್ರತಿಯೊಂದು ಸಂಗತಿಯೂ ಇನ್ನೊಂದು ಉದ್ದೇಶವನ್ನು ಮುಂದುವರಿಸುವ ಸಲುವಾಗಿ ನಿಂತ ಹಾಗೆ ಕಾಣುತ್ತದೆ. ಮಾನವ ಮಟ್ಟದಲ್ಲಿರುವ ರಾಮನ ನಿಯತಿ, ಕ್ಷಾತ್ರ, ದೈವ, ವಿಧಿ, ಕಾಲ ಎಂದು ಹಲವು ವೇಳೆ ಭಾವಿಸಿದರೂ ಕಡೆಗೆ ಗೆದ್ದಿರುವುದು ತನ್ನ ಕ್ಷಾತ್ರ, ಪೌರುಷ ಎಂದು ಹೇಳುತ್ತಾನೆ. ಅದುವೂ ನಿಯತವೆ ? ಎಂದರೆ, ಕಡೆ ಕ್ಷಣದಲ್ಲಿ ಗೆದ್ದುದು ರಾಮನ ಶಕ್ತಿಸಾಹಸವೇ ಅಲ್ಲ, ಗರುಡನು ಕೊಟ್ಟ ನೆರವು, ಆದಿತ್ಯಹೃದಯದ ಸ್ಫೂರ್ತಿ, ಇಂದ್ರನು ಕಳಿಸಿದ ರಥದ ನೆರವು, ಮಾತಲಿ ರಾಮನ ಕಿವಿಯಲ್ಲಿ ಉಸುರಿದ ಸಲಹೆ, ರಾವಣನನ್ನು ನೆಲಕ್ಕೆ ಬೀಳಿಸಬೇಕಾದರೆ ಬ್ರಹ್ಮಾಸ್ತ್ರ ಪ್ರಯೋಗವೇ ಆಗಬೇಕೆಂದು ಹೇಳಿದುದು – ಇವು ಕಾರ್ಯಸಾಧಕವಾಗುವಂತೆ ಆಗುತ್ತದೆ. ಒಂದು ಮಹಾಕಾವ್ಯಕೃತಿಯ ಮಾನವ ಲಕ್ಷಣವನ್ನೆಲ್ಲ ನಿರ್ಣಯಿಸುವುದರಲ್ಲಿ ಎಂಥ ರೀತಿ ಇದು ಎನ್ನಿಸುತ್ತದೆ.

ಅಥವಾ, ಕೆಲವರು ಹೇಳುವಂತೆ ರಾಮನೇ ಹೀಗೆಲ್ಲ ಮಾಡುವುದು

ಮಾನವನಾಗಿ ಹುಟ್ಟಿದ ಕಾರಣದಿಂದ ; ಇದೆಲ್ಲ ದೇವನಾದ ರಾಮನ ಮಾನವ ಲೀಲೆ ಎನ್ನುವುದುಂಟು. ಆಗ ಇಲ್ಲಿನ ಸಮಸ್ತ ಮಾನವ ಮಟ್ಟದ ಕಾರ್ಯವೆಲ್ಲ ಒಂದು ನಂಬಿಕೆಯ ತೋರಿಕೆ ಮಾತ್ರ. ರಾಮನು ರಾಮನಲ್ಲ ; ಸೀತೆ ಸೀತೆಯಲ್ಲ ; ಇದೆಲ್ಲ ದೈವೀ ಕಾರ್ಯ. ರಾವಣನಾಶಕ್ಕಾಗಿ ಋಷಿಗಳೂ ದೇವತೆಗಳೂ ನಿರ್ಮಾಣಮಾಡಿ ನಡೆಸಿದ್ದು ಎಂದಾಗುತ್ತದೆ. ಇದರಲ್ಲಿ ಒಂದು ಕರುಣೆ – ರಾವಣನಾದರೂ ವಾಸ್ತವ ವ್ಯಕ್ತಿಯೆಂಬುದು ! ಕೈಕೆ , ಅವಳಿಗಿಂತ ಹೆಚ್ಚಾಗಿ ಅವಳ ದಾದಿ ಮಂಥರೆ ಈ ಕ್ರಿಯಾತಂತ್ರಕ್ಕೂ ಇದರ ನೆರವೇರಿಕೆಗೂ – ಎಂದರೆ ಇದರ ಸಮಸ್ತ ಪ್ರೇರಕವ್ಯಾಪಾರಕ್ಕೂ – ಮುಖ್ಯ ಸಾಧನಗಳಾಗುತ್ತಾರೆ. ವಿಚಿತ್ರ ಸಂಗತಿ : ಈ ಯಾವುದೂ ರಾಮನಿಗೆ ತಿಳಿಯದು. ಅವನ ತಿಳಿವಳಿಕೆಯಲ್ಲಿರುವುದು ತಾನು ಮನುಷ್ಯ ; ದಶರಥನ ಮಗನೆಂದು. ಅದಕ್ಕಿಂತ ಹೆಚ್ಚಿನ ಇನ್ನಾವುದನ್ನಾದರೂ ಆರೋಪಣೆ ಮಾಡಿದರೆ ಅದು ಇನ್ನೊಬ್ಬರ ಪ್ರತಿಪಾದನೆ ಮಾತ್ರವೇ. ಆಗ ರಾಮನು ಮನುಷ್ಯ ವ್ಯಕ್ತಿಯಾಗುವುದಿಲ್ಲ ; ಕೇವಲ ಒಂದು ಸಾಧನಸಾಮಗ್ರಿ ಮಾತ್ರ ; ಇನ್ನಾವುದಕ್ಕೂ ಬೆಲೆಬಾಳದ ಎಣಿಕೆಯವನು ತಾನು ಎಂಬ ಭಾವ ಅವನಿಗೆ ಬಂದರೆ ಅವನಿಗೆ ಸುಖವುಂಟಾಗುತ್ತದೆಯೆ ? ಆಧುನಿಕ ಮನೋಭಾವನೆಗೆ ನೋವುಂಟು ಮಾಡುವ ಸಂಗತಿ ಅರಣ್ಯಕಾಂಡದಲ್ಲಿ ನಡೆದ ಒಂದು ಸಣ್ಣಸಂಗತಿಯ ಹೇಳಿಕೆ : ರಾವಣನ ಕೈಯಲ್ಲಿ ಸೀತೆ ಸಿಕ್ಕಿಹಾಕಿಕೊಂಡು ಶಾಪವಿಡುತ್ತ ಅಳುತ್ತ ತಪ್ಪಿಸಿಕೊಳ್ಳಲು ಯತ್ನಿಸುತ್ತಿರವಾಗ ಅವಳ ತಲೆಕೂದಲು ಬಿಚ್ಚಿಹೋಯಿತು ಎಂದಾಗ, ಇದನ್ನು ನೋಡುತ್ತಿದ್ದ ದೇವತೆಗಳಿಗೆ ಋಷಿಗಳಿಗೆ ಸಂತೋಷವುಂಟಾಯಿತು ಎಂಬ ಮಾತು. ಏಕೆಂದರೆ, ಇದು ಸಂಘಟಿಸಿರುವ ಈಗ ರಾವಣ ನಾಶ ನಿಶ್ಚಯ ಎಂಬುದು. ಎಂಥ ದುಃಖಕರವಾದ, ಮಾನವ ಹೃದಯಸಂವೇದನೆಯಿಲ್ಲದ ನಡವಳಿಕೆ ಇದು, ಎಂಥ ವಿಕೃತಿ ಎನ್ನಿಸುತ್ತದೆ.[೧೩]

---

೧೩ ಒಟ್ಟ ಈ ಎಲ್ಲ ಕೃತಕವಾಗಿ ಅಲ್ಲಿಂದೀಚಿನ ಕಾಲದಲ್ಲಿ ಕಲ್ಪಿಸಿದ ಚೌಕಟ್ಟು. ಯಾವುದು ಕೇವಲ ಮಾನವ ಕತೆಯೊ ಅದ ಅವತಾರಕತೆಯೆಂಬುದರ ಸಾಧನೆಗೆ ಎಳೆದು ತಂದು ಕೂಡಿಸಿದ್ದು ; ಆಮೇಲೆ ಕೂಡಿಸಲು ಮಾಡಿದ ಈ ಪ್ರಯತ್ನವೇ ಪ್ರಧಾನವೆಂಬಂತಾಗಿದೆ. ಕವಿತೆ, ಸಾಹಿತ್ಯ ಇವೆರಡೂ ಮಾನವ ಸಹಜ : ರಾಮ ಸೀತೆ ದಶರಥ ಕೌಸಲ್ಯೆ, ಲಕ್ಷ್ಮಣನ ಸೇವೆ, ಭರತನ ಸ್ವಾರ್ಥತ್ಯಾಗ ಇವನ್ನು ಸಂದೇಹವಿಲ್ಲದೆ ಗುಣಪ್ರಕಾಶನ ಮಾಡುವಂತೆ ಕಾಣಿಸುತ್ತದೆ, ನಿಜ ; ಇಲ್ಲಿನ ಮಾನವತೆಗೆ ಉಸಿರುಕಟ್ಟಿದಂತಾಗುತ್ತದೆ ; ನೆತ್ತರು ಕಾರುವಂತಾಗುತ್ತದೆ. ಈ ಮಾನವ ವ್ಯಕಿಗಳ ಅರ್ಥವಂತಿಕೆ ಕಡಿಮೆಯಾಗುತ್ತದೆ :– ರಕ್ತ ಹೀನವಾಗಿ.

## ೯. ಅತ್ರಿಋಷಿಯ ಆಶ್ರಮ

ಅಯೋಧ್ಯಾಕಾಂಡದ ಕೊನೆಯಲ್ಲಿ ವರ್ಣಿತವಾಗುವ ಅತ್ರಿಯ ಆಶ್ರಮ ರಾಮಾಯಣದಲ್ಲಿ ಬರುವ ಬಹುಸುಂದರಚಿತ್ರಣ. ಅತ್ರಿ–ಅನಸೂಯ ಇವರು ತೀರ ವೃದ್ಧರು. ಅನಸೂಯೆಯಲ್ಲಿ ಅತ್ರಿಯದು ಪ್ರೀತಿಗೌರವದಿಂದ ಕೂಡಿದ ಆದರ. ಅಕ್ಕರೆಗಾಗಿ ಅತ್ರಿ ತನ್ನ ಬಳಿಗೆ ಕಳಿಸಿದ ಸೀತೆಯನ್ನು ಕಂಡು ಆ ವೃದ್ಧೆಗೆ ಬಹು ಸಂತೋಷವಾಗುತ್ತದೆ. ಹಿಂದೊಂದು ಸಲ ಹತ್ತು ವರ್ಷ ಕಾಲ ಕ್ಷಾಮ ಹಬ್ಬಲು ಅನಸೂಯೆ ಅನ್ನವನ್ನು ನಿರ್ಮಾಣ ಮಾಡಿದಳಂತೆ ; ಒಣಗಿ ಹೋಗಿದ್ದ ಗಂಗೆಯಲ್ಲಿ ನೀರು ಹರಿಯುವಂತೆ ಮಾಡಿದ್ದಳಂತೆ. ಈ ಸಂಗತಿಯನ್ನು ಅತ್ರಿ ರಾಮನಿಗೆ ಹೇಳುತ್ತಾನೆ. ಅನಸೂಯೆ ಎಷ್ಟು ಪತಿವ್ರತೆ, ಭಕ್ತೆ ಎಂದು ತಿಳಿಸುತ್ತಾನೆ. ಅವಳ ವ್ರತಾನುಚರಣೆ ಕೊನೆಯಿಲ್ಲದವು, 'ಅವಳನ್ನು ನಿನ್ನ ತಾಯಂತೆ ಕಾಣು, ರಾಮ' ಎಂದವನೇ 'ವೈದೇಹಿ ಅವಳ ಬಳಿಗೆ ಹೋಗಲಿ' ಎನ್ನುವನು. ಅನಸೂಯೆಯ ಬಳಿಗೆ ಶ್ರೇಯಸ್ಸಿಗಾಗಿ ಹೋಗಬೇಕೆಂದು ಸೀತೆಗೆ ರಾಮನು ಆದೇಶ ನೀಡುತ್ತಾನೆ. ಪೂಜ್ಯ ಭಾವದಿಂದ ಹೋಗಿ ಸೀತೆ ಅವಳಿಗೆ ಪ್ರದಕ್ಷಿಣೆ ಮಾಡುತ್ತಾಳೆ. ಆ ವೃದ್ಧೆಯ ಚಿತ್ರವೋ –

ಶಿಥಿಲಾಂ ವಲಿತಾಂ ವೃದ್ಧಾಂ ಜರಾಪಾಂಡರ ಮೂರ್ಧಜಾಂ
ಸತತಂ ವೇಪಮಾನಾಂಗೀಂ ಪ್ರವಾತೇ ಕದಲೀಂಯಥಾ

ಎಂಬುದು ಅಲ್ಲಿಯ ವರ್ಣನೆ. ದೇಹದಲ್ಲಿ ಬಿಗಿಪಿಲ್ಲ ; ಚರ್ಮ ಸುಕ್ಕಿದೆ, ವಯಸ್ಸಾಗಿದೆ ; ತಲೆಕೂದಲು ಬೆಳ್ಳಗಾಗಿದೆ ; ಬಲವಾದ ಗಾಳಿ ಬೀಸಿದಾಗ ಬಾಳೆ ಹೇಗೆ ಅಲ್ಲಾಡುತ್ತದೊ ಹಾಗೆ ಮೈ ಕೈ ಅಲುಗಾಡುತ್ತಿವೆ. ಇವರ ಕ್ಷೇಮ ಸಮಾಚಾರಗಳನ್ನು ಮೊದಲಿಗೆ ವಿಚಾರಿಸಿದ ಕೂಡಲೆ ಗಂಡನ ಕಷ್ಟ ತೊಂದರೆಗಳಲ್ಲಿ ಭಾಗಿಯಾಗಿರುವ ಬದುಕನ್ನು ಆಯ್ದುಕೊಂಡುದಕ್ಕಾಗಿ ಅನಸೂಯೆ ಸೀತೆಯನ್ನು ಅಭಿನಂದಿಸುತ್ತಾಳೆ. ಅವನಿಗೆ ಮನೆಯಿಲ್ಲ ; ಪದಚ್ಯುತನಾಗಿ ಕಾಡಿನಲ್ಲಿ ತಿರುಗಾಡಬೇಕಾಗಿದೆ ; ಗಂಡನಿಗೆ ಒದಗಿದ ಅತ್ಯಂತ ಕಷ್ಟಕರ ಸಮಯದಲ್ಲಿ ಅವನ ಬಳಿಯಲ್ಲಿ ಉಳಿವ ಪತಿವ್ರತೆಯ ಗುಣವನ್ನು ಆಕೆ ಮೆಚ್ಚುತ್ತಾಳೆ. ತಾಯಂತೆ ಸತಿಯ ಕರ್ತವ್ಯವನ್ನು ತನ್ನ ನೆನಪಿಗೆ ತಂದುದಕ್ಕಾಗಿ ಆ ಸಜ್ಜನೆಗೆ ತುಂಬ ವಿನಯದಿಂದ ಕೃತಜ್ಞಳಾಗಿದ್ದೇನೆಂದು ಸೀತೆ ಹೇಳುತ್ತಾಳೆ. ತನ್ನ ಗಂಡನು ಇತರರಂತಲ್ಲ ; ವೃತ್ತವರ್ಜಿತನಲ್ಲ ; ಗುಣಶ್ಲಾಘ್ಯ; ಸಾನುಕ್ರೋಶನು ; ಜಿತೇಂದ್ರಿಯನು

; ಸ್ಥಿರಾನುರಾಗವುಳ್ಳವನು ; ಧರ್ಮಾತ್ಮ ಎಂದವಳೇ 'ಮಾತೃವತ್ ಪಿತೃವತ್ ಪ್ರಿಯಃ' ಎನ್ನುತ್ತಾಳೆ. ಕಡೆಯ ಮಾತಂತೂ ಅತೀವ ಪ್ರೀತಿಯದು. ತನ್ನ ತಂದೆಯ ಪ್ರೀತಿಯಲ್ಲಿ ಕಡಮೆ ಗಣನೆಯ ಹೆಂಗಸಿನಲ್ಲಿಯೂ ಕೌಸಲ್ಯೆಯಲ್ಲಿ ಹೇಗೆ ನಡೆದುಕೊಳ್ಳುವನೊ ಹಾಗೆ ನಡೆದುಕೊಳ್ಳುತ್ತಾನೆ ರಾಮ. ಈಗ ನೀವು ಹೇಗೆ ನುಡಿಯುತ್ತಿದ್ದೀರೊ ಹಾಗೆ ನನ್ನ ವಿವಾಹಸಮಯದಲ್ಲಿ ನನ್ನ ತಾಯಿ ನನಗೆ ಹೇಳಿದ್ದಳು ಎಂದಳು. ಈಗ ಅನಸೂಯೆಯ ಮಾತು ಆಕೆಗೆ ಹೊಸ ಚೇತನವನ್ನು ಕೊಟ್ಟಂತಾಗಿದೆ ; ದೊಡ್ಡ ಮಾತುಗಳ ನೆನಪು ತರುತ್ತವೆ. ಇದನ್ನೆಲ್ಲ ಕೇಳಿ ಅನಸೂಯೆ ತುಂಬ ಸಂತೋಷಗೊಳ್ಳುತ್ತಾಳೆ. 'ನಿನ್ನ ಮಾತು ಎಷ್ಟು ಸವಿ ! ಎಂತಹ ಸಂಸ್ಕೃತಿ, ಸುಶಿಕ್ಷಣ ನಿನ್ನದು !' ಎನ್ನುತ್ತಾಳೆ. ನನ್ನ ಪ್ರೀತಿಯ ಗುರುತಾಗಿಯೂ ನನ್ನಲ್ಲಿ ವಿಪುಲವಾಗಿರುವ ತಪಸ್ಸಿನ ಫಲವಾಗಿಯೂ ನಾನು ಏನು ಮಾಡಬಹುದು ಹೇಳು ಎಂದು ಕೇಳುತ್ತಾಳೆ. ನಿರ್ದಿಷ್ಟವಾಗಿ ಸೀತೆ ಅವಳನ್ನು ಕೇಳಬೇಕಾದುದು ಏನೂ ಇರಲಿಲ್ಲ.[೧೪] ಇದನ್ನು ಕೇಳಿ ವೃದ್ಧೆಗೆ ಇನ್ನೂ ಸಂತೋಷವಾಯಿತು. ಸ್ವಪ್ರೀತಿಯಿಂದ ಸೀತೆಗೆ ಹೂ, ವಸ್ತ್ರ, ಆಭರಣಗಳನ್ನು ಕೊಟ್ಟು ಇವಕ್ಕೆ ದೇವೀಶಕ್ತಿಯಿದೆಯೆಂದು ಹೇಳಿ, 'ಇದನ್ನು ಧರಿಸು, ನಿನ್ನ ಚೆಲುವು ವೃದ್ಧಿಗೊಳ್ಳುತ್ತದೆ; ನಿನ್ನ ಗಂಡನಿಗೆ ಇನ್ನಷ್ಟು ಪ್ರಿಯಳಾಗುತ್ತೀಯೆ. ಈ ಅಂಗರಾಗದಿಂದ ನೀನು ಎಂದೆಂದಿಗೂ ಮೋಹಕಳಾಗಿರುತ್ತೀಯೆ' 'ಶೋಭಯಿಷ್ಯತಿ ಭರ್ತಾರಂ' ಎಂದೂ 'ಅವ್ಯಯಂ' ಎಂದೂ ನುಡಿಯುತ್ತಾಳೆ. ಈ ಪ್ರೀತಿದಾನ ಸೀತೆಗೆ ಸುಖವುಂಟುಮಾಡುತ್ತದೆ. ತನ್ನೆದುರಿಗೇ ಇವನ್ನು ಧರಿಸು ಎಂದು ವೃದ್ಧೆ ಹೇಳಿ 'ಈಗ ಇನ್ನು ಸ್ವಲ್ಪ ಕಾಲದಲ್ಲಿಯೇ ಸಂಜೆಯಾಗುತ್ತಿದೆ; ನಿನ್ನ ಗಂಡನ ಬಳಿಗೆ ಹೋಗು' ಎನ್ನುತ್ತಾಳೆ. ಈ ಮುಂಚೆಯೇ, ತನ್ನ ಕತೆಯನ್ನು ಹೇಳಬೇಕೆಂದು ಸೀತೆಯನ್ನು ಆಕೆ ಕೇಳಿಕೊಂಡಿದ್ದಳು; ಸೀತೆ ಅದನ್ನು ಸಂಕ್ಷೇಪವಾಗಿ ಹೇಳಿರುತ್ತಾಳೆ.[೧೫] ಅನಸೂಯೆಗೆ ತುಂಬ ಆನಂದ. ಸೀತೆಯನ್ನು ಆಶೀರ್ವದಿಸಿ ಗಂಡನ ಬಳಿಗೆ

---

೧೪ ಇಲ್ಲಿನ ಯಾವ ಮಾನ್ಯರೂ ಯಾವ ಕೊಡುಗೆಗಳನ್ನೂ ಬೇಡುವವರಲ್ಲ, ಸ್ಥಿರ ಗಂಭೀರಳಾದ ಸ್ವಯಂಪ್ರಭೆ ವಾನರರಿಗೆ 'ಚರಾಂತ್ಯಾ ಮಮಧರ್ಮೇನನ ಕಾರ್ಯಂ ಇಹ ಕೇನಚಿತ್' ಎನ್ನುತ್ತಾಳೆ – ಮುಂದಿನ ಒಂದು ಕಾಲದಲ್ಲಿ ತನ್ನ ಧರ್ಮಾಚರಣೆಯಲ್ಲಿ ತಾನಿದ್ದೇನೆ ; ತನಗೆ ಇನ್ನೊಬ್ಬರಿಂದ ಏನೊಂದೂ ಅಗತ್ಯ ಇಲ್ಲ ಎಂಬುದು ಅವಳ ಮಾತು.

೧೫ ಬಾಲಕಾಂಡದಲ್ಲಿರುವುದಕ್ಕಿಂತ ಒಂದೆರಡು ಸಣ್ಣ ವ್ಯತ್ಯಾಸಗಳು ಇದರಲ್ಲಿ ಕಾಣುತ್ತವೆ: ರಾಮಲಕ್ಷ್ಮಣರ ವಯಸ್ಸನ್ನು ಕುರಿತ ಹೇಳಿಕೆಗಳಲ್ಲಿ, ಮದುವೆಯಾದ ಮೇಲೆ ಎಷ್ಟು ಕಾಲ ಆಕೆ ಅಯೋಧ್ಯೆಯಲ್ಲಿದ್ದಳು ಎಂಬುದರಲ್ಲಿ ಕೆಲವು ವ್ಯತ್ಯಾಸಗಳಿವೆ.

ಕಳಿಸುತ್ತಾಳೆ. ಎಂದಿಗಿಂತಲೂ ಚೆಲುವಾಗಿ ಕಾಣುತ್ತ ಹೀಗೆ ಉಟ್ಟು ತೊಟ್ಟು ಹಿಂದಕ್ಕೆ ಬರುತ್ತಿದ್ದ ಸೀತೆಯನ್ನು ನೋಡಿ ರಾಮಲಕ್ಷ್ಮಣರಿಬ್ಬರಿಗೂ ಸಂತೋಷವುಂಟಾಗುತ್ತದೆ.

ಮುಂದೆ ರಾತ್ರಿಯ ವರ್ಣನೆ ಬರುತ್ತದೆ. ಆಶ್ರಮಕ್ಕೆ ಇಳಿಯುತ್ತಿರುವ ರಾತ್ರಿ ಅದು ; ರಾಮಾಯಣದಲ್ಲಿನ ಬಹು ಸುಂದರವಾದ ಚಿತ್ರಣ. ದಿನದ ಕಾರ್ಯಗಳೆಲ್ಲ ಮುಗಿಯುತ್ತಿರುವಾಗ ಕಾಣುವ ದೃಶ್ಯಗಳು, ಕೇಳುವ ಶಬ್ದಗಳು, ಆಶ್ರಮದ ಬದುಕು ಆ ದಿನಕ್ಕೆ ಮುಗಿಯುತ್ತಿರುವ ನೋಟಗಳು. ಅತೀವ ಸಹಜವೂ ನಿರಾಡಂಬರವೂ ಆದ ಆಶ್ರಮವರ್ಣನೆ ಇದು ; ಇದಕ್ಕೆ ಸಮವಾದುದೊಂದು ಎಂದರೆ ಮುಂದೆ ಬರುವ ಮತಂಗಾಶ್ರಮದ ನಿಶ್ಯಬ್ಧತೆ, ಮೌನ ; ಅದರ ಗಾಂಭೀರ್ಯ.

* * * *

## ಅಧ್ಯಾಯ ೬

### ವಾಲ್ಮೀಕಿಯ ಕವಿತೆ

ರಾಮಾಯಣವನ್ನು ಭರತಖಂಡದಲ್ಲಿ ಆದಿಕಾವ್ಯವೆನ್ನುತ್ತಾರೆ. ಅಲ್ಲಿಂದೀಚಿನ ಎಷ್ಟೋ ಮಹಾಕಾವ್ಯ, ಖಂಡಕಾವ್ಯ ಅಥವಾ ನಾಟಕಗಳಿಗೆ ಅದು ಸಾಹಿತ್ಯಕ ಮಾದರಿಗಳನ್ನು ಒದಗಿಸಿದೆ. ವೇದ ಉಪನಿಷತ್ತುಗಳಲ್ಲಿ ಕವಿತೆಯಿತ್ತು ; ಚೆಲುವಾದ ಕಲ್ಪನೆಯ ಭಾಗಗಳಿದ್ದುವು. ಉಷಸ್, ಮರುತ್ ಮತ್ತು ಪೃಥ್ವೀ ಸೂಕ್ತಗಳಲ್ಲಿ, ಇಂದ್ರಾಗ್ನಿ ವರುಣ ಸ್ತೋತ್ರಗಳಲ್ಲಿ – ಇಂದು ಯಾವುದನ್ನು ಕವಿತೆಯೆನ್ನುತ್ತಿರಲಿಲ್ಲ. ಏಕೆಂದರೆ ಅಲ್ಲಿ ಉದ್ದೇಶ ಮತಧರ್ಮ ಪ್ರಕ್ರಿಯೆ, ಸ್ವಾಗತ ಆರಾಧನಾ ರೂಪದ್ದು. ಅವರನ್ನು ಒಲಿಸಿಕೊಳ್ಳಲೆಂದು ನುಡಿದವು ಅವು. ಉನ್ನತವಾದ ಆ ಪ್ರಕಾರಗಳಲ್ಲಿ ಬದುಕಿನ ಮಾನವೀ ಲಕ್ಷಣಕ್ಕೆ ಪ್ರಾಧಾನ್ಯವಿರಲಿಲ್ಲ. ಅಲ್ಲಿ ವಾಗ್ಮಿತೆ ಇದೆ ; ಭಾವಗೀತಾತ್ಮಕತೆ ಅಥವಾ ಗೇಯತೆ ಇದೆ; ಪ್ರಕೃತಿ ವರ್ಣನೆಗಳು ಸುಂದರವಾದವು. ಗುಡುಗು, ಮಳೆ, ನೀರನೆರೆ, ಪ್ರವಾಹ, ಬೆಟ್ಟಸಾಲು, ಅರುಣೋದಯಗಳ ಚೆಲುವಾದ ವರ್ಣನೆಗಳಿವೆ. ಆದರೆ ಮಾನವನ ಸಂಬಂಧಕ್ಕೆ ಪ್ರಧಾನವಾಗಿ ಹೂಡಿದವಲ್ಲ ಅವು. ಮಾನವಜೀವನದ ಸನ್ನಿವೇಶಗಳಾಗಿ ಬದುಕಿನ ಆವರಣ, ಹಿನ್ನೆಲೆಯಾಗಿ ಒಂದು ಫಲಪರಿಣಾಮವನ್ನು ಮೇಲ್ಪಡಿಸಲೊ – ಯಾವುದೊ ಒಂದು ಮನಃಸ್ಥಿತಿಯ ಅಥವಾ ಘಟನೆಯ ನೆರವಿಗಾಗಿ ಅಥವಾ ವೈದೃಶ್ಯವೆಂಬಂತೆಯೊ ಅವನ್ನು ಬಳಸಿರಲಿಲ್ಲ. ಕೆಲವೇಳೆ ಅವನ್ನು ಸುಖಾನುಭೋಗಕ್ಕಾಗಿಯೇ ಬಳಸಿಲ್ಲ. ಹಾಗಾಗಿದ್ದರೆ ಸಾಹಿತ್ಯದ ಬೆಳವಣಿಗೆಯಲ್ಲಿ ಒಂದು ದೊಡ್ಡ ಮಜಲನ್ನು ಸಾರಿದಂತಾಗುತ್ತಿತ್ತು. ಒಬ್ಬ ಮನುಷ್ಯ ವ್ಯಕ್ತಿಯ ಮನಸ್ಸು ಅಂಥಲ್ಲಿ ಕೇವಲವಾಗಿ ಆಡತೊಡಗಿದಾಗ ಅಲ್ಲಿ ಕಲ್ಪನೆಗಳನ್ನು ಬೆಳೆಸುತ್ತದೆ;[೧] ಇದ್ದುದಕ್ಕೆ ಇನ್ನೇನನ್ನೊ ಸೇರಿಸುತ್ತದೆ ; ಇರುವುದರಲ್ಲಿ ಆಯ್ಕೆ ಮಾಡುತ್ತದೆ ; ಇರುವುದನ್ನು ಹೆಚ್ಚು

---

೧. ಇಂಥಲ್ಲಿ ಕಾವ್ಯೋದ್ದೇಶ ನೇರವಾದ್ದು.

ಸಂಪನ್ನವಾಗಿ ಮಾಡುವಂತೆ ಅಲಂಕರಿಸುತ್ತದೆ. ಪೂಜೆ ಆರಾಧನೆಗಳಲ್ಲಿ ಪ್ರಕೃತಿಯ ವರ್ಣನೆ ಒಂದು ಅಂಶ ಮಾತ್ರ. ಕೇವಲ ಅದಕ್ಕಾಗಿಯೇ ಪ್ರಕಾಶಗೊಳ್ಳುತ್ತಿರುವಾಗ ಮತ್ತು ಮುಂದಿನ ಕಾಲದಲ್ಲಿ ರಸವಾಗಿಯೊ ಅಲಂಕಾರವಾಗಿಯೊ ಯಾವುದನ್ನಾದರೂ ಸಾಧಿಸಲು ನೆರವಾದಾಗ ಒಂದು ಬದಲಾವಣೆಯನ್ನೂ ವ್ಯತ್ಯಾಸವನ್ನೂ ಕವಿತೆ ಪಡೆಯುತ್ತದೆ. ಈ ಬದಲಾವಣೆ ಉದ್ದೇಶಪಟ್ಟು ಆಗದಿರಬಹುದು ; ಆದರೆ ವಾಲ್ಮೀಕಿಯದು ಕವಿಮನಸ್ಸು ; ಒಂದು ದೊಡ್ಡ ಕಥಾ ವಸ್ತುವಿನಿಂದ ಸ್ಫೂರ್ತಿಗೊಂಡು ಉದ್ದಕ್ಕೆ ನಡೆಯುತ್ತದೆ. ತನ್ನದೇ ಆದ ರೀತಿಯಲ್ಲಿ ಒಟ್ಟು ಘಟನಾವಿಧಾನವೊಂದನ್ನು ವೀಕ್ಷಿಸುತ್ತ, ಬರೆಯುತ್ತ ಹೋಗುತ್ತದೆ. ಜೀವಂತವಾದ ಒಂದು ಕಲ್ಪನಾಶಕ್ತಿಯನ್ನೂ ಬಾಳ ಅನುಭವವನ್ನೂ ರೂಪಿಸುತ್ತದೆ. ಅಲ್ಲಿ ಕವಿತೆ ಅದನ್ನು ರಚನೆಯ ಒಂದು ವಿಶೇಷವನ್ನಾಗಿಸುತ್ತದೆ. ಪುನರುಕ್ತಿಯ ಖಂಡಗಳು, ಅಸಾಂಗತ್ಯ, ಪ್ರಧಾನವಾಗಿ ಮಾನವವಲ್ಲದ ಇತರ ಉದ್ದೇಶಗಳು ಸಾಧನೆ, ಅತಿಮಾನುಷ ಅಂಶಗಳ ಪ್ರವೇಶ – ಇವು ರಾಮಾಯಣದಲ್ಲಿ ಆಮೇಲೆ ಸೇರಿಕೊಂಡ ಸಂಗತಿಗಳು ; ತುಂಬಿಕೊಂಡ ಗಾಳಿಗಳು ಎನ್ನಬಹುದು. ಆರು ಕಾಂಡಗಳಲ್ಲಿ – ಅಥವಾ ಏಳರಲ್ಲಿ – ಇವೊತ್ತು ರಾಮಾಯಣವೆಂಬ ಗ್ರಂಥದಲ್ಲಿ ಇರುವ ಭಾಗ ಮೂಲ ಕತೆಗಿಂತ ಗಾತ್ರದಲ್ಲಿ ಸೇರಿ ಕ್ರಮಗೊಂಡ ಭಾಗ ಕಾವ್ಯವಾದಾಗ ಮುಂದಿನ ಕಾಲದ ಯಾರೊ – ಲೇಖಕನೊ / ರೊ–ಬೇರೆ ಸ್ವರೂಪದ ಹೆಚ್ಚು ಪದ್ಯಗಳನ್ನು ಸೇರಿಸಿದನು/ರು.ಅವುಗಳ ದನಿ ಬೇರೆ; ಮನೋವೃತ್ತಿ ಬೇರೆ. ಇವು ವಿಧವಿಧವಾದ ಛಂದಃಪ್ರಕಾರಗಳಲ್ಲಿ, ಸರ್ಗಾಂತ್ಯಗಳಲ್ಲಿ ವಿಶೇಷವಾಗಿ ಸೇರಿಬರುತ್ತವೆ. ಈ ಪ್ರಕಾರ ಮಹಾಕಾವ್ಯಗಳು ಒಂದು ಸಮಯವೇ ಆಗುತ್ತದೆ. ಅಂಥ ಕೆಲವನ್ನು ವಾಲ್ಮೀಕಿ ರಚಿಸಲಿಲ್ಲ, ರಚಿಸಲು ಶಕ್ತಿ ಉಳ್ಳವನಲ್ಲ ಎಂದು ಯಾರೂ ಶಪಥಮಾಡಿ ಹೇಳಲಾಗುವುದಿಲ್ಲ. ಕೆಲವು ತ್ರಿಷ್ಟುಭ್‌ಗಳು, ಜಗತಿಗಳು ಮೂಲದ ಭಾಗವಾಗಿ ಇರಬಲ್ಲವು ; ಎಲ್ಲವೂ ಅಲ್ಲ, ಅವುಗಳ ಧಾಟಿ ಬೇರೆ. ಮಾತುಗಳ ಬಳಕೆಯನ್ನೂ ಅಲಂಕಾರಗಳನ್ನೂ ಅಂಥಲ್ಲಿ ಮಾಡಲಾಗುತ್ತದೆ. ಸರ್ಗದಲ್ಲಿ ಇವರು ಮುಖ್ಯ ವಿಷಯದ ತೀವ್ರತೆಯನ್ನೊ ಅರ್ಥಶಕ್ತಿ ಭಾವಶಕ್ತಿಯನ್ನೊ ಹೆಚ್ಚುವಂತೆ ಅಥವಾ ಕಡಿಮೆ ಮಾಡುವಂತೆ ಹೊಸ ಇಂಥ ಪದ್ಯಗಳು ಸೇರಿಕೊಳ್ಳುತ್ತವೆ. ಶಬ್ದಾಲಂಕಾರ, ಉಕ್ತಿ ಚಮತ್ಕಾರ ಅಲಂಕರಣಗಳು ಆಮೇಲಿನ ಮಾರ್ಗಕಾವ್ಯಗಳ ಅತಿ ಪ್ರೀತಿಯ ಸರಕು. ಇವು ಅನೇಕ ಕಡೆ ಅತಿಯಾಗಿ ಕಾಣಿಸಿಕೊಳ್ಳುತ್ತವೆ. ಮೂಲಕಾವ್ಯದಲ್ಲಿ ಯಾವ ಕೊರಲಧ್ವನಿ ನುಡಿಯುತ್ತದೆಯೊ ಅದು ಖಂಡಿತ ಇಲ್ಲಿಲ್ಲ ಎಂದು ಅಂಥಲ್ಲಿ ಸ್ಪಷ್ಟಪಡುತ್ತದೆ.

ಕವಿತೆ ಒಂದು ವಾಣಿಯಲ್ಲವೆ ! – ಇತರ ವಾಣಿಗಳಿಂದ ಬೇರೆ ವಿಶಿಷ್ಟಗೊಂಡುದು. ಈ ಕಾವ್ಯದ ಅತ್ಯಂತ ಮೊದಲ ಕಾಲದ ಕೈಬರಹದ ಪ್ರತಿಗಳಲ್ಲಿ ಉಳಿಯದೆ ಹೋದ ಕೆಲವನ್ನು ನೋಡಿದಾಗ ಹೊಸದಾಗಿ ಸೇರಿ ಬಂದುದರ ಸ್ವರೂಪ ಚೆನ್ನಾಗಿ ಗೊತ್ತಾಗುತ್ತದೆ. ಮೂಲ ಧ್ವನಿಯಲ್ಲಿರುವ ಇತಿಹಾಸ ಕಾವ್ಯದ ಪ್ರಭಾವವೂ ಗತಿಯೂ ತಟ್ಟಿ, ವಿವರ ನುಡಿಯುವ ಕುಸುರಿಯ ಕಿರುಗೆಲಸದಿಂದ ಭಾವಕ್ಕೆ ಮೆರುಗು ಕೊಟ್ಟಿರುವ ಪ್ರಯತ್ನ ಎದ್ದು ಕಾಣುತ್ತದೆ.

ಉಂಡುಂಡೆಯಾಗಿ ಸರ್ಗದ ಎಷ್ಟೋ ಭಾಗಗಳು ಅನಾವಶ್ಯಕವಾಗಿ ಸೇರಿದ ಅಧಿಕ ಭಾಗಗಳು ಸರ್ಗಗಳ ಸಂಖ್ಯೆಯನ್ನಾಗಲಿ ಪದ್ಯಗಳ ಒಟ್ಟು ಸಂಖ್ಯೆಯನ್ನಾಗಲಿ ನೋಡಿದರೆ ಮೂಲ ಕಾವ್ಯದ ಗಾತ್ರ ಎಷ್ಟು, ಯಾವುದು ಎಂಬಂಶವನ್ನು ನಿಶ್ಚಯಗೊಳಿಸಲಾಗುವುದಿಲ್ಲ. ಕೆಲವು ಭಾಗಗಳಿಗೆ ಜನದ ಸಹಾನುಭೂತಿ, ಪಕ್ಷಪಾತಗಳಿರುತ್ತವೆ. ಅವತಾರಕತೆಯ ಉದ್ದೇಶ ಅನೇಕರನ್ನು ಒಲಿಸಿದೆ. ಆದುದರಿಂದ ಈಚಿನ ಕಾಲದಲ್ಲಿ, ಪ್ರಸಂಗಗಳಲ್ಲಿ ಮಾಡಿದ ವಿಸ್ತರಣಗಳೂ ವಿವರಗಳೂ ಆ ಆ ಜನವರ್ಗಕ್ಕೆ ಪ್ರಿಯವಾಗಿ, ಬಹುಮಂದಿಯ ನೆನಪಿನಲ್ಲಿ ಅಂಥವು ಸ್ಥಳಮಾಡಿಕೊಂಡು ನಿಂತಿವೆ. ಸಾವಿರಾರು ವರ್ಷಗಳಿಂದ ಆ ಭಾಗಗಳಿಗೆ ಅಂಥ ಸ್ಮೃತಿ ಇದೆ. ಉದಾಹರಣೆಗಾಗಿ ಲಕ್ಷ್ಮಣನ ಈ ಮಾತನ್ನು ತೆಗೆದುಕೊಳ್ಳಬಹುದು : 'ನಾಹಂ ಜಾನಾಮಿ ಕೇಯೂರೇ ನಾಹಂ ಜಾನಾಮಿ ಕುಂಡಲೇ' ಇತ್ಯಾದಿ ಹೇಳಿ, ನಿತ್ಯ ಪಾದಗಳಿಗೆ ವಂದನೆ ಮಾಡುವಾಗ ಕಂಡ ಕಾಲಂದುಗೆಗಳನ್ನು ಮಾತ್ರ ಗುರುತು ಹಿಡಿಯಬಲ್ಲೆ ಎಂದ ಭಾಗ ಸೀತೆಯಲ್ಲಿ ಲಕ್ಷ್ಮಣನು ಇಟ್ಟಿದ್ದ ಪೂಜ್ಯ ಭಾವವನ್ನು ಅಮೂಲ್ಯವಾಗಿ ಮಾಡಿ ಕಾಣಿಸುವ ಸಂಗತಿ. ಈ ಪದ್ಯಭಾಗ ಅತಿ ಮುಂಚು ಮುಂಚಿನ ಕೈ ಬರಹದ ಪ್ರತಿಗಳಲ್ಲಿಲ್ಲ. ಹಿಂದಿನ ಪ್ರಕರಣಗಳಲ್ಲಿ ಕಾವ್ಯ ನುಡಿದಿರುವ ಮಾತುಗಳನ್ನು ಇದು ಅಲ್ಲವಾಗಿಸುತ್ತದೆ ಕೂಡ. ಉದಾ. ಬಿಸಿಲ ತಾಪ ಸೀತೆಯ ಮುಖವನ್ನೂ ಆಕೃತಿಯನ್ನೂ ಮಸುಳುವಂತೆ ಮಾಡಿದೆ ; ಆದರೆ ಆಕೆಯ ಕಾಂತಿಯನ್ನಾಗಲಿ, ಚೆಲುವನ್ನಾಗಲಿ ಕೆಡಿಸಿಲ್ಲ ಎಂಬ ಮಾತು ಕಾವ್ಯದಲ್ಲಿ ಮುಂಚೆಯೇ ಬಂದಿರುತ್ತದೆ.[೨] ವಾಲ್ಮೀಕಿಯ ಕವಿತಾಶಕ್ತಿಯನ್ನು ಕಾಣಿಸುವಂತೆ ಅನೇಕ ವೇಳೆ ನಿದರ್ಶನಾರ್ಥವಾಗಿ ಕೊಡುವ ವಿಶೇಷ ಅಂಶಗಳು ಅನೇಕ ಪ್ರಕರಣಗಳಲ್ಲಿ ಬರುತ್ತವೆ. ಅವು ಈ ಪಾತ್ರಗಳ

೨ ನದಿ ದಾಟಿಸುವಾಗ, ದೋಣಿದೊಳಕ್ಕೆ ಅಲ್ಲಿಂದ ಹೊರಕ್ಕೆ ಒಯ್ಯುವಾಗ (ಅಣ್ಣ ತಮ್ಮಂದಿರು) ಸೀತೆಗೆ ನೆರವಾಗಿದ್ದಾರೆ.

ಶೀಲದ ಮತ್ತು ಮೂಲಭೂತ ಗಾಂಭೀರ್ಯವನ್ನು ಕೆಡಿಸುತ್ತವೆನ್ನಬೇಕು. ಅಲಂಕಾರದ ಗ್ರಂಥಗಳಲ್ಲಿ ಹೊಗಳಿಕೆಗಾಗಿ ಎತ್ತಿ ಹೇಳಿರುವ ಕೆಲವು ಪದ್ಯಗಳನ್ನೂ ನಿರ್ದಿಷ್ಟವಾಗಿ ವಾಲ್ಮೀಕಿಯವೆಂದೇ ಮೆಚ್ಚಿಕೊಳ್ಳುವುದು ಕಷ್ಟವಾಗುತ್ತದೆ. ಆದರೆ ಇದಕ್ಕಾಗಿಯೇ ನಾವು ವಾಲ್ಮೀಕಿಗೆ ಬೆಲೆ ಕೊಡುವುದು. ಹಲವೇಳೆ ವಾಲ್ಮೀಕಿಯ ಒಂದು ಪದ್ಯ ತನ್ನ ಚೆಲುವಿನಲ್ಲಿಯೂ ಕವಿತಾಶಕ್ತಿಯಲ್ಲಿಯೂ – ಅಲ್ಲಿ ಕೇಳುವ ಉಕ್ತಿಯ, ದನಿಯ ಮಹೋನ್ನತಿ ಎನ್ನಬಹುದಾದ ಗುಣದಿಂದ – ಮುಂದಿನ ಕಾಲಗಳಲ್ಲಿ ಕಾಣುವ ಒಟ್ಟು ಒಂದು ಸರ್ಗಕ್ಕೆ ಅಥವಾ ಒಂದುಕಾವ್ಯಕ್ಕೇ ಸಮವಾಗುತ್ತದೆ. ಇಂಥ ಗುಣವನ್ನು ಪ್ರಶಂಸಿಸುವುದು ಅತಿ ಎಂದು ಕೆಲವರಿಗೆ ಕಾಣಿಸಬಹುದು. ಆದರೆ ನಿಃಸಂದೇಹವಾಗಿ ವಾಲ್ಮೀಕಿಯನ್ನು ಗುರುತಿಸಬಲ್ಲ ಯಾರಿಗೇ ಆಗಲಿ, ಇಲ್ಲಿ ಆ ಇತಿಹಾಸ ಕಾವ್ಯದ ದನಿಯೂ ಕೊರಲೂ ಸ್ಪಷ್ಟವಾಗಿ ಕೇಳಿಸುತ್ತದೆ. ಆ ಉಕ್ತಿ ಮಹತ್ತಾದ್ದು; ಶ್ರೀಮಂತವಾದುದು. ನೈದಿಲೆಗೆ ಹೊಂಬಣ್ಣ ಬಳಿವಂತೆ – 'Gilding the lily' – ಮಾಡುವ ಯಾವ ಪ್ರಯತ್ನವೂ ಇಲ್ಲದೆ ಮಹತಿ ಉಳ್ಳದ್ದಾಗಿರುತ್ತದೆ. ವಾಲ್ಮೀಕಿಯ ಕವಿತೆ, ಲಕ್ಷಣಗಳೂ ಅಕ್ಲಿಷ್ಟ ; ಅಕರ್ದಮ. ವಸ್ತು, ವ್ಯಕ್ತಿ, ಸನ್ನಿವೇಶ ಪ್ರಯತ್ನವಿಲ್ಲದೆ ನುಡಿಯುತ್ತವೆ, ಅಭಿವ್ಯಕ್ತಗೊಳ್ಳುತ್ತವೆ.

ವಾಲ್ಮೀಕಿ ಋಷಿ. ತಮಸಾನದಿಯ ದಡದಲ್ಲಿ ಅವನ ಆಶ್ರಮವಿತ್ತು. ಕಾಡುಗಳು, ಬೆಟ್ಟಗಳು, ನದಿಗಳು, ನಾಡಿನ ಸಸ್ಯವರ್ಗ, ಪ್ರಾಣಿವರ್ಗ – ಇವುಗಳ ಸ್ವರೂಪವನ್ನು ಆತನು ಚೆನ್ನಾಗಿ ಅರಿತಿದ್ದ. ಸೂರ್ಯಾಸ್ತ, ಸೂರ್ಯೋದಯ, ಬೆಳುದಿಂಗಳು, ನಕ್ಷತ್ರಕಾಂತಿ, ಮಳೆಗಳ ತೊಡಗು, ಬಿರುಗಾಳಿಗಳ ಬೀಸು, ಸೌಮ್ಯ ಅಥವಾ ಹಿಂಸ್ರ ಪ್ರಾಣಿಗಳ ಸ್ವಭಾವ, ನಡವಳಿಕೆಗಳು, ಬಗೆಬಗೆಯ ಹಕ್ಕಿಗಳು, ಅವುಗಳ ಸ್ವನ – ಎಲ್ಲವೂ ಸುಪರಿಚಿತವಾದವು. ಪ್ರಕೃತಿಯನ್ನು ಧ್ಯಾನಮಾಡುತ್ತಿದ್ದ ಅವನ ಮನಸ್ಸಿಗೆ ಸ್ಥಿರವಾದ ಧಾತವೂ ಹದವೂ ಬಂದಿದ್ದವು. ಪ್ರಕೃತಿ, ಮನುಷ್ಯ, ದೇವರು ಎಂಬ ವಿಷಗಳನ್ನು ಕುರಿತೂ ಮನುಷ್ಯನ ಚೇಷ್ಟಾಪ್ರವೃತ್ತಿಗಳೂ ಜನ ಯಾವ ರೀತಿ ನಡೆದುಕೊಳ್ಳುತ್ತ ತಮ್ಮ ಸ್ವರೂಪವನ್ನೂ ಗುಣವನ್ನೂ ಕಾಣಿಸುತ್ತಾರೆ ಎಂಬುದೂ ಮಾನವಸ್ವಭಾವವನ್ನು ಕುರಿತು ಅವನಿಗೆ ಆಳವಾದ ದೃಷ್ಟಿಯನ್ನು ಕೊಟ್ಟಿದ್ದವು. ಗಂಡು ಹೆಣ್ಣು ಮಂದಿ ಏಕೆ ಹಾಗೆ ನಡೆದುಕೊಳ್ಳುತ್ತಾರೆ ? ಅವರ ಔದಾರ್ಯ, ಶಕ್ತಿ, ಸುಕುಮಾರತೆಗಳು, ಸ್ನೇಹ, ಭಕ್ತಿ, ಪ್ರೀತಿ, ಅಸೂಯೆ, ಹಸಿತನ, ಸೊರಗು, ಲೋಪದೋಷ ಏಕೆ ಹೇಗೆ ಉಂಟಾಗುತ್ತವೆ ಎಂಬುದನ್ನೂ ಅವನು ಅರಿತಿದ್ದನು. ಈ ಕಾವ್ಯದಲ್ಲಿ ಇದು ಹೀಗೇ ಸರಿ ಎಂಬಂತೆ ಅವೆಲ್ಲ – ಯಥಾವತ್ ಅವನು ಅರಿತಿದ್ದನು. ಈ ಕಾವ್ಯದಲ್ಲಿ ಇದು ಹೀಗೇ ಸರಿ ಎಂಬಂತೆ ಅವೆಲ್ಲ –

ಯಥಾವತ್ ಅಂಗವಾಗಿ ಕಾಣುತ್ತದೆ. ಅಯೋಧ್ಯಾಕಾಂಡದ ಮುಖ್ಯಘಟನೆಗಳನ್ನೂ ರಾಮ ಸೀತೆಯರ ಅದೃಷ್ಟ ಪರಂಪರೆಗಳನ್ನೂ ಯೋಗ್ಯತೆಯನ್ನೂ ಕಾಣಿಸುತ್ತವೆ. ಬೇರೆ ಸಂಭವಿಸಿದರೆ ಅದು ಇದಕ್ಕೆ ಅಧೀನ ; ಇದಕ್ಕೆ ಒಳಪಟ್ಟು ನಡೆಯುತ್ತವೆ. ಅರಣ್ಯ, ಕಿಷ್ಕಿಂಧಾ, ಯುದ್ಧಕಾಂಡಗಳು ಪ್ರಧಾನವಾಗಿ ಮಾನವವಲ್ಲದ ಬಾಳ ಪ್ರಕಾರಗಳು. ಅವು ಬೇರೆ ಬೇರೆಯಾದ ಎರಡು ನಾಗರಿಕತೆ, ಸಂಸ್ಕೃತಿಗಳ ರೂಪಣಗಳು, ಆದಾಗ್ಯೂ ಮೂಲಭೂತವಾದ ಭಾವಪ್ರಕಾಶನ, ನಡವಳಿಕೆಗಳನ್ನು ವರ್ಣಿಸುವಾಗ ಮಾನವತೆಯೇ ಅಲ್ಲಿಯೂ ನೆಲಗಟ್ಟು. ಬೇರೆ ಹೇಗಾದೀತು ? ಅವು ಉಕ್ತಿಗೊಳ್ಳುವ ಮಾರ್ಗಗಳು ಬೇರೆಯಾಗಿರಬಹುದೇನೋ. ಮಾನವನಾದ ರಾಮನು ಹೇಗೆ ರೂಪಗೊಂಡ, ನಿಂತ – ಎಂಬುದನ್ನು ನಮಗೆ ಕಾಣಿಸಿ ತೋರಿಸುವುದರಲ್ಲಿಯೂ ತಂದೆತಾಯಿಯರ, ಸೋದರರ, ಹೆಂಡತಿಯ, ಪಟ್ಟಣಿಗರ, ಹಗೆಗಳ, ಋಷಿಗಳ ಮತ್ತು ಇತರರ ಸಂಬಂಧದಲ್ಲಿ ಅವರ ನಡತೆಯಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ಅವರ ಸಂಪರ್ಕ ಅವನಿಗುಂಟಾಗುವಾಗ ಮೊದಲಿಗೆ ಎಲ್ಲಕ್ಕಿಂತ ಹೆಚ್ಚಾಗಿ – ಅವನ ಗಾಂಭೀರ್ಯ, ಅಖಂಡಶೀಲ – ಇವನ್ನು ಕಾಣಿಸುವುದರಲ್ಲಿ ವಾಲ್ಮೀಕಿಯ ಹಿರಿಮೆ ಕಾಣಿಸುತ್ತದೆ. ಏನೇ ಹೇಳಲಿ, ಕವಿತೆಯ ವಸ್ತುವಿಶೇಷ ಮತ್ತು ಸಾಹಿತ್ಯ ಗುಣ ನರನಾರಿಯರ ಜೀವನ ತಾನೆ! ಸುತ್ತಲ ಆವರಣ ಸಹಾಯವೊ ವಿರುದ್ಧವೊ ಆಗುತ್ತದೆ. ಹೊರಗಿನಿಂದ ಅದಕ್ಕೆ ವರ್ಣರಂಜನೆಯನ್ನೊ ಹಿನ್ನೆಲೆಯನ್ನೂ ಒದಗಿಸುತ್ತದೆ. ಘಟನೆಗಳಿಗೆ ಸಾಮ್ಯವಿರೋಧ ತಂದುಕೊಡುತ್ತದೆ. ದಶರಥನ ಕುಟುಂಬದ ವರ್ಣನೆಯಲ್ಲಿ, ಒಳಕೋಟಲೆ ಹುಟ್ಟಿದುದನ್ನೂ ಬೆಳೆದುದನ್ನೂ ಕವಿ ರೂಪಿಸುವುದರಲ್ಲಿ ರಾಮಾಯಣವನ್ನು ಒಂದು ಮಹಾ ಸಾಹಿತ್ಯಕ ಪ್ರಮಾಣ ಗ್ರಂಥವನ್ನಾಗಿ ಮಾಡುತ್ತದೆ. ಶಕ್ತಿಯಲ್ಲಿ, ಅಶಕ್ತಿಯಲ್ಲಿ, ಆಯಾಸದಲ್ಲಿ, ಕೆರಳಿಕೆಯಲ್ಲಿ, ಅಗಲಿಕೆಯಲ್ಲಿ, ಸೇರಿದಾಗ, ಒಂಟಿಯಾಗಿರುವಾಗ ಜನ ಏನನ್ನುತ್ತಾರೆ, ಏನು ಮಾಡುತ್ತಾರೆ ಮುಂತಾದುವನ್ನು ಕವಿ ಅರಿತಿದ್ದನು. ವ್ಯಕ್ತಿಗೆ ತಿಳಿಯದ, ಇನ್ನೊಬ್ಬರಿಗೆ ನುಡಿಯದ ಯಾವ ಪ್ರಭಾವಗಳು ಮನಸ್ಸಿನಲ್ಲೇ ಕಾರ್ಯಮಾಡುತ್ತವೆ, ಅವರ ನುಡಿತದಲ್ಲಿ ಯಾವುದು ಶೀಲ, ಯಾವುದು ನಿರ್ಣಯ, ಯಾವುದು ಋಜುಗುಣ ಎಂಬುದನ್ನೂ ಕವಿ ಬಲ್ಲನು. ಹಾಗೇ ದೌರ್ಬಲ್ಯವಾಗದೆ ಒಳಗೇ ಇದ್ದುಕೊಂಡು ಮನಸ್ಸಿನೊಳಗೇ ನಿಲ್ಲುವ ವ್ಯಥೆಗಳನ್ನೂ ಕವಿ ಬಲ್ಲನು. ಅದೂ ಒಂದು ಶೀಲದ ಅಥವಾ ಉದ್ದೇಶದ ಅಥವಾ ಕರ್ತವ್ಯದ ಬಲಸ್ಥಾನವಾಗಿಯೇ ಇರುತ್ತದೆ. ಆತ್ಮದ ಒಳಪದರಗಳಲ್ಲಿ ಒಂದು ನರಳಿಕೆಯಂತೆ ಅನುಕ್ತವಾಗಿ ಇರಬಲ್ಲದು ಎಂಬುದನ್ನೂ ಕವಿ ಬಲ್ಲನು.

* * *

ಕಡಮೆಯೆಂದರೆ ರಾಯಮಾಯಣದಲ್ಲಿ ನಾಲ್ಕು ಋತುಗಳ ಪೂರ್ಣವರ್ಣನೆ ಇದೆ. ಚಿತ್ರಕೂಟಕ್ಕೆ ಹೋದಾಗ ಮೊದಲಲ್ಲಿ, ಕಿಷ್ಕಿಂಧೆಯನ್ನು ಸೇರುತ್ತಿದ್ದಾರೆ ಎಂಬಲ್ಲಿ, ವಸಂತವಿದೆ; ಹೇಮಂತ ; ವರ್ಷಾಕಾಲ ; ಶರತ್ತಿನ ಫಲಪೂರ್ಣ ವೈಭವ. ಈ ಎಲ್ಲ ಸಮಯಗಳಲ್ಲಿಯೂ ಅವರು ವನಭೂಮಿಯಲ್ಲಿ ಇರುತ್ತಾರೆ. ಬೆಟ್ಟಗಳ ನಡುವೆ, ನದಿ ಸರೋವರಗಳ ದಂಡೆಯಲ್ಲಿ. ವರ್ಣನೆಗಳೆಲ್ಲ ಸಹಜವಾಗಿ ಅವನ್ನು ಕುರಿತ, ಅವುಗಳ ನಡುವೆ ಇರುವ ಜನರವೇ. ಚಿತ್ರಕೂಟದ ವಸಂತ ಸಮಯದಲ್ಲಿ ಸೀತೆ ರಾಮ ಒಡನೆ ಇರುತ್ತಾರೆ ; ಅದರ ಹರ್ಷೋತ್ಸವಗಳನ್ನು ಮನಸಾರೆ ಮೆಚ್ಚಿಕೊಳ್ಳುತ್ತಾರೆ. ಲತೆ, ಗಿಡ, ಹೂಬಿಟ್ಟ ಸಂತೋಷ; ತಂಪಾದ ಗಾಳಿಗಳ ಸಂಚಲನ, ನಗೆ ; ದುಂಬಿ ಕೋಗಿಲೆಗಳ ಸವಿ ರವ; ಈ ದೃಶ್ಯಕ್ಕೆಲ್ಲ ಸೌಂದರ್ಯವನ್ನು ಸೇರಿಸುತ್ತ ಹರಿಯುತ್ತಿರುವ ನದಿ ; ಬೇರೆ ಬೇರೆ ಬಣ್ಣಗಳಲ್ಲಿ ಎತ್ತರಕ್ಕೆ ಒಡ್ಡಿ ನಿಂತಿರುವ ಬೃಹದಾಕಾರದ ಕಲ್ಲ ಅರೆಗಳು ; ಜೊತೆಯ ಹೆಣ್ಣು ನವಿಲನ್ನು ಹರ್ಷಗೊಳಿಸುವುದಕ್ಕಾಗಿ ಸೋಗೆ ಬಿಚ್ಚಿ ಕುಣಿಯುತ್ತಿರುವ ಗಂಡು ನವಿಲು, ಅದನ್ನು ಕಂಡ ಹೆಣ್ಣಿನ ನಲಿವು ಬಹು ಚೆಲುವಾದ ನೋಟಗಳು. ಬೆಟ್ಟಗಳ ಅಡಿಯಿಂದ ಮುಡಿಯವರೆಗೂ ಒಟ್ಟಿದಂತಿದ್ದ ಕಲ್ಲು ; ಬಣ್ಣಗಳು ಎಷ್ಟು ಬಗೆಯವು ! ಬಿಳಿ, ಕೆಂಪು, ಹಳದಿ, ಕಂದು, ಮಂಜಿಷ್ಟ – ಪ್ರತಿಯೊಂದರ ಬಣ್ಣ ಕಾಂತಿಗಳೂ ಬೆಲೆಯುಳ್ಳವು ; ಹೊಳಪುಕಲ್ಲು ; ಲೆಕ್ಕವಿಲ್ಲದಷ್ಟು ಮರಗಳು, ಅವುಗಳ ತುಂಬ ಎಲೆ : ಇತಿಹಾಸ ಕಾವ್ಯಗಳಲ್ಲೆಲ್ಲ ಎಷ್ಟೋ ಮರಗಳು ಮತ್ತು ಪಕ್ಷಿಗಳ ಹೆಸರು ಸಾಲಾಗಿ ಬಂದು ಕಾವ್ಯಶೋಭೆಯನ್ನು ಹೆಚ್ಚಿಸುತ್ತವೆ. ಮಂದಾಕಿನೀ ಎಂಬ ಹೆಸರಿನದು ಒಂದು ನದಿ. ನದಿ ಹರಿಯುತ್ತಿರುವಂತೆ ಬಣ್ಣಬಣ್ಣದ ಅದರ ಮಳಲಲ್ಲಿ ದಡದ ಮೇಲೆ ಹಂಸ ಕಾರಂಡವ ಮುಂತಾಗಿ ನೀರುಹಕ್ಕಿಗಳು ಗುಂಪುಗುಂಪಾಗಿ ಹಾರಾಡುತ್ತಿರುತ್ತವೆ. ಜಿಂಕೆಗಳು ಬಂದು ನೀರು ಕುಡಿದು ತಿರುಗಾಡುತ್ತವೆ. ಪ್ರಾಣಿಗಳು ಇಳಿದ ಕಾರಣದಿಂದ ನೀರು ಒಂಡಾಗುತ್ತದೆ. ಕದಡಿದ ನೀರು ಕ್ರಮವಾಗಿ ತಿಳಿಯಾಗುವುದು ಕಾಣುತ್ತದೆ..... ಈ ನಡುವೆ ರಾಮ ಸೀತೆ ಜೊತೆಗಿರುತ್ತಾರೆ. ಇದರಲ್ಲಿ ಅವರಿಗೆ ಪ್ರೀತಿ ಉಂಟಾಗುತ್ತದೆ. ನೆರೆಯ ಆಶ್ರಮಗಳಿಂದ ವ್ರತಿಗಳು ಬರುತ್ತಾರೆ. ತಣ್ಣಗೆ ಬೀಸುವ ಗಾಳಿಗಳು ಹೂದಳಗಳನ್ನೂ ಪರಿಮಳಗಳನ್ನೂ ಹೊತ್ತು ತರುತ್ತವೆ.

ಕಿಷ್ಕಿಂಧೆಯ ವಸಂತದ್ದು ಇದಕ್ಕೆ ವಿಸದೃಶವಾದ ಸನ್ನಿವೇಶ : ಅದು ರಾಮನನ್ನು ದುಃಖಾರ್ತನನ್ನಾಗಿ ಮಾಡುತ್ತದೆ. ಸ್ವಲ್ಪ ಸಮಯಕ್ಕೆ ಮುಂಚೆ ತಾನೆ

ಸೋದರರಿಗೆ ಪಂಪಾಸರೋವರದ 'ವೈದೂರ್ಯ ವಿಮಲೋದಕಂ, ಪದ್ಮ ಪುಲ್ಲೋತ್ಪಲವತಿ'ಯಾಗಿ ಸ್ವಚ್ಛವಾದ ನೀರು ; ತಾವರೆ, ನೈದಿಲೆ ವಿಕಸಿತವಾಗಿ ಆ ತಿಳಿಗೊಳದಲ್ಲಿ ಕಾಣುತ್ತಿವೆ. ಆದರೆ ರಾವಣನು ಸೀತೆಯನ್ನು ಎತ್ತಿಕೊಂಡು ಹೋಗಿದ್ದಾನೆ. ಆಕೆಯ ಅಗಲಿಕೆಯಿಂದ ರಾಮನು ವ್ಯಸನಾಕ್ರಾಂತನಾಗಿದ್ದಾನೆ. ಹಿಂದೆ ರಾಮನನ್ನು ಸಂತೋಷಗೊಳಿಸಿದ ಯಾವೊಂದೂ ಈಗ ಅವನಿಗೆ ಹರ್ಷವುಂಟುಮಾಡುತ್ತಿಲ್ಲ. ಈಗಲೂ ಅವು ನೋಟಕ್ಕೆ ಸುಂದರವಾಗಿಯೇನೊ ಇವೆ. ಆಕೆಯ ಜೊತೆಯಲ್ಲಿದ್ದಾಗ ಇತರ ವಸಂತ ಮಾಸಗಳು ಯಾವ ಹರ್ಷದವೆಂಬುದರ ನೆನಪುಗಳು ದಟ್ಟಣಿಸಿ ಬರುತ್ತವೆ. ರಾವಣನ ಕೈಯಲ್ಲಿ ಸೆರೆಸಿಕ್ಕಿ ಸೀತೆ ಈಗ ಹೇಗೆ ಕಷ್ಟಪಡುತ್ತಿರಬಹುದು ಎಂಬುದನ್ನೂ ತನ್ನ ಚಿಂತೆಯಲ್ಲಿ ಹೇಗೆ ಅವಳು ಕ್ಲೇಶಪಡುತ್ತಿರಬಹುದು ಎಂಬುದನ್ನೂ ಯೋಚಿಸುತ್ತಿರುತ್ತಾನೆ. ಮೇಲೆ ಹಬ್ಬಿದ ಮರಗಳಿಂದ ಹೂಗಳು ಉದುರುತ್ತ ಕೆಳಗಿನ ಹುಲ್ಲುಹಾಸಿನ ಮೇಲೆ ನೆಳಲು ಕವಿಸಿದಂತೆ ಹರಡಿ ಬಿದ್ದಿವೆ; ಹಳದಿ ಕಪ್ಪು ನೆಳಲು ಬಗೆಬಗೆಯ ವರ್ಣಗಳಿಂದ ನೆಯ್ದ ರತ್ನ ಗಂಬಳಿಯಂತೆ ಆ ನೆಲಸು ಕಾಣುತ್ತದೆ. ಪ್ರೀತಿ ಹೊಮ್ಮಿ ಬರುತ್ತದೆ. ತೆರೆದು ಅರಳಿದ ಹೂಗಳು ಸುತ್ತ ಸುಗಂಧವನ್ನು ಬೀರುತ್ತವೆ; ಮರಗಳ ಮೇಲಿಂದ ಬಿದ್ದ ಹೂಗಳ ಕಂಪನ್ನು ಗಾಳಿ ಹೊತ್ತುತರುತ್ತದೆ; ಹೊತ್ತು ತಂದ ಈ ಹೂಗಳನ್ನು ಕಲ್ಲು ಬಂಡೆಗಳ ಮೇಲೆ ಎರಚುತ್ತದೆ. ಹಕ್ಕಿಗಳ ನೃತ್ಯ ಕೆಲೆತಗಳೊನೆ ಗಾಳಿ ನರ್ತನಮಾಡುತ್ತದೆ. ಒಂದರ ಮೇಲೊಂದು ಬಾಗಿದ ಮರಗಳು ನೆಯ್ದುಕೊಂಡಂತಿವೆ. ಪುಷ್ಪರಾಗವನ್ನು ಪರಿಮಳವನ್ನು ಹೊತ್ತು ಝೇಂಕರಿಸುತ್ತಿರುವ ದುಂಬಿಗಳು ಮರಗಳನ್ನು ಗಾಯಕರನ್ನಾಗಿ ಮಾಡಿದಂತಿದೆ.

ಇಷ್ಟು ಚೆಲುವಿದ್ದರೂ ಇದು ನನ್ನ ದುಃಖವನ್ನು ದ್ವಿಗುಣಿಸುತ್ತದೆ – ಸೀತೆಯಿಲ್ಲದೆ ಅವಳಿಗಾಗಿ ದುಃಖಪಡುತ್ತಿರುವ ನನಗೆ, ಎನ್ನುತ್ತಾನೆ ರಾಮ. ಇತರ ವಸಂತಗಳಲ್ಲಿ ಸೀತೆ ನನ್ನೊಡನಿದ್ದಳು. ಅವುಗಳತ್ತ ನನ್ನ ಗಮನ ಸೆಳೆಯುತ್ತಿದ್ದಳು. ನಾವಿಬ್ಬರೂ ಒಟ್ಟಿಗೆ ಸಂತೋಷಪಡುತ್ತಿದ್ದೆವು. ಗಂಡು ಹೆಣ್ಣು ಹಕ್ಕಿಗಳು ಹಾಡುತ್ತವೆ, ಕುಣಿಯುತ್ತವೆ, ಒಡನೊಡನೆ ನಡೆದಾಡುತ್ತವೆ ; ಇಲ್ಲಿನ ಪ್ರತಿಯೊಂದು ಜೀವಿಯೂ ಇನ್ನೊಂದರ ಕಡೆನೋಡಿ ಉತ್ಸವಪಡುತ್ತವೆ. ಈಗ ಅವು ನನ್ನ ರಾಗಭರವನ್ನು ಉರಿವಂತೆ ಮಾಡುತ್ತಿವೆ. ಕೆಂಪಗೆ ಉರಿಯುವ ಉರಿಯ ನಾಲಗೆಗಳಂತೆ ಎಳೆಯ ಚಿಗುರು ಈ ಚೆಲುವು ನನ್ನ ಕಣ್ಣಿಗೆ ಕಾಣುತ್ತದೆ. ನನ್ನ ಸೀತೆ ಕಾಣುತ್ತಿಲ್ಲ. ಸೋಗೆ ನವಿಲಿಗೆ ಜೊತೆಹೆಣ್ಣು ಜೊತೆಯಲ್ಲಿ ತನ್ನ ಹತ್ತಿರವಿದೆ, ನನ್ನನ್ನು ಅಣಕಿಸುತ್ತಿರುವಂತೆ. ತಮ್ಮ ಹೆಣ್ಣುಗಳನ್ನು ರಾಕ್ಷಸನು ಹಿಡಿದು

ಒಯ್ದಿಲ್ಲ. ಪುಷ್ಪಮಾಸವಾದ ಇದರಲ್ಲಿ ಅವಳನ್ನು ಅಗಲಿರುವುದು ಬೇನೆ. ರಾಕ್ಷಸನು ಅವಳನ್ನು ನನ್ನಿಂದ ಅಪಹರಿಸದಿದ್ದಿದ್ದರೆ ನನ್ನ ಬಳಿಗೆ ಅವಳು ಈಗ ಬರುತ್ತಿದ್ದಳು – ಕಣ್ಣುಗಳನ್ನು ಅಗಲಿಸಿ ತೆರೆದು ಅತಿಶಯ ಉತ್ಸಾಹದಿಂದ. ಅವಳು ನನ್ನಿಂದ ಅತಿದೂರವಾಗಿ ಹೇಗೆ ಬದುಕಿದ್ದಾಳು ಈ ವಂಸತದಲ್ಲಿ ? ತಾನು ಬಂದಿ ; ನಾನು ಬಳಿಯಲ್ಲಿಲ್ಲ.... ಇದು ಅವಳನ್ನು ಕೊಲ್ಲಬಹುದು, ಇತ್ಯಾದಿ. ರೂಪಿನಲ್ಲಿ ಚೆಲುವಾದ ಯಾವುದೂ ನನಗೆ ಈಗ ದುಃಖ ಉಂಟುಮಾಡುತ್ತಿದೆ ಎನ್ನುತ್ತಾನೆ. ಇವು ಪ್ರೇಮದ ಚಿತ್ರಗಳು. ಸಂತೋಷದ ನೆನಕೆಗಳು. ಅವರದ್ದಾಗಿದ್ದ ಒಡಬಾಳಿನ ಸುಖದ ಕುರುಹುಗಳು. ಕಾಡಿನ ಪ್ರತಿಯೊಂದೂ ಅವಳ ಮಾತು, ಚಲನೆ, ರೂಪಿನ ಯಾವುದೊ ಒಂದು ಲಕ್ಷಣದ ಸ್ಮೃತಿಯನ್ನು ತರುತ್ತದೆ. ಮರಗಳ ಕೊಂಬೆಗಳು ಗಾಳಿಯಲ್ಲಿ ತೂಗಿದಾಗ ಚೆಲುವೆಯರು ಮತ್ತರಾಗಿ ತಮ್ಮ ಪ್ರಿಯರನ್ನು ಅಪ್ಪಿಕೊಳ್ಳುವಂತೆ ಹತ್ತಿರದ ಬಳ್ಳಿಗಳು ಕಾಣುತ್ತವೆ. 'ನನ್ನ ಸೀತೆ ನನಗೆ ಸಿಕ್ಕಿ ನಾನಿಲ್ಲಿಯೇ ಬದುಕಬೇಕಾಗುತ್ತಿದ್ದರೆ ಇಂದ್ರನ ಐಶ್ವರ್ಯಕ್ಕೆ ಅಸೂಯೆ, ಆಸೆ ಪಡುವುದಿಲ್ಲ. ಅಯೋಧ್ಯೆಗೆ ಹಿಂದಿರುಗಲೂ ಲಕ್ಷ್ಯ ಕೊಡುವುದಿಲ್ಲ.' ಈ ಋತು ಹಿಂದಿನದರ ವೈದೃಶ್ಯವಾಗಿ ಮಾತ್ರ ಅವನ ಮೇಲೆ ಪರಿಣಾಮ ಮಾಡಿರುವುದನ್ನು ಅಲ್ಲಿ ಕಾಣುತ್ತೇವೆ. ಜನಕಾತ್ಮಜೆಯಿಲ್ಲದೆ ಅವನು ಬದುಕಿರಲಾರ ಎಂಬಂತೆ ಕಾಣಿಸುತ್ತಿತ್ತು.

ಹೇಮಂತದ ಚಳಿಯ ವರ್ಣನೆಯೂ ಇಷ್ಟೇ ಸಮಾಜ ಸುಂದರವಾದ್ದು. ಇಬ್ಬನಿ ಬಿದ್ದು ಬಿದ್ದು ನೆಲ ಗಟ್ಟಿಯಾಗಿಬಿಟ್ಟಿದೆ. ನೇಸರು ತೆಂಕಲಿಗೆ ಪ್ರವಾಸ ಮಾಡಿದ್ದಾನೆ. ಉತ್ತರ ದಿಕ್ಕು ಹಣೆಯ ಮೇಲೆ ತಿಲಕದ ರೇಖೆಯಿಲ್ಲದೆ ಇರುವ ಸುಂದರಿಯಂತೆ ಕಾಣುತ್ತದೆ. ಬಿಸಿಲಿರುವಾಗ ಹಗಲಹೊತ್ತು ಸುಖೋಷ್ಣ. ಸೂರ್ಯನೇ ಶಕ್ತಿಗುಂದಿದಂತೆ; ಏನೊ ಮಸುಕು ಕವಿದಂತೆ ತಿಂಗಳು. ನಮ್ಮ ನಮ್ಮ ಉಸಿರೇ ಮಂಕುಮಾಡಿದ ಕೈಗನ್ನಡಿಯಂತಿದೆ. ಬೆಳಿಗ್ಗೆ ಹೊತ್ತಿನಲ್ಲಿ ಗಿಡಗಳ ಮೇಲೆ, ಹೊಲಗದ್ದೆಗಳ ಮೇಲೆ ಇಬ್ಬನಿ ಬಿದ್ದಾಗ ಸೂರ್ಯನ ಕಿರಣಗಳು ಅವಕ್ಕೆ ಕಾಂತಿಕೊಡುತ್ತವೆ. ಅವುಗಳ ಮೇಲೆ ಬಿದ್ದ ಇಬ್ಬನಿ ಕೋಟಿಕಾಂತಿಯಿಂದ ಬೆಳಗುತ್ತದೆ. ನದಿಯಲ್ಲಿ ನೋಡಬೇಕೆಂದರೆ ನೀರು ಎಲ್ಲಿರುತ್ತದೆಂದು ತಿಳಿಯಲಾಗದು. ನೀರಹಕ್ಕಿಗಳ ದನಿಯಿಂದ ಅದನ್ನು ಅವಮಾನಿಸಬೇಕು. ಆಗ ಈಗ ಬಾಯಡಸಿ ನೀರು ಕುಡಿಯಲು ಬಂದ ಆನೆ ಸೊಂಡಿಲ ತುದಿಯಿಂದ ನೀರನ್ನು ಹೀರಲು ಸೊಂಡಿಲನ್ನಿಟ್ಟಾಗ ಚಳಿ ಬಡಿದು ಸೊಂಡಿಲನ್ನು ಹಿಂದಕ್ಕೆ ಸೆಳೆದುಕೊಳ್ಳುತ್ತದೆ... ಪಂಪಾ ಸರೋವರದ ಚೆಲುವರ್ಣನೆಗಳೂ ಅಂಥವೇ. ಅಚ್ಚ, ಸುಂದರ ;

ವಿವರ ವಿವರವುಳ್ಳದ್ದು. ಕಬಂಧನ ವರ್ಣನೆಯ ಪಂಪಾ ಸರೋವರದ ಭೂಸನ್ನಿವೇಶ, ಅದರ ಸೌಂದರ್ಯ ಸಂಪತ್ತು, ಪರಿಮೋಹಕತೆಗಳು, ಪಕ್ಷಿಗಳು ಮೀನು ಹೂಗಳನ್ನು ವರ್ಣಿಸುವಾಗ ಅಂಥ ಚಿತ್ರಶೋಭೆ ಬಂದಿತ್ತು. ಆ ಪ್ರದೇಶದ ವಾಸ್ತವ ಸನ್ನಿವೇಶ ಇನ್ನೂ ಮನಮೋಹಕವಾದ್ದು.

ಶರತ್ಕಾಲದ ಬೆಳುದಿಂಗಳದು ವ್ಯಾಪಕವಾದ ಚಿತ್ರ – ಅಚ್ಚ ಸೊಗಸು. ಅಲ್ಲಿನ ಭಾವ ಸೌಹಾರ್ದ ಭ್ರಾಂತಿ ಪ್ರಪಂಚವನ್ನೆಲ್ಲ ಒಂದೇ ಜೀವದ ನಂಟುಳ್ಳದ್ದು ಎಂದು ಕಾಣಿಸುತ್ತದೆ. ಈ ಪ್ರಸಂಗದಲ್ಲಿಯೇ ಬರುತ್ತದೆ –

ಚಂಚತ್ ಚಂದ್ರ ಕರಸ್ಪರ್ಶ ಹರ್ಷೋನ್ಮೀಲಿಚ ತಾರಕಾ
ಅಹೋ ರಾಗವತೀ ಸಂಧ್ಯಾ ಜಹಾತಿ ಸ್ವಯಂ ಅಂಬರಂ

ಎಂಬ ಪದ್ಯ. ಬೆಳುದಿಂಗಳಿನ ಕಿರಣಗಳು ಹರಡುತ್ತಿರುವ ಸಂತೋಷ ಮುಟ್ಟುತ್ತಿರಲು ರಕ್ತರಾಗದಿಂದ ಇರುವ ಸಂಜೆ ಮಿನುಮಿನುಗುತ್ತಿರುವ ನಕ್ಷತ್ರಗಳನ್ನು ಎತ್ತಿ ಕಾಣಿಸುತ್ತವೆ. ತಾವೇ ಹೊರಗೆ ಹೋಗುತ್ತಿವೆಯೆಂಬಂತೆ. ಅಥವಾ, ಸಂಜೆವೆಣ್ಣು, ಚಂದ್ರನ ಸ್ಪರ್ಶದಿಂದ ಅದರ ಕಿರಣ ತನ್ನನ್ನು ಮುಟ್ಟುತ್ತಿರಲು ಸುಖಪಡುತ್ತಿದ್ದಾಳೆ, ಸಂತೋಷಪಡುತ್ತಿದ್ದಾಳೆ. ಶ್ಲೇಷೆಯಿಂದ ಹರ್ಷಹಾಯಿಸುವ ಕಣ್ಣುಗಳಿಂದ ತಾನುಟ್ಟ ಬಟ್ಟೆಗಳನ್ನು ಸಡಿಲಗೊಳಿಸಿಕೊಳ್ಳುತ್ತಿದ್ದಾಳೆ... ಇದು ತುಂಬಾ ಪ್ರಖ್ಯಾತವಾದ ಪದ್ಯ. ಮಗುಮನಸ್ಸಿನ ಅನೇಕರನ್ನು ಇನ್ನೊಂದು ಪದ್ಯ ಪೀಡಿಸಿದೆ –

ದರ್ಶಯಂತಿ ಶರನ್ನದ್ಯಃ ಪುಲಿನಾಶಿ ಶನೈಃ ಶನೈಃ
ನವಸಂಗಮ ಸವ್ರೀಡಾ ಜಘನಾನೀವ ಯೋಷಿತಃ

ಶರತ್ಕಾಲದ ನದಿಗಳು ತಮ್ಮ ಸಣ್ಣ ಮರಳ ನೆಲಸುಗಳನ್ನು ನಿಧಾನವಾಗಿ ತೋರಿಸುತ್ತಿರುವಂತಿದೆ, – ಎಳ ಒಲವಿನ ಚೆಲುವೆಯರು ನಾಚಿಕೆಯಿಂದ ತಮ್ಮ ಅಂಗಕಾಂತಿಯನ್ನು ತೋರಿಸುವಂತೆ. ಮೊದಲ ಕೂಟದಲ್ಲಿ ತಮ್ಮ ಪ್ರಿಯಕರಿಗೆ ನಾಚುತ್ತ ನಿಧಾನವಾಗಿ ಜಘನವನ್ನು ಕಾಣಿಸುವಂತೆ ಎಂಬುದು ವಾಲ್ಮೀಕಿಯದೇ ಅಲ್ಲವೇನೊ ಎನ್ನುವುದೂ ಉಂಟು. ಅಥವಾ, ಇನ್ನಷ್ಟು ಬಾಯಿ ತೆರೆದು ಮಾಡಿದ ವರ್ಣನೆ ನದಿಯ ಮಂದಗಮನವನ್ನು ವರ್ಣಿಸುವ ಪದ್ಯ –

ಮೀನೋಪ ಸಂದರ್ಶಿತ ಮೇಖಲಾನಾಂ
ನದೀ ವಧೂನಾಂ ಗತಯೋಽದ್ಯಮಂದಾಃ
ಕಾನ್ತೋಪಭುಕ್ತಾಲಸಗಾಮಿನೀನಾಂ
ಪ್ರಭಾತ ಕಾಲೇಷ್ವಿವ ಕಾಮಿನೀನಾಂ

ನದೀವಧುವು ಮೀನುಗಳೆಂಬ ತನ್ನ ಕಟಿಬಂಧವನ್ನು ಧರಿಸಿ ಮಂದವಾಗಿ ಸಾಗುತ್ತದೆ,

– ಪ್ರಿಯರೊಡನೆ ಕಳೆದ ರಾತ್ರಿ ಭೋಗ ಅನುಭವಿಸಿದ ಮೇಲೆ ಬೆಳಗಿನ ಕಾಲದಲ್ಲಿ ನಿಧಾನವಾಗಿ ಕಾಂತೆ ಹೊರಗೆ ಹೋಗುವಂತೆ. ಹೀಗೆ ಈ ಸುತ್ತಲಿರುವ ಪ್ರಕೃತಿಯ ಜೀವನ ಸ್ತ್ರೀಪುರುಷರ ಆಗಿನ ಸನ್ನಿವೇಶಕ್ಕೆ ಹೋಲುತ್ತಿರುವಂತೆಯೊ ವಿದೃಶ್ಯವಾಗಿಯೊ ವರ್ಣಿತವಾಗುತ್ತದೆ.

* * *

ಕದನಗಳ ವರ್ಣನೆಗಳೂ ಹಾಗೆ ಚುರುಕಾಗಿವೆ. ಪರಶುರಾಮನನ್ನು ಇದಿರುಗೊಂಡಾಗ ಒಂದು ಬಗೆ ಮೊನೆಯೂ ಉಗ್ರತೆಯೂ ಕಾಣುತ್ತದೆ. ಖರನ ಮೇಲೆ ನಡೆದಾಗ ಭಯಂಕರವಾಗಿ ಕಾರ್ಯನಿಷ್ಠವಾಗಿದೆ. ಲಂಕೆಯಲ್ಲಿ ನಡೆದ ಆರೇಳು ದಿನಗಳ ಯುದ್ಧದ ಚಿತ್ರಗಳಲ್ಲಿ ಹೆಚ್ಚು ಮಂದಿಯ ಕೊಲೆಯಾಗುತ್ತದೆ. ಕೂಗು, ರಕ್ತಪಾತ, ಭೀಕರತೆ, ಅಪಾಯ ತಪ್ಪಿಸಿಕೊಳ್ಳಲು ಓಡುವುದು, ನುಗ್ಗು, ಆಕ್ರಮಣ, ಕಂಗಳಿಂದ ಕಾರುವ, ಕೆಂಪು ರಕ್ತ ಸುರಿಯುತ್ತ ಕಾಣುವ ದ್ವೇಷ ಅಲ್ಲಿವೆ. ರಾಮನು ದೃಢಮನಸ್ಸಿನಿಂದ ನಿಶ್ಚಲವಾಗಿ ನಿಂತು ಮಾಡುತ್ತಿರುವ ಯುದ್ಧ ಎಲ್ಲಿನಂತೆಯೇ ಇಲ್ಲಿಯೂ. ಆದರೆ ಅವನ ಮನಸ್ಸು ಪೂರ್ತಿಯಾಗಿ ಕದನದಲ್ಲಿ ತೊಡಗಿರುತ್ತದೆ. ವಾನರರು ಕಲ್ಲು ಗುಂಡುಗಳನ್ನೂ ಮರಗಳನ್ನೂ ಹಿಡಿದು ಯುದ್ಧ ಮಾಡುತ್ತಾರೆ ; ಉಗುರುಗಳಿಂದ ಕೀಸುತ್ತಾರೆ ; ಹಲ್ಲುಗಳಿಂದ ಕಚ್ಚುತ್ತಾರೆ ; ಕೈಗಳಿಂದ ಮುಷ್ಟಿಗಳಿಂದ ಬಡಿಯುತ್ತಾರೆ. ರಾಕ್ಷಸರು ಖಡ್ಗ, ಈಟಿ ಹಿಡಿದು ನೇರವಾಗಿ ಯುದ್ಧ ಮಾಡುತ್ತಾರೆ. ಅಥವಾ ಮಾಯಾ ಯುದ್ಧದಲ್ಲಿ ತೊಡಗುತ್ತಾರೆ. ರಾವಣನ ಸೈನ್ಯದ ನಾನಾ ನಾಯಕರು ಮಾಡುವ ಕದನಗಳು ಸುಮಾರು ಒಂದೇ ಬಗೆಯವು. ಬಹು ಮಂದಿ ರಾಕ್ಷಸರು ನಾಶವಾಗುತ್ತಾರೆ. ಒಂದು ಮಜಲಲ್ಲಿ ಸಂಜೀವನಿ ಗಿಡದ ವಾಸನೆ ಸತ್ತ ವಾನರರಲ್ಲಿ ಬಹುಮಂದಿಯನ್ನು ಬದುಕಿಸುವುದು ; ಗರುಡನ ರೆಕ್ಕೆಗಳ ಬಡಿತ ಚೇತನಗೊಳಿಸುತ್ತದೆ.

ಲಂಕೆಯ ಮುತ್ತಿಗೆಯ ಮೊದಲ ಭಾಗದಲ್ಲಿ ಇದ್ದಕ್ಕಿದ್ದ ಹಾಗೆ ಸುಗ್ರೀವನು ರಾವಣನ ಮೇಲೆ ಬೀಳುತ್ತಾನೆ. ಒಳಗೆ ನೋಡಿಕೊಂಡು ಬರಲು ಸುಗ್ರೀವ ಹೋಗಿರುತ್ತಾನೆ. ತನಗಿದ್ದ ಕೋಪವನ್ನೆಲ್ಲ ರಾವಣನ ಮೇಲೆ ಕಾರುತ್ತಾನೆ. ರಾವಣನಿಗೂ ಇದು ಹಟಾತ್ ನಡೆದ ಘಟನೆ ; ಅಚ್ಚರಿತಂದ ಸಂಗತಿ. ಅವನ ತಲೆಯಿಂದ ಕಿರೀಟವನ್ನು ಎಗರಿಸುತ್ತಾನೆ. ಒಂದೊ ಎರಡೊ ಸಲ ಅಂಗದ ಸುಗ್ರೀವರಿಗೂ ಕದನದಲ್ಲಿ ಸೋಲಾಗತ್ತದೆ. ಹನುಮಂತನಿಗೆ ಕೂಡ ಒಂದು ಭಾರಿ ಪೆಟ್ಟು ಬೀಳುತ್ತದೆ. ಕೊಲೆಯಲ್ಲಿ ಕಬಳಿಸುವುದರಲ್ಲಿ ಕುಂಭಕರ್ಣನೊಡನೆ ನಡೆದ ಕದನ ನಿಜವಾಗಿ ಪೈಶಾಚವೇ. ಅವನನ್ನು ಕಂಡೇ ವಾನರ ಸೈನ್ಯ

ಭಯಗೊಂಡು ಓಡುತ್ತದೆ, ಅವರಿಗೆ ನಡೆದ ಯುದ್ಧದ ಮೊದಮೊದಲಲ್ಲಿ. ಕೊನೆಗೆ ಸುಗ್ರೀವನನ್ನು ಹಿಡಿದು ಅಣ್ಣನ ಬಳಿಗೆ ತೆಗೆದುಕೊಂಡು ಹೋಗಲೆಂದು ತನ್ನ ಕಂಕುಳಲ್ಲಿ ಅವನನ್ನು ಇರುಕಿಕೊಳ್ಳುತ್ತಾನೆ. ಆಗ ಹನುಮಂತನು ದಿಕ್ಕೆಟ್ಟು ಅಸಹಾಯಕತೆಯಿಂದ ನೋಡುತ್ತ ನಿಲ್ಲಬೇಕಾಗುತ್ತದೆ. ಅವನಿಗೆ ನಂಬಿಕೆ ಇದೆ : ಹೇಗೊ ತನ್ನ ಒಡೆಯನ ಚಾಲೂಕಿನಿಂದ ತಪ್ಪಿಸಿಕೊಳ್ಳುತ್ತಾನೆ – ಎಂದು. ಸುಗ್ರೀವನ ಚಮತ್ಕಾರದ ವರ್ಣನೆಯಲ್ಲಿ ಇದು ರೂಪುಗೊಳ್ಳುತ್ತದೆ. ಕುಂಭಕರ್ಣನ ಕಿವಿಗಳನ್ನೂ ಮೂಗನ್ನೂ ಸುಗ್ರೀವನು ಕಚ್ಚಿದನಂತೆ. ಈ ಕದನ ಕ್ರಿಯೆಯ ಅನಿರೀಕ್ಷಿತತೆ ಅನುಭವಿಸಿದ್ದವಲ್ಲದ್ದರಿಂದ ಕುಂಭಕರ್ಣನು ನೋವಿಂದ ಕೂಗಿಕೊಂಡು ಕಂಕುಳನ್ನು ಸಡಿಲ ಮಾಡುತ್ತಾನೆ ; ಸುಗ್ರೀವನು ತಪ್ಪಿಸಿಕೊಳ್ಳುತ್ತಾನೆ.

ರಾಮ–ರಾವಣರ ಕದನದಲ್ಲಿ ಎರಡು ಪ್ರಸಂಗಗಳು ಎದ್ದು ಕಾಣುತ್ತವೆ : ಮೊದಲನೆಯದು : ಹಿಂದೆ ವರ್ಣಿಸಿರುವಂತೆ – ರಾವಣನು ಆಯಾಸಗೊಂಡಿದ್ದಾನೆ, ಬಸವಳಿದಿದ್ದಾನೆ ಎಂದು ರಾಮನಿಗೆ ಕಾಣಿಸುತ್ತದೆ ; ಆ ದಿನ ಹಿಂದಕ್ಕೆ ಹೋಗಿ ಮಾರನೆಯ ದಿನ ಮೇಲಾಗಿ ಸಜ್ಜುಗೊಂಡು ಹೊಸ ಶಕ್ತಿಯಿಂದ ಬಂದು ಯುದ್ಧ ಮಾಡಬಹುದೆಂದು ರಾಮನು ಸಲಹೆ ಮಾಡುತ್ತಾನೆ. ತನಗಿಂತ ಶಕ್ತನಾದವನ ಎದುರಿಗೆ ನಿಂತು ಇಂಥ ಹೀನಾಯವನ್ನು ಅನುಭವಿಸುತ್ತಿರುವುದು ರಾವಣನಿಗೆ ಬಾಳಲ್ಲಿ ಮೊದಲ ಸಲ ಉಂಟಾದ ಅನುಭವ. (೨) ಯುದ್ಧದ ಕಡೆಯ ದಿವಸ ಕದನ ಉಗ್ರ ಭೀಕರವಾಗುತ್ತದೆ. ಸುಮಾರು ಮಧ್ಯಾಹ್ನ ಸಮಯ : ರಾವಣನ ಸಾರಥಿ ರಥವನ್ನು ಕಳದಿಂದ ಸ್ವಲ್ಪ ಬೇರತ್ತ ತೆಗೆದುಕೊಂಡು ಹೋಗುತ್ತಾನೆ. ಮೂವರ ಗುಣವೂ ಇಲ್ಲಿ ಮೇಲ್ಮೆಗೊಳ್ಳುತ್ತದೆ : ಇಬ್ಬರು ವೀರ ಯೋಧರದು, ಒಬ್ಬ ಸಾರಥಿಯದು. ರಾವಣನ ಕೈ ಸೋಲುತ್ತಿರುವಂತಿದೆ. ಒಡೆಯನ ಸ್ಥಿತಿಯನ್ನು ಕಂಡ ಸಾರಥಿ ರಥವನ್ನು ಓಸರಿಸಿಕೊಂಡು ಹೋಗುತ್ತಿರುತ್ತಾನೆ ; 'ರಥಂ ಅಪವಾಹಯುತು.' ತನ್ನನ್ನು ಯುದ್ಧರಂಗದಿಂದ ಬೇರೆಡೆಗೆ ತೆಗೆದುಕೊಂಡೊಯ್ಯುತ್ತಿದ್ದಾನೆಂದು ರಾವಣನಿಗೆ ಗೊತ್ತಾದಾಗ ಅವನಿಗೆ ಕೋಪ ಉಂಟಾಗಿ, ಸೂತನನ್ನು ಕುರಿತು ಕಠಿಣವಾಗಿ ನುಡಿಯುತ್ತಾನೆ – 'ಹೀನವೀರ್ಯಂ ಲಘುಂ, ಅಸತ್ವಂ, ಪೌರುಷೇಣ ವಿವರ್ಜಿತಂ, ಅಥವಾ ಭೀತಂ' ಎಂದು ನನ್ನನ್ನು ತಿಳಿದೆಯೆ? – ಎಂದು ಕೇಳುತ್ತಾನೆ. 'ದುರ್ಬುದ್ಧೇ', ನನ್ನನ್ನು ಏಕೆ ಅವಜ್ಞೆಯಿಂದ ಕಾಣುತ್ತಿರುವೆ? ನಿನ್ನ ಇಷ್ಟದಂತೆ ತೀರ್ಮಾನ ಮಾಡುತ್ತಿರುವೆಯ ? ಯುದ್ಧ ಮಾಡಲು ಯೋಗ್ಯನಾದ ಒಬ್ಬ ಮಹಾಶತ್ರುವನ್ನು ನಾನು ಎದುರುಗೊಂಡಾಗ ಅವನ ಸಮ್ಮುಖದಿಂದ ನನ್ನನ್ನು ಎಳೆದೊಯ್ಯುತ್ತಿದ್ದೀಯೆ – ಎನ್ನುತ್ತಾನೆ. ರಾವಣನ

ಅಭಿಮಾನಕ್ಕೆ ಧಕ್ಕೆ ಬಿದ್ದಿದೆ :

ಶತ್ರೋಃ ಪ್ರಖ್ಯಾತ ವೀರ್ಯಸ್ಯ ರಂಜನೀಯಸ್ಯ ವಿಕ್ರಮೈಃ
ಪಶ್ಯತೋ ಯುದ್ಧಲುಬ್ಧೋಹಂ ಕೃತಃ ಕಾಪುರುಷಃ ತ್ವಯಾ

ಹಗೆ ಪ್ರಖ್ಯಾತ ವೀರ; ಅವನ ಶಕ್ತಿ ಸಾಹಸ ನನ್ನ ಮನಸ್ಸಿಗೆ ರಂಜನೆಯುಂಟು ಮಾಡಿದೆ. ಅವನೊಡನೆ ಕಾದಲು ನಾನು ಲುಬ್ಧನಾಗಿದ್ದೇನೆ. ಅವನ ಕಣ್ಣಿಗೆ ನಾನು ಹೇಡಿಯಾಗಿ ಕಾಣುವಂತೆ ನೀನು ಮಾಡಿದ್ದೀಯ. ಒಡೆಯನ ಸ್ನೇಹಿತನಾಗಿರುವೆ ಮತ್ತು ಆತನ ಕಾರ್ಯವನ್ನು ಮಾಡುವುದಿಲ್ಲ. ಈ ಕ್ರಿಯೆ ಶತ್ರುಕ್ರಿಯೆಗೆ; 'ನಿವರ್ತಯಸ್ಯ ರಥಂ ಶೀಘ್ರಂ' – ರಥವನ್ನು ಬೇಗ ತಿರುಗಿಸು – ಎನ್ನಲು, ಬಡಸೂತನು ತನ್ನ ಪರವಾಗಿ ಈ ಸಮಾಧಾನ ಕೊಡುತ್ತಾನೆ. ನನಗೆ ಭಯವಾಗಿಲ್ಲ ; ನಾನು ಅವಿವೇಕವನ್ನೂ ಮಾಡಿಲ್ಲ ; ಶತ್ರುವಿಗೆ ಪಕ್ಷಪಾತವನ್ನೂ ತೋರಿಸಿಲ್ಲ ; ಎಚ್ಚರಿಕೆ ತಪ್ಪಿಲ್ಲ ; ಸ್ನೇಹ ಹೀನನೂ ಅಲ್ಲ ; ನಿಮಗೆ ನೆರವಾಗುವುದಕ್ಕಾಗಿ ಹೀಗೆ ಮಾಡಿದ್ದೇನೆ. ನಿಮ್ಮ ಶಕ್ತಿ ಕಂದಿದಂತೆ ಕಾಣುತ್ತಿತ್ತು ; ಆಯಾಸ ಕಾಣುತ್ತಿತ್ತು ; ಮಳೆಯಿಂದ ತೊಯ್ದ ಹಾಗೆ ಬೆವರಿಂದ ತೊಯ್ದಿದ್ದೀರಿ; ಒಡೆಯನ ಸ್ಥಿತಿಯನ್ನು ವೀಕ್ಷಿಸಬೇಕಾದುದು ಸೂತನ ಕರ್ತವ್ಯ. ಅವನ ಅನನುಕೂಲವನ್ನು ಕುದುರೆಗಳ ಸ್ಥಿತಿಯನ್ನು ನಾನು ಗಮನಿಸಬೇಕು. ಕಣವನ್ನೂ ಸಮಯವನ್ನೂ ಪರೀಕ್ಷಿಸಬೇಕು. ಸನ್ನಿವೇಶದ ಅರ್ಥವನ್ನು ಗ್ರಹಿಸಬೇಕು. ರಥಿಗಳ ಬಲವೇನು, ದೌರ್ಬಲ್ಯವೇನು ಎಂಬುದನ್ನು ಅರಿಯಬೇಕು. ರಥಕುಟುಂಬಿಗಳು ಕಳದ ವಿದ್ಯಮಾನವನ್ನು ಅರಿತವರಾಗಬೇಕು. ನಾನು ಸ್ವೇಚ್ಛೆಯಿಂದ ಇದನ್ನು ಮಾಡಿಲ್ಲ. ಭರ್ತೃಸ್ನೇಹಪರೀತಯಾ – ನನ್ನ ಒಡೆಯನಲ್ಲಿರುವ ಪ್ರೀತಿಯಿಂದ ಮಾಡಿದ್ದೇನೆ – ಎನ್ನುತ್ತಾನೆ. ಇಷ್ಟು ಹೊತ್ತಿಗೆ ರಾವಣನಿಗೆ ಕಾವೂ ಬಲವೂ ಹಿಂದಕ್ಕೆ ಬಂದಿರುತ್ತವೆ ; ಕುದುರೆಗಳಿಗೆ ವಿಶ್ರಾಂತಿ ಉಂಟಾಗಿರುತ್ತದೆ. ಸಾರಥಿ ರಥವನ್ನು ಯುದ್ಧಕಳಕ್ಕೆ ಹಿಂದಕ್ಕೆ ತೆಗೆದುಕೊಂಡು ಹೋಗಲು ರಾವಣನು ಆಜ್ಞೆ ಮಾಡುತ್ತಾನೆ.

ಇದು ಯುದ್ಧದಲ್ಲಿ ನಿಂತ ರಾವಣನ ಕಡೆಯ ನಿಲವು. ಬಹು ಚಮತ್ಕಾರವಾಗಿ ಇದನ್ನು ರಾಮ ರಾವಣರ ಯುದ್ಧ ರಾಮ ರಾವಣರಂತಿತ್ತು ಎಂದು ಆಲಂಕಾರಿಕವಾಗಿ ವರ್ಣಿಸಿರುವುದುಂಟು. ಕಟ್ಟಕಡೆಗೆ ಬ್ರಹ್ಮಾಸ್ತ್ರ ಪ್ರಯೋಗ ಆಗುತ್ತದೆ. ಆ ಬಾಣ ವಜ್ರದಂತೆ, ಸಾವಿನಂತೆ ರಾವಣನನ್ನು ತಿವಿಯಲು ರಾವಣನು ಕೆಳಗೆ ಬೀಳುತ್ತಾನೆ. ರಾಮನು ಉಪಯೋಗಿಸಿದ ಇತರ ಅನೇಕ ಮಹಾಸ್ತ್ರಗಳಂತೆ ಆ ಬಾಣ ಪುನಃ ರಾಮನ ಬತ್ತಳಿಕೆಗೆ ಬಂದು ಸೇರಿಕೊಳ್ಳುತ್ತದೆ. 'ಕೃತಕರ್ಮಾ

ನಿಭೃತವತ್ ಸ್ವತೂಣೀಂ ಪುನರಾಗಮತ್'. (ತನ್ನ ಕಾರ್ಯವನ್ನು ನೆರವೇರಿಸಿದ ಮೇಲೆ ರಾಮನ ಬತ್ತಳಿಕೆಗೆ ಅದು ಬಂದು ಸೇರುತ್ತದೆ.)

* * *

ರಾಮಾಯಣದಲ್ಲಿ ಉದ್ದಕ್ಕೂ ಉಪಮಾಲಂಕಾರ ತುಂಬಿದೆ. ಹೋಲಿಕೆಗಳಿಗೆ ಇದು ಒಂದು ದೊಡ್ಡ ಚಿತ್ರಶಾಲೆ. ಮೋಡ, ಹೂಗಳು, ಆನೆ, ಕಾಡುಹಂದಿ, ನವಿಲು, ಬಲಾಕಪಂಕ್ತಿ, ಹಂಸೆ – ಸಾಮಾನ್ಯ. ಮತ್ತೆ ಮತ್ತೆ ಹರಿವ ನೀರಿನ ಮೇಲೆ ಕಿರು ಅಲೆಗಳು ಅಥವಾ ನೆರೆಗೊಂಡು ಹರಿಯುವ ಮಹಾನದಿಗಳು, ಸಮುದ್ರ, ನಕ್ಷತ್ರಗಳ ಚಲನೆಗಳು, ಗ್ರಹಣ – ಇನ್ನೂ ಎಷ್ಟೆಷ್ಟೋ ಹೋಲಿಕೆಗಳು ಬರುತ್ತವೆ. ಕೇವಲ ವರ್ಣನೆಗಾಗಿಯೊ ಅಲಂಕರಣಕ್ಕಾಗಿಯೊ ಅಲ್ಲ ; ಸದ್ಯದ ಕ್ರಿಯಾ ಭಾಗವಾಗಿ (Functional). ಹಿನ್ನೆಲೆಯಾಗಲಿ ಮಾನವ ಸನ್ನಿವೇಶವಾಗಲಿ ಆ ನೆಲಸನ್ನು ಬೆಳಗುತ್ತವೆ. ಕೈಕೆಯ ಎದುರಿಗೆ ದಶರಥನು ಹೊರಳಾಡುತ್ತ ರಾಮನನ್ನು ಗಡಿಪಾರು ಮಾಡುವ ಅಭಿಲಾಷೆಯನ್ನು ಒತ್ತಬೇಡವೆಂದು ಬೇಡುವ ಚಿತ್ರದಲ್ಲಿ ಅವಳು 'ಭೂತೋಪಹತಚಿತ್ತೇವ' ಕಾಣುತ್ತಾಳಂತೆ. 'ನಾನು ಇಂಥುದನ್ನು ಮಾಡೆಂದರೆ ಬೇರೆ ಒಂದು ಮಾತಾಡದೆ ರಾಮನು ಆಗಲಿ ಎನ್ನುತ್ತಾನೆ. ಆದರೆ ತಾನು ಹಾಗೆ ಮಾಡುವುದು ಸರಿಯಲ್ಲ' ಎಂದು ಹೇಳುತ್ತ –

ಅವಧ್ಯೋ ವಧ್ಯತಾಂ ಕೋವಾ ವಧ್ಯಃ ಕೋವಾ ವಿಮುಚ್ಯತಾಂ
ದರಿದ್ರಃ ಕೋವಾ ಭವತ್ವಾಢೋಃ ದ್ರವ್ಯವಾನ್ ವಾಪ್ಯಕಿಂಚನಃ

'ಕೊಲೆಗೆ ತಕ್ಕವನಲ್ಲದ ಯಾವನನ್ನಾದರೂ ಕೊಲ್ಲಲು ಬಯಸುವೆಯ? ಕೊಲೆಗೀಡಾದವನನ್ನು ಬಿಡಿಸೆನ್ನುವೆಯ? ಬಡವನನ್ನು ಐಶ್ವರ್ಯವಂತನಾಗಿ ಮಾಡೆಂದು ಬಯಸುವೆಯ? ಅಥವ, ಐಶ್ವರ್ಯವಂತನನ್ನು ಬಡವನನ್ನಾಗಿ ಮಾಡು ಎನ್ನುತ್ತೀಯ? – ಹೇಳು ಮಾಡುತ್ತೇನೆ :' ಎನ್ನುತ್ತಾನೆ. ತನ್ನ ಅಂತಃಪುರದಲ್ಲಿ ಸುಮಂತ್ರನು ರಾಮನನ್ನು ಕಂಡ ಚಿತ್ರ ಮನೋಹರವಾಗಿದೆ. ಬಹುಕಾಲದಿಂದ ಆಪ್ತನೂ ವಿಶ್ವಾಸಪಾತ್ರನೂ ಆದವನು ಸುಮಂತ್ರ. ಆದ್ದರಿಂದ ಅವನಿಗೆ ಒಳಕ್ಕೆ ಪ್ರವೇಶವಿರುತ್ತದೆ. ಚಿನ್ನದ ಮಂಚದ ಮೇಲೆ ಕಾಲುಚಾಚಿಕೊಂಡು ರಾಮನು ವಿಶ್ರಮಿಸುತ್ತಿದ್ದಾನೆ. ಚೆನ್ನಾಗಿ ಅಲಂಕೃತನಾಗಿದ್ದಾನೆ ('ಸು ಅಲಂಕೃತಂ'). ಹಾಸಿಗೆಯ ಮೇಲೆ ಬೆಳ್ಳಗಿನ ಬಟ್ಟೆ ಹಾಸಿದೆ. ಅವನ ಮೈಗೆ ರಕ್ತ ಚಂದನದ ಅನುಲೇಪನವಾಗಿದೆ.

ಅದರ ಪರಿಮಳ ಸುಖಾವಹ. ವರಾಹದ ಎಂದರೆ – ಕಾಡುಹಂದಿಯ – ನೆತ್ತರ ಬಣ್ಣದಂತೆ ಸ್ವಚ್ಛವಾಗಿ, ಕೆಂಪಾಗಿ ಇತ್ತಂತೆ ಆ ಬಣ್ಣ :

ವರಾಹರುಧಿರಾಭೇಣ ಶುಚಿನಾಚ ಸುಗಂಧಿನಾ
ಅನುಲಿಪ್ತಂ ಪರಾರ್ಧ್ಯೇನ ಚಂದೇನ ಪರಂತಪಂ

ಎಂಬುದು ವರ್ಣನೆ. ಇವು ರಾಮನ ಲಕ್ಷಣಗಳನ್ನು ಹೆಚ್ಚಿಸಿ ತೋರಿಸುತ್ತವೆ. ಬಳಿಯಲ್ಲಿ ಕುಳಿತು 'ವಾಲವ್ಯಜನ ಹಸ್ತಯಾ' – ಕೈಯಲ್ಲಿ ಚಾಮರ ಹಿಡಿದು ಸೀತೆ ಇದ್ದಳಂತೆ : ಚಿತ್ರಾ ನಕ್ಷತ್ರದೊಡನಿರುವ ಚಂದ್ರನ ಹಾಗೆ – 'ಚಿತ್ರಯಾಶಶಿನಂ ಯಥಾ....' ಇನ್ನೊಂದು ಸಂದರ್ಭದಲ್ಲಿ ವರ್ಣನೆ ಹೀಗೆ : ಸೀತೆ ರಾಮನೊಡನೆ ಹೋಗುವುದೆಂದು ತೀರ್ಮಾನವಾಗಿದೆ. ಅವಳು ಉಡಲು ಒಂದು ನಾರು ಸೀರೆಯನ್ನು ತರುತ್ತಾರೆ. ಅದನ್ನು ಹೇಗೆ ಉಡುವುದು ಎಂಬುದು ಸೀತೆಗೆ ತಿಳಿಯದು. ಆಗ ಆಕೆ ಆ ವಸ್ತ್ರದ ನೇಯ್ಗೆಯ ಕಡೆಗೆ ನೋಡುತ್ತ ದೊಡ್ಡದಾದ ತನ್ನ ಕಣ್ಣನ್ನು ತೆರೆದ ಜಿಂಕೆಯಂತೆ ಕಾಣಿಸುತ್ತಿದ್ದಳಂತೆ. ಸದ್ಯದ ಆಕೆಯ ಸ್ಥಿತಿಯ ಸಂಕೇತವಾಗಿ ಬಲೆಬಲೆಯಾದ ಆ ಬಟ್ಟೆ ಕಾಣಿಸುತ್ತಿದ್ದಿರಬೇಕು. ಮುಂದೆ ಆಕೆಗೆ ಒದಗಬೇಕಾದ್ದನ್ನೆಲ್ಲ ಕಾಣಿಸುವಂತೆ ಇದೆ ಹೋಲಿಕೆ. ಜಿಂಕೆಗಳ ಪ್ರಪಂಚದಲ್ಲಿ ಬದುಕು ಯಾವ ಸ್ಥಿತಿ, ಸನ್ನಿವೇಶದ್ದು ಎಂಬುದನ್ನು ಕಾಣಿಸುವಂಥಾದ್ದು. ಬೇಟೆಗಾರರು ಬೀಸುವ ಬಲೆಗಳಲ್ಲಿ ಅನಿವಾರ್ಯವಾಗಿ ಅವು ಹೇಗೆ ಸಿಕ್ಕಿಬೀಳುತ್ತವೆ ; ಎಷ್ಟು ಅಸಹಾಯಕವಾಗಿ, ತಪ್ಪಿಸಿಕೊಳ್ಳಲಾಗದಂತೆ, ಅವುಗಳ ಕತೆ ಮುಗಿದಂತೆ ಎಂಬಂತೆ. ವಿಧಿ ಹರಡಿದ ಜಾಲದಂತೆ ಮನುಷ್ಯರು ಸಿಕ್ಕಿಕೊಳ್ಳುವುದಕ್ಕೂ ಇದು ಸಂಕೇತವೇ. ಪಾಪ, ಸೀತೆಗೆ ಆ ಬಟ್ಟೆಯನ್ನುಟ್ಟುಕೊಳ್ಳುವುದು ತಿಳಿಯದು. ಕುಶಲತೆ ಇಲ್ಲದ ಕಾರಣ ನಾಚಿಕೊಳ್ಳುತ್ತಾಳಂತೆ ('ವ್ರೀಡಿತೆ'). ಆಗ ಬೇಗ ಅಲ್ಲಿಗೆ ರಾಮನು ಬಂದು ಆಕೆಗೆ ಸಹಾಯಮಾಡಬೇಕಾಯಿತು.... ತಾಯಿ ಮಗ ಎಂದರೆ ಕೌಸಲ್ಯೆ, ರಾಮ. ವನವಾಸಕ್ಕೆ ಮುಂಚೆ ಅಗಲಬೇಕಾಗಿ ಬಂದಾಗ ಅನೇಕ ಬಾರಿ ಬರುವ ಹೋಲಿಕೆಗಳು ಅತೀವ ಪ್ರೀತಿಯವು. ಆಕೆಯ ಕಣ್ಣಿಂದ ರಾಮನು ಕಾಣಿಸದೆ ಹೋಗುತ್ತಿದ್ದಾನೆ. ಈ ದೃಶ್ಯವನ್ನು ಅವನು ನೋಡಿದಾಗ, ಜನ ತಂಡತಂಡವಾಗಿ ಅವನನ್ನು ಹಿಂಬಾಲಿಸುತ್ತಿದ್ದಾರೆ – ಕೂಗುತ್ತ ಕರೆಯುತ್ತ, ತಮ್ಮ ಪ್ರೀತಿಯನ್ನು ನಿವೇದಿಸುತ್ತ. ತಂದೆಯ ಸಂಕಟ ಕಾಣುತ್ತ ಅವನ ಕಣ್ಣಿಂದ ನೀರು ಸುರಿಯುತ್ತದೆ. ತಾಯಿ ಪ್ರಜ್ಞೆ ತಪ್ಪಿದ ಹಾಗೆ ಕಾಣುತ್ತಿತ್ತು. ಏರು ತಗ್ಗಿನ ನೆಲದ ಮೇಲೆ ದಾರಿಯಲ್ಲಿ ಅಡೆತಡೆ ದಾಟಿಕೊಂಡು ನೋಡಿದರೆ ಹಾರುತ್ತ ಬರುತ್ತಿದ್ದ ಆಕೆ ನರ್ತಿಸುವಂತಿತ್ತು ಎಂದು ಕವಿ ವಿಚಿತ್ರವಾಗಿ ಆ ಸ್ಥಿತಿಯನ್ನು ವರ್ಣಿಸುತ್ತಾನೆ... ಕಪ್ಪನೆಯ ರಾಕ್ಷಸ

ರಾವಣನು ಸೀತೆಯನ್ನು ಬಲವಾಗಿ ಎತ್ತಿಕೊಂಡು ಹೋಗುತ್ತಿರುವಾಗ ಮಿಂಚು ಉರಿಸುವ ಮೋಡದಂತೆ ಕಾಣುತಿದ್ದಾನೆಂದಿದೆ. ಚಿತ್ರ ಸ್ಫುಟ ; ಆದರೆ ವಿಧಿದ್ಯೋತಕ. ಮೋಡ ಸಹಜವಾಗಿ ತಾನು ಹೊತ್ತ ನೀರನ್ನು ಸುರಿದು ಕೊಡಬೇಕು. ಮಿಂಚು ಅದನ್ನು ಉರಿಸಿ ಇಲ್ಲವಾಗಿಸುತ್ತದೆ. ಲಕ್ಷ್ಮಣನ ಕೈಯಲ್ಲಿ ಇಂದ್ರಜಿತು ಹತನಾದನೆಂಬ ಸುದ್ದಿ ರಾವಣನ ಕಿವಿಗೆ ಬಿದ್ದಾಗ ರಾವಣನ ಆಕೃತಿ ಭಯಂಕರವಾಗುತ್ತದೆ. ಕಣ್ಣುಗಳು ಕೆಂಪಗೆ ಜ್ವಲಿಸುತ್ತವೆ. ಒಡಲು ಬಿಗಿಯಾಗುತ್ತದೆ. ಗಭೀರನಾಗಿ, ನಿರ್ಧರದಿಂದ ಕೂಡಿದ ಹಾಗೆ ಕಾಣುತ್ತಾನೆ. ಕಣ್ಣೀರು ಉದುರುತ್ತವೆ. ಉರಿಯುತ್ತಿರುವ ದೀಪದ ಜ್ವಾಲೆಯಿಂದ ತೊಟ್ಟಿಕ್ಕುವ ಕೆಂಪನೆಯ ಎಣ್ಣೆಯ ಬಿಂದು ಕಿಡಿಯಂತೆ ಬೀಳುತ್ತದೆ... ರಾವಣನ ಅಂತಃಪುರದ ಚಿತ್ರಗಳೂ ವಿಕೃತ ಆಕಾರದ ರಾಕ್ಷಸಿಯರು ಸುತ್ತಿಕೊಂಡು ಅವರ ಮಧ್ಯೆ ಕಾಣುವ ಸೀತೆಯೂ ಅಥವಾ ಮಂಡೋದರಿಯ ಮಹಾವಿಲಾಪವೂ ನಿರಂತರವಾಗಿ ಉಳಿಯುವ ಸ್ಮೃತಿಚಿತ್ರಗಳು. ಸೀತೆಯ ಚಿತ್ರ ಹೀಗಿದೆ :

ಹಿಮಹತನಲಿನೀವ ನಷ್ಟಶೋಭಾ
ವ್ಯಸನ ಪರಂಪರಯಾತಿಪೀಡ್ಯಮಾನಾ
ಸಹಚರ ರಹಿತೇವ ಚಕ್ರವಾಕೀ
ಜನಕಸುತಾ ಕೃಪಣಾಂ ದಶಾಂ ಪ್ರಪನ್ನಾ

(ಹಿಮ ಬಡಿದ ತಾವರೆಯಂತೆ ಆಕೆಯ ಕಾಂತಿ ನಷ್ಟವಾಗಿದೆ. ವ್ಯಸನ ಪರಂಪರೆಯಿಂದ ಬಹುವಾಗಿ ಪೀಡಿತಳಾಗಿ ಜೊತೆ ಗಂಡು ಹಕ್ಕಿಯಿಲ್ಲದ ಚಕ್ರವಾಕಿಯಂತೆ ಜನಕಸುತೆ ಕರುಣಾಜನಕ ಸ್ಥಿತಿಯಲ್ಲಿದ್ದಳು.)

ನೆಲದ ಮೇಲೆ ಬಿದ್ದ ವಾಲಿಯನ್ನು ಕಂಡ ತಾರೆಯ ರೋದನ ದೀನವಾದುದು... ಹಾಗೆ ಕಾಲಂದುಗೆ, ರುಳಿ ಕೈಬಳೆಗಳ ಸದ್ದು, ಸಂಗೀತದ ನೃತ್ಯದ ಧ್ವನಿಗಳು ಸುಗ್ರೀವನ ಅರಮನೆಯಲ್ಲಿ ವಾನರ ಸ್ತ್ರೀಯರ ಗುಂಪುಗಳ ಸಡಗರದಲ್ಲಿ ಕೇಳಿಸುತ್ತಿದ್ದವು. ಲಕ್ಷ್ಮಣನು ಪ್ರವೇಶ ಮಾಡುತ್ತಿರುವಾಗ ಸುಗ್ರೀವನು ರುಮೆಯನ್ನು ತಬ್ಬಿಕೊಂಡಿದ್ದಾನೆ. ತಾರೆಯ ಚಿತ್ರ ತಾನೆ ಏನು ? ಆಗ ತಾನೇ ಅವಳು ಸುಗ್ರೀವನ ಸಂಗವನ್ನು ಬಿಟ್ಟು ಬಂದಿದ್ದಳು ! 'ಮದವಿಹ್ವಲಾಕ್ಷೀ ಪಾನಯೋಗಾತ್ ವಿನಿವೃತ್ತ ಲಜ್ಜಾ' – ಅಧಿಕವಾಗಿ ಪಾನ ಮಾಡಿದ್ದುದನ್ನು ಆಕೆಯ ಕಣ್ಣು ಕಾಣಿಸುತ್ತಿದ್ದವು ; ಯಾವ ಲಜ್ಜೆಯೂ ಕಾಣುತ್ತಿರಲಿಲ್ಲ. ಲಕ್ಷ್ಮಣನನ್ನು ಕಂಡು ಅವನ ಕೋಪವನ್ನು ಕಡಮೆ ಮಾಡುವುದಕ್ಕಾಗಿ ಆಕೆ ಬಂದಿದ್ದಳು ;– ಮರ್ಯಾದೆಯಿಂದ ಸುಗ್ರೀವನ ಪರವಾಗಿ ಸಮಾಧಾನದ ಮಾತುಗಳನ್ನು ಅವನಿಗೆ

ಹೇಳುವುದಕ್ಕೆ. ಈ ಪ್ರಸಂಗ ಆಕೆಯ ಶೀಲ, ವ್ಯಕ್ತಿತ್ವ ಎರಡನ್ನೂ ರೂಪಿಸುತ್ತದೆ.... ವಾನರರು ಅನ್ನಾಹಾರಗಳನ್ನು ಹುಡುಕುತ್ತ ಹೋಗಿ ಇಂದ್ರಜಾಲದಂತೆ ಕಂಡ ಸೌಂದರ್ಯ, ಸಂಪತ್ತನ್ನೂ ವಿಪುಲತೆಯನ್ನೂ ಕಾಣುವ ಮುಂಚೆ ಸ್ವಯಂಪ್ರಭೆಯ ಗುಹೆಯ ಬಿಲವನ್ನು ಪ್ರವೇಶಮಾಡಿ ಹೋಗುವಾಗ ಒಬ್ಬರನ್ನೊಬ್ಬರು ಹಿಡಿದಿದ್ದರು; ಒಬ್ಬರ ಹಿಂದೆ ಒಬ್ಬರು ; ಒಂದು ಯೋಜನದಷ್ಟು ದೂರ. ವಯಸ್ಸಾದ ತಪಸ್ವಿನಿಯ ಕಾಣ್ಕೆ ಅವರನ್ನು ಹಟಾತ್ತಾಗಿ ಗಂಭೀರಗೊಳಿಸುತ್ತದೆ. ಸುತ್ತಲೂ ಉಪವನ ಭೂಮಿ. ಚಿಗಿವ ನೀರಿನ ಒರತೆಗಳು, ತಿಳಿನೀರಿನ ಕೊಳಗಳು, ಹೊಮ್ಮೀನು, ಆಭರಣ ಮತ್ತು ರತ್ನಗಳ ರಾಶಿ – ಅಲಿಬಾಬನ ಭಂಡಾರದಲ್ಲಿ ಇದ್ದಿತೆಂದು ವರ್ಣಿತವಾದ ಸಂಪತ್ತಿಗಿಂತ ಅಧಿಕವಾದ್ದು, ಅಥವಾ ಮಾಂಟೆ ಕ್ರಿಸ್ಟೊ ಗುಹಾಮಂದಿರದ ಸಂಪತ್ತನ್ನೂ ಏಡಿಸುವಷ್ಟು ಮೋಹಕವಾದ್ದು ; ಇದನ್ನೆಲ್ಲ ಕವಿ ವರ್ಣಿಸತ್ತ ಸಂತೋಷಪಟ್ಟಿರಬೇಕು. ಹಿಂದಕ್ಕೆ ಬರುವಾಗ ಸ್ವಯಂಪ್ರಭೆಯ ಆಜ್ಞೆಗೆ ವಿಧೇಯರಾಗಿ – ಸುಕುಮಾರಾಂಗುಲಿಃ! – ಸುಕುಮಾರವಾದ ತಮ್ಮ ಕೈಬೆರಳುಗಳಿಂದ ಆಕೆ ನಿರ್ದೇಶಿಸಿದಂತೆ ಕಣ್ಣು ಮುಚ್ಚಿಕೊಂಡು ಹೊರಗೆ ಬರುತ್ತಾರೆ. ಕಣ್ತೆರೆದು ನೋಡಿದರೆ – ಆಕೆ ಹೇಳಿದ್ದಳು – ಜೀವದೊಡನೆ ಯಾರೂ ಹಿಂದಿರುಗಲಾರಿರಿ ಎಂದು. ತುಂಬ ಧೈರ್ಯಶಾಲಿಗಳಾದ ಅವರು ಭಯದಿಂದ ನಡೆದುಕೊಳ್ಳುತ್ತಾರೆ – ಹನುಮಂತನು ಎಷ್ಟು ಹೇಳಿ ಸಲಹೆ ಕೊಟ್ಟರೂ ಎಚ್ಚರಿಕೆ ಕೊಟ್ಟರೂ ಕೇಳದೆ ವಿಷಣ್ಣವಾದ ವಾನರವರ್ಗ ಅಂಗದನ ನಾಯಕತ್ವದಲ್ಲಿ ತಾವು ಪ್ರಾಯೋಪವೇಶ ಮಾಡುತ್ತೇವೆಂದು ನೆಲದ ಮೇಲೆ ಮಲಗಿ ಅಳುತ್ತ ಗೋಳಾಡುತ್ತ ಅಂಗದನಿಗೆ ಸಹಾನುಭೂತಿ ತೋರಿಸುತ್ತ ಬೀಳುವ ದೃಶ್ಯವೂ ನಮ್ಮ ಮನಸ್ಸನ್ನು ವಶಪಡಿಸಿಕೊಳ್ಳುತ್ತದೆ. ಸಾಲುಸಾಲಾಗಿ ನಿಶ್ಚೇಷ್ಟವಾಗಿ ಉದ್ದಕ್ಕೆ ನೆಲದ ಮೇಲೆ ಬಿದ್ದಿರುವ ಈ ವಾನರ ವರ್ಗವನ್ನು ವೃದ್ಧ ಸಂಪಾತಿ ವೀಕ್ಷಿಸಿದಾಗ ತುಂಬಾ ತೃಪ್ತಿ, ಸಂತೋಷ ಆಯಿತಂತೆ ! ಆಹಾರಕ್ಕಾಗಿ ಹಾರಾಡಿ ನೇರವಾಗಿ ತಾನು ಹೋಗುವ ಅಗತ್ಯವಿಲ್ಲದೆ ಅಶಕ್ತನಾಗಿರುವಾಗ ಇದು ದೇವರೇ ತನ್ನ ಬಳಿ ಕಳಿಸಿದ ಭೋಜ್ಯವಾಗಿ ತಂದು ಕೊಟ್ಟಂತಾಗಿತ್ತಂತೆ... ಹನುಮಂತನು ತಾನು ಸಮುದ್ರವನ್ನು ದಾಟಿ ಹೋಗಬಲ್ಲವನು. ಮಾತಾಡದೆ ಮೌನವಾಗಿ ಕುಳಿತಿದ್ದ. ಅವನನ್ನು ಬೇಡಿದಾಗ ಆ ಕಾರ್ಯವನ್ನು ಮಾಡಲು ಒಪ್ಪಿ ಕೈಕೊಂಡ. ಗಾತ್ರದಲ್ಲಿ ಉಬ್ಬಿ ಮಹೇಂದ್ರ ಪರ್ವತದ ಮುಡಿಗೆ ಏರಿ ಶರೀರವನ್ನು ನಿಡಿದು ಮಾಡಿಕೊಂಡು ಸಾಗರ ಲಂಘನಕ್ಕೆ ತಿದ್ದಿಕೊಂಡ ಶಕ್ತಿ ಚೈತನ್ಯ ಮತ್ತು ಆಕೃತಿಗಳ ದೃಶ್ಯ ಒಂದು ಮಹಾರೂಪಣ. ಅವುಗಳ ವರ್ಣರಂಜನೆ ತೊಳಗಿ

ಬೆಳಗುತ್ತದೆ.

ಮಾನವಸ್ವಭಾವದ ಲಕ್ಷಣಗಳನ್ನು ತೋರಿಸುವ ಎರಡು ನಿದರ್ಶನಗಳನ್ನು ಇಲ್ಲಿ ಕೊಡಬಹುದು :

(i) ದಶರಥನ ಪುತ್ರ ಕಾಮೇಷ್ಟಿ ಯಾಗದಲ್ಲಿ ಲೆಕ್ಕವಿಲ್ಲದಷ್ಟು ಮಂದಿ ಬ್ರಾಹ್ಮಣರು ನೆರೆದಿದ್ದರು. ಅನ್ನ, ಆಹಾರ, ಸನ್ಮಾನದ ಕೊಡುಗೆ ಅವರನ್ನು ತೃಪ್ತಿಪಡಿಸಿತ್ತು. ವಾಸಕ್ಕೆ ಅವರಿಗೆಲ್ಲ ಯೋಗ್ಯವಾದ ಸ್ಥಳ ಗೊತ್ತುಮಾಡಿದ್ದರು. ರಾಜನು ವಿಶೇಷವಾಗಿ ನಿರ್ದೇಶ ಮಾಡಿದ್ದಂತೆ ಅವರಿಗೆ ಬೇಕಾಗುವುದನ್ನೆಲ್ಲ ಮಾಡುವಂತೆ ಮಾಡಿದ್ದರು. ಒಂದನ್ನೂ ವಿನೋದದಂತೆಯೊ ವಿಲಾಸದಂತೆಯೊ ಹಗುರಾಗಿ ಮಾಡತಕ್ಕದಲ್ಲ ಎಂದು ನಿರ್ಣಯವಾಗಿತ್ತು. ಎಲ್ಲ ವರ್ಣಗಳ ಎಲ್ಲರನ್ನೂ ನೋಡಬೇಕಿತ್ತು. ದಕ್ಷಿಣದ ಯಾವ ರಾಜರು ಅಲ್ಲಿಗೆ ಹೋಗಿದ್ದರೊ ಗೊತ್ತಿಲ್ಲ. ಆದರೆ ದಾಕ್ಷಿಣಾತ್ಯರನ್ನೂ ಅಲ್ಲಿಗೆ ಆಹ್ವಾನಿಸಲಾಗಿತ್ತು.[೩] ಬಡಿಸಿದ ಭೋಜ್ಯಗಳು ಪುಷ್ಕಳವಾದವು. ಅಡುಗೆ ಮೇಲ್ತರದ್ದು. ತೃಪ್ತಿ ತರುವಂತೆ ಬಡಿಸಿದ್ದರು. ಬಡಿಸಿದವರು ಒಳ್ಳೆಯ ಬಟ್ಟೆಗಳನ್ನು ಧರಿಸಿದ್ದರು ; ಒಡವೆಗಳನ್ನು ಹಾಕಿಕೊಂಡಿದ್ದರು. ಊಟ ಮಾಡುತ್ತಿರುವಂತೆ ಬ್ರಾಹ್ಮಣರು ತರ್ಕವಾದಗಳಲ್ಲಿಯೂ ಶ್ಲೋಕಗಳನ್ನು ಹಾಡುವುದರಲ್ಲಿಯೂ ತೊಡಗಿದ್ದರು. ಒಬ್ಬರ ಮೇಲೊಬ್ಬರು ಜಯ ಗಳಿಸಬೇಕೆಂಬ ಮನಸ್ಸಿನಲ್ಲಿ ಅವರ ಮಾತು ಬೆಳೆಯುತ್ತಿದ್ದವು – 'ಪರಸ್ಪರ ಜಿಗೀಷಯಾ.' ಪಂಡಿತವರ್ಗಕ್ಕೆ ಇದು ಸಾಮಾನ್ಯ ಲಕ್ಷಣ. ಬಂದಿದ್ದವರಿಗೆಲ್ಲ ದೊಡ್ಡ ಕೊಡುಗೆಗಳನ್ನು ಕೊಟ್ಟಿದ್ದರು.[೪] ಕೋಟಿ ಸಂಖ್ಯೆಯ ಹೊನ್ನನ್ನು ಕೊಟ್ಟಿದ್ದರೂ – 'ಬಾಂಬೂನದಂ ಕೋಟಿ ಸಂಖ್ಯಾಂ ಬ್ರಾಹ್ಮಣೇಭ್ಯೋ ದದೌ' – ಒಬ್ಬ ಬ್ರಾಹ್ಮಣ ಒಂದು ಸಣ್ಣ ಪ್ರಾರ್ಥನೆ ಮಾಡುತ್ತಾನೆ. ದಶರಥನ ಹಸ್ತಾಭರಣವಾಗಿ ಮೋಹಕವಾದ ಯಾವುದೊ ತೊಡುಗೆ ಇತ್ತಂತೆ. ಅದು ಅವನ ಕಣ್ಣಿಗೆ ಬಡಿಯಿತು. ದಶರಥನು ಅದನ್ನು ಅವನಿಗೆ ತೆಗೆದುಕೊಟ್ಟ.

---

೩ ಆಮೇಲೆ ಬರುವ ಒಂದು ವರ್ಣನೆಯಲ್ಲಿ ದಾಕ್ಷಿಣಾತ್ಯರಿಗೆ ಹೂಗಳ ಪ್ರೀತಿ ಹೇಗಿತ್ತು; ಅದನ್ನು ಹೇಗೆ ತಲೆಯಲ್ಲಿ ಮುಡಿಯುತ್ತಿದ್ದರು ಎಂಬ ಚಿತ್ರವಿದೆ. ಉತ್ತರದಲ್ಲಿ ಉತ್ತಮ ಕುಲದ ಸ್ತ್ರೀಯರೂ ತಮ್ಮ ಜಡೆಮುಡಿಗೆ ಹೂಗಳಿಂದ ಸಿಂಗಾರ ಮಾಡಿಕೊಳ್ಳುವುದಿಲ್ಲ.

೪ ಮುಂದಿನ ಪ್ರಸಂಗದಲ್ಲಿ ಅವರಿಗೆ ಹಸುಗಳನ್ನು ಕೊಟ್ಟರೆಂದಿದೆ. ಅವುಗಳ ಕೊಂಬುಗಳಿಗೆ ಚಿನ್ನದ ತಗಡುಗಳನ್ನು ಹಾಕಿದ್ದರಂತೆ. ಹಸುಗಳೆಲ್ಲ ಬೇಕಾದಷ್ಟು ಹಾಲು ಕರೆಯುವ ಕಪಿಲೆಗಳು. ಹಸುಗಳ ಜೊತೆಗೆ ಕರುಗಳನ್ನೂ ಕೊಟ್ಟಿದ್ದರು. ಹಾಲು ಕರೆದು ಸಂಗ್ರಹಿಸಲು ಚಿನ್ನದ ಕೊಳಗಗಳನ್ನು ದಾನವಾಗಿ ಕೊಡುತ್ತಾರೆ.

(ii) ಕಾಡಿಗೆ ಹೋಗುವ ಮುಂಚೆ ರಾಮ ತನ್ನಲಿದ್ದ ಬೆಲೆಯುಳ್ಳ ವಸ್ತು ಸಾಮಗ್ರಿಗಳನ್ನೆಲ್ಲ ಋತ್ವಿಕ್ಕುಗಳಿಗೆ, ಸ್ನೇಹಿತರಿಗೆ, ಊರವರಿಗೆ, ಬಡವರಿಗೆ ಹಂಚಿದ. ಸೀತೆ ಲಕ್ಷ್ಮಣರಿಗೂ ಇದೇ ಸಲಹೆಯಿತ್ತ. ಲಕ್ಷ್ಮಣ ತನ್ನ ಗೆಳೆಯರಿಗೂ ಸೀತೆ ಚೇಟಿಯರಿಗೂ ಹಂಚುತ್ತಾರೆ. ಸುಮಾರು ಕಡೆಯ ಸಮಯದಲ್ಲಿ ತನ್ನಲ್ಲಿಗೆ ಒಬ್ಬ ಬ್ರಾಹ್ಮಣ ಬರುತ್ತಿರುವುದನ್ನು ರಾಮ ಕಂಡ. ಅವನ ಹೆಸರು ಗಾರ್ಗ್ಯ ತ್ರಿಜಟ. ಅವನ ಹೆಂಡತಿ ಅವನನ್ನು ದಾನಕ್ಕಾಗಿ ರಾಮನ ಬಳಿಗೆ ಕಳಿಸಿದ್ದಳು. ಐದು ಅಂಗಳಗಳನ್ನು ದಾಟಿ ರಾಮನ ಅರಮನೆಗೆ ಅವನು ಬರುವಾಗ ಯಾರೂ ಅವನನ್ನು ತಡೆದು ಅಡ್ಡಿಮಾಡಲಿಲ್ಲ. ರಾಮನ ಬಳಿಗೆ ಬಂದವಡನೇ 'ನಿರ್ಧನೊ ಬಹುಪುತ್ರೋಽಸ್ಮಿ' ಎಂದು ಹೇಳಿಕೊಳ್ಳುತ್ತಾನೆ. ಈ ಒಂದು ಸಲ ರಾಮನಿಗೆ ಸ್ವಲ್ಪ ವಿನೋದಬುದ್ಧಿ ಉಂಟಾಗುತ್ತದೆ. 'ನಿಮಗೆ ಒಂದು ಸಾವಿರ ಗೋಗಳನ್ನು ಕೊಡುತ್ತೇನೆಂದರೆ ಮಾತ್ರ ನನಗೆ ಸಂತೋಷವಾಗುವುದಿಲ್ಲ. ಒಂದು ವಿಧಾನವನ್ನು ಸೂಚಿಸುತ್ತೇನೆ – ನೀವು ಕೈಯಲ್ಲಿ ಹಿಡಿದಿರುವ ದಂಡವನ್ನು ಎಷ್ಟು ಬಲವಾಗಿ ಎಂದರೆ ದೂರವಾಗಿ ನನ್ನ ಹಸುಗಳ ಮಂದೆಯ ಮೇಲೆ ಎಸೆಯಿರಿ; ದಂಡವನ್ನು ಎಸೆದ ಮಿತಿಯೊಳಗೆ ಬರುವ ಎಲ್ಲ ಹಸುಗಳನ್ನೂ ನಿಮಗೆ ಕೊಡುತ್ತೇನೆ' – ಪರಿಕ್ಷಿಪಸಿ ದಂಡೇನ ಯಾವತ್ ತಾವತ್ ಅವಾಪ್ಸ್ಯಸಿ' ಎನ್ನುತ್ತಾನೆ. ಒಂದು ನೆಳಲಗೆರೆ ಹೆಚ್ಚು ಕಡಮೆಯಾಗದಂತೆ ಈ ಬ್ರಾಹ್ಮಣನ ವರ್ಣನೆ ಬರುತ್ತದೆ.

ಸ ಶಾಟೀಂ ತ್ವರಿತಃ ಸಂಭ್ರಾತಃ ಪರಿವೇಷ್ಟ್ಯತಾಂ
ಆವಿಧ್ಯ ದಂಡಂ ಚಿಕ್ಷೇಪ ಸರ್ವಪ್ರಾಣೇನ ವೇಗಿತಃ

(ಸೊಂಟಕ್ಕೆ ಧೋತ್ರವನ್ನು ಬಿಗಿದುಕೊಂಡು ತನ್ನ ಪೂರ್ಣಶಕ್ತಿಯಿಂದ ಬಲವಾಗಿ ತನ್ನ ಪ್ರಾಣವೆಲ್ಲ ಆ ವೇಗದಲ್ಲಿ ಸೇರುವಂತೆ ದಂಡವನ್ನು ಎಸೆಯುತ್ತಾನೆ.)

ಇದನ್ನು ಕಂಡು ರಾಮನಿಗೆ ಸ್ವಲ್ಪ ನಗೆ ಬರುತ್ತದೆ. ಆದರೆ ಬೇಗೆ ತನ್ನ ನಡವಳಿಕೆಯನ್ನು ಕುರಿತೇ ಅತೃಪ್ತಿ ಉಂಟಾಗಿ ತನ್ನ ಗ್ರಾಮ್ಯತನಕ್ಕೆ ಸಿಗ್ಗಾದನಂತೆ. ಇಂತಹ ಅಮರ್ಯಾದೆಗೆ ಬ್ರಾಹ್ಮಣನನ್ನು ಈಡುಮಾಡಿದ್ದಕ್ಕಾಗಿ ತನ್ನ ಮೇಲೆ ಕೋಪಮಾಡಿಕೊಳ್ಳಬಾರದೆಂದೂ ಏನೊ 'ತಮಾಷೆಗೆಂದು ಹೀಗೆ ಮಾಡಿದೆ, 'ಮನ್ಯುಃ ನಖಲು ಕರ್ತವ್ಯಃ ಪರಿಹಾಸೋಹಿ ಅಯಂ ಮಮ' ಎಂದವನೇ 'ನಿಮಗೆ ಬೇಕಾದ ಏನನ್ನಾದರೂ ಕೇಳಿ, ಕೊಡುತ್ತೇನೆ' – ಎನ್ನುತ್ತಾನೆ. ಮುನಿ ಇನ್ನೇನೂ ಬೇಕಾಗಿಲ್ಲವೆಂದು ಹೇಳಿ ತೃಪ್ತಿಯಿಂದ ಹೊರಟು ಹೋಗುತ್ತಾನೆ....

ಕೋಪಗೃಹದಲ್ಲಿ ಕೈಕೆ ತಾನು ಹಾಕಿದ ನಿರ್ಬಂಧ ಸಮಯಗಳ ಹೊರತು ಸಮಾಧಾನಗೊಳ್ಳುವುದಿಲ್ಲವೆಂಬ ಚಿತ್ರ ಪೂರ್ತಿಯಾಗಿ ರೂಪಗೊಂಡಿದೆ. ಅನೇಕ ಉಪಮಾನಗಳನ್ನು ಕವಿ ಇಲ್ಲಿ ಬಳಸುತ್ತಾನೆ. ಆ ದಿನವೇ ರಾಜ್ಯಾಭಿಷೇಕ ನಡೆದು ಹೋಗಲಿರುವುದರಿಂದ ಮಂಥರೆ ಹೇಳಿದಂತೆ ಒಡನೆಯೇ ತನ್ನ ಸಮಯಗಳನ್ನು ನೆರವೇರಿಸಬೇಕೆಂದು ಕೇಳು ಎಂದು ತಿಳಿಸಿದ್ದಾಳೆ. ನೀರೆಲ್ಲ ಹರಿದು ಹೋದ ಮೇಲೆ ನದಿಗೆ ಸೇತುವೆ ಕಟ್ಟಿ ಏನು ಪ್ರಯೋಜನ ಎಂದಿದ್ದಳು. ಆ ಮುದಿಗೊಡ್ಡು ಕೈಕೆಗೆ ಬಹು ಚೆಲುವಾಗಿ ಕಂಡಿದ್ದಳು ! ಒಟ್ಟು ಒಂದು ಸರ್ಗದ ಬಹುಭಾಗವನ್ನು ಬಳಸಿ ಅವಳನ್ನು ಮೆಚ್ಚಿಕೊಂಡಿದ್ದಳು. ಅವಳು ಹೇಳಿಕೊಟ್ಟುದನ್ನೆಲ್ಲ ಮಾಡುತ್ತೇನೆಂದು ಮಾತುಕೊಟ್ಟಳು. ಮಾಸಿದ ಬಟ್ಟೆ ಉಟ್ಟು ಏಕವೇಣಿಯಾಗಿ ಕ್ರೋಧಾಗಾರವನ್ನು ಪ್ರವೇಶ ಮಾಡುತ್ತಾಳೆ. ಈ ಮುಂಚೆ ಕವಿ ಅವಳನ್ನು 'ಅಪಥಗಾ ಕಿಶೋರೀ' ಎಂದು ವರ್ಣನೆ ಮಾಡಿರುತ್ತಾನೆ.

ದಶರಥನು ಅವಳನ್ನು ಕಾಣುವುದು ಈ ಸ್ಥಿತಿಯಲ್ಲಿ. ಹರ್ಷದ ಸುದ್ದಿಯನ್ನು ತಿಳಿಸುವುದಕ್ಕಾಗಿ ದಶರಥನು ಕೈಕೆಯ ಬಳಿಗೆ ಬಂದಿದ್ದುದು. ಇದನ್ನು ಕೇಳಿ ಅವಳಿಗೆ ಸಂತೋಷವಾಗುತ್ತದೆಂದು ಎಣಿಸಿದ್ದನು. ಆ ಭರವಸೆ, ನಿರೀಕ್ಷೆ ಅವನಿಗೆ ಸರ್ವಥಾ ಇತ್ತು. ಭರತನನ್ನು ಎಷ್ಟು ಪ್ರೀತಿಸುತ್ತಿದ್ದಳೊ ಅಷ್ಟೇ ಪ್ರೀತಿ ರಾಮನಲ್ಲಿಯೂ ಆಕೆಗಿತ್ತು. ಭರತನು ಎಷ್ಟು ಪ್ರೀತಿ ಗೌರವಗಳನ್ನು ಕೈಕೆಯಲ್ಲಿಟ್ಟುಕೊಂಡಿದ್ದನೊ ಅಷ್ಟೇ ಪ್ರೀತಿ ಗೌರವಗಳು ರಾಮನಿಗೆ ಅವಳಲ್ಲಿದ್ದವು ಎಂಬುದು ಅವನ ನಂಬಿಕೆ. ಮನುಷ್ಯನನ್ನು ಸಂತೋಷಪಡಿಸತಕ್ಕವು ಏನೇನು ಬೇಕೊ ಅವೆಲ್ಲ ಅವಳ ಅರಮನೆಯಲ್ಲಿದ್ದು ಚೆಲುವಾಗಿ ಕಾಂತಿಯಿಂದ ಮೆರೆಯುತ್ತಿತ್ತು. ಅವಳು ಕೋಪಗೃಹಕ್ಕೆ ಹೋಗಿದ್ದಾಳೆ ಎಂದು ಕೇಳಿ ಅಲ್ಲಿಗೆ ಹೋದ. ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಅವನು ಪ್ರೀತಿಸುತ್ತಿದ್ದ ಹೆಂಡತಿ ಅವಳು. ಆಗ ಭೂತ ಹಿಡಿದಿದ್ದ ಹಾಗೆ ಅವಳು ಬಿದ್ದಿದ್ದಳು....

* * *

ಅಯೋಧ್ಯಾನಗರ ಹೇಗೆ ರಚಿತವಾಗಿತ್ತು, ಅಲ್ಲಿನ ಜನಜೀವನ ಹೇಗೆ ವ್ಯಕ್ತಗೊಳ್ಳುತ್ತಿತ್ತು ; ಉಪವನಗಳು, ಚಿಗಿವ ನೀರಿನ ಚಿಲುಮೆಗಳು, ಪಾನದ ಕಟ್ಟೆಗಳು, ಹೂವಿನ ಪೇಟೆಗಳು, ವೇಶ್ಯಾವಾಟಿಗಳು ಊರ ತುಂಬ ಇದ್ದು, ಊರ ಸಿಂಗಾರವನ್ನೂ ಜನದ ಜೀವನ ಸಂಪನ್ನತೆಯನ್ನೂ ವ್ಯಕ್ತಪಡಿಸುತ್ತಿದ್ದವು ಎಂಬುದು ವರ್ಣಿತವಾಗುತ್ತದೆ. ಮಾರನೆಯ ದಿನ ಬೆಳಿಗ್ಗೆ ರಾಮನನ್ನು ಯುವರಾಜನನ್ನಾಗಿ ಮಾಡಲಾಗುವುದೆಂದು ದಶರಥನು ಸಾರಿಸಿದ್ದ. ಸಾರ್ವಜನಿಕ

ಸಭೆಗಳು, ಗೃಹಸ್ಥರ ಮನೆಗಳು, ಬೀದಿಗಳು, ಮನೆಯ ಗೋಡೆಗಳು, ಉಪ್ಪರಿಗೆಗಳು ಎಲ್ಲವನ್ನೂ ಬಗೆಬಗೆಯಾಗಿ ಸಿಂಗಾರ ಮಾಡಿದ್ದರು. ಚೊಚ್ಚಿಲ ಮಗುವನ್ನು ಹೆತ್ತ ತಾಯಿ ಸಂತೋಷದ ಈ ಸಮಯದಲ್ಲಿ ತಾನು ಹೆತ್ತ ಮಗುವನ್ನೂ ಮರೆತಿದ್ದಳಂತೆ ! ಕೌಸಲ್ಯೆಯ ಅರಮನೆಯಲ್ಲಿ ಎಷ್ಟೋ ಬಗೆಯ ಪೂಜೆ ; ಆರಾಧನೆ ; ದಾನಧರ್ಮ.[೫]

ಅಯೋಧ್ಯಾನಗರವನ್ನು ಹೇಗೆ ನಿರ್ಮಿಸಿಕೊಂಡಿದ್ದರು, ಎಲ್ಲ ವರ್ಗ ವೃತ್ತಿಗಳವರ ಜೀವನ ಅಲ್ಲಿ ಹೇಗೆ ಸುವ್ಯವಸ್ಥಿತವಾಗಿತ್ತು ಎಂಬುದನ್ನು ಹಿಂದೆಯೇ ತಿಳಿಸಿದೆ. ಭರತನನ್ನು ಚಿತ್ರಕೂಟಕ್ಕೆ ಕರೆದುಕೊಂಡು ಹೋಗುವಾಗ ಮಾಡಿದ ಏರ್ಪಾಡುಗಳು ಲೋಕೋಪಯೋಗಿ ಕಾರ್ಯಗಳ ಬೆಳವಣಿಗೆಯಲ್ಲಿ ನಗರ ರಚನೆಗೆ ಸಂಬಂಧಿಸಿದಂತೆ ಉನ್ನತವಾದ ಒಂದು ಮಜಲನ್ನು ತೋರಿಸುತ್ತದೆ. ಅಧಿಕಾರಿಗಳು ಹೊಸತಾಗಿ ರಸ್ತೆಗಳನ್ನು ಹಾಕಿದರು. ಆನೆಗಳು, ರಥಗಳು, ಸೈನ್ಯ, ಕುದುರೆ, ಸಿಬ್ಬಂದಿಯ ಜನ, ಅವನೊಡನೆ ಹೊರಟ ಮುಖ್ಯ ಮಂದಿಯನ್ನೆಲ್ಲ ಸುಖವಾಗಿ ಕರೆದುಕೊಂಡು ಹೋಗಲು ಕಲ್ಪಿಸಿದ್ದ ಸೌಕರ್ಯಗಳು ವಿವರವಾಗಿವೆ. ಮಾತೃವರ್ಗದ ರಾಣಿಯರು ಶಿಬಿಕೆಗಳಲ್ಲಿ ಹೊರಟಿದ್ದರು. ರಾಮನನ್ನು ಹಿಂತಿರುಗಿಸಿ ಕರೆದುಕೊಂಡು ಬರಲು ಕೈಕೆಯೂ ಸೇರಿ ಮೂವರು ತಾಯಿಯರೂ ಸಂತೋಷವಾಗಿ ಹೋಗಿದ್ದರೆಂದಿದೆ. ಈ ಹೊತ್ತಿಗೆ ಕೈಕೆ ಸಾಧುವಾಗಿರುತ್ತಾಳೆ. ತಂಡದೊಡನೆ ತಾನೂ ಹೋಗುತ್ತಾಳೆ. ನಗರ ನಗರವೇ ಪ್ರಯಾಣಕ್ಕೆ ಹೊರಟಂತಿದೆ: 'ಪ್ರತಿಯಯುರ್ ಹೃಷ್ಟಾಃ ಸರ್ವಾಃ ಪ್ರಕೃತಯಃ.' ಸ್ವರ್ಣಕಾರರು, ರತ್ನಗಂಬಳಿ ಮಾಡುವವರು, ಸಂವಾಹಕರು, ವೈದ್ಯರು, ಸುಗಂಧಕಾರರು, ಮದ್ಯಕಾರರು, ಅಗಸರು, ಚಿಪ್ಪಿಗರು, ಗೊಲ್ಲರು, ದೋಣಿ ನಡಸುವವರು, ತಮ್ಮ ತಮ್ಮ ಹೆಣ್ಣುಗಳೊಡನೆ ನರ್ತಕರು ಎಲ್ಲ ಹೊರಟಿದ್ದರು. ವೇದಪಾರಂಗತರು ಶುಭ್ರವಾದ ಅಚ್ಚುಕಟ್ಟಾದ ಬಟ್ಟೆಗಳನ್ನುಟ್ಟು ನಿಧಾನವಾಗಿ ಸಂಚರಿಸುವ ಗಾಡಿಗಳಲ್ಲಿ ಭರತನ ಹಿಂದೆ ಹೋದರು. ಭರತನು ಸಹೋದರಾನ್ವೇಷಣೆಯಲ್ಲಿ ಹೊರಟಿದ್ದಾಗ ಎಲ್ಲರಿಗೂ ಸಂಭ್ರಮ, ಪ್ರೀತಿ ಎಂಬುದನ್ನು ತೋರಿಸುವಂತೆ.

ಈ ಪ್ರಯಾಣಕ್ಕಾಗಿ ಗಂಗೆಯ ತಡಿಯವರೆಗೂ ದಾರಿಯನ್ನು

---

೫ ಕೌಸಲ್ಯೆಯ ಅರಮನೆಯಲ್ಲಿಯೂ ರಾಮನ ಸ್ವಂತಗೃಹದಲ್ಲಿಯೂ ಪ್ರಾರ್ಥನೆಗಳೂ ನಾರಾಯಣ ಪೂಜೆಯೂ ಭಕ್ತಿಯಿಂದ ನಡೆಯುತ್ತಿದ್ದವು. ರಾಮನ ಸ್ವಂತಗೃಹದಲ್ಲಿ ಕಡುನೇಮ, ಉಪವಾಸ ಪ್ರಾರ್ಥನೆ ವರ್ಣಿತವಾಗಿವೆ.

ಸಿದ್ಧಗೊಳಿಸಿದರು. ಸ್ತ್ರೀ ಪುರುಷರಿಂದ ಕೂಡಿದ ಈ ದೊಡ್ಡ ಗುಂಪು ಸುಖವಾಗಿ ಸುಗಮವಾಗಿ ಪ್ರಯಾಣ ಮಾಡುವಂತೆ ಸಜ್ಜುಗೊಂಡಿತು. ಕೆಲವು ವೃತ್ತಿಯವರ ಹೆಸರುಗಳು ಇಲ್ಲಿ ಬರುತ್ತವೆ ; ಭೂಮಿ ಪ್ರದೇಶಜ್ಞಃ, ಸೂತ್ರಕರ್ಮ ವಿಶಾರದಃ ಎಂದರೆ, ನೆಲದ ಪರಿಸ್ಥಿತಿಯನ್ನು ಅರಿತವರು; ಗುಡಿಗುಡಾರಗಳನ್ನು ಕಟ್ಟಲು ನೆಲವನ್ನು ಅಗೆಯುವವರು ; ರಸ್ತೆ ಹಾಕುವವರು, ಕಾಪಾಡುವವರು ; ತಮ್ಮ ತಮ್ಮ ಕೆಲಸಗಳಲ್ಲಿ ದಕ್ಷರಾದವರು, ಮಾರ್ಗಶಿಲ್ಪಿಗಳು, ಸುರಂಗಕಾರರು, ಕರ್ಮಾಂತಿಕರು, ಸ್ಥಪತಿಗಳು, ಮರ ಕಡಿವವರು – ವರ್ಧಕಃ ಮಾರ್ಗಿನಃ ವೃಕ್ಷತಕ್ಷಕಾಃ – ಎಲ್ಲರನ್ನೂ ಈ ಕಾರ್ಯಕ್ಕೆ ತೊಡಗಿಸಿದ್ದರು. ಇವರ ಜೊತೆಗೆ 'ಕೂಪಕಾರಃ ಸುಧಾಕರಃ' – ಬಾವಿಗಳನ್ನು ತೋಡುವವರೂ ಸುಣ್ಣ ಬಳಿಯುವವರೂ ಹೋಗಿದ್ದರು. ಅವರು ಮಾಡಿದ ಕೆಲಸಗಳ ಮೇಲ್ವಿಚಾರಣೆ ಮಾಡಿ ಪರೀಕ್ಷಿಸುವ ಅಧಿಕಾರಿಗಳೂ ಹೋದರು. ಅನೇಕ ಸಾಧನ ಸಾಮಗ್ರಿಗಳನ್ನೂ ಉಪಕರಣಗಳನ್ನೂ ಹೊತ್ತು ಹೋದರು. ದಾರಿಯಲ್ಲಿದ್ದ ಬಳ್ಳಿಗಳನ್ನೂ ಮರದ ಕೊಂಬೆಗಳನ್ನೂ ಪೊದರುಗಳನ್ನೂ ಪ್ರಯಾಣಕ್ಕೆ ಅಡಚಣೆಯಾಗದಂತೆ ಕತ್ತರಿಸಿದ್ದರು. ಮುಳ್ಳು ಕಲ್ಲು ತೆಗೆದು ಹಾಕಲಾಯಿತು. ಬಂಡೆಗಳು ದೂರ ಎಸೆಯಲ್ಪಟ್ಟವು. ಬೃಹದಾಕಾರದ ಮರಗಳನ್ನು ಕತ್ತರಿಸಿ ಕೆಡವಿದರು. ಮರಗಳು ಇಲ್ಲದ ಕಡೆ ಹೊಸ ಮರಗಳನ್ನು ನೆಟ್ಟು ದಾರಿಯಲ್ಲಿ ನೆಳಲು ಮಾಡಿದರು. ಕೊಡಲಿ, ಉಳಿ, ಕುಡುಗೋಲು ಬೇಕಾದಷ್ಟು ಕೊಂಡು ಹೋದರು. ಇತರರು ಹಳ್ಳಗಳನ್ನು ತುಂಬಿದರು ; ಒರಟಾದ ಭೂಮಿಯನ್ನು ಸಮವಾಡಿದರು. ಹೀಗೆ ಮಾರ್ಗಸಂಸ್ಕಾರ ಬಹು ವಿಚಕ್ಷಣೆಯಿಂದ ನಡೆಯಿತು.[೬] ಕವಿ ಸ್ವಂತವಾಗಿ ಇದನ್ನು ಬರೆದನೊ ಆಮೇಲೆ ಇನ್ನಾರೊ ಇದನ್ನು ಸೇರಿಸಿದರೊ – ಕಾರ್ಯಸಾಧನೆಗೆ ಎಂಥ ಸಜ್ಜು ಒದಗಿತು ಎಂಬಂಶದಲ್ಲಿ ನಮ್ಮ ಆಸಕ್ತಿಯನ್ನು ಕೆರಳಿಸುವಷ್ಟು ಬೆಳಕು ಚೆಲ್ಲಿದೆ. ಪದ್ಯಗಳು ಕೆಲಸಕ್ಕೂ ಕಾರ್ಯಕ್ಕೂ ಸಾಟಿಯಾಗಿವೆ. ಸೇತು, ಒಡ್ಡುದಾರಿ, ಮೇಲ್ಕಾಲುವೆ ಕಟ್ಟಿದರು ; ಕೆರೆ ನೀರು ಕಾಲುವೆಗಳನ್ನೂ ಕಟ್ಟಿದರು. ರಸ್ತೆಗಳಿಗೆ ಸುಣ್ಣದ ನೀರನ್ನು ತಳಿದರು. ಗಿಡಗಳು ಹೂ ಬಿಡುವಂತೆ ಮಾಡಿದರು!

---

೬ ಇಂತಹ ಕೆಲಸಕ್ಕೆ ಇಂದು ಎಷ್ಟು ಕಾಲ, ಹಣ, ಸಜ್ಜು, ಒಪ್ಪುವ ಪ್ರಾರ್ಥನಾ ಪತ್ರ (Tenders), ಪರವಾನಗಿ ಪತ್ರ (Licence) ಹಿಡಿಯುತ್ತವೆಂಬುದನ್ನು ಕಲ್ಪಿಸಿಕೊಳ್ಳಬಹುದು. ಒಂದು ಸರ್ಕಾರ ಸರ್ಕಾರವೇ ಸಂಚಾರ ಹೊರಟಿದೆ ; ಸಿಬ್ಬಂದಿಯೆಲ್ಲ ಅದಕ್ಕಾಗಿ ವಿನಿಯುಕ್ತವಾಗಿದೆ ಇಲ್ಲಿ.

ಮರಗಳಿಂದ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದವು. ರಸ್ತೆಯ ಕಡೆ ತೋರಣ, ಬಾವುಟ ಕಟ್ಟಿದರು. ಸುಗಂಧಮಿಶ್ರಿತವಾದ ನೀರನ್ನು ದಾರಿಯಲ್ಲೆಲ್ಲ ಚಿಮುಕಿಸಿದ್ದರು. ಹೂ ತಳಿರುಗಳ ಅಲಂಕಾರವನ್ನು ರಸ್ತೆಯ ಉದ್ದಕ್ಕೂ ಮಾಡಿದ್ದರು. ರಸ್ತೆಗಳು ಸಿದ್ಧವಾದ ಕೂಡಲೆ ಅಲ್ಲಲ್ಲಿ ಇಳಿದುಕೊಳ್ಳಲು ಗೂಡಾರಗಳನ್ನೂ ಮಂಟಪಗಳನ್ನೂ ರಚಿಸಿ ಕುಡಿಯಲು ನೀರು, ತಿನ್ನಲು ಹಣ್ಣು ಸಂಗ್ರಹಿಸಿದ್ದರು.

* * *

ರಾಮಾಯಣದ ರಚನೆ ಪ್ರಧಾನವಾಗಿ ಶ್ಲೋಕದಲ್ಲಿದೆ. ಇದರ ಪ್ರಕಾರಕ್ಕೆ ತಕ್ಕಂತೆ ಪದ್ಯಗಳು ರಚಿತವಾಗಿವೆ, ಮೊಳಗುತ್ತವೆ. ಸಂಸ್ಕೃತ ಭಾಷೆಗೆ ವಿಶಿಷ್ಟವಾದ ದೀರ್ಘ ಸ್ವರ ಅಕ್ಷರಗಳು ಅಲ್ಲಿನ ವೈಭವವನ್ನೂ ಶಬ್ದ ಸೌಭಾಗ್ಯವನ್ನೂ ಉನ್ನತಿಗೊಳಿಸುತ್ತವೆ. ದುಃಖವನ್ನೊ ಗಂಭೀರತೆಯನ್ನೊ ಹೆಚ್ಚು ಗಾಢವಾಗಿ ಮಾಡುತ್ತವೆ. ದೀರ್ಘಗಳೂ ಬಿಗಿಯಾಗಿ ಸಂಯುಕ್ತಾಕ್ಷರಗಳೂ ಸಣ್ಣ ಸಣ್ಣ ಪದಗಳೂ ಲಘು ಮತ್ತು ಹ್ರಸ್ವಾಕ್ಷರಗಳ ಸಮೂಹಗಳೂ ಹೆಚ್ಚಾಗಿ ಬಳಕೆಗೆ ಬಾರವು. ರಾವಣನು ನುಡಿದನೆಂದು ಪ್ರಯೋಗವಾದ ಕಾಮುಕನೊಬ್ಬನು ಒಲಿಸುವಂತೆ ನುಡಿಯುವ – ಆದರೆ ಕವಿಯದೆಂಬ ನಂಬಿಕೆ ತಾರದ – ಒಂದು ಪದ್ಯ ಇದು :

ಪಿಬ ವಿಹರ ರಮಸ್ವ ಭುಂಕ್ಷ್ವ ಭೋಗಾನ್
ಮಯಿ ಲಲ ಲಲನೇ... ಯಥಾ ಸುಖಂ ತ್ವಂ
ತ್ವಯಿಚ ಸವ್ರೇತ್ಯ ಲಲಂತು ಬಾಂಧವಾಸ್ತೇ

ಕುಡಿ ; ಸುತ್ತಾಡು ; ಬೇಕಾದಷ್ಟು ಸುಖಪಡು ; ಇಲ್ಲಿರುವ ಸಂಪತ್ತನ್ನೂ ಭೋಗಗಳನ್ನೂ ಬೇಕಾದ ಹಾಗೆ ಬಳಸು. ನನ್ನ ಜೊತೆಯಲ್ಲಿ, ಓ ಚೆಲುವೆ, ಪ್ರಿಯವಾಗುವಂತೆ ವಿಲಾಸವನ್ನು ನಡಸುತ್ತ ನಿನ್ನ ಬಂಧು ಬಾಂಧವರು ಬರಲಿ.

ಇಲ್ಲಿನ ಶಬ್ದ ಪ್ರಯೋಗ ಮುಂದಿನ ಮಹಾಕಾವ್ಯಗಳಲ್ಲಿ ಬಳಕೆಗೆ ಬರುವ ಸಂಪ್ರದಾಯ ; ಅಚ್ಚ ವಾಲ್ಮೀಕಿಯದೆಂದು ಹೇಳುವುದು ಕಷ್ಟ. ಸ್ವಲ್ಪ ಹೆಚ್ಚು ಕಡಮೆ ಈ ಸರ್ಗದಲ್ಲಿ ಈ ಸಂಗತಿಯನ್ನೇ ಮುಂಚಿತವಾಗಿ ಹೇಳಿದೆ : ಅಲ್ಲಿನ ಧ್ವನಿ ವಾಲ್ಮೀಕಿಯದು ಎಂಬಂತೆ. ಇತಿಹಾಸ ಕಾವ್ಯದ (Epic) ವೈಭವ ಅಲ್ಲಿನ ಮಾತು ಮಾತಿನಲ್ಲಿಯೂ ಗುಣತಯಾ ಗಮನವನ್ನು ಸೆಳೆಯುತ್ತದೆ. ಗದ್ಯಾರ್ಥವಾಗಿ ಹೇಳಬಲ್ಲ ಕಥಾ ವಿಷಯ ಮಾತ್ರವಲ್ಲ, ಸನ್ನಿವೇಶವನ್ನೊ ಶೀಲವನ್ನೊ ನಮಗೆ ಕೊಂಡು ತರುವುದು ಮಾತ್ರವಲ್ಲ ; ಯಾವ ಘಟನೆಗಳು ಹೇಗೆ ಮುಂದುವರಿಯುತ್ತವೆ ಎಂಬುದನ್ನು ತಿಳಿಸುವುದೂ ಅಲ್ಲ ; ಸಂಗತಿಗಳಿಗೆ

ಸಂಬಂಧಿಸಿದ ಆಲೋಚನೆ, ವರ್ಣನೆ ಅಲ್ಲ ; ಅವುಗಳ ಜೊತೆಗೆ ಉದಾತ್ತವಾದ ಒಂದು ಸ್ವರವೇಗ ಎಲ್ಲವನ್ನೂ ಮೋಹಕವಾಗಿಸುತ್ತದೆ. ಕೃತಿ ಮುಗಿದ ಸಾವಿರಾರು ವರ್ಷಗಳ ಮೇಲೆಯೂ ಅದನ್ನು ಈ ನಾಡಿಗೆ ಪ್ರಿಯವಾಗಿ ಮಾಡಿದ ಯಾವ ಘೋಷ, ಬೀಸು, ಗಾನಗಳಿವೆಯೊ ಅವು ಕೃತಿಯನ್ನು ವಿಶಿಷ್ಟವಾಗಿ ಮಾಡುತ್ತವೆ. ನಮ್ಮ ಸಾಹಿತ್ಯದಲ್ಲಿ ಇನ್ನಾವ ಕೃತಿಗೂ ಜನ ಪ್ರೀತಿಯಲ್ಲಿ ಇಂತಹ ಪರಮ ಪ್ರಾಧ್ಯಾನವಿಲ್ಲ. ಇಲ್ಲಿನ ನಾದ ವೈಭವವೂ ಮಾಧುರ್ಯವೂ ಉನ್ಮಾದ ಉಂಟುಮಾಡುವಂಥವು.

ಅಲ್ಲಲ್ಲಿ ಅಪರೂಪವಾಗಿ ಚಮತ್ಕಾರದ ತುಣುಕಗಳಿವೆ. ಅಲಂಕರಣಗಳು ಬರುತ್ತವೆ. ವ್ಯಂಗ್ಯವೊ ವಿರೋಧೋಕ್ತಿಯೊ ಅರ್ಥಾಂತರ ನ್ಯಾಸಗಳೊ ಬರುತ್ತವೆ. ಅಥವಾ ವಿಚಿತ್ರ ಕಲ್ಪನೆ ಕಾಣಿಸುತ್ತದೆ. ಇವಕ್ಕಿಂತ ಹೆಚ್ಚಾಗಿ ಇಲ್ಲಿನ ರಚನೆಗಳ ಸಂಪನ್ನತೆಯೂ ಉದಾರವಿಭವವೂ ಕೃತಿಯನ್ನು ನಮ್ಮ ಗೌರವಕ್ಕೆ ಪಾತ್ರಮಾಡುತ್ತದೆ. ಅಲ್ಲಿ ಇಲ್ಲಿ ಬರುವ ದವಡೆ ಬಿರಿಸುವಂತಿರುವ ಸಮಸ್ತ ಪದಗಳು ಪ್ರಿಯವಾಗದಿರಬಹುದು. ಆದರೆ ಪಾದಗಳು ಪದ್ಯದ ಸಾಲಿನಲ್ಲಿ ಸುಲಭವಾಗಿ ಒಡೆದುಕೊಂಡು ಉಚ್ಚಾರಕ್ಕೆ ನೆರವಾಗುತ್ತವೆ ; ಕ್ಲಿಷ್ಟವಾಗಿರುವುದರ ಉದಾಹರಣೆಗಳೂ ಉಂಟು. ಹಾಗೆಯೇ ರಾಮನೇ ಸೀತೆಯನ್ನು ಸಂಬೋಧಿಸುವಾಗ 'ಗಜನಾಸೋರೂ' 'ವರಾರೋಹೆ' ಎಂದು ಕರೆಯುವಾಗ ಮನಸ್ಸಿಗೆ ಹಿತವಾಗುವುದಲ್ಲ. ಪುನರುಕ್ತಿಗಳು, ಶಬ್ದಖಂಡಗಳು ಪಾದಭರ್ತಿಗಾಗಿ ಬಂದು ಚಿಟ್ಟು ಹಿಡಿಸುತ್ತವೆ, ನಿಜ. ಕವಿಗೆ ಲಕ್ಷ್ಯವಿಲ್ಲ. ಆದರೆ ಕೆಲವು ಸಮಯಗಳಲ್ಲಿ ಅವು ಬಂದು ಆದೇಶವನ್ನು ಬಲಪಡಿಸುತ್ತವೆ. ಅಥವಾ, ಭಾವ ತೀವ್ರತೆಯ ಸಮಯವನ್ನು ಒತ್ತಿ ತೋರಿಸುತ್ತವೆ. 'ಸಶಪೇ', 'ತ್ರಿಃ ದದಾಮಿ' 'ನಾತ್ರ ಕಾರ್ಯ ವಿಚಾರಣಾ' ಎಂಬಂತಹವು ಕೆಲವು. ವಿಶೇಷವಾಗಿ ಬಳಸಿದ, ಪ್ರಾಗಲ್ಭ್ಯ ತೋರಿಸುವ ಧಾತುಗಳು ದ್ವಿರುಕ್ತಿರೂಪಗಳು ಬೇಕಾದಷ್ಟು ಬರುತ್ತವೆ. ರಘುಪುಂಗವ ; ನರಶಾರ್ದೂಲ ; ಸತ್ಯಪರಾಕ್ರಮ ; ಸತ್ಯಸಂಗರಃ ; ಅಕ್ಲಿಷ್ಟಕರ್ಮಣಃ ಇತ್ಯಾದಿಗಳೂ 'ಸ್ಮಾರಯೇ ತ್ವಂ ನ ಶಿಕ್ಷಯೇ', 'ಪ್ರಣಯಾಚ್ಚ ಬಹುಮಾನಾಚ್ಚ', 'ಲಕ್ಷ್ಯತೇ ನತು ಶೋಭತೇ' ಮುಂತಾದ ಜೊತೆಗಳೂ ಅನೇಕವಾಗಿವೆ. 'ನಕಶ್ಚಿನ್ನಾಪರಾಧ್ಯತಿ' ಎಂಬಂತಹ ಮಹಾ ಉಕ್ತಿ ಒಂದಕ್ಕಿಂತ ಹೆಚ್ಚು ಸಲ ಬಂದು ಶಕ್ತಿ ಕಳೆದು ಸವೆಯುತ್ತದೆ. ಜನ ಬಳಕೆಯಲ್ಲಿ ವಿವೇಕದಲ್ಲಿ ಇಂತಹ ಮಾತಿನ ತುಕಡಗಳು ತೇಲುತ್ತಿರುವುವೇನೊ. ಒಬ್ಬರಿಂದ ಇನ್ನೊಬ್ಬರು ಅವನ್ನು ಆಯ್ದುಕೊಂಡಾಗ ಒಂದು ಕಾರ್ಯಪ್ರಪಂಚದಿಂದ ಇನ್ನೊಂದಕ್ಕೆ ಅವು ಸಂಚಾರಮಾಡಿ ತೇಲಿಕೊಂಡು

ಬಳಕೆಗೆ ಬರುತ್ತವೆಯಾದೀತು.[೭] 'ಕೌಸಲ್ಯಾನಂದವರ್ಧನಃ', 'ಸುಮಿತ್ರಾಸುಪ್ರಜಾ' ಎಂಬ ಶಬ್ದಗಳನ್ನು ಬಳಸಿ ಪಾದಗಳನ್ನು ಭರ್ತಿಮಾಡಿದೆ. ಅನೇಕ ಕಡೆಗಳಲ್ಲಿ ಒಂದು ಸಾಲನ್ನು ಸುಮಾರು ಪೂರ್ತಿಯಾಗಿ ಇನ್ನೊಮ್ಮೆ ಬಳಸಿ ತುಂಬಬಹುದು. ಪದ್ಯಭಾಗಗಳನ್ನು ತಂದು ಸೇರಿಸುವಾಗ ಅವನ್ನು ಅಲ್ಲಿಗೆ ತಂದು ತುರುಕಿದಂತೆಯೊ ಬೇರೆಲ್ಲಿಂದಲೊ ತಂದಂತೆಯೊ ಗುಣವನ್ನೊ ವಿಷಯವನ್ನೊ ಒತ್ತಿ ತಿಳಿಸುವುದಕ್ಕಾಗಿ ಹೇಳಿದಂತೆಯೊ ಕಾಣುವುದಿಲ್ಲ. ಅನೇಕ ಶ್ಲೋಕಗಳಲ್ಲಿ ಒಂದು ಮಾತೊ, ಮಾತಿಗೆ ಒಂದು ಸ್ಥಳವ್ಯತ್ಯಾಸವೊ ಮಾತ್ರ ಆಗಿರುತ್ತದೆ. ಮರಗಳು, ಹಕ್ಕಿಗಳು, ಹೂಗಳು, – ಅನೇಕ ಹೆಸರುಗಳವು ಬರುತ್ತವೆ. ಕವಿ ಅವನ್ನು ಬಲ್ಲನು ; ಆದರೆ ಕವಿತೆಯ ಅರ್ಥ ಸಾಧನೆಗೋಸ್ಕರ ಅವನ್ನು ಪಟ್ಟಿ ಮಾಡಿದಂತೆ ಬಳಸಿ ಅವುಗಳ ಶಕ್ತಿ ಕುಂದುತ್ತದೆ. ಕೆಲವು ನಮಗೆ ಬರಿಯ ಹೆಸರುಗಳು ; ಅನುಪ್ರಾಸಗಳು ; ಅಲ್ಲಲ್ಲಿ ಪ್ರವಹಿಸುತ್ತಿರುವ ನದಿಯಲ್ಲಿ ತಾವರೆಗಳೂ ನೈದಿಲೆಗಳೂ ಇದ್ದುವೆಂದು ವರ್ಣಿಸಿರುವುದು ಮುಂದೆ ಒಂದು ಕವಿ ಸಮಯವಾಗಿಯೇ ಕಾವ್ಯಗಳನ್ನು ಕೆಡಿಸಿದೆ. ಹೆಚ್ಚು ಸಲ ಹೇಳಿದ್ದನ್ನೇ ಹೇಳಿ ಒಂದು ವರ್ಣನಾಂಶ ಕಾಣುವುದರಿಂದ ಇತರರು ಯಾರೊ ಇದನ್ನು ತಂದು ಸೇರಿಸಿದ್ದಾರೆಂದು ಸ್ಪಷ್ಟವಾಗಿ ಗೊತ್ತಾಗುವಂತಿರುತ್ತದೆ.[೮]

ಆದರೆ, ವಾಲ್ಮೀಕಿಯೇ ನಿಜವಾಗಿ ನುಡಿವಂತಿರುವಾಗ ಇತರರಾರೂ

---

೭ ಇತಿಹಾಸ ಕಾವ್ಯಗಳಲ್ಲಿ ಗುಣಗಳನ್ನೂ ಲಕ್ಷಣಗಳನ್ನೂ ವ್ಯಕ್ತಿಗಳ ಬಿರುದುಗಳನ್ನೂ ಪುನರುಕ್ತಿ ಮಾಡುವುದುಂಟು. ಇಲಿಯಡ್ ಗ್ರಂಥದಲ್ಲಿ ಕೂಡ ಇಂಥವೇ ಬರುತ್ತವೆ. ಜ್ಯೂಸ್ ದೇವತೆ ಗುಡುಗಿನ ಮೊಳಗಿನವ ಎಂದೂ ಅಖಿಲೇಸನನ್ನು ಥೇಟಿಸ್ ಪುತ್ರನೆಂದೂ ಹೀರಾದೇವಿಯನ್ನು ಶ್ವೇತ ರಜತ ಶುಕ್ಲಭುಜೆಯೆಂದೂ ಲೆಕ್ಕವಿಲ್ಲದಷ್ಟು ಸಲ ಪರ್ಯಾಯವಾಗಿ ಕರೆಯುವುದುಂಟು. ಷಾಹನಾಮದಲ್ಲಿಯೂ ಹಾಗೇ.

೮ ಕೆಲವೇಳೆ ಸಪ್ಪೆಯಾಗುತ್ತದೆ ; ಇನ್ನು ಕೆಲವು ವೇಳೆ ಹಿಂದೆ ಹೇಳಿದುದಕ್ಕೆ ವಿರೋಧ ನುಡಿವಂತೆಯೊ ಒಂದು ಉಕ್ತಿಯ ಸರಿತಪ್ಪಿನ ವಿಷಯದಲ್ಲಿ ಅನಿಶ್ಚಯ ಉಂಟಾದಂತೆಯೊ ಆಗುತ್ತದೆ. ಅಯೋಧ್ಯೆಯ ಅರಮನೆಯಲ್ಲಿನ ಕೆಲವು ದೃಶ್ಯಗಳು ಹೀಗೆ ವರ್ಣನೆಗೊಳ್ಳುವುವು. ಮಧುವನದಲ್ಲಿ ಕಪಿಗಳ ವಿಲಾಸದಲ್ಲಿ ಒಂದು ಋತುವಿನ ಸಣ್ಣ ಪುಟ್ಟ ಅಂಶಗಳನ್ನು ವಿವರಿಸುವಲ್ಲಿ, ಭರದ್ವಾಜಾಶ್ರಮದ ಔತಣಕೂಟದಲ್ಲಿ, ರಾವಣನ ಅರಮನೆಯ ವಿಲಾಸಭೂಮಿಯಲ್ಲಿ ಯಾವುದನ್ನಾದರೂ ಲಂಬಿಸುವ ಅವಕಾಶ ದೊರೆತಾಗ, ಅಥವಾ ಕದನಗಳನ್ನು ವರ್ಣಿಸುವಾಗ ಹೀಗಾಗುತ್ತದೆ. ಯುದ್ಧಕಾಂಡದಲ್ಲಿ ಇಂಥ ಕದನದ ಅಂಶಗಳು ತುಂಬಿಕೊಳ್ಳುತ್ತವೆ. ವರ್ಣನೆಗಳು ಪುನರುಕ್ತವಾಗುತ್ತವೆ. ವಾನರರ ಯುದ್ಧಗಳಲ್ಲಿ ಕಲ್ಲುಗಳ ಮತ್ತು ಮರದ ಕೊಂಬೆಗಳ ಬಳಕೆ, ಕದನ, ರಾಕ್ಷಸರ ಕದನದ ರೀತಿ ಸುಮಾರು ಪುನಃ ಪುನಃ ಒಂದೇ ರೀತಿ ಬರುತ್ತವೆ. ವೀರಯೋಧರ ಸಭೆಗಳಲ್ಲಿ ವೀರರ ಪ್ರೀತಿಯನ್ನು ಹೆಚ್ಚಿಸುವುದಕ್ಕಾಗಿ ಇಂಥ ವಿಸ್ತಾರಗಳ ಆಗಿದ್ದಾವು.

ಅವರ ಹತ್ತಿರ ಬರಲಾರರು. ಅಲ್ಲಿ ಪದ್ಯಗಳ ಗತಿ ಸಹಜ. ಅಡ್ಡಿ ತಡೆ ಇರುವುದಿಲ್ಲ. ಅವನ ಧ್ವನಿ ಗಾಢವಾಗಿರುವುದಲ್ಲದೆ ಮಹೋನ್ನತಿಯುಳ್ಳದ್ದಾಗಿರುತ್ತದೆ. ಚಿತ್ರಗಳು ನೇರವಾಗಿ ವಿಶದವಾಗಿರುತ್ತವೆ. ರೂಪ ಸುರಚಿತವಾಗಿ ಸ್ಫುಟವಾಗಿ ನಿರ್ದಿಷ್ಟವಾಗಿ ಇರುತ್ತವೆ. ಪ್ರತಿಯೊಂದು ಕ್ಷಣವನ್ನೂ ಸನ್ನಿವೇಶವನ್ನೂ ಕಣ್ಣಿಗೆ ಕಟ್ಟಿತೋರಿಸುತ್ತದೆ. ಕ್ಷತ್ರಿಯ ಗುಣವಾಗಲಿ, ವಾನರರ ಅಥವಾ ರಾಕ್ಷಸರದಾಗಲಿ – ಸ್ಫುಟವಾಗಿ ನಿಂತು ಕಾಣುತ್ತವೆ. ಇದು ಹೀಗೆಯೇ ಇದ್ದಿರಬೇಕು ಎಂಬ ನಿಶ್ಚಯ ತರುತ್ತವೆ. ರಾಮಾಯಣದಲ್ಲಿ ವಿಕಾರವಾದ ಮುಖಚರ್ಯೆಗಳೂ ರೂಪವಿಹೀನವಾದ, ಕೊಳೆತು ನಾರುವಂತಹ ಶಬ್ದಜಾಲವೂ ಇದೆ ಎಂದು ಒಬ್ಬ ಜರ್ಮನ್ ಕವಿ ಆಕ್ಷೇಪಣೆ ಎತ್ತಿದ್ದಾನೆ : ಅಂಥದು ಇರಬಹುದಾಗಿದ್ದರೆ ಹೊಸದಾಗಿ ಇತರರು ತಂದು ರಾಮಾಯಣದಲ್ಲಿ ಸೇರಿಸಿರುವ ಪ್ರಕ್ಷಿಪ್ತ ಭಾಗಗಳಲ್ಲಿರಬೇಕು ; ನಿಜವಾಗಿ ವಾಲ್ಮೀಕಿಯದೇ ಎನ್ನಬಹುದಾದ ಪದ್ಯಗಳಲಿಲ್ಲ.

* * *

ಕೆಲವು ಸಲ ವಾಲ್ಮೀಕಿ ರಾಮಾಯಣವನ್ನು ಹೋಮರನ 'ಇಲಿಯಡ್' (Iliad) ಕಾವ್ಯಕ್ಕೂ ವರ್ಜಿಲ್ ಕವಿಯ 'ಏನೈಡ್' (Aeneid) ಕಾವ್ಯಕ್ಕೂ ಹೋಲಿಸುವುದುಂಟು. ಕಥಾವಸ್ತುವಿನಲ್ಲಾಗಲಿ ಆವರಣಕಲ್ಪನೆಯಲ್ಲಾಗಲಿ, ಮುಖ್ಯಪಾತ್ರಗಳ ಶೀಲಸಂಪನ್ನತೆಯಲ್ಲಾಗಲಿ, ಒಳಪಡುವ ಮೌಲ್ಯಗಳ ತೂಲನೆಯಲ್ಲಾಗಲಿ ಇಂಥ ತಾರತಮ್ಯ ವಿವೇಚನೆ ಸೂಕ್ತವಲ್ಲ. ಯೂರೋಪಿನ ಸಂಸ್ಕೃತಿಯ ತಳಹದಿಯಲ್ಲಿ ಸಾರತಃ ಕ್ರೈಸ್ತರು ಲೋಕಾಯತ – Pagan – ಎನ್ನಬಹುದಾಗಿದ್ದ ಈ ಗ್ರೀಕ್ ಮತ್ತು ರೋಮನ್ ಮಹಾಕಾವ್ಯಗಳಿಗೆ ದೊಡ್ಡ ಸ್ಥಾನ ಇದೆ; ಅವು ಅವರ ಸುಪ್ರತಿಷ್ಠ ಕೃತಿಗಳು. ಅಲ್ಲಿನ ಭಾಷೆ, ಛಂದೋರಚನೆ, ಪದ್ಯಗಳ ಮಹತ್ವ ಮತ್ತು ವೈಭವ ಆ ಕೃತಿಗಳಿಗೆ ಅತಿಶಯ ಉನ್ನತಿಯನ್ನು ತಂದುಕೊಟ್ಟಿದ್ದಾವು. ಅವೆರಡರಲ್ಲಿಯೂ ಏನೈಡಿಗಿಂತ ಇಲಿಯಡ್ ಕಾವ್ಯ ಮಹತ್ತಾದ್ದು ; ಉದಾತ್ತವಾದ್ದು. ಏನಿಯಸ್ (Aeneas) ಕಾರಣಪುರುಷ, ಅಕಸ್ಮಾತ್ತಾಗಿ ಉಳಿದುಕೊಂಡ ವೀರ. ಟ್ರಾಯ್ ಯುದ್ಧರಂಗದಿಂದ ಅವನನ್ನು ದೇವತೆಗಳು ಬದುಕಿಸಿ ರೋಮಿನ ಕಡೆಗೆ ಪ್ರಯಾಣ ಮಾಡುವಂತೆ ವರ್ಣನೆಯಿದೆ. ಅಲ್ಲಿ ಹೊಸದಾಗಿ ಒಂದು ರಾಜ್ಯವನ್ನು ಅವನು ಸ್ಥಾಪಿಸುವಂತೆ ಮಾಡಬೇಕಿತ್ತು. ಉದ್ದಕ್ಕೂ ದೇವತೆಗಳು ಅವನಿಗೆ ನೆರವಾಗುತ್ತಾರೆ. ಟ್ರಾಯ್ ನಗರದಲ್ಲಿ ಗ್ರೀಕ್ ಮತ್ತು ಟ್ರೋಜನ್ ವೀರರ ಮೇಲೆ ಯಾವ ಯಾವ ತಂತ್ರ, ಸಂಚುಗಳನ್ನು ಮಾಡುತ್ತಾರೊ ಅವೇ ತಂತ್ರಗಳು ಇವರ ಅದೃಷ್ಟ ಸಾಧನೆಗೂ ಬಳಕೆಯಾಗುತ್ತವೆ.

ಒಂದು ದೊಡ್ಡ ನಗರದ ಉಪವಿಸ್ತರಣಗಳು ಹೇಗೊ ಹಾಗೆ, ಟ್ರೋಜನ್ ಯುದ್ಧದ ವಿಸ್ತರಣದಂತೆ ಕಾಣುತ್ತದೆ – ಏನೈಡ್. ಅಲ್ಲಿ ಇಲ್ಲಿ ನುಣುಪಾದ ಕೆಲವು ಬದಲಾವಣೆಗಳು ಕಾಣುತ್ತವೆ. ಡ್ರಾನ್ಸಸ್ (Drances) ಮತ್ತು ಟರ್ನಸ್ (Turnus) ಇವರ ಜೊತೆಗೆ ಡಾನಸ್ (Daunus) ನಡೆಸಿದ ಸಭೆಗಳು ಪರಸ್ಪರ ವಿರೋಧಕಟ್ಟಿನವು. ಪ್ರಿಯಮ್ (Priam) ಸಭಾಮಂಡಲಗಳಲ್ಲಿಯೂ ಆಗಮೆಮ್ನೋನ್ (Agamemnon) ಸಭೆಗಳಲ್ಲಿಯೂ ಅಥವಾ ಒಲಿಂಪಿಸ್ (Olympus) ಪರ್ವತದ ಮೇಲೆ ನಡೆವ ದೇವತೆಗಳ ಸಭೆಗಳಲ್ಲಿಯೂ ನಡೆಯುತ್ತಿದ್ದಂತೆ ಇವೂ ನಡೆಯುತ್ತವೆ. ಡಿಡೊ ದೇವಿ ಏನಿಯಸ್ನಲ್ಲಿ ಪ್ರೀತಿ ಬೆಳಸಿ ಹತಭಾಗ್ಯಳಾಗುವಂಥ ಕರುಣಾಜನಕ ಸನ್ನಿವೇಶವೂ ದೈವಹತ ಪ್ರೇಮವೂ ಇಲಿಯಡಲಿಲ್ಲ. ಡಿಡೊ – ಏನಿಯಸ್ ಇವರ ಪ್ರೇಮ ಉನ್ನತಿಗಾಗಲಿ, ಅನ್ಯೋನ್ಯ ಭಕ್ತಿಗಾಗಲಿ ದೊಡ್ಡದಾಗಿ ಬೆಳೆಯುವುದಿಲ್ಲ. ನೀತಿ ತತ್ವಗಳಿಗಾಗಲಿ ಅಥವಾ ಶೀಲಸ್ಥಾಪನೆಯ ಆಧಾರಕ್ಕಾಗಿಯಾಗಲಿ ಯಾವುದೂ ನಡೆಯದೆ, ತಿಳಿದು – ತಿಳಿದೂ ಏನಿಯಸ್ ಡಿಡೊ ಹೃದಯವನ್ನು ಘಾತಿಸುತ್ತಾನೆ. ಟರ್ನಸ್ 'ಏನೈಡ್' ಗ್ರಂಥದ ಕೊನೆಯಲ್ಲಿ ಕೃಪೆ ಬೇಡುತ್ತಿರುವಾಗ ನಿಷ್ಕರುಣವಾಗಿ ಕೊಂದು ಬೀಳುತ್ತಾನೆ. 'ಇಲಿಯಡ್ಡ'ಲ್ಲಿ 'ಏನೈಡ'ಲ್ಲಿ ಬರುವ ಯುದ್ಧ ವರ್ಣನೆಗಳೇನೊ ರಾಮಾಯಣದಲ್ಲಿ ಬರುವ ಯುದ್ಧಗಳಿಗಿಂತ ಹೆಚ್ಚು ವಾಸ್ತವವಾದವು ; ಮಾನವಸಾಮಾನ್ಯವಾದವು. ಅಲ್ಲಿನ ಕೋಪ ಹೆಚ್ಚು ಹಸಿ, ಹೆಚ್ಚು ನಿರ್ಘೃಣ. ಸ್ತ್ರೀಪುರುಷರು ಇಲ್ಲಿಗಿಂತ ಹೆಚ್ಚು ರೂಕ್ಷರು, ನೆತ್ತರಮುಖ ಉಳ್ಳವರು – ಭೂಮ ಎಂಬಂತೆ ಕಾಣಿಸುತ್ತಾರೆ. ರಾಮಾಯಣದ ಪಾತ್ರಗಳು ಮೂರನೆಯ – ಎಂದರೆ ಅರಣ್ಯಕಾಂಡದಲ್ಲಿ ಇರುವ – ಕೆಲವರನ್ನು ಬಿಟ್ಟರೆ ಹೆಚ್ಚು ಮಾನವತೆಯುಳ್ಳವರು. ಅರಣ್ಯಕಾಂಡದಲ್ಲಿ ಪಾತ್ರಗಳ ಗುಣ ಆದರ್ಶದ ಎತ್ತಿಗೆ ಏರಿ ಅತಿಗಳನ್ನು ಮುಟ್ಟುತ್ತದೆ. ವಾನರ – ರಾಕ್ಷಸರ ವರ್ಣನೆಗಳಲಿ ನಂಬಿಕೆಗೆ ಮೀರುವಂತೆ, ಹುಚ್ಚು ಕಲ್ಪನೆಯಂತೆ, ಅಸ್ವಾಭಾವಿಕವೆಂಬಂತೆ ಕೆಲವು ಇರುತ್ತವೆ. ಹೆಕ್ಟರನ (Hector) ಉದಾತ್ತತೆ, ವೀರ; ಆಂಡ್ರೊಮ್ಯಾಕಿಯ (Andromache) ಪ್ರೀತಿ, ಪತಿಭಕ್ತಿ ; ತಂದೆ ಪ್ರಿಯಮಿಗೆ ಹೆಕ್ಟರಲ್ಲಿರುವ ವಾತ್ಸಲ್ಯ ; ಪೆಟ್ರೊಕ್ಲಾಸಲ್ಲಿ (Petroclos) ಆಖಿಲೇಸಿಗಿರುವ (Achilles) ಸ್ನೇಹದ ವಿಪರೀತ – ಈ ಪ್ರಸಂಗಗಳನ್ನು ಬಿಟ್ಟರೆ ಇಲ್ಲಿನ ವ್ಯಕ್ತಿಗಳ ಶೀಲದ ಉನ್ನತಿ ನನ್ನೊಬ್ಬನ ಮನಸ್ಸಿಗಂತೂ – ಯಾರಲ್ಲಿಯೂ ಕಾಣುವುದಿಲ್ಲ. ರಾಗದ್ವೇಷಗಳು ಕಾಡು ಕಾಡು. ಆಗಮೆಮ್ನೋನ್ ಬೀಡಾರದಲ್ಲಿ ನಡೆಯುವ ಸಲಹಾಮಂಡಲಿಗಳಲ್ಲಿಯೂ ಆಖಿಲೇಸ್ ಗೂಡಾರದಲ್ಲಿಯೂ ಯಾವ

ಸಂಗತಿಯೂ ಉದಾರತೆಗೆ ಹೆಸರುಗೊಳ್ಳವು. ಕಪಟವೂ ತಂತ್ರವೂ ಒರಟುತನವೂ ಪುಷ್ಕಲವಾಗಿವೆ. ಅಲ್ಲಿನ ಜಗಳಗಳೂ ಕ್ರೋಧಾವೇಶವೂ ಮುಗಿಯುವಂಥವೇ ಅಲ್ಲ. ಆ ಕಾವ್ಯದ ೫–೬ನೇ ಭಾಗದವರೆಗೆ ಆಖಿಲೇಸಿನ ಸೇಡುಬುದ್ಧಿ ಸಡಿಲವಾದೀತೆಂಬ ಭಾವನೆ ಬಾರದು. ಅವನಿಗೂ ಆಗಮೆಮ್ನೋನಿಗೂ ಕೋಟಲೆ ಇದ್ದೇ ಇದೆ. ಮುಯ್ಯಿ ಬುದ್ಧಿ ಕರಗಿ ಟ್ರೋಜನರೊಡನೆ ಯುದ್ಧ ಮಾಡಲು ಕಳಕ್ಕೆ ಬರುವಂತೆ ಆಖಿಲೇಸ್ ಒಪ್ಪುವುದಾದರೆ ಬ್ರಿಸೈಸ್ (Briseis) ಎಂಬ ಹೆಣ್ಣನ್ನೂ ಅಮೂಲ್ಯವಾದ ಇತರ ಕೊಡುಗೆಗಳನ್ನೂ ಕೊಟ್ಟು ಸಮಾಧಾನ ಮಾಡುತ್ತೇನೆಂದ ನಾಯಕನ ಪ್ರಯತ್ನಗಳು ಕೊನೆಯಿಲ್ಲದೆ ನಡೆಯುತ್ತವೆ. ಇತ್ತ ತನಗೆ ಅನ್ಯಾಯವಾಯಿತೆಂಬ ಭಾವನೆ ಪುಷ್ಟಿಗೊಂಡೇ ಇರುತ್ತದೆ. ಸುಮಾರು ಕಡೆಯವರೆಗೂ ಹಗುರಾಗದು. ಆಖಿಲೇಸ್‌ಗೂ ಜ್ಯೂಸ್‌ಗೂ (Zeus) ನಡುವೆ ಒಲವಿನ ಸಂಧಾನ ನಡೆಸಿ ಕತೆಯ ಕ್ಲಿಷ್ಟತೆಗಳನ್ನು ಕಡಮೆ ಮಾಡುವುದರಲ್ಲಿ ದೊಡ್ಡ ಪಾತ್ರವಹಿಸುವವಳು ಅಖಿಲೇಸ್ ತಾಯಿ ಥೇಟಿಸ್ (Thetis). ಗ್ರೀಕರಿಗೆ ಮೊದಲು ಒದಗಿದ ಪ್ರತಿಕೂಲಗಳಿಗೂ ಆಮೇಲೆ ಬಂದಂಥ ಜಯಗಳಿಗೂ ಕಾರಣನಾದವನು ದುರಾರಾಧ್ಯನಾಗಿದ್ದ ಆಖಿಲೇಸ್. ಪ್ಯಾರಿಸ್ (Paris) ಆಗಲಿ, ಅಥವಾ ಮೆನೆಲಾಸ್ (Menelaus) ಆಗಲಿ, ಮಹಾತ್ಮರಾಗಿ ಅಥವಾ ಶೀಲವಂತರಾಗಿ ಆಗಲಿ ಪ್ರಕಾಶಕ್ಕೆ ಬರುವುದಿಲ್ಲ. ಹೆಲೆನ್ (Helen) ತಾನು ಒಲಿದು ಬಂದ ಪ್ಯಾರಿಸ್‌ಗೂ ದೃಢ ಭಕ್ತಿಯುಳ್ಳವಳಾಗಿದ್ದಳೆಂದೂ ಸ್ಫುಟಗೊಳ್ಳುವುದಿಲ್ಲ. ಅವಳನ್ನು ಸೀತೆಗೆ ಹೇಗೆ ಹೋಲಿಸಲಾದೀತು ? 'ನಾನು ಎಂತಹ ಅವಿವೇಕದ ಕೆಲಸ ಮಾಡಿದೆ : ಇಬ್ಬರು ಸೋದರರಲ್ಲಿ ಕೀಳಾದವನಿಗೆ ಒಲಿದು' ಎನ್ನುತ್ತಾಳೆ. ತನ್ನ ಹಾಸಿಗೆಯ ಮೇಲೆ ವಿಶ್ರಮಿಸಿಕೊಳ್ಳಬಹುದೆಂದು ಆಕೆ ಹೆಕ್ಟರಿಗೆ (Hector) ಆಹ್ವಾನ ಕೊಟ್ಟ ಸಂದರ್ಭವೂ ಉಂಟು.

ಟ್ರಾಯಲ್ಲಿ ನಡೆದ ಯುದ್ಧದಲ್ಲಿ ಹೆಚ್ಚು ಕಡಮೆ ಪೂರ್ಣಕಾಲದವರೆಗೂ, ಬಹುಕಾಲ, ಆಖಿಲೇಸಲ್ಲಿ ಅಡಗಿದ್ದ ಕೋಪವೂ ಸೇಡುಬುದ್ಧಿಯೂ ತಾನು ಮಾಡಿದ ಯುದ್ಧದ ಮೊದಲು ಮೊದಲಲ್ಲಿ ಶತ್ರುಗಳ ಮೇಲೆ ನಡೆದ ಕದನಗಳಲ್ಲಿ ಅವನು ಬಡಿದ, ಕೆಡವಿದ ಪ್ರಸಂಗಗಳಲ್ಲಿ ಟ್ರೋಜನರು ತಮ್ಮ ಕೋಟೆಯ ಒಳಕ್ಕೆ ಹೋಗಿ ಸೇರಿಕೊಳ್ಳುವಂತೆ ಮಾಡುತ್ತಾನೆ. ಅವನ ತಾಯಿ ಜ್ಯೂಸ್ ಬಳಿಗೆ ಹೋಗಿ, ಅವನ ಪರವಾಗಿ ಮಹಾದೇವನನ್ನು ಒಲಿಸಿ, ಅವನಿಗೆ ಜಯ ಬರುವಂತೆಯೂ ಹೆಕ್ಟರ್ ಶವವನ್ನು ತಂದೆ ಪ್ರಿಯಮಿಗೆ ಆಖಿಲೇಸ್ ಕ್ರೋಧ ಬಿಟ್ಟು ಒಪ್ಪಿಸುವಂತೆಯೂ ಥೇಟಿಸ್ ಮಾಡಬೇಕಾಯಿತು. ತನ್ನ ಮಗನು ಹಗೆಗಳು

ಗಾಯಗೊಳಿಸಲಾಗದ ವೀರನಾಗುವಂತೆ ಒಂದು ಕವಚವನ್ನು ಮಾಡಿಕೊಡಲು ವಲ್ಕನ್ (Valcan) ಅನ್ನು ಒಪ್ಪಿಸಿ ಮಾಡಿಸುತ್ತಾಳೆ. ಹೆಕ್ಟರನ್ನು ಗೋರಿಗೊಳಿಸಿ ತಮ್ಮ ಕೋಟೆಯ ಒಳಗಿಂದ ಪಾಲ್ಲಾಸ್ ಅಥೆನಿ (Pallas Athene) ಹೊರಗೆ ಕರೆತರದಿದ್ದರೆ ಆಖಿಲೇಸ್‌ಗೆ ಜಯ ಬರುತ್ತಿರಲಿಲ್ಲ. ದೇವತೆಗಳ ಜಗಳಗಳೂ ಅಸೂಯೆಗಳೂ ಸಂಚು ತಂತ್ರಗಳೂ ಇಲಿಯಡಲ್ಲಿ ಹೆಚ್ಚು ಪ್ರಚುರಗೊಂಡಿವೆ. ಸೋದರ ಸೋದರಿಯರು ಒಬ್ಬರೊಡನೊಬ್ಬರು ಜಗಳ ಮಾಡುತ್ತಾರೆ. ಅಥೆನಿ – ಮಾರ್ಸ್ (Mars) ವಿರೋಧವಿದೆ. ತಾಯಿಮಗಳಿಗೆ ಕೋಟಲೆ. ಜ್ಯೂಸ್ ಮಹಾದೇವನಿಗೇ ತನ್ನ ಮಹಾದೇವಿಯಲ್ಲಿ ಅಸಮಾಧಾನ. ಮಾರ್ಸ್ ವೀನಸ್ (Venus) ದೇವತೆಗಳು ಎರಡನೆಯ ದರ್ಜೆಯ ದೇವತೆಗಳು. ಒಲಿಂಪಸ್ ಪರ್ವತಗಳ ಮೇಲೆಯೂ ಭೂಮಿಯ ಮೇಲೂ ತನ್ನ ಅಧಿಕಾರ ನಡೆಯುವಂತೆ ಜ್ಯೂಸ್ ಮಹಾದೇವನನ್ನು ಉಳಿಸುವುದೂ ಶಿಸ್ತು ನೇಮಗಳು ಉಳಿಯುವಂತೆ ಕಾಪಾಡುವುದೂ ಅವನಿಗೆ ಪರಮಶಕ್ತಿ ಕೊಟ್ಟಿದ್ದ ವಜ್ರದಂತಹ ಆಯುಧ. ಅದೊಂದೇ ಉಳಿದ ಎಲ್ಲವನ್ನೂ ನಯಗೊಳಿಸುವ, ಅಡಗಿಸಿ ವಶಪಡಿಸುವ ಸಾಧನ. ಹಾಗೆ ನೋಡಹೋದರೆ 'ಇಲಿಯಡ್'ನ ಜಗಳಗಳು ಹೆಚ್ಚಾಗಿ ದೇವದೇವತೆಗಳ ನಡುವೆ ಮಸೆಯುತ್ತಿದ್ದ ಜಗಳಗಳು. ಗ್ರೀಕರಿಗೆ ಟ್ರೋಜನರಿಗೆ ಇದ್ದ ವಿರೋಧಕ್ಕಿಂತ ಇವರ ಮನಸ್ತಾಪಗಳು ಹೆಚ್ಚಿನವು. ಇವು ಅವಕ್ಕೆ ಅವಕಾಶವನ್ನು ಒದಗಿಸುತ್ತವೆ ಮಾತ್ರ. ಅಪಾಲ್ಲೊ (Apollo), ಜ್ಯೂಸ್ ಮತ್ತು ಅಥೆನಿಯರಿಗೆ ಪಡ್ಡೆ ಹೋರಿಗಳನ್ನು ಬಲಿಕೊಟ್ಟು, ಆಯ್ದ ಉತ್ತಮ ದ್ರಾಕ್ಷಾರಸವನ್ನು ಪೂಜಾರಾಧನೆಗಳಲ್ಲಿ ಅವರ ದೇವ ಮಂದಿರಗಳಲ್ಲಿ ಒಪ್ಪಿಸಿ, ಅವರ ಒಲವು ಪಡೆಯಬಹುದಿತ್ತು. ಯಾವುದನ್ನು ದೊಡ್ಡತನ, ನಿಷ್ಪಕ್ಷಪಾತ, ಶುದ್ಧ ಮಾನವತೆ ಎಂದು ಸ್ವೀಕರಿಸಬಹುದೊ ಅಂಥುದರ ಮೂಲಕ ಯಾವುದೂ ರಾಗಾವೇಶಗಳನ್ನು ಕರಗಿಸುವಂತಿರಲಿಲ್ಲ. ಭಾರತೀಯರ ಮನಸ್ಸಿಗೆ ಒಪ್ಪಿಕೆಯಾಗುವ ರಾಮ, ಸೀತೆ, ಲಕ್ಷ್ಮಣ, ಭರತ, ಸುಮಿತ್ರೆ ಇವರ ಮೂಲಭೂತವಾದ ಮಾನವತೆಗೂ ಮಹಾನುಭಾವತೆಗೂ ಹೋಲಿಸಬಲ್ಲ ಉನ್ನತಿ ಆ ಮಹಾಕಾವ್ಯಗಲ್ಲಿ ಯಾವ ಸಮಯದಲ್ಲಿಯೂ ಕಾಣಿಸುವುದಿಲ್ಲ. ಆತನ ಲೋಪಗಳು ಎಂಥವಾದರೂ ಅವು ರಾಮನ ಸದ್ಗುಣಗಳಿಂದ ಉಂಟಾದ ಲೋಪಗಳು. ಸೀತೆಯ ಶುಚಿ, ಪಾತಿವ್ರತ್ಯದ ಸಮ್ಮಾನ್ಯತೆ, ಋಜುತ್ವ ಸಿದ್ಧಿಯಾಗಲಿ, ರಾಮನ ವೀರಗುಣದ ಉದಾರತೆಯಾಗಲಿ 'ಇಲಿಯಡ್' ಗ್ರಂಥದಲ್ಲಿ ಅಥವಾ 'ಏನೈಡ್' ಗ್ರಂಥದಲ್ಲಿ ಸಾಟಿಗೊಳ್ಳದ ಲಕ್ಷಣಗಳು.

ಗ್ರೀಕ್ ಮತ್ತು ರೋಮನರ ಮಹಾಕಾವ್ಯಗಳಲ್ಲಿನ ಯುದ್ಧದ ವರ್ಣನೆಗಳು

ಹೆಚ್ಚು ಸಹಜವಾದವೆಂದೆ ; ವೀರ ಯೋಧರು ಮಾನವ ಯೋಧರು. ಅಂಥ ಕದನಗಳ ವರ್ಣನೆಗಳಲ್ಲಿಯೂ ಸಲಹಾ ಮಂದಿರಗಳ ವರ್ಣನೆಗಳಲ್ಲಿಯೂ ಹೆಚ್ಚು ಬಿಗಿಕಟ್ಟೂ ಹೆಚ್ಚು ಜೀವಕಳೆಯೂ ಕಾಣುತ್ತದೆ. ಅವುಗಳ ಮಟ್ಟದಲ್ಲಿ ಅಲ್ಲಿನ ತಂತ್ರಗಳೂ ಸಂಧಾನಗಳೂ ಮನಸ್ಸಿಗೆ ಒಪ್ಪಿಕೆಯಾಗುತ್ತವೆ. ಹೋಮರನ ಉಪಮಾನಗಳು ಅಥವಾ ಮಹೋಪಮೆಗಳೆಂಬ ಉಪಮೆಗಳು ತಮ್ಮ ಸಹಜಗುಣದಿಂದ ಸುಂದರವಾಗಿವೆ. ಅವುಗಳ ಸಾವಯವ ಅಥವಾ ವಾಸ್ತು ನಿರ್ಮಾಣದಂತಿರುವ ಶಿಲ್ಪ ಮನಸ್ಸಿಗೆ ತಟ್ಟುತ್ತದೆ. ಬಿಗಿಪೂ ಹಾಳತವೂ ಇಲಿಯಡನ್ನು ಒಂದು ಮಹಾಕಾವ್ಯವನ್ನಾಗಿ ಮಾಡುತ್ತವೆ. ಜಯಕ್ಕಾಗಲಿ ಅಪಜಯಕ್ಕಾಗಲಿ ಪ್ರಧಾನ ಕಾರಣನಾಗಬಲ್ಲನೆಂಬಂತೆ ಯುದ್ಧ ರಂಗದಲ್ಲಿ ಉಳಿವ ಪ್ರಭಾವ ಆಖಿಲೇಸಿನದಾಗಿ ಅವನ ಶೌರ್ಯವೂ ಬಲವೂ ಎದ್ದು ಕಾಮುತ್ತವೆ. ಆದರೆ ಚೆಲುವಿಗಾಗಲಿ ಯೋಗ್ಯತೆಗಾಗಲಿ ಕೀರ್ತಿಗೊಳ್ಳಬಲ್ಲ ಕಾವ್ಯವಾಗವುದಿಲ್ಲ 'ಇಡಿಯಡ್'. ಭರತಖಂಡದಲ್ಲಿ ರಾಮಾಯಣದ ವಸ್ತು ಸತ್ವ, ಆವರಣ, ಸ್ಫೂರ್ತಿ, ಆತ್ಮೋನ್ನತಿ – ಈ ಅಂಶದಲ್ಲಿ ರಾಮಾಯಣದೊಡನೆ ಅದು ಹೋಲಿಕೆಗೆ ಸಲ್ಲುವುದಲಿಲ. ಇದು ಭಾರತೀಯ ಕವಿತೆ, 'ಇಡಿಯಡ್' ಅಲ್ಲ ಎಂಬುದಲ್ಲ ಕಾರಣ. ಬಹುಕಾಲದಿಂದ ಇದಕ್ಕೆ ವಿರುದ್ಧವಾದ ವಿಪರೀತ ಅಭಿಪ್ರಾಯ ಬಳಕೆಯಲ್ಲಿ ಇರುವುದರಿಂದ ಈ ಮಾತನ್ನಾಡಬೇಕಾಗಿ ಬಂದಿತು.

* * *

ರಾಮಾಯಣದಲ್ಲಿ ನಿಸರ್ಗವನ್ನು ಕುರಿತ ವರ್ಣನೆಗಳಲ್ಲಿ ಅಪಶಕುನಗಳು ಜನಕ್ಕೆ ಪ್ರಿಯವಾದಂತಿರುವ ರೀತಿಯಲ್ಲಿ ಕಾಣಬರುತ್ತವೆ. ಪ್ರಾಣಿಗಳ ಚಲನೆ, ಹಕ್ಕಿಗಳ ಹಾರಾಟ ಇವನ್ನು ತಿಳಿಸುತ್ತವೆ. ಕಾವ್ಯದ ಮೊದಮೊದಲಿಂದಲೂ ಈ ಶಕುನಗಳ ಸಂಗತಿಯಿದೆ. ಒಂದು ಕೆಟ್ಟ ಕನಸು ಕಂಡು ನಕ್ಷತ್ರಗಳ ಕೂಟ ಅನುಕೂಲವಾಗಿಲ್ಲವೆಂದು ತಿಳಿದಾಗಲೇ ದಶರಥನು ರಾಮನ ಯೌವ ರಾಜ್ಯಾಭಿಷೇಕವನ್ನು ತ್ವರೆಗೊಳಿಸಬೇಕೆಂದು ಕೊಂಡುದು. ತನಗೆ ಸಾವೊ ಕೇಡೊ ಉಂಟಾಗಲಿದೆಯೆಂದು ಆತ ಭಯಪಟ್ಟ. ತನ್ನನ್ನು ಬೇಗ ಹಿಂದಕ್ಕೆ ಅಯೋಧ್ಯೆಗೆ ಕರೆದುಕೊಂಡು ಹೋಗಲು ಕೇಕಯ ದೇಶಕ್ಕೆ ಸುದ್ದಿಗಾರರು ಹೋಗುವ ಹಿಂದಿನ ರಾತ್ರಿ ಭರತನಿಗೆ ಕೆಟ್ಟ ಕನಸಾಗಿತ್ತು. ರಾವಣನ ಅರಮನೆಯಲ್ಲಿ ಉಂಟಾದ ಅಪಶಕುನಗಳು ಹಲವು. ಅವನು ಯುದ್ಧರಂಗಕ್ಕೆ ಹೊರಡುವ ದಾರಿಯಲ್ಲಿಯೂ ಅವು ಕಂಡವು. ಅಮಾವಾಸ್ಯೆಯ ದಿನವಲ್ಲವಾದರೂ ರಾಮನಿಗೆ ವಿರುದ್ಧವಾಗಿ ಸೈನ್ಯವನ್ನು ನಡಸಿಕೊಂಡು ಹೋಗುತ್ತಿದ್ದ ಖರನೆದುರಿಗೆ ಸೂರ್ಯಗ್ರಹಣ

ದರ್ಶನವಾಯಿತಂತೆ. ರಾತ್ರಿಯ ಕಾಲವಲ್ಲವಾದರೂ ಮಿಂಚುಹುಳುಗಳಂತೆ ಆಕಾಶದಲ್ಲಿ ನಕ್ಷತ್ರಗಳು ಕಾಣಿಸಿದುವಂತೆ. ಕೊಳಗಳ. ನದಿಯ ತಳದಲ್ಲಿ ಮೀನು ಹೋಗಿ ಸೇರಿಕೊಂಡವಂತೆ. ತಮ್ಮ ತಮ್ಮ ದಂಟಿನ ಮೇಲೆಯೇ ತಾವರೆ ಒಣಗಿದುವಂತೆ. ಹಣ್ಣು, ಹೂ ಹೆಚ್ಚು ಸಂಖ್ಯೆಯಲ್ಲಿ ಕೆಳಗೆ ಬಿದ್ದವು. ಯಾವ ಗಾಳಿ ಬೀಸದಿದ್ದರೂ ಮರಗಳು ಇದ್ದಕ್ಕಿದ್ದಂತೆ ಬರಲಾಗುತ್ತವೆ. ಕೆಂಪನೆಯ ಮೋಡವಾಗಿ ದೂಳು ಮೇಲೇಳುತ್ತದೆ. ಒಂದು ವಿಚಿತ್ರ ಲಕ್ಷಣವನ್ನು ಕಾಣಿಸುವುದಕ್ಕಾಗಿ ಕವಿ –

ವೀಚೀ ಕೂಚೀತಿ ವಾಸ್ಯಂತ್ಯೋ ಬಭೂವುಃ ತತ್ರ ಶಾರಿಕಾಃ

ಶಾರಿಕೆಗಳು 'ವೀಚೀ ಕೂಚೀ' ಶಬ್ದಗಳನ್ನು ಮಾಡುತ್ತ ಕೂಗುತ್ತಿದ್ದುವೆನ್ನುತ್ತಾನೆ:

ಉಲ್ಕಾಶ್ಚಾಪಿ ಸನಿರ್ಘಾತಾ ನಿಪೇತುಃ ಘೋರದರ್ಶನಾಃ

ಉಲ್ಕೆಗಳು ಭಯಗೊಳಿಸುವಂತೆ ದೊಡ್ಡ ಶಬ್ದ ಮಾಡುತ್ತ ಕೆಳಗೆಬಿದ್ದಿದ್ದವು. ಸುಗ್ರೀವನ ಮೇಲೆ ಅಸಮಾಧಾನ ಉಂಟಾದ ಅವಕಾಶದಲ್ಲಿ ಲಕ್ಷ್ಮಣನು ಆನೆ ತನ್ನ ಸೊಂಡಿಲನ್ನು ಆಡಿಸುವಂತೆ ತೋಳನ್ನಾಡಿಸುತ್ತಿದ್ದನಂತೆ. ಕೈಗಳನ್ನು ಮೇಲಕ್ಕೆ ನೆಗಹುತ್ತಾ ತಲೆಯನ್ನು ಮೇಲೆ ಕೆಳಗೆ ಆಡಿಸುತ್ತಿದ್ದನು. ನಡೆಯುತ್ತಿದ್ದುದು ಯಾವುದೂ ತನಗೆ ಒಪ್ಪಲಿಲ್ಲವೆಂದು ಸೂಚಿಸುವಂತೆ ತಲೆ ಅಲ್ಲಾಡಿಸುತ್ತಿದ್ದ. ಮರಳಿ ಮರಳಿ ತಲೆಯನ್ನು ತಗ್ಗಿಸುತ್ತಿದ್ದ. ತನ್ನ ಮನಸ್ಸಿನೊಳಗೇನೊ ಅಣ್ಣನ ಮನಃಸ್ಥೈರ್ಯವನ್ನು ಶ್ಲಾಘಿಸಿಕೊಳ್ಳುತ್ತಿದ್ದನು. ಹುಬ್ಬುಗಳು ಗಂಟಿಕ್ಕುತ್ತಿದ್ದವು. ದೊಡ್ಡದಾದ ವಿಷಸರ್ಪವು ತನ್ನ ಬಿಲದಲ್ಲಿ ಬುಸುಗುಟ್ಟುವಂತೆ ಉಸಿರುಬಿಡುತ್ತಿದ್ದ. ಕೋಪಗೊಂಡ ಸಿಂಹದಂತೆ ಮುಖ ಉಗ್ರವಾಗಿ ಕಾಣುತ್ತಿತ್ತು. ಕಿಷ್ಕಿಂಧೆಯಲ್ಲಿ ನಾಲ್ಕು ತಿಂಗಳ ಕಾಲ ಮಳೆ ಸುರಿಯುತ್ತಿರುವಾಗ ಅಣ್ಣನ ಸಂಕಟವನ್ನು ಲಕ್ಷ್ಮಣನು ಕಂಡಿದ್ದ. ತಾನೂ ಸುಗ್ರೀವನ ಮರ್ಯಾದಾಹೀನವಾದ ನಡತೆಗೆ ಚಡಪಡಿಸುತ್ತಿದ್ದನು. ರಾಮನಿಗೂ ಕೋಪ ಬಂದಿತ್ತು. ಸುಗ್ರೀವನು ಗ್ರಾಮ್ಯಸುಖಗಳಲ್ಲಿ ಮುಳುಗಿ ಹೋಗಿದ್ದಾನೆ, ಕೃತಘ್ನನಾಗಿದ್ದಾನೆ ಎಂಬುದನ್ನು ಅವನು ಲಕ್ಷ್ಮಣನಿಗೆ ಹೇಳಿದ್ದ. ನನ್ನ ಕೋಪದ ಸ್ವರೂಪವನ್ನು ಅವನಿಗೆ ತಿಳಿಸು ಹೋಗು ಎಂದಿದ್ದ :

ನ ಚ ಸಂಕುಚಿತಃ ಪಂಥಾ ಯೇನ ವಾಲೀ ಹತೋ ಗತಃ
ಸಮಯೇ ತಿಷ್ಠ ಸುಗ್ರೀವ, ಮಾ ವಾಲಿಪಥಂ ಅನ್ವಗಾಃ
ತ್ವಾಂತು ಸತ್ಯಾತ್ ಅತಿಕ್ರಾಂತಂ ಹನಿಷ್ಯಾಮಿ ಸಬಾಂಧವಂ.

ವಾಲಿ ನಡೆದು ಮೃತಿ ಹೊಂದಿದ ದಾರಿ ಇಕ್ಕಟ್ಟಿನದಲ್ಲ. ಸುಗ್ರೀವ, ನಿನ್ನ ಒಪ್ಪಂದದ ಸಮಯಗಳನ್ನು ಈಡೇರಿಸು. ವಾಲಿ ತುಳಿದ ದಾರಿಯನ್ನು ತುಳಿಯಬೇಡ. ಸತ್ಯವನ್ನು ಮೀರಿದೆಯಾದರೆ

ನಿನ್ನನ್ನು ನಿನ್ನ ಎಲ್ಲ ಸಂಬಂಧಿಗಳೊಡನೆ ನಾಶಮಾಡುತ್ತೇನೆ.

ಲಕ್ಷ್ಮಣನನನ್ನು ಉದ್ವೇಗಗೊಳಿಸುವುದಕ್ಕೆ ಇಷ್ಟು ಸಾಕಾಯಿತು. ಒಂದು ಕ್ಷಣದಲ್ಲಿ ರಾಮನಿಗೆ ಗೊತ್ತಾಗುತ್ತದೆ – ತಾನು ತನ್ನ ತಮ್ಮನನ್ನು ಉದ್ವೇಗಗೊಳಿಸುತ್ತಿದ್ದೇನೆಂದು. ಒಡನೆಯೇ ತಮ್ಮನಿಗೆ ಮೃದುವಾಗಿ 'ಇಂಥ ಕೋಪ ಬರಿಸುವ ಪರಿಸ್ಥಿತಿಯಲ್ಲಿಯೂ ಮಿತ್ರನೊಬ್ಬನಿಗೆ ಕಠಿಣವಾದ ಮಾತು ಬಳಸಬಾರದು ! ಆದುದರಿಂದ ಶಾಂತವಾಗಿ ನುಡಿ, ನಡೆ' ಎನ್ನುತ್ತಾನೆ. 'ಮಿತ್ರವಧೆ ಪಾಪ ! 'ಪ್ರೀತಿಂ ಅನುವರ್ತಸ್ವ' – ಪ್ರೀತಿಯಿಂದ ಸಂದರ್ಭಕ್ಕೆ ತಕ್ಕಹಾಗೆ ನಡೆದುಕೊ; ಆಡುವ ಮಾತುಗಳು ಸಮರ್ಪಕವಾಗಿರಲಿ. ನುಡಿಯುವ ಮಾತು ಕಠಿಣವಾಗುವುದು ಬೇಡ. ಕಾರ್ಯ ನಡೆಯದೆ ಕಾಲ ವ್ಯರ್ಥವಾಗಿ ಕಳೆಯುತ್ತಿದೆ ಎಂದು ತಿಳಿಸು' ಎನ್ನುತ್ತಾನೆ.... ಹಿಂದೆ, ಮುಂಚೆ ಮುಂಚೆ, ಕೈಕೆಯನ್ನು ಕುರಿತು ರಾಮನ ಮನಸ್ಸಿನಲ್ಲಿ ಅಸಮಾಧಾನ ತೋರಿದ್ದಾಗ ಲಕ್ಷ್ಮಣನೂ ಹಾಗೆಯೇ ಕೆರಳಿಕೆಗೊಂಡಿದ್ದ. ಈ ಸುಳಿವನ್ನು ಅರಿತು ರಾಮ ತತ್‌ಕ್ಷಣದಲ್ಲಿಯೇ ಶಾಂತನಾದ. ಉದ್ವೇಗಗೊಳ್ಳಬೇಡ, ಆಕೆಯ ವಿರುದ್ಧವಾಗಿ ಕಠಿಣ ಭಾವನೆ ತಾಳಬೇಡ ಎಂದು ಲಕ್ಷ್ಮಣನಿಗೆ ಪ್ರತಿಷೇಧ ಮಾಡಿದ್ದ. ಕೈಕೆಯನ್ನು ಅರ್ಥಮಾಡಿಕೊಳ್ಳಬೇಕು ; ಅವಳ ನಡತೆಯನ್ನು ಕ್ಷಮಿಸಬೇಕು. ತಾಯಿ ಮಗನ ಪರವಾಗಿ ಹಾಗೆ ಯೋಚಿಸುವುದು, ನಡೆಯುವುದು ಸಹಜವಾದ್ದು ಎಂದು ಲಕ್ಷ್ಮಣನಿಗೆ ಕಾರಣಗಳನ್ನು ಕೊಡುತ್ತಾನೆ. ಲಕ್ಷ್ಮಣನಲ್ಲಿಯೂ ಆ ರೇಗಾಟ ಒಂದು ಕ್ಷಣದ ದೌರ್ಬಲ್ಯ. ತನ್ನನ್ನು ತಾನು ನಿಯಾಮಿಸಿಕೊಳ್ಳಬಲ್ಲವನಾಗಿದ್ದನು. ಇನ್ನೊಬ್ಬನಲ್ಲಿ ಅದರಲ್ಲಿಯೂ ರಾಮನ ಹಕ್ಕು ಅಧಿಕಾರಗಳ ವಿಷಯದಲ್ಲಿ ಅತಿಶಯ ಶ್ರದ್ಧೆಯುಳ್ಳವನೂ ಸೂಕ್ಷ್ಮ ವೇದನೆಯುಳ್ಳವನೂ ಸುಲಭಕೋಪಿಯೂ ಆದ ಲಕ್ಷ್ಮಣನಲ್ಲಿ ತಪ್ಪು ಪರಿಣಾಮಗಳಿಗೆ ಕೋಪ ನಡಸಬಹುದು.

ಆದರೂ ಲಕ್ಷ್ಮಣನು ತನ್ನ ಭಾವಗಳನ್ನು ಪೂರ್ತಿ ತಡೆದುಕೊಳ್ಳಲಾಗಲಿಲ್ಲ. ಒಂದು ನಾಶಕರ ಬಿರುಗಾಳಿಯಂತೆ ಕಿಷ್ಕಿಂಧೆಯ ಕಡೆ ಹೊರಟಿದ್ದ. ಹೇಗೆ ಹೋದ ? ಸಾಲ ತಾಲ ಅಶ್ವಕರ್ಣ ಮುಂತಾದ ನಾನಾ ತರುಗಳು ಅವನ ದಾರಿಗೆ ಅಡ್ಡ ಬಂದರೆ ಅವನ್ನು ಕಡಿದುಹಾಕುತ್ತ ಹೋದ. ಬೆಟ್ಟದ ಬಳಿ ಬಂಡೆಗಳಿದ್ದರೆ ಅವನ್ನು ನೂಕಿ ಉರುಳಿಸುತ್ತ ಹೋದ. ದೊಡ್ಡ ಕಲ್ಲುಗಳನ್ನು ಒದ್ದ. ಆನೆ ಅವನ್ನು ಮಾಡುವಂತೆ ಪುಡಿ ಪುಡಿ ಮಾಡಿದ. ದೊಡ್ಡ ದೊಡ್ಡ ದೂರ ದೂರ ಹೆಜ್ಜೆ ಹಾಕಿ ಶೀಘ್ರವಾಗಿ ಹೋದ. ಇಂಥ ವರ್ಣನೆಯನ್ನು ಮುಂದುವರಿಸಿ ಬೆಳಸುವ ಅಗತ್ಯವಿಲ್ಲ... ಲಕ್ಷ್ಮಣನು ರಾಮನ ನೆರವಿಗೆ ಹೋಗುವುದಕ್ಕೆ

ತಡಮಾಡುತ್ತಿದ್ದಾನೆ ಎಂದು ಯೋಚಿಸಿ ಲಕ್ಷ್ಮಣನನ್ನು ಅವಸರಿಸುತ್ತಿರುವ ಸೀತೆಯ ಚಿತ್ರ, ಆಕೆ ಆಡುವ ಮಾತು ವಿಶೇಷವಾಗುತ್ತದೆ. ಮಾತಂತೂ ಯಾರನ್ನೂ ನೋಯಿಸುವಂಥದು. ಲಕ್ಷ್ಮಣನಿಗೆ ಸ್ವಂತವಾಗಿ ಕಲ್ಪನೆ ಇದೆ : ಈ ಸನ್ನಿವೇಶ ಒಂದು ಕುತಂತ್ರದಿಂದ ಉತ್ಪಾದಿತವಾಗಿದೆಯೆಂದು ; ರಾಮನಿಗೆ ಯಾರಿಂದಲೂ ಎಂದೇ ಆಗಲಿ ಕೇಡಾಗುವುದೆಂದು ಅವನಿಗೆ ಲವಲೇಶವೂ ಭಯವಿಲ್ಲ. ಸೀತೆಯ ಕಾವಲಾಗಿ ತಾನು ಉಳಿದಿರಬೇಕೆಂದು ರಾಮನು ಅವನಿಗೆ ಅಪ್ಪಣೆ ಮಾಡಿದ್ದಾನೆ. ಇಲ್ಲಿ ಸೀತೆ ಆಡುವ ಪ್ರತಿಯೊಂದು ಮಾತೂ ಅವನನ್ನು ಆ ಸ್ಥಳದಿಂದ ಅಟ್ಟುವಂತಿವೆ. 'ನೈತತ್ ಚಿತ್ರಂ ಸಪತ್ನೇಷು' – ದಾಯಾದಿಯಲ್ಲಿ ಇಂತಹ ನಡತೆ ಚಿತ್ರವೇನಲ್ಲ ಅಥವಾ, ನೀನು ಭರತನ ಗೂಢಚಾರನೊ? ನಿನಗಾಗಿಯೇ ನನ್ನನ್ನು ಬಯಸುತ್ತಿದ್ದೀಯಯೊ – ಇತ್ಯಾದಿ, ಇತ್ಯಾದಿ. ಲಕ್ಷ್ಮಣನು ಆಕೆಯನ್ನು ತಾಯಂತೆ, ತನ್ನ ದೇವರಂತೆ ಕಾಣುತ್ತಿದ್ದಾನೆ. ಇಂಥವಳು ಗೋದಾವರಿಯಲ್ಲಿ ಮುಳುಗಿ ಪ್ರಾಣ ಕಳೆದು ಕೊಳ್ಳುತ್ತೇನೆ ; ವಿಷ ತೆಗೆದುಕೊಳ್ಳುತ್ತೇನೆ; ನೇಣು ಹಾಕಿಕೊಳ್ಳುತ್ತೇನೆ; ಬೆಂಕಿ ಹಚ್ಚಿಕೊಳ್ಳುತ್ತೇನೆ ಎಂಬುದನ್ನು ಕೇಳಬೇಕಾಗಿದೆ. ಎಲ್ಲಕ್ಕಿಂತ ಅವನು ಕಂಡ ದೃಶ್ಯ ಇದು : ಇಂಥುದನ್ನು ಇವನ ಕಣ್ಣು ಕಾಣಬೇಕೆ? –

ಪಾಣಿಭ್ಯಾಂ ರುದತೀ ದುಃಖಾತ್ ಉದರಂ ಪ್ರಜಘಾನಹ

– ಎರಡೂ ಕೈಗಳಿಂದ ತನ್ನ ಹೊಟ್ಟೆಯನ್ನು ಹೊಡೆದುಕೊಂಡಳಂತೆ ! ನಿರಾಸೆಯ ಸ್ಥಿತಿಯನ್ನು ವ್ಯಕ್ತಪಡಿಸುವುದರಲ್ಲಿ ಸರ್ವಸಾಮಾನ್ಯವಾದ ನಡತೆ ನಮ್ಮಲ್ಲಿ ಇದು.

ರಾಮನ ವನವಾಸಕ್ಕೆ ಸರ್ವಥಾ ಒಪ್ಪುವುದಿಲ್ಲವೆಂದು ದಶರಥ ತಿಳಿಸುವಾಗ, ಸರ್ವಸಾಧಾರಣ ನಡವಳಿಕೆ ಕೈಕೆಯು ಮೇಲೆ ನಡೆಯುದಾಗಿ ದುರ್ಭಾಷೆಗಳನ್ನಾಡುವಾಗ 'ನಿನ್ನನ್ನೇನೊ ಮದುವೆಯಾಗಿದ್ದೇನೆ ; ಕೈಹಿಡಿದು ಅಗ್ನಿ ಪ್ರದಕ್ಷಿಣೆ ಮಾಡಿದ್ದೇನೆ. ಆದಾಗ್ಯೂ ಈಗ ನಿನ್ನನ್ನು ತ್ಯಾಗ ಮಾಡುತ್ತೇನೆ. ಇನ್ನು ಮುಂದೆ ನಿನ್ನನ್ನು ಹೆಂಡತಿ ಎಂದೆಣಿಸುವುದಿಲ್ಲ ; ನೀನು ನನಗೆ ಹಗೆ. ನಿನ್ನ ಅಭೀಷ್ಟದಂತೆ ಭರತನು ಒಪ್ಪಿಕೊಂಡು ರಾಜ್ಯಭಾರ ಮಾಡಿದರೆ ಅವನಿಂದ ತರ್ಪಣವನ್ನಾಗಲಿ ಪಿಂಡವನ್ನಾಗಲಿ ಮುಟ್ಟುವುದಿಲ್ಲ' ಎಂದ: – ಹಿಂದೂ ಮನೆತನಗಳಲ್ಲಿ ಲಕ್ಷಣವಾಗಿರುವಂತಹ ಒಂದು ನಿಲವು, ನುಡಿತ ಇದು.

ಒಬ್ಬ ರಾಜನು ತೀರಿಕೊಂಡು ಉತ್ತರಾಧಿಕಾರಿಯನ್ನು ಇನ್ನೂ ಘೋಷಿಸದಿರುವಾಗ ರಾಜಕೀಯವಾಗಿ ಉಂಟಾಗುವ ಶೂನ್ಯತೆಯ ಲೋಪದೋಷಗಳನ್ನು ಕಾವ್ಯ ವಿಸ್ತರಿಸುತ್ತದೆ. ಅರಾಜಕತೆಯನ್ನೂ ಅದರ ಕೆಟ್ಟ

ಪರಿಣಾಮಗಳನ್ನೂ ಪ್ರಮಾಣಕ್ಕೆ ಮೀರುವಂತೆ ಪಟ್ಟಿ ಮಾಡುತ್ತದೆ. ರಾಜನಿಲ್ಲದ ರಾಜ್ಯದ ಕೆಡುಕುಗಳನ್ನು ವರ್ಣಿಸಲು ಒಟ್ಟು ಒಂದು ಸರ್ಗವೇ ವಿನಿಯೋಗವಾಗುತ್ತದೆ. ರಾಮನು ಅಯೋಧ್ಯೆಯನ್ನು ಬಿಟ್ಟು ಕಾಡಿಗೆ ಹೋಗಿ ಇನ್ನೂ ಪೂರ್ತಿ ಒಂದು ತಿಂಗಳಾಗಿರಲಾರದು. ರಾಜನಾಗಿ ಆಳಲು ಒಪ್ಪಿಕೊಂಡು ಭರತನು ಸ್ಥಾಪಿತವಾಗುವುದಕ್ಕೆ ಸಾಕಷ್ಟು ಕಾಲವಾಗಿಲ್ಲ : ಪೂರ್ತಿ ಒಂದು ಸರ್ಗದಲ್ಲಿ ಪ್ರಶ್ನೆಗಳ ಪರಂಪರೆಯನ್ನೇ ರಾಮನು ಹಾಕುತ್ತಾನೆ, – ಕವಿ ಭರತನಿಗೆ ಉಪನ್ಯಾಸ ಮಾಡುತ್ತಿದ್ದಾನೊ ಎಂಬಂತೆ ; ಅಥವಾ, ರಾಜ್ಯಶಾಸ್ತ್ರದ ಮತ್ತು ಆಡಳಿತ ವಿಚಕ್ಷಣೆಯ ತತ್ವಗಳನ್ನು ಕುರಿತು ಕವಿ ಹಿತೋಪದೇಶ ಮಾಡುತ್ತಿದ್ದಾನೆಯೊ ಎಂಬಂತೆ. ಆ ಸರ್ಗದಲ್ಲಿ ರಾಜಕೀಯ ಜೀವನದ ವ್ಯವಸ್ಥೆಯಲ್ಲಿ ಯಾವುದನ್ನು ವಿವೇಕ ಮತ್ತು ದಕ್ಷತೆ ಎಂದು ಎಣಿಸುತ್ತಿದ್ದರೊ ಅಂಥುದೆಲ್ಲವನ್ನೂ ಚ ತು ತಪ್ಪದೆ ತಿಳಿಸುತ್ತಿರುವಂತಿದೆ ಅಥವಾ, ಇದು ಪ್ರಕ್ಷಿಪ್ತ ಭಾಗವೊ ?

ರಾಮಾಯಣದ ಎರಡು ಸನ್ನಿವೇಶಗಳಲ್ಲಿ ಒಂದು ಮಹಾ ವಾಕ್ಯದ ಉಕ್ತಿ ಬಂದು ವಿಶೇಷವಾಗಿ ಅರ್ಥಗೊಳ್ಳುತ್ತದೆ. ಒಂದು ಕಿಷ್ಕಿಂಧೆಯಲ್ಲಿ : ಸುಗ್ರೀವನು ಬಳಸುವಾಗ ; ಇನ್ನೊಂದು ಯುದ್ಧಕಾಂಡದಲ್ಲಿ : ಸೀತೆ ಅದನ್ನು ನುಡಿವಾಗ. ಆ ವಾಕ್ಯ : 'ನ ಕಶ್ಚಿನ್ನಾಪರಾಧ್ಯತಿ ?' ಅಪರಾಧವನ್ನು ಮಾಡದೆ ಇರುವವು ಯಾವನೂ ಇಲ್ಲ ಎಂಬುದು ಅದರರ್ಥ. ಅಪರಾಧ ಎಂಬ ಮಾತು ಭಾರತೀಯ ಲೌಕಿಕ ಜೀವನದಲ್ಲಿ ಸಣ್ಣ ತಪ್ಪಿನಿಂದ ಹಿಡಿದು ಘೋರ ಅಪರಾಧ (Crime) ಗಳವರೆಗೂ ವ್ಯಾಪ್ತಿ ಉಳ್ಳದ್ದು. ಈ ಎರಡರಲ್ಲಿ ಒಂದು ಸನ್ನಿವೇಶವೂ ಅಷ್ಟು ಘೋರವಾದುದೆನ್ನಬಹುದಾದುದಲ್ಲ. ಅಂಥ ಒಂದು ವಾಕ್ಯ ನಿಜವಾಗಿ ಸಂಸ್ಕಾರಗೊಂಡ ಜನರಲ್ಲಿ ಬಳಕೆಯ ಉಕ್ತಿವಿಶೇಷವಾಗಿತ್ತೊ ಏನೊ. ಇಂಥ ನೀತಿಯ ಉಕ್ತಿ ಜನದ ಬಾಯಲ್ಲಿ ಸುಳಿದಾಡುತ್ತಿರುತ್ತದೆ ಎಂದು ಕೆಲವರು ಹೇಳುವುದುಂಟು. ರಾಮಾಯಣದಲ್ಲಿಯೂ ಒಂದೇ ಸಲ ಹೇಳಿದ್ದಿದ್ದರೆ ಚೆನ್ನಾಗಿರುತ್ತಿತ್ತೆಂದಿದ್ದೇನೆ. ಆದರೆ ಎರಡು ಸಂದರ್ಭಗಳೂ ಎರಡು ಮಟ್ಟದ ನಡತೆ ಮತ್ತು ಶೀಲ ಪ್ರಕಾಶನದ ನಿದರ್ಶನಗಳಾಗುತ್ತವೆ. ಸುಗ್ರೀವನ ಪ್ರಸಂಗ ತಾನು ಮಾಡಿರಬಹುದಾದ ತಪ್ಪಿಗಾಗಿ ಕ್ಷಮಾಪಣೆ ಬೇಡುವಂಥದು –

> ಯದಿ ಕಿಂಚಿದತಿಕ್ರಾಂತಂ ವಿಶ್ವಾಸಾತ್ ಪ್ರಣಯೇನ ವಾ
> ಪ್ರೇಷ್ಯಸ್ಯ ಕ್ಷಮಿತವ್ಯಂ ಮೇ ನಕಶ್ಚಿನ್ನಾಪರಾಧ್ಯತಿ

– 'ಸ್ವಲ್ಪ ಮಟ್ಟಿಗೆ ಒಂದು ಮಾತನ್ನು ನಡೆಸಿಕೊಡದಾದರೆ ವಿಶ್ವಾಸದಲ್ಲಿ, ಪ್ರೀತಿಯಲ್ಲಿ ಕ್ಷಮಿಸಬೇಕು, ತಪ್ಪು ಮಾಡದೆ ಇರುವವರು ಯಾರೂ ಇಲ್ಲ' ಎಂದ. ರಾಮನು

ನನ್ನಲ್ಲಿಟ್ಟ ವಿಶ್ವಾಸವನ್ನು ನಾನು ಸ್ವಲ್ಪ ಮಟ್ಟಿಗೆ ಅತಿಕ್ರಮಿಸಿರಬಹುದು. ಅಥವಾ, ನಮ್ಮ ನಡುವೆಯ ಪ್ರೀತಿಯನ್ನು ಸ್ವಲ್ಪ ಧಾರಾಳದಿಂದ ಬಳಸಿರಬಹುದು. ನಾನು ಕ್ಷಮೆಯೋಗ್ಯನು. ಯಾರಿದ್ದಾರೆ ತಪ್ಪು ಮಾಡದಿರುವವರು? – ಎನ್ನುತ್ತಾನೆ. ನಾಲ್ಕು ತಿಂಗಳ ಕಾಲ ಸುಗ್ರೀವನು ತನ್ನ ಹೆಣ್ಣುಗಳ ನಡುವೆ ಮುಳುಗಿಹೋಗಿದ್ದಾನೆ– ವಿಷಯಸುಖಭೋಗಗಳಲ್ಲಿ. ರಾಮನು ಸ್ಥಿತಿಯನ್ನು ವಿಚಾರಿಸಲು ಒಮ್ಮೆಯೂ ಗಮನ ಕೊಟ್ಟಿಲ್ಲ ; ಸೋದರರನ್ನು ಹೋಗಿ ನೋಡಿಕೊಂಡು ಬಂದಿಲ್ಲ. ಮಳೆಗಾಲ ಈಗ ಮುಗಿದಿರುತ್ತದೆ. ಆಕಾಶ ಸ್ವಚ್ಛವಾಗಿದೆ. ಕಾರ್ಯ ಕೈಗೊಳ್ಳಲು ಸಮಯ ಉಂಟಾಗಿದೆ. ಆದರೂ ಸುಗ್ರೀವನ ಅರಮನೆಯಲ್ಲಿ ಯಾವ ಕಾರ್ಯ ಪ್ರವೃತ್ತಿಯ ಚಿಹ್ನೆಯೂ ಇಲ್ಲ. ತನ್ನ ಗ್ರಾಮ್ಯ ಸುಖಭೋಗಗಳನ್ನು ಉಳಿದು ಬೇರೆ ಇನ್ನೇನನ್ನೂ ಅವನು ಮನಸ್ಸಿಗೆ ಹಚ್ಚಿಕೊಳ್ಳುತ್ತಿದ್ದಾನೆಂಬ ಭಾವನೆ ಬರಲಿಲ್ಲ.... ಲಕ್ಷ್ಮಣನು ಊರ ಹೆಬ್ಬಾಗಿಲಲ್ಲಿ ನಿಂತಿದ್ದಾನೆ ; ಕೋಪದಲ್ಲಿದ್ದಾನೆ ಕಾರ್ಯಕ್ಕಾಗಿ ಒತ್ತುತ್ತ – ಎಂಬ ಸುದ್ದಿ ಸುಗ್ರೀವನಿಗೆ ಮುಟ್ಟಿದಾಗಲೂ ಲಕ್ಷ್ಮಣನ ಬಿಲ್ಲ ಹೆದೆಯ ಟಂಕಾರದ ಶಬ್ದವನ್ನು ಕೇಳುತ್ತಿರುವಾಗಲೂ ಅವನು ಮೊದಲು ತಾರೆಯನ್ನು ಕಳಿಸುತ್ತಾನೆ, – ಲಕ್ಷ್ಮಣನ ಮನಸ್ಸಿಗೆ ಸಮಾಧಾನ ಹೇಳುವುದಕ್ಕೆ, ಕೃಪಾವಲೋಕನಕ್ಕಾಗಿ ಅವನ ಮನಸ್ಸನ್ನು ಸಿದ್ಧಗೊಳಿಸುವುದಕ್ಕೆ. ಬಹು ಕಾಲ ಹಸಿದ ಜೀವ ಸುಗ್ರೀವನದು ; ಎಲ್ಲ ಭೋಗಗಳಿಂದಲೂ ಇಷ್ಟು ಕಾಲ ದೂರವಿದ್ದು ಭಂಗಪಟ್ಟವನು ; ಈಗ ಲಂಪಟನಾದಂತೆ ಕಾಣುತ್ತಿರಬಹುದು, – ಪಾನ, ಸ್ತ್ರೀ ಆಕರ್ಷಣೆಗಳಲ್ಲಿ. ವಿಶ್ವಾಮಿತ್ರನಂತಹ ಋಷಿಗೇ ಇದು ಸಹಜವಾಗುವುದಾದರೆ ಸಾಮಾನ್ಯ ಮನುಷ್ಯನು ಕ್ಷಮಾರ್ಹನಾಗುತ್ತಾನೆ. ಸುಗ್ರೀವನು ಕಪಿಯಲ್ಲವೇ?[೯] ಲಕ್ಷ್ಮಣನ ಕೋಪವನ್ನು ಇಳಿಸುವುದಕ್ಕಾಗಿ ಲಕ್ಷ್ಮಣನಿಗೆ ಅಂತಃಪುರದೊಳಗೆ ಬರಬೇಕೆಂದು ತಾರೆ ಆಹ್ವಾನಿಸುತ್ತಾಳೆ, ಸ್ನೇಹಿತನ ಮನೆ ಅಲ್ಲವೆ ? ಸಂಕೋಚ ಬೇಕಿಲ್ಲ – ಎಂದು ಹೇಳಿ.

ಲಕ್ಷ್ಮಣನ ಕಣ್ಣಿಗೆ ಬೀಳುವುದೇನು? – ಸುಗ್ರೀವನು ರುಮೆಯನ್ನು ತಬ್ಬಿಕೊಂಡಿದ್ದಾನೆ ; ಏನು ನಡೆಯುತ್ತಿದೆ ಎಂಬ ಪ್ರಜ್ಞೆ ಇಲ್ಲದವನಂತೆ. ಪಾನದ ಹಬೆ ಇನ್ನೂ ಇಳಿದಿರಲಿಲ್ಲ. ಈ ಮುಂಚೆ ಹನುಮಂತನು ಅವನೊಡನೆ ಮಾತನಾಡಿದ್ದ. ತಾರೆಯ ಮೃದುವಾದ ಮಾತುಗಳೂ ವಿಚಕ್ಷಣೆಯಿಂದ ಕೂಡಿದ

---

[೯] ಬಹುಶಃ ವಾಲ್ಮೀಕಿ ಈ ಮಾತನ್ನು ನುಡಿಯುತ್ತಿದ್ದಾನೆ ; ತಾರೆಯಿರಲಾರದು. ತಾನೇ ಒಬ್ಬ ಕಪಿಸ್ತ್ರೀ ಅಲ್ಲವೇ !

ಒಲಿಸುವ ಮಾತುಗಳೂ ಲಕ್ಷ್ಮಣನ ಅಸಮಾಧಾನವನ್ನು ಆರಿಸಿ ಅವನ ಬಿಗಿಪನ್ನು ಇಳಿಸಿದ್ದವು. ವಾನರ ಸೈನ್ಯವನ್ನು ಸೇರಿಸಲು ಈಗಾಗಲೇ ಯತ್ನಗಳು ನಡೆದಿದ್ದುದು ಒಂದು ಅನುಕೂಲ ಸಂಗತಿ. ಇನ್ನು ಒಂದೆರಡು ದಿನಗಳಲ್ಲಿ ಅವರೆಲ್ಲ ಬಂದು ಇಲ್ಲಿ ಸೇರುತ್ತಾರೆ ; ಕಾರ್ಯವಿಧಾನ ತೊಡಗಲಿದೆ. ನಮ್ಮ ಅರಸನು ಯಾವ ಉಪೇಕ್ಷೆಯನ್ನೂ ಮಾಡಿಲ್ಲ, ಉದಾಸೀನನಾಗಿಲ್ಲ ಎನ್ನುತ್ತಾರೆ. ಆದರೆ ಅಲ್ಲಿನ ನೋಟ ಸುಗ್ರೀವನನ್ನು ಕುರಿತಾಗಿ ಲಕ್ಷ್ಮಣನಿಗೆ ವೇದನೆಯುಂಟುಮಾಡಿತ್ತು. ಸುಗ್ರೀವನು ಬೇಗ ಸ್ವಾಸ್ಥ್ಯ ತಂದುಕೊಂಡು 'ಕ್ಷಮಿತವ್ಯಂ ಮೇ' ಎಂದ. ಆ ಮಾತೂ 'ನ ಕಶ್ಚಿನ್ನಾಪರಾಧ್ಯತಿ' ಎಂಬುದೂ ಲಕ್ಷ್ಮಣನ ಕೋಪವನ್ನು ಇಳಿಸುತ್ತವೆ. ಸುಗ್ರೀವನಿಗೆ ರಾಮನಲ್ಲಿದ್ದ ಸ್ನೇಹಭಾವ ಗೊತ್ತಾಗಿ ಸುಗ್ರೀವನ ಮಾತು ಸತ್ಯವೆಂದು ಅರ್ಥವಾಗುತ್ತದೆ. ಸುಗ್ರೀವನು ಇನ್ನೂ ಒಂದು ಮಾತು ಹೇಳುತ್ತಾನೆ : ತನ್ನ ಸಹಾಯ ರಾಮನಿಗೆ ಯಾವ ಬೆಲೆಯದು ? ಏಕಾಂಗಿಯಾಗಿ ತನ್ನ ಕಾರ್ಯವನ್ನು ಅವನು ನೆರವೇರಿಸಿಕೊಳ್ಳಬಲ್ಲ – ಎಂದ. ರಾಮನ ಬಾಣಗಳು ಲೋಕವನ್ನೂ ಬೆಟ್ಟಗಳನ್ನೂ ನಾಶಮಾಡಬಲ್ಲವು – ಎನ್ನುತ್ತಾನೆ. ಹೇಗೇ ಆಗಲಿ, ಸನ್ನಿವೇಶ ಅರ್ಥವಾಗಿದೆ. ವ್ಯಕ್ತಿಗಳಿಬ್ಬರೂ ಹೊಂದಿಕೆಯಾಗುತ್ತದೆ ; ಸ್ನೇಹ ಪುನಃ ಸ್ಥಾಪಿತವಾಗುತ್ತದೆ. ಮುಂದೆ ಯಾವ ಮಾತಿಗಾಗಲಿ ಇನ್ನಾವ ಕಾರ್ಯಕ್ಕಾಗಲಿ ಅಗತ್ಯವಿಲ್ಲದ ಹಾಗೆ. ರಾಮನು ಪ್ರಸ್ರವಣ ಬೆಟ್ಟಗಳ ಮೇಲೆ ಉಳಿದಿರುವ ಸ್ಥಳಕ್ಕೆ ಲಕ್ಷ್ಮಣನೊಡನೆ ಸುಗ್ರೀವನೂ ಹೋದಾಗ ಇನ್ನಾವ ಕೋಪ ತಾಪಗಳ ಅಗತ್ಯವೂ ಇರುವುದಿಲ್ಲ.

ಸೀತಾ ಹನುಮಂತರ ಪ್ರಸಂಗದಲ್ಲಿ ಈ ವಾಕ್ಯದ ಪರಿಣಾಮಕಾರಿತೆ ಅತ್ಯುನ್ನತವಾದ್ದು. ರಾವಣನ ಮೇಲೆ ರಾಮನು ಗಳಿಸಿದ್ದ ವಿಜಯ ವೃತ್ತಾಂತವನ್ನು ಹನುಮಂತನು ಸೀತೆಗೆ ಒಯ್ಯುತ್ತಾನೆ. ಒಂದ ಕ್ಷಣ ಆಕೆಯ ಬಾಯಿಂದ ಮಾತು ಹೊರಡುವುದಿಲ್ಲ. ಆಕೆಗೆ ಸಂತೋಷವಾಗಿದೆ, – ರಾಮನ ಜಯವನ್ನು ಕೇಳಿ. ತಾನು ಲಂಕೆಯಲ್ಲಿ ಬಂದಿಯಾಗಿರುವಾಗ, ತನಗೆ ಭರವಸೆ ಹೋದಂತೆ ಇದ್ದಾಗ ಯಾರು ಮೊದಲು ಆಕೆಗೆ ರಾಮನ ಸುದ್ದಿಯನ್ನೂ ಅವಳಲ್ಲಿ ಅವನಿರುವ ಪ್ರೀತಿಗೌರವಗಳನ್ನೂ ಕೊಂಡುಹೋಗಿದ್ದನೊ ಅವನೇ ಈ ವಿಜಯದ ಸುದ್ದಿಯನ್ನೂ – ಸಹಜವಾಗಿ ತನ್ನ ಬಿಡುಗಡೆಯ ವಿಶ್ವಾಸವನ್ನೂ – ತರುತ್ತಿದ್ದ. ಆಕೆಯ ಅಭಿಲಾಷೆ ಏನು ಕೇಳಿಕೊಂಡು ಬಾ ಎಂದು ಅವನನ್ನು ರಾಮನು ಕಳಿಸಿದ್ದ. ತನ್ನ ಪತಿಯನ್ನು ಕಾಣಬೇಕೆಂಬುದಲ್ಲದೆ ಬೇರೆ ಇನ್ನೇನು ಆಕೆಯ ಅಭಿಲಾಷೆ ಇದ್ದೀತು?

ನಡುವೆ ಒಂದು ಸಣ್ಣ ಪ್ರಕರಣ ಕಟ್ಟಿ ನಿಲ್ಲುತ್ತದೆ..... ರಾವಣನ ಆಜ್ಞೆಯಂತೆ ಅಲ್ಲಿ ಆಕೆಯನ್ನು ಸುತ್ತಿಕೊಂಡಿದ್ದ ವಿಕಾರ ರೂಪಿನ ಕ್ರೂರ ಮನಸ್ಸಿನ ರಾಕ್ಷಸಿಯರು ಹಗಲೂ ಇರುಳೂ ಒಂದು ವರ್ಷ ಕಾಲ ಸೀತೆಗೆ ಹಿಂಸೆ ಕೊಟ್ಟಿದ್ದರು. ಅವರ ಎಷ್ಟೋ ಕ್ರೌರ್ಯಗಳಿಗೆ ಪಾತ್ರಳಾಗಿ ಸೀತೆ ಇದ್ದಳು. ಅವರು ಮಾಡಿದುದಕ್ಕಾಗಿ ಅವರಿಗೆ ಚೆನ್ನಾಗಿ ಶಿಕ್ಷೆ ಮಾಡಬೇಕೆಂಬುದು ಹನುಮಂತನ ಇಚ್ಛೆ. ಬಗೆಬಗೆಯಲ್ಲಿ ಅದನ್ನು ಮಾಡಲು ಆತನು ಸೀತೆಯ ಅನುಮತಿ ಬೇಡುತ್ತಾನೆ. ನಿನಗೆ ವಿರೋಧವಾಗಿ ಎಷ್ಟು ತೆರೆದ ಕಿಲ್ಬಿಷವನ್ನು ಅವರು ಉಂಟುಮಾಡಿಲ್ಲ? – ಎಂದ. ಆಕೆಗೆ ಕೊಟ್ಟ ಹಿಂಸೆಗಳನ್ನೂ ಆಕೆಯ ದುಃಖವನ್ನೂ ನೆನೆಸಿಕೊಂಡರೆ ಈ ಪ್ರಾರ್ಥನೆ ಸಹಜವಾಗಿ ಕಾಣುತ್ತದೆ.[೧೦] ಆದರೆ, ಆತ ಮಾತಾಡುತ್ತಿದ್ದುದು ಸೀತೆಯೊಡನೆ. ಈ ಮಹಾತ್ಮಳ ಜೀವಗುಣವನ್ನೂ ಶೀಲದ ಉನ್ನತಿಯನ್ನೂ ಅವನು ಅರಿತುಕೊಂಡಿದ್ದ. ತಾನೇ ರಾಮನಲ್ಲಿಗೆ ಆಕೆಯನ್ನು ಕರೆದುಕೊಂಡು ಹೋಗಿ ಬಿಡುತ್ತೇನೆಂದಾಗ ಆಕೆ ನಿರಾಕರಿಸಿದ್ದಳು.

ಆಕೃತಿ ಸೌಂದರ್ಯದಲ್ಲಿ ಆ ಇಬ್ಬರು ಎಷ್ಟು ಉನ್ನತರೊ ಗುಣಶೀಲಗಳಲ್ಲಿಯೂ ರಾಮಸೀತೆಯರು ಹಾಗೇ ಇದ್ದರು. ಸಾಧಾರಣ್ಯದಲ್ಲಿ ನಾವು ಕಾಣುವುದಕ್ಕಿಂತ ಈಗಿನ ಆಕೆಯ ಮಾತೂ ನಡವಳಿಕೆಯೂ ಶೀಲಲೇಖನವೂ ಹೆಚ್ಚು ಉನ್ನತವಾದವು. ಸೌಮ್ಯವಾಗಿ ಆಕೆ ಮಾತನಾಡುತ್ತಾಳೆ. ಮಾತು ಧರ್ಮಸಹಿತವಾದವು : ತಮ್ಮ ದೊರೆಯ ನಿರ್ದೇಶದಂತೆ ಈ ಜನ ನಡೆದುಕೊಂಡಿದ್ದಾರೆ. ಅವನು ಅವರಿಗೆ ಅಪ್ಪಣೆ ಮಾಡಿದ್ದ. ಕಿಂಕರರಾದ ಇವರೆಲ್ಲ ಅವನ ಇಚ್ಛೆಗೆ ತಕ್ಕ ಹಾಗೆ ನಡೆದರು. ಅವರನ್ನು ಕುರಿತು ಕೋಪಿಸಿಕೊಳ್ಳಬಾರದು. ಇದನ್ನೆಲ್ಲ ಅನುಭವಿಸಬೇಕಾಗಿ ಬಂದದ್ದು ನನ್ನ ವಿಧಿವಿಲಾಸವಿರಬೇಕು :

ಭಾಗ್ಯವೈಷಮ್ಯಯೋಗೇನ ಪುರಾ ದುಶ್ಚರಿತೇನ ಚ
ಮಯೈತತ್ ಪ್ರಾಪ್ಯತೇ ಸರ್ವಂ ಸ್ವಕೃತಂ ಹ್ಯುಪಭುಜ್ಯತೇ

– ನನ್ನ ಭಾಗ್ಯ ವಿಷಮವಾಗಿ ಹಿಂದೆ ನಾನು ಮಾಡಿದ್ದರ ಫಲವಾಗಿ ಈಗ ನಡೆದುದೆಲ್ಲವೂ ಸಂಭವಿಸಿರಬೇಕು.

ಸ್ವಕೃತವಾದ ಯಾವುದೋ ಕರ್ಮಫಲ ಎಂಬುದು ಆಕೆಯ ಮಾತು. ಈ ಸೇವಕರ ಕಿರುಕುಳಗಳನ್ನೆಲ್ಲ ಸಹಿಸಿಕೊಳ್ಳುವ ಶಕ್ತಿ ನನಗೆ ಹೇಗೊ ಬಂದಿತು.

---

೧೦ ಒಟ್ಟು ಒಂದು ಸರ್ಗ ಯಾವ ಯಾವ ತೆರದಲ್ಲಿ ಅವಳಿಗೆ ಹಿಂಸೆ ಕೊಡಬೇಕೆಂಬುದರ ವರ್ಣನೆಯಿದೆ. ಅವರ ಹೆಸರೂ ಅಂಗಲಕ್ಷಣಗಳೂ ಭೀಕರವಾಗಿದ್ದವು.

ರಾವಣನು ಸತ್ತಿರುವ ಈಗ ಅವರು ನನ್ನನ್ನು ಗೋಳುಹುಯಿದುಕೊಳ್ಳಲಾರರು – ಎಂದವಳೇ, ಒಳ್ಳೆಯ ಜನಕ್ಕೆ ಅವರ ಚಾರಿತ್ರ್ಯವೇ ನಡವಳಿಕೆಯೇ ಒಂದು ಭೂಷಣ – 'ಸಂತಃ ಚಾರಿತ್ರಭೂಷಣಾಃ' – ಎಂಬ ಪರಮೋನ್ನತವಾದ ಮಹೋಕ್ತಿಯನ್ನು ಜ್ಞಾಪಿಸುತ್ತಾಳೆ. ಹೀಗೆಂದವಳೇ

ಪಾಪಾನಾಂ ವಾ ಶುಭಾನಾಂ ವಾ ವರ್ಧಾರ್ಹಾಣಾಂ ಪ್ಲವಂಗಮ
ಕಾರ್ಯಂ ಕರುಣಮಾರ್ಯೇಣ ನ ಕಶ್ಚಿನ್ನಾಪರಾಧ್ಯತಿ

ಎನ್ನುತ್ತಾಳೆ. ಇತರರನ್ನು ಪೀಡಿಸುವುದು, ಕಾಟಕೊಡುವುದು, ಅದನ್ನು ಒಂದು ವಿನೋದ, ಮನರಂಜನೆ ಎಂದುಕೊಳ್ಳುವುದು ರಾಕ್ಷಸರ ಸ್ವಭಾವ. ಇದಕ್ಕೆ ಪ್ರತಿಯಾಗಿ ಅವರನ್ನು ಹಿಂಸೆ ಮಾಡುವುದು ತಪ್ಪು. ಆರ್ಯವೆಂದು ಸೀತೆ ಯಾವ ಗುಣವನ್ನು ವಿಶೇಷ ಗುರುತು ಅಥವಾ ಚಿಹ್ನೆ ಎಂದು ಎಣಿಸುತ್ತಾಳೊ ಅಂಥುದರ ನೀತಿಲಕ್ಷಣವನ್ನು ಆಕೆ ಇಲ್ಲಿ ಹೇಳುತ್ತಾಳೆ. 'ಕರುಣಂ' – ದಯೆ – ಅತ್ಯಂತವಾಗಿ ಪ್ರಕೋಪಗೊಳಿಸುವ ಸಂದರ್ಭಗಳಲ್ಲಿಯೂ. ಇದು ಧರ್ಮದ ತಿರುಳು. ಮರಣವೇ ಇಂಥ ಅಪರಾಧಕ್ಕೆ ತಕ್ಕ ದಂಡನೆಯಾದಾಗಲೂ ಕರುಣೆಯೇ ಕಾರ್ಯ ಎಂದ ಮಹಾನುಭಾವತೆ, ಉನ್ನತಿ ಆಕೆಯ ಸಾರಲಕ್ಷಣ. ಇಲ್ಲಿ ಸೀತೆ ನುಡಿಯುವ ಉಕ್ತಿ ಸುಗ್ರೀವ ಸಂಬಂಧದಲ್ಲಿ ಒಂದು ಸ್ವಾಭಾವಿಕ ನಡವಳಿಕೆಯ, ಕ್ಷಮಾರ್ಹತೆಯ ಸಂಗತಿ. ಸೀತೆ ನುಡಿದ ಸಂಬಂಧದಲ್ಲಿ ಮಹಾಧಾರ್ಮಿಕತೆಯ ಸ್ವರೂಪಲಕ್ಷಣವಾಗುತ್ತದೆ. ಆ ಗುಣದ ಲಕ್ಷಣ ಈ ಮಾತು. ಆಕೆ ಕೊಟ್ಟ ಕಾರಣವೊ: 'ನ ಕಶ್ಚಿನ್ನಾಪರಾಧ್ಯತಿ' ಎಂಬುದು. ತಪ್ಪನ್ನಾಗಲಿ ಅಪರಾಧವನ್ನಾಗಲಿ ಮಾಡದವರಾರು ? ಈ ಧ್ವನಿ ಮಾನವ ಸ್ವಭಾವವನ್ನು ಆಳವಾಗಿ ಸಂಪೂರ್ಣವಾಗಿ ಅರಿತವರಿಗೆ ಮಾತ್ರ ಸಿದ್ಧವಾಗುತ್ತದೆ. ರಾಮಾಯಣದಲ್ಲಿ ಕೂಡ ಇದಕ್ಕೆ ಸಮನಾದ ಇನ್ನೊಂದು ಉಕ್ತಿ ಇದೆಯೊ ಇಲ್ಲವೊ ಹೇಳಬರುವುದಿಲ್ಲ. ಆರ್ಯಕರುಣೆ ಎಂಬುದನ್ನು ಹೀಗೆ ನುಡಿಯುವುದು ಮಾನವಸ್ವಭಾವ ಮತ್ತು ಸನ್ನಿವೇಶದ ಅರಿವಿನೊಡನೆ ಸಂಬಂಧ ಕಲ್ಪನೆ ಮಾಡಿರುವ ಒಂದು ಉತ್ತಾನತೆಯ ಮಟ್ಟವನ್ನು ಎತ್ತಿ ಕಾಣಿಸುತ್ತದೆ. 'ಮರಣಾಂತಾಣಿ ವೈರಾಣಿ' ಎಂಬ ರಾಮನ ಮಾತು ರಾಮನ ಮತಿಯಯ ಲಕ್ಷಣವಾದರೆ, 'ನ ಕಶ್ಚಿನ್ನಾಪರಾಧ್ಯತಿ' ಎಂಬ ಸೀತೆಯ ಮಾತು ಆಕೆಯ ಮಹೋನ್ನತಿಯನ್ನು ಗುರುತು ಮಾಡಿ ತೋರಿಸುವ ಉಕ್ತಿಯಾಗುತ್ತದೆ.

* * *

ಅಂತಹ ವ್ಯಕ್ತಿ ಸ್ವಂತ ಗಂಡನ ಕೈಯಲ್ಲಿ ಅತಿಕಠಿಣ ಅನುಭವವನ್ನು ಸವಿಯಲು ಈಡಾಗಬೇಕಾಗಿದ್ದಾಳೆ.[೧೧] ಅವಳಿಗೆ ಉಳಿದಿರುವುದು ಒಂದೇ ದಾರಿ:

ಸಂಗತಿಗಳು ಹೀಗೆ ರೂಪುಗೊಳ್ಳುತ್ತಿರುವುದನ್ನು ನೋಡಿ ಮೂಕನಾಗಿ ನಿಂತಿದ್ದ ಲಕ್ಷ್ಮಣನನ್ನು ಕುರಿತು 'ಚಿತಾಂ ಮೇ ಕುರು ಸೌಮಿತ್ರೇ' 'ನನಗಾಗಿ ಒಂದು ಚಿತೆಯನ್ನು ಸಿದ್ದಪಡಿಸು ; ಅಪವಾದಕ್ಕೆ ಸಿಕ್ಕಿಬಿದ್ದಿರುವ ನನಗೆ ಅದೊಂದೇ ಉಳಿದಿರುವ ಚಿಕಿತ್ಸೆ. ಬದುಕಿನಲ್ಲಿ ನನಗೆ ಇನ್ನಾವ ಇಷ್ಟವೂ ಇಲ್ಲ. ಬೆಂಕಿಯನ್ನು ಸಿದ್ಧಪಡಿಸು' ಎನ್ನುತ್ತಾಳೆ. ಸೌದೆ ಒಟ್ಟಿ ಚಿತೆ ಸಿದ್ಧವಾಗುತ್ತದೆ. ಹಚ್ಚಿದ ಉರಿಯಲ್ಲಿ ಸೀತೆ ತನ್ನನ್ನು ತಾನು ಸುಟ್ಟುಕೊಳ್ಳಲು ತೀರ್ಮಾನಿಸುತ್ತಾಳೆ. ತಲೆಬಾಗಿ ರಾಮನ ಸುತ್ತ ಹೋಗಿ –

ಯಥಾ ಮೇ ಹೃದಯಂ ನಿತ್ಯಂ ನಾಪಸರ್ಪತಿ ರಾಘವಾತ್
ತಥಾ ಲೋಕಸ್ಯ ಸಾಕ್ಷೀ ಮಾಂ ಸರ್ವತಃ ಪಾತು ಪಾವಕಃ

– 'ಹೃದಯಲ್ಲಿ ಕ್ರಿಯೆಯಲ್ಲಿ ಮನಸ್ಸಿನಲ್ಲಿ ಮಾತಲ್ಲಿ ನಾನು ರಾಮನನ್ನು ಅತಿಕ್ರಮಿಸದವಳಾಗಿದ್ದರೆ ಎಲ್ಲ ಧರ್ಮಕ್ಕೆ ಸಾಕ್ಷಿಯಾದ ಅಗ್ನಿಯು ನನ್ನನ್ನು ಕಾಪಾಡಲಿ' ಎಂದಳು. 'ಸೂರ್ಯದೇವ, ವಾಯು, ದಿಕ್ಕುಗಳು, ಚಂದ್ರ, ಹಗಲು, ಸಂಜೆ, ರಾತ್ರಿ, ನನ್ನ ತಾಯಿ ಭೂದೇವಿ ಎಲ್ಲರೂ ನಾನು ಶುದ್ಧಳೆಂದೂ ಚಾರಿತ್ರ ಸಂಯುತಳೆಂದೂ ಅರಿತಿದ್ದಾರೆ. ಇವರೆಲ್ಲ ನನ್ನನ್ನು ರಕ್ಷಿಸಲಿ' ಎಂದು ಅಗ್ನಿಪ್ರದಕ್ಷಿಣೆ ಮಾಡಿ ಚಿತಾಪ್ರವೇಶ ಮಾಡುತ್ತಾಳೆ. ಇದು ಆರ್ಯಶೀಲ. ಯಾರು ತನ್ನ ಮಾನವನ್ನು ಕಾಪಾಡಿ ರಕ್ಷಿಸಬೇಕಾಗಿದೆಯೊ ಅವರೇ ಅದನ್ನು ಕಾಪಾಡಿ ಉಳಿಸದಿದ್ದಾಗ ತಮ್ಮ ಯೋಗ್ಯತೆಯನ್ನು ಕಾಪಾಡಿಕೊಳ್ಳಲು ತೆರವನ್ನು ಆಯ್ದುಕೊಂಡಿತು. ಕಾಪಾಡುವುದೂ ಉಳಿಸುವುದೂ ಮಾತ್ರವಲ್ಲ ; ಹೆಣ್ಣಾಗಿ ಹೆಂಡತಿಯಾಗಿದ್ದವಳನ್ನು ಒಂದು ಒಟ್ಟು ಲೋಕವೇ ನೋಡುತ್ತಿರುವಂತೆ ಅಪಮಾನಕ್ಕೆ ಆಕೆಯ ಗಂಡನೇ ಈಡುಮಾಡುತ್ತಿರುವಾಗ ಆಕೆಗೆ ಬೇರೆ ಗತಿ ಎಲ್ಲಿ ? ಅಗ್ನಿಯನ್ನೂ ದೇವತೆಗಳ ರಕ್ಷಣೆಯನ್ನೂ ಬೇಡಿಕೊಂಡಳು. ಅಗ್ನಿದಿವ್ಯಗಳನ್ನು ಮಾನವರ ಮತ್ತು ಸಮಾಜಗಳ ಚರಿತ್ರೆಯಲ್ಲಿ ಲೋಕ ಕಂಡಿದೆ. ಅಗ್ನಿ ಕೆಡುಕು ಮಾಡದಿರುವಾಗ ಗಂಡನೂ ಪ್ರೇಕ್ಷಕರೂ ಅಂಥವಳ ಶುದ್ಧಿಯನ್ನು ಒಪ್ಪಿಕೊಳ್ಳುತ್ತಾರೆ. ಈ ಪರೀಕ್ಷೆ, ಸಂಕಟ, ಸೀತೆ ನಿಂತ ಈ ಪರಮೋನ್ನತ ನಿಲವು – ಇವು ಇಲ್ಲಿ ಮುಖ್ಯ ; ಮನುಷ್ಯರ ಮತ್ತು ಸಮಾಜದ ಸ್ವೀಕಾರ ಅಷ್ಟು ಮುಖ್ಯವಲ್ಲ. ಅತ್ಯಪಮಾನಕರ, ಹೀನಾಯ

---

೧೧ ತಮ್ಮ ತಪ್ಪಾವುದೂ ಇಲ್ಲದೆ ದುಷ್ಟರು ಬಲಾತ್ಕಾರದಿಂದ ಹಿಡಿದು ಕೆಡಿಸಿದ ಹೆಣ್ಣುಗಳು, ಯುದ್ಧಾದಿ ಪ್ರಸಂಗಗಳಲ್ಲಿ ಶತ್ರುಗಳ ಕೈಗೆ ಬಿದ್ದು ಕೆಟ್ಟವರು – ಇವರ ಗತಿ ಏನು ಎಂದು ಮನಃಸಾಕ್ಷಿ ಇರುವ ಯಾರಿಗೂ ಎನ್ನಿಸೀತು. ದೇಶ ಈ ಕಡೆಗೆ ಮನಸ್ಸು ಹರಿಬೇಕು.

ಸಂದರ್ಭದಲ್ಲಿಯೂ ಸೀತೆಯ ನಡವಳಿಕೆಯ ಗಾಂಭೀರ್ಯ, ಉನ್ನತಿ ದೊಡ್ಡವು. ಭರತಖಂಡ ಹೆಮ್ಮೆ ಪಡುವುದು ಈ ಸೀತೆಯ ವಿಷಯದಲ್ಲಿ. ಸಚ್ಚಾರಿತ್ರದ ಮಾರ್ಗದರ್ಶಿಯಂತೆ ಅಸಂಖ್ಯಾತವಾದ ತಲೆಮೊರೆಗಳ ಸ್ತ್ರೀ ಪುರುಷರು ಈ ಶುಚಿಯನ್ನೂ ದೊಡ್ಡತನವನ್ನೂ ಪ್ರೀತಿಯಿಂದ ಆರಾಧಿಸಿದ್ದಾರೆ.

* * *

ಈಗಿರುವ ಕಾವ್ಯದ ಆರಂಭದಲ್ಲಿ ನಾರದರು ವಾಲ್ಮೀಕಿಯ ಆಶ್ರಮಕ್ಕೆ ಬರುತ್ತಾರೆ. ಅವರಿಗೆ ಸಂಭಾಷಣೆ ನಡೆಯುತ್ತದೆ. ಎಲ್ಲ ಸಂಗತಿಗಳನ್ನೂ ಅವರು ತಿಳಿದಿದ್ದರಾದ್ದರಿಂದ ವಾಲ್ಮೀಕಿ ಅವರನ್ನು ಒಂದು ಪ್ರಶ್ನೆ ಕೇಳುತ್ತಾನೆ. ನಮ್ಮ ಕಾಲದಲ್ಲಿ ಬದುಕಿರುವ ರಾಜರುಗಳಲ್ಲಿ ಶೀಲವಂತರು, ವೀರ್ಯವಂತರು ಯಾರು? ದಕ್ಷನಾರು? – ಎಂದು. ಇನ್ನೂ ಅನೇಕ ಗುಣಗಳನ್ನು ವಿವರಿಸಿದೆ. ಯಾವ ಒಬ್ಬನಲ್ಲಿಯೂ ಇಷ್ಟು ಗುಣ ಒಟ್ಟಾಗಿ ಕಾಣಲಾಗದವು ಎಂದು ನಾರದನು ಉತ್ತರ ಕೊಡುತ್ತಾನೆ. ಆದರೂ ಅಂಥ ಒಬ್ಬನನ್ನು ಹೆಸರಿಸಿ ವರ್ಣಿಸುವುದು ತನಗೆ ಹರ್ಷದ ಸಂಗತಿ. ಈ ಗುಣಗಳ ಜೊತೆಗೆ ವಶಿ, ಶುಚಿಃ ಎಂಬ ಇತರವನ್ನೂ ಸೇರಿಸುತ್ತಾನೆ. ಧರ್ಮವನ್ನು ರಕ್ಷಿಸುವವನು, ಸಾಧು, ಅಧೀನಾತ್ಮ ಆತ; ಉನ್ನತಿ ಗಾಂಭೀರ್ಯಗಳಲ್ಲಿ ಅವನಿಗೆ ಸಾಟಿಯಾದವರಿಲ್ಲ ಎಂದವನೇ 'ವಿಷ್ಣುನಾಸದೃಶೋ ವೀರ್ಯಃ' ಎಂಬ ಒಂದನ್ನು ಹೇಳುತ್ತಾನೆ. ಗ್ರಂಥದಲ್ಲೆಲ್ಲ ಒಟ್ಟು 'ಸದೃಶೋ' ಎಂಬುದೊ ಅದಕ್ಕೆ ಸಮವಾದ ಮಾತುಗಳೊ ಬರುತ್ತವೆ ; ಅದಕ್ಕೆ ಹೋಲುವ ಎಂಬುದು ಮಾತ್ರ ಅರ್ಥ. ಯಾವುದೇ ಪ್ರಕಾರದಲ್ಲಿ 'ಏವ' – ಅದೇ – ಎಂಬ ಮಾತು ಬರುವುದಿಲ್ಲ 'ಸ್ವದೋಷಪರದೋಷವಿತ್' – ಇತರರ ದೋಷ ಹೇಗೊ ತನ್ನ ದೋಷವನ್ನೂ ಹಾಗೆ ಬಲ್ಲವನು – ಈ ಗುಣ ಮನುಷ್ಯರಲ್ಲಿ ಅಪರೂಪ. ರಾಮಾಯಣಕತೆಯ ಹೊರರೇಖೆಗಳನ್ನು ನಾರದರು ವಾಲ್ಮೀಕಿಗೆ ಕೊಡುತ್ತಾರೆ.[೧೨] ರಾಮನ ರಾಜ್ಯಭಾರದ ಸುಖಸಾಧನೆಯನ್ನು ವರ್ಣಿಸಿಯಾದ ಮೇಲೆ ಕಥನ ಮುಗಿಯುತ್ತದೆ.

ಆಶ್ರಮದಿಂದ ನಾರದರು ಹೊರಟುಹೋದ ಮೇಲೆ ಕತೆ ಸಹಜವಾಗಿ ವಾಲ್ಮೀಕಿಯ ಮನಸ್ಸನ್ನು ತುಂಬಿಕೊಳ್ಳುತ್ತದೆ. ಆಶ್ರಮದಲ್ಲಿನ ಭರದ್ವಾಜನೆಂಬ ಕಿರಿವಯಸ್ಸಿನ ಶಿಷ್ಯನೊಬ್ಬನನ್ನು ಕರೆದುಕೊಂಡು ಸ್ನಾನಕ್ಕೆ ಬೇಕಾದ ವಸ್ತ್ರದೊಡನೆ ತಮಸಾ ನದಿಯ ಹತ್ತಿರಕ್ಕೆ ಋಷಿ ಹೋಗುತ್ತಾನೆ. "ನೋಡು ಭರದ್ವಾಜ,

---

೧೨ ಉತ್ತರಕಾಂಡದ ಸಂಗತಿಗಳ ವರ್ಣನೆ ಅಲ್ಲಿಲ್ಲವೆಂಬುದನ್ನು ಲಕ್ಷಿಸಬಹುದು.

'ಅಕರ್ದಮಂ ಇದಂ ತೀರ್ಥಂ ರಮಣೀಯಂ ಪ್ರಸನ್ನಾಂಬುಂ ಸನ್ಮಮಷ್ಯ ಮನೊಯಥಾ'– ಈ ನೀರು ಎಷ್ಟು ಸ್ವಚ್ಛವಾಗಿದೆ; ಕೆಸರಿಲ್ಲ ; ನೋಡುವವರಿಗೆ ಸಂತೋಷವುಂಟುಮಾಡುತ್ತದೆ ; ಒಳ್ಳೆಯ ಮನುಷ್ಯನ ಮನಸ್ಸು ಹೇಗೋ ಹಾಗೆ" – ಎಂಬ ಅತಿಶಯ ಲಕ್ಷಣದ ಮಾತನಾಡುತ್ತಾನೆ. ಸ್ವಲ್ಪ ಕಾಲ ವಲ್ಕಲವನ್ನು (ನಾರುಬಟ್ಟೆ) ತನ್ನ ಕೈಯಲ್ಲಿ ಹಿಡಿದು ಋಷಿ ವನದಲ್ಲಿ ಸುತ್ತಾಡುತ್ತಿರುವಾಗ ಒಂದು ಜೊತೆ ಕ್ರೌಂಚ ಪಕ್ಷಿಗಳು ಸುಖವಾಗಿ, ನುಣ್ಣಗೆ ನುಡಿಯುತ್ತ, ಮುದ್ದು ಮಾಡುತ್ತ, ಕೆಲೆಯುತ್ತ ಇರುವುದು ಕಾಣುತ್ತದೆ. 'ಅನಪಾಯಿನಂ' – ಯಾವ ಅಪಾಯದ ಭಯವೂ ಇಲ್ಲದೆ ಅವು ಇದ್ದುವಂತೆ. ಇದನ್ನು ಕಂಡು ಋಷಿಗೆ ಹರ್ಷವಾಗುತ್ತೆ. ಇದ್ದಕ್ಕಿದ್ದಂತೆ ಒಬ್ಬ ಬೇಡನು ಪಕ್ಷಿಗಳಿಗೆ ಗುರಿಯಿಟ್ಟು ಬಾಣ ಪ್ರಯೋಗ ಮಾಡಿದಾಗ ಜೊತೆ ಹಕ್ಕಿಗಳಲ್ಲಿ ಒಂದು ಹಕ್ಕಿ ನೆಲಕ್ಕೆ ಬೀಳುತ್ತದೆ.

ತಂ ಶೋಣಿತಪರೀತಾಂಗಂ ವೇಷ್ಟಮಾನಂ ಮಹೀತಲೇ
ಭಾರ್ಯಾ ತು ನಿಹತಂ ದೃಷ್ಟ್ವಾ ರುರಾವ ಕರುಣಾಂ ಗಿರಂ

ಮೈಯೆಲ್ಲ ರಕ್ತವೇಷ್ಟಿತವಾಗಿ ನೆಲದ ಮೇಲೆ ಬಿದ್ದ ಅದನ್ನು ಕಂಡ ಹೆಣ್ಣು ಹಕ್ಕಿ ಕರುಣೆ ತರುವ ಧ್ವನಿಯಲ್ಲಿ ನೋವಿಂದ ಕೂಗಿಕೊಂಡಿತು. ಸ್ವಲ್ಪ ಹಿಂದೆ ತಾನೆ ಋಷಿ ಕಂಡಿದ್ದ ಸಂತೋಷ, ಸುರಕ್ಷಣೆ, ಮಾಧುರ್ಯಗಳ ಉತ್ತರಕ್ಷಣದಲ್ಲಿಯೇ ಹಿಂಸೆಯ ಈ ದೃಶ್ಯ ಕಾಣುತ್ತದೆ. ನೋವಿನ ಈ ಕೂಗು, ತನ್ನ ಕೆನ್ನೆತ್ತರಲ್ಲಿಯೇ ಉರುಳಾಡುತ್ತಿರುವ ಹಕ್ಕಿಯ ಚಿತ್ರ ಮೃದು ಹೃದಯಿಯಾದ ಋಷಿಯನ್ನು ತಿವಿದುಕೊಂಡು ಬರುತ್ತದೆ. 'ರುರಾವ' ಎಂಬ ಮಾತು ಆ ಕ್ರಿಯಾಪದದ ಒಂದು ದ್ವಿರುಕ್ತಿರೂಪ. ರಾಮಾಯಣದಲ್ಲಿ ಇಂತಹವು ಬೇಕಾದಷ್ಟಿವೆ. ಮುಂದೆ ಎಷ್ಟೆಷ್ಟೋ ವಿಚಿತ್ರವಾದ ಇಂಥ ಕ್ರಿಯಾ ರೂಪಗಳು ಬರುತ್ತವೆ. ಎಲ್ಲಿಯೂ ಇಷ್ಟು ಸಹಜವಾಗಿ ರಾಗಭರದಿಂದ ತೀವ್ರವಾಗಿ ಬರುವುದಿಲ್ಲ. ಅಲ್ಲದೆ, ಕಾವ್ಯದಲ್ಲಿ ಮೊದಲ ಬಾರಿಯ ಪ್ರಯೋಗ ಇದು. ಇದು ಋಷಿಯನ್ನು ಕೆರಳಿಸ್ತುದೆ. ಹಕ್ಕಿಗಳು ಜೊತೆಯಲ್ಲಿ ಕುಳಿತು ಮುದ್ದು ಮಾಡುತ್ತಿವೆ ಎಂಬ ಸಂಗತಿ ಬೇಡನ ಮನಸ್ಸಿಗೆ ಬರಲಿಲ್ಲವಲ್ಲ ಎಂಬುದು ಅವನಿಗೆ ಕೋಪವುಂಟುಮಾಡುತ್ತದೆ. ಅಂತಹ ಸ್ಥಿತಿಯಲ್ಲಿ ಹಕ್ಕಿಯನ್ನು ಬೇಟೆಗಾರ ಕೊಲ್ಲಬಾರದು. ಗೋಳಿಡುತ್ತಿರುವ ಹಕ್ತಿಯ ಪರವಾಗಿ ಅವನಲ್ಲಿ ಅನುಕಂಪ ತುಂಬುತ್ತದೆ. ಇದು ಅಧರ್ಮ ಕೃತ್ಯ ಎಂದುಕೊಂಡು ಕರುಣಾಳು ಋಷಿ ಬೇಡನಿಗೆ ಶಾಪ ಕೊಡುತ್ತಾನೆ.

ಮಾ ನಿಷಾದ ಪ್ರತಿಷ್ಠಾಂ ತ್ವಂ ಅಗಮಃ ಶಾಶ್ವತೀಃ ಸಮಾಃ
ಯತ್‌ಕ್ರೌಂಚ ಮಿಥುನಾತ್ ಏಕಂ ಅವಧೀಃ ಕಾಮಮೋಹಿತಂ

'ದೀರ್ಘಕಾಲ ನಿನಗೆ ಉಳಿವು, ಕೀರ್ತಿ ಬಾರದಿರಲಿ ; ಜೊತೆಯಲ್ಲಿ ಪ್ರೇಮಿಸುತ್ತಿದ್ದ ಹಕ್ಕಿಗಳಲ್ಲಿ ಒಂದನ್ನು ಕೊಂದಿದ್ದೀಯೆ' ಎಂದ. ಈ ಉಕ್ತಿ ಶ್ಲೋಕ ಛಂದಸ್ಸಿನಲ್ಲಿ ಬಂತು. ರಕ್ತರಂಜಿತವಾದ ಒಂದು ಘಟನೆಯನ್ನು ನೋಡಿದ ಒಬ್ಬ ಕವಿಯ ಭಾವದಲ್ಲಿ ಹುಟ್ಟಿಕೊಂಡ ಮನಸ್ಸಿನ ಉದ್ವೇಗದಲ್ಲಿ ತಕ್ಷಣ ನುಡಿದು ಬಂದುದದು. ತನ್ನ ಉಕ್ತಿ ತನ್ನನ್ನೇ ಅಶ್ಚರ್ಯಗೊಳಿಸಿತು ; ಪುಳಕಗೊಳಿಸತು ; ಮನಸ್ಸಿನಲ್ಲಿ ವ್ಯಾಕುಲವುಂಟುಮಾಡಿತು. ಆಶ್ಚರ್ಯ ; ಮಾತು ತಂತ್ರೀಲಯ ಸಮನ್ವಿತವಾಗಿ, ಅಕ್ಷರ ಸಮವಾಗಿ, ಪೂರ್ತಿ ಒಂದು ಅನುಷ್ಟುಭ್ ಶ್ಲೋಕದಂತೆ ಇದ್ದುದಕ್ಕೆ. ಆದರೆ ವ್ಯಾಕುಲವುಂಟು ಮಾಡಿದ ಕಾರಣ ತನ್ನನ್ನು ಕೋಪಕ್ಕೆ ಈಡುಮಾಡಿಕೊಂಡಿದ್ದನೆಂಬುದಕ್ಕೆ 'ಶಾಶ್ವತೀ ಸಮಾಃ' ಎಂಬ ಶಾಪವನ್ನು ಬೇಡನಿಗೆ ಕೊಟ್ಟದ್ದರಿಂದ. ಆದ್ದರಿಂದ ಭರದ್ವಾಜನನ್ನು ಕುರಿತು –

ಪಾದಬದ್ಧೋ ಅಕ್ಷರಸಮಃ ತಂತ್ರೀಲಯ ಸಮನ್ವಿತಃ
ಶೋಕಾರ್ತಸ್ಯ ಪ್ರವೃತ್ತೋಮೇ ಶ್ಲೋಕೋ ಭವತು ನಾಸ್ಮಥಾ

'ಪಾದಗಳು ಸುಬದ್ಧವಾಗಿವೆ; ಅಕ್ಷರಗಳು ಸಮವಾಗಿವೆ ; ತಂತ್ರೀವಾದ್ಯದ ಶ್ರುತಿಗೆ ಲಯಬದ್ಧವಾಗಿ ಕೂಡಿಕೊಂಡಿವೆ; ಶೋಕದಲ್ಲಿ ದೀನನಾಗಿ ತೊಡಗಿದೆ; ಇದು ಶ್ಲೋಕವೇ ಆಗಿರಬೇಕು; ಬೇರೆಯಲ್ಲ' – ಎನ್ನುತ್ತಾನೆ.

ಇದು ಅವನನ್ನು ರೋಮಾಂಚಗೊಳಿಸಿತು. ಋಷಿ ತನ್ನ ಶಿಷ್ಯನಿಗೆ ಇದನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ಹೇಳುತ್ತಾನೆ. ಕಾವ್ಯ ಹುಟ್ಟಿದ್ದು ಹೀಗೆ. ಮನಸ್ಸಿನ ಸ್ಥಿತಿಯನ್ನು ನುಡಿದ ಮಾಧ್ಯಮ ಎಷ್ಟು ಸರಿಯಾಗಿ ಹೊಂದಿತೆಂಬುದನ್ನು ಇದು ಸೂಚಿಸುತ್ತದೆ.

ಮುಂದಿನ ಮಜಲಲ್ಲಿ ಆತನ ಮನಸ್ಸು ವಾಸ್ತವವಾಗಿ ಕೃತಿನಿರ್ಮಾಣ ಕಾರ್ಯಕ್ಕೆ ಹೇಗೆ ಒಳಪಟ್ಟು ಸೇರಿಹೋಯಿತು ಎಂಬುದನ್ನು ತಿಳಿಸುತ್ತದೆ. ಕತೆಗೆ ಸಂಬಂಧಿಸಿದ ಪ್ರತಿಯೊಂದು ವಿವರವನ್ನೂ ಕಲ್ಪಿಸಿಕೊಂಡಿತು. ಆಗ ಬ್ರಹ್ಮನು[೧೩] ಆತನಿಗೆ ದರ್ಶನ

೧೩ ಬ್ರಹ್ಮನು ಕವಿ ಎಂದು ಹೆಸರುಗೊಂಡಿದ್ದಾನೆ. ಕವಿ ಪ್ರಧಾನವಾಗಿ ದ್ರಷ್ಟಾರ, ನಿರ್ಮಾಣಕಾರ. ಉಂದಿನ ಕೆಲವು ಸಂದರ್ಭಗಳಲ್ಲಿ ಕೂಡ ರಾಮಾಯಣದಲ್ಲಿ ಬ್ರಹ್ಮ ಬರುತ್ತಾನೆ. ಬೇರೆ ಕಾರ್ಯಗಳಿಗಾಗಿ ಇಲ್ಲಿ ಸ್ಪಷ್ಟವಾಗುತ್ತಿರುವ ಒಂದು ಕಲೆಯನ್ನು ಸ್ಥಿರೀಕರಿಸುವುದು ಅವನ ಕಾರ್ಯ. ಆಲೋಚನೆಯ, ಭಾವಗಳ ಒಂದು ಬೇರೆ ಮಟ್ಟಕ್ಕೆ ಈ ಸಂದರ್ಭ ಒಯ್ಯುತ್ತದೆ. ಆದರೆ ರಾಮಾಯಣದ ಘಟನೆಗಳ ಮತ್ತು ಮುಂಚಿನ ಭಾಗಗಳ ಅಂಶವಾಗಿರುವಂತೆ ಮಾಡುವುದಿಲ್ಲ. ರಾಮಾಯಣ ಕಥೆಗೆ ಸಂಬಂಧಿಸಿದ ದೇವತೆಗಳು ವಿಶಿಷ್ಟವಾಗಿ ಇಂದ್ರ ವರುಣರು ; ಆಗಾಗ್ಗೆ ತ್ರಿವಿಕ್ರಮಾವತಾರದ ವಿಷ್ಣು ; ಕೌಸಲ್ಯೆಯ ಮತ್ತು ಸೀತೆಯರ ಅರಮನೆಗಳಲ್ಲಿ ನಡೆಯುತ್ತಿದ್ದುದು ನಾರಾಯಣ ಆರಾಧನೆ.

ಕೊಟ್ಟನಂತೆ. ಋಷಿ ಬ್ರಹ್ಮನನ್ನು ಯುಕ್ತ ರೀತಿಯಲ್ಲಿ ಸ್ವಾಗತಿಸುತ್ತಾನೆ. ಆದರೆ ವಾಲ್ಮೀಕಿಯ ಮನಸ್ಸು ಶ್ಲೋಕದಿಂದ ವ್ಯಾಪ್ತವಾಗಿದೆ : ಅದು ತನ್ನ ನಾಲಿಗೆಯಿಂದ ಹೊಮ್ಮಿ ಬಂದ ರಾಮಕಥೆಗೆ ಸಂಬಂಧಿಸಿದ್ದು. ಬ್ರಹ್ಮನಿಗೆ ಇದು ಅರ್ಥವಾಗುತ್ತದೆ. ಹೆಣ್ಣು ಕ್ರೌಂಚದ ಪರವಾದ ಕರುಣೆ ಒಂದು ಕಡೆಯೂ ಅಕಾರಣಹನನ ಇನ್ನೊಂದು ಕಡೆಯೂ ಆದುದು ಅವನಿಗೆ ಗೊತ್ತಾಗುತ್ತದೆ. ಬ್ರಹ್ಮನು ಋಷಿಗೆ "ನಿನ್ನ ತುಟಿಗಳಿಂದ ಬಂದ ಈ ಸರಸ್ವತಿ ನನ್ನ ಇಚ್ಛೆಗೆ ಒಳಪಟ್ಟೇ ನಡೆದಳು. ರಾಮನ ಕತೆ ಮಹತ್ತಾದ್ದು. ನಾರದನು ನಿನಗೆ ತಿಳಿಸಿದಂತೆ ಅವನ ವೀರಕತೆಯನ್ನು ಒರೆ. ಒಳಗೆ ಹೊರಗೆ ನಡೆದುದೆಲ್ಲವನ್ನೂ ನೀನು ಅರಿಯುವಂತಾಗುತ್ತದೆ. ಅದನ್ನು ಕುರಿತು ನೀನು ನುಡಿವ ಯಾವುದೂ ಅಸತ್ಯವಾಗುವುದಿಲ್ಲ–

ಯಚ್ಚ ಅಪಿ ಅವಿದಿತಂ ಸರ್ವಂ ವಿದಿತಂ ತೇ ಭವಿಷ್ಯತಿ
ನತೇ ವಾಕ್ ಅನ್ಯತಾ ಕಾವ್ಯೇ ಕಾಚಿದತ್ರ ಭವಿಷ್ಯತಿ

– ತಿಳಿದಿರುವ ಏನಾದರೂ ಇದ್ದರೆ ಅದೆಲ್ಲ ನಿನಗೆ ವಿದಿತವಾಗುತ್ತದೆ ; ಕಾವ್ಯದಲ್ಲಿರುವ ನೀನು ಬರೆದ ಮಾತು ಯಾವುದೂ ಅನೃತವಾಗುವುದಿಲ್ಲ. ಕವಿ ವಾಕ್ ಸತ್ಯ ಎಂದಿಗೂ ಇಂಥದೇ. ನೀನು ಬರೆದುದು ಮಹಾ ಕಾವ್ಯವಾಗಿ ಸರ್ವಕಾಲಕ್ಕೂ ಉಳಿದು ನಿಲ್ಲುತ್ತದೆ –

ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ
ತಾವತ್ ರಾಮಾಯಣ ಕಥಾ ಲೋಕೇಷು ಪ್ರಚರಿಷ್ಯತಿ

ಬೆಟ್ಟಗಳಂತೆ, ನದಿಗಳಂತೆ ನಿನ್ನ ಕವಿತೆ ಪ್ರಚಾರದಲ್ಲಿರುತ್ತದೆ" ಎಂದು ಹೇಳಿ ಬ್ರಹ್ಮ ಅದೃಶ್ಯನಾಗುತ್ತಾನೆ. ಇದು ಸೃಷ್ಟಿಕ್ರಿಯೆಯನ್ನು ಸುತ್ತಿಕೊಂಡಿರುವ ರಹಸ್ಯ. ಅದನ್ನು ಹೆಚ್ಚು ಕಡಮೆ ಸ್ಥಿರೀಕರಿಸುತ್ತದೆ. ಪ್ರತಿಭೆಯ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಲೇಖಕನಿಗೆ ಅತ್ಮ ವಿಶ್ವಾಸವನ್ನು ತಂದು ಕೊಡುತ್ತದೆ. ಯಾವನನ್ನು ಮೊದಲ ಸೃಷ್ಟಿಕರ್ತ, ಕವಿ ಎನ್ನುತ್ತೇವೊ ಅವನು ಅದಕ್ಕೆ ರೂಪಕೊಡುವುದರಲ್ಲಿ, ಆಕೃತಿ ಸಿದ್ಧವಾಗುವುದರಲ್ಲಿ ನೆರವಾಗುತ್ತಾನೆಂಬಂತಿದೆ. ಎಲ್ಲ ನಿರ್ಮಾಣಕೃತಿಗೂ ಆಶೀರ್ವಾದ ಅವನಿಂದಲೇ.

ಬ್ರಹ್ಮನ ಅವತರಣದಿಂದಲೂ ಅದೃಶ್ಯನಾಗುವುದರಿಂದಲೂ ಒಟ್ಟು ಆಶ್ರಮ ವಿಸ್ಮಯಗೊಳ್ಳುತ್ತದೆ. ಶೋಕದಿಂದ ಶ್ಲೋಕ ಹೇಗೆ ಆಕೃತಿಗೊಂಡಿತೆಂದು ಕೇಳಿ ಎಲ್ಲರೂ ರೋಮಾಂಚಗೊಳ್ಳುತ್ತಾರೆ. ವಾಲ್ಮೀಕಿ ತನ್ನ ಕವಿತಾ ನಿರ್ಮಾಣದಲ್ಲಿ ಮುಂದುವರಿಯಲು ನಿಶ್ಚಯಿಸುತ್ತಾನೆ. ಮುಂದಿನ ಸರ್ಗ ರಾಮಾಯಣದ ಹಲವಾರು ಸರ್ಗಗಳಲ್ಲಿರುವ ಮತ್ತು ಅವನ ಕಣ್ಣಿಗೆ ಕಂಡಂತೆ ಅಲ್ಲಿನ ಸಂಗತಿಗಳನ್ನೂ

ರಚಿಸಲಿರುವ ವಿವರಗಳನ್ನೂ ತಿಳಿಸಿಕೊಡುತ್ತದೆ. ರಾಮನ ಚರಿತ್ರೆ ಬೆಳೆದಂತೆ ಪ್ರಸಂಗಗಳು ಹೇಗೆ ಉಂಟಾಗುವುವು ಎಂಬಂಶದಲ್ಲಿ ತುಂಬಾ ಸೂಕ್ಷ್ಮವಾದ ಅನುಭವವುಂಟಾಗುತ್ತದೆ. ಸಾರಭೂತವಾದ ಸತ್ಯ ಎಂಥದೆಂಬುದನ್ನೆಲ್ಲ ಮೊದಲಿಂದ ಕಡೆಯವರೆಗೂ ಮನನ ಮಾಡಿಕೊಳ್ಳುತ್ತಾನೆ. ಅವನ ಕಣ್ಣಿಗೆ ರಾಮನ ಕತೆ ಕಾಣುವುದರಲ್ಲಿ 'ಹಸಿತಂ ಭಾಷಿತಂ ಚೈವ ಗತಿರ್ಯಚ್ಚ ಚೇಷ್ಟಿತಂ । ತತ್ಸರ್ವಂ ಧರ್ಮವೀರ್ಯೇಣ ಯಥಾವತ್ ಸಂಪ್ರಪಶ್ಯತಿ' – ನಗೆ, ಮಾತು, ಗತಿ, ನಡವಳಿಕೆ ಎಲ್ಲವೂ ಅವನ ದರ್ಶನದಲ್ಲಿ ಕಾಣುತ್ತದೆ. ಎಂದರೆ, 'ರಘುವಂಶಸ್ಯ ಚರಿತಂ' ಎಂದು ನಾರದನು ಸಂಗ್ರಹವಾಗಿ ಯಾವುದರ ಹೊರರೇಖೆ ಕೊಟ್ಟಿದ್ದನೊ ಅದರ ವಿವರ ವಿವರವೂ ವಾಲ್ಮೀಕಿಯ ಪ್ರತಿಭಾ ಕಲ್ಪನೆಗೆ ಗೋಚರವಾಗುತ್ತದೆ.

ನಾಲ್ಕನೆಯ ಸರ್ಗದ ಹೆಸರು 'ಅನುಕ್ರಮಣಿಕಾ.' ಮೊದಲು ಆರು ಕಾಂಡಗಳೆಂದು ತಿಳಿಸಿ, ಆಮೇಲೆ 'ಉತ್ತರಂ' ಎಂಬ ಮಾತಿದೆ. ಹೇಗೇ ಆಗಲಿ, ರಾಮಾಯಣವು 'ಕೃತ್ಸ್ನಂ ಕಾವ್ಯಂ'; ಹಾಗೆಯೇ 'ಸೀತಾಯಾಶ್ಚರಿತಂ ಮಹತ್'.... ಸ್ವಲ್ಪ ಕಾಲ ಯಾರು ಇದನ್ನು ಕಲಿಯುವವರು, ಹಾಡುವವರು ಎಂದು ಋಷಿ ಯೋಚಿಸುತ್ತಿರುವಾಗ ಆಶ್ರಮದಲ್ಲಿದ್ದ ಕುಶ ಲವ ಎಂಬ ಇಬ್ಬರು ಹುಡುಗರು ಎದುರಿಗೆ ಬಂದು ಆತನಿಗೆ ನಮಸ್ಕರಿಸುತ್ತಾರೆ. ಅದರ ಪ್ರಸಾರ ಮಾಡಲು ಅವರು ಸಾಧನವೆಂದು ಋಷಿಗೆ ಕಂಡು ಬರುತ್ತಾರೆ. ಕಾವ್ಯ ವಾಚನವನ್ನು ಅವರಿಗೆ ಕಲಿಸುತ್ತಾನೆ.

ಇದೆಲ್ಲ ರಾಮನು ರಾಜ್ಯಕ್ಕೆ ಹಿಂದಿರುಗಿಯಾದ ಮೇಲೆ ನಡೆದುದಿರಬೇಕು. ಒಟ್ಟಿಗೆ ಕಾವ್ಯ ಸುಸಂಗತವಾದ ಕತೆಯಾಗುತ್ತದೆ. ಹುಡುಗರು ಕಾವ್ಯವನ್ನು ಅಭ್ಯಾಸ ಮಾಡುತ್ತಾರೆ. ಅವರ ಕಂಠ ಸವಿಯಾಗಿತ್ತು. ಗಾಯನದಲ್ಲಿ ಚತುರರು, ಮೇಧಾವಿಗಳು, ಆದುದರಿಂದ ಅಲ್ಲಿನ ರಸಗಳ ಪ್ರತಿಪಾದನೆಯನ್ನು ಬೇಗ ಕಲಿಯುತ್ತಾರೆ. ನೋಟಕ್ಕೆ ಚೆಲುವರು ; ಸೋದರರು ; ರಾಮನ ಮಕ್ಕಳು. ಕಲಿಸಿದವನು ಋಷಿ. ಅವರು ಅದನ್ನು ಹಾಡಿದಾಗ ಆಶ್ರಮದ ವ್ರತಿಗಳ ಮನಸ್ಸು ಹೃಷ್ಟವಾಗುತ್ತದೆ. ಕೃತಿಯ ಅತಿಶಯ ಸೌಂದರ್ಯವೂ ಸೃಷ್ಟ್ಯಾತ್ಮಕತೆಯೂ ಅವರಿಗೆ ದೊಡ್ಡದಾಗಿ ವೇದ್ಯವಾಗುತ್ತದೆ. ರಚನೆಯನ್ನೂ ಹುಡುಗರ ಗಾಯನವನ್ನೂ ಮೆಚ್ಚಿಕೊಂಡು ತಮ್ಮಷ್ಟಕ್ಕೆ ತಾವೇ ತಮ್ಮಲ್ಲಿದ್ದ ಪದಾರ್ಥಗಳನ್ನು ಅವರಿಗೆ ಬಹುಮಾನವಾಗಿ ಕೊಡುತ್ತಾರೆ. ಅಷ್ಟು ಚೆನ್ನಾಗಿ ಕವಿತೆಯನ್ನು ವಾಚನ ಮಾಡಿದ್ದಕ್ಕೆ ಅವರನ್ನು ಅಭಿನಂದಿಸುತ್ತಾರೆ. ಅಷ್ಟೇ ಅಲ್ಲ, ಇದು ನಿಶ್ಚಯವಾಗಿ 'ಪರಾಂ ಕವೀನಾಂ ಆಧಾರಂ' ಎನ್ನುತ್ತಾರೆ. ಹಾಗೆ ನುಡಿದ ಅಂದು ಹೇಗೊ ಇಂದಿನವರೆಗೂ

ಆ ಕಾವ್ಯ ಹಾಗೇ ಇದೆ. ಕಾಲಕ್ರಮೇಣದಲ್ಲಿ ಈ ಹುಡುಗರು ಗಮಕವಾಗಿ ಪಠಿಸಿದ ಕಾವ್ಯ ರಾಜನಾದ ಶ್ರೀರಾಮನ ಕಿವಿಗೂ ಬೀಳುತ್ತದೆ. ರಾಮನು ತನ್ನ ಸೋದರರನ್ನೂ ಇತರರನ್ನೂ ಕೂಡಿಸಿಕೊಂಡು ಅವರ ಜೊತೆಯಲ್ಲಿ ಕಾವ್ಯವನ್ನು ಕೇಳುತ್ತಾನೆ. ಬಾಲಕಾಂಡದ ಐದನೆಯ ಸರ್ಗ ಅಯೋಧ್ಯೆಯ ವರ್ಣನೆಯಿಂದ ತೊಡಗುತ್ತದೆ.

ವಾಲ್ಮೀಕಿ ಅವರಿಗೆ ಕಲಿಸಿದಂತೆ ಯಾವ ರಾಮಕತೆಯನ್ನು ಬಾಲಕರು ಹೇಳಿದರೊ – ಎಂದರೆ, ರಾಮಾಯಣ ಕತೆ – ಈ ಐದನೆಯ ಸರ್ಗದಿಂದ – ಅದನ್ನು ರಾಮನು ಕೇಳಿರಬೇಕು. ಈ ಕೃತಿ ಬರೆದು ಬಂದುದು ಹೇಗೆ, ಅದನ್ನು ಕಲಿಸಿದುದು, ಹಾಡಿದುದು ಹೇಗೆ ಎಂಬುದು ಮೊದಲ ನಾಲ್ಕು ಸರ್ಗಗಳ ವಸ್ತು. ಒಂದು ಕವಿತೆ ಹೇಗೆ ಹುಟ್ಟಿ ಲಿಖಿತವಾಗುತ್ತದೆ ಎಂಬ ಸುಂದರ ಕಥನ ಇಲ್ಲಿ ಒದಗಿ, ಕಾವ್ಯ ನಿರ್ಮಾಣದಲ್ಲಿ ರೂಪಗೊಳ್ಳುವ ಸೂಕ್ಷ್ಮ ಮನಸ್ಸಂವೇದನೆಯೂ ಪ್ರತಿಭೆಯನ್ನೂ, ಉದ್ವೇಗಗೊಳಿಸುವ ಸಂದರ್ಭವೂ ಗೊತ್ತಾಗುತ್ತವೆ. ನಿರ್ಮಾಣದ ಸಮಯವೂ, ಯಾವ ಮನಃಸ್ಥಿತಿಯಲ್ಲಿ ಒಂದು ಸಂಗತಿ ತುಂಬಿ ಬಂದು ಉಕ್ತಿ ಅಭಿವ್ಯಂಜನೆಗೊಳ್ಳುವುದೊ ಅವೂ, ರಚನೆ ಹೇಗೆ ಬೆಳೆದು ಬರುತ್ತದೊ, ಕೇವಲ ಒಂದು ಒಣ ಹೊರ ರೇಖೆಯಂತಿದ್ದ ಪ್ರಸಂಗದ ಪ್ರತಿಭಾಗವೂ ರಸ ತುಂಬಿ ರಾಮಾಯಣದಂತಹ ಮಹಾ ಇತಿಹಾಸ ಕಾವ್ಯ ಹೊಮ್ಮಿ ನುಡಿಗೊಳ್ಳುವುದೊ – ಆ ಕ್ರಿಯಾವಿಧಾನ ಇಲ್ಲಿ ಬಹು ಸುಂದರವಾಗಿ ವರ್ಣಿತವಾಗಿದೆ.

ಹೀಗೆ ಮೊದಲ ನಾಲ್ಕು ಸರ್ಗಗಳು ರಾಮಾಯಣದ ರಚನೆಯ ಪೂರ್ವ ರಂಗಕ್ಕೆ ಸಂಬಂಧಿಸಿದ ಸನ್ನಿವೇಶ, ಕ್ರಿಯಾಕಲಾಪಗಳನ್ನು ಒಳಗೊಂಡದ್ದು. ಯಾವುದನ್ನು ಕಾವ್ಯರಚನೆಗೆ ಸಂಬಂಧಿಸಿದ ತಾತ್ವಿಕ ವಿವರಣೆ ಎನ್ನಬಹುದೊ ಅಂಥದು ವಿಧಾನಕ್ರಿಯೆಯಾಯಿತು ಎಂಬುದನ್ನು ನಿರ್ದಿಷ್ಟವಾಗಿ ತಿಳಿಸುತ್ತದೆ. ಭಾರತೀಯ ಸಾಹಿತ್ಯದಲ್ಲಿ ಬಹುಶಃ ಅತ್ಯುತ್ತಮ ಕವಿತೆ ಅದು. ಹೇಗೆ ಬರೆದು ಬಂದಿತು, ಮೊದಲ ಅದನ್ನು ಕೇಳಿದವರು ಹೇಗೆ ಅದನ್ನು ಮೆಚ್ಚಿಕೊಂಡರು ಎಂಬ ಸಂಗತಿ, ಅದಕ್ಕೇ ಸ್ವೀಕಾರ, ಮೆಚ್ಚಿಕೆ ಬಂದ ಬಗೆ ಹೇಗೆ ಎಂಬುದನ್ನೂ ಈ ಸರ್ಗಗಳು ಬರೆದಿಟ್ಟಿವೆ ಎನ್ನಬೇಕು.

ಸಂಸ್ಕೃತ ಭಾಷೆಯ ಪರಿಚಯ ಇರುವವರಿಗೆ – ಹಿಂದೂಗಳಿಗೆ ವಿಶೇಷವಾಗಿ ಇಲ್ಲಿನ ಭಾಷೆ ಎಂದಿಗೂ ಗೊತ್ತಾದ ಮನೋಹರತೆ ಉಳ್ಳದ್ದು. ಈ ಜನಕ್ಕೆ ಅದು ದೇವಭಾಷೆ ; ವೇದಗಳು ಶಾಸ್ತ್ರಗಳು ಪುರಾಣಗಳು ಬರೆದಿರುವ

ಭಾಷೆ. 'ಕಲ್ಯಾಣೀಂ ವಾಚಂ' ಎಂದು ರಾಮನ ಬಾಯಲ್ಲಿಯೇ ಬಂದುದು. ಆದರೆ ವಾಲ್ಮೀಕಿ ಕೃತಿಯ ಕೀರ್ತಿಪ್ರತಿಭೆ ಇರುವುದು ಅಲ್ಲಿನ ಪದ್ಯದ ಘೋಷದಲ್ಲಿ; ಸಂಸ್ಕೃತಭಾಷೆಗೇ ಸಹಜವಾಗಿರುವ ದೀರ್ಘಸ್ವರಗಳು ಸ್ಥಳ, ಕಾಲ, ಪರಿಸ್ಥಿತಿ, ಸನ್ನಿವೇಶಗಳು ಬೆಳೆದಂತೆ, ಕವಿ ಅವನ್ನು ಪ್ರತಿಪಾದಿಸುವಂತೆ ಪರಿಣಾಮಗಳನ್ನು ಸಾಧಿಸಿ ಕವಿಯಲ್ಲಿ ಹೊಳಲು ಕೊಡುತ್ತವೆ. ಅದನ್ನು ಓದಿದವರಿಗೆಲ್ಲ, ಶ್ರವ್ಯವಾಗಿ ಕೇಳಿದವರಿಗೆಲ್ಲ ಅನನ್ಯಸಾಧಾರಣವಾದ ಒಂದು ಅನುಭವವಾಗುತ್ತದೆ. ಅದರ ಸ್ಥಳವನ್ನು ತುಂಬುವ ಬೇರೊಂದಿಲ್ಲ. ಕವಿತೆಯ ನಡೆಯಲ್ಲಿ ಯಾವುದಾದರೂ ಭಾಗ ಮೂಲಕವಿಯ ನಿಜವಾದ ಧ್ವನಿಯಲ್ಲ, ಅವನು ಇಂಥದನ್ನು ನುಡಿದಿರಲಾರ ಎನ್ನಿಸಿದಾಗ ಓದುವವರಿಗೆ ಸಮತೆ ಭಂಗವಾಗುತ್ತದೆ. ಭಾವೋನ್ನತಿ ಉಳ್ಳದಾಗಿ ಅತೀವ ಸುಂದರವೂ ಮೌಲ್ಯವುಳ್ಳದ್ದೂ ಆದ ಬದುಕಿನ ಪ್ರಕಾರವೊಂದು ರಾಮಾಯಣದ ಗುಣವನ್ನು ಎತ್ತಿ ಕಾಣಿಸುತ್ತದೆ. ಧಮನಿಯಲ್ಲಿ ಸಂಚರಿಸುವ ನೆತ್ತರು ಅದನ್ನು ಅನುಭವಿಸಬಹುದು. ಭರತಖಂಡದ ಇನ್ನಾವ ಕೃತಿರಚನೆಗೂ ಲಕ್ಷಣವಲ್ಲದ ಒಂದು ರಾಜ್ಯ ಗಾಂಭೀರ್ಯ ಅದರದು.ಆದ್ದರಿಂದ ಭಾರತೀಯರಿಗೆ ಅದು ಪೂಜ್ಯವಾಗಿದೆ. ಅದಕ್ಕೆ ಭಕ್ತಿ ಪ್ರೀತಿ ಗಳಿಸಿಕೊಟ್ಟ ಅವರ ಅತಿಶಯ ಅಕ್ಕರೆಗೆ ಪಾತ್ರವಾಗಿದೆ.

* * * *